ನವಯುಗ

5—6—1969

೨೦
ಪೈಸೆ

"ನಿರಪರಾಧಿ"

ಬರೆದವರು:— ಶ್ರೀ ಸುಧಾಕರ ಶೆಟ್ಟಿ, ಹುಂಚ್ರಿಕೆ.

ಅದೊಂದು ಅಕಸ್ಮಿಕವೆಂಬಂತೆ, ಗುರುರಾಜ ಚಂದ್ರಶೇಖರರ ಸ್ನೇಹ ಬೆಳೆದು ಖಂಡಿತ್ತು. ಕಾಲೇಜಿನ ವ್ಯಾರಂಭದ ದಿನ, ಚಂದ್ರಶೇಖರ ಗುರುರಾಜನನ್ನು ಕಂಡಾಗ ಅದೇನೋ ಆಕರ್ಷಣೆಗೆ ಒಳಗಾದ. ಆತನೊಂದಿಗೆ ಸ್ನೇಹ ಬೆಳೆಸಬೇಕೆಂಬ ಹಂಬಲ ಚಂದ್ರಶೇಖರನಿಗೆ ಜೊರಾಯಿತು. ಆದರೆ ಮಿತಭಾಷಿ ಚಂದ್ರಶೇಖರನಿಗೆ ಸ್ವಲ್ಪ ಅನ್ಯೆರ್ಯ. ಕೊನೆಗೆ ಪರಿಚಯ ಮಾಡಿಕೊಂಡಾಗ ಆತನ ಹುಟ್ಟೂರು, ಚಂದ್ರಶೇಖರನ ತಂದೆಯ ಮನೆಕಡೆ ಎಂದು ಕೇಳಿದಾಗ ಆತ ಫೀರೆ ಅವಮಾನ ಸಂತೋಷವಾಗಿತ್ತು. ಹುರುರಾಜನ ಆಕರ್ಷಕ ವ್ಯಕ್ತಿತ್ವಕ್ಕೆ ಚಂದ್ರಶೇಖರ ಮಾರುಹೋದ. ಒಬ್ಬೆ ನೋಡಿದರೆ ಮತ್ತೆರ್ಮೆ ತಿರುಗಿ ನೋಡಬೇಕೆನ್ನಿಸುವ ಆವನ ರೂಪು ಜೊತೆಗೆ ಸಶ್ಯಕೆಯುಂಥ ಮಾತು ಇದಿದ್ದೇ ಜನರನ್ನು ಆಕರ್ಷಿಸಲು ಸಾಕಾಗಿತ್ತು. ಚಂದ್ರಶೇಖರ ದಿನವೂ ತನ್ನ ವಸತಿಗೆ ಆತನನ್ನು ಆಹ್ವಾನಿಸುತ್ತಿದ್ದ. ಆದರೆ, ಸಂಕೋಚ ಗೊಂಡ ಗುರುರಾಜ ಆದನ್ನು 'ಖಾಳೆ' ಎಂದು ಮುಂದೆ ಸಳ್ಳುತ್ತಿದ್ದ. ಒಂದು ದಿನ ಕಾಲೇಜಿನಿಂದ ಹೊರಬಂದ ಗೆಳೆಯನನ್ನು ತನ್ನ ಮನೆಗೆ ಖರಲೇಬೇಕೆಂದು ಒತ್ತಾಯಪಡಿಸಿದ. ಗೆಳೆಯನ ವಸನ ಸ್ಥಿತಿಯನ್ನು ನೋಯಿಸಲಾರದೆ ಕೊನೆಗೂ ಗುರುರಾಜ ಚಂದ್ರಶೇಖರನ ವನೆಗೆ ಅತಿಥಿಯಾಗಿ ತೆರಳಿದ. ಚಂದ್ರಶೇಖರ ಗುರುರಾಜನ ವಿಷಯವಾಗಿ ಮನೆಯಲ್ಲಿ ಆಗಲೇ ಹೇಳಿದ್ದ. ಹುರುರಾಜ ಮನೆಯವರೆಲ್ಲರ ಪರಚಯ ಮಾಡಿಕೊಂಡ.

"ಇವಳು ನನ್ನ ತಂಗಿ, ಶ್ರೀಮತಿಯೆಂದರೆ ಈಗ ಬಿ.ಎಸ್ಸಿ ಪೊದಲಲ್ಲಿ ಓದುತ್ತಿದ್ದಾಳೆ" ಎಂದ. ಚಂದ್ರಶೇಖರ ತಂಗಿ ಶ್ರೀಮತಿಯನ್ನು ಗೆಳೆಯನಿಗೆ ಪರಿಚಯಮಾಡಿಸಿದ. ಗುರುರಾಜ ಸ್ವಾಭಾವಿಕವಾಗಿ 'ನಮಸ್ಕಾರ' ಹೇಳಿ ಆವಳತ್ತ ದೃಷ್ಟಿ ಹಾಯಿಸಿದ. ಶ್ರೀಮತಿಯನ್ನು ನೋಡಿದ ಹುರುರಾಜನಿಗೆ ನಾಲ್ಕು ವರ್ಷಗಳ ಹಿಂದೆ ತೀರಿಹೋದ ತಂಗಿಯಾದ 'ಶೈಲ'ಳ ನೆನಪಾಯಿತು. ಆಕೆಯನ್ನು ನೋಡುತ್ತಿರುವೆನೋ ಎಂಬಂತೆ ಗುರುರಾಜನಿಗೆ ಕಾಣಿಸಿತು. ಏಕೋ ಯೌವನ ಕಳೆಯಲ್ಲಿ ವಿಘ್ನನಾದ ಮಿತ್ರನನ್ನು ಎಚ್ಚರಿಸಿ, ಚಂದ್ರಶೇಖರಪ್ಪೆಮ್ಮೆನಕ್ಕ. ಆದರೆ ಗುರುರಾಜನ ಕಣ್ಣಾಲ್ಲೆ ಮಿಂಚಿದ ಕರುಣಾ ಆತನನ್ನು ಸಮಸ್ಯೆಟ್ಟುಕೊಂಡಿತು: "ನನಗೂ ಒಬ್ಬಳು ತಂಗಿಯಿದ್ದಿದ್ದಳು, ಚಂದ್ರ.....ನಿನ್ನ ತಂಗಿಯನ್ನೇ ಹೋಲುತ್ತಿದ್ದಳು. ಆವಳನ್ನು ಕಂಡಾಗ ಪತಿಸಿದ ತಂಗಿಯ ನೆನಪಾಗುತ್ತೆ" ಎಂದು ಕಣ್ಣಿದ ದನಿಯಲ್ಲಿ ನುಡಿದ. ಗೆಳೆಯನಲ್ಲಿ ದುಃಖದ ಜಿಗ್ಗೆ ಎದ್ದಿದೆ ಎಂದು ತಿಳಿದು ಚಂದ್ರಶೇಖರನಿಗೂ ಆತನ ಬಗ್ಗೆ ಸಹಾನುಭೂತಿಯುಂಟಾಯಿತು. ಗುರುರಾಜನ ದುಃಖ ತನಗೂ ಸಂಬಂಧಿಸಿದ್ದು ಎಂಬಂತೆ ಶ್ರೀಮತಿಯೂ ಮರುಗಿದಳು; ಶ್ರೀಮತಿಯು ಬಗೆಗೆ ಗುರುರಾಜನಲ್ಲಿ ಸಹೋದರಿ ಭಾವನೆ ಬೆಳೆದುಬಂತು. ಆತನಿಗೆ ಚಂದ್ರಶೇಖರನ ಮನೆಯಲ್ಲಿ ಆದೇನೋ ಅಕರ್ಷಣೆ ಇದ್ದಿತ್ತು. ದಿನಕ್ಕೊಮ್ಮೆ ಚಂದ್ರಶೇಖರನ ಮನೆಗೆ ಹೋಗಿ ಬಾರದಿದ್ದರೆ, ಏನೋ ಕಳೆದುಕೊಂಡಂತಾಗುತ್ತದೆ. ಚಂದ್ರಶೇಖರನ ಮನೆಗೆ ಹೋದ ಹುರುರಾಜ ಗಂಟೆಗಟ್ಟಲೆ ಆತನ ಮನೆಯಲ್ಲಿ ಮಾತನಾಡುತ್ತ ಕಳೆತಿರುತ್ತಿದ್ದ. ಶ್ರೀಮತಿಯೊಡನೆ ಮಾತನಾಡುತ್ತ ಆತ ಸಂಜೆಯಾದುದನ್ನೂ ಮರೆಯುತ್ತಿದ್ದ.

ಗುರುರಾಜನಿಗೆ ಚಂದ್ರಶೇಖರನ ಗೆಳೆತನವಾಗಿ ಎರಡು ವರ್ಷ ಸರಿಯಿತು. ಮೊದಲಿನಂತೆ ದಿನವಿಡೀ ಹರಟೆಹೊಡೆಯಲು ಈಗ ಸಮಯವಿಲ್ಲ. ಪರೀಕ್ಷೆಯು ತಲೆಯಿಂದ್ದಲ್ಲಿ ದಿನವಿಡೀ ನೇಳೆ ಪಠ್ಯವಾಗುತ್ತಿತ್ತು. ಗುರುರಾಜನಿಗೆ ಗೆಳೆಯನ ನೆನಪೆಯುತ್ತ ಹೋಗಿ ಮಾತನಾಡಿ ಬಾರಲಾಗದಿದ್ದರೆ ಆ ದಿನವಿಡೀ ಸಪ್ಪೆಯಾದಂತಾಗುತ್ತಿತ್ತು. ಆದರೆ ಪರೀಕ್ಷೆಯ ಸಮಯದಲ್ಲಿ ಅವರೆಲ್ಲರ ಭೇಟಿ ಸ್ವಲ್ಪ ಆಶರೂ ಪವಂಗಿತ್ತು.

ಗುರುರಾಜನಿಗೆ ಶ್ರೀಮತಿಯನ್ನು ಕಂಡಾಗ ಪತಿಸಿದ ತಂಗಿಯ ನೆನಪಾದರೆ ತೈಲ ಪತ್ತೆವೆಯೆ ಜನಿಸಿ ಖಂದಿರುವಳೆಯೆನಿಸುತ್ತಿತ್ತು. ಆದರೆ, ಈ ಸ್ನೇಹಮಯ ವಾತಾವರಣಕ್ಕೆ ಆದೊಂದು ದಿನ ಬಿರುಗಾಳಿ ಬೀಸಿತು. ಗುರುರಾಜ ತನ್ನ ರೂಮಿನಲ್ಲಿ ಪುಸ್ತಕ ಹಿಡಿದು ಕುಳಿತಿದ್ದ. ಚಂದ್ರಶೇಖರ 'ಪ್ರಳಯಾಗ್ನಿ'ಯಂತೆ ರಭಸದಿಂದ ಒಳಪ್ರವೇಶಿಸಿದ. ಗೆಳೆಯನ 'ಅವತಾರ'ಕ್ಕೆ ಹುರುರಾಜ ಆದೇಕೋ ಹೆದರಿದ. ಚಂದ್ರಶೇಖರನ ಕಣ್ಣಾಲ್ಲೆ ಕೋಪದಿಂದ ಕೆಂಪಗಾಗಿತ್ತು. ಆಗಾವುದೋ ಅನಾಹುತ ತನ್ನಿಂದ ನಡೆದಿರಬೇಕೆಂದೆಣಿಸಿ ಗುರುರಾಜ ಹೆದರಿದ.

"ನಿನ್ನಂತಹ ಗೆಳೆಯ ಸಿಕ್ಕಿದ್ದು ಸಾರ್ಥಕವಾಯಿತು ಗುರುರಾಜ್! ಯಾಂಡ ಮನೆಗೆ ಎರಡನ್ನು ಖಗೆದ ಫೀಜ..... ನನ್ನ ವಂಶಕ್ಕೆ ಮಸಿ ಬಳಿದ ದ್ರೋಹಿ ..... ಶ್ರೀಮತಿಯು ಖಾಳನ್ನೇ ಹಾಳು ಮಾಡಿದ ಪಾಪಿ..... ದ್ರೋಹಿ..... ಹಾಳಾಗಿ ಹೋಗ....."

ಕೊನೆಯೆಲ್ಲುದ ಫಿಂದೆಗಳನ್ನು ಕೇಳಲಾರದೆ ಕೇಳಿದ ಗುರುರಾಜ. ಆತನಾಡಿದ ಯಾವ ಮಾತೂ ಅರ್ಥವಾಗಲಿಲ್ಲ. ಗೆಳೆಯನನ್ನು ಸಮಾಧಾನ ಮಾಡಲೆತ್ನಿಸಿದ. "ನೀನಾಡಿದ ಯಾವ ಮಾತೂ ನನಗರ್ಥವಾಗಿಲ್ಲ ಚಂದ್ರಾ.....ನಿಮ್ಮ ವಂಶಕ್ಕೆ ಮಸಿ ಬಳಿಯುವಂತಹ ಕಾರ್ಯವನ್ನೆಂದಿಗೂ ಮಾಡಿಲ್ಲ. ಆದರೆ ಸಂಭವಿಸಿದ್ದೇನು? ನಿಜವಾಗಿ ಹೇಳುತ್ತಿರುವಿಯೇನು, ಚಂದ್ರಾ.....? ಸ್ವಲ್ಪ ವಿಚಾರಿಸು, ಮಾತನಾಡು ವುದು ಒಳಿತು. ಸಲ್ಲದ ಅಪವಾದ ನನ್ನ ಮೇಲೆ ಹೊರಿಸುವುದು ತರವಲ್ಲ. ಒಂದೊಮ್ಮೆ ನೀನು ಹೇಳಿದಂತೆ ನಡೆದಿದ್ದರೆ.....ಘೋರ ಪಾಪವನ್ನೆ ಅಪರಾಧ ನಡೆದಿದೆ. ಆ ಬಗ್ಗೆ ನೀನು ಶ್ರೀಮತಿಯನ್ನು ವಿಚಾರಿಸಿದೆಯಾ?" "ಅಲೋಚಿಸಿಯೇ ಹೇಳುತ್ತಿರುವೆನು ಗುರುರಾಜ್. ನಿನ್ನ ಮೇಲೆ ಅಪರಾಧವನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೀಯ. ಆದರೆ ಇದಕ್ಕೆ ದಂಡನೆ ಇದ್ದೇ ಇದೆ, ನೆನಪಿರಲಿ ಗುರುರಾಜ್." ಚಂದ್ರಶೇಖರ ರಭಸದಿಂದ ಹೊರಟುಹೋದ. ಬೀದಿಯ ಜನ ಆಗಲೇ ಗುಂಪು ಸೇರಿ ಗುರುರಾಜನತ್ತ ನೋಡಿ ಆವಹೇಳನ ಮಾಡಲಾರಂಭಿಸಿತ್ತು. "ಇಷ್ಟು....ಹಾನು ಆಪರಾಧಿ" ಜನರತ್ತ ತಿರುಗಿ ಗುರುರಾಜ ಚೀರ್ಕರಿಸಿದ. ರಾಮುರಾಮ್ಮಾ, ಕೇಳಲಾರದ ಮಾತು ಕರ್ಣಕಠೋರ. ತಂಗಿಗೆ ಸಮನಾದ ಶ್ರೀಮತಿಗೂ ನನಗೂ ಇಲ್ಲದ ವಿಚಾರ ಶಲ್ಪಿಸುವುದೇ? ಇದರಿಂದ ಮುಕ್ತನಾಗಬೇಕಾದರೆ?" ಗುರುರಾಜ ಯೋಚಿಸಿದ. ಬೇರಾವ ದಾರಿಯಿಲ್ಲ. ಒಂದೇ ಒಂದು ದಾರಿ.....ಆತ್ಮಹತ್ಯೆ. ಬೀದಿ ಬೀದಿಯಲ್ಲಿ ಫಿರಂಗಾಧಿಪತಿಯಾಗುವ ಅವಹೇಳನ ಕೇಳಿಕೊಂಡಿರುವುದಕ್ಕಿಂತ— ಆತ್ಮಹತ್ಯೆ ಸಾವಿರಪಾಲು ಮೇಲು. ಛೆ! ನಿರಪರಾಧಿಯೂದ ನಾನೇಕೆ ಆತ್ಮಹತ್ಯೆ ಮಾಡಿಕೊಳ್ಳಬೇಕೆ? ಅಪರಾಧಿ ನಾನೆಂದು ಲೋಕಕ್ಕೆ ತಿಳಿಸಿದಂತಾಗುವುದಿಲ್ಲವೆ! ಎಷ್ಟು ಯೋಚಿಸಿದರೂ ಇದಕ್ಕೆ ಬೇರೆ ಪರಿಹಾರ ವರ್ಗವೇ ತೋರುತ್ತಿಲ್ಲ."

ಂ ಂ ಂ ಂ ಂ

ಗುರುರಾಜ ಕೊನೆಗೂ ಆತ್ಮಹತ್ಯೆ ಮಾಡಿಕೊಂಡೇ ಬಿಟ್ಟ. ಮಿಂಚಿನ ವೇಗದಲ್ಲಿ ಸುದ್ದಿ ಚಂದ್ರಶೇಖರನಿಗೆ ತಿಳಿಯಿತು. ಒಮ್ಮೆ ವೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಗುರುರಾಜನ ಶವವಿನ ಮುಂದೆ ಜಕ್ಕಳಂದಡೆ ವಿಪರೀತವಾಗಿ ಸೇರಿತ್ತು. ಗುರುರಾಜ ಅಪರಿಧಿಯೂ ಆತ್ಮಹತ್ಯೆ ಮಾಡಿಕೊಂಡ ಎಂಬ ಸುದ್ದಿ ಎಲ್ಲರಿಗೂ ತಿಳಿಯಿತು. ಆತ್ಮಹತ್ಯೆಗೆ ಮೊದಲು ಗುರುರಾಜ ಸ್ವಹಸ್ತದಿಂದ ಪತ್ರವೊಂದನ್ನು ಮೇಜಿನ ಮೇಲಿಟ್ಟಿದ್ದ. ಚಂದ್ರಶೇಖರ ಹೆಸರಿಗೆ ಬರೆದಿಟ್ಟ ಆ ಪತ್ರವನ್ನು ಚಂದ್ರಶೇಖರನತ್ತೆ ಕಣ್ಣಾಡಿಸಿದ.

ಗೆಳೆಯ ಚಂದ್ರ.....

"ಈ ಕಾಗದ ಓದುತ್ತಿರುವಾಗ ನಾನು ಎಲ್ಲಿರಬಹುದು? ಆತ್ಮಹತ್ಯೆ ಮಾಡಿ

(ಬಾಕಿ ಸುದ್ದಿ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರನಸ್ಪದೆ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ನಂದೆ ದರ್ಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಶ್ಚಯವಾಗಿಯೂ ಗುಣಪಡಿಸುತ್ತದೆ.
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಫೋನ್ : 526

1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೩೭
VOL. 48
No. 37

ಕರ್ನಾಟಕ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೫--೬--೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಶಿವಪೂಜೆಯಲ್ಲಿ ಕರಡಿ

ಕೇರಳದಲ್ಲಿ ಎಡಕಮ್ಯುನಿಸ್ಟರ ಪೇತ್ಯ ತ್ವದಲ್ಲಿ ಸಂಯುಕ್ತರಂಗವು ಎರಡು ವರ್ಷ ಗಳಿಗೂ ಹೆಚ್ಚಕಾಲ ಅಧಿಕಾರ ಚಲಾ ಯಿಸಿ ಯಶಗಳಿಸುತ್ತಿದೆ ಎಂಬಾಗ ನಂ ಬೂದರಿಯವರ ಶಿವಪೂಜೆಯಲ್ಲಿ ಬಲ ಕಮ್ಯುನಿಸ್ಟರು ಕರಡಿಬಿಟ್ಟರು. ಅರ್ಥಮಂ ತ್ರಿ ಕೆಂಜರವರ ವೇಲಿಫ ಆರೋಪಗಳ ಬಗ್ಗೆ ಗಮಫ ಹರಿಸದೇ ಖಚುಕಾಲ ಉಳಿ ಯುವ ಅವರನ್ನು ಎಡಕಮ್ಯುನಿಸ್ಟರು ಅಡುಮಿದರು. ಕೊನೆಗೂ ಕಂಜು ರಾಜಿ ನಾಮೆ ನೀಡಿ ಹೊರಬಂದರು. ಈಗ ತ ಮ್ಮನ್ನು ಸಂಭಾವಿಕರೆಂದುಕೊಳ್ಳುವ ಬ ಲ ಕಮ್ಯುನಿಸ್ಟರು ನಂಬೂದರಿಯನ್ನು ಮೆಟ್ಟಲು ಹವಣಿಸುತ್ತಾರೆಂದರೆ ಆತಿಶ ಯವಲ್ಲ. ಬಲಕಮ್ಯುನಿಸ್ಟರು ಮೂರು ತಂಗಳ ಅಲ್ಪಾವಧಿಟಂ ನಂಬೂದರಿಗೆ ನೀ ಡಿದ್ದಾರೆ. ಮಂತ್ರಿ ಇ. ವಿ. ಥಾಮಸ್ ಎಡಕಮ್ಯುನಿಸ್ಟರ ನಡಾವಳಿ ಖಿದ್ದಾದೆ ಹೋದರೆ ಸಖ್ಯ ಅಶಕ್ಯವೆಂದು ಘೆಂಟಾಘೋಷವಾಗಿ ಸಾರಿದ್ದಾರೆ. ಅಂ ದರೆ, ಎರ-ಬಲಗಳ ನಡುವಣ ಎಡೆ ಆಗ ಲವಾಗುತ್ತ ಬಂದಿದೆ; ಬರ ತ್ತಿದೆ.

ಸಂಯುಕ್ತರಂಗದ ಇನ್ನೊಂದು ಘಟಕ ಮುಸ್ಲಿಂ ಲೀಗನ್ನು ತೃಪ್ತಿಪಡಿಸಲು ನಂಬೂದರಿ ಮಲಪ್ಪುರಂ ಜಿಲ್ಲೆಯನ್ನು ಸ್ಥಾಪಿಸುವ ನಿರ್ಧಾರ ಮಾಡಿ ಛಲೆ ಎನ್ನಿಸಿದರು. ಇತ್ತೀಚೆಗೆ; ಕೆಲವೇ ದಿವಗಳಲ್ಲಿ ಈ ಜಿಲ್ಲೆಯು ಅಸ್ತಿತ್ವಕ್ಕೆ ಬರಬಹುದು. ಮಹಮ್ಮದೀಯರೇ ಬಹುಸಂಖ್ಯಾಕರಿರು ವ ಈ ಜಿಲ್ಲೆಯೊಂದಿಗೆ ಇನ್ನೊಂದು ಇಂ ಥಹುದೇ ಜಿಲ್ಲೆಯ ರಚನೆಯ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ. ಜಾತ್ಯತೀತ ಭಾರತದಲ್ಲಿ ಜಾತಿಯ ತಳಹದಿಯಲ್ಲೇ ಜಿಲ್ಲೆಗಳನ್ನು ರಚಿಸುವು ದು ಅಭಾಸ ಮೂರ್ಖತನವಲ್ಲ, ಮತೆರ್ತಂದು ಪಾಕಿಸ್ತಾನ ನಿರ್ಮಾಣಕ್ಕೆ ನಾಂದಿಯೂ ಏಕೆಂದು ಕೆಲವರ ಅಂಜಿಕೆ. ಪಾಕಿಸ್ತಾ ನ ನಿರ್ಮಾಣವಾಗದೆ ಹೋದರೂ ಈ ಪರಿ ಯ ಘಟಕ ರಚನೆ ಜನಾಧುನೆಂಬುದು ಪ್ರಾಮಾಣಿಕ ಅಭಿಪ್ರಾಯ. ಬಲಕಮ್ಯು ನಿಸ್ಟರು ನಿರ್ಮಿಸಿದ ಅಲ್ಪಾವಧಿಟಂನ್ನ ನಂ ಬೂದರಿಯವರು ಅಮೂಲ ತಿರ್ಸ್ಕರಿಸಿ ದ್ದಾರೆ. ಅವರ ನೀತಿ-ಧೋರಣೆ ಬದಲಾ ಯಿಸದೆ ಹೋದರೆ ಸಂಯುಕ್ತ ರಂಗವ ನ್ನು ಪುನರ್ಘಟಿಸಬೇಕಾಗಿ ಖಡಖಡಿದು —ಇದು ನಂಬೂದರಿ ಉಳ್ಳಿಡಣೆ. "ಶ್ರೀ ಮತಿ ಗಾಂಧಿಯವರೊಡನೆ ಅದುವರೆಗೆ ಮಂತ್ರಿಹೂಗುಳಿದರೆ, ತಾನೂ ವಿದೇಶ ಸಂಚಾರಕ್ಕೆ ಹೋಗುತ್ತೇನೆ" ಎಂಬ ಮತ್ತೊಬ್ಬ ಮಂತ್ರಿ ಥಾ ಮಸರ ಮಾತಿನಲ್ಲಿ ಖಡಳಿಮ್ಮು ಸತ್ಯಾಂಶವಡಗಿದೆ. ಅಂದರೆ, ಒಂದು ಮೂಲ ಸುಪ್ತಪ್ಪ. ವಂಬೂದರಿಯವರ ಸಂಯುಕ್ತರಂಗದ ಅಧಾರ ಶಿಲೆಯಡಿ ಭೂಕಂಪವಾಗತೊಡಗಿದೆ. ಸ್ಫೋಟವೆಂ ದು, ಯಾವ ಗಳಿಗೆಯಲ್ಲಿ ಎಂಬುದು ಮಾ ತ್ರ ಅತ್ಯಂತ ರಹಸ್ಯ.

ಕೇರಳದ ಕತೆ ಹೀಗಾದರೆ, ಪಶ್ಚಿಮ ಬಂಗಾಳದ ಕತೆ ಬೇರೊಂದು. ೧೯೬೭ರ ಚುಣಾವಣೆಯಲ್ಲಿ ಅಲ್ಲಿಯೂ ಕಮ್ಯುನಿಸ್ಟ ರ ಪ್ರಾಬಲ್ಯ ಹೆಚ್ಚಿತು. ಆಜಯ್ ಮು ಖರ್ಜಿಯವರು ಮುಖ್ಯಮಂತ್ರಿಯಾಗಿ ದ್ದು ಗೃಹಖಾತೆಯನ್ನು ಇಟ್ಟುಕೊಂಡದ್ದ ರಿಂದ ಬಸುವಿಗೆ ತಪ್ಪ ಕಾರಭಾರು ತೋರಿ ಸುವುದು ಖಪ್ಪಸಾಧ್ಯವಾಯ್ತು. ಇದೇ ಬೇ ಳೆ ಹಟ್ಟಿದ 'ಘೇರಾವ್' ಸಂಧರಿ ಈಗ ಏಕ್ಯಿಕ್ಯವಳಪ್ಪು ಮುತ್ಸತೊಡಗಿದ್ದಾಳೆ. ೧೯೬೯ರ ಮಧ್ಯಾವದಿ ಚ ಚಾವಣೆಗಳಲ್ಲಿ ಬಸುವಿನ ಕೈ ಮತ್ಸಪ್ಪು ಬಲವಾಯ್ತು. ತಪ್ಪ ಕೈಗೆ ಗೃಹ ಖಾತೆ ಬರುವುದಾದರೆ, ನೀವು ಮುಖ್ಯ ಮಂತ್ರಿ ಆಂದೇ ಬಿಟ್ಟ ರುಆಜಯ್.ಡಿ. ಅಧಿಕಾರದ ಮುಂದೆ ಅಪ ಜಯ ಹೊಂದಿದ ಅಜಯ್ ಈಗ 'ಬಸು ಮಹಾರಾಷ್ಟ್ರಕ್ಕೇ ಜಯ' ಹಾಡ ಲೇಬೇಕಾಯ್ತು. ಅಜಯ್-ಮುಖರ್ಜಿ ಮತ್ತು ಮಂತ್ರಿಯಾದರು; ಬಸು ಉಪ ಮುಖ್ಯ ಮಂತ್ರಿಯೆನಿಸಿದರು. ಪೊನ್ನೆ ಮೊನ್ನೆಲ್ಲಿ ಅ ಜಯ್ರ ಖಂಗ್ಲಸ್ ಕಾಂಗ್ರೆಸ್‌ನ ಮಂತ್ರಿ ಧಾರಾನ್ನೇ ಬಸು ಕಮ್ಯುನಿಜಂಗೊಲಿಸ ಕಾವಿರ್ಸಿಕರು 'ಘೆರಾವ್' ಮಾಡಿ ಬಿಟ್ಟ ರು. ಧಾರಾ ಗಾಂಧಿ ವಿಧಾನವೆ ಸಕ್ಯಾ ಗ್ರಹವಲ್ಲದೆ, ಯಾರು ಸೋಲಬೇಕು? ಯಾ ರು ಗೆಲ್ಲಬೇಕು? ಗಾಂಧಿವಾಡ ಸೋಲಿಗಂಜುವುದಿಲ್ಲ. ಧಾತಿಕವಾಗಿ ಸೋತರೂ ಅದು ನೈತಿಕವಾಗಿ ಗೆದ್ದೆ ನೆಂದು ತೃಪ್ತಿ ಪಡುತ್ತದೆ. ಧಾರಾ ಅ ರೋಗ್ಯದ ಕಾರಣದಿಂದ ಸೋತೆ ಸೋತರು. ಈಗ ಜಜ್ಞಾಸೆ ಸಂಯು ಕ್ತರಂಗದ ಸರಕಾರದ ಭೀತಿ ನಿಯಮಾ ವಳಿಯ ಮೇಲೆ ನಪ್ಪರೀಯ ತಮ್ಮ ಅಳಿ ಪ್ರಾಯವನ್ನು ಪ್ರಕಟಪಡಿಸುವ ರಾಜ್ಯ ಕೀಯ ಅಧಿಕಾರವಿದೆಯೆನ್ನುವ ಬಸು "ಘೆರಾವ್" ಕಾರ್ಮಿಕರ ನ್ಯಾಯ ಬದ್ಧ ಹಕ್ಕು ಎಂದು ವರ್ಣಿಸುತ್ತಾರೆ. ಆದರೆ ಅಜಯ್‌ರ ಅಭಿಪ್ರಾಯ ಇದಕ್ಕೆ ವಿಪ ರೀತ. ತನ್ನ ಮಂತ್ರಿಯೊಬ್ಬನನ್ನೇ ಘೆರಾವ್ ಮಾಡುವುದೇನು, ತನ್ನ ಮುಖಕ್ಕೆ ಮಸಿ ಬಸಿಯುವುದೇನು? ಅಜಯ್ ಮುಖರ್ಜಿ ಪುಟಿ ಸಿಂದರಿಸಿದ್ದಾರೆ. ಇದೀಗ, ಘೆರಾವ್ ಬ ಗ್ಗೆ ಸಂಯುಕ್ತರಂಗದಲ್ಲಿ ಸಾವಾನ್ಯನ್ನ ನೀ ತಿಯೊಂದು ರೂಪಿಸಲಾಗುವ ಅಗತ್ಯವಿ ದೆ. ಅದಕ್ಕೆ ಪಾಪ್ಪರ ಭಿನ್ನಧರ್ಮದ ಧಾ ಜ್ಯಕೀಯ ಪಕ್ಷಗಳಲ್ಲಿ 'ಘೇರಾವ್' ಬಗ್ಗೆ ಯೂ ಭಿನ್ನಮತವಿದೆ. ಹಾಗಾಗಿ ಬಿಕ್ಕ ಟ್ಟು ಕಾಣಿಸಿದೆ. ಇದು ಪರಿಹಾರವಾಗು ವುದು ಹೇಗೆ?

ಕೇರಳದಲ್ಲಿ ನಂಬೂದರಿ ಕಮ್ಯುನಿಸ್ಟ ರು ಬಹುವರ್ಷ ಗಳಿಸಲು ಹೆಚ್ಚ ಶ್ರಮ ಪಡಬೇಕಾಗಿಲ್ಲ. ಮುಸ್ಲಿಂ ಜಿಲ್ಲೆಯೊಂದ ನ್ನು ರಚಿಸುವ ಮೂಲಕ ಲೀಗಿನ ಕೃಪೆಗೆ ಪಾತ್ರರಾದ ನಂಬೂದರಿಬಲಕಮ್ಯುನಿಸ್ಟ ರಿಲ್ಲದೇನೇ ಅಧಿಕಾರದಲ್ಲಿ ಮುಂದುವರಿ ಯಬಲ್ಲರು. ಚಿಂತೆಯೆಂದರೆ, ಮುಂದಿನ ಚ ಚಾವಣೆಯದ್ದು ಮಾತ್ರ. ಆಗತಾನೇ ಗೆದ್ದು ಬರಲು ವೇದಿಕೆ ತಯಾರಾ ಗಲೂ ಬಹುದು; ಒಂದುವೇಳೆ ಹಾಗಾಗದಿ ದ್ದರೆ, ಮತ್ತೆ 'ಕಾಂಗ್ರೆಸ್ ವಿರೋಧಿ' ವಿವಿಧ ಪಕ್ಷಗಳಲ್ಲಿ ನೈತ್ರಿಸಾಧಿಸಲು ಹಗ್ಗವಾಗಿ ಬಂದೀತು. ಹಾಗಿರುವಾಗ ನಂಬೂದರಿಗೆ ನಂಬಿಕೆ ಹೆಚ್ಚು. ಬಸುವಿನ ಸಂಗತಿ ಹೀಗಿಲ್ಲ. ಬಂಗಾಳದಲ್ಲಿ ಬರುವಿರ ಬೇಕಾದರೆ, ಹಲವು ಪಕ್ಷಗಳೂ ಇರಲೇ ಬೇಕು. ಆಜಯ್ ಬಸು ಶೈಯ ಪಶು ವಾಗಿ ಉಳಿಯಲು ಒಪ್ಪದೆ ಹೋದರೆ? ಆದರೆ, ಆ ಪ್ರಶ್ನೆ ಉದ್ಭವಿಸುವುದಿಲ್ಲ, ಮುಖ್ಯಮಂತ್ರಿ ಪದವಿಯ ಆಸೆಯಿಂದ ತನ್ನ ವ್ಯಕ್ತಿತ್ವದಿಂದ ಕೈತೊಳೆದುಕೊಂಡ ಅಜಯ್ ರಾಜ್ಯಕೀಯವಾಗಿ ಎಂದೋ ಪರಾಜಿತರಾಗಿದ್ದಾರೆ. ಇದನ್ನು ಬಸು ತಿಳಿಯದವರಲ್ಲ. ಅಧಿಕಾರದ ಮೋಹದಿಂದ ಬಂಧಿತವಾದ ಸಂಯುಕ್ತ ರಂಗದಲ್ಲಿ ಮೂಡಿದ ತಾತ್ಕಿಕ ಒಡಕು ಮೂಡಾವಾಗುವುದೂ ಇಲ್ಲ; ಬಸುವಿನಂತ ಹ ತಂತ್ರಗಾರರು ಇರುವ ತನಕ ರಾಜ್ಯ ಕೀಯ ಅಧಿಕಾರವೇಹಿಗಳನ್ನು ಪಂಜರ ದಲ್ಲಿಟ್ಟರುವುದು ಅಸಂಭವವಲ್ಲ.

ಆದರೆ, ಒಂದು ಮೂತು. ಎರಡೂ ರಾಜ್ಯಗಳ ಆಡಳಿತ ಪಕ್ಷದ ಬಿರುಕು ಟೆಸೆಯಲಾರದ್ದು. ಅದ್ದರಿಂದ ರಾಜ್ಯದ ಜನತೆಗೆ ಇದರಿಂದ ಸುಖ ದೊರೆ ಯದು. ಪಂಚವಾರ್ಷಿಕ ಯೋಜನೆಯು ಇದೀಗಲೇ ಮತ್ತೆ ಪ್ರಾರಂಭವಾಗಿರುವಾ ಗ ರಂಗೀಯ ಭಿನ್ನಮತಗಳಿಂದಾಗಿ ಮಂ ತ್ರಿಮಂಡಳ ಆಂತರಿಕ ಹೊಡೆದಾಟದಲ್ಲಿ ನಿರತವಾದರೆ, ಜನತೆಗೆ ಸುಖ ಶಾಂತಿ ನೆಮ್ಮದಿಯ ನಿರೀಕ್ಷೆ ಗಂಟು. ಬಂಗಾಳ— ಕೇರಳಗಳ ಜನತೆಗೆ ಸುಖ-ಶಾಂತಿ ಬೇಡವಾಗಿದೆಯೇ? ಅಥವಾ ಪ್ರತಿ ಯೊಂದಕ್ಕೂ ಕೇಂದ್ರ ಸರಕಾರವನ್ನೆ ದೂರುವ ಈ ರಾಜ್ಯ ಸರಕಾರದ ಮೂಡ ನ ನೋಡಿಯಿಂದಲೇ ಜನರು ಶಾಂತರಾಗಿ ಉಳಿಯುವರೇ?

ತಾಷ್ಕೆಂಟ್ ಸುಂದರಿ

ವೀರ ಪ್ರಧಾನಿ ಶಾಸ್ತ್ರಿಯವರನ್ನು ಬಲಿತೆಗೆದುಕೊಂಡ 'ತಾಷ್ಕೆಂಟ್' ಘೋ ಷಣೆ (ವಿವಕನ್ಮೆ) ಇನ್ನೂ ಖರಿಡಿ ಘೋಷಣೆಯಾಗಿಯೇ ಉಳಿದಿದೆ. ಭಾರ ತವು ಆದರ ಕಾರ್ಯಾಚರಣೆಗೆ ಹಲವು ಬಾರಿ ಕರೆ ತೀಡಿದರೂ ಪಾಕಿಸ್ತಾನದಿಂದ ಸಫಲ ಪ್ರತಿಕ್ರಿಯೆ ಪ್ರಕಟವಾಗಲಿಲ್ಲ. ಇದೀಗ ಆಯ್ಯೂಬಖಾನರು ಪದಚ್ಯುತ ರಾಗಿ ಯಹ್ಯಾಖಾನರು ದಂಡಿನಾಡಳಿತೆ ಯ ಅಧ್ಯಕ್ಷರಾಗಿದ್ದಾರೆ. ರಶ್ಯಾ ನಾಯ ಕರು ತಾಷ್ಕೆಂಟ್ ಘೋಷಣೆಯನ್ನು ಕಾರ್ಯ ರೂಪಕ್ಕೆ ತರುವ ಬಗ್ಗೆ ಆಗಾಗ ಉಭಯ ರಾಷ್ಟ್ರಗಳಿಗೂ ಕರೆತೀಡಿದ್ದಾರೆ. ಭಾರ ತದ ಹೆಜ್ಜೆಯನ್ನು ವೆ.ಚ್ಚಿದ್ದಾರೆ ಮೊನ್ನೆ ಮೊನ್ನೆ ರಶ್ಯದ ಪ್ರಧಾನಿ ಕೊಸಿಗಿನ್ ಯಹ್ಯಾಖಾನರನ್ನು ಭೇಟ್ಟಿಮಾಡಿದ್ದರು. ಉಭಯ ಕಾಶಲೋಪರಿ, ತರುವಾಯ ತಾಷ್ಕೆಂಟ್ ಜನಾನ್ನಾವನ್ನು ಬೇಕರಫ್ ಮಾಡಬೇಡಿರೆಂದು ಅವರನ್ನು ಕೇಳಿಕೊ ಳ್ಳುವರೆಂದು ಭಾರತೀಯರು ಆಶಿಸಿದ್ದರು. ಸಂದರ್ಶನಾನಂತರ ಹೊರಟ ಜಂಟಿ ಪೇ ಳಿಕೆಯಲ್ಲಿ ಈ ತಾಷ್ಕೆಂಟ್ ಸುಂದರಿಯ ಪ್ರಸ್ತಾಪವೇ ಇಲ್ಲ. ಹುಟ್ಟಿಸಿದ ತಂದೆಗೇ ಬೇಡವಾದ ಈ ಸುಂದರಿ ಮಹಾತ್ಮರಿಗೆ ಬೇಕು? ಕೊಟ್ಟ ಹುಡುಗಿಕುಲದಿಂದಪೆಂ ರನೆ ಎಂಬುದು ಫಿಜವಾದೂ ಹೆಣ್ಣವ ರಿಗೆ ಹೆಗ್ಗಣವೂ ಮಾದ್ದಲ್ಲವೇ? ಈ ಹೇಳಿಕೆಯ ಅರ್ಥವೇ ಏನು? ಅಯ್ಯೂಬರು ಕರೆಕಂದ ತಾ ಷ್ಕೆಂಟ್ ಸುಂದರಿ ಅವರೊಡನೆಯೇ ಪ ದಚ್ಯುತಳಾದಳೆಂದೆ? ಪಾಕ್ ರಾಜಕಾರ ಣಕ್ಕೆ ಇದೇನೂ ಹೊಸತಲ್ಲ. ತನ್ನ ಕ್ಕೆ ಸೇರಲೊಪ್ಪದ ಕಾಶ್ಮೀರ ಸುಂದರಿಯನ್ನು ಕಪಸಿನಲ್ಲಾದರೂ ಕಂಡು ತೃಪ್ತಿ ಪಡುವ ಅವಕಾಶ ಪಾಕಿಗಳಿಗೆ ಬೇಕೆನಿಸಿರಬೇಕು. ಪಾಪ, ತಾಷ್ಕೆಂಟ್ ಸುಂದರಿ ಜೀವನ್ಮೃ ತಾವಸ್ಥೆಗಿಂತ ಆತ್ಮಹತ್ಯೆಯನ್ನೇ ಬಯಸಿ ಯಾಳೆ?

ಮಹಾರಾಷ್ಟ್ರ ಎಜೆಕ್ಟ್ಸ್ ಕೊವೊರ್ ರೇಶನಿನ ಬೆಳ್ಳಿಹಬ್ಬ

ಕಳೆದ ತಾ. 27ರಂದು ಉಡುಪಿಯ ಕಲ್ಪ ನಾ ಥಿಯೇಟರಿನಲ್ಲಿ ಮಹಾರಾಷ್ಟ್ರ ಎಜೆಕ್ಟ್ ಕೊರ್ಪರೇಶನಿನ ಬೆಳ್ಳಿಹಬ್ಬವನ್ನು ಟಿ. ಮಾ ಧವ ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ರವೀಂದ್ರ ಪೈಗಳು ಸ್ವಾಗತಿಸಿದರು. ಮುಂಗ ಳೂರಿನ ಶ್ರೀ ಕೆ. ವಿಶ್ವನಾಥ ಕಾಮತರು ನಮ್ಮ ಜಿಲ್ಲೆಯಲ್ಲಿ ಕಾರು ಮತ್ತು ಲಾರಿಗಳು ಹೆಚ್ಚಾಗಿ ಓಡಾಡುತ್ತಿರುವುದಕ್ಕೆ ಇಂತಹ ಸಂ ಸ್ಥೆಗಳು ಕಾರಣವೆಂದು ಹೇಳಿದರು. ಡಾ| ಪೈಗಳು ಮಾತನಾಡುತ್ತಾ ವಿ ಶ್ವಾಸಾರ್ಹತೆಯ ಆಡಳಿತದಿಂದ ಜನರ ವಿಶ್ವಾಸ ಗಳಿಸಿದರೆ ಸಂಸ್ಥೆಗಳು ಏಂಡಿತವಾಗಿಯೂ, ಅಭಿವೃದ್ಧಿ ಹೊಂದುವವೆಂದು ಆಶ್ವಾಸನೆ ಯಿತ್ತರು. ಸಂಸ್ಥೆಯ ಚೀಫ್‌ಮೇನೇಜರ್ ಶ್ರೀ ಪಿ. ಶ್ರೀಪತಿ ಆಚಾರ್ಯರು ಧನ್ಯವಾದ ಸಮರ್ಪಿಸಿದರು.

ಗೇಹರಾಜ್ಯದಲ್ಲಿ

ಇದೂ ಪ್ರಗತಿಯ ಒಂದಂಶವೆ?

"ಎಸ್ಸೆಸ್ಸೆಲ್ಸಿ ರಿಸಲ್ಟು ಬಂತಂತೆ..."

'ಹ್ಞೂಂ....'

'ಇದೇನು ಧಾರೀ ಸಸಾರಾಂತ...'

'ಸಸಾರವಲ್ಲೆ ಮತ್ತೇನು?'

'ಡಾಡಪ್ಪ, ಮೊದ್ಲಿಗೆ ಇಪ್ಪತ್ತೈದು ರೂ ಖಾಯಿ ಪರೀಕ್ಷೇಂಕಾದ್ರೂ ಇತ್ತು, ಈಗ ಇಪ್ಪತ್ತೈದೇನು ಮಹಾ? ಹೆಂಡಕುಡಿಯೋ ಸಿಗರೇಟು ಸೇದೋ ಕಾಸಿನ ಪರೀಕ್ಷೆ...'

'ಅಲ್ವೆ, ಸಸಾರ ಸಸಾರಾಂತಂದು ಧಾರೀ ಸಸಾರ ಮಾಡ್ಬಿಟ್ಟೆಯಲ್ಲ?'

"ಅಲ್ರಿ, ಶಾಲೇಲಿ ಹತ್ತು-ಹದಿಮೂರು ಮಾರ್ಕ್ ಬಂದವ್ರೆಲ್ಲ ಖಾಸಾಪ ಬೇಕಾದ್ರೆ ಅದೂ ಕ್ಲಾಸು ಹೊಡ್ದು ಅದು ಅಂಥದ್ದೇ ಪರೀಕ್ಷೆ ಆಗ್ಬೇಕಲ್ಲ?"

"ಹೂಂ, ಇರ್ಲಿ. ಅದೂ ಒಂದು ಪರೀಕ್ಷೆ. ಕರ್ನಾಟಕ ರಾಜ್ಯದ ಸರಾಸರಿ ವಾಸು ೩೩ ಇತ್ತು; ಈ ವರ್ಷ ಮತ್ತೆ ಇಳಿದಿದೆ."

"ಗ್ರೇಸ್ ಮಾರ್ಕ್ ಸೇರಿಸೋಕೆ ಹೊದ್ಲು ಎಷ್ಟಿತ್ತೋ?"

"ಹದಿನೆಂಟೋಂಭತ್ತು ಹೇಳ್ತಾರೆ."

"ಸರಿಹೋಯ್ತು ಬಿಡಿ. ಶ್ರೇಷ್ಠಮಟ್ಟದ ಒಂದೆಡೆ ಹೇಳಿದ್ದಾರೆ."

"ಏನೂಂತ?"

"ಪಡಪಡ ಪರೀಕ್ಷೆ ದಿನ ಖಂತಂತೆ. ಅವರಿಗೂ ಫಣಿತಕ್ಕೂ ಎಣ್ಣೆಸೀಗೆಯಂತೆ. ಉತ್ತರಪತ್ರಿಕೆಯಲ್ಲಿ ಅಂಕೆ ಬರೆದನು. ಹೊಡೆದರು. ಫೀಜಿಕ್ಸಿನಲ್ಲಿ ಏನು ತೋ ರಿತೋ! ಒಂದು ಲೆಕ್ಕವನ್ನು ಜೀಳಿಮೂಡಿ ಸಿದರಂತೆ. ತುಸ ಹೊತ್ತಿನನಂತರ ಎದು ರುಬದಿ ಕೂತವ್ನ ಪುಸ್ತಿಕೆಯಿಂದ ಮತ್ತೊಂದು ಲೆಕ್ಕ ಕಾಪಿ ತೆಗೆದರು. ಪರೀಕ್ಷೆ ಕರಿಬೂ ದಯಾ ಮಾಡಿರಬೇಕು; ಅವರೂ ಒಂದ್ದತ್ತ ಮಾರ್ಕ್ ಸೇರಿಸಿ ಪ್ಯಾಸು ಅಂದರು....'

"ಈಗ ಆಗ್ತಾವುದೂ ಅದಕ್ಕೇನೂ ವೃತ್ತಿರಕ್ತವಲ್ಲನ್ನು. ನ್ಯೂಟೈಪ್ ಅಂತ ಹತ್ತು-ಇಪ್ಪತ್ತು ಮಾರ್ಕ್‌ಗಳ ಪಶ್ನವಪ್ನು ತಿಳಿದ ನಿರೀಕ್ಷಕರೇ ಹೇಳಿಸಿ ತಂಬಿಸಿದರೆ ತೀರಿತು ಬಿಡು, ಆದರೂ ದುಃಖ ಅಂದ್ರೆ ಫರಿತಾಂಶ ಬರೋಬರಿಯಿಲ್ಲ."

'ಪದ್ಯ ನೋಲೆ ಈ ಸಾರಿ ಪ್ರಶ್ನೆಪ್ರತಿಕೆ ಒಹಿರಂಗವಾಗಿದೇಂತ ಗಾಲ್ಲು ಬೇರೆ ಯಿತ್ತು..."

'ಏನು ಬಹಿರಂಗವಾದ್ರೂ ಫಮ್ಮಯ.. ವ ಜನಾಂದದ ಮೇಧಾಶಕ್ತಿ ಸ್ಫೋಟವಾಗೋಲ್ಲ. ಫಿಯಾವಗಳಿಗೆ ಕವ್ಚನ್ನು ಹೊಂದಿಸಿಕೊಳ್ಳಲು ಅವರು ಸಿದ್ಧರಿಲ್ಲ....."

"ಅದ್ರೂ ಚಳವಳಿಗೆ ಸಿದ್ಧರು...."

"ಅದೂ ನಿಯಮವ ಬದ್ಧವಾಗಿ ನಡೆಯುವುದಾದರೆ ಅದರಿಂದ್ನೂ ದೂರ...."

"ಅಂದರೆ, ಸ್ವೈರಕ್ಕೆ ಪೂರ್ತ ಮುಂದು ಅಂತಂತಾಯ್ತು...."

'ಹ್ಞೂಂ, ಆದರೆ, ಮಾನೋವಿಜ್ಞಾನಿಗಳು ಇದನ್ನು ಸ್ವೈರವೆನ್ನುವುದಿಲ್ಲ; ಅವರು ಸಹಜ ಪ್ರವೃತ್ತಿಯೆನ್ನುತ್ತಾರೆ."

"ಸರಿಯಪ್ಪ ನೀರು ನಿರಿನಿಂದ ಇಳುವರಿಗೆ ಹರಿಯುತ್ತದೆ; ಇದು ಸಹಜ ಪ್ರವೃತ್ತಿ. ಹಾಗೆಯೇ ಮೂರಾ ಬಟ್ಟೆ ಹರಿಯುವುದು ಬುದ್ಧಿಜೀ ಸಹಜ ಪ್ರವೃತ್ತಿ ಅಂದಂತಾಯ್ತು....."

"ನೋಡು, ಮಾನವಂಲು ಮರ್ಕಟವ ಪಿಡಿಯಲಲಿಯೆನ್ನು ಅಂತ ದಾಶರು ಹಾಡಿಲ್ಲವೇನು? ಕವಿಗೆ ಚಲತೆ ಸಹಜಂ ಅಂತ ಕವಿ ರತ್ನನೂ ಉದ್ಘೋಷಿಸಿದ್ದಾನೆ."

"ಹಿಷ್ಟಾನ್ನಿ, ಕವಿಕಲ ಸಂಜಾತರಾದ ಮಾನವರಲ್ಲಿಯೂ ಈ ಚಾಪಲ್ಯ ಅನುವಂಶಕವಾಗಿ ಬಂದಿರಬೇಕು. ಆದರೆ ನೋಡಿ...."

"ಏನು?"

"ಅನುವಂಶಿಕತೆಯ ಪ್ರಭಾವ ತಲೆಮಾರುಗಳು ಕಳೆಯುತ್ತ ಹೋದಂತೆ ಕಡಿಮೆಯಾಗುತ್ತ ಬರುತ್ತದೆ. ಆದರೆ, ನೀವಂದ ಚಾಪಲ್ಯ ದಿನೆ ದಿನೆ ಹೆಚ್ಚತ್ತ ಹೋಗುತ್ತೆ...."

"ಇಲ್ಲ ಕಣಿ, ಈ ಚಾಪಲ್ಯದಲ್ಲೂ ಒಂದು ಪ್ರಗತಿಯಿದೆ; ವಿಕಾಸವಿದೆ. ಇದಕ್ಕೇ ಆಧುನಿಕ ಮನೋವೈಜ್ಞಾನಿಕರು 'ವಿಕಾಸ'ವೆನ್ನುತ್ತಾರೆ. ಆದರೆ, ಪ್ರಗತಿಶೀಲತೆ ಪ್ರಕೃತಿ ನಿಯಮ; ಇದನ್ನು ವಿರೂಪಗೊಳಿಸುವುದು ಯಾರಿಗೂ ಅಸಾಧ್ಯ. ವಾಸ್ತವಿಕವಾಗಿ ಈ ವಿಕಾಸದ ಒಂದೊಂದು ಹಂತವೂ ಪ್ರಗತಿಯ ಒಂದೊಂದು ದಾರಿದೀಪ. ಇಂದಿನ ಜನಾಂಗದ ಚಾಪಲ್ಯವೂ ಈ ಪ್ರಗತಿಯ ಪಥದಲ್ಲೇ ಮುಂದಡಿಯಿಟ್ಟರೆ ಆಕ್ಷೇಪಿಸಿಲ್ಲ...."

"ಅಲ್ರಿ, ಪ್ರತಿಯೊಂದು ಅವಾಂತರವನ್ನೂ ಫೀವು ಪ್ರಗತಿಯೆನ್ನುತ್ತಾ ಹೋದರೆ..."

"ಅಲ್ಲದೇ, ಮಾನವ ವಿಕಾಸಶೀಲ್ಲ ಆತನ ಪ್ರವೃತ್ತಿ ಪತಿಶೀಲ. ವಿಕಾಸ ಸ್ತಬ್ಧವಾದರೆ, ಪತಿ ಕುಂಠಿತವಾದರೆ, ಕೆರೆಯ ನೀರಿನಿಸುತ್ತದೆ; ಅದು ಹುಳಹುಪ್ಪಡಿಗಳ ಬೀಡಿನಿಸುತ್ತದೆ, ಅಂಧಶ್ರದ್ಧೆ, ಮೂಢನಂಬಿಕೆಯನಿಸುತ್ತದೆ."

"ಹ್ಞೂಂ. ಆದರೂ ನಿನ್ನ ಪ್ರಗತಿ ವಾದಿರಳು ಇನ್ನೂ ಬಾಯಲ್ಲೇ ತಿನ್ನು ತ್ತಾರೆ, ಕಾಲಲ್ಲೇ ನಡೆಯುತ್ತಾರೆ..."

"ಛೆ, ಛೆ....ಅದರಲ್ಲೂ ಪ್ರಗತಿಯಿದೆ. ಇಂಜೆಕ್ಷನ್ ಟ್ಯೂಬ್‌ಗಳ ಮೂಲಕ ತಿಳ್ಳವ, ಕುಡಿಯುವ ಪ್ರಯೋಗ ಆಸಕ್ತಾಲದಲ್ಲಿ ಯಶಸ್ವಿಯಾಗಿದೆ. ಮೂಗಿನಿಂದಲೂ ಆಹಾರ ಸೇವನೆ ನಡೆಯುತ್ತದೆ ತಾನೆ? ಕಾಲಲ್ಲಿ ನಡೆಯುವುದರ ಉದ್ದೇಶವೆಂದರೆ ಕೈಯಲ್ಲಿ ನಡೆಯುವುದರಿಂದ ಅಧಿಕ ಶಕ್ತಿ ನಷ್ಟ."

"ಸರಿ, ಆದರೆ, ಉಸಿರಾಟ?"

'ಅಗ್ರಲ್ಲೂ ಪ್ರಗತಿಯಿದೆ. ವಾತಾವರಣದ ಗಾಳಿಯನ್ನು ಉಸಿರಾಡಿ ಅನ್ನುಜನಕವನ್ನು ಸೇವಿಸಿ ಅಂಗಾರಾಮ್ಲವನ್ನು ಹೊರದೂಡುವುದಕ್ಕಿಂತ ಕೊಳವೆಯಲ್ಲಿ ತುಂಬಿದ ಆಮ್ಲಜನಕವನ್ನೇ ಸೇವಿಸುವುದು ಸಾಧ್ಯವಾಗಿದೆ.....'

"ಆಯ್ತಪ್ಪ, ಅದು ಹೋಗಲಿ, ಅಂತೂ ಪ್ರಗತಿಶೀಲವೆಲ್ಲವೂ ಅನ್ನ. ಅದೇನಿದ್ದರೂ ಮೂಲಭೂತ ತತ್ವಗಳಲ್ಲಿ ನೂತ್ರ ಪ್ರಗತಿಯೆಂದಿಗೂ ಅಸಾಧ್ಯ....."

"ಅಂದರೆ?"

"ಅಂದರೆ, ಎರಡು ಎರಡು ನಾಲ್ಕು ಎಂಬ ಗಣಿತ ಸಿದ್ಧಾಂತದಂತೆ ಅದು ಶಿಲತಲಾತ್ಮರ....."

"ಹ್ಞೂಂ...ಏನೇ ಹಾ೦ದರೆ?"

"ಅಲ್ರಿ, ಎರಡು ಮತ್ತು ಎರಡನ್ನು ಬೇರೆ ಬೇರೆ ವಿಧಾನಗಳಿಂದ ಕೂಡಿಸಿದರೂ ಬರುವುದು ನಾಲ್ಕೇ ತಾನೆ?"

"ಅಂದರೆ?"

"ಅಹ್ಹೋ, ನೀವೊಂದು. ನೋಡಿ. ೨+೨=೪ ಹೌದು ತಾನೆ? ೪-೨=೨+೪-೨=೪ ಅಲ್ವೆ? ಹಾಗೆ. ಯಾವ ರೀತಿಯಲ್ಲಿ ಕೂಡಿಸಿದರೂ ಬರುವ ಉತ್ತರ ೪ ತಾನೆ?"

"ಹ್ಞೂಂ. ಸರೀನ್ನು...."

"ಹಾಗೇನೇ ಆಹಾರವಪ್ನು ಬಾಯಿಂದ ಸೇವಿಸಬಹುದು; ಮೂಗಿನಿಂದಲೂ ಸೇವಿಸಬಹುದು; ಇನ್ನು ನೇರವಾಗಿ ರಕ್ತಕ್ಕೇ ಸೇರಿಸಬಹುದು. ಆದ್ರೂ 'ಆಹಾರ ಸೇವನೆ' ಎಂಬುದು ಮೂಲಭೂತ ತತ್ವವ್ನು. ಕೈಯಲ್ಲಿತ್ತಿ ಬಾಯಲ್ಲಿಡಬಹುದ ; ಕ್ಲೂಪ್ ನಳಿಕೆ ಉಪಯೋಗಿಸಬಹುದು; ಗಂಜಿಯಿರಬಹುದು... ಪಥ್ಯಾನ್ನವಿರಬಹುದು. ಸೇವನಾ ವಿಧಾನದಲ್ಲಿ ಪ್ರಗತಿ ಕಾಣಬಹುದ ;ಆಪ್ತ ತತ್ವದಲ್ಲಿ ಅಂಧತೆಯಿದ್ದೇ ಇದೆ...."

"ಸರಿಯಪ್ಪ, ಫೀನ್ನ ಮಾತು ಪೂರಾ ಸುಳ್ಳು, ಆನ್ಕೋಕೆ ಆಗೋಲ್ಲ. ಆದ್ರೆ ನೋಡು, ಅದು ಪ್ರಕೃತಿಯನ್ನು ಮುಷ್ಟಿಯಲ್ಲಿಟ್ಟುಕೊಳ್ಳೋ ಎಲ್ಲ ಪ್ರಯತ್ನ ಭರದಿಂದ ಸಾಗುತ್ತಲಿದೆ ಅಂದೂ ಸಾಧ್ಯವಾಗಬಹುದು....."

'ಏನು ಹೇಳ್ತೀರಾ? ನಮ್ಮ ಹಿಂದಿನ ಕಾಲದ ಋಷಿ ಮುನಿಗಳು ಅನ್ನ ಫೀರು ಗಾಳಿ ಬಟ್ಟೆ ಎಲ್ಲವನ್ನೂ ತ್ಯಜಿಸಿ ಪ್ರಕೃತಿಯನ್ನೆ ಗೆದ್ದು ಅಮರತ್ವವನ್ನು ಪಡೆದಿಲ್ಲವೆ?"

"ಈಗ ನಾವೂ ಅದೇ ಪ್ರಗತಿಯ ಒಂದಂಶವನ್ನು ಸಾಧಿಸಹೊಟ್ಟಿದ್ದೇವೆ."

"ಅದ್ಯಾವ ಅಂಶವೆಂದು ತಿಳಿಯಬಹುದೆ?"

'ಓಹೋ, ಅದಕ್ಕೇನೆಂತೆ? ಅದು ಪ್ರತಿದಿನಾ ದೃಶ್ಯೋಚರವಾಗುತ್ತೆ....."

'ಅಂದರೆ?'

"ಶಾಲೆ-ಕಾಲೇಜು, ದೇವಸ್ಥಾನ-ಚರ್ಚ್, ರಸ್ತೆ-ಬೀದಿ ಎಲ್ಲೆಲ್ಲೂ...."

"ಇದೇನು ಒಗಟು ನುಡಿದಂಗೆ ಆಡ್ತೀರಾ..."

"ಅಲ್ವೆ, ಹಾಗೀಗ ಬಟ್ಟೆ ಕಡಿಮೆ ಹಾಕ್ಕೊಂಡು ಮಾಂದಪನ್ನ ಪೂರ್ತಾ ಶ್ಯಜಿಸಿ ಬಿಡೋ ಪ್ರಯತ್ನ ಮಾಡ್ತಿರೋದು ಅಂದೆ...."

"ಛಿ, ಫೀಯೊಂದು. ಎಲ್ಲೋ ಕೆಲವು ತಿಳಿಗೇಡಿಗಳು ಫ್ಯಾಶನ್ನೂಂತಂತ್ರಿ...."

"ಅವ್ರನ್ನ ಉಳಿಸವ್ರೂ ಆಮೇಕರು ಸೋದೆ?"

"ಹ್ಞೂಂ; ನೀವನ್ನೋದ್ರಲ್ಲಿ ತುಸು ಸತ್ಯವಿದೇನ್ನಿ. ಆದ್ರೂ ಇದು ಪ್ರಕೃತಿಯವ್ನ ಗೆಲ್ಲೋಕಲ್ಲ...."

"ವತ್ತೆ, ತಮ್ಮ ಅಂಗಾಂಗ ಪ್ರದರ್ಶನಕ್ಕೆ."

"ಓಹೋ...."

"ನೋಡಿ, ನಿಜಕ್ಕೂ ತೊಡಲು ಬಟ್ಟೆಯಿಲ್ಲದ ಭಿಕಾರಿಗಳ ಮೈಯನ್ನ ಪ್ರತ್ಯೆತಿಗೆ ಒಡ್ಡತ್ತಲೇ ಇದ್ದರೂ ಅವರದನ್ನ ಗೆಲ್ಲಲಾಂದ ಚಳಪಡಿಸುವಾಗ, ಸುಪ್ಪತ್ತಿಗೆಯ ಸಖಿಗಳು ಅದನ್ನು ಗೆಲ್ಲುವುದು

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 28137
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರ ನವಯುಗ ವಾರಪತ್ರಿಕೆಯನ್ನ ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪಠ್ಯಕ್ರಮಕ್ಕೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇವೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮ್ಯಾನೇಜರ್, ನವಯುಗ, ಉಡುಪಿ.

ಕನಸಿನ ಪ್ರಯೋಜನ

ಬರೆದವರು: ಶ್ರೀ ಎಂ. ರಂಗರಾವ್

"ಕನಸಿನ ಗಂಟು" ಅಂತ ತುಂಬ ಕೇಳುತ್ತೀವೆ. ಕನಸಿನಿಂದ ಪ್ರಯೋಜನವೇ ನಿಲ್ಲ ಎಂಬುದೇ ಅದರ ಅರ್ಥ. ಕೇವಲ ಉದಾಹರಣೆಗೆ ಉಪಯೋಜವಾದುತ್ತೆ ಅಷ್ಟೇ.

ಆದರೆ ಕತೆಗಾರರೂ ಕಲ್ಪನೆಗಾರರೂ ಇದನ್ನು ಒಪ್ಪಿಕೊಳ್ಳಲಾರರು. ಈಗಿನ ವರು ಮಾತ್ರವಲ್ಲ, ಹಿಂದಿನವರು ಕೂಡ.

ಕನಸಿನ ಮೂಲಕ ನಡೆಯುವ ಜಾನ ಪದ ಕತೆಗಳು ಅನೇಕ ಇವೆ. ರಾಜ ಕುಮಾರಿಗೆ ದಾಸಿಯೊಬ್ಬಳು ಕನಸು ಕಂಡು ಕತೆ ಹೇಳಿ ರಂಜಿಸಿದ್ದಾಳೆ. ಒಬ್ಬರಿ ಗಿಂತ ಒಬ್ಬರು ಸ್ವಾರಸ್ಯವಾದ ಕನಸು ಕಂಡು ಪಂಡ್ಯ ಹಾಕಿಕೊಂಡು ಕತೆ ಹೇಳಿ ಸೋಲಿಸಿದ ಕತೆಗಾರರಿದ್ದಾರೆ. ನವ್ಯ ಆಧುನಿಕ ಲೇಖಕರಲ್ಲಿ ಕೂಡಾ ತಮ್ಮ ಕತೆಕಾದಂಬರಿಗಳ ಬೀಜಗಳನ್ನು ಕನಸಿನಲ್ಲಿ ಕಂಡು ಹಕ್ಕಿಕೊಂಡು, ಅದನ್ನು ಕಲ್ಪನೆಯಿಂದ ಬೆಳೆಸಿಕೊಂಡು ಸ್ವಾರಸ್ಯವಾಗಿಯೋ, ಅದ್ಭುತವಾಗಿಯೋ, ಅಧ್ಯಾತ್ಮವಾಗಿಯೋ, ಅಸಾಧಾರಣವಾಗಿಯೋ ಅಂತೂ ಬರೆದಿದ್ದುಂಟು. ನಾನೂ ಸಹ.

ಕನಸಿನಲ್ಲಿ ಕಂಡದ್ದು ಪೂರಾ ನೆನಪಿನಲ್ಲಿ ಉಳಿಯುತ್ತೆ ಎನ್ನಲಾಗುವುದಿಲ್ಲ. ಕೆಲವು ಪೂರಾ ನೆನಪಿದ್ದರೆ ಕೆಲವು ಚೂಟುಚಾರು ಮಾತ್ರ. ಕೆಲವು ನೆನೆ ಪಿದರೆ ವೈ ಜಂ ಅನಿಸುವಂಥಾದ್ದು. ಆಕಾಶದಲ್ಲಿ ಹಾರಿದ ಹಾಗೆ, ನೀರಿನಲ್ಲಿ ಮುಳುಗಿದ ಹಾಗೆ, ಹಾವುಗಳ ಕಡುವೆ ಬಿದ್ದ ಹಾಗೆ, ಪರ್ವತಗಳಲ್ಲಿ, ಕಾಡು ವ್ಯಾಘ್ರಗಳ ಎಡೆಯಲ್ಲಿ.....ಭಯಂಕರ! ಬೆವರಿಳಿಸುವಂತಹ, ನವಿರೇ ಳಿಸುವಂತಹ ಕನಸುಗಳಿವೆ. ಕೆಲವಂತೂ ಸುಂದರಾತಿ ಸುಂದರವಾದ್ದು. ಬಯಲಾ ದಾಗ ಆಯ್ಕೋ ಇನ್ನಷ್ಟು ಜೊತ್ತು ಇರ ಬಾರದಿತ್ತೇ ಅನಿಸುವಂತಾದ್ದು.

ಈಗ ಏನು ಹೇಳಿದ ಹಾಗಾಯಿತು? ಕನಸಿನಿಂದ ಕತೆಗಾರಿಕೆಗೆ ಉಪಯೋಗ ವಿದೆ ಎಂದೆ. ದೇವರ ಸೃಷ್ಟಿಯಲ್ಲಿರುವುದೂ ವ್ಯರ್ಥ ಇರುವುದಿಲ್ಲ. ಹಾಗಾದರೆ ಕನಸಿನ ಪ್ರಯೋಜನ ಇದೊಂದು ಮಾತ್ರವೇ ಏನು?

ಅಂದ ಹಾಗೆ ಜ್ಯೋತಿಷ್ಯದವರು ಕನಸುಗಳನ್ನೂ ಕಲೆಹಾಕಿ ಸ್ವಲ್ಪ ಕೆಲಸವೂ ಮಾಡಿದ್ದಾರೆ. ದುಃಸ್ವಪ್ನ-ಸುಸ್ವಪ್ನ ಅಂತ ವಿಭಾಗಿಸಿ ಅದರದರ ಫಲಗಳನ್ನು ಹೇಳಿದ್ದಾರೆ. ಪಂಚಾಂಗದಲ್ಲಿದೆ. ಆ ಫಲಗಳು ಇಂತಿಷ್ಟು ತಿಂಗಳಲ್ಲಿ ಬರುತ್ತೆ ಅಂತ ಗಡುವು ಹಾಕಿ, ಅದಕ್ಕೆ ತಕ್ಕ ಪರಿಹಾರ ಹೀಗೆ ಅಂತಲೂ ತಿಳಿಸಿದ್ದಾರಷ್ಟೆ. ಆ ಪರಿಹಾರ ಅಲ್ಪ ಸ್ವಲ್ಪ ಲಾಭವಾಯಿತು, ಹೋದರೆ ಹೋಯಿತು. ಕತೆಗಾರನಾದ ನನ್ನನ್ನು ಕೇಳುವುದಾದರೆ ಫಾನು ಕಾಣುವಂತಹ ಕನಸುಗಳೊಂದೂ ಪಂಚಾಂಗದಲ್ಲಿ ಹಿಡಿದಿಡಲೇ ಇಲ್ಲ. ಅದನ್ನು ಕೂಡಾ ಸೇರಿಸಿ ಶುಭಾಶುಭ ವಿಭಾಗಿಸಿ, ಪಂಡಿತರಿಗೆ ತೋರಿಸಿದರೆ ಆ ವಿಭಾಗದವರಿಗೆ ಇನ್ನಷ್ಟು ಇಷ್ಟು ಲಾಭವಾದೀತಲ್ಲ?—ಎನ್ನೋಣ್ಣ-ವರಿಂದ? ಬೇಕಾದರೆ ನೀವೇ ಇದ್ದೇನೆ ಉದಾಹರಣೆಗೆ. ಒಂದು ಕನಸು ಕಂಡೆ. ಪಂಚಾಂಗ ನೋಡಿದೆ. ಕಥೆ ಒರೆದರೆ ಲಾಭ ಪೋ ನಷ್ಟಪೋ ಅಂತ ಗೊತ್ತಾದರೆ ಪರಿಹಾರ ಕೊಡಿಸಿ ಕತೆ ಬರೆದೇನಲ್ಲ? ಆ ಕತೆಯಿಂದ ಲಾಭ ಪುಂಟರೆ ಆ ವಿಭಾಗದವರಿಗೂ ಒಂದಿಷ್ಟು ಮಟ್ಟಿಸಿಯೇನಲ್ಲ?

ಕತೆಗಾರನ ಮನಸ್ಸು ಹೇಗೆಹೇಗೆ ಓಡುತ್ತೆ, ಏನೇನು ಕನಸು ಕಾಣುತ್ತೆ ಅಂತ ಜ್ಯೋತಿಷಿಗಳಿಗೆ ತನ್ನಂತೆ ಗೊತ್ತಾಗಲಾರದು. ನನ್ನಂಥವನ್ನು ಕೇಳಿ ತಿಳಿದು ಕೊಳ್ಳಬೇಕು ಅಂತ ವಿನಂತ್ರ ಸಲಹೆ.

ಈಗ ಕನಸಿನ ಎರಡು ಪ್ರಯೋಜನ ಹೇಳಿದೆ. ಎರಡು ಹೇಳಿದ ನೇಲೆ ಮೂರನೇದೂ ತನಂತೆ ಹೊರಡುತ್ತದೆ.

ಇದೊಂದು ಪ್ರಯೋಗ ನವ್ಯಲ್ಲಿದೆ. "ಕನ್ನಡಿಗರು ಕಂಡ ಕನಸು ಈಗ ನೆನಸಾಯಿತು" ಎನ್ನುತ್ತಾರೆ.

"ಇಲ್ಲ, ಅದಿನ್ನೂ ಕನಸಾಗಿಯೇ ಇದೆ. ಪೈಸೂರು ಇಡಿಯ ಕನ್ನಡ ರಾಷ್ಟ್ರವಲ್ಲ. ಕರ್ನಾಡ ರಾಜ್ಯವೆಂದರೇನೇ ನೆನಸಾದಂತೆ" ಎಂದು ಪ್ರತಿಭಟನೆಗಳು ಕೇಳುತ್ತಿವೆ.

ದೇವರ ವಿಷಯದಲ್ಲಿ ಬೇಕಾದರೆ ನೆವೆ ಸುವುದರ ಹೊರತು ಬೇರೆ ಮಾರ್ಗವಿಲ್ಲ. ದೇವರ ಸ್ವಕ್ಕದ ದಾಗೆ ವರಿಯಲ್ಲರು ವವನು. ನೆನೆದೇ ನೋಡಬೇಕಾದ ವನು. ಅವನನ್ನು ಮುಖಾಭಕ್ತರು ಕನಸಿನಲ್ಲಿಯೂ ಕಂಡಾರು ಆದರೆ "ನೆನೆಸಿ" ಎಂಬ ಪ್ರಶ್ನೆ ಅರ್ಥದಲ್ಲಿ?

ಇನ್ನೆಯೂ ಒಂದು ಸಂದೇಹ "ಕನಸು ನೆವೆಸಾಯಿತು." ಸರಿಯೇ? ನೆನಸಾಯಿತು ಸರಿಯೊ?

ಒಟ್ಟಾರೆ ಅರ್ಥವಾದರೆ ಸರಿ. ಶಬ್ದ ತಪ್ಪೋ ಒಪ್ಪೋ ಯಾರಿಗೆ ಬೇಕು?—ಎನ್ನವಿರಾದರೆ ಮಾತೇ ಇಲ್ಲ.

ಆದರೆ ನನ್ನಂಥ ಶಬ್ದಶುದ್ಧಿಯ ವ್ರತ ಹಿಡಿದವರಿಗೆ (ಗೊತ್ತಿಲ್ಲದೆ ಅಶುದ್ಧ ಪ್ರಯೋಗ ಮಾಡಿದ್ದರೆ ಕ್ಷಮ್ಯ) ತಲೆ ಕೆರೆದು ಕೊಳ್ಳುವ ಹಾಗಾಗುತ್ತೇ ಅಷ್ಟೇ.

ನೆನೆ, ನೆನೆಸಿ, ನೆವಸು ಎಂಬುದಾಗಿ ಸರಿಯೂದ ಅರ್ಥವುಳ್ಳ ಶಬ್ದಕ್ಕೆ ಬದಲಾಗಿ ತಪ್ಪು ಪದವನ್ನು ಉಪಯೋಗಿಸುತ್ತೀವೆಯೇ? ಒಂದು ವೇಳೆ ನೆನೆಸು ಶಬ್ದಕ್ಕೆ ನಿಜವಾಗಲು, ಪ್ರತ್ಯಕ್ಷವಾಗಲು ಎಂಬ ಅರ್ಥ ವಿದೆಯೇ? ಹರಿ ಎಂಬ ಪದಕ್ಕೆ ಹತ್ತು ಹಲವು ಅರ್ಥವಿರುವ ಹಾಗೆ?

"ಕನಸು ಫಲಿಸಾಯಿತು" ಎಂಬುದರಲ್ಲಿ 'ಫಲಿಜವಾಯಿತು' ಎಂಬ ಅರ್ಥವಿರಲಿ, ಇಲ್ಲದಿರಲಿ, ಪ್ರಯೋಗದ ಇಂಪು ಸುಂದರವಾಗಿದೆ ಎನ್ನಲು ಸಂದೇಹವಿಲ್ಲ. ಆದಕ್ಕೆ ಇದು ಜನಪ್ರಿಯ ಪ್ರಯೋಗವೆನಿಸಿದೆ.

ಇದನ್ನೇ ಕನಸಿನ ಮೊದಲನೇ ಪ್ರಯೋಜವೆನ್ನಬಹುದು. ಇನ್ನೂ ಬೇಕಾದರೆ ಆರೋಗ್ಯಶಾಸ್ತ್ರಿಗಳನ್ನು ಕೇಳಿದರೆ, ಕಪ್ಪು ಕಾಣುವುದು ಒಳ್ಳೆಯ ಸಖನಿದ್ದೆಯ ದ್ಯೋತಕವೆನ್ನುತ್ತಾರೆ ಮತ್ತು ಹೊಟ್ಟೆ ಭಾರವಾಗಿ ಅಜೀರ್ಣ ಆಗಿದ್ದ ಉಸಿದ್ರೆ ಇದ್ದವರಿಗೆ ಕೆಟ್ಟ ಕೆಟ್ಟ ಕನಸು ಬೀಳುತ್ತ ಆಗಾಗ ಎಚ್ಚರವಾಗುತ್ತದಂತೆ. ಅಂಥ ವರು ಕೂಡಲೇ ತಮ್ಮ ಆರೋಗ್ಯವನ್ನು ಶುಧಾರಿಸಿಕೊಳ್ಳಲು ತಕ್ಕ ಔಷಧ ಪಥ್ಯಗಳಿಗೆ ಪ್ರಯತ್ನಿಸಬೇಕು ಅಂತ ಕನಸುಗಳು ಸೂಚನೆ ಕೊಡುತ್ತವೆಂದು ತಿಳಿಯಬಹುದು. ನೋಡಿದರೆ ಇದು ಬಹು ಮುಖ್ಯವಾದ ಪ್ರಯೋಜನ.

ಈ ನಾಲ್ಕನೆಯದಕ್ಕೆ ಹೊಂದುವಂತಹ ಐದನೇ ಪ್ರಯೋಜನವೂ ಕನಸಿನಿಂದ ಆಗುತ್ತದೆ. ಉದಾಹರಣೆಯು ಕನಸುಗಳು. ಅದು ರಾಜ್ಯಕ್ಕೋ ಮಗ ಫಿಗೋ, ಗಂಡಫಿಗೋ ಬರುವ ಆಪತ್ತನ್ನು ಸೂಚಿಸುವ ಕನಸುಗಳು. ಅಂಥ ಕನಸುಗಳನ್ನು ಕಂಡು ಗಂಡನನ್ನು ಆದಶ್ಚಿಸಿಂದ ಕಾಪಾಡಿದ ಹೆಂಡತಿಯರಿದ್ದಾರೆ. ಮದವನ್ನು ಕಾಪಾಡಿದ ಮಾತೆಯರಿದ್ದಾರೆ. ರಾಜ್ಯಗಳನ್ನು ರಕ್ಷಿಸಿದ ದೊರೆಗಳಿದ್ದಾರೆ.

ಎಚ್ಚರಿಕೆಯನ್ನು ವಿಮರಿ ಆದಶ್ಚೀಡಾದವರೂ ಇದ್ದಾರೆ.

ಈ ಐದೂ ಪ್ರಯೋಗಗಳನ್ನು ಆಲೋಚನೆ ಮಾಡಿದರೆ, ಕಥಸುಗಳ ರಚನೆಯನ್ನು ಮಾಡಿದವನಿಗೆ ಕೃತಜ್ಞರಾಗಿರಬೇಕೆನಿಸುವುದಿಲ್ಲವೆ?

ಧರಣಿ ಸಂಪು

ಭೂಂಡಿದು ಜಗಳಾಡಿ ಸಂಪೂರ್ಣ ಸೋತು
ಭೂತಿಂದು ವೈಯೆಲ್ಲ ಕೆಂಪಾಯ್ತು ಬಾಳು
ಬತ್ತಳಿಕೆ ಬಂದಾಗ ಕೊನೆಯು ಬ್ರಹ್ಮಾಸ್ತ್ರ!
ಧರಣಿ ಸಂಪೆಂದು ರಚಿಸಿದರು ಹೊಸ ಶಾಸ್ತ್ರ

ಜೀವನದ ದುಡಿಮೆ

ಕಾರಿನಲಿ ತಿರುಗಲು ಸತಿಯು "ಸಾವಿತ್ರಿ"
ಜಾಂಬಲಿಯಲು ಕಬ್ಬಿಕೊಳ್ಳುವನೇ ಪುತ್ರ?
ಹಗಲಿರಿಲಿ ಜೊತೆಯಾಗಿ ದುಡಿದರೆ ಧನ್ಯ!
ಸಂತಸದಿ ಗೂಡ ಸೇರಲು ಬೇಳು ಪುಣ್ಯ!

ಪೆಂತು? ಭಳಿಯಾಯಿತು, ನಾಲ್ಕು-ನಾಲ್ಕು ಫ್ರಾಕ್ಸ್, ರಗ್ಗು ಎಳೆದುಕೊಳ್ಳುತ್ತಾರೆ. ಬೆಚ್ಚಗಿನ ಏರ್‌ಕಂಡಿಷನ್ಡ್ ಕೂಲೋ, ಟೈಟೋ ಆಗಿರುವಷ್ಟು ಮಾತ್ರ ಅವರ ಈ ನೇಶ....."

"ಹ್ಞೂಂ....ಆಯ್ತಪ್ಪ. ಅವರವರ ದಾರೀಲಿ ನಡೆಯೋಕೆ ಅವರವರಿಗೆ ಸ್ವಾತಂತ್ರ್ಯ ಇದೆ ತಾನೆ?"

"ಈ ಸ್ವಾತಂತ್ರ್ಯದ ಬಲ ಮಿತಿಮೀರಿಯೇ ನನ್ಮಗಳ ಹೀಗಾಗ್ತಿರೋದು...."

'ಹೆಸ್ರ ಬೇಡ್ವೆ, ಚಂದ್ರಲೋಕದಲ್ಲಾದ ಹೆದ್ದಾರಿ ರಚನೆಯ ಕಂಟ್ರಾಕ್ಟ್‌ದಾರನು ನನ್ನೋರ್ವರಿದಲ್ಲಿರುವಾಗ ನಾವು ಪೇರ ಇವರೋಂದಿಗೆ ಅಲ್ಲಿ ಹೋಗಿಬಿಡಬಹುದು .....'

"ಅದುವರೆಗಂತೂ ಇಲ್ಲೇ ಉಳೀಬೇಕು ತಾನೆ!"

"ಎಲ್ಲಿ!"

'ವತ್ತಿನ್ನೆಲ್ಲಿ?"

"ಇಲ್ಲೇ!"

"ಹ್ಞೂಂ..... ಹ್ಞೂಂ....."

— ಗೋರಾ.



ಕಾರ್ಕಳ ಮುನ್ಸಿಫ ಕೋರ್ಟಿನಲ್ಲಿ
Ex. C. 10/1969.
O. S. No. 547/1961

ಸುಂಗಂಮು ಹೆಗಡ್ತಿ ಸಹಾ — ಅರ್ಜಿದಾರ್ತಿ.
ಮತ್ತು
ಸಾಯಿಣಿ ಹೆಗ್ಡೆ — — ಎದ್ರಿ.
ಇವರೊಳಗೆ

ಈ ಮೂಲಕ ಮೇಲಿನ ಎದ್ರಿ ಸಾಯಿಣಿ ಹೆಗ್ಡೆ, ಕೊಸನ್ಮು ಹೆಗಡ್ತಿಗೆ ಮಗ್ಗ, ತೀರ್ಥಹಳ್ಳಿ ತಾಲೂಕು ಕುಡುಮಲ್ಲಿಗೆ ಎಂಬಲ್ಲಿರುವ ವರಿಗೆ ತಿಳಿಸುವುದೇನೆಂದ್ರೆ—

ಅರ್ಜದಾರ್ತಿ ದಾಕ್ಲುಮೂದಿದ ಮೇಲಿನ ಅಮ್ಲಜ್ಞಾರಿ ಫಂಮು ಹಾಜರು ಬಗ್ಗೆ ತಾರೀಖು 1-7-69ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10-30 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ಬಕೀಲ್ ದ್ವಾರಾ ಹಾಜರಾಗಿ ಉದಪರಿನತಕ್ಕದ್ದು. ತಪ್ಪಿದಲ್ಲಿ ಫಿರ್ಯಾದು ಮೇಲಿನ ವ್ಯವಹರಣೆಯು ಏಕಪಕ್ಷವಾಗಿ ತೀರ್ಮಾನವಾಗಬಹುದು.

By order of the Court,
N. M. Adyanthaya,
Advocate for Petitioner.
Karkala, 30-5-69.

ಮೂವಿನತೊಟ್ಟು ಕೊಳೆಯುವ ರೋಗವನ್ನು ತಡೆಗಟ್ಟಿ

ಚೆನ್ನಾಗಿ ಮೂಗಿರುವ ಮೂವಿನ ಹಣ್ಣನ್ನ ತೊಟ್ಟು ಆಗಾಗ್ಗೆ ಕೊಳೆತಂತೆ ಕಾಣುವುದುಂಟು. ಮೊದಮೊದಲು ತೊಟ್ಟಿನ ಅಡಿಯ ಸುತ್ತಲೂ ಹಣ್ಣಿನ ಜೊಂಪೊರೆ ಸೂತ್ರ ಕಪ್ಪು ಬಣ್ಣಕ್ಕೆ ತಿರುಗುವುದುಂಟು. ಕೆಲವು ಕಾಲದ ನಂತರ ಈ ರೋಗ ಹಣ್ಣಿದ ಜಾಗವು ಕಂದು-ಕಪ್ಪು ಬಣ್ಣಕ್ಕೆ ತಿರುಗುವುದುಂಟು. ಹವಾಗುಣ ಬಹಳ ಆರ್ದ್ರತೆಯಿಂದ ಕೂಡಿದ್ದರೆ ಇಡೀ ಹಣ್ಣು 2-3 ದಿನದಲ್ಲಿ ಕಪ್ಪು ಬಣ್ಣಕ್ಕೆ ತಿರುಗುವುದು. ಹಣ್ಣಿನ ತಿರುಳೂ ಕೊಡಾ ಕಂದು ಬಣ್ಣಕ್ಕೆ ತಿರುಗಿ ಕೊಂಚ ಮೃದುವಾಗುವುದು. ತೊಟ್ಟಿನಾದರೂ ಇದ್ದಲ್ಲಿ ಅದು ಒಣಗಿ ಬಿದ್ದು ಹೋಗುವುದು. ಈ ರೋಗದ ಮೂಲವನ್ನು ಕಂಡುಹಿಡಿಯಲು ಅನೇಕ ಪ್ರಯೋಗಗಳನ್ನು ನಡೆಸಲಾಗಿದೆ. ಪರಿಣಾಮವಾಗಿ ಮರದಿಂದ ಇಳಿಸಿದ ಮೇಲೆ ಅವುಗಳನ್ನು ತೋಟದಲ್ಲೇ ಬಹಳ ಹೊತ್ತು ಬಿಟ್ಟಿದ್ದರೆ ಹಣ್ಣಿಗೆ ಈ ರೋಗ ಹತ್ತುವುದು ಸಾಮಾನ್ಯನೆಂದು ಕಂಡು ಬಂದಿದೆ. ತೊಟ್ಟು ಸಹಿತ ಹಣ್ಣುಗಳಾದರೆ ರೋಗದ ಪ್ರಮಾಣ ಕಡಿಮೆ. ಇಲ್ಲದಿದ್ದರೆ ಹೆಚ್ಚು ಎಂದೂ ಕಂಡುಬಂದಿದೆ. ನಡೆಸಿದ ಪ್ರಯೋಗಗಳ ಆಧಾರದ ಮೇಲೆ ಕೆಳಕಂಡ ತಡೆಗಟ್ಟುವಿಕೆ ಕಾರ್ಯ ಕೈಕೊಳ್ಳಲು ಸೂಚಿಸಲಾಗಿದೆ.

1. ಹಣ್ಣನ್ನು ಮರದಿಂದ ಇಳಿಸಿದ ಕೂಡಲೇ ಅವುಗಳನ್ನು ಗಾಳಿಗೆ ಒಡ್ಡದೆ ಹಣ್ಣು ಮಾಗಿಸುವ ಮನೆಗೆ ಸಾಗಿಸಬೇಕು. 2. ಗಾಳಿಗೆ ಒಡ್ಡಿದ ಜಾಗವನ್ನು ಯಾವುದಾದರೂ ತಾಪ್ತ ಶೀಲೇಂದ್ರಕ ಅಥವಾ ಜಾವಾತಿಯಂ ಪೇಯಿಂಟನ್ನು (ಸಾಲ್ಮು ಭಾಗ ಕಾರ್ಬರ್ ಕಾರ್ಬನೇಟ್, ಸಾಲ್ಮು ಭಾಗ ಕೆಂಪು ಸೀಸ, ಏಮು ಭಾಗ ಅಗಸೆ ಎಣ್ಣೆ) ಹಚ್ಚಿದರೆ ಒಳ್ಳೆಯದು. 3. ಹಣ್ಣನ್ನು ಮರದಿಂದ ಇಳಿಸುವಾಗ ತೊಟ್ಟನ್ನು ಕತ್ತರಿಸಿ ತೊಟ್ಟಿನ ಕುಡಿಗೆ ಎಚ್ಚರಿಕೆ ವಹಿಸಬೇಕು. 4. ಒಂದುವೇಳೆ ತೊಟ್ಟು ಕತ್ತರಿಸಿದರೆ ತೊಟ್ಟಿನ ತುದಿಗೆ ಪೆಯಿಂಟ್ ಮೆತ್ತಬೇಕು. 5. ಹಣ್ಣಿಗೆ ಏಟು-ಬೀಳದಂತೆ ಗಮನಕೊಡಬೇಕು.

ಮಿತ ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚದಂತೆ ಸಾಧಿಸುವ ವಿಚಾರ ಸುತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟ್ಯಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಕಾಲುಕೋಟೆ, ಉಡುಪಿ, ದ. ಕ.

ಕರ್ನಾಟಕ ಬ್ಯಾಂಕಿನ ಸ್ಥಳ ಬದಲಾವಣೆ

ಉಡುಪಿ ಕರ್ನಾಟಕ ಬ್ಯಾಂಕಿನ ಶಾಖೆಯನ್ನು ಉಡುಪಿ ರಥಬೀದಿಯ ಶ್ರೀ ಭುವನ ಕಟ್ಟಿ ಮರದ ನೂತನ ಕಟ್ಟಡದ ಮಹಡಿಗೆ ಸ್ಥಳಾಂತರಿಸುವ ಸಮಾರಂಭವು ಕಳೆದ ತಾ. 26ರಂದು ನಗರ ಸಭಾಪತಿ ಡಾ॥ ವಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಬ್ಯಾಂಕಿನ ಚೇರ್‌ಮೇನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಎಂ.ಎಲ್.ಸಿ.ಯವರು ಸ್ವಾಗತಿಸಿದರು. ಡಾ॥ ವಿ. ಜಿ. ಆಚಾರ್ಯರು ಸಭೆಗೆ ಪರಿಚಯ ಮಾಡಿಕೊಟ್ಟರು. ಶ್ರೀ ಪಿ. ರಂಗನಾಥ ಶೆಣೈಯವರು ಸಾರ್ವಜನಿಕರಿಗೆ ಎಲ್ಲಾ ವಿಧದಲ್ಲೂ ಸಹಾಯವನ್ನು ಬ್ಯಾಂಕ್ ಪೇಡಬೇಕೆಂದರು. ಡಾ॥ ವಿ. ಎಸ್. ಆಚಾರ್ಯರು ಕೆಲವು ಸರಬರಾಯಿ ಯೋಜನೆಯಲ್ಲಿ ಕರ್ನಾಟಕ ಬ್ಯಾಂಕಿನ ಸಹಕಾರ ಸ್ಥಾಪಿಸಿ ಮುಂದೆಯೂ ಇಂತಹ ಯೋಜನೆಗಳಿಗೆ ಬ್ಯಾಂಕು ಸಹಕಾರವಿಡಬೇಕಾಗಿ ಕೇಳಿಕೊಂಡರು. ಬ್ಯಾಂಕಿನ ಉಡುಪಿ ಡೈರೆಕ್ಟರರಾದ ಶ್ರೀ ಕಿದಿಯೂರು ವೆಂಕಟ್ರಾಯರು ಧನ್ಯವಾದವಿತ್ತರು.

ಮಣಿಪಾಲ ಸಹಕಾರಿ ಇಂಡಸ್ಟ್ರಿಯಲ್ ಎಸ್ಟೇಟಿನ ಉದ್ಘಾಟನೆ

ಕೇಂದ್ರ ಸರಕಾರದ ಇಂಡಸ್ಟ್ರಿಯಲ್ ಶಾಖಾ ಸಚಿವ ಶ್ರೀ ಭಾನುಪ್ರಕಾಶ್ ಸಿಂಗ್ ರಿಂದ, ಮೈಸೂರು ಕೈಗಾರಿಕಾ ಇಲಾಖೆಯ ಉಪಸಚಿವ ಶ್ರೀ ಎ. ಪಿ. ಅಣ್ಣಿಪ್ಪನವರ ಅಧ್ಯಕ್ಷತೆಯಲ್ಲಿ ಹಿರಿಯಡ್ಕ, ಡಾ॥ ಟಿ. ಮಾಧವ ಪೈಗಳು ಸ್ವಾಗತಿಸಿ ಪ್ರತಿಷ್ಠಾನದ ಕಿರುಪರಿಚಯ ಮಾಡಿಕೊಟ್ಟರು. ಶ್ರೀ ಭಾನುಪ್ರಕಾಶ್ ಸಿಂಗರವರು ಕೃಷಿಯಲ್ಲಿ ತೊಡಗಿದ್ದ ಜನರನ್ನು ಇಷ್ಟು ಶೀಘ್ರವಾಗಿ ಕೈಗಾರಿಕೋದ್ಯಮಕ್ಕೆ ಆಕರ್ಷಿಸಿಕೊಂಡಿರುವಂತಹ ಸಾಧನೆಯನ್ನು ಯಾವ ರಾಷ್ಟ್ರವೂ ಮಾಡಿಲ್ಲವೆಂದರು. ಆರ್ಥಿಕ ಸ್ವಾತಂತ್ರ್ಯ ಬಂದರೆ ಮಾತ್ರ ಈ ರಾಷ್ಟ್ರ ಇತರ ರಾಷ್ಟ್ರಗಳ ಮುಂದೆ ಪ್ರಬಲವೆನಿಸಿಕೊಳ್ಳಬಹುದೆಂದರು. ಶ್ರೀ ಟಿ. ಎ. ಪೈ ಯವರು ನಮ್ಮ ತರುಣರಿಗೆ ತಮ್ಮ ಪ್ರತಿಭೆಯನ್ನು ತೋರಿಸಲು ಇದು ಸದವಕಾಶವಾಗಿದೆಯೆಂದರು. ಇಂಡಸ್ಟ್ರಿಯಲ್ ಕಮಿಶನರ್ ಶ್ರೀ ಕೆ. ಎಲ್. ನಂಜಪ್ಪನವರು ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನವನ್ನು ಕೊಡುವುದರಿಂದ ದೇಶದ ಪ್ರಗತಿಹೊಂದಲು ಸಾಧ್ಯವೆಂದರು. ಅಧ್ಯಕ್ಷ ಶ್ರೀ ಎ. ಪಿ. ಅಣ್ಣಿಪ್ಪನವರು ಮಾತನಾಡುತ್ತಾ ಉನ್ನತ ಮಟ್ಟಿನ ಶಿಕ್ಷಣವನ್ನು ಕೊಳ್ಳುವುದರಲ್ಲಿ ದ. ಕ. ಜಿಲ್ಲೆ ಪ್ರಸಿದ್ಧವಾಗಿದೆಯೆಂದರು. ಶ್ರೀ ಟಿ. ರಮೇಶ ಪೈಗಳು ಧನ್ಯವಾದ ಸಮರ್ಪಿಸಿದರು.

ಕಡೇ ಶಿವಾಲಯ

ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ

ಬಂಟ್ವಾಳ ತಾಲೂಕು ನರಿಕೊಂಬು ಪೂರ್ಣ ಕಡೇ ಶಿವಾಲಯ ಗ್ರಾಮದ ನೇತ್ರಾವತಿ ನದಿಯ ಕೆಂಕು ದೆಂಡೆಯ ಮೇಲೆ ಇರುವ ಅತೀ ಪುರಾತನವೂ ಪವಿತ್ರವೂ ಆದ ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನವು ತೀರಾ ಅಜೀರ್ಣಾವಸ್ಥೆಯಲ್ಲಿದೆ. ಇದನ್ನು ಜೀರ್ಣೋದ್ಧಾರ ಮಾಡುವರೆಯೂ ಈ ಕ್ಷೇತ್ರದ ಅಭಿವೃದ್ಧಿಯನ್ನು ಸಾಧಿಸುವರೆಯೂ ಆಡಳಿತ ಮೊಕ್ತೇಸರರು ಮತ್ತು ಭಕ್ತವೃಂದದವರು ಸೇರಿ ಜೀರ್ಣೋದ್ಧಾರ ಸಮಿತಿಯೊಂದನ್ನು ರಚಿಸಿದ್ದಾರೆ. ಜೀರ್ಣೋದ್ಧಾರಕ್ಕಾಗಿ ಸುಮಾರು 75 ಸಾವಿರ ರೂಪಾಯಿಗಳಷ್ಟು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಭಕ್ತಾದಿ ಮಹಾಶಯರು ಈ ಪುಣ್ಯ ಕಾರ್ಯಕ್ಕೆ ಉದಾರ ಹಸ್ತದಿಂದ ಧನ ಸಹಾಯ ಮಾಡಬೇಕಾಗಿ ಜೀರ್ಣೋದ್ಧಾರ ಸಮಿತಿಯವರು ಅಪೇಕ್ಷಿಸಿತ್ತಾರೆ.

ಸಿಂಡಿಕೇಟ್ ಬ್ಯಾಂಕು

ವಿಶ್ವಾಸವೇ ಶ್ರೇಷ್ಠ ಮೂಲಧನವೆಂದು ಪರಿಗಣಿಸಿ ತ್ರಿರುವ ಈ ಬ್ಯಾಂಕು ಉನ್ನತ ವ್ಯಾಪಾರಕ್ಕಾಗಿ ವಿದ್ಯಾರ್ಥಿಗಳಿಗೆ ಸ್ವಂತ ಜವಾಬ್ದಾರಿಯಲ್ಲಿ ಸಾಲವಿತ್ತು ಸಹಾಯ ಮಾಡುತ್ತದೆ.

ವೈಶಿಷ್ಟ್ಯಗಳು

- ವಿದೇಶಗಳಲ್ಲಿ ವ್ಯಾಪಾರ ಮಾಡಬಯಸುವವರಿಗೆ ರೂ. 7,000/-ದ ವರೆಗೂ, ಸ್ವದೇಶದಲ್ಲಾದರೆ ರೂ. 3,000/-ದ ವರೆಗೂ ಸಾಲ ನೀಡಲಾಗುವುದು.
- ಈ ಸಾಲಗಳಿಗೆ ತೆರಬೇಕಾಗುವ ಬಡ್ಡಿ ಬಹಳ ಕಡಿಮೆ ದರದಲ್ಲಿರುತ್ತದೆ.
- ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಎರಡು ವರ್ಷಗಳಿಗೂ ಮೀರಿ ವ್ಯಾಸಂಗ ಮಾಡಬಯಸುವ ಅಭ್ಯರ್ಥಿಗಳ ಅರ್ಜಿಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸಲಾಗುವುದು.
- ಸಾಲದ ಮರು-ಪಾವತಿಯು ವ್ಯಾಸಂಗ ಪೂರ್ಣವಾದ ನಂತರ ಯುಕ್ತ ಅವಧಿಯಲ್ಲಿ ಸುಲಭ ಕಂತುಗಳಲ್ಲಿ ಆಗುತ್ತದೆ.
- ಸಾಲವನ್ನು ಬಹುಬೇಗ ವ್ಯವಸ್ಥೆಗೊಳಿಸುವಂತೆ ಸಾಲ ಕೊಡುವ ಪದ್ಧತಿಯನ್ನು ಸರಳಗೊಳಿಸಲಾಗಿದೆ.

ದೇಶದಾದ್ಯಂತ ಹಬ್ಬಿರುವ ಸಿಂಡಿಕೇಟ್ ಬ್ಯಾಂಕಿನ 290 ಶಾಖೆಗಳಲ್ಲಿಯೂ ಸಾಲದ ಅರ್ಜಿಗಳು ಶೀಘ್ರವಾಗಿ ಪರಿಶೀಲಿಸಲ್ಪಡುತ್ತವೆ.

ಉನ್ನತ ವ್ಯಾಸಂಗ ಮಾಡುವವರಿಗೆ ಸಿಂಡಿಕೇಟ್ ಬ್ಯಾಂಕು ಸಹಾಯಮಾಡುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

"ಪ್ರತಿಯೊಂದು ಬ್ಯಾಂಕಿಂಗ್ ವ್ಯವಹಾರಕ್ಕೆ ಪ್ರತಿಯೋರ್ವನ ಬ್ಯಾಂಕು"

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

ಉಡುಪಿಯಾರ್ಡರು ಮೂಲಕ ಯಾ ಚೆಕ್ಕು ಗಳನ್ನು ಕಳುಹಿಸುವವರು ಸಮಿತಿಯ ಹೆಸರಿಗೆ, ಪೋಸ್ಟ್ ಕಡೇ ಶಿವಾಲಯವೆಂದು ಕಳುಹಿಸಬಹುದು. ಅಥವಾ ಪಾಡೆಮಂಗಳೂರು ಸಿಂಡಿಕೇಟ್ ಬೇಂಕಿನಲ್ಲಿ ಈ ಸಮಿತಿ ಹೆಸರಿನಲ್ಲಿರುವ ಸೇವಿಂಗ್ಸ್ ಖಾತೆಯ ಲೆಕ್ಕಕ್ಕೆ ಯಾವುದೇ ಸಿಂಡಿಕೇಟ್ ಬೇಂಕಿನ ಬ್ರಾಂಚಿನಲ್ಲಿ ಕಟ್ಟಬಹುದು.

ಅಲೆವೂರು ಸೇತುವೆಯ ಉದ್ಘಾಟನೆ

ಉಡುಪಿ ತಾಲೂಕಿನ ಅಲೆವೂರು ಗ್ರಾಮಂತರ ಪ್ರದೇಶಗಳಿಗೆ ಸಂಪರ್ಕ ಸಾಧಿಸುವುದನ್ನು ಒದಗಿಸುವ ಅಲೆವೂರು ಹೊಳೆಗೆ ಕಟ್ಟಿಸಿದ ಸೇತುವೆಯ ಉದ್ಘಾಟನಾ ಸಮಾರಂಭವು ಕಳೆದ ತಾ. 31ರಂದು ಮೈಸೂರು ಪ್ರಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರಿಂದ ಉದ್ಘಾಟಿಸಲ್ಪಟ್ಟಿತು. ನಂತರ ಅಲೆವೂರು ಸಾರ್ವಜನಿಕ ಹಿರಿಯರ್ ಎಲಿಮೆಂಟರಿ ಶಾಲೆಯಲ್ಲಿ ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರ ಅಧ್ಯಕ್ಷತೆಯಲ್ಲಿ ಜರಗಿದ ಸಮಾರಂಭದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಯ. ಲಕ್ಷ್ಮಣ ಶೆಟ್ಟಿಯವರು ಸ್ವಾಗತಭಾಷಣ ಮಾಡುತ್ತಾ 1962ನೆಲ್ಲಿ ಪ್ರಾರಂಭವಾದ ಈ ಸಂಕದ ಪೂರ್ವಯೋಗಾಲು ಒದಗಿದ ತೊಂದರೆಗಳನ್ನೂ ಈಗ 2 ವರ್ಷಗಳ ಮೊದಲೇ ಸಂಕದ ಕೆಲಸ ಮುಗಿದಿದ್ದರೂ ಜೋಡಿಸಿ ರಸ್ತೆ ನಿರ್ಮಿಸಲು ಸುಂಟಾದ ಭೂಸ್ವಾಧೀನತೆಯ ಅಡೆತಡೆಗಳನ್ನೂ ವಿವರಿಸಿ ಈಗಲಾದರೂ ಊರವರ ಸಹಕಾರದಿಂದ ಸಾರ್ವಜನಿಗಳೂ ಪೂರ್ತಿಯಾಗಿ ಉದ್ಘಾಟನೆ ನಡೆಯುವಂತಾಯಿತೆಂದರು.

ಶ್ರೀ ಕೆ. ಕೆ. ಶೆಟ್ಟರು ತನ್ನ ಉದ್ಘಾಟನಾ ಭಾಷಣದಲ್ಲಿ, ತನ್ನ ಬಾಲ್ಯ ಮತ್ತು ತರುಣ ಜೀವನವನ್ನು ವಿವರಿಸಿ, ಹಳ್ಳಿಯವುಗಳಲ್ಲಿ ಸಾರಿಗೆ ಸಂಪರ್ಕ ಹೆಚ್ಚಾಗಬೇಕೆಂದೂ, ಆ ಸಂಪರ್ಕದಿಂದಾಗಿ ಆಸುಪಾಸಿನ ಹಳ್ಳಿಗಳಿಗೆ ವಿಶೇಷ ಸೌಕರ್ಯ ಒದಗುವಂತಾಯಿತೆಂದೂ ಹೇಳಿದರು. ವಿಳಂಬವಾಗಿಯಾದರೂ ಈ ಸೇತುವೆ ಪೂರ್ತಿಯಾಗಲು ವಿಶೇಷ ಆಸಕ್ತಿ ವಹಿಸಿದ ಯು. ಲಕ್ಷ್ಮಣ ಶೆಟ್ಟಿ ಸೇವಾ ಮನೋಭಾವನೆಯನ್ನು ಶ್ಲಾಘಿಸಿದರು. ಶ್ರೀ ಟಿ. ಎ ಪೈಗಳು ಶಾಸಕರಾಗಿದ್ದಾಗ ಈ ತಾಲೂಕಿನಲ್ಲಾದ ಪ್ರಗತಿಯನ್ನು ಸ್ಮರಿಸಿ, ಶ್ರೀ ಮಧ್ವರಾಜರು ಕರ್ತವ್ಯಪ್ರಜ್ಞೆಯಿಂದ ಜನಸೇವಾಪರತೆ, ವಿಶಾಲ ಮನೋಭಾವಗಳನ್ನು ಶ್ಲಾಘಿಸಿದರು. ಕೊನೆಯದಾಗಿ ಊರವರೇ ಆದ ತನಗೆ ಈ ಗೌರವ ಕೊಟ್ಟದ್ದಕ್ಕಾಗಿ ಸಂಬಂಧಪಟ್ಟವರನ್ನು ಅಭಿನಂದಿಸಿದರು.

ಅಧ್ಯಕ್ಷ ಶ್ರೀ ಮಧ್ವರಾಜರು ತಮ್ಮ ಭಾಷಣದಲ್ಲಿ ತಮ್ಮ ಜಿಲ್ಲೆಯಲ್ಲಿ ಯಾವುದೊಂದು ದೊಡ್ಡ ಕಾರ್ಯವನ್ನು ನಡೆಸುವಿದಿಲ್ಲವೆಂದೂ, ಸರಕಾರವು ಇನ್ನಾದರೂ ವಿಶೇಷ ಅನುದಾನ ಕೊಟ್ಟು ಸಮುದ್ರ ಸೇರುವ ನೀರನ್ನು ಹೇಗೆ ತಡೆಗಟ್ಟಿ ಸಂರಕ್ಷಿಸಬಹುದು ಎಂಬುದರ ಕುರಿತು ತಜ್ಞರಿಂದ ಪರಿಶೀಲನೆ ನಡೆಸಿ ಒಂದು ಯೋಜನೆ ತಯಾರಿಸಿದರೆ ಕೃಷಿಕರಿಗೆ ತುಂಬಾ ಪ್ರಯೋಜನವಾಗಬಹುದೆಂದೂ, ಹೇಳಿ ಈ ಸಂಕದ ಪೂರ್ತಿಗಾಗಿ ನೆರವಾದವರನ್ನು ವಂದಿಸಿದರು.

ಕೊನೆಯಲ್ಲಿ ಅಲೆವೂರು ಪಂಚಾಯತ್ ಅಧ್ಯಕ್ಷ ಶ್ರೀ ಕೆ. ರಂಗಣ್ಣ ಭಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ಗೃಹಪ್ರವೇಶ

ಪಾವಂಜಿಯ 'ಸಿರಿಕೃಷ್ಣ'ನ ಶ್ರೀಮತಿ ಮತ್ತು ಡಾ॥ ಕೆ.ಆರ್.ಕೆ. ಶೆಟ್ಟಿ ಇವರು ಪಿ.ಜಿ.ಬಿಯಾವಣೆಯಲ್ಲಿ ಚೆಂಡಿನ ಹತ್ತಿರ ಶೆಟ್ಟಿಸಿದ ನೂತನ ಗೃಹದ ಪ್ರವೇಶ ಸಮಾರಂಭವು ಕಳೆದ ತಾ. 22ರಂದು ವಿಶೇಷ ಪೂಜೆಯಿಂದ ನೆರವೇರಿತು.

READ & ADVERTISE IN

NAVAYUGA WEEKLY

ನಿರಪರಾಧಿ

(ಎರಡನೇ ಪುಟದಿಂದ)

ಕೊಂಡರೆ ಪಿಶಾಚಿ ಆಗುತ್ತಾರಂತೆ. ನಾನು ಏನಾಗಿದ್ದರೂ ನಿನ್ನ ನೇಲಿನ ಒಲವು ಮರೆಯೂಗದು. ನನ್ನ ಆತ್ಮಹತ್ಯೆಗೆ ನೀನು ಕಾರಣವೆಂದು ನಾನು ತಿಳಿದಿರುವೆ. ನಾನು ಅಪರಾಧಿಯಲ್ಲ. ಆದರೆ ನನಗೆ ಇಂತಹ ಮರ್ಮಾಘಾತಹೀನೆ ಮಾತುಗಳನ್ನು ಕೇಳಲಾಗದೆ, ನಿರಪರಾಧಿಯಾದರೂ ಆತ್ಮಹತ್ಯೆಗೈದೆ. ಈ ಸಂದರ್ಭ ನಿನಗೂ ಬಂದಿದ್ದರೆ? ಯೋಚಿಸು ಮಿತ್ರ. ಸತ್ಯ ಎಂದಾದರೂ ಹೊರಬೀಳಲೇ ಬೇಕಲ್ಲವೆ. ಸತ್ಯಕ್ಕೆ ಜಯ ನಿಶ್ಚಿತ. ಆದು ನನಗೆ ತಿಳಿದಿದೆ. ಆದರೆ ಅಲ್ಲಿಯ ವರೆಗೆ ಕಾಯಲು ನನಗೆ ಸಹನೆಯಿರಲಿಲ್ಲ. ಸತ್ಯ ತೀರ್ಪು ಘೋಷಣೆಯಾದಾಗ ನನಗಾಗಿ ನೀವೆಷ್ಟು ದುಃಖಿಸುತ್ತಿರುವಿರೆಂದು ನಾನು ಬಲ್ಲೆ. ಆದರೆ ಈ ಘಟನೆಯಿಂದಲೋ ನಡೆದು, ನಮ್ಮಿಬ್ಬರಲ್ಲಿ ಬೆಳೆದ ಸ್ನೇಹ ಬಂಧನ ಕಡಿದು, ನನ್ನ ಆತ್ಮಹತ್ಯೆಗೆ ಕಾರಣವಾಯಿತು. ನಾನು ಇದಕ್ಕಾಗಿ ಮರುಗುವುದಿಲ್ಲ ಮಿತ್ರ. ಆದರೆ ನನಗೆ ಇಂತಹ ಮಾತು ಕೇಳಿಕೊಂಡಿರಲು ಸಹನೆಯಿಲ್ಲ.

ಇಂತು ನಿನ್ನ ಪರಲೋಕವಾಸಿ ಮಿತ್ರ
'ಗುರುರಾಜ'

ಂ ಂ ಂ ಂ

ಪ.ರ ರಾಜನ ಆತ್ಮಹತ್ಯೆಯಾಗಿ ವರ್ಷಗಳಾದವು. ಆತ ಬರೆದ ನಾಲ್ಕು ಪತ್ರಗಳು ನಿಮಿಷಕ್ಕೊಮ್ಮೆ ಚಂದ್ರಶೇಖರನ ಕಿವಿಯಲ್ಲಿ ದೊಗ್ಗುಟ್ಟುತ್ತಿತ್ತು. ಗುರುರಾಜನನ್ನು ನೆನೆದು ದುಃಖಿಸುವುದೊಂದೇ ಆತನ ದಿನನಿತ್ಯದ ಕೆಲಸವಾಗಿತ್ತು. ಗುರುರಾಜನ ಮರಣದ ಬೆನ್ನಿಗೇ ತಂಗಿ ಶ್ರೀಮತಿಯ 'ಶವ' ಬಾವಿಯಲ್ಲಿ ತೇಲಿತ್ತು. ಶ್ರೀಮತಿಯ ಸಾವು ಚಂದ್ರಶೇಖರನಲ್ಲಿ ಏನೂ ಪರಿಣಾಮವುಂಟು ಮಾಡಲಿಲ್ಲ. ಗೆಳೆಯ ಗುರುರಾಜನ ಮರಣಕ್ಕೆ ಕಾರಣಳಾದವಳೆಂದು ಅವಳನ್ನು ತಿರಸ್ಕರಿಸುತ್ತಿದ್ದ. ಆದರೆ ತಿರಸ್ಕಾರದ ಜಿಹ್ವೆಯಿಂದ ಅವಳನ್ನು ಕೇಳಲು, ನೋಡಲು ಅವರಿಬ್ಬರೂ ಇಲ್ಲ. ಮಾಡಬಾರದ ಕೆಲಸ ಮಾಡಿ, ಶ್ರೀಮತಿ ಜಾರಿದಳು. ಯಾರದೋ ಸ್ನೇಹದ ಫಲವಾಗಿ ಶ್ರೀಮತಿ ಕೆಟ್ಟುಹೋದಳು. ಆದರೆ...., ಗುರುರಾಜನ ಮರಣಕ್ಕೆ ಚಂದ್ರಶೇಖರನೇ ಕಾರಣನೆಂದು ಹೇಳಬೇಕು. ಹಿಂದು ಮುಂದು ಪೋಣಿಸದೇ ಗೆಳೆಯನ ನೆತ್ತಿಗೆ ಅಪವಾದವೆ ಹೊರಿಸಿದ. ಯಾರೋ ಮಾಡಿದ ಅಪರಾಧಕ್ಕೆ ಗುರುರಾಜ ಶಿಕ್ಷೆ ಅನುಭವಿಸಿದ. ಆದರೆ ನಿಜ ಕಾರಣ ತಿಳಿಯುವಾಗ ಬೆಳ್ಳಂಬೆಳಗಾಗಿತ್ತು. ಚಂದ್ರಶೇಖರ ಅದ್ಯಾರನ್ನೋ ಕರೆದುಸುತ್ತಾ ಕುಳಿತಿದ್ದ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4/65-66 dated 10-4-1966.

ಬುದ್ಧಿ ವಿಕಾಸಹೊಂದಿದೆ– ಹೃದಯ ವಿಕಾಸ ಕುಂದಿದೆ

ಭಾರತದಲ್ಲಿ ಇಂದು ಹಿಂದಿನ ಕೇಳು ಸಂದತಿಗಳೆಲ್ಲ ಹೆಚ್ಚಿದೆ ಮತ್ತು ಒಳ್ಳೆಯ ಸಂದತಿಗಳೆಲ್ಲ ಕೆಡಿವೆಯಾನಿವೆ. ಧರ್ಮದ ಸಂಸ್ಕಾರಗಳೆಲ್ಲ ಲೋಪವಾಗಿವೆ.ಇದರಿಂದ ಏಕ ರಾಷ್ಟ್ರೀಯತೆ ಹಾಗೂ ಭಾವನಾತ್ಮಕ ಏಕತೆಯನ್ನು ಕಾದುಕೊಳ್ಳುವದೆಂತು ಎಂಬ ಕುರಿತು ಸಮಾಜ ಮಬುಬಿಂಡರು ಚಿಂತಾಗ್ರಸ್ತರಾಗಿದ್ದಾರೆ. ಸದಾಚಾರದ ಪ್ರಚಾರವಾದರೋ ಮನೆಯಲ್ಲೂ ನಡೆಯುವದಿಲ್ಲ. ಶಾಲೆ ಕಾಲೇಜುಗಳಲ್ಲೂ ನಡೆಯುವದಿಲ್ಲ. ಪುಸ್ತಕ ಓದಿರಿ, ಪರೀಕ್ಷೆ ಪಾಸಾಗಿರಿ. ನೌಕರಿ ಹುಡುಕಿರಿ ಇಲ್ಲವೆ ಧಾರವಸೊಂದು ವ್ಯಾಪಾರಧಂದೆಯಲ್ಲಿ ಸೇರಿರಿ! ಐಷಾರಾಮ ಮಾಡಿರಿ. ಪರಸ್ಪರರ ಈರ್ಷೆ ಮಾಡಿರಿ. ಇದೇ ಇಂದಿನ ಜೀವನ ಚಕ್ರವಾಗಿಬಿಟ್ಟಿದೆ. ಸ್ವಾರ್ಥವು ಹೆಚ್ಚಿದೆ. ಸಂಸ್ಕಾರಹೀನತೆಯು ಪ್ರೌಢವಾಗಿದೆ. ಕಡಿಮೆ ಆಗಾಗಿದೆ. ಜಾತ್ಯತೀತ ಜ್ಞಾನ ಹೆಚ್ಚಿದೆ. ಆದರೆ ಹೃದಯದ ವಿಕಾಸ ಮಾತ್ರ ಆಗಿಲ್ಲ! ಸಂಕುಚಿತ ಮನೋಭಾವವೇ ಬೆಳೆದಿದೆ.

—ಕಾಕಾ ಕಾಲೇಲಕರ.

ಕುಟುಂಬ ಸೇವೆ ಮತ್ತು ಸಮಾಜ ಸೇವೆ—ಇವು ಅನ್ಯೋನ್ಯ ಆಶ್ರಿತ ಹಾಗೂ ಪೋಷಕ

ನಮ್ಮ ಕುಟುಂಬವೂ ಸಮಾಜದ್ದೇ ಒಂದು ಅಂಗ! ಸಮಾಜ ಸೇವೆಯ ಕಡೆಗೆ ಲಕ್ಷಹಾಕದೆ ಸಂಪೂರ್ಣವಾಗಿ ಕುಟುಂಬ ಸೇವೆಯಲ್ಲೇ ತೊಡಗಿಕೊಂಡವರಿಂದ ಕುಟುಂಬದ ಸೇವೆಯೂ ಉತ್ತಮ ರೀತಿಯಲ್ಲಿ ಆಗುವದಿಲ್ಲ. ಕುಟುಂಬವು ಸಮಾಜದ ಘಟಕವೇ ಮತ್ತು ಬಹುಮಟ್ಟಿಗೆ ಸಮಾಜದ ಸಲುವಾಗಿ ಇರಬೇಕಾಗುತ್ತದೆ. ಅಭಿವೃದ್ಧಿ ಹೊಂದಬೇಕಾಗುತ್ತದೆ. ಸಾಮಾಜಿಕ ಜೀವನದಲ್ಲಿಯ ಹೂವತ್ತೂ ಶುಭ ತತ್ವಗಳ ಬೀಜಾರೋಪಣವು ಕೌಟುಂಬಿಕ ಜೀವನದಲ್ಲಿಯೇ ನಡೆಯಬೇಕಾಗುತ್ತದೆ. ಆದ್ದರಿಂದ ಸಮಾಜ ಮತ್ತು ಕುಟುಂಬಗಳು ತಾತ್ವಿಕವಾಗಿಯೂ ಬೇರೆ ಬೇರೆ ಎಂದು ತಿಳಿಯಬಾರದು! ಎಕಿದೂ ಪರಸ್ಪರ ಪೋಷಕವಾಗಿವೆ. ಇರುವ ಗ್ರಹಿಸಿದೇ ವರ್ತಿಸಿದ ವರ್ತನೆಯನ್ನು ಕಂಡುಹಿಡಿಯಬೇಕು.

ಹೆಣ್ಣು ವ್ಯಕ್ತಿಯು ಕುಟುಂಬ ಸೇವೆಯನ್ನು ಸರಿಯಾಗಿ ಮಾಡಿ ಮಿಕ್ಕ ವೇಳೆಯು ಖಿಲಿದೇ ಸಮಾಜಸೇವೆ ಮಾಡಬೇಕು. ಆದರೆ ಕುಟುಂಬದಲ್ಲಿಯ ಪ್ರತಿಯೊಬ್ಬರಿಗೂ ಹೆಚ್ಚು ಹೆಚ್ಚಾಗಿ ಸ್ವಾವಲಂಬನದ ಶಿಕ್ಷಣ ಕೊಟ್ಟರೆಯೇ ಮಾತ್ರ ಇದು ಸಾಧ್ಯ. ಕುಟುಂಬ ಸೇವೆಯು ಹೊರೆಯವನ್ನು ಹೆಚ್ಚಿಸಿಕೊಳ್ಳುವ ಕಡೆಗೇ ಸ್ತ್ರೀಯರ ಪ್ರವೃತ್ತಿ ಇರುತ್ತದೆ! ಆದು ಅವರ ಮೋಹ. ಈ ಮೋಹವನ್ನ ತಡೆಗಟ್ಟಲೇ ಬೇಕು. ಇಲ್ಲವಂದರೆ ಮಕ್ಕಳನ್ನು ಪರಾವಲಂಬಿಗಳಾಗಿಯೂ ವೈಗಳ್ಯರಾಗಿಯೂ ಮಾಡಿದ ಪಾಪ ಮಾತ್ರ ಅವರಿಗೆ ತಟ್ಟಲಿತು ಪತಿಯನ್ನು ಹಿಡಿದು ಕುಟುಂಬದಲ್ಲಿಯ ಪ್ರತಿಯೊಬ್ಬರಿಗೂ ಸ್ವಾವಲಂಬನ ಕಲಿಲೇಬೇಕು! ಗಂಡನಿಗೆ ಹೆಂಡತಿಯು ಕಡೆಯಿಂದ ಸೇವೆ ಗಿಂತ ಸಹಯೋಗ, ಸಹಜೀವನದ ವಿಚಾರವಿನಿಮಯ ಹಾಗೂ ಪ್ರೇಮದ ಆದಾನ ಪ್ರದಾನದ ಅಪೇಕ್ಷೆಯೇ ಇರಬೇಕು ಇಂಥ ಸಹಜೀವನದಿಂದ ಹೆಂಡತಿಯ ಮೇಲಿನ ಹೊರೆಯು ಹೆಚ್ಚದೆ ಅವಳ ಶಕ್ತಿಯೇ ಹೆಚ್ಚುತ್ತದೆ. ಪರಸ್ಪರ ಜೀವಹಾನಂದದ ಆದಾನ ಪ್ರದಾನ ಹೆಚ್ಚವದರಿಂದ ಆರೋಗ್ಯವೂ ಸದಾರಿಸುತ್ತದೆ. ಮತ್ತು ಪೂರ್ಣಸಿಕ ಸಂತೋಷವೂ ಪರಿಪೂರ್ಣ ಹೊಂದುತ್ತದೆ.

(ಕಾಕಾ ಕಾಲೇಲಕರ)

ಗಾಂಧೀವಾಣಿ

ಪ್ರೇಮವಿಲ್ಲದ ಜೀವನ ಮರಣಕ್ಕೆ ಸಮಾನ.

ದ್ವೇಷವು ಯಾವಾಗಲೂ ಕೊಲ್ಲುತ್ತದೆ. ಆದರೆ ಪ್ರೇಮವು ಎಂದೂ ಸಾಯುವುದಿಲ್ಲ.

ನಮ್ಮ ನೆರೆಕೊರೆಯ ಜನರ ಬಗ್ಗೆ ಭಯ್ಯಿಲ್ಲ ಪ್ರೇಮವಿಲ್ಲದಿದ್ದರೆ ಬೇರೆ ಯಾವ ದೇ ಕ್ರಾಂತಿಕಾರಿ ಪರಿವರ್ತನೆಯಿಂದಲೂ ನಮಗೆ ಹಿತವಾಗದು.

ಸಜ್ಜನರು ದುರ್ಜನರನ್ನು ಸುಲಿಯುತ್ತಾರೆ ನಿಜ. ಆದ್ದರಿಂದ ದುರ್ಜನರಾಗಿರುವದು ಜಾಣತನವೇ.

ಅಭಯವಿಲ್ಲದೆ ಅಹಿಂಸೆ ಸಾಧಿಸದು.

ಸಂಖ್ಯಾಬಲ ನೋಡಿ ಆನಂದ ಪಡುವವರು ಮುಳ್ಳಗು ಶತ್ರುರು ಒಂಟಿಗಾಗಿಯೇ ಕಾದಾಡಬಲ್ಲರು.

ತೆಂಬುವುದು ಒಂದು ಸದ್ಗುಣ! ಅಪನಂಬಿಕೆ ಹುಟ್ಟಿಸುವುದು ದೌರ್ಬಲ್ಯ!

ವೀರತೆಯು ಶಾರೀರಿಕ ಗುಣವಲ್ಲ; ಅದು ಆತ್ಮಿಕ ಗುಣ.

ಆಧ್ಯಾತ್ಮಿಕ ಜೀವನಕ್ಕೆ ಅಭಯವೇ ಬುನಾದಿ! ಹೇಡಿಗಳೆಂದೂ ನೀತಿವಂತರಾಗಿರಲಾರರು.

ಬುದ್ಧಿಗೆ ನಿಲುಕಿಕೆಯೂ ಹೃದಯಕ್ಕೆ ಮುಟ್ಟದ ಜ್ಞಾನವು ಜೀವನದ ಕತೋರ ಪರೀಕ್ಷೆಗೆ ಕಾಲಕ್ಕೆ ಕ್ರಯೋಜನಕ್ಕೆ ಬರಲಾರದು.

ನಾವು ದೇವರಿಗೆ ಅಂಜಿ ಪಡೆಯಹತ್ತಿದರೆ ಕಮಗೆ ಮನುಷ್ಯರಿಗೆ ಅಂಜುವ ಪ್ರಸಂಗವೇ ಬರಲಾರದು!

ನಾವು ಏನೇನು ಸಂವಾದಿಸುತ್ತೇವೆ ಎಂಬುದರ ವೇಲೆ ಮಾತ್ರ ಸುಖ ಅವಲಂಬಿಸಿಲ್ಲ! ನಾವು ಏನೇನು ಕೊಡುತ್ತೇವೆ ಎಂಬುದನ್ನೇ ಅವಲಂಬಿಸಿರುತ್ತದೆ.

ಬಡವರ ಸಲುವಾಗಿ ದುಡಿಯುವದಕ್ಕಿಂತ ಹೆಚ್ಚಿನ ಸ್ಫೂರ್ತಿದಾಯಕ ದೇವರ ಉಪಾಸನೆಯನ್ನೇ ನಾನು ಕಲ್ಪಿಸಲಾರೆ.

ವ್ಯವಹಾರದಲ್ಲಿ ಇಳಿಯಲಾರದ ಅಶರೀರಗಳು ಬರೀ ಪೊಳ್ಳು.

ಮೂರ್ತಿ ಪೂಜೆಯು ನಿಜವಾದ ಪೂಜೆಯಲ್ಲ. ಮೂರ್ತಿಯೊಳಗಿನ ದೇವರ ಪೂಜೆಯೇ ನಿಜವಾದ ಪೂಜೆ.

ನಮ್ಮ ಅವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿ ನಾಗರಿಕತೆ ಇಲ್ಲ. ನಮ್ಮ ಅವಶ್ಯಕತೆಗಳನ್ನ ಸ್ವಯಂ ಪ್ರೇರಣೆಯಿಂದ ಬುದ್ಧಿಪೂರ್ವಕ ಕಡಿಮೆ ಮಾಡಿಕೊಳ್ಳುವದರಲ್ಲಿ ಇರುತ್ತದೆ.

ಮಳೆರಾಯನ ಕೋಪ!

ನಾಲ್ಕು ಲಕ್ಷದ ವೆಚ್ಚದಿಂದಾಯ್ತು ಸೂಲು ಅಧಿಕಾರಿ ಪೆಚ್ಚಿದನು ಕೊಡಲು ನೂಮೂಲು' ಮಳೆರಾಯನಿಗೆ ಮಾತ್ರ ಬಂತು ಬಲು ಕೋಪ ಉರುಳಿದವು ಕಂಬಗಳ! ಯಾರಿಗೀ ಪಾಪ?

ಮಾವ ಊಲು ವ.ಹಿಮೆ

ಬೆಳಕ ನೋಡಿತು ಧೂಳಿ ಮುಳ್ಳುವಳ್ಳಿಲು ಸೆಳ್ಳಗೂ ಹೊಸ ಸ್ಫೂರ್ತಿ ಕೊಡಲು 'ಮೂಮೂಲು' ಗುಪ್ತ ಲೆಕ್ಕದ ಬೀಗ ತೆರೆಯಿತದೋ ನೋಡು! ಸರ್ವ ಒದ್ದಿಯ ಮಂತ್ರ! ಸಂಶಯದಿ ಹಾಡು!

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾರ್ಥಿಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶ್ವಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High-Class Boarding, Lodging & Restaurant

COONDAPUR, S. K.

ಕಾರ್ಕಳ ವ ಎನ್ಸಿಫಾ ಕೋರ್ಟಿನಲ್ಲಿ
P. & S. C. 7/1969.
ನರಸಿಂಹರಾವ್ ಸಾ —ಅರ್ಜಿದಾರರು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದ್ರೆ—

ಕಾರ್ಕಳ ತಾಲೂಕು ಮುಡಾರು ಗ್ರಾಮದ ಬಡಗೊಳಿಯಲ್ಲಿ ಇದ್ದು ವ್ಯಕ್ತವಾದ 1ನೇ ಅರ್ಜಿದಾರನ ಪತ್ನಿ ಪ ಮಿಕ್ಕ ಅರ್ಜಿದಾರರಾದ ಶಾಯಿ V. ಶಂಕರಮ್ಮನಿಗೆ ಬರಬೇಕಾದ ಇನ್ಸೂರೆನ್ಸ್ ಹಣ ಪಡೆಯುವರ ಕಮಗೆ ಸಕ್ಷೆಶನ್ ಸರ್ಟಿಫಿಕೇಟು ಕೊಡಬೇಕೆಂತ ಅರ್ಜಿದಾರರು ಬರಕೊಂಡ ಅರ್ಜಿಯು ತಾ. 24-6-1969ಕ್ಕೆ ತನ್ನಗೆ ಇಟ್ಟಿರುತ್ತದೆ.

N. B HEGDE,
ಅರ್ಜಿದಾರರ ಕಡೆ ಎಡ್ವೊಕೇಟ್.

Karkala, 29-7-1969.

NAVAYUGA 5-6-1969
Registered with the Registrar of News Papers for India under No. R. N. 3546/'57

REGD: No: B. Gi 176
LICENCE No. 33
Licensed to Post without Prepay

ಚಾರುಚಯನ

ಎರಡು ಬಂಗಾಳಗಳು ಒಂದಾದವೆ?

ಡಾ| ಜಾಕೀರ್ ಹುಸೇನರ ನಿಧನಾನಂತರದ ಹತ್ತು-ಹದಿನೈದು ದಿನಗಳಲ್ಲಿ ನಡೆಸಬಹುದು ಜಿಜ್ಞಾಸೆ ಮುಂದಿನ ರಾಷ್ಟ್ರಪತಿ ಆಯ್ಕೆಯ ಬಗ್ಗೆ ಈಗ ನಡೆಯುತ್ತಿಲ್ಲ. ಅಂದು ಮುಂದೆ ಬಂದಿದ್ದ ಹತ್ತಾರು ಹೆಸರುಗಳಲ್ಲಿ ಕೆಲವಾರು ಈಗ ಹಿಂದೆ ಸರಿದಿವೆ. ಕೆಲವರು ತಮ್ಮ ಹೆಸರನ್ನು ತಾವೇ ಹಿಂದೆ ತೆಗೆದುಕೊಂಡಿದ್ದು. ಜಿಪ್ಪೆ ಬೆಂಬಲದ ಬಗ್ಗೆ ವಿಶ್ವಾಸವುಳ್ಳವರು ಈಗ ಗಂಭೀರವಾನರಾಗಿದ್ದಾರೆ; ಬೆಂಬಲದ ಬಗ್ಗೆ[illegible]ರಿಗೇ ಸಂದೇಹವೇ!

ಕಾಂಗ್ರೆಸ್ ಪಕ್ಷವು ಇನ್ನೂ ಬಹುಮತವನ್ನು ಬಿಗಿಹಿಡಿದುಕೊಂಡಿದೆ. ಅದು ಒಪ್ಪುವ ಅಭ್ಯರ್ಥಿ ಗೆಲ್ಲುವುದು ಕಂಡಿತ. ಸ್ವತಂತ್ರ ಪಕ್ಷದ ನಾಯಕ ರಾಜಾಜಿ ರಾಷ್ಟ್ರಪತಿ ಆಯ್ಕೆಯಲ್ಲಿ ಕಾಂಗ್ರೆಸ್ ಸದಸ್ಯರಿಗೆ ಪಕ್ಷೇತರ ಶಿಸ್ತಿನಿಂದ ಬಂಧಿಸದೆ ಫಲಿತಾಂಶ ಮತದಾನ ಮಾಡಲು ಅವಕಾಶ ನೀಡಬೇಕು ಎಂದಿರುವುದರ ಒಳ ಗುಟ್ಟು ಇದೇ ಇದರ ಸಾಧ್ಯಾಸಾಧ್ಯತೆಯ ಪ್ರಶ್ನೆ ಬೇರೆ. ಕಾಂಗ್ರೆಸ್ಸಿನ ಹೊಸ ರಾಷ್ಟ್ರಪತಿಯ ಬಗ್ಗೆ ಬಹಳ ಮೌನವಿದೆ. ಅಧ್ಯಕ್ಷ ಫಕ್ರುದ್ದೀನ್ ಅಹ್ಮದ್ ವಿದೇಶ ಪ್ರವಾಸದಲ್ಲಿದ್ದಾರೆ. ಇಂದಿರಾಗಾಂಧಿಯವರು ಏನೋ ಯೋಜನೆ ಹಾಕಿಕೊಳ್ಳುತ್ತಿದ್ದಾರೆ. ಏಕೆಪ್ಪ ಆ ವಿಷಯ? ಕ್ಲಪ್ತ ಸಮಯದಲ್ಲಿ ಎಲ್ಲವೂ ಎಲ್ಲರಿಗೂ ತಿಳಿಯುವುದು. ಪಾರ್ಲಿಮೆಂಟಿನ ಕಾವು ಏರಿಕೆಯ ಭವಿಷ್ಯ. ಇದು ಎಂದಿಗೂ ಸತ್ಯ.

ಂ ಂ ಂ ಂ

ಕಳೆದ ಒಂದೂವರೆ ವರ್ಷದಲ್ಲಿ ಪಶ್ಚಿಮ ಬಂಗಾಳದ ಅಜಯ್ ಮುಖರ್ಜಿಯವರ ಕಳೆದ ಭಾರಿ ಮಧ್ಯಾವಧಿ ಚುನಾವಣೆಯ ನಂತರ ಸಂಯುಕ್ತ ರಂಗ ಸರಕಾರದ ಮುಖ್ಯಮಂತ್ರಿಗಳಾಗಿದ್ದ ಅಜಯ್ ಮುಖರ್ಜಿಯವರು ಕಾಂಗ್ರೆಸ್ಸಿನ ಪ್ರಫುಲ್ಲ ಚಂದ್ರ ಸೇನರಿಂದ ಅಧಿಕಾರ ಸ್ವೀಕರಿಸಿದ್ದರು. ಆಗ ಪ್ರಫುಲ್ಲ ಚಂದ್ರ ಸೇನರು ಅಜಯ್ ಮುಖರ್ಜಿಯವರಿಗೆ ಅಧಿಕಾರ ಹಸ್ತಾಂತರ ಮಾಡಿದ್ದು ಒಂದು ಕೊಡಲಿಯನ್ನು. ಈಗ ಪ್ರಶ್ನೆ ಮುಂದೆ ಬಂದಿದೆ—ಫೇರಾವ್ ಬಗ್ಗೆ ಭಿನ್ನಮತವನ್ನು ಹೇಗೆ ಪರಿಹರಿಸಿ? ಸಂಯುಕ್ತರಂಗದಲ್ಲಿ ಸಿಂಹಪಾಲು ಜ್ಯೋತಿಬಸುಗೆ. ಅವರಿಗೆ ಇದೊಂದು ಪ್ರಶ್ನೆಯೇ ಅಲ್ಲ—ಇದು ನ್ಯಾಯವಾದ ಹಕ್ಕು. ಅಜಯ್ ಅಧಿಕಾರ ಪ್ರಿಯರು. ಅಂತಲೇ ತನ್ನ ತೇಜೋವಧೆಯನ್ನೂ ಸಹಿಸುತ್ತಲೇ ಗದ್ದುಗೆಯಲ್ಲಿ ಆಸೀನರಾಗಿದ್ದಾರೆ. ಜ್ಯೋತಿಯ ಕೈಯಲ್ಲಿ ಅಜಯ್ ಬಾಯ ಹತ್ತಿಯ ದುರ್ಬಲ ಬತ್ತಿ.

ಂ ಂ ಂ

ಎಸ್ ಕೆ. ಪಾಟೀಲರು ಒಮ್ಮೊಮ್ಮೆ ಸಿದ್ದಿಯನ್ನು ಸೃಷ್ಟಿಸುವುದುಂಟು. ಈಗ ಅವರು ಲೋಕ ಸಭಾ ಸದಸ್ಯರೂ ಆಗಿದ್ದರಿಂದ ಅವರ ಸಿದ್ದಿಯ ಬಗ್ಗೆ ಹೆಚ್ಚು ಕಾಣಾ ಕೊಡಬೇಕಾಗಿತ್ತದೆ. ರಾಜ್ಯಕೀಯ ರಂಗದ ಹಳೆಯ ಹುಲಿ ಸದೋಬಾ ಕಶ್ಚಿಮ ಮತ್ತು ಪೂರ್ವ ಬಂಗಾಳಗಳು ಒಂದಾಗಿ ತಮ್ಮನ್ನು ಸ್ವತಂತ್ರ ದೇಶವೆಂದು ಘೋಷಿಸಿಕೊಳ್ಳುವ ಸಾಧ್ಯತೆಯಿಂಬಿ ಬಿಸಿ ಬಿಸಿ ಸುದ್ದಿ ಭವಿಷ್ಯವನ್ನೆವರು ಕಣಿ ಹೂಡಿದಿದ್ದಾರೆ.

ಸದೋಬಾ ಪಾಟೀಲರ ಈ ಕಣ್ಣಿಗೆ ಎರಡೂ ರಾಜ್ಯಗಳಲ್ಲಿ ಕೆಂಬಣ್ಣ-ಕೆಂಬಾವುಟಗಳ ಪ್ರಾಬಲ್ಯವಿರುವುದೇ ಕಾರಣ. ಭಾರತದ ಪಶ್ಚಿಮ ಬಂಗಾಳ ಕೆಂಪು ಜ್ಯೋತಿಯನ್ನೇ ಉರಿಸುತ್ತ ಇದಕ್ಕೆ ಫೀಡರಿಯಾಗಿ ಇದೆ. ಪೂರ್ವದ ಪಾಕಿಸ್ತಾನದಲ್ಲಿ ಮೌಲಾನಾ ಬಸಾನಿಯವರೂ ಚೀನೀಯ ಚೇಲರಿಗೆ ಗುರುವಾಗಿದ್ದಾರೆ. ಅಲ್ಲಿ ಅವರ ವಾರಬಾರು ವಿತಿ ಮೀರಿದೆ. ಹಾಗಾಗಿ ಬಚ್ಚಾ-ಬಾವುಟ ಸಾಮಾನ್ಯ ಧಮೇರಣ ಇವೆರಡನ್ನೂ ಒಂದು ಮಾಡಲು ಚೀನೀಯ ಮಾವ ಖಂಡುಗಾರ ನಾಗಾ ದೂತರ ಮೂಲಕ ಶಸ್ತ್ರಾಸ್ತ್ರದ ನೆರವು ಫೀಡಿದರೂ ಅಶ್ಚರ್ಯವಿಲ್ಲ—ಇದು ಅಸಂಭವವೆಂದು ಹೇಳುವಂತಿಲ್ಲ. ಆದರೆ, ಸದ್ಯ ಇರುವ ಅತಂಕವೊಂದು. ಪಾಕಿಸ್ತಾನದಲ್ಲಿ ದಂಡಿ ನಾಳಕಿ—ಮಾರ್ಷಲ್ ಲಾ ಘನಾಫಾಗೆ ಹೆಡೆಯೆತ್ತಿ ಬುಸುಬುಟ್ಟುವುದು ಸಾಧ್ಯವಿಲ್ಲ. ಬಹುವಿಗೆ ಹಾಗಿಲ್ಲ. ಮೊದಲಿಗೆ ಕರ್ಜಾಕ್ ದೊರೆ ಬಂಗಾಳಕಪ್ಪೆ ವಿಭಜನೆ ದಾಗ ದೇಶಕ್ಕೆ ದೇಶವೇ ಅದನ್ನು ವಿರೋಧಿಸಿತು. ಮೌಂಟ್‌ಬ್ಯಾಟನ್ ದೊರೆ ಪಿಳ್ಳೆ ಆಳ್ವಿಕೆಗೆ ಫಿಂಕಾಡಿ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿತು. ಈಗ ಮತ್ತೆ ಒಂದಾಗುವ ಲವಲವಿಕೆ ತುಂಬಿದೆಯೆ? ರಾಜ್ಯಕೀಯ ದೃಷ್ಟಿಯಿಂದ ಇಡಿಯ ಬಂಗಾಳ ಮಾತ್ರವೋ ಸಿದ್ಧಾಂತವನ್ನೇ ವೆಚ್ಚಿಕೊಂಡಂತೆ ಭಾಸವಾಗುತ್ತದೆ. ಮತ್ತೆ ಚೀನಾ ಕನಸು ಒಂದೊಮ್ಮೆ ಸತ್ಯವಾದರೆ, ಭಾರತವು ಅದೆಂತಹ ರಾಜ್ಯಕೀಯ ದುರಂತವನ್ನೆದುರಿಸಬೇಕಾಗುತ್ತದೆ! ಯೋಚಿಸುವಾಗಲೇ ಮೈ ಜುಮ್ಮೆನ್ನುತ್ತದೆ. ಕೇಂದ್ರ ಸರಕಾರ ಸದೋಬಾರ ಈ ಬಿಳು ಮಾತಿಗೆತ್ತ ತೀವ್ರ ಫಿಗಾ ಫೀಡಲೇಬೇಕು.

ಂ ಂ ಂ ಂ

'ಹುಲಿ ಬಂತು ಹುಲಿ ಬಂತು' ಎಂಬ ಕೇರಳ ಸರಕಾರ ಕೊವೆಯೂ ಹುಲಿಯನ್ನು ಪಂಜರದಿಂದ ಬಿಟ್ಟು ಬಿಡುವ ನಿರ್ಧಾರವನ್ನು ಮಾಡಿಯೇ ಬಿಟ್ಟಿತು. 'ಬಿಡಬೇಡಿ, ಬಿಡಬೇಡಿ' ಎಂದು ಜನ ಹೇಳುತ್ತಿದ್ದಂತೆಯೇ ಬಿಡದಿರುವುದು ಅನಿವಾರ್ಯವೇ ಎಂಬಂತೆ ಸಚಿವ ಸಂಪುಟ 'ಮಲಪ್ಪುರಂ' ಜಿಲ್ಲೆ ರಚನೆಗೆ ನಿರ್ಧಾರಿಸಿತು. ಸಾಧ್ಯ, ನಂಬೂದರಿ ಏನು ಸಾಧಿಯಾರು? ಅಧಿಕಾರ ಪೀಠದ ಅಕರ್ಷಣೆ ಬೆಳ್ಳವನ್ನೋ ಮಾಡಿಸುತ್ತದೆ.

'ಮುಸಲ್ಮಾನ ಜಾತಿ'ಯವರೇ ಹೆಚ್ಚಿರುವಂತೆ ಮಲಪ್ಪುರಂ ಮತ್ತು ಮಲನಾಡ್ ಎಂಬೆರಡು ಪ್ರತ್ಯೇಕ ಜಿಲ್ಲೆಗಳ ರಚನೆ ಮುಸ್ಲಿಂ ಲೀಗಿನ ಇಚ್ಛೆ. ಲೀಗು ನಂಬೂದರಿ ಸಂಯುಕ್ತರಂಗದ ಅಂಗ. ಕಂಡು ಪ್ರಶ್ನೆಯಿಂದಾಗಿ ಎಳೆಯುಕೆಡೆದಾಟ ಉಲ್ಬಣಾವಸ್ಥೆಗೇರಿದ್ದರಿಂದ ನಂಬೂದರಿ ತಮ್ಮ ರಂಗವನ್ನು ಜಲಪಡಿಸಿದೆ ಇದ್ದರೆ ಲೀಗೂ ಜಾರಿಕೊಂಡರೆ ಗತಿಯೇನು? ಆದ್ದರಿಂದ ಲೀಗಿನ ಅಭಿಲಾಷೆಯನ್ನು ಈಡೇರಿಸುವ ಕಲುವಾಗಿನೆ ಈ ಹೊಸ ಜಿಲ್ಲೆಗಳ ರಚನೆ ಜನವಿರೋಧವನ್ನು ಪರಿಗಣಿಸಿ ಅದನ್ನು ಬಗೆಹರಿಸಿಕೊಳ್ಳುವ ಪ್ರಯತ್ನವೇನೋ ನಡೆಯುತ್ತ; ಈಗ ಚಚಿವ ವಿರೋಧ ಹೆಚ್ಚಿರಬೇಕು. ಗಂಡಾಂತರದಿಂದ ಬಚಾವಾಗುವ ಫಿರ್ಧಾರವಾಯಿತು ನಿರ್ಧಾರ ಕಾರ್ಯರೂಪಕ್ಕೆಂದ ಬಂತೆದೆ? ಮುಂದೆ ನೋಡಬೇಕಷ್ಟೆ. ಈ ಹೊಸ ಮುಸ್ಲಿಂಲೀಗಿನ ವೈಕ್ಕಿಗಳ ಅಭಿಲಾಷೆಯನ್ನು ಇದ್ದ ತೀರಿಸಿ ನಂತರ ತನ್ನ ಪೀಠವನ್ನು ಭದ್ರಗೊಳಿಸಿಕೊಳ್ಳಿತು.

ಂ ಂ ಂ

ಕಳೆದ ಮಾಸ್ತಿ ಾವರಿಗೆ ಹಿರಿಯ ಕಾಡಿನ ಸ್ವಯಸ್ಸು ಯನ್ನು ಬೆ ವಿತರಿಸಿದರು. ಮಾಸ್ತಿಯ ವರದ್ದ ಾಗಲೂ ನಗ ಮೊಗ, ಮಾ ಜಾ ನೇ. ನಗೆಗಡಲಿನ ನಡ ವೆಯೆ ಾರು ವ್ಯತಿಂದ ಗಳನ್ನೂ ಪುಟ ಕ್ಕಿಗೆ ಮೆ ಉಸಿರು ತುಂಬಿಸಿದ ವಣ್ಣಿಗೆ ಖಾನ್ನು. ಅಡಿದ ಮಾತು ಒರೆದ ಲೇಖನ ಎಲ್ಲವೆರ ಹೊಸ ಅನುಭವ' ಎಂ ರ ಮಾತು ಅವರ ಬಾಯಿಂದ ತಾನೇ ಬಂದೀತು. "ಕಿರಿಯರಿಂಗೆ ಪ್ರಶಸ್ತಿ ಬಂಗಾರಿ ನೆನೇನೂ ವ್ಯತ್ಯೆಯಿಲ್ಲ. ಮೊನ್ನೆಗೆ ಮಾಡುವೆಯೊಡರೆ ಅಜ್ಜನಿಗೆ ವ್ಯತ್ಯೆಯೆ!" ಎಂದರು ಮಾಸ್ತಿ. ಮೊವ್ವನಿಗೆ ಮಾಡುವೆಹೊಗುವುದಕ್ಕೆ ಬಹಳಷ್ಟು ಮೊದಲಿಗೇ ಇಂದು "ಅಜ್ಜ"ನೆನಿಸಿದವನಿಗೂ ವಯಸ್ಸಿಯಾಗಿರಲೇಬೇಕು ತಾನೆ? ಮಾಸ್ತಿ ಇದನ್ನು ಅಣಕವಾಡಿ ಆಡಿರಲಿಕ್ಕಿಲ್ಲವಾದರೂ ಗಂಭೀರವಾದುದು. ಆದರೆ ಏಳು ದಶಕಗಳ ಸಾರ್ಥಕ ಜೀವನವನ್ನು ಬಿಡುಕಿದ ಮಾಸ್ತಿಯ ಮನಸ್ಸಿನಲ್ಲಿ ಈ ಬಗೆಯ ಹುಡುಗಾಟವಿರದು.

ದೇವರ ಮೂರ್ತಿಯ ಮೇಲೆ ಹೂ ಹಾರ ಬಿದ್ದರೆ, ಆದರ ಗೌರವಪ್ಪೆ ಹೆಚ್ಚುತ್ತದೆ. ಮಾಸ್ತಿಗೆ ಸಾಹಿತ್ಯ ಅರಾಧನೆಯ ಪ್ರತೀಕವಾಗಿದ್ದರಿಂದಲೆ ಆ ಪ್ರತಿಮೆಯು ಮೌಲ್ಯ ತಾನೇ ಹೆಚ್ಚಾಯಿತು.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
94 ವರ್ಷಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.
ಅತಿ ಲಾಭದಾಯಕವಾದ ತಮ್ಮ ದೈನಂದಿನ ಉಳಿತಾಯ ಯೋಜನೆ
"ಜೀವನ-ನಿಧಿ"ಯನ್ನು
ನಿಮ್ಮ ಉಳಿತಾಯಕ್ಕನ್ನು ವಿಸ್ತರಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-೫
Phone— 5711, 5712, 5713 } 3 Lines

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ
ವಾರ್ಷಿಕ ಚಂದಾ ರೂ. ೧೦

Edited, Printed & Published by K. U. Shetty, at the Navayuga Press, Udipi, S. India.

ನವಯುಗ

19—6—1969

೧೦
ಪೈಸೆ

ತುಳು ನಾಡ್ಪನದ ಕತೆ

ನಾಗಸಿರಿ

ಸಂಗ್ರಹ: ಶ್ರೀಪತಿ ಚಂಪ, ಹೆಜನೂಡಿ

ಕ್ಕ ನಾಗಕುಲದ ನಾಗರಾಜ ಮತ್ತು ದುಗ್ಗಣರಾಜರೆಂಬ ಅಣ್ಣತಮ್ಮಂದಿರು ಹುಟ್ಟಿದಳಿಂದ ಉದ್ಭವಿಸುತ್ತಾರೆ. ದುಗ್ಗಣರಾಜ ಅಣ್ಣನನ್ನು ಕರೆದು, "ಅಣ್ಣಾ ಹಕ್ಕಿಗೊಂದು ಗೂಡು ಇದೆ, ಕೋಳಿಗೊಂದು ಗೂಡು ಇದೆ, ಪಮಗೊಂದು ಅರಮನೆ ಹೂಗಬೇಕಲ್ಲಾ" ಎನ್ನುವನು.

"ಹಾದು ತಮ್ಮಾ, ಅದರೆ ಭವ್ಯ ಅರಮನೆ ಎಲ್ಲರ ಅರಮನೆಗಿಂತಾಗಬಾರದು. ನೀನು ಹೋಗಿ ಹುದ ಹಕ್ಕಿ ಗಟ್ಟುರು ಹಾಕುವ ಸ್ಥಳದಲ್ಲಿ ನೆಕ್ಕಿಕೋಲು ಊರಿಟ್ಟು ಬರಬೇಕು" ಎನ್ನುತ್ತಾನೆ. ತಮ್ಮ ದುಗ್ಗಣ ಸಮಯ ಕಾದು ಕೋಲು ಊರಿಟ್ಟು ಬರುತ್ತಾನೆ. ದೊಡ್ಡ ಅರಮನೆಯೊಂದನ್ನು ನಿರ್ಮಿಸುತ್ತಾನೆ. ಅರಮನೆಯ ಯೋಗ್ಯತೆಗೆ ತಕ್ಕುದಾದ ಶುಚಿಸಿಕಟ್ಟೆ, ಜೋಡು ಬಾವಿಗಳಿಗೆ ಜೋಡುಸಣ್ಣ (ವಿತ) ಮಾಡು ದಿಕ್ಕಿಪಲ್ಲಿ ಮೂರಿಕಿವಿ (ಹೆಬ್ಬಾಗಿಲು) ಯನ್ನು ಕಟ್ಟಿಸುತ್ತಾರೆ. ಗೃಹಪ್ರವೇಶಕ್ಕೆ ಮೊದಲು ನಾಗರಾಜ ನಾಲ್ಕು ಮಂದಿ ವೇದವಿದ್ವಾಂಸರಾದ ಬ್ರಾಹ್ಮಣರನ್ನು ಕರೆಯಿಸುತ್ತಾನೆ.

"ಅರಮನೆಯಲ್ಲಿ ಏನಾದರೂ ಕುಂದು ಕೊರತೆಯಿದ್ದರೆ ತಿಳಿಸಬೇಕು" ಎಂದು ಬಿನ್ನವಿಸಿಕೊಳ್ಳುತ್ತಾನೆ.

ಬ್ರಾಹ್ಮಣರು ಅರಮನೆಯ ಸೊಬಗನ್ನು ಕಂಡು ಆಶ್ಚರ್ಯಗೊಳ್ಳುರು. ಅರಮನೆಯಲ್ಲಿ ಎಷ್ಟು ಕಿಟಕಿ ಬಾಗಿಲುಗಳಿವೆ ಎಂದೇ ಅವರಿಗೆ ತಿಳಿಯುವುದಿಲ್ಲ. ಒಂದು ಬಾಗಿಲಿನಿಂದ ಹೊರಟು ಇನ್ನೊಂದು ಬಾಗಿಲಿನಿಂದ ಹೊರಬಂದರೂ ಅವರು ಮೌನವಾಗಿ ಇರಲಾಗದನ್ನು ಕಂಡು ನಾಗರಾಜನೇ ಮೌನಮುರಿದು,

"ವಿಪ್ರೋತ್ತಮರೇ ಅರಮನೆಯ ಒಳಗೂ ಏನಾದರೂ ಕುಂದು ಕೊರತೆಯಿದೆಯೆ ಎಂದು ನೀವು ಹೇಳಲೇ ಇಲ್ಲ" ಎಂದು ಹೇಳುತ್ತಾನೆ.

"ನಾವು ಹೇಳಲು ಏನಿದೆ ನಾಗರಾಜ? ನೀನು ವಿಶ್ವಕರ್ಮನಂತೆಯೇ ಕಟ್ಟಿಸಿದ ಅರಮನೆಯಾದರೂ ನೂರಿಪ್ಪತ್ತು ಎಳೆಯ ಹುಲ್ಲು ಕೊರತೆಯಾಗಿ ಛಾವಣಿಗೆ ಸಾಲಲ್ಲ. ಅದರೂ ಕೊನೆಗೊಂದು ದೊಡ್ಡ ಕೊರತೆ ಕಂಡುಬರುತ್ತಿದೆ" ಎನ್ನುವರು.

"ನೀವು ನೋಡಿದ, ಕೇಳಿದ ಹೆಣ್ಣು ಮಕ್ಕಳೆಲ್ಲಾದರೂ ಈ ಅರಮನೆಗೆ ಯೋಗ್ಯಳಾದವಳನ್ನು ನೋಡಿದ್ದೀರಾ" ಎಂದಾಗ,

"ದೇವಲೋಕದಲ್ಲಿ ಬ್ರಹ್ಮದೇವರ ಮಗಳು "ದೇವ ಸಿರಿ"ಕನ್ನಿಕೆ ಎಂಬವಳಿದ್ದಾಳೆ. ಅವಳೇ ಈ ಅರಮನೆಗೆ ಯೋಗ್ಯಳು" ಎನ್ನುತ್ತಾರೆ ಬ್ರಾಹ್ಮಣರು.

"ಬ್ರಾಹ್ಮಣರೇ ನನಗೆ ತಂದೆ ತಾಯಿಗಳು ಹೊರೂಂ ಇಲ್ಲ ಎಂಬ ಸಂಗತಿ ನಿಮಗೆ ತಿಳಿದೇ ಇದೆ. ನನ್ನ ತಮ್ಮ ದುಗ್ಗಣರಾಜನೇ ನನಗೆ ಸರ್ವಸ್ವ. ಅವನನ್ನು ಕೂಡಿಕೊಂಡು ನೀವು ದೇವಲೋಕಕ್ಕೆ ಹೋಗಬೇಕು" ಎಂದು ಹೇಳಿ ಅವರಿಗೆ ಬೇಕಾದ ಬಟ್ಟೆಬರೆಯನ್ನು ಒದಗಿಸಿಕೊಡುತ್ತಾನೆ.

ದುಗ್ಗಣ್ಣರಾಜನೊಂದಿಗೆ ಬ್ರಾಹ್ಮಣರು ದೇವಲೋಕಕ್ಕೆ ಹೋಗುತ್ತಾರೆ. ದೇವೇಂದ್ರನಿಗೆ ವಂದಿಸಿ ಸಿಂಹ ಬ್ರಾಹ್ಮಣವನ್ನು ಕಂಡು ಅವರನ್ನು ಆದರದಿಂದ ಬರಮಾಡಿಕೊಂಡು ಉಚಿತಾಸನಗಳನ್ನೀಯುತ್ತಾನೆ.

"ನೀವು ಇಲ್ಲಿಗೆ ಬಂದ ಕಾರಣವೇನು?"

"ನಾವು ಹೆಣ್ಣು ನೋಡಲು ಬಂದಿದ್ದೇವೆ" ಎನ್ನುತ್ತಾರೆ. ದೇವೇಂದ್ರನು ಸ್ವಲ್ಪ ಯೋಚಿಸಿ, "ಕೊಡುವ ಹೆಣ್ಣು ಕೊಟ್ಟವಾಗಿದೆ" ಎಂದುದಕ್ಕೆ, "ಉಳಿದದ್ದು ನನಗೆ ಸಾಕು" ಎನ್ನುತ್ತಾರೆ ಬ್ರಾಹ್ಮಣರು.

"ಹೆಣ್ಣು ಯಾರಿಗೆ?"

"ನಾಗರಾಜನಿಗೆ."

"ನಾಗರಾಜನಿಗಾದರೆ ನಾವು ಹೆಣ್ಣು ಕೊಡುವುದಿಲ್ಲ."

"ಯಾಕೆ ಕೊಡಬಾರದು?"

"ನಾವು ದೇವತೆಗಳು. ದೇವತೆಗಳು ನಾಗರಿಗೆ ಹೆಣ್ಣು ಕೊಡುವ ಸಂಪ್ರದಾಯವಿಲ್ಲ."

ದುಗ್ಗಣ ರಾಜನಿಗೆ ಕಳವಳವಾಗುತ್ತದೆ. ಅವನು ಮುಂದೆ ಬಂದು, "ದೇವೇಂದ್ರ, ನಾವಿಬ್ಬರೂ ಯೋನಿಜರಲ್ಲ. ನವ್ವದು ಕೂಡಾ ಶ್ರೇಷ್ಠ ವಂಶ. ನಮಗೆ ಹಿರಿಯರಾರೂ ಇಲ್ಲವೆಂದು ಚಿಂತಿಸಬೇಕಾದ್ದಿಲ್ಲ. ನಿನ್ನ ಹೆಣ್ಣಿಗೆ ಅಪ್ಪ, ನಾವ, ನಾದಿನಿ, ನೈದುನ ಎಲ್ಲ ನಾನೇ. ಆ ಜವಾಬ್ದಾರಿ ಇನ್ನೆದು" ಎಂದು ದೀನನಾಗಿ ಕೇಳುತ್ತಾನೆ. ದೇವೇಂದ್ರ ಮದವೆಗೆ ಒಪ್ಪುತ್ತಾನೆ. ಮಂದಿನ ವಾರ ಮದುವೆ ಎಂದು ನಿಶ್ಚಯಿಸಿ, ದುಗ್ಗಣರಾಜ ತನ್ನ ಅರಮನೆಗೆ ಹಿಂದಿರುಗುತ್ತಾನೆ.

ಮುಂದಿನ ವಾರ ದೇವೇಂದ್ರ ತನ್ನ ಪರಿವಾರ ಸಮೇತ ದಿಬ್ಬಣ ಹೊರಟು ಆಕಾಶ ಮಾರ್ಗದಲ್ಲಿ ನಾಗರಾಜನ ಅರಮನೆಗೆ ಬರುತ್ತಾನೆ. ದೇವಸಿರಿಕನ್ನಿಕೆಯನ್ನು ನಾಗರಾಜ ಮದವೆಯಾಗುತ್ತಾನೆ ಎಂದು ತಿಳಿದ ಶ್ರೀಕೃಷ್ಣನು ನಾಗರಾಜನಲ್ಲಿ ಮತ್ಸರಪಡುತ್ತಾನೆ. ತಾನು ಇಚ್ಛಿಸಿದ್ದ ಹೆಣ್ಣು ಇನ್ನೊಬ್ಬನ ಕೈಸೇರಬಾರದು ಎಂದು ಅಕಾಶಮಾರ್ಗದಲ್ಲಿ ನಿಂತ ಕೊಂಡು ಚಿನ್ನದ ಚೆಂಡೊಂದನ್ನು ದೇವಸಿರಿಕನ್ನಿಕೆಯ ಬೆಲೆ ಎಸೆಯುತ್ತಾನೆ. ಸಿರಿಕನ್ನಿಕೆ ಇದನ್ನು ನೋಡಿ ಯಾರೋ ದ್ರೋಹಿಗಳ ಪಿತೂರಿ ಎಂದುಕೊಂಡು ಕೈಗೊಟ್ಟು ಚೆಂಡನ್ನು ಹಿಂದಕ್ಕೆ ಎಸೆಯುತ್ತಾಳೆ.

ವಿಜೃಂಭಣೆಯಿಂದ ವಿವಾಹವಾಗುತ್ತದೆ. ದೇವಸಿರಿ ನಾಗಸಿರಿಯಾಗಿ ನಾಗರಾಜನೊಂದಿಗೆ ಸಂಸಾರ ಹೂಡುತ್ತಾಳೆ. ನಾಗರಾಜನ ಮೇಲೆ ಮತ್ಸರಗೊಂಡ ಶ್ರೀಕೃಷ್ಣನು ಅವನ ಮೇಲೆ ಪಿತೂರಿ ಹೂಡುವುದಕ್ಕಾಗಿ ದೇವಲೋಕದ ದೇವಸಂಪಿಗೆ ಮರದಡಿಯಲ್ಲಿ ದೇವಪಕಳ ಕೂಟ ಕೂಡಿಸುತ್ತಾನೆ. ಎಳೆ, ರಂಪ್ರಿ ಎಂಬ ಹೂಲು ಕೂಟ ಪದೆದರೂ ಯಾವ ನ್ಯಾಯವೂ ಲಗುವುದಿಲ್ಲ. ಬೇಸತ್ತ ಶ್ರೀಕೃಷ್ಣನು "ಈ ಕೂಟಕ್ಕೆ ಯಾರ್ಯಾರು ಬಂದಿಲ್ಲ?" ಎಂದು ಪ್ರಶ್ನಿಸುತ್ತಾನೆ. "ಆಮಂತ್ರಿತರಲ್ಲಿ ನಾಗರಾಜನೊಬ್ಬನೇ ಬಂದಿಲ್ಲ" ಎಂದು ತಿಳಿದು ಬರುತ್ತದೆ. "ಹೊಸ ಹೆಣ್ಣು ಬಂದಿದೆ. ಅವಳೊಂದಿಗೆ ರತಿಕ್ರೀಡೆಯಲ್ಲಿ ಮಗ್ನನಾದವನಿಗೆ ಕೂಟದ ನೆನಪಾದರೂ ಹೇಗೆ ಬರಬೇಕು?" ಎಂದು ಶ್ರೀಕೃಷ್ಣನು ಹೇಳಿಕಳಿಸುತ್ತಾನೆ.

ನಾಗರಾಜನಿಗೆ ಓಲೆ ಹೋಗುತ್ತದೆ. ಚಾರಕನೊಬ್ಬ ಓಲೆ ಹಿಡಿದುಕೊಂಡು ನಾಗರಾಜನ ಅರಮನೆಗೆ ಬರುತ್ತಾನೆ. ಓಲೆ ತಿಂದ ನಾಗರಾಜನಿಗೆ ತುಂಬ ಬೇಸರವಾಗುತ್ತದೆ. "ಛಿ, ನಾನು ಇಷ್ಟು ಹುಣ್ಣನವನಾದೆನೇ?" ಎಂದುಕೊಂಡು ಕೂಡಲೇ ದೇವಲೋಕಕ್ಕೆ ಹೊರಡುವ ಸಿದ್ಧತೆ ಮಾಡುವನು.

ಹೊಂಡವುದಕ್ಕೆ ಮುಂಚೆ ಹೆಂಡತಿಯನ್ನು ಕರೆದು ವೀರ್ಯದ ಪೆಟ್ಟಿಗೆ ತಂದು ಹೇಳುವನು. ನಾಗಸಿರಿ ವೀರ್ಯದ ಪೆಟ್ಟಿಗೆ ತಂದು ಗಂಡನ ಪಕ್ಕದಲ್ಲಿ ಕೂಳತುಕೊಳ್ಳುವಳು. ಪೆಟ್ಟಿಗೆಯಿಂದ ವೀರ್ಯ ತೆಗೆದು ಒಂದೊಂದನ್ನೇ ಮಹಚಿ ಗಂಡನ ಬಾಯಿಗಿಡುತ್ತಾಳೆ. ಹೆಂಡತಿಯನ್ನು ಮುದ್ದಿಡುತ್ತಾ, "ಇನ್ನ ಅರಗಿಣಿ, ಒಂದರೆಗಳಿಗೆನಾ ನಿನ್ನನ್ನ ಬಿಟ್ಟರಲಾರದ ನಾನು; ಇನ್ನು ದೇವಲೋಕಕ್ಕೆ ಹೋಗಬೇಕಾಗಿದೆ. ನಾನು ಹಿಂದೆ ಬರುವ ವರೆಗೆ ಅರವ ನೆಯ ನಾಲ್ಕು ಫಿಟ್ಟನ ಬಂಗಿಲಷ್ಟೂ ಹಾಕಿಕೊ

(ಹನ್ನೊಂದನೇ ಪುಟ ನೋಡಿರಿ)

ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯಗಳು

ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸುವ ಉಪಯುಕ್ತ ಯೋಜನೆಗಳನ್ನು ಹಾಕಿದ ಬ್ಯಾಂಕುಗಳಲ್ಲಿ ಭಾರತದಲ್ಲಿ ಕೆನರಾ ಬ್ಯಾಂಕು ಪ್ರಮುಖ ಬ್ಯಾಂಕ್ ಆಗಿರುತ್ತದೆ.

ಇಂದು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಕೆನರಾ ಬ್ಯಾಂಕ್‌ನಲ್ಲಿ ಹಲವುತರ ಆಕರ್ಷಣೀಯ ಸಾಲ ಸೌಲಭ್ಯದ ಯೋಜನೆಗಳಿವೆ.

ಉದಾಹರಣೆಗೆ ಭಾರತದಲ್ಲಿ ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಸರದೇಶಗಳಿಗೆ ವಿದ್ಯಾಭ್ಯಾಸಕ್ಕೆ ಹೋಗಲು, ಹಾಗೂ ಭಾರತದಲ್ಲಿಯೇ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪೋಷಕರಿಗೆ ಪುಸ್ತಕ-ಉಪಕರಣ ಪಡೆದುಕೊಳ್ಳಲು ಅನುಕೂಲವಾದ ಸಾಲದ ಯೋಜನೆಗಳಿವೆ. ಈ ಸಾಲದ ಯೋಜನೆಗಳೆಲ್ಲಾ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಾ ಇವೆ.

ಹೆಚ್ಚಿನ ವಿವರಗಳನ್ನು ಕೆನರಾ ಬ್ಯಾಂಕ್ ಆಡಳಿತ ಕಛೇರಿ, ಬೆಂಗಳೂರು ಇವರಿಂದ ಪಡೆಯಬಹುದು. ಇಲ್ಲವೇ ಕೆನರಾ ಬ್ಯಾಂಕಿನ ಯಾವುದೇ ಶಾಖೆಯ ಮ್ಯಾನೇಜರರಿಂದ ಪಡೆಯಬಹುದು.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪಿತ: 1906)

ರಿಜಿಸ್ಟರ್ಡ್ ಆಫೀಸ್ ಮಂಗಳೂರು

ಆಡಳಿತ ಕಛೇರಿ ಬೆಂಗಳೂರು

ಭಾರತದ ಅರನೆಯ ಅತಿ ದೊಡ್ಡ ಬ್ಯಾಂಕು

ಫೋನ್ : ೬೭೬

1921 ನ್ಯಾಪನೆ

ಸಂಪುಟ ೪೮
ಸಂಚಿಕೆ ೩೯
VOL. 48
No. 39

ಕಲಿಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೯—೬—೧೯೬೯

ನ್ಯಾಪಕರು:
ದಿ| ಎ. ಬಿ. ಶೆಟ್ಟರು
ಸಂವಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಗಂಡಾಂತರ ನಿರ್ಮೂಪಕರು

ವ್ಯಕ್ತಿ—ವಾರ್ ಮಕ್ಕು ಅಭಿಪ್ರಾಯು ಸ್ವತಂತ್ರ್ಯ ನವ್ಮ ದೇಶದಲ್ಲಿ ಅನಾದಿ ಂದಲೂ ಬಂದದ್ದು. ಬ್ರಿಟಿಷ್ ಸಾರ್ವ ಭೌವರ ಮತ್ರೆ ಆ ಹಿಂದಿನ ಕೆಲವು ಮುಗಲಾಯ ಬಾದಶಹರ ದೊರೆತನದಲ್ಲಿ ವಾಕ್ ಸ್ವಾತಂತ್ರ್ಯ ಇದಕ್ಕೆ ಚ್ಯುತಿ ಬಂದಿತ್ತು. ಸ್ವಾತಂತ್ರ್ಯಾನಂತರ ವೀಕ್ಷಿಸಿದಾಗ, ಈ ಸ್ವತಂತ್ರ್ಯದ ಲಾಭವನ್ನು ಪಡೆದು ಭೋಗ ಲಸಿ ಪೆರೆಸುವಾ ಹೊಂದಿ ಒರುತ್ತಿರುವು ದು ಗೋಚರವಾಗುತ್ತಿದೆ. ಈ ನೆಲೆ ಇಡಿ ಯ ದೇಶವನ್ನೇ ನುಳುಗಿಸಿ ಬಿಡುವಷ್ಟು ಅ ಹ ತಾಪಿರುವಂತೆ ಭಾಸವಾ ಗುತ್ತಿದೆ. ಇದು ಹೀಗೇ ನಡೆದರೆ, ಸ್ವಾತಂತ್ರ್ಯವು ಸಂಪೂರ್ಣ ಸ್ವೇಚ್ಛೆಯಲ್ಲಿ ಪರ್ಯವಸಾನ ಹೊಂದಿ ಒಂದು ರಾಷ್ಟ್ರವು ಮಣ್ಣಿನ ಮುದ್ದೆಯಂತೆ ಕಾಕರಿಸಿ ಬಿದ್ದು ಚಕನಾಚೂರಾಗುವುದು ಕಂಡಿತ

ಪ್ರ. ನೆಹರು ಪ್ರಧಾನಮಂತ್ರಿಯಾಗಿ ದ್ದಾಗ, ಧ ಷಾವಾರು ರಾಜ್ಯಗಳು ರೂಪ ಪಡೆದುವು. ಅವರ ಕಾಲದಲ್ಲೇ ಪ್ರತ್ಯೇಕ ಪಂಜಾಬ—ಪ್ರತ್ಯೇಕ ನಿರಗುಡ್ಡಗಾಡ – ತ್ಯೇಕ ವಿಶಭಾ ರಾಜ್ಯಗ ಬೇಡಿಕೆ ಮಂದೆ ಬ'ತೊಡಗಿದ್ದುವು. ಈ ಸಂಬಂಧ ದಲ್ಲಿ ಅವರೇ ಒಂದು ಖಚಿತ ನಿರ್ಧಾರಕ್ಕೆ ಬರಲು ಅಂಜಿದ್ದರು. ಅದರೆ, ಅವರ ಮಗಳು ಇಂದಿರಾಜಿ ಪಂಜಾಬವನ್ನು ವಿಭಜಸಲು ಹೆಸರಲಿಲ್ಲ; ತಸಾಮುದೊಳಗೊಂದು ಮಂರಾಜ್ಯ ರಚನೆಗೆ ಬೆದರಲಿಲ್ಲ. ಆದರೆ, ಸ್ವತ್ಯೇಕ ತೆಲಂಗಾಣದ ಶ್ನೆ ಬಂದಾಗ ರಾಜ್ಯ ವಿಭಜನೆ ಅಕಾರ್ಯವೆಂದದು ಘೋಷಿಸಿದರು. ಇದಕ್ಕೆ ಕಾರಣವಿಲ್ಲದಿಲ್ಲ. ರಾಜ್ಯ ವಿಭಜಿಸಬೇಕೆನ್ನುವ ಒಂದು ಸಂಗಡ ನೆರ.ವಂತೆಯೇ ರಾಜ್ಯ ವಿಕಘಟಕವಾಗಿರ ಬೇಕೆನ್ನುವವರೂ ಇದ್ದಾರೆ. ಪ್ರಾಯಃ ಎರಡನೆಯ ವರ್ಗಕ್ಕೆ ಸೇರಿದವರೇ ಹೆಚ್ಚು ಜನ. ಈಗಿನ ರಾಜ್ಯ ವ್ಯವಸ್ಥೆಯನ್ನು ಅಂ ಧ್ರದಲ್ಲಿ ಕಾಸು ಬ್ರಹ್ಮಾನಂದ ರೆಡ್ಡಿಯವರೂ ಅವರ ಅನುಯಾಯಿಗಳೂ ಬಾಂಬ ಲಿಸುತ್ತಾರೆ. ಕಾಂಗ್ರೆಸ್‌ನ ಒಂದು ಗುಂಪಿನವರಿದ್ದಕ್ಕೆ ಒಪ್ಪಿಗೆ ನೀಡ ದ ಹೋದರೂ ಕಾಂಗ್ರೆಸ್ಸೇತರರಲ್ಲಿ ಹೆಚ್ಚಿನ ಬೆಂಬಲ ಕಾಸು ನಿಲುವಿಗಿದೆ. ಇಂತಹ ಸಂಕಟದಲ್ಲಿ ಇಂದಿರಾಜಿ ಏನಾ ನೂಡುವುದು ಸಾಧ್ಯವಿಲ್ಲ. ಜನರೇ ಬೇರೆನಾ ವರದಿ ನೀಡುವುದು ಶ್ಯವಿಲ್ಲ. ಎಲ್ಲರ ಅಭಿಪ್ರಾಯಗಳನ್ನು ಕಲೆ ಎಲ್ಲರಿಂದೂ ಸರ್ವಾನುಮತವಾದುವ ರಾಜಿ ಸೂತ್ರವನ್ನು ಕಂಡುಹಿಡಿಯುವು ಮ ಕಷ್ಟವಲ್ಲ; ಆದರೆ ಎಲ್ಲರೂ ತಂತಮ್ಮ ಅಭಿಪ್ರಾಯಗಳು ಮಾತ್ರವೇ ಸರಿ; ಉಳಿ ದವರದ್ದೆಲ್ಲಾ ತಪ್ಪು, ಆದ್ದರಿಂದ ಸಾನಂದಾತೆಯೇ ನೀವು ಒಪ್ಪಬೇಕೆಂದು ಪಟ್ಟು ಹಿಡಿಯು ಕುಳಿತರೆ ರಾಜಿಯೆಲ್ಲಿ?

ಈಗ, ಅಂಧ್ರ ಪ್ರದೇಶದಲ್ಲಿ ನಡೆ ಯುತ್ತಿರುವ ಹಗರಣಕ್ಕೆ ಬಲವಾದ ಮೂ ಲವಿರುವುದಿಲ್ಲ. ರಾಜ್ಯದ ನಾಯಕವ ಜಿ ಗಳೆಲ್ಲರೂ ಬಾರಿದಿದ್ದಾರೆ. ಬಾಲಮು ರಿದ ಫರಿ ಹಾನೇ ಸಪೆಯೆಂದು ಹೇಳುತ್ತ ಇತರ ನರಿಗಳನ್ನು ವಂಚಿಸಿ ಬರಸೆಳೆದು ಕೊಳ್ಳಲು ಪಾಡುಬಹ ದಾದ ತಂತ್ರ-ಕುತಂತ್ರಗಳೇ ತೆಲಂಗಾಣದ ಹಗರಣದ ನಾಂದಿ; ಬೆಳವಣಿಗೆ ರಾಜ್ಯಕೀಯ ಪ್ರಮಾರಿಗಳ ದಂಗಿನಾಟದಲ್ಲಿ ಸರ್ವಾಸತ್ಯ ವಿನೇ ಚನೆ ಮಾಡುವಷ್ಟು ಬಿಡುವು ದೊರೆಯ ದ ಇನ್ನೂ ಕೆಲವರು ಬ.ದ್ಧಿಜೀವಿಗಳು ಈ ಸಿಕ್ಕಿನಲ್ಲಿ ಸಿಕ್ಕಿಕೊಂಡು ಜಾಲ ಬೀ ಡಲು ಹೊರಟರು. ವಿದ್ಯಾರ್ಥಿ ವಿಷಾನಂಗಳನ್ನು ಬಟ್ಟೆಗೆ ತರುಕಿಸಿಕೊಂ ಡರು. ವಿದ್ಯಾರ್ಥಿಗಳು ಗೊಂದಲಾರ್ಥಿ ಗಳಾದರು. ಸಾರ್ವಜನಿಕ ಆಸ್ತಿಪಾಂತಿ, ಸಂ ಪತ್ತಿನ ನಾಶ,ಜಪಜೀವನದ ಅಸ್ತವ್ಯಸ್ತತೆ ಇತ್ಯಾದಿ ಇತ್ಯಾದಿಗಳಿಗೆ ಕಾರಣ ಪುರು ಷಂದರು. ಬನಿರ ಹಿಂದಿಲಿಗೆ ನಾಯಕರಾ ಗ್ರ ಜೆಗಳೆನಿಸಿದವರು ಯೂರ್ಯಾರಿಂದಲೋ ಹೇಗೆ ಹೇಗೋ ಬೆಂಕಿಯಿಸ್ಸರು. ಅದು ಚಟ ಚಟಲೆಂದು ಉರಿಯುತೊಡಗಿದೆ. ಬೆಂಕಿಯ ಜ್ವಾಲೆಯುಂಡಿಯೆ. ತ್ರಿರುವಾಗ ಅದಕ್ಕೆ ಕ್ಷೀರು ಡಾಕ ವುದ ಅಗತ್ಯ. ಅ ದ್ಯಾಕೆ ಹಾಗೆ ಮಾಡಿದಿರೆಂದು ದಾಹ ಆರಿದ ಮೇಲೆ ಪರಿಶೀಲಿಸೋಣವೆಂದು ಕೇಂದ್ರದ ನಿಲುವು. ಮೂಲ ನಾ ಯಕಾದ ಶ್ರೀಮತಿ ಯೂ ತೆಲಂಗಾ ಣದ ಹಗರಣದ ನಾಂಯಕತ್ವವು ತನ್ನದೆಂದು ಧೈರ್ಯವಾಗಿ ಹೇಳ ಲು ಮುಂದೆ ಬರುವುದಿಲ್ಲ. "ಪರಿಸ್ಥಿತಿ ಕಟ್ಟುಹೋಗಿ, ವಿಪರೀತಕ್ಕೆ ಮುಟ್ಟಿದ; ನಾವು ಆರಂಭಿಸಿದಪ್ಪು ಆಸ್ಪ; ಬೆಂಬಲಿ ಸುವವರೂ ಅಲ್ಲ; ಆರಿಸುವವರೂ ಅಲ್ಲ. ಅದರೆ, ಕೈತ ಬೆಂಕಿಯಾರಿಸಬೇಕಾದರೆ ಹೀಗೆ ಮಾಡಬೇಕ, ಹೀಗೆ ಮಾಡ ಬೇಕು...."ಎಂದು ಬೇಕುಗಳ ಪಟ್ಟಿ ಮುಂದೆ ಮಾಡ.ತ್ತಾರೆ—ಇದು ಅಂಧ್ರ ಹಗರಣದ ರಸಭರಿತ ಸನ್ನಿವೇಶ!

ಸತ್ಯ ಹೇಳಬೇಕಾದರೆ, ಈ ಚಳುವಳಿ ಯೆಂದು ಕರೆಯುವ ವಿಕಲಾಟದ ಆದಂ ಭಕರೂ ಪುರಸ್ಕರ್ತರೂ 'ಇವರೇ' ತ ವರು ಎಂಬುದೆ ದಾರಿ ಹೊಸನ್ನೂ ಪ್ರತಿತ್ಪತ್ತೇಕವಾಗಿ ಎತ್ತ ಬೇಕಾಗಿಲ್ಲ. ಒಂದು ಕಾಲದಲ್ಲಿ ಅಧಿಕಾರದಲ್ಲಿ ಇದ್ದು, ಆಂಧ್ರಪ್ರದೇಶದ ದೊರೆತನದಲ್ಲಿ ನಿಂತಾ ಸನಾಂಕವನ್ನ ಪಡೆದು ಈಗ ಕಾರಣ ಂತ ರಗಳಿಂದ ಅಂತಶ್ಚುಪ್ತ ಅಥವಾ ಅಂತಶ್ಚು ಕಂಡವರೇ ಹೆಚ್ಚು ಮಂದಿ. ತತ್ಕಂತ ವೇಧಾವಿ- ಸರ್ವೋದಯವರ್ಕ- ದೇಶಭಕ್ತ ಇ. ಇ. ಗುಣಸಂಪನ್ನರಿಗೆ ಜನಸೇವೆ ನಾಡುವ ಅವಕಾಶ ದೊರೆಯದ್ದರಿಂದ, ಕೈಗೆ ಬಂದ ಹುತ್ತು ಬಾಯಿಗೆ ಬಾರದಂ ತಾದ್ದರಿಂದ, ಅಥವಾ ಬಾಯಿಗೆ ಬಿದ್ದದ್ದ ನ್ನು ಉಗುಳಿ ಉಗವಾಪವಿರುವುದರಲ್ಲೇ ತನ್ನ ಪ್ರತಿಷ್ಠೆ ಹುದುಗಿದೆಯೆಂ ದು ನಂಬಿಕ್ತರಿಂದ ಹಿಂದು ಕಪ್ಪಿದ ಕಾಗೆ ಗಳಾದ ಇವರು ಹುತ್ತೇನು ಮೂಡಬಲ್ಲ ರು? ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಯೂ ಯಾವುದೇ ಸ್ಥಾನ ಪದವಿಗಳನ್ನು ಗಳಿಸಿ ಪೊನ್ನೆ ಜನಾವಧಯಲ್ಲಿ ಗೆದ್ದು ಬಂದು ಕೇಂದ್ರ ಮಂತ್ರಿಯೂ ಮೇಲೆ ನ್ಯಾಯದಲ್ಲಿ ಮಾತ್ರ ಸೋಕಡಾ ಜಿನ್ನಾ ರೆಡ್ಡಿಯಾರು ಇಂಥವರಲ್ಲಿ ಒಬ್ಬರು ಮಾತ್ರ.

ರಾಜ್ಯಗಳ ಸಂಪ್ಕೆ ವಹಿಸು ಮಂತ್ರಿ ವಂಡಳದಲ್ಲಿ ವಿಸ್ತಾರವನ್ನು ವಹಿಸು ಇಂದಿನ ರಾಜ್ಯಕೀಯ ವಾತಾ ವರಣವನ್ನು ನೋಡುವಾಗ, ಇನ್ನೊಂದೆ ರಡು— ಮೂರು ಚ ನಾ ವ ಣೆ ಗ ಳು ಪಡೆಗಳವಹೊತ್ತಿನಲ್ಲಿ ಪಾಜಿನ ಂತ್ರಿ ಪವಂತ್ರಿಗಳದ್ದೇ ಒಂದ ರಾಜ್ಯಕೀಯ ಪಕ್ಷ ಬಲವಾಗಿ ಕಟ್ಟುವುದು ಸಾಧ್ಯವಾ ದೀತೆನ್ನಿಸುತ್ತದೆ. ಜವಾಹರರ ಬಲಗೈಯ ನಿಸಿದ ಕೃಷ್ಣ ಮೆನನ್ ಅದಕ ಳೆದರೆ ನಾಥ ಕರಾದಾರು. ಸಿ. ಆರ್ ಫೂರ್ಣ ಆಶೀರ್ವಾದ ನೀಡಿಯಾರು. ಅಭಿಪ್ರಾಯು ಬದಲಾ ಯಿಸುವ ಸ್ವಾತಂತ್ರ್ಯ ಆನನ್ನು ಹಿಂತರೆಗೆಡಹುವವರ್—ವ್ಯಕ್ತಿ ಸ್ವಾತಂತ್ರ್ಯನವಗಿದೆ. ಆದುದರಿ ದಲೇ ಸರ ಕಾರದ ಒಳಗಿದ್ದು ಹೊರಗುಳಿದ ಈ ಬಗೆಯ ಮೂಜಿ ಶಾಕರು ಆಕ ಳಿತ ಯಂತ್ರದ ಕಿವಿಹೊಕ್ಕ ಪಿಡಿಸಲು ಮು ದ.ಗುತ್ತಾರೆ; ದೇಶಕ್ಕೆ ಗಂಡಾಂತರ ತರುತ್ತಾರೆ; ಇವರಿಗೆ ಸರಕಾರದ ಅಂತ ಸ್ಥತ್ವದ ಅರಿವೂ ಇವೆ; ಜನರನ್ನು ತಮಗೆ ಬೇಕಾದ ದಾರಿಗೊಯ್ಯಬಹುದಾದ ಕೌ ಸಲವೂ ಇದೆ. ಮೂಜಿ ರಾಜ-ಮಹಾರಾ ಜರ ಸಂಪ್ರೆ ನಿಮಿತ್ತ; ಆದರೆ, ಸಂಜೆ ಕಾ ಕು ಸಪ್ಪೆ ಭಾರತದ ಜನಸಂಪ್ರೆ ಸ್ಯಾಸಿಯೆ ಅಪರಿಮಿತ, ವಿಶ್ಲಾಕಶೀಲ. ಇಂತಹವರ ಶಿಕ್ಷೆಗೊಂದು ಅವಕಾಶ ಕಲ್ಪಿಸಿಕೊಡುವುದು ನವ್ಮ ಪ್ರಜಾಕ್ತೆಯ ಲ್ಲೇ ಅಸಾಧ್ಯವಾದರೆ, ಅವರ ಕೀಟಲೆಯ ನ್ನು ಸಹಿಸುವುದೂ ಅಶಾರ್ಯ. ಸರಕಾ ರವೇ ಸತ್ಯ ಶಕ್ತಿಯ ಸದುಪಯೋಗ ಮಾಡಿಸಿಕ್ಕೆಳ್ಳಬೇಕೆಂದು ಇವರು ಛಳ ತೊಡ ವುದು ಮೂರ್ಖ ನ್ಯಾಯ?

ಮೂರ್ಖ ಮುಚ್ಚೆತ್ತೆ?

ನಂಬಿದರಿ ಮಾತು ತಪ್ಪಲಿಲ್ಲವೆನ್ನು ವುದಕ್ಕಿಂತ ಮಿಸ್ಸಿಂ ಲೀಡರು ನಂಬಿದರಿ ಕೈಯ್ಯಿಂದ ಬಲ ತ್ಕಾರವಾಗಿ ಮಲಪ್ಪು ರಂ ಜೆಲ್ಲಿಯುವ್ಮ ತೆಗೆದುಕೊಂಡಿತು ಎಂದರೆ ಸರಿಯೊಂದ ತ್ತದೆ. ಸಂಯುಕ್ತ ರಂಗದ ಅಂಗಪಕ್ಷಗಳಲ್ಲಿ ಕೆಲವರ ವ ತ್ತು ಇತರ ರಾಜಕೀಯ ಪಕ್ಷಗಳ ಪ್ರಬಲ ವಿರೋಧವನ್ನು ಕಡೆಗಣಿಸಿ ನಂಬೂ ದರಿಯವರು ಮುಸ್ಲಿಂ ಪ್ರಧಾನೆ ಜಲ್ಲಿಯನ್ನು ರಚಿಸಿಯೇ ಬಿಟ್ಟರು. ಆವರ ಸರ್ಕಾರದ ಬಾವಿರುವ್ಲಿ ಒಂ ದೊಂದೇ ಹೊಳ ಮಾಟೆ ಮಾಡು ತ್ತಿರುವಾಪ ಮೂಡಿದ ಪಾಟೆಗಳು ಮತ್ತ ಪ್ಪು ದೊಡ್ಡದಾಗುತ್ತಿರುವಾಗ ನಂಬೂ ದರಿ ಮಲಕ್ಕಾರಂ ಕಾಂಗ್ರೀಟಿನಿಂದ ಮುಸ್ಲಿಂ ಲೀಗ ಮೂಚುವುನ್ನು ತುಂಬಲು ಅಂತಿಮವಾಗಿ ನಿರ್ಧರಿಸಿದ್ದು ಅವರ ಎದೆ ಕಾರಿಕೆಯ ಮತ್ತು ಜನಮತ ನಿರ್ಲಕ್ಷ್ಯದ ಪ್ರತೀಕ.

ಸುತ್ತ ಮಾಟೆಯಿರುವಾಗ ಒಂದಕ್ಕೆ ಕಾಂಕ್ರೀಟು ತುಂಬಿದರೂ ಅದು ಬೆಸೆ ಯುತ್ತದೆಂಬ ವಿಶ್ವಾಸವಿಲ್ಲ. ಕದ್ದುಕ್ಕಿಮನೆ ಬೆಸೆಯುಬಹುದ. ಆದರೆ ಮುಂದೊಂದು ದಿನ ಕಾಂಕ್ರೀಟು ಮಣ್ಣಾ ಸೇರಿ ಯೇ ಜರ್ರೆಂದು ಜರಿಯ ಬಹುದು. ಆಗ ನಂಬೂದರಿ ಏನ, ಮಾಡುತ್ತಾರೆ? ದೇಶ ದ ನಾನಾ ಮೂಲೆಗಳಿಂದ ವಬಲ್ಪ್ಪಗಂ ಜಿಲ್ಲಾ ವಿರೋಧಿ ಚಳವಳಿ ಗಾರರು ಕೇ ರಳ ತಲ ಪಿದ್ದಾರೆ, ಅಲ್ಲಿ ವಿರೋಧೀ ಚಳವಳಿ ನಡೆಯುತ್ತಿದೆ. ಸರಕಾರ ಇದನ್ನು ನಿಯಂತ್ರಿಸಲು ಆಶ್ಯವಾ ಯ ಪ್ರಯತ್ನಗ— ಲಂ ಪ್ರಹಾರಾ ದಿಗಳು, ವಿವಿಧ ಕಾನೂನು ಕಾಯಿದೆ ಗಳ ಬೆಂಬಲ ಪಡೆಯು ಬಹುದು. ಅಂ ಧ್ರದಲ್ಲಿ ಜ್ವಾಲೆ ಕುಸು ಶಾಂತವಾಯ್ತೇ ಎಂದು ಕೇಳುವಾಗ, ಕೇರಳದಲ್ಲೂ ಹುರು ವಾತ್ತು ಅಂತ ಉತ್ತರ ಬಂತು. ರಾಜ್ಯ ಕೀಯ ಸ್ವಾರ್ಥ ವಿನ್ನೂ ಮಾಡಿತ್ತ ದೆಂಬುದಕ್ಕೆ ಬೇರೆ ಸಾಕ್ಷ್ಯಗಾಕೆ ಬೇಕು?

ವಾರ್ಷಿಕ ಮಹಾಸಭೆ ಮತ್ತು ಸ್ನೇಹಕೂಟ ಸಮಾರಂಭ

'ಅಣ್ಣಾ ಸ್ವಲ್ಪ ಯೋಚಿಸಿ ನೋಡು. ಅವಳ ರಕ್ಷಣೆಯ ಭಾರವನ್ನು ಹೊತ್ತವನು ನಾನು. ನಮ್ಮನೆ ದುಡುಕಬೇಡ' ಎಂದು ಸಮಾಧಾನ ಪಡಿಸಿದನು. ಆಗ ನಾಗಸಿರಿ 'ದುಗ್ಗಣ್ಣ ನಾನು ಸತ್ಯದ ಮಗಳಾದರೆ ಗೆದ್ದು ಬರುತ್ತೇನೆ. ನೀನೇನೂ ಚಿಂತಿಸಬೇಡ' ಎನ್ನುತ್ತಾಳೆ, ದುಗ್ಗಣ್ಣನಿಗೆ ದ:ಖವುಕ್ಕಿ ಬರುತ್ತದೆ.

ನಾಗಸಿರಿ ಕೂಟದ ಕಳಕ್ಕೆ ಬರುವಾಗ ಎಳು ರಯ್ಯ ಕೊಪ್ಪರಿಗೆಯಲ್ಲಿ ಎಣ್ಣೆ ಕುದಿಯುತ್ತಿತ್ತು. ನಾಗಸಿರಿ ಕೊಪ್ಪರಿಗೆಯ ವಂಚೆ ನಿಂತ, ತಲೆಕೂದಲನ್ನು ಬಿಚ್ಚಿ ಬೆನ್ನಿನ ಮೇಲೆ ಹರಡಿ ಕೊಂಡು "ನಾನು ಸತ್ಯದ ಮಗಳಾದರೆ ನನ್ನ ಗಂಡನಿಗೆ ದ್ರೋಹ ಬಗೆದಿಲ್ಲವಾದರೆ, ಈ ಕೊಪ್ಪರಿಗೆಯಿಂದ ಮೇಲಕ್ಕೆ ಬರುತ್ತೇನೆ" ಎಂದು ಸುಡುವ ಸಜ ಹೇಳಿ ಕೊಪ್ಪರಿಗೆಗೆ ಹಾರುತ್ತಾಳೆ. ಮೂರು ಸಲ ಮುಳುಗಿ ಎದ್ದು ಬರುತ್ತಾಳೆ. ಕೂದಲಲ್ಲಿ ಇಳಿಯುತ್ತಿದ್ದ ಎಣ್ಣೆಯನ್ನು ಹಿಂದಿ ಕೂದಲನ್ನು ಮೇಲೆ ಝಾಡಿಸುತ್ತಾಳೆ. ಆದ ಕೂದಲಿನಿಂದ ಹಾರಿದ ಎಣ್ಣೆ ಹತ್ತಿರ ದಲ್ಲಿ ಕಳಿತವರ ಮೈಯಲ್ಲಿ ಬೊಕ್ಕೆ ಎಬ್ಬಿಸುತ್ತದೆ. "ನನ್ನ ಸತ್ಯ ನೋಡಿದಿರಾ" ಎನ್ನುತ್ತಾಳೆ.

ಶ್ರೀ ಕೃಷ್ಣ ಮುಂದೆ ಬಂದು, "ಕೆಲವರು ಮಾತ್ರ ನೋಡಿದರಂತೆ. ಈ ಸತ್ಯ ಸಾಕಾಗದು" ಎನ್ನುವನು.

'ಇನ್ಯಾವ ರೀತಿಯಲ್ಲಿ ಸತ್ಯ ತೋರಿಸಬೇಕು?' ಎಂದುದಕ್ಕೆ "ಏಳು ಮಲೆಯ ಬಿಳಿ ಸಂಕಮಲೆ ಸರ್ಪನನ್ನ ಚಿನ್ನ ಮತ್ತು ಅರಿಷಿಣ ಹುಡಿಯಲ್ಲಿ ಹೋಳಾಡಿಸಿ ಕೊಂಡು ಕರೆದು, ತರಬೇಕು. ಆದರ ತಲೆಯಿಂದ ಪಾಲದ ವರೆಗೆ ಪೂರಿ ಬಾಯಿಗೆ ಫಿಂಬೆಹಣ್ಣು ಇಡಬೇಕು' ಎನ್ನುತ್ತಾನೆ.

ಬಿಳಿ ಸಂಕಮಲೆ ಹಾವನ್ನು ಕರೆದುತರುತ್ತಾರೆ. ನಾಗಸಿರಿ ಶ್ರೀಕೃಷ್ಣ ಹೇಳಿದ ಹಾಗೇ ಮಾಡುತ್ತಾಳೆ. ಆಗ ಕೂಡಾ ಶ್ರೀ ಕೃಷ್ಣ "ಈ ಸತ್ಯ ಸಾಕಾಗದು. ಕರಿಯ ಸಂಕಮಲೆಯನ್ನು ಕರಬೇಕು" ಎನ್ನುತ್ತಾನೆ. ಕರಿಯ ಸಂಕಮಲೆಯ ತಲೆಯಿಂದ ಪಾಲದ ವರೆಗೆ ಪೂರಿ, ಆದರ ಬಾಯಿಗೆ ಫಿಂಬೆಹಣ್ಣು ಇಡುವುದಕ್ಕೆ ಮೊದಲು ನಾಗಸಿರಿ, "ನೀನಾಗಿ ಕಚ್ಚಬಡಬೇಡ. ನನ್ನನ್ನು ಕಚ್ಚಲು ಹಿಲುಕಿಸಬೇಡ. ಮುಂಗೈಗೆ ಸುತ್ತು ಹಾಕಿ ಅಂಗೈಗೆ ಕಚ್ಚು' ಎಂದು ಕೈಮುಂದೆ ಮಾಡುತ್ತಾಳೆ. ಕರಿಯ ಸಂಕಮಲೆ ಸರ್ಪ ಅವಳ ಮುಂಗೈಗೆ ಸುತ್ತು ಹಾಕಿ ಅಂಗೈಗೆ ಕಚ್ಚುತ್ತದೆ. ಒಂದು ಕಡೆಯಲ್ಲಿ ನಾಗಸಿರಿ, ಇನ್ನೊಂದು ಕಡೆಯಲ್ಲಿ ಸರ್ಪ, ಹೀಗೆ ಇಬ್ಬರೂ ಪ್ರಾಣ ಬಿಡುತ್ತಾರೆ.

ಶ್ರೀಕೃಷ್ಣ, ನಾಗಸಿರಿ ಸತ್ಯ ವರ್ತನೆಯನ್ನು ತಿಳಿಸಲು ಬ್ರಹ್ಮದೇವರಲ್ಲಿಗೆ ಹೋಗುತ್ತಾನೆ. "ಬ್ರಹ್ಮದೇವಾ, ನಾಗಸಿರಿ ಸತ್ಯ ಹೇಳಿ ಸತ್ಯ ಹೋದಳೆ." ಎನ್ನುತ್ತಾನೆ.

"ಹಾಗಾದರೆ ನನಗೀಗ ಅಷ್ಟಕ್ಕೆ ಬರಲು ಸಮಯವಿಲ್ಲ. ಸೂರ್ಯಚಂದ್ರರಿದ್ದಲ್ಲಿಗೆ ಹೋಗು" ಎನ್ನುವನು ಬ್ರಹ್ಮದೇವ.

ಸೂರ್ಯಚಂದ್ರರಲ್ಲಿಗೆ ಹೋದಾಗ, "ನಮಗಿಬ್ಬರಿಗೂ ಈಗ ಒಟ್ಟಿಗೆ ಬರಲು ಸಾಧ್ಯವಿಲ್ಲ. ಮುಂದಿನ ಅಮವಾಸ್ಯೆಯಂದು ಖಂಡಿತ್ತೇವೆ. ಅಷ್ಟರ ವರೆಗೆ ಕೆಳಿದ್ದಲ್ಲೆಲ್ಲ ಸತ್ಯವೆಂದೂ ನಂಬಬಾರದು. ಅಸತ್ಯವೆಂದೂ ಹೇಳಬಾರದ, ತಟಸ್ಥ ವೃತ್ತಿಯನ್ನು ಧರಿಸಬೇಕು.

ಇನ್ನೊಂದು ಸಂಗತಿ ಎಂದರೆ ಎಲ್ಲಾ ಸಾಧುಸತ್ಪುರುಷರು ಚಮತ್ಕಾರಗಳನ್ನು ಮಾಡಿಯೇ ಮಾಡುತ್ತಾರೆ ಎಂದೇನೂ ಇಲ್ಲ. ಚಮತ್ಕಾರ ಮಾಡುವ ಶಕ್ತಿ ಇದ್ದೂ ಚಮತ್ಕಾರ ಮಾಡದ ಎಷ್ಟೋ ಸತ್ಪುರುಷರನ್ನು ನಾನು ಕಂಡಿದ್ದೇನೆ.

ಆದೇ ಹೊತ್ತಿಗೆ ಚಮತ್ಕಾರ ಮಾಡಬಲ್ಲವರೆಲ್ಲರೂ ಸತ್ಪುರುಷರೇ ಇರುತ್ತಾರೆ ಎಂಬ ನಿಯಮವಿಲ್ಲ. ವಿಜ್ಞಾನದೊಂದು ಚಮತ್ಕಾರ ಮಾಡಿತೋರಿಸುತ್ತಾರೆ, ಭಾವಿಕ ಜನರಲ್ಲಿ ಅಂಧವಿಶ್ವಾಸ ಹುಟ್ಟಿಸಿ ವಂಚಿಸುವ ಧೂರ್ತರೂ ಎಷ್ಟೋ ಜನರಿದ್ದಾರೆ. ಭೌತಿಕ ವಿಜ್ಞಾನದ ಉಪಾಸಕರು ಪ್ರತಿನಿತ್ಯ ಹೊಸ ಹೊಸ ಚಮತ್ಕಾರ ಮಾಡಿತೋರಿಸುತ್ತಲಿದ್ದಾರೆ. ಆದರೆ ಅವರು ಕಾರ್ಯ-ಕಾರಣ ಸಂಬಂಧವನ್ನು ತಿಳಿಸಿ ಹೇಳುತ್ತಾರೆ. ಆದ್ದರಿಂದ ಅಂತ ಅದ್ಭುತ ಸಂಗತಿ ಮುಂದೆ ಚಮತ್ಕಾರಗಳೆಂದು ತಿಳಿಯಲ್ಪಡುವುದಿಲ್ಲ. ಮತ್ತು ವೈಜ್ಞಾನಿಕ ಚಮತ್ಕಾರ ಮಾಡುವವರಿಗೆ ಅ ವಿಷಯದಲ್ಲಿ ಯಾರೂ ಸತ್ಪುರುಷರೆಂದು ತಿಳಿಯುವದಿಲ್ಲ! ಒಂದು ಚಮತ್ಕಾರ ಮಾಡಿದಾತ ಏನು ಬೇಕಾದರೂ ಚಮತ್ಕಾರ ಮಾಡಬಹುದೆಂದೂ ಯಾರೂ ನಿರೀಕ್ಷಿಸುವುದಿಲ್ಲ.

ನಮ್ಮ ದೇಶದಲ್ಲಷ್ಟೇ ಅಲ್ಲ, ಇಡೀ ಜಗತ್ತಿನಲ್ಲಿ ಇಂಥ ಸಂಖ್ಯಾತೀತ ವ್ಯವಹಾರ ಕುಶಲರು ಸಹ ಚಮತ್ಕಾರಗಳನ್ನು ಕಂಡು ಹುಚ್ಚರಾಗಿ ಬಿಡುತ್ತಾರೆ! ಮತ್ತು ಅದರಲ್ಲಿ ಈಶ್ವರೀ ಅಂಶ ಇರುವದೆಂದೂ ನಂಬುತ್ತಾರೆ. "ಚಮತ್ಕಾರ ತೋರಿಸದ ಹೊರತು ನವಸ್ಯಾಕಾರ ಸಿಗುವುದಿಲ್ಲ" ಎಂದೂ ಜನ ಹೇಳುತ್ತಾರೆ. ಆದರೆ 'ಇಂಥ ಚಮತ್ಕಾರ ನಂಬುವದೆಂದರೆ ಬುದ್ಧಿಯ ಇನ್ಯಾಕರ' ಎಂದೇ ನಾನು ಹೇಳುತ್ತೇನೆ.

ಒಳ್ಳೊಳ್ಳೇ ಜನರು ಸಹ ಚಮತ್ಕಾರಗಳ ಮೇಲೆ ವಿಶ್ವಾಸ ಇಟ್ಟುಕೊಂಡಿರುತ್ತಾರೆ. ಮತ್ತು ಸಂಕಷ್ಟ ಪಡುವವರಿಗೆ ನಾವಿ ಕರೆಂದೂ ಹೇಳುತ್ತಾರೆ. ಈ ಪ್ರಕಾರವಾಗಿ ಸ್ವೀಕರಿಸಿದ ಅಂಧ ತತ್ವಕ್ಕೆ ಪರಿಹಾರವೇ ಇಲ್ಲ!

ಚಿಮತ್ಕಾರ ಮತ್ತು ಅಂಧವಿಶ್ವಾಸ

(ಕಾಕಾ ಕಾಲೇಲ್ಕರ)

ಚಮತ್ಕಾರಗಳ ಬಗ್ಗೆ ನನಗೆ ಅವಿಶ್ವಾಸವಿಲ್ಲ. ನನಗೆ ಉತ್ಪ್ರೇಕ್ಷೆಯು ಗೊತ್ತಾದ ದಂಥ ಅಸಂಖ್ಯ ಘಟನೆಗಳು ಜಗತ್ತಿನಲ್ಲಿ ನಡೆಯುತ್ತಿರುತ್ತವೆ. ಆದರೆ ನಾವು ಕೇಳುವ ಚಮತ್ಕಾರಗಳಲ್ಲಿ ಬಹುಭಾಗ ಕಾಲ್ಪನಿಕವಿರುತ್ತವೆ. ಮೂಲ ಘಟನೆಯನ್ನು ವಿಶ್ಲೇಷಿಸಿಕೊಳಿಸಿಯೋ ಇಲ್ಲವೆ ಅತಿಶಯೋಕ್ತಿ ಮಾಡಿಯೋ ಹೇಳಿದ ಘಟನೆಗಳು ಎಷ್ಟೋ ಇರುತ್ತವೆ. ಆದ್ದರಿಂದ "ಕೇಳಿದ ಸಂಗತಿಗಳನ್ನೆಲ್ಲ ನಂಬಬಾರದು" ಎಂಬುದೇ ಸುರಕ್ಷಿತ ಮಾರ್ಗವಿರುತ್ತದೆ.

ಗಂಧದ ಕಾಷ್ಠ ಮಾಡಿ ಎರಡೂ ಹೆಣಗಳನ್ನು ಹೊತ್ತುಕೊಂಡು ಫೀನು ಕಾಷ್ಠಕ್ಕೆ ಸುತ್ತು ಬರಬೇಕು' ಎನ್ನುತ್ತಾರೆ. ಶ್ರೀಕೃಷ್ಣ ಹಾಗೆಯೇ ಮಾಡುತ್ತಾನೆ.

ಅವಶ್ಯವಾಸ್ಯೆಯಂದು ಸೂರ್ಯಚಂದ್ರರು ಬರುತ್ತಾರೆ. ಬೆಂಕಿ ಹತ್ತಿಕೊಳ್ಳುವುದಕ್ಕೆ ಮೊದಲೇ ನಾಗಸಿರಿ ಚಿನ್ನದ ದುಂಬಿಯಾಗಿ ಬ್ರಹ್ಮನ ಜಾದುಬುಡದಲ್ಲಿ ಬೀಳುತ್ತಾಳೆ. ಬ್ರಹ್ಮ ಅವಳಿಗೆ ಮತ್ತೆ ಮೈ, ಜೀವಕಳೆಕೊಟ್ಟು ನಾಗರಾಜನಿಗೆ ಮರುಮದುವೆ ಮಾಡಿಕೊಡುತ್ತಾನೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಹಾಗು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
S. C. 12/1969.
ತಿಮ್ಮಪ್ಪಯ್ಯರು ದಿ ಸೋಜ — ವಾದಿ
ಮತ್ತು
ನಾರಾಯಣ ಸೋಜ — ಪ್ರತಿವಾದಿ
ಮೂಡಿಗೆರೆ ತಾಲ್ಲೂ ಗುಮಿನಾ ಶಿರಾ ಎಸ್ಟೇಟ್ ಎಂಬಿತ್ತಾದ ಕೈಕಂಬ ಸೋಜರ ಮಗ, ನಾರಾಯಣ ಸೋಜರಿಗೆ
ಕೋರ್ಟು ಪ್ಯಾಂ ಪ್ರಕಾರ ತಿಳಿಸುವುದೇನೆಂದ್ರೆ—
ಮೇಲಿನ ವಾದಿಯಲ್ಲಿ ವಾದಿಯಿಂದ ಪ್ರಿನೋಟಿನ ಬಾಬ್ತು ಸಡಕೊಂಡ ಅಪೇಜನ್ನು ವಾದಿಸಿ ಕೊಡಿದ್ದು ದರಿಂದ ಸದ್ರಿ ವಾದಿಯು ಮೂಡಿದಾವೆಯು ಕಾ.3-7-1969ಕ್ಕೆ ನಿಮ್ಮ ಹಾಜರಾತಿಗೆ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಯೂ ವಕೀಲರ ಮುಖಾಂತರಾ ಹಾಜ್ರಾಗಿ ನಿಮ್ಮ ಆಕ್ಷೇಪಣೆ ಇದ್ದರೆ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಡಿಕ್ರಿಯನ್ನು ಮುಂದುವರಿಸಲಾದೀತು. ತಿಳಿದಿರಲಿ.
N. J. KADAMBA
Advocate
Belthangady.
ಬೆಳ್ತಂಗಡಿ, 8.6.69.

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಶ್ಚಯವಾಗಿಯೂ ಗುಣಪಡಿಸುತ್ತದೆ.
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty, at the Navayuga Press, Udipi, S. India.

ನವಯುಗ

26—6—1969

೧೦
ಪೈಸ

ಕಥಾಪ್ರಪಂಚ

ಕಲಾದೇವಿ

ಬರೆದವರು: ಶ್ರೀ ಸ. ನಾರಾಯಣ

"ಅಣ್ಣಯ್ಯ....'

'ಏನವ್ವಿ...'

"... ....."

"ಅದೇನು ಸಂಕೋಚವಿಲ್ಲವೇ ಹೇಳಮ್ಮ.... ನನ್ನ ಹತ್ತಿರವೂ ಅಷ್ಟು ನಾಚಿಕೆಯೇ...'

"ನಾಚಿಕೆ ಅಲ್ಲಣ್ಣ...'

"ಮರೆತಿದ್ದೆ ನೀನು ಕಾಲೇಜಿನ ಮೆಟ್ಟಿನ ಮಲ್ಲಿ ಅಲ್ಲವೇ....'

'ಥೂ.... ಹೋಗಣ್ಣ.'

"ಅದಿರ್ಲಿ....ಕಂಜಿ ಕಾಲೇಜು ಮುಗಿದ ಕೂಡಲೇ ಪಟ್ಣಕ್ಕೆ ಹೋಗದೆ ಒಂದೇ ಬಾರಿಗೆ ಇಲ್ಲಿಗೆ ಬಂದು ನಿಂತಿದ್ದೀಯಲ್ಲ? ಏನೋ ಹೇಳಬೇಕೆಂದು ಬಂದಿದ್ದೀಯು.... ಹೇಳಪಿ ಸವ್ಯನೆ...'ಎಂದೆ.

"ನನ್ನ ಗೆಳತಿಯೊಬ್ಬಳು ಬಹಳ ದಿವಸಗಳಿಂದ ನಿನ್ನ ಪರಿಚಯ ಮಾಡಿಕೊಳ್ಳಬೇಕೆಂದು ನನ್ನಷ್ಟು ಒತ್ತಾಯಪಡಿಸುತ್ತಿದ್ದಳು. ಈ ದಿನ ಕರೆದುಕೊಂಡು ಬಂದಿದ್ದೇನೆ. ಕರೆಯಲೇನಣ್ಣಾ...' ಎಂದು ಸಂತೋಷದಿಂದಲೇ ಪ್ರಶ್ನಿಸಿದಳು ನನ್ನ ತಂಗಿ ಪ್ರಭಾ.

"ಅದಕ್ಕೆ ಇಷ್ಟು ಪೀಠಿಕೆ ಏನವ್ವ.... ಎಲ್ಲಮ್ಮ ನಿನ್ನ ಗೆಳತಿ?"

"ಮುಂದಿನ ವರ್ಷದಾಲಯದಲ್ಲಿ ಕೂತಿದ್ದಾಳಣ್ಣ"

"ನನ್ನ ಪರಿಚಯ ಏಕಾಂತವಮ್ಮ? ನಾನೇನು ಮಂತ್ರಿನೇ,ಅಧಿಕಾರಿಯೇ ಅಥವಾ ಕಲಾವಿದನೇ ಮಾಪ್ಪುದೂ ಅಲ್ಲ...' ಎಂದು ಅತ್ತೆತ್ತ ನೋಡಿದೆ. ಪ್ರಭಾಳ ಮುಖ ಫಸ್ಟೇಜವಾಗಿತ್ತು.

"ನೀನು ಕೂಡಾಕೊಳ್ಳಮ್ಮ. ನಿನ್ನ ಗೆಳತಿಯನ್ನೂ ಇಲ್ಲಿಗೆ ಕರೆಸಣ್ಣ 'ಎಂದು ಕಾರ್ಯಕ್ರಮಕ್ಕೆ ಕೈಕೋರಿಸಿದೆ. ಪ್ರಭಾ ಕಾರ್ಯಕ್ರಮಕ್ಕೆ ಬೇಕಾಗಿರುವ ಸಿದ್ಧತೆಗಳಲ್ಲಿ ತೊಡಗಿಕೊಂಡಳು.

"ಬಾಯರ್" ಎಂದು ಕೂಗಿದೆ. ಆಫೀಸ್ ಬಾಯ್ ಚಂದ್ರು ಬಂದು,'ಚಂದ್ರು ರೀಡಿಂಗ್ ರೂಂನಲ್ಲಿ ಯಾರೋ ಪ್ರಭಾ ಗೆಳತಿ ಇದ್ದಾರಂತೆ ಅವರನ್ನ ಸ್ವಲ್ಪ ಇಲ್ಲಿಗೆ ಕರೆದು ತಂದು ಬಿಡು. ಇಗೆಯೇ ಕ್ಯಾಂಟೀನ್‌ಗೆ ಹೋಗಿ ಟೀಫ್ಲಾಗಿ ಹೇಳಿ ಬಾ' ಎಂದೆ.

"ಆಗಲಿ ಸಾರ್" ಎಂದು ಚಂದ್ರು ಜೋಟು ಜೋರಾದ.

ಪ್ರಭಾಳ ವಯಸ್ಸಿನ ಫಲವಾಗಿರಬೇಕು ಉಡುಪು ಧರಿಸಿದ್ದ ಒಬ್ಬ ಕಾಲೇಜು ವಿದ್ಯಾರ್ಥಿನಿ ಬಾಗಿಲನ್ನಿ ಕಾಣಿಸಿಕೊಂಡಳು. ಪ್ರಭಾ ಎದ್ದು ನಿಂತು "ಬಾರೇ ಲಲಿತಾ, ಇದೇ ನನ್ನಣ್ಣನ ಆಫೀಸ್ ರೂಂ" ಎಂದಳು.

ಲಲಿತಾ ಮೆಲ್ಲಗೆ ಬಂದು ಪ್ರಭಾ ಬಳಿ ನಿಂತಳು.

"ಕುಳಿತುಕೊಳ್ಳಿ" ಎಂದೆ. ಪ್ರಭಾ, ಲಲಿತಾ ಇಬ್ಬರೂ ಕುಳಿತುಕೊಂಡರು.

ಪ್ರಭಾ ತನ್ನ ಗೆಳತಿಯ ಪರಿಚಯ ಮಾಡಿಕೊಡಲು ಮುಂದಾದಳು.

"ಇವಳೇ ಕಣಣ್ಣಾ ಲಲಿತಾ. ನನ್ನ ಜೊತೆಗೇ ಬಿ.ಎ.ಯಲ್ಲಿ ಓದುತ್ತಿದ್ದಾಳೆ. ಇವಳಿಗೂ ಸಂಗೀತ, ಸಾಹಿತ್ಯ ಎಂದರೆ ಬಹಳ ಅಭಿಮಾನ. ತುಂಬ ಜಾಣೆ, ಎಂದಳು ಪ್ರಭಾ.

"ಸಂತೋಷ" ಎಂದು ಕೈ ಮುಗಿದೆ.

'ಇವರೇ ಲಲಿತ. ನನ್ನಣ್ಣ ಮೂರ್ತಿ. ಪ್ರಸಿದ್ಧ ಬರಹಗಾರರು' ಎಂದಾಗ ಲಲಿತಾ 'ನಿಮ್ಮನ್ನು ಭೇಟಿ ಮಾಡಿದ ದು ಒಂದು ಸಂಯೋಗ. ನಮಸ್ಕಾರ' ಎಂದು ಕೈ ಜೋಡಿಸಿದಳು.

ಲಲಿತಾ ನವಖಿ ಚಿರಪರಿಚಿತಳಲ್ಲವಾಗಿದ್ದರೂ ಪರಿಚಯವಿಲ್ಲದಿರಲಿಲ್ಲ. ಆದೂ ಮುಖ ಪರಿಚಯ. ಕೆಲವು ಕಾಲೇಜಿನ ನಾಟಕಗಳಲ್ಲಿ ಮತ್ತು ಆಮೆಚೂರ್ ನಾಟಕ ಪ್ರದರ್ಶನಗಳಲ್ಲಿ ನಟಿಸಿತ್ತಿದ್ದರಿಂದ ನನಗೆ ಅವಳ ಪರಿಚಯವಿತ್ತಷ್ಟೆ.

'ನಿಮ್ಮ ಅನೇಕ ಲೇಖನ, ಕಥೆ, ಕಾದಂಬರಿಗಳನ್ನ ಓದಿದ್ದೇನೆ. ನೀವು ತುಂಬಾ ಪ್ರತಿಭಾವಂತರು ಸಾರ್" ಎಂದು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದಳು ಲಲಿತಾ.

"ನಾನೊಬ್ಬ ನಾಮೂನ್ಯ ಬರಹಗಾರನಮ್ಮ ಆಷ್ಟೇ. ಫಿಮ್ಮೆ ಮೆಚ್ಚಿಗೆ ಎಫಿದ್ದಕೂ ಅಭಿವೂನದಿಂದಸ್ಟೆ" ಎಂದೆ.

ಹಂದ್ರು ಉಪಹಾರ ತಂದ; ಎಲ್ಲರೂ ಕೂಡಿ ಅದನ್ನು ವಂಗಿಸಿದೆವು.

ಕಛೇರಿ ಬಿಡುವ ಮುಂಚೆ ಲಲಿತಾ "ನೆನಪಿರಲಿ ಸಾರ್ ಮರೆಯ ಬೇಡಿ" ಎಂದಳು.

ನಾನು ಮನೆ ತಲಪುವ ವೇಳೆಗೆ ರಾತ್ರೆ ಹತ್ತುಗಂಟೆಗೂ ವಿತ್ಯೆತ್ತು. ನನ್ನ ತಂಗಿ ಪ್ರಭಾ ಕೋಣೆಯಲ್ಲಿ ಕಾಲೇಜಿನ ಪಾಠಗಳನ್ನ ಓದ ತ್ತಾ ಕುಳಿತಿದ್ದಳು. ಪ್ರಭಾಗೆ ನನ್ನ ಅಭಿಪ್ರಾಯವನ್ನು ತಿಳಿಸಲೇಬೇಕೆಂದು ನಿರ್ಧರಿಸಿಕೊಂಡೇ ಮನೆ ಸೇರಿದ್ದೆ.

ಊಟ ಮುಗಿಸಿ ಕೋಣೆಗೆ ಬಂದೆ. ಪ್ರಭಾ ಪುಸ್ತಕವನ್ನು ಮುಚ್ಚಿಟ್ಟು, "ಬಾ ಅಣ್ಣಾ" ಎಂದು ಕರೆದಳು. ಅವಳ ಎದುರಿನಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಕೊಂಡೆ.

ಸ್ವಲ್ಪಕಾಲ ಯಾರೊಬ್ಬರೂ ಮಾತನಾಡಲಿಲ್ಲ.

ಸ್ವಲ್ಪ ಸಮಯದ ನಂತರ ನನ್ನ ತಂಗಿಯೇ "ಏನಣ್ಣಾ" ಎಂದು ಪ್ರಶ್ನಿಸಿದಳು.

"ಸಂಜೆ ಬಂದಿದ್ದ ನಿನ್ನ ಗೆಳತಿಗೆ ಸ್ವಲ್ಪ ಸ್ವಾತಂತ್ರ್ಯ ಜಾಸ್ತಿ ಎಂದು ಕಾಣುತ್ತದೆ ಹೌದೇನಮ್ಮ?"

"ಯಾಕಣ್ಣಾ...?"

"ನಿನ್ನ ಗೆಳತಿ ನಾಟಕಗಳಲ್ಲಿ ಪಾತ್ರ ವಹಿಸುವುದು ನಿಜ ತಾನೇ?"

"ಪದರಲ್ಲಿ ತಪ್ಪೇನಣ್ಣಾ?"

"ತಪ್ಪಿನ ಪ್ರಶ್ನೆಯಲ್ಲಮ್ಮ. ನೀವು ಆ ಹುಡುಗಿಯೊಂದಿಗೆ ಅಷ್ಟಾಗಿ ಸ್ನೇಹ ಬೆಳೆಸುವುದು ನನಗಿಷ್ಟವಿಲ್ಲಮ್ಮ. ಅಲ್ಲದೆ ಆ ಹುಡುಗಿ ಸ್ವಲ್ಪ....."

"ಲಲಿತಾ ಅಂತಹವಳಲ್ಲಣ್ಣಾ...ಕಲೆಯ ಬಗ್ಗೆ ಅವಳಿಗೆ ವಿಶೇಷ ಪ್ರೀತಿ...."

"ನೀನು ಏನೇ ಹೇಳು ಪ್ರಭಾ ಕಡಗೇ ಕೋ...."

"ಹೊಯ್ಸಳ ವಿಷ್ಣುವರ್ಧನನ ಪಟ್ಟ ವಹಿಸಿ ಶಾಸ್ತಲಾ ದೇವಿ ಜನಸಾಮಾನ್ಯರೆದುರಿನಲ್ಲಿ ದೇವಾಲಯಗಳಲ್ಲಿ ನರ್ತಿಸುತ್ತಿದ್ದಳು ಎಂದು ನೀನೇ ಹೇಳುತ್ತೀಯಲ್ಲಣ್ಣಾ"

"ಎಲ್ಲಿಗೆಲ್ಲಿಯ ಸಂಬಂಧ ಪ್ರಭಾ.... ನಿನ್ನ ಸ್ನೇಹ ಎಷ್ಟೋ ಆಷ್ಟರಲ್ಲಿರಲಿ ಎಂದೇ ನನ್ನ ಅಭಿಪ್ರಾಯ" ಎಂದೆ.

ಪ್ರಭಾಳ ಮುಖ ಬಾಡಿತು.

ತಂದೆ "ಏನೋ ಮೂರ್ತಿ ಅವಳ ಬಲವಟ್ಟು, ಈ ಕಾಲದಲ್ಲಿ ಹೆಣ್ಣು ಹುಡಗಿಯರನ್ನು ಕಾಲೇಜಿಗೆ ಕಳುಹಿಸುವುದೇ ದೊಡ್ಡ ತಪ್ಪು" ಎಂದರು.

"ಛೇ ಛೇ...ಹಾಗೇನೂ ಇಲ್ಲಣ್ಣಾ ಪರೀಕ್ಷೆ ಹತ್ತಿರಕ್ಕೆ ಬಂತು, ಚೆನ್ನಾಗಿ ಓದಿಕೋ ಎಂದು ಹೇಳಿದೆ" ಎಂದು ವಿಷಯವನ್ನು ಮರೆಮಾಚಿ ಹೊರಕ್ಕೆ ಬಂದೆ.

ಸುಮಾರು ಎಂಟು ವರ್ಷಗಳು ಕಳೆದು ಹೋದವು.

ಒಂದು ಬಾರಿ ರೂಪುದೋ ಕೆಲಸದ ನಿಮಿತ್ತ ಚಿಕ್ಕಮಗಳೂರಿಗೆ ಹೋಗಲೇ ಬೇಕಾದ ಪ್ರಸಂಗ ಒದಗಿ ಬಂತು.

ಸುಭದ್ರಸ್ಥಿತಿಯಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

94 ವರ್ಷಗಳಿಂದ ಹಬ್ಬುವ "ವಿಜಯಾ ಬ್ಯಾಂಕ್"ನ್ನು

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈವಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯಕನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕರ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

Phone— 5711, 5712, 5713 } 3 Lines.

ಕೆಲಸ ಮುಗಿಯಲು ಹೆಚ್ಚು ದಿನ ಹಿಡಿಯಿತು. ನಾಲ್ಕನೆಯ ದಿನ ಊರಿಗೆ ಹಿಂದಿರುಗುವುದೆಂದು ನಿರ್ಧರಿಸಿದೆ. ಆದರೆ ಚಿಕ್ಕಮಗಳೂರಿನ ನನ್ನ ಅಭಿಮಾನಿ ಮಿತ್ರರು ನನ್ನ ಪ್ರಯಾಣಕ್ಕೆ ಸಮ್ಮತಿಸಲಿಲ್ಲ.

"ಇದ್ದ ಮೂರು ದಿನವೂ ನಿನ್ನ ಕಾರ್ಯ ಕಲಾಪಗಳಲ್ಲಿಯೇ ಮುಗಿದು ಹೋದವು. ಒಂದು ದಿನವಾದರೂ ಒಟ್ಟಾಗಿ ಸಂತೋಷದಿಂದ ಇರುವುದು ಬೇಡವೇ ಮೂರ್ತಿ? ನೀನು ಬರುವುದೇ ಆಪರೂಪ ಅಲ್ಲದೆ ಈ ಊರಿನಲ್ಲಿ ವಾಡಿಕಲಾ ನಿಕೇತನದವರು ಅಭಿನಯಿಸುತ್ತಿರುವ 'ಕಲಾದೇವಿ' ನಾಟಕವನ್ನು ನೀನು ನೋಡಲೇಬೇಕು ಮೂರ್ತಿ. ಅತ್ಯುತ್ತಮ ನಾಟಕ..." ಎಂದು ಮಿತ್ರ ಅಹಂತ. ಮಿತ್ರ ಕೆಲ ಗೆಳೆಯರು ಅವನ ಮಾತಿಗೆ ಸಹಮತಿಸಿ ಜಯಕಾರ ಮಾಡಿದರು.

ಗತ್ಯಂತರವಿಲ್ಲದೆ ನಾಲ್ಕನೇ ದಿನವೂ ಚಿಕ್ಕಮಗಳೂರಿನಲ್ಲಿ ಉಳಿಯಲೇ ಬೇಕಾಯ್ತು.

೦ ೦ ೦

ವಾಡಿ ಕಲಾ ನಿಕೇತನದವರ 'ಕಲಾದೇವಿ' ನಾಟಕ ಕೀರ್ತಿ, ಜಾಣ ಎರಡನ್ನೂ ಗಳಿಸಿತ್ತು. ಕಥಾನಾಯಕಿಯ ಪಾತ್ರವಹಿಸುತ್ತಿದ್ದ ಪಟು ತಪ್ಪ ಅಮೋಘ ನರ್ತನೆ, ಗಾಯನ, ನಟನೆಗಳಿಂದ ಕಲಾಭಿಮಾನಿಗಳ ಮನಸ್ಸನ್ನು ಸೂರೆಗೊಂಡಿದ್ದಳು. ನಿಶ್ಯವೂ ಕಿಕ್ಕಿರಿದ ಜನ ಸಂದಣಿಯಿಂದ ನಾಟಕ ಪ್ರದರ್ಶನವಾಗಿತ್ತು.

ಕಲಾದೇವಿ ನಾಟಕ, ನಾಟ್ಯ ಹಾಗೂ ಸಂಗೀತ ಕಲೆಯನ್ನು ಅಧ್ಯಾತ್ಮಿಸಿ ಸಮನಾದಿಂದ ದೂಷಣೆಗೆ ಒಳಗಾಗಿ ವೈಷಿ ಬಾಂಧವರಿಂದ ಕಷ್ಟನಷ್ಟಗಳನ್ನೇ ಅನುಭವಿಸಿ ಕಲೆಯು ಕೀರ್ತಿಯನ್ನು ಉಳಿಸಲೆಂಬ ಕಾಗಿಯೇ ಹೋರಾಡಿ ಪ್ರಾಣಾರ್ಪಣೆ ಮಾಡಿದ ಕಲಾಭಿಮಾನಿ ಕನ್ಯೆಯೊಬ್ಬಳ ಮರುಂತ ಕಥೆ. ನಾಟಕದ ಆದಿಯಿಂದ ಅಂತ್ಯದ ವರೆಗೆ ಪ್ರೇಕ್ಷಕನಲ್ಲಿ ಮಹತ್ವವನ್ನು ಸೆಟೆದು ಹೃದಯವಮ್ಮ ಮಿಡಿಯುತ್ತಿತ್ತ. ಕಲೆಗಾಗಿ ಕಲಾವಿದನ ಶ್ರೇಷ್ಠತೆ ಅಂತರಂಗವನ್ನು ಪ್ರದರ್ಶಿಸುವ ಪ್ರಮುಖ ದೃಶ್ಯದಂತಿತ್ತು ನಾಟಕ. ಕಥಾನಾಯಕಿಯ ಪಟುನೆ ಹೃದಯ ಸ್ಪರ್ಶಿ. ಅವಳ ಅಸಹಜ ನಟನೆಯನ್ನು ಕಂಡು ಕಂಬನಿದಿರೆಯ ಪ್ರೇಕ್ಷಕನೇ ಇರಲಿಲ್ಲ.

ಮೊದಲ ಪ್ರವೇಶದಲ್ಲಿಯೇ ಕಥಾನಾಯಕಿ ಯಾರು ಎಂಬುದನ್ನು ಅರಿತು ಆಶ್ಚರ್ಯಪಟ್ಟೆ. ನನ್ನ ತಂಗಿ ಪ್ರಭಾಳ ಗೆಳತಿ ಲಲಿತಾ ಎಂಬುದಲ್ಲಿ ಸಂಶಯವೇ ಉಳಿಯಲಿಲ್ಲ.

ನಾಟಕದ ಅಂತ್ಯಕ್ಕೆ ಕೆಲವಿಮರ್ಶಗಳು ಮುಂದೆ ನಾಟಕ ಸಂಸ್ಥೆಯ ಹುಡುಗಪ್ಪೊಬ್ಬ ನನ್ನ ಬಳಿಗೆ ಬಂದ. ಚಿಕ್ಕ ಚೀಟಿಯೊಂದನ್ನು ಕೈಗಿತ್ತು "ಪರಾಗಲಲ್ಲೇ ಕಾದಿರುತ್ತೇನೆ. ದಯವಿಟ್ಟು ಬನ್ನಿ ಸಾರ್" ಎಂದು ಹೇಳಿ ಹೊರಟುಹೋದ.

ನನಗೆ ಆಶ್ಚರ್ಯವಾಯಿತು. ಅವಳ ನೆನ್ನೆನ್ನೆ ಮಿಕಿ ಮಿಕಿ ನೋಡಿದ. ಚೀಟಿ ಬಿಚ್ಚಿ ಓದಿದೆ. ಆದರಲ್ಲಿ "ಅಣ್ಣಯ್ಯ" ನಿನ್ನನ್ನು ಕಂಡು ಸಂತೋಷವಾಯಿತು. ಪ್ರದರ್ಶನ ಮುಗಿದ ಕೂಡಲೆ ಗ್ರೀನ್

(ಪಸ್ಟೊಂದನೇ ಪುಟ ನೋಡಿರಿ)

ಫೋನ್ : 526

ಸಂಪುಟ ೪೮

ಸಂಚಿಕೆ ೪೦

VOL. 48

No. 40

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೬—೬—೧೯೬೯

1921 ಸ್ಥಾಪನೆ

ಸ್ಥಾಪಕರು:

ದಿ| ಎ. ಬಿ. ಶೆಟ್ಟರು

ಸಂಪಾದಕರು:

ಕೆ. ಹೊನ್ನಯ್ಯ ಶೆಟ್ಟಿ

ಹೊಸ ತಲಾಶೆ

ಬಿಹಾರದ ಕಾಂಗ್ರೆಸ್ ಪ್ರಾಯುಕ್ತ್ವದ ಸಂಯುಕ್ತ ಸರಕಾರದ ಮುಖ್ಯಮಂತ್ರಿ ಹರಿಹರ ಸಿಂಗರು ಎಲ್ಲರನ್ನೂ ತೃಪ್ತಿಪಡಿಸಲು ಹೋಗಿ ಯಾರನ್ನೂ ತೃಪ್ತಿಪಡಿಸಲಾರದೆ ಎಲ್ಲರಿಂದಲೂ ದೂರವಾಗಬೇಕಾದ ಪ್ರಸಂಗ ಬಂದಿತು. ತನ್ನ ಸರಕಾರವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂದು ಅವರು ಮಂತ್ರಿಮಂಡಳವನ್ನು ಸಾಕಷ್ಟಿಸುವಷ್ಟು ವಿಸ್ತರಿಸಿದ್ದು, ಅವರಲ್ಲಿ ಮಂತ್ರಿ ಶಾಖೆಗಳನ್ನು ಹಂಚಲು ಅಸಮರ್ಥವಾದದ್ದು, ಈ ಸಂಬಂಧದಲ್ಲಿ ಕೇಂದ್ರಕ್ಕೆ ದೂರು ಹೋದದ್ದು; ಈ ನಡುವೆ ಹರಿಹರ ಸಿಂಗರ ನ್ಯಾಯಕತ್ವದಲ್ಲಿ ಕಾಂಗ್ರೆಸಿಗರಿಂದೇ ಬೇಸರ ಬಂದದ್ದು.... ಇತ್ಯಾದಿ ಇತ್ಯಾದಿ ಎಲ್ಲರಿಗೂ ತಿಳಿದುಬಂದಿರುವಂಥದ್ದು. ವಿಧಾನ ಸಭಾಧಿವೇಶನ ನಡೆಯಲಾರಂಭವಾದರೂ ಅವರು ತನ್ನ ಸಚಿವರನ್ನು ತೃಪ್ತಿಪಡಿಸಲಾರದೆ ಹೋದರು. ಹಾಗಾಗಿ ಸಂಯುಕ್ತ ಸರಕಾರದ ಅಂಗ ಪಕ್ಷಗಳು ತಮ್ಮ ಬೆಂಬಲವನ್ನು ನೀಡದೆ ಇದ್ದುದರಿಂದ ಹರಿಹರ ಸಿಂಗರು ಸೋತು ಕೊಡಬೇಕಾಯಿತು. ಪಶ್ಚಿಮ ಸಂಗೋಪನಾ ಶಾಖೆಯ ಬೇಡಿಕೆಯನ್ನು ಮತಕ್ಕೆ ಹಾಕಿದಾಗ, ಅದು ಸಮಾನ ೨೦ ಮತಗಳಿಂದ ತಿರಸ್ಕೃತವಾಯ್ತು. ಅಂದರೆ, ೧೦—೧೦ ಬೆಂಬಲಿಗರು ಸರಕಾರಕ್ಕೆ ವಿರುದ್ಧವಾಗಿ ಮತ ಚಲಾಯಿಸಿದರು. ಇವರಲ್ಲಿ ಶೋಷಿತ ದಳ, ಹಲ್ ಜಾರ್ಖಂಡ್ ಪಕ್ಷಗಳ ಸದಸ್ಯರೂ ಮಂತ್ರಿಗಳೂ ಇದ್ದರೆಂಬುದು ತಮಾಶೆಯ ವಿಷಯ.

ಶೋಷಿತದಳ ಮತ್ತು ಹಲ್ ಜಾರ್ಖಂಡ್ ಪಕ್ಷದ ಸದಸ್ಯರು ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ಹೊಂದಿದ್ದರೂ ಸರಕಾರದ ಪರಾಜಯವನ್ನೇಕೆ ಬಯಸಿದರು? ಹರಿಹರ ಸಿಂಗರೊಡನೆ ವಿರಸವುಂಟಾಗಿದ್ದರೆ, ವಿಧಾನ ಸಭೆಯ ಹೊರಗೇನೇ ತಮ್ಮ ಬೆಂಬಲವನ್ನು ಹಿಂತೆಗೆಯಬಹುದಾಗಿತ್ತು. ಇಂತಹ ಯಾವ ಪರಿಸ್ಥಿತಿಯೂ ಇಲ್ಲದೆ ನೇರವಾಗಿ ವಿಧಾನ ಸಭೆಯಲ್ಲೇ ಸರಕಾರದ ವಿರುದ್ಧ ಮತ ಚಲಾಯಿಸಿ ಬಿಹಾರದಲ್ಲಿ ಬಹುತ್ಕ್ರಾಂತಿ ಪಡಿಸಿದೆಯೆಂದು ತಮ್ಮ ಬೆಪ್ಪನ್ನು ತಾನೇ ತಟ್ಟಿಕೊಳ್ಳುವ ಈ ಪಕ್ಷದ ಧೀಡಿವಾಳಕೋರತನದ ಪ್ರತೀಕವಲ್ಲದೆ ವಸ್ತ್ರನೂ ಅಲ್ಲ. ಈ ರೀತಿ ಬೆನ್ನಿಗೆಲ್ಲಿ ಇರಿಯುವ, ಕೃಷ್ಣಾವತಾರದಲ್ಲಿ "ಪಕ್ವಾಂತರ" ಹೊಂದುವ ಹೊಸ ವಿಧಾನವೊಂದಕ್ಕೆ ಬಿಹಾರ ನಾಂದಿಯಿಟ್ಟಿತು.

ಆದರೂ ಹಿಂದಿನ ದಿನ ವಿರೋಧಪಕ್ಷಕ್ಕೇ ಯರೆಲ್ಲ. ಸಭೆಕೇರಿ, ಹರಿಹರ ಸಿಂಗರೆ ಸರಕಾರವನ್ನು ಉರುಳಿಸುವ ಮತ್ತು ಕಾಂಗ್ರೆಸ್ಸೇತರ ಸಂಯುಕ್ತರಂದದ ಸರಕಾರ ರಚಿಸುವ ಬಗ್ಗೆ ಮೊತುಕತೆ ನಡೆಸಿದ್ದರೆಂದು ತಿಳಿದು ಬಂದಿದೆ. ಈ ಸಭೆಯಲ್ಲಿ ಶೋಷಿತದಳ ಮತ್ತು ಹಲ್ ಜಾರ್ಖಂಡ್ ದಳದ ಸದಸ್ಯರೂ ಭಾಗವಹಿಸಿದ್ದಾರೋ ಇಲ್ಲವೋ ಎಂದು ಸ್ಪಷ್ಟವಾಗಿ ತಿಳಿದಿಲ್ಲ. ಅದೇನಿದ್ದರೂ ಈ ಎರಡು ಪುಟ್ಟ ಪುಂಪುಗಳನ್ನು ತಮ್ಮ ಡಾಳಗಳಲ್ಲಾಗಿ ಆಡಲು ಕಾಂಗ್ರೆಸ್ಸೇತರರು ನಿರ್ಧರಿಸಿದ್ದೂ ಆದರಂತೆ ಈ ದಳಗಳು ತಲೆಕೆಳಗು ವ್ಯವಹಾರ ನಡೆಸಿದ್ದೂ, ೧೧೫ ವಿಧಿಗಳ ಅಲ್ಪ ಆಯುಷ್ಯದಲ್ಲೇ ಹರಿಹರ ಸಿಂಗರು ನಿಗ್ಗುಸರಿಯೂಬದ್ದು. ಮುಂದಿನ ಹುರ್ಘಟನೆಗಳು ತನಗೆ ಸೋಲುಂಟಾದೊಡನೆಯೇ ಸಿಂಗರು ರಾಜ್ಯಪಾಲರನ್ನು ಭೆಟ್ಟಿ ಮಾಡಿ ರಾಜೀನಾಮೆ ನೀಡಿದರು. ಹೊದಲೇ ಫರ್ಧಾಸಿದ್ಧಂತೆ ಶೋಷಿತ ಪಸ್ವಾನ್ ಶಾಸ್ತ್ರಿಗಳು ತಮ್ಮ ಬೆಂಬಲಿಗರ ಪಟ್ಟಿಯೊಪ್ಪಿಸಿ, ಸರಕಾರ ರಚಿಸಲು ಅನುಮತಿ ಪಡೆದರು. ಈಗ ಮತ್ತೆ ಶಾಸ್ತ್ರಿ ಮುಖ್ಯಮಂತ್ರಿಯಾಗಿದ್ದಾರೆ. ಅವರ ಮೂರು ದಿನಗಳ ಆರಂಭದಲ್ಲಿ ಪ್ರತಿಜ್ಞಾವಿಧಿ ಮುಗಿಸಿತು. ಮುಂದೆ ಖಾತೆ ಹಂಚಿಕೆಯಾಗಬೇಕಾಗಿದೆ. ಮಂತ್ರಿಗಳು ನಲವತ್ತಕ್ಕೂ ಮಿಟ್ಟಿದರೂ ಮುಟ್ಟಬಹುದು.

ಶೋಷಿತಪಸ್ವಾನ್ ಶಾಸ್ತ್ರಿಯವರ ಸಂಯುಕ್ತರಂಗದ ಅಂಗ ಪಕ್ಷಗಳು ರೂಪುಗೊಂಡಿದ್ದು ಹೇಗೆ? "ಇದೊಂದು ಪವಿತ್ರ ಗೋವಲ್ಲ" ಎಂಬ ನಾಯಕರ ಉದ್ಗಾರದಲ್ಲೇ ಗೊತ್ತಾಗುತ್ತದೆ. ಭಾರತೀಯ ಕ್ರಾಂತಿದಳ, ಜನಸಂಘ, ಪ್ರಸಾಸಮ್ಯುನಿಸ್ಟ್ ಹೀಗೆ ಹಲವು ಪಕ್ಷೇತರ ಸಂಯುಕ್ತರಂದ. ಇವೆಲ್ಲವುಗಳ ಜನಹಿತಕಾರಿ ಧೋರಣೆಗಳನ್ನು ಕಾರ್ಯಕೃತಗೊಳಿಸಲು ಕಾರ್ಯಕ್ರಮವೊಂದು ತಯಾರಾಗಿದ್ದು ಅದನ್ನು ಕಾರ್ಯರೂಪಕ್ಕೆ ತರಲು ಹೊಸ ಸರಕಾರ ಪ್ರಯತ್ನಿಸುವುದೆಂದು ತಿಳಿದುಬಂದಿದೆ. ಇಂತಹ ಕಾರ್ಯಕ್ರಮ ರೂಪಿಸುವಷ್ಟು ಸುಲಭದಲ್ಲಿ ಅದನ್ನು ಕಾರ್ಯರೂಪಕ್ಕೆ ತರಲಾಗುವುದಿಲ್ಲ ಎಂಬುದು ಎಲ್ಲ ಸಂಯುಕ್ತರಂದದ ಸ್ವಯಂ ಅನುಭವ. ಬಿಹಾರದ ಹೊಸ ಸಂಯುಕ್ತರಂದದಲ್ಲಿ ಹರಿಹರ ಸಿಂಗರನ್ನು ಪದಚ್ಯುತಿಗೊಳಿಸುವಲ್ಲಿ ಕ್ರಿಯಾಶೀಲರಾದ ಶೋಷಿತ ದಳ ಹಲ್ ಜಾರ್ಖಂಡ್ ಪಕ್ಷಗಳೂ ಸೇರಿವೆಯೆಂಬುದನ್ನು ಮರೆಯಬಾರದು.

ಗಣರಲ್ಲಿ ಕಾಂಗ್ರೆಸ್ ಬೆಂಬಲ ಪಡೆದು ಭೋಲಾ ಪಸ್ವಾನ್ ಶಾಸ್ತ್ರಿ ಸರಕಾರ ರಚಿಸಿದ್ದರೂ ಕಾಂಗ್ರೆಸ್ ಮಧ್ಯಾವಧಿಯಲ್ಲೇ ತನ್ನ ಬೆಂಬಲವನ್ನು ಹಿಂತೆಗೆದುಕೊಂಡುದರಿಂದ ಶಾಸ್ತ್ರಿ ರಾಜೀನಾಮೆ ಕೊಡಬೇಕಾಗಿ ಬಂದುದನ್ನೂ ಹೆನಪಿಸಬಹುದು. ಅಂದು ತನಗಾದ ಅಪಹಾಸದ ಸೇಡನ್ನು ಇಂದವರು ತೀರಿಸಿಕೊಂಡರೆ? ದು ಹೇಳಬೇಕೆ? ಅಥವಾ ಹರಿಹರ ಸಿಂಗರ ವ್ಯವಹಾರಗಳಿಂದ ಸ್ವತಃ ಕಾಂಗ್ರೆಸ್ ಸದಸ್ಯರೇ ಬೇಸರಗೊಂಡಿರುವಾಗ ಪರ ಪಕ್ಷೀಯರು ದೂರ ಸರಿಯುವುದು ಆಶ್ಚರ್ಯವಲ್ಲವೆಂದು ಸಮಾಧಾನ ತಾಳಬೇಕೆ? ಆದರೆ, ಒಂದು ಮಾತು ನಿಜ. ಭೋಲಾ ಪಸ್ವಾನ್ ಶಾಸ್ತ್ರಿಗಳು ಕಾಂಗ್ರೆಸ್ ಸಂಯುಕ್ತ ಸರಕಾರವನ್ನು ಉರುಳಿಸಲು ಉಪಯೋಗಿಸಿಕೊಂಡ ಶೋಷಿತ ದಳ ಮತ್ತು ಹಲ್ ಜಾರ್ಖಂಡ್ ಪಕ್ಷಗಳು ಮುಂದೆ ಬಿಹಾರದ ರಾಜ್ಯಕೀಯದಲ್ಲಿ ಸ್ವಿತ್ಯಂತರ ಮಾಡುವ ಚಟಕ್ಕೆ ಅಂಟಿಕೊಳ್ಳಲಾರವೆಂದೇನು ಗ್ಯಾರಂಟಿ? ಇದೇ ರೀತಿ ಅವು ನಡೆದುಕೊಂಡರೆ, ಅದೂ ಒಂದು ರಾಜಕೀಯ ವಿನೋದ!

ಹರಿಹರ ಸಿಂಗರ ಸರಕಾರ ಉರುಳಿಕೊಂಡುದರಿಂದ ಜನತೆಗಾಗಲಿ ಪಕ್ಷವೂ ಆದಲಿಲ್ಲ ಏಕೆಂದರೆ, ಸಿಂಗ ಸರಕಾರ ತನ್ನ ಅಧಿಕಾರಾವಧಿಯಲ್ಲಿ ಜನಹಿತಕ್ಕೆಂತಲೂ ಸರಕಾರದ ರಕ್ಷಣೆಯಲ್ಲೇ ಆಸಕ್ತವಿತ್ತು. ಶಾಸ್ತ್ರಿ ಸರಕಾರವೂ ಇದಕ್ಕೆ ಹೊರತಾಗಬಹುದೆಂದು ತೋರುವುದಿಲ್ಲ. ಗರ್ಜಿರ ವಧ್ಯಾವಧಿ ಚುನಾವಣೆಗಳು ಉಳಿದಿರುವಾಗಲೀ ಒಳಿದುದಾಗಲೀ ಕೆಟ್ಟುದಾಗಲೀ ರಾಜ್ಯಕೀಯ ಸ್ಥಿರತೆಯನ್ನು ತಂದಿದ್ದರೆ, ಬಿಹಾರಕ್ಕೆ ಮತ್ತಷ್ಟು ಅವಿಶ್ಚಿತತೆಯನ್ನೇ ತಂದುಕೊಟ್ಟಿವೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಆಯ್ದುಕೊಂಡ ಈ ಪರಿಸ್ಥಿತಿಯನ್ನು ಬೇಡವೆಂದರೂ ಅನುಭವಿಸಲಾದುವಷ್ಟು ಅನುಭವವೇ ಬೇಕು ತಾಳಿ!

ಎರಡು ದುರಂತಗಳು

ಉತ್ತರದ ಕಾಶ್ಮೀರು ಇಳೆ ಭೋಕರ ರೇಲು ಅಪಘಾತವೊಂದು ನಡೆದ ಈ ವರ್ಷದ ದೊಡ್ಡ ದುರಂತಗಳಲ್ಲಿ ಒಂದೆನಿಸಿತು. ಮುನೂರು ನೂರಕ್ಕೆ ಬಹಳ ಕಡಿಮೆಯೆನ್ನಿಸಬಹುದು ನಾವು ಮಾತ್ರವೇ ನೋವುಗಳಿಗೆ ಕಾರಣವಾದ ಈ ದುರಂತ ವಿಧ್ವಂಸಕ ಕೃತ್ಯವೆಂಬ ಸಂದೇಶ. ಈ ರೀತಿಯಲ್ಲಿ ಸಂಚಾರ ಮಾಡುವವರು ತಮ್ಮ ಬಳಿ ಹಣ ತರುತ್ತಾರೆಂದೂ ಈ ದಾರಿ ಹಿಡಿದಿಂದಲೂ ಕೊಲೆ—ಸುಲಿಗೆಗಳಿಗೆ ಕೆಸರಾದದ್ದೆಂದೂ ಹೇಳಲಾಗುತ್ತಿದೆ. ಅಂತಲೇ ಹಣಾಸೆಯಿಂದ ರೇಲು ಉರುಳಿಸಲು ಹಳಿತಪ್ಪಿಸಲಾಯಿತೆಂಬ ಫಿಶ್ಪ್ಲೇಟ್— ಬೋಲ್ಟ್‌ಗಳನ್ನು ತಪ್ಪಿಸುವ ಆಟು ಈ ಅಪಘಾತಕ್ಕೆ ಕಾರಣವಾಯ್ತು ಎಂದು ಊಹೆ. ಆದೇನೇ ಇದ್ದರೂ ಫಿಶ್ಪ್ಲೇಟ್ ಮತ್ತು ಬೋಲ್ಟ್‌ಗಳನ್ನು ತಪ್ಪಿಸಿದ್ದು ನಿಜ. ಉದ್ದೇಶಪೂರ್ವಕ ಇರಲಿ, ಕಾರ್ಯ ವಿಧ್ವಂಸಕ; ಪರಿಣಾಮ ರುದ್ರ ಭಯಂಕರ.

ಆದೇದಿನ ದಕ್ಷಿಣದ ಸೆಕೆಂದರಾಬಾದ-ಬೆಂಗಳೂರು ಎಕ್ಸ್‌ಪ್ರೆಸ್ ಬಂಡಿಯೂ ಹೈದರಾಬಾದಿಂದ ಸುಮಾರು ೧೦೦ ಕಿಲೋಮೀಟರು ದೂರದಲ್ಲಿ ಮೆಹಬೂಬ ನಗರದ ಸಮೀಪ ಹಳಿತಪ್ಪಿ ಅಪಘಾತಕ್ಕೆ ಕಂಭವಿಸಿತು. ಇದರಿಂದ ನಾವು ಸಂಭ್ರಮಿಸಲಿಲ್ಲ. ಬೆಸರಿಕೆಯೆ ನೋವು ಪಡೆಯಿತು. ಈ ದುರ್ಘಟನೆಯಲ್ಲೂ ಫಿಶ್ ಪ್ಲೇಟ್ ಮತ್ತು ಬೋಲ್ಟ್‌ಗಳನ್ನು ಕಳಚಿ ಹಾಕಿದ್ದ ಕಂಡುಬಂದಿದೆಯೆಂದು ವರದಿ. ಇದೂ ವಿಧ್ವಂಸಕ ಕೃತ್ಯವೆಂದು ಬೇರೆ ಹೇಳಬೇಕಾಗಿಲ್ಲ. ಪ್ರತ್ಯೇಕ ತೆಲಂಗಾಣವಾದಿಗಳೇ ಈ ಕೃತ್ಯಗಳಿಗೆ ಪ್ರೇರಕರೆಂದು ಒಂದು ಅಭಿಪ್ರಾಯ. ಮುಹಾರಾಷ್ಟ್ರವಾದಿಗಳು ಬೆಳಗಾಂವಿಯ ಬಳಿಯು ರೇಲ್ವೆ ದುರಂತಕ್ಕೆ ಕಾರಣರಾಗಿ ನಾವು ಘೋಷಣೆಗಳಿಗೆ ಕಾರಣಪುರುಷರಾದರೆಂದು ಹೇಳಲಾಗಿತ್ತು. ಹೀಗೆಲ್ಲಾ ವಿಧ್ವಂಸಕ ಕೃತ್ಯಗಳು ಸ್ವಾರ್ಥಪ್ರೇರಿತವಾಗಿ ನಡೆಯುತ್ತ ಹೋದರೆ, ರಾಷ್ಟ್ರದ ಬಗ್ಗೆ ಅಭಿಮಾನ ಹೇಗೆ ಮೂಡೀತು? ನಮ್ಮ ಜನರಿಗೆ ರಾಷ್ಟ್ರದ ಬಗ್ಗೆ ಆದರ ಗೌರವಕ್ಕಿಂತ ಬಗ್ಗೆ ಸರಿಯಾದ ಪ್ರಜ್ಞೆ ಮೂಡಿ ವಂತೆ ನಾವು ಮೂಡಿಸಬೇಕೆಂದೇ ಹೇಳಬೇಕು. ಇದನ್ನು ಮಾಡದೆ ಬರಿಯ ಗಟ್ಟಿ ಕಾನೂನುಗಳಿಂದಷ್ಟೇ ಯಾರನ್ನೂ ಯಾವುದರಿಂದ ರಕ್ಷಣೆಯೂ ಆಗದು.

ಲೋಕತಂತ್ರದ ಮೂಲ ತತ್ವ

ವ್ಯಕ್ತಿಗತ ಸ್ವಾತಂತ್ರ್ಯ ಬೇಕೇಬೇಕು. ಆದರೆ ಮನುಷ್ಯರು ಮೂಲತಃ ಒಬ್ಬ ಸಾಮಾಜಿಕ ಪ್ರಾಣಿ ಎಂಬುದನ್ನು ಮಾತ್ರ ನಾವು ಮರೆಯಬಾರದು. ಸಾಮಾಜಿಕ ಪ್ರಗತಿಯ ಅವಶ್ಯಕತೆಗಳಿಗೆ ಹೊಂದಿಕೊಂಡು ತನ್ನ ವ್ಯಕ್ತಿತ್ವವನ್ನು ಎರಕಹೊಯ್ಯಲು ಕಲಿತುಕೊಂಡೇ ಮನುಷ್ಯನು ಇಂದಿನ ಸ್ಥಿತಿಗೆ ಮುಟ್ಟಿದ್ದಾನೆ. ಅಭಿಯಂತ್ರಿಕ ವ್ಯಕ್ತಿವಾದವು ವಸ್ತುಪರಿಗಳಿಗಷ್ಟೇ ನಿಜ ಕೆಲು. ನಾವಾದರೋ ವ್ಯಕ್ತಿಗತ ಸ್ವಾತಂತ್ರ್ಯ ಯಾದೂ ಸಾಮಾಜಿಕ ಸಂಘಟನೆಗಳಲ್ಲಿ ಸಮನ್ವಯವನ್ನು ಕಲಿಯಲೇಬೇಕು.

ನಿಜವಾದ ಲೋಕಶಾಹಿಯನ್ನು ಕೇಂದ್ರದಲ್ಲಿ ಕುಳಿತ ೧೫-೨೦ ಜನ ನಡಿಸಲಾರರು. ಕೆಳಗಿನ ಪ್ರತಿಯೊಂದು ಊರಿನ ಜನರಿಂದಲೇ ಮೊತ್ತ ಅದನ್ನು ನಡಿಸುವುದು ಸಾಧ್ಯ.

ನಮ್ಮಲ್ಲಿ ಉದಾಹರಣೆ ಮತ್ತು ಸಹಿಷ್ಣು

(ಪತ್ರನೇ ಪುಟ ನೋಡಿರಿ)

ಕಥಾಪ್ರಪಂಚ

ಕಲಾದೇವಿ

ಬರೆದವರು: ಶ್ರೀ ಸ. ನಾರಾಯಣ

"ಅಣ್ಣಯ್ಯ....'

'ಏನವ್ವ?...'

"... ....."

"ಕಡೇನು ಸಂಕೋಚವಿಲ್ಲವೇ ಹೇಳಮ್ಮ.... ನನ್ನ ಹತ್ತಿರವೂ ಅಷ್ಟು ನಾಚಿಕೆಯೇ...'

"ನಾಚಿಕೆ ಅಲ್ಲಣ್ಣ...."

"ಮರೆತಿದ್ದೆ ನೀನು ಕಾಲೇಜಿನ ಮೆಟ್ಟಿನ ಮೆಟ್ಟಿಲ್ಲಿ ಆಟ್ಟಿನೇ....'

'ಥೂ.... ಹೋಗಣ್ಣ.'

"ಅದಿರ್ಲಿ....ಸಂಜೆ ಕಾಲೇಜು ಮುಗಿದ ಕೂಡಲೇ ಮನೆಗೂ ಹೋಗದೆ ಒಂದೇ ಬಾರಿಗೆ ಇಲ್ಲಿಗೆ ಬಂದು ನಿಂತಿದ್ದೀಯಲ್ಲಾ? ಏನೋ ಹೇಳಬೇಕೆಂದು ಬಂದಿದ್ದೀಯ.... ಹೇಳದೆ ಸನ್ಮನೆ...'ಎಂದೆ.

"ನನ್ನ ಗೆಳತಿಯೊಬ್ಬಳು ಬಹಳ ದಿವಸಗಳಿಂದ ನಿನ್ನ ಪರಿಚಯ ಮಾಡಿಕೊಳ್ಳಬೇಕೆಂದು ನನ್ನನ್ನು ಒತ್ತಾಯಿಸುತ್ತಿದ್ದಳು. ಈ ದಿನ ಕರೆದುಕೊಂಡು ಬಂದಿದ್ದೇನೆ. ಕರೆಯಲೇನಣ್ಣಾ...' ಎಂದು ಸಂತೋಷದಿಂದಲೇ ಪ್ರಶ್ನಿಸಿದಳು ನನ್ನ ತಂಗಿ ಪ್ರಭಾ.

"ಅದಕ್ಕೆ ಇಷ್ಟು ಪೀಠಿಕೆ ಏನವ್ವ.... ಎಲ್ಲಮ್ಮ ನಿನ್ನ ಗೆಳತಿ?"

"ಮುಂದಿನ ವರ್ಷದಾಲಯದಲ್ಲಿ ಕೂತಿದ್ದಾಳಣ್ಣಾ"

"ನನ್ನ ಹತ್ತಿರ ಏಕಾಂತವಮ್ಮಾ? ನಾನೇನಾ ಮಂತ್ರಿನೇ,ಅಧಿಕಾರಿಯೇ ಅಥವಾ ಕಲಾವಿದನೇ ಹೊಸದೂ ಅಲ್ಲ...' ಎಂದು ಕತ್ತೆತ್ತಿ ನೋಡಿದೆ. ಪ್ರಭಾಳ ಮುಖ ಏಸ್ಟೇಜಾಗಿತ್ತು.

"ನೀನು ಕೂಡಾ ಕೊಳ್ಳಮ್ಮ, ನಿನ್ನ ಗೆಳತಿಯನ್ನೂ ಇಲ್ಲಿಗೆ ಕರೆಸೋಣ ಎಂದು ಕಾರ್ಯಕ್ರಮ ರೂಪಿಸಿದೆ. ಪ್ರಭಾ ಕಾರ್ಯಕ್ರಮ ವೈಲಿಕಾಳಿತುಕೊಂಡಳು.

"ಬಾಯ್" ಎಂದು ಕೂಗಿದೆ. ಆಫೀಸ್ ಬಾಯ್ ಬಂದು ಬಂದು ಕಿಂಗ್ 'ಚಂದ್ರ ರೀಡಿಂಗ್' ರೂಮಿನಲ್ಲಿ ಯೂಕೋ ಪ್ರಭಾ ಗೆಳತಿ ಇದ್ದಾರಂತೆ ಅವರನ್ನು ಸ್ವಲ್ಪ ಇಲ್ಲಿಗೆ ಕರೆದು ತಂದು ಬಿಡು. ಇಲ್ಲಿಗೆಯೇ ಕ್ಯಾಂಟೀನ್‌ನಿಂದ ಹೋಗಿ ಒಳ್ಳೆಗೆ ಹೇಳಿಬಾ" ಎಂದೆ.

"ಆಗಲಿ ಸರ್" ಎಂದ ಚಂದ್ರು ಹೊರಟು ಹೋದ.

ಪ್ರಭಾಳ ವಯಸ್ಸಿನ ಹುಡುಗಿಯರಿಗೆ ಉಡುಪು ಧರಿಸಿದ್ದ ಒರ್ವ ಕಾಲೇಜು ವಿದ್ಯಾರ್ಥಿನಿ ಬಾಗಿಲನ್ನು ಕಾಣಿಸಿಕೊಂಡಳು. ಪ್ರಭಾ ಎದ್ದು ನಿಂತು "ಬಾರೇ ಲಲಿತಾ, ಇದೇ ನನ್ನಣ್ಣನ ಆಫೀಸ್ ರೂಂ" ಎಂದಳು.

ಲಲಿತಾ ಮೆಲ್ಲಗೆ ಬಂದು ಪ್ರಭಾ ಬಳಿ ನಿಂತಳು;

"ಕುಳಿತುಕೊಳ್ಳಿ" ಎಂದೆ. ಪ್ರಭಾ, ಲಲಿತಾ ಇಬ್ಬರೂ ಕುಳಿತುಕೊಂಡರು.

ಪ್ರಭಾ ತನ್ನ ಗೆಳತಿಯ ಪರಿಚಯ ಮಾಡಿಕೊಡಲು ಮುಂದಾದಳು.

"ಇವಳೇ ಕಣಣ್ಣಾ ಲಲಿತಾ. ನನ್ನ ಜೊತೆಗೇ ಬಿ.ಎ.ಯಲ್ಲಿ ಓದುತ್ತಿದ್ದಾಳೆ. ಇವಳಿಗೂ ಸಂಗೀತ, ಸಾಹಿತ್ಯ ಎಂದರೆ ಬಹಳ ಅಭಿಮಾನ. ತುಂಬ ಜಾಣೆ, ಎಂದಳು ಪ್ರಭಾ.

"ಸಂತೋಷ" ಎಂದು ಕೈ ಮುಗಿದೆ.

'ಇವರೇ ಲಲಿತ' ನನ್ನಣ್ಣ ಮೂರ್ತಿ, ಪ್ರಸಿದ್ಧ ಬರಹಗಾರರು' ಎಂದಾಗ ಲಲಿತಾ 'ನಿಮ್ಮನ್ನು ಭೇಟಿ ಮಾಡಿದ ದು ಒಂದು ಸೌಭಾಗ್ಯ, ನಮಸ್ಕಾರ' ಎಂದು ಕೈ ಜೋಡಿಸಿದಳು.

ಲಲಿತಾ ನನಗೆ ಚಿರಪರಿಚಿತಳಲ್ಲವಾಗಿದ್ದರೂ ಪರಿಚಯವಿಲ್ಲದಿರಲಿಲ್ಲ. ಅದೂ ಮುಖ ಪರಿಚಯ. ಕೆಲವು ಕಾಲೇಜಿನ ನಾಟಕಗಳಲ್ಲಿ ಮತ್ತು ಅಮೆಚೂರ್ ನಾಟಕ ಪ್ರದರ್ಶನಗಳಲ್ಲಿ ನಟಿಸಿತ್ತಿದ್ದ ದರಿಂದ ನನಗೆ ಅವಳ ಪರಿಚಯವಿತ್ತಷ್ಟೆ.

'ನಿಮ್ಮ ಅನೇಕ ಲೇಖನ, ಕಥೆ, ಕಾದಂಬರಿಗಳನ್ನು ಓದಿದ್ದೇನೆ. ನೀವು ತುಂಬಾ ಪ್ರತಿಭಾವಂತರು ಸಾರ್' ಎಂದು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದಳು ಲಲಿತಾ.

"ನಾನೊಬ್ಬ ಸಾಮಾನ್ಯ ಬರಹಗಾರನಮ್ಮಾ, ನಿಮ್ಮ ಮೆಚ್ಚುಗೆಗೆ ಏನಿದ್ದರೂ ಅಭಿಮಾನದಿಂದಷ್ಟೆ" ಎಂದೆ.

ಚಂದ್ರು ಉಪಹಾರ ತಂದ; ಎಲ್ಲರೂ ಕೂಡಿ ಅದನ್ನು ವಂಚಿಸಿದೆವು.

ಕಫೆನಿ ಬಿಸುವ ಮುಂಜಿ ಲಲಿತಾ "ನೆನಪಿರಲಿ ಸಾರ್ ವಿಷಯ ಬೀಡಿ" ಎಂದಳು.

ನಾನು ಮನೆ ತಲಪುವ ವೇಳೆಗೆ ರಾತ್ರಿ ಹತ್ತುಗಂಟೆಗೂ ಮಿಕ್ಕಿತ್ತು. ನನ್ನ ತಂಗಿ ಪ್ರಭಾ ಕೋಣೆಯಲ್ಲಿ ಕಾಲೇಜಿನ ವಾರಗಳನ್ನು ಓದ ತ್ತಾ ಕುಳಿತಿದ್ದಳು. ಪ್ರಭಾಗೆ ನನ್ನ ಅಭಿಪ್ರಾಯವನ್ನು ತಿಳಿಸಲೇಬೇಕೆಂದು ನಿರ್ಧರಿಸಿಕೊಂಡೇ ಮನೆ ಸೇರಿದ್ದೆ.

ಊಟ ಮುಗಿದೊಡನೆಯೇ ಪ್ರಭಾಳ ಕೋಣೆಗೆ ಬಂದೆ. ಪ್ರಭಾ ಪುಸ್ತಕವನ್ನು ಮುಚ್ಚಿಟ್ಟು "ಬ್ಯಾ ಅಣ್ಣಾ" ಎಂದು ಕರೆದಳು. ಅವಳ ಎದುರಿನಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಕೊಂಡೆ.

ಸ್ವಲ್ಪಕಾಲ ಯಾರೊಬ್ಬರೂ ಮಾತನಾಡಲಿಲ್ಲ.

ಸ್ವಲ್ಪ ಸಮಯದ ನಂತರ ನನ್ನ ತಂಗಿಯೇ "ಏನಣ್ಣಾ" ಎಂದು ಪ್ರಶ್ನಿಸಿದಳು.

"ಸಂಜೆ ಬಂದಿದ್ದ ನಿನ್ನ ಗೆಳತಿಗೆ ಸ್ವಲ್ಪ ಸ್ವಾತಂತ್ರ್ಯ ಜಾಸ್ತಿ ಎಂದು ಕಾಣುತ್ತದೆ ಹಾದೇನಮ್ಮಿ"

"ಯಾಕಣ್ಣ....?"

"ನಿನ್ನ ಗೆಳತಿ ನಾಟಕಗಳಲ್ಲಿ ಪಾತ್ರ ವಹಿಸುವುದು ನಿಜ ತಾನೇ?"

"ಎದರಲ್ಲಿ ತಪ್ಪೇನಣ್ಣಾ?"

"ತಪ್ಪಿನ ಪ್ರಶ್ನೆಯಲ್ಲಮ್ಮಾ. ನೀವು ಆ ಹುಡುಗಿಯೊಂದಿಗೆ ಅಷ್ಟಾಗಿ ಸ್ನೇಹ ಬೆಳೆಸುವುದು ನನಗಿಷ್ಟವಿಲ್ಲಮ್ಮಾ. ಅಲ್ಲದೆ ಆ ಹುಡುಗಿ ಸ್ವಲ್ಪ....."

"ಲಲಿತಾ ಅಂತಹವಳಲ್ಲಣ್ಣಾ...ಕಲೆಯ ಬಗ್ಗೆ ಅವಳಿಗೆ ವಿಶೇಷ ಪ್ರೀತಿ...."

"ನೀನು ಏನೇ ಹೇಳು ಪ್ರಭಾ ಕಥೆಗೇ ಕೋ...."

"ಹೊಯ್ಸಳ ವಿಷ್ಣುವರ್ಧನನ ಪಟ್ಟ ಮಹಿಷಿ ಶಾಂತಲಾ ದೇವಿ ಜನಸಾಮಾನ್ಯರೆದುರಿನಲ್ಲಿ ದೇವಾಲಯಗಳಲ್ಲಿ ನರ್ತಿಸುತ್ತಿದ್ದಳು ಎಂದು ನೀನೇ ಹೇಳುತ್ತೀಯಲ್ಲಣ್ಣಾ"

"ಎಲ್ಲಿಗೆಲ್ಲಿಯ ಸಂಬಂಧ ಪ್ರಭಾ.... ನಿಮ್ಮ ಸ್ನೇಹ ಎಷ್ಟೋ ಅಪ್ಪರಿಲ್ಲರಲಿ ಎಂದೇ ನನ್ನ ಅಭಿಪ್ರಾಯ' ಎಂದೆ.

ಪ್ರಭಾಳ ಮುಖ ಬಾಡಿತು.

ತಂದೆ "ಏನೋ ಮೂರ್ತಿ ಅವಳ ಪಲಾಟು, ಈ ಕಾಲದಲ್ಲಿ ಹೆಣ್ಣು ಹುಡುಗಿಯರನ್ನು ಕಾಲೇಜಿಗೆ ಕಳುಹಿಸುವುದೇ ದೊಡ್ಡ ಶಪ್ಪ" ಎಂದರು.

"ಛೇ ಛೇ...ಹಾಗೇನೂ ಇಲ್ಲಣ್ಣಾ ಪರೀಕ್ಷೆ ಹತ್ತಿರಕ್ಕೆ ಬಂತು, ಚೆನ್ನಾಗಿ ಓದಿಕೋ ಎಂದು ಹೇಳಿದೆ" ಎಂದು ವಿಷಯವನ್ನು ಮರೆಸಿಬಿಟ್ಟೆ ಹೊರಕ್ಕೆ ಬಂದೆ.

ಸುಮಾರು ಎಂಟು ವರ್ಷಗಳು ಕಳೆದು ಹೋದವು.

ಒಂದು ಬಾರಿ ರಾಮುವುದೋ ಕೆಲಸದ ನಿಮಿತ್ತ ಚಿಕ್ಕಮಗಳೂರಿಗೆ ಹೋಗಲೇ ಬೇಕಾ ದ ಪ್ರಸಂಗ ಒದಗಿ ಬಂತು.

ಕೆಲಸ ಮುಗಿಯಲು ಮೂರು ದಿನ ಹಿಡಿಯಿತು. ನಾಲ್ಕನೆಯ ದಿನ ಊರಿಗೆ ಹಿಂದಿರುಗುವುದೆಂದು ನಿರ್ಧರಿಸಿದೆ. ಆದರೆ ಚಿಕ್ಕಮಗಳೂರಿನ ನನ್ನ ಅಭಿಮಾನಿ ಮಿತ್ರರು ನನ್ನ ಪ್ರಯಾಣಕ್ಕೆ ಸಮ್ಮತಿಸಲಿಲ್ಲ.

"ಇದ್ದ ಮೂರು ದಿನವೂ ನಿನ್ನ ಕಾರ್ಯಕ್ರಮ ಕಲಾಪಗಳಲ್ಲಿಯೇ ಮುಗಿದು ಹೋದವು. ಒಂದು ದಿನವಾದರೂ ಒಟ್ಟಿಗೆ ಸಂತೋಷದಿಂದ ಇರುವುದು ಬೇಡವೇ ಮೂರ್ತಿ? ನೀನು ಬರುವುದೇ ಅಪರೂಪ ಅಲ್ಲದೆ ಈ ಊರಿನಲ್ಲಿ ವಾಣಿ ಕಲಾ ನಿಕೇತನದವರು ಅಭಿನಯಿಸುತ್ತಿರುವ 'ಕಲಾದೇವಿ' ನಾಟಕವನ್ನು ನೀನು ನೋಡಲೇಬೇಕು ಮೂರ್ತಿ. ಅಪೂರ್ವ ನಾಟಕ..." ಎಂದು ಮಿತ್ರ ಅನಂತ. ಮಿಕ್ಕ ಕೆಲ ಗೆಳೆಯರು ಅವನ ಮಾತಿಗೆ ಸಹಮತಿ ಸೂಚಕಾರ ಮಾಡಿದರು.

ಗತ್ಯಂತರವಿಲ್ಲದೆ ನಾಲ್ಕನೇ ದಿನವೂ ಚಿಕ್ಕಮಗಳೂರಿನಲ್ಲಿ ಉಳಿಯುವಂತೆ ಆಯಿತು.

ಂ ಂ ಂ

ವಾಣಿ ಕಲಾ ನಿಕೇತನದವರ 'ಕಲಾದೇವಿ' ನಾಟಕ ಕೇರ್ತಿ, ಹಣ ಎರಡನ್ನೂ ಗಳಿಸಿತ್ತು. ಕಥಾನಾಯಕಿಯು ಪ್ರಾಪ್ತವಯಸ್ಕಳಾಗಿದ್ದ ಘಟ್ಟ ತನ್ನ ಅಮೋಘ ನರ್ತನ, ಗಾಯನ, ನಟನೆಗಳಿಂದ ಕಲಾಭಿಮಾನಿಗಳ ಮನಸ್ಸನ್ನು ಸೂರೆಗೊಂಡಿದ್ದಳು. ವಿಶೇಷವೂ ಕಿಕ್ಕಿರಿದ ಜನ ಸಂದಣಿಯಿಂದ ನಾಟಕ ಪ್ರದರ್ಶನವಾಗಿ ತ್ತು.

ಕಲಾದೇವಿ ನಾಟಕ, ನಾಟ್ಯ ಹಾಗೂ ಸಂಗೀತ ಕಲೆಯನ್ನು ಅಭ್ಯಾಸಿಸಿ ಸಮಾಜದಿಂದ ದೂರವಾಗಿದ್ದ ಬಂಧುವರ್ಗದವರಿಗೆ ಒಳಗಾಗಿ ವೈಷ್ಣವ ಕಷ್ಟನಷ್ಟಗಳನ್ನೇ ಅನುಭವಿಸಿ ಕಲೆಯು ಕೀರ್ತಿಯನ್ನು ಉಳಿಸಲಿಕ್ಕಾಗಿಯೇ ಹೋರಾಡಿ ಪ್ರಾಣತ್ಯಾಗ ಮಾಡಿದ ಕಲಾಭಿಮಾನಿ ಕನ್ನೆಯೊಬ್ಬಳ ಭಾವಂತ ಕಥೆ. ನಾಟಕದ ಆದಿಯಿಂದ ಅಂತ್ಯದ ವರೆಗೆ ಪ್ರೇಕ್ಷಕರನ್ನು ಮಹತ್ಪ್ರಪಂಚಕ್ಕೆ ಸೆಟೆದು ಹೃದಯವನ್ನು ಮಿಡಿಯುತ್ತಿತ್ತು. ಕಲೆಗಾಗಿ ಕಲಾವಿದರ ಶ್ರೇಷ್ಠತೆ ಅಂತರಂಗವನ್ನು ಪ್ರದರ್ಶಿಸುವ ಪ್ರಸಂಗ ಭೃಶ್ಯದಂತಿತ್ತು ನಾಟಕ. ಕಥಾನಾಯಕಿಯ ಘಟನೆ ಹೃದಯವನ್ನು ಸ್ಪರ್ಶಿ. ಅವಳ ಅಪೂರ್ವ ನಟನೆಯನ್ನು ಕಂಡು ಕಂಬನಿದಳಿದ ಪ್ರೇಕ್ಷಕನೇ ಇರಲಿಲ್ಲ.

ಮೊದಲ ಪ್ರವೇಶದಲ್ಲಿಯೇ ಕಥಾನಾಯಕಿ ಹೂವು ಎಂಬ ದನ್ನು ಅರಿತು ಆಶ್ಚರ್ಯಪಟ್ಟೆ. ನನ್ನ ತಂಗಿ ಪ್ರಭಾಳ ಗೆಳತಿ ಲಲಿತಾ ಎಂಬುದರಲ್ಲಿ ಸಂದೇಹವೇ ಉಳಿಯಲಿಲ್ಲ.

ನಾಟಕದ ಅಂತ್ಯಕ್ಕೆ ಕೆಲವಿವಿಷಯಗಳ ಮುಂದೆ ನಾಟಕ ಸಂಸ್ಥೆಯು ಹುಡುಗಪ್ಪೊಬ್ಬ ನನ್ನ ಬಳಿಗೆ ಬಂದ. ಚಿಕ್ಕ ಚೀಟಿಯೊಂದನ್ನು ಕೈಗಿತ್ತು "ಬಾಗಿಲಲ್ಲೇ ಕಾದಿರುತ್ತೇನೆ. ದಯಮಿಟ್ಟು ಬನ್ನಿ ಸಾರ್" ಎಂದು ಹೇಳಿ ಹೊರಟುಹೋದ.

ನನಗೆ ಆಶ್ಚರ್ಯವಾಯಿತು. ಅವಂತ ನನ್ನನ್ನೆ ಮಿಕಿ ಮಿಕಿ ನೋಡಿದ. ಚೀಟಿ ಬಿಚ್ಚಿ ಓದಿದೆ. ಅದರಲ್ಲಿ "ಅಣ್ಣಯ್ಯ' ನಿನ್ನನ್ನು ಕಂಡು ಸಂತೋಷವಾಯಿತು. ಪ್ರದರ್ಶನ ಮುಗಿದ ಕೂಡಲೇ ಗ್ರೀನ್

(ಹನ್ನೊಂದನೇ ಪುಟ ನೋಡಿರಿ)

ಸುರಕ್ಷಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
94 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ವೈಯಕ್ತಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯನ್ನು
ನಮ್ಮ ಉಳಿತಾಯಕನ್ನು ವಿನಿಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—೩.
Phone— 5711, 5712, 5713 } 3 Lines.

ಫೋನ್ : 526

1921 ಸ್ಥಾಪನೆ

ಸಂಪುಟ ೪೮
ಸಂಚಿಕೆ ೪೦
VOL. 48
No. 40

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೬—೬—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಹೊಸ ತಲೆನೋವು

ಬಿಹಾರದ ಕಾಂಗ್ರೆಸ್ ಪ್ರಾಯೋಕತ್ವದ ಸಂಯುಕ್ತ ಸರಕಾರದ ಮುಖ್ಯಮಂತ್ರಿ ಹರಿಹರ ಸಿಂಗರು ಎಲ್ಲರನ್ನೂ ತೃಪ್ತಿಪಡಿಸಲು ಹೋಗಿ ಯಾರನ್ನೂ ತೃಪ್ತಿಪಡಿಸಲಾರದೆ ಎಲ್ಲರಿಂದಲೂ ದೂರವಾಗಬೇಕಾದ ಪ್ರಸಂಗ ಬಂದಿತು. ತನ್ನ ಸರಕಾರವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂದು ಅವರು ಮಂತ್ರಿಮಂಡಲವನ್ನು ಸಾಕಷ್ಟಿಸುವಷ್ಟು ವಿಸ್ತರಿಸಿದ್ದು, ಅವರಲ್ಲಿ ಮಂತ್ರಿ ಶಾಖೆಗಳನ್ನು ಹಂಚಲು ಅಸಮರ್ಥವಾದದ್ದು, ಈ ಸಂಬಂಧದಲ್ಲಿ ಕೇಂದ್ರಕ್ಕೆ ದೂರು ಹೋದದ್ದು; ಈ ನಡುವೆ ಹರಿಹರ ಸಿಂಗರ ನಾಯಕತ್ವದಲ್ಲಿ ಕಾಂಗ್ರೆಸ್ಸಿಗರೇ ಬೇಕರ ಬಂದದ್ದೂ.... ಇತ್ಯಾದಿ ಇತ್ಯಾದಿ ಎಲ್ಲರಿಗೂ ತಿಳಿದುಬಂದಿರುವಂಥದ್ದು. ವಿಧಾನ ಸಭಾಧಿವೇಶನ ನಡೆಯಲಾರಂಭವಾದರೂ ಅವರು ತನ್ನ ಸಚಿವರನ್ನು ತೃಪ್ತಿಪಡಿಸಲಾರದೆ ಹೋದರು. ಹಾಗಾಗಿ ಸಂಯುಕ್ತ ಸರಕಾರದ ಅಂಗ ಪಕ್ಷಗಳು ತನ್ನ ಬೆಂಬಲವನ್ನು ಫೀಡೆದ ಇದ್ದುದರಿಂದ ಹರಿಹರ ಸಿಂಗರು ಸೋತು ಹೋದರು. ಪಶು ಸಂಗೋಪನಾ ಶಾಖೆಯ ಬೇಡಿಕೆಯನ್ನು ಮತಕ್ಕೆ ಹಾಕಿದಾಗ, ಅದು ೨೨೮ರ ೨೦ ಮತಗಳಿಂದ ತಿರಸ್ಕೃತವಾಯ್ತು. ಅಂದರೆ, ೧೦—೧೫ ಬೆಂಬಲಿಗರು ಸರಕಾರಕ್ಕೆ ವಿರುದ್ಧವಾಗಿ ಮತ ಚಲಾಯಿಸಿದರು. ಇವರಲ್ಲಿ ಶೋಷಿತ ದಳ, ಹಲ್ ಜಾರ್ಖಂಡ್ ಪಕ್ಷಗಳ ಸದಸ್ಯರೂ ಮಂತ್ರಿಗಳೂ ಇದ್ದಾರೆನ್ನುವುದು ತಮಾಷೆಯ ವಿಷಯ.

ಶೋಷಿತದಳ ಮತ್ತು ಹಲ್ ಜಾರ್ಖಂಡ್ ಪಕ್ಷದ ಸದಸ್ಯರು ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ಹೊಂದಿದ್ದರೂ ಸರಕಾರದ ಪರಾಜಯವನ್ನೇಕೆ ಬಯಸಿದರು? ಹರಿಹರ ಸಿಂಗರೊಡನೆ ವಿರಸವುಂಟಾಗಿದ್ದರೆ, ವಿಧಾನ ಸಭೆಯ ಹೊರಗೇ ನೇ ತಮ್ಮ ಬೆಂಬಲವನ್ನು ಹಿಂತೆಗೆಯಬಹುದಾಗಿತ್ತು. ಇಂತಹ ಯಾವ ಪರಿಪಾಟಿಯೂ ಇಲ್ಲದೆ ನೇರವಾಗಿ ವಿಧಾನ ಸಭೆಯಲ್ಲೇ ಸರಕಾರದ ವಿರುದ್ಧ ಮತ ಚಲಾಯಿಸಿ ಬಿಹಾರದಲ್ಲಿ ಬಹಕ್ಯಾಂತಿ ಫಡೆಸಿದೆಯೆಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಈ ಪಕ್ಷಗಳ ಫೀತಿ ದಿವಾಳಿಕೋರತನದ ಪ್ರತೀಕವಲ್ಲದೆ ವಿತ್ತೇನೂ ಅಲ್ಲ. ಈ ರೀತಿ ಬೆನ್ನಿಗಲ್ಲಿ ಇರಿಯುವ, ಕೃತಘ್ನತಾಶ್ರಯದಲ್ಲಿ "ಪ್ರಶಾಂತಕ" ಹೊಂದುವ ಹೊಸ ವಿಧಾನವೊಂದಕ್ಕೆ ಬಿಹಾರ ನಾಂದಿಯಿಟ್ಟಿತು.

ಆದರೂ ಹಿಂದಿನ ದಿನ ವಿರೋಧಪಕ್ಷೀಯರೆಲ್ಲ, ಸಭೆಸೇರಿ, ಹರಿಹರ ಸಿಂಗರ ಸರಕಾರವನ್ನು ಉರುಳಿಸುವ ಮತ್ತು ಕಾಂಗ್ರೆಸ್ಸೇತರ ಸಂಯುಕ್ತರಂಗದ ಸರಕಾರ ರಚಿಸುವ ಬಗ್ಗೆ ಮಾತುಕತೆ ನಡೆಸಿದ್ದರೆಂದು ತಿಳಿದು ಬಂದಿದೆ. ಈ ಸಭೆಯಲ್ಲಿ ಕೋಶಿತದಳ ಮತ್ತು ಹಲ್ ಜಾರ್ಖಂಡ್ ದಳದ ಸದಸ್ಯರೂ ಭಾಗವಹಿಸಿದ್ದಾರೇ ಇಲ್ಲವೇ ಎಂದು ಸ್ಪಷ್ಟವಾಗಿ ತಿಳಿದಿಲ್ಲ. ಅದೇನಿದ್ದರೂ ಈ ಎರಡು ಪುಟ್ಟ ಪುಂಗಗಳನ್ನು ತಮ್ಮ ಡಾಳಗಳಕ್ಕಾಗಿ ಅಡಲು ಕಾಂಗ್ರೆಸ್ಸೇತರರು ನಿರ್ಧರಿಸಿದ್ದ, ಆದರಂತೆ ಈ ದಳಗಳು ತಲೆಕೆಳಕು ವ್ಯವಹಾರ ನಡೆಸಿದ್ದ, ೧೧೫ ದಿವಸಗಳ ಅಲ್ಪ ಆಯುಷ್ಯದಲ್ಲೇ ಹರಿಹರ ಸಿಂಗರು ನುಗ್ಗುಳಿರಿಯೂಪದ್ದು, ಮಂತ್ರಿಪದ ಹುರ್ಫಟನೆಗಳು ತನಗೆ ಸೋಲುಂಟಾದೊಡನೆಯೇ ಸಿಂಗರು ರಾಜ್ಯಪಾಲರನ್ನು ಭೆಟ್ಟಿ ಮಾಡಿ ರಾಜೀನಾಮೆ ನೀಡಿದರು. ಮೊದಲೇ ನಿರ್ಧರಿಸಿದ್ದಂತೆ ಶೋಷಿತ ಪಸ್ವಾನ್ ಶಾಸ್ತ್ರಿಗಳು ತಮ್ಮ ಬೆಂಬಲಿಗರ ಪಟ್ಟಿಯೊಪ್ಪಿಸಿ, ಸರಕಾರ ರಚಿಸಲು ಅನುಮತಿ ಪಡೆದರು. ಈಗ ಮತ್ತೆ ಶಾಸ್ತ್ರಿ ಮುಖ್ಯಮಂತ್ರಿಯಾಗಿದ್ದಾರೆ. ಅವರ ಮಂತ್ರಿ ಜನರ ತಂಡ ಆರಂಭದಲ್ಲಿ ಪ್ರತಿಜ್ಞಾವಿಧಿ ಮುಗಿಸಿತು. ಮುಂದೆ ನೇಮಕಗೊಳ್ಳುವ ಮಂತ್ರಿಗಳು ನಲುವತ್ತನ್ನು ಮೀರಬಹುದೂ ಮುಟ್ಟಬಹುದು.

ಭೋಲಾಪಸ್ವಾನ್ ಶಾಸ್ತ್ರಿಯವರ ಸಂಯುಕ್ತರಂಗದ ಅಂಗ ಪಕ್ಷಗಳು ಯಾವುವು? "ಇದೊಂದು ಪವಿತ್ರ ಗೋವಲ್ಲ" ಎಂಬ ನಾಯಕರ ಉದ್ಗಾರದಲ್ಲೇ ಗೊತ್ತಾಗುತ್ತದೆ. ಭಾರತೀಯ ಕ್ರಾಂತಿದಳ, ಜನಸಂಘ, ಪ್ರಸಾ, ಕಮ್ಯುನಿಸ್ಟ್ ಹೀಗೆ ಹಲವು ಪಕ್ಷೀಯರ ಸಂಯುಕ್ತ ರಂಗ. ಇವೆಲ್ಲವುಗಳ ಜನಹಿತಕಾರಿ ಧೋರಣೆಗಳನ್ನು ಕಾರ್ಯ ಕೃತಗೊಳಿಸಲು ಕಾರ್ಯಕ್ರಮವೊಂದು ತಯಾರಾಗಿದ್ದು ಅದನ್ನು ಕಾರ್ಯರೂಪಕ್ಕೆ ತರಲು ಹೊಸ ಸರಕಾರ ಪ್ರಯತ್ನಿಸುವುದೆಂದು ತಿಳಿದುಬಂದಿದೆ. ಇಂತಹ ಕಾರ್ಯಕ್ರಮ ರೂಪಿಸುವದಷ್ಟು ಸುಲಭದಲ್ಲಿ ಅದನ್ನು ಕಾರ್ಯರೂಪಕ್ಕೆ ತರಲಾಗುವುದಿಲ್ಲ ವೆಂಬುದು ಎಲ್ಲ ಸಂಯುಕ್ತರಂಗದ ಸ್ವಯಂ ಅನುಭವ. ಬಿಹಾರದ ಹೊಸ ಸಂಯುಕ್ತ ರಂಗದಲ್ಲಿ ಹರಿಹರ ಸಿಂಗರನ್ನು ಪದಚ್ಯುತಿಗೊಳಿಸುವಲ್ಲಿ ಕ್ರಿಯಾಶೀಲರಾದ ಶೋಷಿತ ದಳ ಹಲ್ ಜಾರ್ಖಂಡ್ ಪಕ್ಷಗಳೂ ಸೇರಿದೆಯೆಂಬುದನ್ನು ಮರೆಯಬಾರದು.

ಗಯಾಲರಲ್ಲಿ ಕಾಂಗ್ರೆಸ್ ಬೆಂಬಲ ಪಡೆದು ಭೋಲಾ ಪಸ್ವಾನ್ ಶಾಸ್ತ್ರಿ ಸರಕಾರ ರಚಿಸಿದ್ದರೂ ಕಾಂಗ್ರೆಸ್ ಮಧ್ಯಾವಧಿ ಮಲ್ಲೇ ತನ್ನ ಬೆಂಬಲವನ್ನು ಹಿಂತೆಗೆದು ಕೊಂಡುದರಿಂದ ಶಾಸ್ತ್ರಿ ರಾಜಿನಾಮೆ ಫೀತಬೇಕಾಗಿ ಬಂದುದನ್ನೂ ನೆನಪಿಸಬಹುದು. ಆಂದು ತನಗಾದ ಅಪಮಾನದ ಸೇಡನ್ನು ಇಂದವರು ತೀರಿಸಿಕೊಂಡರೆ? ದು ಹೇಳಬೇಕೆ? ಅಥವಾ ಹರಿಹರ ಸಿಂಗರ ವ್ಯವಹಾರಗಳಿಂದ ಸ್ವತಃ ಕಾಂಗ್ರೆಸ್ ಸದಸ್ಯರೇ ಬೇಸರ ಗೊಂಡಿರುವಾಗ ಪರ ಪಕ್ಷೀಯರು ದೂರ ಸರಿಯುವುದು ಆಶ್ಚರ್ಯವಲ್ಲವೆಂದು ಸಮಾಧಾನ ತಾಳಬೇಕೆ? ಆದರೆ, ಒಂದು ಮಾತು ನಿಜ, ಭೋಲಾ ಪಸ್ವಾನ್ ಶಾಸ್ತ್ರಿಗಳು ಕಾಂಗ್ರೆಸ್ ಸಂಯುಕ್ತ ಸರಕಾರವನ್ನೆ ಉರುಳಿಸಲು ಉಪಯೋಗಿಸಿಕೊಂಡ ಶೋಷಿತ ದಳ ಮತ್ತು ಹಲ್ ಜಾರ್ಖಂಡ್ ಪಕ್ಷಗಳು ಮುಂದೆ ಬಿಹಾರದ ರಾಜ್ಯಕೀಯದಲ್ಲಿ ಸ್ವತಂತ್ರ ಮಾಡುವ ಚಟಕ್ಕೆ ಅಂಟಿಕೊಳ್ಳಲಾರವೆಂದೇನು ಗ್ಯಾರಂಟಿ? ಇದೇ ರೀತಿ ಅವು ನಡೆದುಕೊಂಡರೆ, ಅದೂ ಒಂದು ರಾಜ್ಯಕೀಯ ವಿನೋದ!

ಹರಿಹರ ಸಿಂಗರ ಸರಕಾರ ಉರುಳಿ ಹೋದುದರಿಂದ ಜನತೆಗಾಗಲಿ, ನಷ್ಟವೂ ಆಗಲಿಲ್ಲ ಏಕೆಂದರೆ, ಸಿಂಗ ಸರಕಾರ ತನ್ನ ಅಧಿಕಾರಾವಧಿಯಲ್ಲಿ ಜನ ಹಿತಕ್ಕಿಂತಲೂ ಸರಕಾರದ ರಕ್ಷಣೆಯಲ್ಲೇ ಆಸಕ್ತವಿತ್ತು. ಶಾಸ್ತ್ರಿ ಸರಕಾರವೂ ಇದಕ್ಕೆ ಹೊರತಾಗಬಹುದೆಂದು ತೋರುವುದಿಲ್ಲ. ೧೯೬೭ರ ವಧ್ಯಾವಧಿ ಚುನಾವಣೆಗಳು ಉಳಿದೆಡೆ ಒಳ್ಳೆಯದಾಗಲೀ ಕೆಟ್ಟದಾಗಲೀ ರಾಜ್ಯಕೀಯ ಸ್ಥಿರತೆಯನ್ನು ತಂದಿದ್ದರೆ, ಬಿಹಾರಕ್ಕೆ ಮತ್ರ ಅಸ್ಥಿರತೆಯನ್ನೇ ತಂದುಕೊಟ್ಟಿವೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಆಯ್ದುಕೊಂಡ ಈ ಪರಿಸ್ಥಿತಿಯನ್ನು ಬೇಡವೆಂದರೂ ಅನುಭವಿಸಲಾದುವಷ್ಟು ಅನುಭವಿಸಲೇ ಬೇಕು ತಾನೆ?

ಎರಡು ದುರಂತಗಳು

ಉತ್ತರದ ಕಾಶ್ಮೀರು ಬಳಿ ಭೀಕರ ರೀತಿಯ ಅಪಘಾತವೊಂದು ನಡೆದ. ಈ ವರ್ಷದ ದೊಡ್ಡ ದುರಂತಗಳಲ್ಲಿ ಒಂದೆನಿಸಿತು. ಸುಮಾರು ನೂರಕ್ಕೆ ಬಹಳ ಕಡಿಮೆಯಿಲ್ಲದಷ್ಟು ಸಾವು ಮತ್ತಷ್ಟೇ ನೋವುಗಳಿಗೆ ಕಾರಣವಾದ ಈ ದುರಂತ ವಿಧ್ವಂಸಕ ಕೃತ್ಯವೆಂಬ ಸಂದೇಹ. ಈ ರೀತ್ಯೆಯಲ್ಲಿ ಸಂಚಾರ ಮಾಡುವವರು ತಮ್ಮ ಬಳಿ ಹಣ ತರುತ್ತಾರೆಂದೂ ಈ ದಾರಿ ಹಿಂದಿಫಿಂದಲೂ ಕೊಲೆ—ಸುಲಿಗೆಗಳಿಗೆ ಹೆಸರಾದದ್ದೆಂದೂ ಹೇಳಲಾಗುತ್ತಿದೆ. ಅಂತಲೇ ಹಣದಾಸೆಯಿಂದ ರೀಲು ಉರುಳಿಸಲು ಹಳಿತಪ್ಪುವಂತೆ ಫಿಶ್ ಪ್ಲೇಟ್— ಬೋಲ್ಟ್‌ಗಳನ್ನು ತಪ್ಪಿಸುವ ಚಟ ಈ ಅಘಾತಕ್ಕೆ ಕಾರಣವಾಯ್ತು ಎಂದು ಊಹೆ. ಅದೇನೇ ಇದ್ದರೂ ಫಿಶ್‌ಪ್ಲೇಟ್ ಮತ್ತು ಬೋಲ್ಟ್‌ಗಳನ್ನು ತಪ್ಪಿಸಿದ್ದು ನಿಜ. ಉದ್ದೇಶವೇನೇ ಇರಲಿ, ಕಾರ್ಯ ವಿಧ್ವಂಸಕ; ಪರಿಣಾಮ ರುದ್ರ ಭಯಂಕರ.

ಅದೇದಿನ ದಕ್ಷಿಣದ ಸೆಕೆಂದರಾಬಾದ-ಬೆಂಗಳೂರು ಎಕ್ಸ್‌ಪ್ರೆಸ್ ಬಂಡಿಯೂ ಹೈದರಾಬಾದಿನಿಂದ ಸುಮಾರು ೧೧೦ ಕಿಲೋಮೀಟರು ದೂರದಲ್ಲಿ ನೆಹಬೂಬ ನಗರದ ಸಮೀಪ ಹಳಿತಪ್ಪಿ ಅಪಘಾತಕ್ಕೆ ಒಳಗಾಯಿತು. ಇದರಿಂದ ಸಾವು ನೋವು ಫಡೆಯಿತು. ಈ ದುರ್ಘಟನೆಯಲ್ಲೂ ಫಿಶ್ ಪ್ಲೇಟ್ ಮತ್ತು ಬೋಲ್ಟ್‌ಗಳನ್ನು ಕಳಚಿ ಹಾಕಿದ್ದ ಕಂಡುಬಂದಿದೆಯೆಂದು ವರದಿ. ಇದೂ ವಿಧ್ವಂಸಕ ಕೃತ್ಯವೆಂದು ಖಚಿತ ಹೇಳಬೇಕಾಗಿಲ್ಲ. ಪ್ರತ್ಯೇಕ ತೆಲಂಗಾಣವಾದಿಗಳೇ ಈ ಕೃತ್ಯಗಳಿಗೆ ಪ್ರೇರಕರೆಂದು ಒಂದು ಅಭಿಪ್ರಾಯ. ಮಹಾರಾಷ್ಟ್ರವಾದಿಗಳು ಬೆಳಗಾಂವಿಯ ಬಳಿಯು ರೈಲ್ವೆ ದುರಂತಕ್ಕೆ ಕಾರಣರಾಗಿ ಸಾವು ನೋವುಗಳಿಗೆ ಕಾರಣಕರ್ತರಾಗಿದ್ದರೆಂದು ಹೇಳಲಾಗಿತ್ತು. ಹೀಗೆಲ್ಲಾ ವಿಧ್ವಂಸಕ ಕೃತ್ಯಗಳು ಸ್ವಾರ್ಥಪ್ರೇರಿತವಾಗಿ ನಡೆಯುತ್ತ ಹೋದರೆ, ರಾಷ್ಟ್ರದ ಬಗ್ಗೆ ಆಭಿಮಾನ ಹೇಗೆ ಮೂಡೀತು? ನಮ್ಮ ಜನತೆಗೆ ರಾಷ್ಟ್ರದ ಬಗ್ಗೆ ಆದರ ಗೌರವ ಕೃತ್ಯಗಳ ಬಗ್ಗೆ ಸರಿಯಾದ ಪ್ರಜ್ಞೆ ಮೂಡುವಂತೆ ನಾವು ಮಾಡಿಲ್ಲವೆನೆಂದೇ ಹೇಳಬೇಕಾಗಿ. ಇದನ್ನು ಮಾಡದೆ ಬರಿಯ ಗುಪ್ತ ಕಿರುಗುಪ್ತದರಿಂದಷ್ಟೇ ಯಾರನ್ನೂ ಯಾವುದರಿಂದಲೂ ರಕ್ಷಣೆಯೂ ಆಗದು.

ಲೋಕತಂತ್ರದ ಮೂಲ ತತ್ವ

ವ್ಯಕ್ತಿಗತ ಸ್ವಾತಂತ್ರ್ಯ ಬೇಕೇಬೇಕು. ಆದರೆ ಮನುಷ್ಯರು ಮೂಲತಃ ಒಬ್ಬ ಸಾಮಾಜಿಕ ಪ್ರಾಣಿ ಎಂಬುದನ್ನು ಮಾತ್ರ ನಾವು ಮರೆಯಬಾರದು. ಸಾಮಾಜಿಕ ಪ್ರಗತಿಯ ಅವಶ್ಯಕತೆಗಳಿಗೆ ಹೊಂದಿಕೊಂಡು ತನ್ನ ವ್ಯಕ್ತಿತ್ವವನ್ನು ವಿರಕಹೊಯ್ಯಲು ಕಲಿತುಕೊಂಡೇ ವ್ಯಷ್ಟಿಯನ್ನು ಇಂದಿನ ಸ್ಥಿತಿಗೆ ಮುಟ್ಟಿದ್ದಾನೆ. ಅತಿಯಂತ್ರಿತ ವ್ಯಕ್ತಿತ್ವವು ವನ್ಯಕಲಗಳಲ್ಲಿ ವಿಪಲ, ಸಾವಾದರೋ ವ್ಯಕ್ತಿಗತ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಸಂಯುಕ್ತಗಳಲ್ಲಿ ಸಮನ್ವಯವನ್ನು ಕಲಿಸಲೇಬೇಕು.

ನಿಜವಾದ ಲೋಕಶಾಹಿಯನ್ನು ಕೇಂದ್ರದಲ್ಲಿ ಕುಳಿತ ೧೫-೨೦ ಜನ ನಡಿಸಲಾರರು. ಕೆಳಗಿನ ಪ್ರತಿಯೊಂದು ಊರಿನ ಜನರಿಂದಲೇ ಮೊದಲು ಅದನ್ನು ನಡಿಸುವುದು ಸಾಧ್ಯ.

ನಮ್ಮಲ್ಲಿ ಉದಾಹರಣೆ ಮತ್ತು ಸಹಸ್ರ

(ಪತ್ರನೇ ಪುಟ ನೋಡಿರಿ)

ಚಾರುಚಿಯನ

ರಾಷ್ಟ್ರಪತಿ ಹುದ್ದರಿ ಆಯ್ಕಾ ನಾಟಕಂ

ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪ ನವರು ಲೋಕ ಹಿತಕ್ಕಾಗಿ ವಿದೇಶ ಯಾತ್ರೆ ಮಾಡಿ ಬಂದರು; ದೇಶದ ಅರಿ ಸತ್ತ ಹಲವು ಸಮಸ್ಯೆಗಳಿಗೆ ಮತ್ತೆ ಜೀವಕಂದರು. ರಾಷ್ಟ್ರಪತಿ ಸ್ಥಾನಕ್ಕೆ ಹುದ್ದರಿಬೇಕು; ಹುದ್ದರಿಬೇಕು. ಯಾ ರಾಗಬಹುದು? ನಾವು ಎಂದವರನ್ನೆಲ್ಲಾ ವಾಲಿಬಾಲು ಮಾಡಿಯಾಯ್ತು. 'ಅವರು ಆಗಲಿ' ಎಂದು ಬೊಟ್ಟಿಗೆ ತೋರಿದವರೆಲ್ಲೂ ಕೆಲವರು ನಾವಾ ನಾದರು. ಆದರೂ ಉಳಿದಿದ್ದಾರಲ್ಲಾ ಕೆಲವರು?

ಕೆಲಸಮಯದಿಂದ ಕಾಂಗ್ರೆಸ್ ಅಧ್ಯ ಕ್ಷ ನಿಜಲಿಂಗಪ್ಪನವರಿಗೂ ಪ್ರಧಾನಿ ಇಂದಿರಾಗಾಂಧಿಗೂ ಪರಸ್ಪರರಲ್ಲಿ ಸಮೂ ಧಾನವಿಲ್ಲವೆಂದು ಕೆಲೆ ಬರುತ್ತಿದೆ. ರಾಷ್ಟ್ರಪತಿ ಚುನಾವಣೆಯ ಅಧ್ಯಕ್ಷನಿರ್ಣಯ ಕೊನೆಯ ದಿನಗಳ್ಲೂ ಇದೇ ಸುದ್ದಿಯತ್ತು. ಇದು ಸಹಜ. ಒಬ್ಬರು ಅಧಿಕಾರವಿಲ್ಲದೆ ಹು ರ್ಸಂ ನೀಡುವವರು; ಮತ್ತೊಬ್ಬರದು ಅಧಿಕಾರವಾಜೆಯೇ. ಒಬ್ಬರದು ಥಿಸುದ್ದಿ ಇನ್ನೊಬ್ಬರದು ಪ್ರಾಕ್ಟಿಕಲ್; ಇವರಿ ಬ್ಬರ ಹಿಂದೆ ಅವರವರಿದೇ ಆದ ಬಂ ದೊಂದು ಗುಂಪು; ಗುಂಪು – ಗುಂಪಿಗೆ ಭಿನ್ನ ನೀತಿ, ಭಿನ್ನ ರೀತಿ, ಜತೆಗೆ ಭೀತಿ ಕೂಡ. ಇವೆಲ್ಲ ರಾಜ್ಯಕೀಯಕ್ಕೆ ಹೊಸ ತಲ್ಲ; ಮಾಮೂಲು.

ಕಾಂಗ್ರೆಸ್ ಅಧ್ಯಕ್ಷರೂ ಇವರ ನಿಂ ದಿಕೇಟೂ ಹೇಳುತ್ತಿದೆ—"ನಮಗಿನ್ನೂ ಮೆಜಾರಿಟಿ ಇದೆ. ಆದ್ದರಿಂದ ಯಾಕೆ ಹೆದರಬೇಕು? ಒಬ್ಬ ಹಿರಿಯ ಕಾಂಗ್ರೆ ಸಿಗನನ್ನೇ ರಾಷ್ಟ್ರಪತಿ ಮಾಡಿಬಿಡೋ ಣ; ಈ ದಿನಗಳ್ಲಿ ಈ ಕೃತ್ಯವೇ ಒ ಳ್ಳೆದು. ನೀಲಂ ಸಂಜೀವರೆಡ್ಡಿ ಇದ್ದಾ ರೆ; ಜಗಜೀವನರಾಮರಿದ್ದಾರೆ; ಕಾಮ ರಾಜರೂ ಇದ್ದಾರೆ ನೋಡಿ..... (ಅಥ ವಾ ಹಂಗಾಮಿ ರಾಷ್ಟ್ರಪತಿಗಳನ್ನೇ ಮುಂದ್ಯೆದು ವರ್ಷಕ್ಕೂ..... ಹೇಗೂ ಹಾಗೆ ಮಾಡದಿದ್ದರೇ, ರಾಜಿನಾಮೆ ನಿ ಡುವ ಬೆದರಿಕೆ ಬೇರೆ ಅವರು ಹಾಕಿ ದ್ದಾರೆ.)

ಪ್ರಧಾನಿ ಬಳಗದ ವಿಚಾರವೇ ಬೇ ರೆ. ಇಂದಿನ ಮಿಶ್ರರಾಜ್ಯ ಕೀಯ ವಾತಾವರಣದಲ್ಲಿ ಸರ್ವಮನ್ಯ ವ್ಯಕ್ತಿಯನ್ನೇ ತರಬೇಕಾ. ಇದಕ್ಕಾಗಿ ವಿ ರೋಧ ಪಕ್ಷದ ನಾಯಕರೊಡನೆ ಮಾ ತುಕತೆ ನಡೆಯಬೇಕು. ಸಾಧ್ಯವಾದರೆ, ಒಮ್ಮತದಿಂದಲೇ ಆಯ್ಕೆ ಫಡೆಯಬೇಕು. ಕಾಂಗ್ರೆಸ್ಸೇತರರು ಪ್ರಧಾನಿಯ ಅಭಿಪ್ರಾ ಯವೇ ಸರಿ ಅನ್ನತ್ತಾರೆ. ನಿಜಲಿಂಗಪ್ಪ ನವರದ್ದು ವಿಶಾಲಕ್ಷೇಯ; ಕಾಂಗ್ರೆಸ್ ಫ್ಯೂಷಿಯಂ ಥೋಣೆ. ಇಂದಿರಾಗಾಂಧಿ ಯವರೊಡನೆ ಹಲವು ಪ್ರತಿಪಕ್ಷೇಯ ನಾರ್ಯಕರು ಮಾತುಕತೆಗೇ ಬರುವು ದಿಲ್ಲ; ಬಂದವರೆಲ್ಲರೂ ತಂತಮ್ಮ ಒಬ್ಬೊ ಬ್ಬ ಅಭ್ಯರ್ಥಿಯನ್ನೇ ಸೂಚಿಸುತ್ತಾರೆ; ಅಥವಾ ಇಂದಿರಾಗಾಂಧಿಗೆ ಅಪ್ರಿಯವೆ ನಿಸಿವ ಹೆಸರನ್ನೇ ಮುಂದೆ ಮಾಡುತ್ತಾ ರೆ. ಅಂತೂ ಮಾತುಕತೆಯಿಂದ ಜೂವ ಪಟ್ಟವೂ ಹುಟ್ಟದು. ಕೂನೆಗೂ ಪ್ರತಿ ಪಕ್ಷೇಯರ ಮತವಿಲ್ಲದೇನೇ ರಾಷ್ಟ್ರಪತಿ ಆಯ್ಕೆ. ಇದು ಅಧಿಕೃತ ನಾಟಕ.

ಅಂಗೈ ತೋರಿಸಿ ಅವಲಕ್ಷಣನೇಕೆ ಹೇ ಳಿಸಿಕೊಳ್ಳಬೇಕು ಅಂತ ಸಿಂಡಿಕೇಟು ಗೊಣಗಿ ಕೊಂಡರೂ ಇಂದಿರಮ್ಮನಿಗೆ ಅ ರಾ ಬಿ ಯಿಲ್ಲ ಪಾತ್ರ ವಹಿಸುವುದೆಂದರೆ ಧೀರಿ ಇಷ್ಟ. ಇದರ ಜೇಜು ತನ್ನುವವ ರು ಪ್ರತಿಪ್ಲಾಪುರು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಯಾರೆಂದು ತಿಳಿದ ಬಳಿಕವೇ ತಂತಮ್ಮ ಅಭ್ಯರ್ಥಿಯನ್ನು ಅರಿ ಸುವ ನಿರ್ಧಾರ ಅವರದ್ದು. ಈಗ ವದಿಯಾದಂತೆ ನಾವಾದಿಸಿ ನಲ್ಲಿಸುವ ಕೊನೆಯ ದಿನದ ವರೆಗೂ ಕಾಂಗ್ರೆಸ್ ಹೊಡೆದಾಡುವ ನಾಟಕವಾಡುತ್ತದೆ. ಆಗಾಗ ಪ್ರತಿಪಕ್ಷೇಯರು ಏನಪ್ಪ ದೇವ್ರೆ.

ಕಾಂಗ್ರೆಸ್ಸಿನ ಎರಡು ಗುಂಪುಗಳೂ ಒಪ್ಪುತಾದ ಅಭ್ಯ ಒಪ್ಪಬಹುದಾದ ಕೆಲವರು ಇನ್ನೂ ಇದ್ದಾರೆ. ಅಂ ಥವರಲ್ಲಿ ಒಬ್ಬನ್ನು ನಿಗದಿಮಾಡಿ, ಅವ ರು ಇವರು ಎಂಬ ನಾಟಕವಾಡುತ್ತ ಜೊತ್ತುಕಳೆದು ಅವರಾರೂ ಅಲ್ಲದ ಮೂರನೆಯವರನ್ನೇ ಎತ್ತುವ ತಂತ್ರ ಕಾಂಗ್ರೆಸಿಗೆ ಇತ್ಕೀಚೆಗೆ ಕರಗತವಾದ ದ್ದು. ಆದ್ದರಿಂದ ಹೆಸರು ಫಿದಿ ಕ್ಸವಾಗಿ ಹೊರಬಾರದವರೆಗೆ ಹೊರಗೆ ಪಡೆಯುತ್ತಿರುವುದೆಲ್ಲ ಬರಿಯ ಊಹಾ ಪೋಹ; ಕಾಟಕದ ಬೇರೆ ಬೇರೆ ದೃಶ್ಯ ಗಳು.

ಂ ಂ ಂ ಂ

ಪ್ರಥಮ ಚುಂಬನದಲ್ಲೇ ದಂತ ಭಗ್ನ ರಾದ ಬಿಹಾರದ ವಂಚ್ಯು ಮಂತ್ರಿ ಹರಿ ಹರ ಸಿಂಗರು ಈ "ಹರಿಹರ"ತನದಿಂದ ಸಿಕ್ಕಿಕೊಂಡಿದ್ದಾರೆ. ಈ ಎಂಭತ್ತರ ಪಡಿ ಮುಟ್ಟಿಲಿರುವ ಮುದಕ ಹೇಗಾದರೂ ಮಾಡಿ ಕಾಂಗ್ರೆಸ್ ನಾಯಕತ್ವದ ಸಮ್ಮಿ ಶ್ರ ಸರಕಾರ ಸ್ಥಾಪಿಸಿದರು. ಮಂತ್ರಿ ಮಂಡಳ ರಚನೆಯ ಆರಂಭದಲ್ಲೇ ಬಂದ ಅವಕಾಶವನ್ನೂ ಎದುರಿಸಿ ತನ್ನ ಬೆಂಬ ಲಿಗರ ವಿಶ್ವಾಸವನ್ನು ಉಳಿಸಿದರು; ಕಾಂಗ್ರೆಸ್ ದೇವತೆಗಳನ್ನೂ ಮೆಚ್ಚಿಸಿ ದರು. ಸೇ ಮಧ್ಯಾವಧಿಯಲ್ಲಿ ತನ್ನ ಸಂಪುಟವನ್ನವರು ವಿಶಾಲವಾಗಿ ವಿಸ್ತ ರಿಸಿದರು; ಇನ್ನೂ ವಿಸ್ತರಿಸಬಹುದೆನ್ನಿ. ಸಚಿವ ಸಂಪುಟ ಭದ್ರವಾಗಿ ಉಳಿಯು ಬಹುದೆಂಬ ಆಶೆ ಮೂಡಬೇಕಾದರೆ, ಸರಕಾರದ ಬೆಂಬಲಿಗೆ ಸದಸ್ಯರನ್ನೆಲ್ಲಾ ಮಂತ್ರಿ-ಮೂಗಧರನ್ನಾಗಿ ಮಾಡಬೇಕಾ ದರೂ ಸರಿಯೇ. ಆದರೆ, ಈ ಮೊದ ಲಿನ 'ಹರಿಹರ'ತನದಲ್ಲಿ ಗೆದ್ದ ಹರಿಹ ರಸಿಂಗರು ಈಗ ತುಸು ಕಂಗಾಲು. ಒಂದೂವರೆ ತಿಂಗಳಿಗೆ ಮೊದಲು ನೇ ಮಕಗೊಂಡ ಸಚಿವರಿಗೆ ಖಾತೆ ಹಂಚಲಿಲ್ಲವೆಂಬ ದೂರು!

ಪಾಪ, ಸಿಂಗರು ಏನು ಮಾಡಿ ಯಾರು? ಒಂದು ಹೆದ್ದಿಗೆ ಬಂದ ಬಳಿಕ ಮಾಡೋಣ; ಅದು ವರೆಗೂ ಅವ ರೆಲ್ಲ ಶಾಖಾರಹಿತ ವ್ಯಗಗಳಂಗಿಯೇ ಇರು ಳಿಲಿ ಅಂದುಕೊಂಡರು; ಬಾಯಿ ಬಿ ಟ್ಟು ಹೇಳಲಿಲ್ಲ. ಅಷ್ಟೆ. ಈ ನಡುವೆ ಕೆ ಲವು ಹಿರಿಯ ಕಾಂಗ್ರೆಸಿಗರು (ಮಂತ್ರಿ ಪದವಂಚಿತರು, ಮತ್ತು ಅತೃಪ್ತ ಮಂ ತ್ರಿಗಳೆಂದು ಬೇರೆ ಹೇಳಬೇಕೆ!) ಹರಿಹರ ಸಿಂಗರನ್ನು ಮುಖ್ಯಮಂತ್ರಿ ಪದದಿಂದ ಇಳಿಸುವ ಹಂಚಿಕೆ ಮಾಡಿದ್ದಾರೆ. ತಾ ವು ಮೆಟ್ಟಬೇಕಾದುದು ಮುಳ್ಳಿನ ದಾರಿ ಯೆಂದು ತಿಳಿದಿದ್ದರೂ ತಮ್ಮ ಎದೆ ಗಾರಿಕೆಯನ್ನು ತೋರಿಸಲು ಇವರು ಹಿಂಜರಿಯುವುದಿಲ್ಲ. ಹಾಗಾಗಿ ಹರಿಹರ ಸಿಂಗರು ಹರಿಹರ ಮಹಾದೇವ ಎಂದು ಟಿಪ್ಪಣಿಯಿಂದ ದೂರವಿರಿದರೂ ಸರಿಯ ಬಹುದು. ಅಥವಾ ತನ್ನ ಹಳೆ ರಕ್ತದ ಬಲದಿಂದ ಮತ್ತೊಂದು ಹೋ ರಾಟಕ್ಕೆ ಕರೆಯೊಯ್ದಲೂ ಬಹುದು. ಇವರೆಡರಲ್ಲಿ ಯಾವುದು ಘಟಿಸಿದರೂ ಕಾಂಗ್ರೆಸ್ ಪ್ರತಿಷ್ಠೆಯಲ್ಲಿ ಘಾಟಾ ವುಕ್ಕ ಗ್ಯಾರಂಟಿ.

ಂ ಂ ಂ ಂ

ಹಚ್ಚ ಬಿಡದೆ ವಂದುವೆಯೂಗದು; ಮದುವೆಯೂಗದೆ ಹುಚ್ಚ ಬಿಡದು— ಆಂಧ್ರಪ್ರದೇಶದ ತೆಲಿಂಗಾಣೆರ ವಟ್ಟಿಗೆ ಇದು ಸತ್ಯ. ಮುಖ್ಯಮಂತ್ರಿ ಕಾಸು ರಾಜು ಕೊಡಬೇಕು; ವಿಧಾನ ಸಭೆಗಳು ಅವಾನತ್ತಾಗಬೇಕು; ರಾಷ್ಟ್ರಪತಿ ಪೂ ಳಕೆ ಆಂಧ್ರ ಪ್ರದೇಶಕ್ಕೆ ಬರಬೇಕು ಎಂಬ ತೆಲಂಗಾಣೆಗರು ಕಾಂಗ್ರೆಸ್ ಫಿರ್ಕಾರದ ಮುಂದೆ ನೆಲಂಗಾಣೆಗರಾದರು. ಕಾಂ ಗ್ರೆಸ್ ಹೈಕಮಾಂಡು ಇವರ ತ್ರಿಶೂಲ ಪಟ್ಟು ಸಮಂಜಸ್ಯಕ್ಕೆಸಿಯಿತು. ಸಂವಿಧಾನ ಬಿಕ್ಕಟ್ಟು ತಲೆದೋರಿದಾದ ಮೂಲ ರಾ ಷ್ಟ್ರಪತಿಯೂಳಿಕೆ ಎಂದುಕ್ಕರ ಬಂತವ ರಿಗೆ, ಈಗ ಡಾ| ಜೆನ್ನಾರೆಡ್ಡಿಯವರಿಗು ವ ನಿಳವೇ ದಾರಿಯೆಂದರೆ, ಜಳುವಳಿ ಯನ್ನು ನಿಲ್ಲಿಸಿ, ವಾತಾವರಣವನ್ನು ಶಾಂತ ಗೊಳಿಸಿ ತಿಳಿಯೂಗಿ ಸಮಸ್ಯಾ ಪರಿಹಾ ರದ ಬಗ್ಗೆ ಒಮ್ಮತದ ನಿರ್ಧಾರಕ್ಕೆ ಬರುವದ; ಅಥವಾ ಸಂವಿಧಾನ ಬಿಕ್ಕ ಟ್ಟನ್ನುಂಟುಮಾಡುವಷ್ಟು ಪ್ರಬಲವಾಗಿ ಚಳುವಳಿಯನ್ನು ಬಲಪಡಿಸುವುದು.

ಡಾ॥ ಜೆನ್ನಾರೆಡ್ಡಿಯೇನುವೂಡುತ್ತಾ ರೇ ಗೊತ್ತಲ್ಲ. ಆದರೆ ತಾನೊಬ್ಬ ಶ್ರೀರಾಮುಲು ಆಗಬೇಕೆಂಬ ಹೆಬ್ಬಯ ಕೆ ಅವರಿಗಿದ್ದರೆ, ಅದು ಎಂದಿಗೂ ಚೆನ್ನ ಅಲ್ಲ.

ಂ ಂ ಂ ಂ

ಮಳೆಗಾಲ ಕಡೆಗೂ ಆರಂಭವಾ ಯ್ತು. ಒಂದೆರಡು ದಿನ ಅಕಾಶದಲ್ಲಿ ಕಾರ್ಮೋಡಗಳ. ದಟ್ಟಯಿಸಿದುವು; ತಂ ಗಾಳಿ ಬೀಸಿತು, ಖಲ್ಕೋನೆ ಸುರಿಯಿ ತು; ಸಮುದ್ರರಾಜನೂ ಮೊರೆಯು ತೊಡಗಿದ. ಮಳೆ ಕಡವಾಗಿಯೂದರೂ ಜೋರಾಯ್ತು; ಮಳೆಗಾಲ ಬಂತು ಎಂದು ಜನ ಜನ ನಲಿಯಿತು.

ಆದರೆ, ಎಲ್ಲ ಎಂಡು ದಿನ. ಮತ್ತೆ ಬಿಸಿಲು, ಜಳ, ಹೊಳೆ-ನಾಲೆ-ಬಾವಿ ಯಲ್ಲಿ ನೀರೇ ಇಲ್ಲ. ಸಮುದ್ರದ ಗರ್ಜನೆ ಯೂ ಸ್ತಬ್ಧವೆಂದರೆ, ಮೊನ್ನೊನ್ನಿನವನ್ನೂ ಆರಂಭವಾಗಿಲ್ಲವೆಂದೇ ಅರ್ಥ. ಜೂನ್ ತಿಂಗಳಲ್ಲಿ ಜೆನುಗುಬೇಕಾಗಿದ್ದ ಸೋನೆ ಶೂನ್ಯವಾಯ್ತು. ಆಗೆ ಬೆಳೆದ ನಿಂತಿದೆ; ಹೂ ಲವೊಣಗಿ ಹೋ ಗಿದೆ. ಪಂಪು ಏಕಸಲಿಂದ ಇದ್ದ ಫೀಲನ್ನು ಹಾಯಿಸಿ ಅಲೆಸ್ಲಿಂದು ಇಲ್ಲಿಂದು ನಾಟಿಮಾಡಿ ದ್ದಾಯಿತು. ಮುಂದೇನು? ಸ.ಗ್ಗಿಯಲ್ಲುಂ ಡ.ದಂ ಕಾರೊಳ್ ಚಾರುವಂ' ಎಂಬ ನೂತು ನಿಷವಂದರೆ, ಸುಗ್ಗಿಯಲ್ಲಿ ಉ ಪವಾಸ ಮಾಡಿದ್ದವೆ ಮೇಘರಾಜ?

ಜನಕ್ಕೂ ಚಿಂತೆ ಸರಕಾರಕ್ಕೂ ಚಿಂತೆ. ಮಳೆಯ ನೀರನ್ನೇ ಇಂಬಿಸಿಂಡಿರುವವ ರೂ ತಿಂಗಳ ವೇತನವನ್ನೇ ಎಂಬಿದ ನೌ ಕರರೂ ಸರ್ವ ಸಮವೇ. ಒಂದೇ ಒಂದು ದಿನ ತಡವಾದರೂ ಎಲ್ಲ ಅತ್ಯವ್ಯ ಪ್ತವಾದ್ಯಾವಾದ್ಯ. ಪ್ರಕೃತಿಯ ಈ ನಿರ್ಧಾ ಕ್ಷಿಣ್ಯ ಕಠೋರತೆ ಇವ್ಹಾ ದೇರೂ ಕರಗಿತೆ?

ಪುತ್ತೂರು ಲ್ಯಾಂಡ್ ಟ್ರೈಬ್ಯುನಲ್ ಕೋರ್ಟಿನಲ್ಲಿ

Res. P No 37/67

ದಂಗ್ಲಿದನಿ ಕೂಡಪ ಗೌಡ —ಅರ್ಜಿದಾರ

ಕೂರಗ ಗೌಡ ಸಹಾ —ಎದ್ರಿಯ

ಸದ್ರಿ ಅರ್ಜಿದಾರನು ಬೇರೆ ಎದ್ರಿಯಿಂ ಗಮ್ಮೆ ಹಂಗಾಮು ಪೃಷ್ಠ ಕೊರಗ ಗೌಡರ ಮಗಳು ವಚಂದವ್ವ ಗೌಡರ ಹೆಂಡ್ತಿ, ಜಂಟುವಾಳ ಕಾಲ್ಯು ಉಳಿ ಗ್ರಾಮದ ನಿವಿಲ್ಯಲು ಎಂಬವ್ವರುದರೀಗೆ ಈ ಮಾಲ ಕ ತೆಕೆಯಪಡಿಸುವುದೇನಂದರೆ,

ಮೇಲ್ಕಂಡ ವೃಸಹ ತಿಯಲ್ಲಿ ದೈಸೂರು ಲ್ಯಾಂಡ್ ರಿಫಾರ್ಮ್ಸ್ ಆಕ್ಟಿನ ಸೆಕ್ಷನ್ 14 or Rules 7 and 9 ಪ್ರಕಾರ ಸದ್ರಿ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಆ ಕಾರಣ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆದನ್ನು ದಿನಾಂಕ 8.7.1969 ರಲ್ಲಿ ಹಗಲು 11 ಗಂಟೆಗೆ ಈ ಕೋರ್ಟಿ ಮುಂದೆ ಸ್ವಹಸ್ತವಕೇಲರ ಮುಖಾಲರವಾಗಿ ಹಾಜರುಪಡಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯಾಕ್ಕೆ ಕಾಣ ರಿಯಲ್ಲಿ ತಿರ್ಮಾನ ಮಾಡಲಾದೀತೆಂಬ ಸಂಗ್ತಿಯನ್ನು ತಿಳಿಸೋಡಾಗಿಯದೆ.

(By Court order)

K. Subramanya Gowda
Advocate for Petitioner
Puttur, S. K., Date 10-6-69

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Miss 10/69

ಲೀಲಾವತಿ ಸಹಾ —ಅರ್ಜಿದಾರರು ಮತ್ತು

ಬನ್ನಂಜ —ಎದ್ರಿಯ

ಬಂಟ್ವಾಳ ತಾಲ್ಲ್ಯು ಬಿ.ಮೂಡೇ ಗ್ರಾಮದ ಬುಡೋಳಿದೀಡು ಎಂಬಲ್ಲಿರುವ ಜಯಪತಿಯ ಮಗಳು ಬನ್ನಂಜಳಿಗೆ,

ಮೇಲ್ಕಂಡ ವೃಸಹರಣೆಯ ಅರ್ಜಿದಾರರು ಜೀವನಾಂಶದ ಬಗ್ಗೆ ಖಾಲರಿ ವ್ಯಾಜ್ಯ ಮೂ ದಿರುವುದರಿಂದ ಸದ್ರಿ ವ್ಯಾಜ್ಯವು ತಾರೀಕು 9.7.1969ಕ್ಕೆ ಕಿವ್ಮ ಹಾಜ್ರಾತಿ ಬಗ್ಗೆ ಇದೆ. ಆ ದಿವಸ ಕಿವ್ಮ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಸ್ವತಹಾಯೊ ವಕೀಲರ ದ್ವಾರ ಹಾಜ್ರಾಗಿ ಕಿವ್ಮದೇವನಾದೀಗ ಆಕ್ಷೇಪಣೆ ಇದ್ದ ರೆ ತಿಳಿಸುವುದು, ತಪ್ಪಿದ್ದಲ್ಲಿ ನಿವ್ಮನ್ನು ಕಿವ್ಮ ವೂಡಿ ದಾವೆಯನ್ನು ಮುಂದುವರಿಸಲಾಗು ವುದು. ತಿಳಿದಿರಲಿ.

(ಕೋರ್ಟ್ ಡ್ಯೂಂ ಸ್ಕಾರ್)

N. J. Kadamba
Advocate
BELTANGADY
ಬೆಳ್ತಂಗಡಿ, 19.6.1969.

ಆಶಾವಾದದ ಚಕ್ರ

ಬರೆದವರು:— ಶ್ರೀ ಎಂ. ರಂಗರಾವ್

ಪ್ರೆಸ್ಸಿನಿಂದ ಬಂದ ಗ್ಯಾಲೀ ಪ್ರೂಫಿನಲ್ಲಿ ಇಷ್ಟು ತಪ್ಪುಗಳೆ? ಅರಂಭದವೆಫಿಸುವ ತಪ್ಪುಗಳು. ಯೂವಾಗಲೂ ಹೀಗಿರುತ್ತಿರಲಿಲ್ಲ. ಈಗ ಹೀಗೇಕಾಯಿತು?

ಒಮ್ಮೆ ಹಾಗೆ ಕಂಪೋಸಿಂಗ್ ನಡೆಯುವಲ್ಲಿ ತಿರುಗಾಡಿ ಬಂದಾಗ ಅದೇ ಮೊತುಕತೆ. ಬೆಂಗಾಲ್, ಹರಿಯಾನಾ, ತಮಿಳುನಾಡು, ಕೇರಳ, ಪಂಜಾಬ್....

"ಎಲ್ಲದರಲ್ಲೂ ಒಂದೊಂದು ತಕ್ಕೊಂಡುಬಿಟ್ಟೆ"

"ನಮ್ಮ ಸಿಂಡಿಕೇಟಿನಲ್ಲಿ ಇಪ್ಪತ್ತು ಜನ ಇದ್ದಾರೆ. ಇನ್ನು ಐದು ಜನ ಸೇರಿದರೆ ಒಳ್ಳೇದಿತ್ತು.'

"ಎಲ್ಲಾ ಕೇರೀಸಿನಲ್ಲೂ ಒಂದೊಂದು ಕಕ್ಕೊಂಡು ಬಿಡಬೇಕು."

"ಹೋಗು ಬಿಡಪ್ಪ. ಕಳೆದ ಸಾರಿ ಓವರ್ ಟೈಮ್ ಸಿಕ್ಕಿದ ಹಣ್ಣು ರೂಪಾಯಿಗೂ ಒಂದೊಂದು ಕೇರೇಸ್ ಕೇರಳದ್ದು ತಕ್ಕೊಂಡುಬಿಟ್ಟೆ — ದುಡ."

"ಅದಕ್ಕೇ ಒಬ್ಬನೇ ತಕ್ಕೊಳ್ಳಬಾರದು. ಗ್ರೂಪ್ ಸೇರಿಬಿಡಬೇಕು. ಯೂಂ ದರೂ ಒಬ್ಬ ಅದೃಷ್ಟವಂತ ಇದ್ದರೆ ಎಲ್ಲರಿಗೂ ಹೊಡೆದೀತಲ್ಲಾ!"

"ಹಾಗಾದಾ. ಹೊಡೆಯುತ್ತೆ. ದುರದೃಷ್ಟವಂತರ ಕತ್ತೇ ಒಡೆತ ಬೀಳುತ್ತೆ ಅದೃಷ್ಟವಂತರಿಗೆ ಸಹಾ!'

ಅ ಮೇಲೆ ನಗು.

ಈ ನಿಧವಾಗಿ ಎಡೆತೆರವಿಲ್ಲದ ಮಾತುಕತೆಗಳ ನಡುವೆ ಕೆಲಸದ ವೇಳೆ ಮುಗಿಸ್ಲಿ ನಿಲ್ಲುತ್ತೆ? ಒಂದೊಂದು ರಾತ್ರಿಯೂ ಒಂದೊಂದು ಯುಗದಂತೆ ತಾನೇ. ತಾನೇಕು ೭—೧೨—೧೯೬೯ — ೧೦—೧೨—೧೯೬೯ ಅಂತ ಪ್ರತಿ ದಿನವೂ ಜನರಿಗೆ ಅದರಲ್ಲೇ ತಲೆ ಹೊಗಿಸುವ ಹಾಗಾಗುತ್ತೆ.

"ಅಯ್ಯೋ, ಹೋಟಲಿಗೆ ರಶ್ಶು ಕಡಮೆಯಾಯ್ತು' ಅಂತ ಹೋಟಲಿನವರಾಗ

'ಸಿನಿಮಾಕ್ಕೆ ಗುಂಪು ತಗ್ಗಿತು' ಅಂತ ಸಿನಿಮಾ ಶಾಪೆಕುವರ ಗೊಗರು.

ಈಗ ಆ ಗೋಳು ಗೀಳುಗಳನ್ನು ಕೂಡ ಕೇಳುವವರಿಲ್ಲ.

ದಿನಾ ಪೇಪರಾಟವಾದರೆ ಯಾರು ಕೇಳುತ್ತಾರೆ? ಅದೊಂದ ಸರ್ವೇಸಾಮಾನ್ಯ ಹಾಡು, ಅಷ್ಟೇ.

ಮೊದಮೊದಲು ಬಾಟ್ಲೇ ಟಿಕೆಟ್ಟು ಸಿಕ್ಕುವುದೇ ಕಷ್ಟ. ಹೊರಗೆ ಬಂದ ಅರ್ಧ ಗಂಟೆಯೊಳಗೆ ಎಲ್ಲಾ ಖಾಲಿ. ಏನು ಕ್ಯೂ! ಏನು ಗಲಾಟೆ! ಏನು ಪೋಲೀಸು ಕಾವಲು! ಕಾಳೆ ಟಿಕೆಟ್ ಬರತ್ತೆ ಅಂತ ಇರುವಾಗ ಮಂಚಿನ ರಾತ್ರಿಯೇ ಬಂದು ಕ್ಯೂ ಹಿಡಿದು ನಿಂತವರ್ಯಾರೆ. ಊಟ ಬೇಡ, ತಿಂಡಿ ಬೇಡ ಒಂದು ಟಿಕೆಟ್ ಸಿಕ್ಕಿದರೆ ಲಕ್ಷ ಸಿಕ್ಕಿದಷ್ಟೇ ಸಂತೋಷ. ಅಂತೆಯೇ ಬ್ಲಾಕಿನಲ್ಲಿ ಲಾಟ್ರೀ ಟಿಕೆಟ್ ಮಾರಿ ಲಾಭ ಗಳಿಸಿದವರಿದ್ದಾರೆ

ಮತ್ತೆ ಬರ ಬರುತ್ತ ಪ್ರಾರಂಭದ ಆವೇಶ ತಗ್ಗಿತನ್ನಿ. ಬೀದಿಬೀದಿಯಲ್ಲೆಲ್ಲಾ ಸಿಕ್ಕುತ್ತಾ ಇದೆ ಈಗ. ಎಲ್ಲರೂ ಒಂದೋ ಎರಡೋ, ಹತ್ತೋ, ನೂರೋ ತೆಗೆದು ಕೊಳ್ಳುತ್ತಲೇ ಇದ್ದಾರೆ. ನಂಬುಗೆ ಇಲ್ಲದವರು ಕೂಡ ಕೊನೇ ಪಕ್ಷ ಒಂದಾದರೂ ಇರಲಿ ಅಂತ ತೆಕ್ಕೊಳ್ಳುತ್ತಾರೆ.

ಕುರುಡು ಅದೃಷ್ಟ, ಕಣ್ಣಿಗೆ ಕಾಣಿಸದ ಕುದುರೆ ಜಾತಿಯ ಪ್ರಾಣಿ ತಿರುಗಾಡುತ್ತಾ ಇದೆಯೆಂತಲೂ, ಅದು ಫಲ್ಯಾವೆ ಹಿಗಾಲಿನಿಂದ ಒದೆಯುತ್ತದೆಂತಲೂ ಆಗ ಸ್ವಲ್ಪೋ ಹೆಚ್ಚೋ ಹಣದ ಹುಳಿ ಸುರಿಯುತ್ತದೆಂತಲೂ ನಂಬದವರಿಲ್ಲ. ನಾಸ್ತಿಕರೂ ಸಹ.

ಸಿನಿಮಾದ್ದೊಂದು ಹುಚ್ಚು, ಮಾಧುಪಾನದ್ದೊಂದು ಮತ್ತು ಖಂಠಸುಂಧಾದ್ದು, ಕುದುರೆ ಜೂಜು ಮಟಕ ಬರಸು ಎಂಧಾದ್ದು ಅಂತ ಇಷ್ಟು ತಿಳಿದುಕೊಂಡಿದ್ದರೆ, ಈಗ ಅವೆಲ್ಲಾ ನಾಚಿಕೆಕೊಳ್ಳುವ ಹಾಗೆ ಲಾಟ್ರೀಗುಂಗು ಪ್ರಪಂಚದ ತಲೆಯೇ ಇಡೀ ತಿರುಗಾಡುತ್ತದೆ.

ವಧ್ಯ ಕುದುರೇಜೂಜುಗಳಲ್ಲಿ ಅವುಗಳಲ್ಲಿ ಪಳಗಿದವರಷ್ಟೇ ತಲೆಹಾಕುತ್ತಾರೆ. ಸಿನಿಮಾ ಬಿಡಿ, ಕಲಿತು ಹಚ್ಚು, ಕತೆಯ ಹುಚ್ಚು, ಶೃಂಗಾರ ಹುಚ್ಚು, ಬೇಕಾದಾರ ಬೇಕಾದ ಹಾಗೆ ಪುಸ್ಕರಿಸಲು ಸಾಧ್ಯವಿದ್ದದ್ದು.

ಅಲ್ಪ ಸುಡಿಗಾಸಿನಂತೆ ಕಾಣುವ ಲಾಟ್ರಿಯೋ? ಕೇವಲ ಒಂದು ರೂಪಾಯಿ! ಗ್ರೂಪಿನಲ್ಲಾದರೆ ಅಂತಾಂತರಗಳೇ. ಶ್ರೀವಂತ, ಬಡವ, ಮುದುಕ, ಪುಕ್ಕಳ, ಗಂಡು, ಹೆಣ್ಣು ಎಲ್ಲರನ್ನೂ ಆಕರ್ಷಿಸುತ್ತದೆ. ಸಿಕ್ಕಿದರೆ, ಲಪ್ಪ, ಸಾವಿರ, ಫೂರು. ಯಾರಿಗೆ ಬೇಡ? ಇದ್ದವರಿಗೂ ಬೇಕು, ಇಲ್ಲದವರಿಗೂ ಬೇಕು.

ಹಣ! ಎಲ್ಲರನ್ನೂ ತನ್ನೊಳಗೆ ವಡಿಕೊಳ್ಳುವಂಥದ್ದು. 'ಹಣ ಕಂಡರೆ ಹೆಣವೂ ಬಾಯಿ ತೆರೆಯುತ್ತೆ.'

ವಿದ್ಯುಚ್ಛಕ್ತಿಯಾಕಡಂತಿರುವ ಹಣ ಯಾರ ಸೃಷ್ಟಿ? ದೇವರದೆ? ಪ್ರಕೃತಿಯದೆ?

ಅವೆರಡರದೂ ಅಲ್ಲ, ಮನುಷ್ಯನದೇ. ಬುದ್ಧಿಶಾಲೀ ಮಕ್ಕಳನ್ನದೇ.

ದೇವರದಾಗಿರುತ್ತಿದ್ದರೆ ಅದರ ಗುಟ್ಟು ದೇವರಿಗೇ ಗೊತ್ತಿರಬೇಕಿತ್ತು. ಪ್ರಕೃತಿಯದಾಗಿರುತ್ತಿದ್ದರೆ ಎಲ್ಲಾ ಪ್ರಾಣಿಗಳಿಗೂ ಅದರೊಂದಿಗೆ ಸಂಬಂಧವಿರಬೇಕಿತ್ತು.

ಬುದ್ಧಿಯುಳ್ಳ ಮನುಷ್ಯ ವ್ಯವಹಾರಕ್ಕೆ ಸುಲಭವಾಗಲೀ ಅಂತ ಹಣವನ್ನು ಸೃಷ್ಟಿಸಿಕೊಂಡ. ವಿಶ್ವವಾಗಿಗುವಾಗ ಅದರಿಂದ ಒಳ್ಳೆಯದೇ ಆಗಿತ್ತು. ಆತಿಯಾದಾಗ? ರೂಪಾಯಿ ಕಾಸಿಗೆ ಸಮಾನವಾಯಿತು.

ಹಿಂದೆ ವಸ್ತುಗಳಿಗೆ ಪ್ರತಿವಸ್ತುಗಳು, ದುಡಿತಕ್ಕೆ ಧಾನ್ಯ ಎಂಬ ರೀತಿಯಲ್ಲಿ ವಿನಿಯೋಗವಾಗುತ್ತ ವ್ಯವಹಾರ ಸಾಗಿಕೊಂಡಿತ್ತು. ಆ ವ್ಯವಹಾರದಲ್ಲಿ ಹೊರುವಷ್ಟೇ ಹೊರೆ. ಹೆಚ್ಚಿಗೆ ಹೇಗೆ ಸಾಧ್ಯ?

ಹೆಚ್ಚಿಗೆ ಬೇಕೆಂಬ ಆಕಾಂಕ್ಷೆ ಯೂವಾಗಲೂ ಎಲ್ಲರ ಮನಸ್ಸಿನಲ್ಲಿರುವುದೂ ಇದ್ದದ್ದೇ. ಆ ಹೆಚ್ಚಿನ ಹೊರೆ ಹೊರುವ ಸಾಕಾರ್ಯಾಗಾಗಿಯೇ ಅಯಿತು ನಾಣ್ಯಗಳ ಸೃಷ್ಟಿ. ಸುಲಭವಾಗಿ ಹೆಚ್ಚಿಚ್ಚ ಸಂಗ್ರಹಿಸುವ ಬದ್ಧಿಗೆ ಎಡೆಯೂಡಿ ಧಫಳ ಬಡವ ಅಂತರ ಹೆಚ್ಚಿತು. ಅಶಿಯೂ ಹೆಚ್ಚಿತು. ಹೆಚ್ಚಾದ ವಸ್ತು ಹುಗಿದಿಟ್ಟರು. ಹೀಗೆ ಹಿಂದಿನಿಂದ ನಡೆದು ಬಂದ ಕತೆ. ಬದ್ಧಿ ಓಡಿತ್ತಿತ್ತು.

ಆ ಮೇಲೆ ನಾಣ್ಯಗಳೂ ಭಾರವೆಫಿಸಿದಾಗ, ಹಾರವಸ್ತು ಹಗುರಾದ ಕಾಗದಗಳು ಬಂದುವು. ಹೊರಲೂ ಕೊಳ್ಳೇ ಲಾಭಗಳಿಕೆಲೂ ಇನ್ನೂ ಸುಲಭವಾಯಿತು. ಜೂವ ವಜ್ರಾಗಳ ವ್ಯೂಹಾಜಾಲದಿಂದ ಪ್ರಜೆಗಳೆಲ್ಲ ಮುಸ್ಸಂದರು.

ಅನ್ಯಾಯದೊಳಗೇ ನ್ಯಾಯ, ಬ್ಯಾಂಕಿಳಲ್ಲಿದ್ದುದ ಬಿಳೀ ಹಣ. ಅದಕ್ಕೆ ಹೊರತಾದುದೆಲ್ಲಾ ಕಪ್ಪುಹಣ. ಸಿಕ್ಕುಸಿಕ್ಕಾಗಿರುವ ಈ ಜಾಲದೊಳಗೆ ನಡೆಯಾಡುವವ ಫೇ ಜಾಣ. ಈ ಬಗೆಯ ಜಾಣನು ಸತ್ಯದಂತಿರುವ ಸುಳ್ಳುಗಾರನಾಗಿರಬೇಕು. ದಯೆಯು ಫೀರು ಸುರುಳ ಕಳ್ಳನ ಹೃದಯವನ್ನು ಅರಿತಿರಬೇಕು. ಹೊರಗೊಂದು ಒಳಗೊಂದು ಅವನಿರಬೇಕು.

ಸತ್ಯ, ನ್ಯಾಯ, ಧರ್ಮ, ಪಾಪ ಭೀತಿ, ಒಳಗೂ ಹೊರಗೂ ಒಂದೇ ರೀತಿ ಇರಲ್ಲಿ ನಿತ್ಯ ಕಪ್ಪ ಅನುಭವಿಸುವವರಿಗೆ "ಸತ್ಯಕ್ಕೆ ಸಾವಿಲ್ಲ." ಎಂಬ ಕೊನೆಯ ಸತ್ಯಕ್ಕಾಗಿ ಕಾಯುವ ತಾಳ್ಮೆಯುಳ್ಳವರಿಗೆ ಉಳಿದ ಬಹುತೇಕರಿಗೆಲ್ಲ. 'ಸತ್ಯ ವಂತರಿಗಲ್ಲ ಈ ಕಾಲ'

ಸಿಕ್ಕಾಟಿದ ಬಲೆಯಲ್ಲಿ ಸಿಕ್ಕಿಕೊಂಡು ಮಿಕಮಿಕ ನೋಡುವ ಪರಿಸ್ಥಿತಿ ಬಡವರಿಗೆ ಮಾತ್ರ ಅಂದುಕೊಳ್ಳಬೇಡಿ ಶ್ರೀವಂತರಿಗೂ ಅಷ್ಟೇ. ಅಂತೆಯೇ ಪ್ರತಿಯೊಬ್ಬನಿಗೂ ಪದಾಟ. ಅದೇ ಯೋಚನೆ. ಹೀಗೆ ಮೆಟ್ಟಿಲಾದುದು ಹೇಗೆ ಗೆಲ್ಲುವುದು? ಹೇಗೆ ಕಾಯಿದೆಯ ಕಣ್ಣಿಗೆ ಮಣ್ಣು ಹಾಕುವುದು?

ಇದೇ ಒಂದು ಪುಣ್ಯ. ಸೋಲು ಗೆಲುವಿನಾಟ.

ಇಂಥ ಆಟಕ್ಕೆ ಹಂದ್ಯಗಳು ಸರಿಹೊಗೇ ಇವೆ.

ವೀರ ಪ್ರತಾಪ, ಬದ್ಧಿವಂತಿಕೆಗಳನ್ನು ಹೊರಸೂಸುವ ಹಂದ್ಯಗಳಾದರೆ ಎಲ್ಲರಿಗೂ ಥಾಗ-ಹಿಸಲು ಸಾಧ್ಯವಿಲ್ಲ.

ಅಪ್ಪೆಹೂದರೆ? ಅದೃಷ್ಟದ್ದು. ಶುದ್ಧ ಕುರುಡು ಹಂದ್ಯ. ಯೂರು. ಬೇಕಾದರೂ ಕಣಕ್ಕೆಳೆಯಬಹುದು! ನಡೆಸುವವರಿಗೆ ಕನಿಷ್ಠವೃಷ್ಟಿ.

ವಿದ್ಯಾರಣ್ಯರು ರಾಜ್ಯ ಸ್ಥಾಪನೆಗಾಗಿ ವಿಜಯ ಮಂತ್ರಾಲ ಗಳಿಗೆ ಕನಕವೃಷ್ಟಿ ಗರೆಸಿದರಂತೆ. 'ಮಂತ್ರಿಣಾಜ್ಞಾ ಕಥಾ ಪ್ರಥಾ'—ಎಂಬ ಹಾಗಾದರೆ ಈಗ ರಾಜಕೆಲ್ಲಿ. ಪ್ರಜೆಗಳದೇ ರಾಜ್ಯ ಪ್ರತಿ ಪ್ರಜೆಗೂ ಛನ್ನು ಇರುವಂಥ ದ್ದು. ಅದಕ್ಕೆ ತಕ್ಕ ಗುಣಗಳಿದ್ದರಾಯಿತ. ಅಂತೆಯೇ

(ಎಂಟನೇ ಪುಟ ನೋಡಿರಿ)

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
P. & S. C. 9/1969.

1. R. ರಾಧಕೃಷ್ಣ ಶೆಣೈ, 2. R. ಸತ್ಯನಾರಾಯಣ ಶೆಣೈ, 3. ವರದ ಬಾಯಿ, 4. ಸುಮಿತ್ರೆ ಬಾಯಿ, 5. ಇಂದುಮತಿ ಬಾಯಿ, 6. ವಿಶ್ವನಾಥ ಶೆಣೈ 7. ಪೂರಾಬಾಯಿ, 8. ಗುಲಾಬಿ ಬಾಯಿ — — ಅರ್ಜಿದಾರರು.

ಸಮಸ್ತ ಜನರಿಗೆ ಈ ದೂಲಕ ತಿಳಿಸುವುದೇನೆಂದರೆ :—

1೦೦ನೇ 7ನೇ ವರೆಗಿನ ಅರ್ಜಿದಾರರ ತಂದೆ 8ನೇ ಅರ್ಜಿದಾರಳ ಅಂಣ ಹಾಲಿ ವ್ಯತಕಟ್ಟಿರುವ ವಿ. ವಿ. ಶೆಣೈ ಯಾನೆ ವಾಸುದೇವ ವೈಕುಂಟ ಶೆಣೈರಿಗೆ ಬರತಕ್ಕ ಆರ್ಜಿಯಲ್ಲಿ ಕಾಣಿಸಿದ ಆಸ್ತಿಜುಗಳನ್ನು ವಸೂಲು ಮಾಡುವರಿ 9ನೇ ಅರ್ಜಿದಾರನ ಹೆಸರಿಗೆ Succession Certificate ಕೊಡಿಸಬೇಕಾಗಿ ಆರ್ಜಿದಾರರು ದಾಖಲಾಡಿದ ಸದ್ರಿ ಅರ್ಜಿಯು ತಾ. 1-7-1969ಕ್ಕೆ ತಕ್ಕಿಗೆ ಇಟ್ಟಿರುತ್ತದೆ. ಆಕ್ಷೇಪವುಳ್ಳವರು ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ಅಂತವರ ಗೈರಹಾಜರಿಯಲ್ಲಿ ಅರ್ಜಿ ಏಕಪಕ್ಷವಾಗುವುದು ಎಂತ ಕೋರ್ಟು ಮ್ಯಾಂ ಕ್ರಮದಾರ ತಿಳಿಸಿಯದೆ.

K. S. Kamath,
Advocate for Petitioners.
Karkala: 14—6—69.



ಆಧುನಿಕ ರಾಷ್ಟ್ರೀಯ ಸ್ಮಾರಕ : ಆಗಾಖಾನ್ ಅರಮನೆ

ಲೇಖಕರು: ಶ್ರೀ ಯು. ಆರ್. ರಾವ್.

ಅರಮನೆ ಕಾರಾಗೃಹವಾಗಿ ರೂಪಾಂತರಗೊಂಡು ಅಂತಿಮವಾಗಿ ಯಾತ್ರಾ ಕೇಂದ್ರವಾದ ರೋಚಕ ಇತಿಹಾಸ ಪೂನಾ ಪಟ್ಟಣದಲ್ಲಿರುವ ಆಗಾಖಾನ್ ಅರಮನೆಯದು. ಈ ಅರಮನೆಯು ಇಪ್ಪತ್ತೆರಡು ಶತಮಾನಗಳಷ್ಟು ಹಳೆಯ ಸ್ವಾತಂತ್ರ್ಯ ಹೋರಾಟದೊಂದಿಗೆ ತಾಸಂಬಂಧ ಹೊಂದಿದೆ.

ಗಾಂಧೀಜಿ ಜೀವಮಾನ ಕಾಲದಲ್ಲಿ ಅನೇಕ ಕಾರಾಗೃಹಗಳಲ್ಲಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಸತ್ಯಾಗ್ರಹ ಕೈಗೊಂಡಾಗ ಜೋಹಾನ್ಸ್‌ಬರ್ಗ್, ಪೋಲ್ಸ್‌ಮೂರ್, ಪ್ರಿಟೋರಿಯ ಮತ್ತು ಡ್ಯೂಂಸ್ ಫಾಂಟೇನ್ ಕಾರಾಗೃಹಗಳಲ್ಲಿ ಒಂಭತ್ತಂಗಿದ್ದರು. ಅವರು ಭಾರತದ ಅನೇಕ ಕಾರಾಗೃಹಗಳಲ್ಲಿದ್ದರು. ಕಾರಾಗೃಹವಾಸ ಅನೆ ಭವಿಸುವುದು ಸ್ವಾತಂತ್ರ್ಯಯೋಧರ ಪರಿಪಾಠವಾಗಿತ್ತು. 1942 ನೆ ಇಸವಿ ಜನವರಿ 21ನೇ ದಿನಾಂಕದಂದು ಗಾಂಧೀಜಿ "ಹರಿಜನ" ಪತ್ರಿಕೆಯಲ್ಲಿ ಬಾಪೂ ಹೀಗೆ ಬರೆದರು: ನಾವು ಇಂದು ಕಾರಾಗೃಹಗಳನ್ನು ಸ್ವಾತಂತ್ರ್ಯ ಪ್ರೇಮಿಗಳ ಆಶ್ರಯಸ್ಥಾನಗಳಾಗಿ ಪರಿವರ್ತಿಸಿದ್ದೇವೆ. ಇಷ್ಟರಲ್ಲಿಯೇ ನಿರ್ವಾಣ ಸಾಧನೆಯು ದೇಗುಲಗಳಾಗಿ ಅತ್ಯಂತ ಸುಲಭವಾಗಿ ರೂಪಾಂತರಿಸಬಹುದು. ಸಾಕ್ರಟೀಸ ವಿಷ ಸೇರಿಸಿದ ಕಾರಾಗೃಹದ ಕೊಠಡಿ ಪರಮಾನಂದದ ಕೇಂದ್ರವಾಗಿತ್ತು. ಅಂತಹ ಅವಿಸ್ಮರಣೀಯ ದೃಶ್ಯದ ನೆನಪಿನಿಂದ ಸಾಕ್ರಟೀಸ ಹೆಸರು ಜೀವಂತವಾಗಿದೆ.

ಅಚ್ಚಳಿಯದ ಸ್ಮಾರಕ

ಗಾಂಧೀಜಿ ಸಬರಮತಿ, ಯರವಾಡ ಮತ್ತು ಆಗಾಖಾನ್ ಅರಮನೆಯಲ್ಲಿ ಬಂಧಿಸಲಾಗಿದ್ದರೂ ಆಗಾಖಾನ್ ಅರಮನೆ ಐತಿಹಾಸಿಕ ಘಟನೆಗಳಿಂದಾಗಿ ಮನಸಿನ ಒಳದಲ್ಲಿ ಅಚ್ಚಳಿಯದೆ ನಿಂತಿದೆ. ಈ ಅರಮನೆಯ ವಿಸ್ತಾರ ಪ್ರದೇಶವು ಇಲ್ಲಿರುವ ಅತ್ಯಧಿಕ ಜೀವಗಳ ಸಮಾಧಿಯಿಂದ ಪವಿತ್ರಗೊಂಡಿದೆ. ಇಲ್ಲಿ ಬಾಪುವಿನ ಕಾರ್ಯದರ್ಶಿ ಶ್ರೀ ಮಹಾದೇವ ದೇಸಾಯಿ ಮತ್ತು ಸಹಧರ್ಮಿಣಿ ಕಸ್ತೂರಿಬಾ ಇವರ ಸ್ಮಾರಕಗಳಿವೆ.

ಜೋಬಾಯಿಡಂಲ್ಲ ಕವಿಶ್ರೀ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಭಾರತ ಬಿಟ್ಟು ತೊಲಗಿ ಎಂದು ಘೋಷಣೆಯೊಡಿದ ಮಾತ್ರದಲ್ಲಿ ಬೆಳಿಗ್ಗೆ ಎಂದರೆ 1942ನೇ ಇಸವಿ ಆಗಸ್ಟ್ 9ರಂದು ಮುಂಜಾನೆ ಬ್ರಿಟಿಷ್ ಸರ್ಕಾರವು ಗಾಂಧೀಜಿ ಮತ್ತಿತರ ನಾಯಕರನ್ನು ಸೆರೆಹಿಡಿಯಿತು. ಗಾಂಧೀಜಿ ಮತ್ತು ಮಹಾದೇವ ದೇಸಾಯಿ ಅವರನ್ನು ಆಗಾಖಾನ್ ಅರಮನೆಗೆ ಕರೆದೊಯ್ದರು. ಅಷ್ಟರಲ್ಲಿ ಕಸ್ತೂರಿ ಬಾ ಇವರಿಬ್ಬರನ್ನೂ ಸೇರಿಕೊಂಡರು. ಮಹಾದೇವ ದೇಸಾಯಿ ಹಾಗೂ ಕಸ್ತೂರಿಬಾ ಈ ಅರಮನೆಯಿಂದೀಚೆಗೆ ಜೀವಂತ ಮರಳಿಹೋಗಲಿಲ್ಲ.

ಮಹಾದೇವ ದೇಸಾಯಿ ಆಗಸ್ಟ್ 15 ರಂದು ಹೃದಯಾಘಾತದಿಂದ ಮರಣವನ್ನಪ್ಪಿದರು. ಬ್ರಿಟಿಷ್ ಸರ್ಕಾರ ಬಾಪು ಹಾಗೂ ಅವರ ಮಿತ್ರರಿಗೆ ದೇಸಾಯಿಯು ಪಾರ್ಥಿವ ಶರೀರವನ್ನು ಅರಮನೆಯಿಂದೀಚೆಗೆ ಅಂತಿಮ ವಿಧಿಗಳಿಗಾಗಿ ಕೊಂಡೊಯ್ಯಲು ಅನುಮತಿ ನೀಡದಿದ್ದರಿಂದ ಶವ ಸಂಸ್ಕಾರ ಅರಮನೆಯ ಬಯಲಿನಲ್ಲೇ ನಡೆಯಬೇಕೆಂದು ದೃಢವಾಗಿ ಹೇಳಿದರು. "ಯೂರೋಪಿಯ ತಂದೆಯೂ ತನ್ನ ಪುತ್ರನ ದೇಹವನ್ನು ಅಪರಿಚಿತರಿಗೆ ಕೊಡಲಾರ, ನಾನೇ ಮಹಾದೇವ ದೇಸಾಯಿಯ ಅಂತಿಮ ವಿಧಿ ಮಾಡಲಿಚ್ಛಿಸುವೆ" ಎಂದು ಘೋಷಿಸಿದರು. ಎರಡು ದಶಕಗಳಗಿಂತಲೂ ಮಿಗಿಲಾಗಿ ಗಾಂಧೀಜಿ ಶ್ರದ್ಧೆಯಿಂದ ಸೇವೆ ಸಲ್ಲಿಸಿ ಸಂಪೂರ್ಣವಾಗಿ ತೆರೆಯಲ್ಲಿ ಹಿಂದುಳಿದಿದ್ದ ವ್ಯಕ್ತಿಯು ಕಳೆದುಹೋಗಲಿರುವನ್ನು ಅರಮನೆಯ ಬಯಲಿನ ವಾಲೆಯಲ್ಲಿ ರಚಿಸಿದ ಚಿತಾಗ್ನಿಯಲ್ಲಿ ಭಸ್ಮ ಮಾಡಲಾಯಿತು. ಆ ಪ್ರದೇಶದಲ್ಲಿ ವೃಂದಾಯ ಸಮಾಧಿ ರಚಿಸಲಾಯಿತು. "ಮಹಾದೇವ ದೇಸಾಯಿ ಜೀವನವನ್ನೇ ಸೇದೆಗಾಗಿ ಮುಡಿಪಾಗಿದ್ದ ಆದರ್ಶದ ಫಲವು ನನ್ನ ಮಡಿಲಲ್ಲಿ ಪಿತೃ ಪೂಷನವಾಗಿರುವಂತೆ ಕಾಪಾಡಲು ನಾನು ಅವಿರ ಸಮಾಧಿಗೆ ನಿತ್ಯ ಪೂಜೆ ಹೋಗುತ್ತಿದ್ದೆ" ಎಂದು ಗಾಂಧೀಜಿ ನುಡಿದಿದ್ದಾರೆ.

ಸಾಂಕೇತಿಕ ಪ್ರತಿಜ್ಞೆ

1942ನೇ ಇಸವಿ ಸ್ವಾತಂತ್ರ್ಯ ದಿನದಂದು. ಈ ಅರಮನೆಯಲ್ಲಿ ಬಂಧಿತರಾಗಿದ್ದ ಗಾಂಧೀಜಿ ಮಸ್ತಿಕರು ಈ ರೀತಿ ಸಾಂಕೇತಿಕ ಪ್ರತಿಜ್ಞೆ, ಕೈಗೊಂಡರು. "ಸತ್ಯ ಅಹಿಂಸಾ ಮಾರ್ಗದಲ್ಲಿ ಭಾರತದ ಅಖಂಡ ಸ್ವಾತಂತ್ರ್ಯಕ್ಕೆ ದುಡಿಯುವುದೇ ನನ್ನ ಗುರಿಯಾಗಿದೆ. ಈ ಗುರಿ ಸಾಧನೆಗಾಗಿ ಸ್ವಾತಂತ್ರ್ಯಗಳಿಸುವವರೆಗೆ ವಿಶ್ರಾಂತಿ ಹೊಂದ ವುದಿಲ್ಲವೆಂದು ಈ ಸ್ವಾತಂತ್ರ್ಯ ದಿನದಂದು ಪುನಃ ಪ್ರತಿಜ್ಞೆ ಮಾಡುತ್ತೇವೆ. ಈ ಪ್ರತಿಜ್ಞೆಯು ಭಗವಂತ ಅಲ್ಲಾ ಅಥವಾ ಪರಮಾತ್ಮನೆಂದ, ಕರೆಯುವ ಅಗೋಚರ ದೈವಿ ಶಕ್ತಿಯಿಂದ ಫಲ ಕಾಣಲಿಯೆಂದು ಆಶಿಸುವೆ"

ಆಗಾಖಾನ್ ಅರಮನೆಯಲ್ಲಿ ಬಂಧಿತರಾಗಿದ್ದಾಗಲೇ, 1943ನೇ ಇಸವಿ ಫೆಬ್ರುವರಿ ಮಾರ್ಚ್ ತಿಂಗಳಲ್ಲಿ ಗಾಂಧೀಜಿ 21 ದಿನಗಳ ಉಪವಾಸ ಆರಂಭಿಸಿದರು. ಈ ಸಮಯದಲ್ಲಿ ಬಾಪು ಅರಮನೆಯ ಹೊರಗೆ ವೈದ್ಯರ ವ್ಯವಸ್ಥೆ ಮಾಡಿಕೊಳ್ಳುವಂತೆ ಎಂದು ಸರ್ಕಾರ ಸೂಚಿಸಿತ್ತು. ಆದರೆ ಉಪವಾಸವನ್ನು ಕಾರಣಕ್ಕಾಗಿ ಗಾಂಧೀಜಿ ಬಿಡುಗಡೆ ಹೊಂದಲು ಬಯಸಲಿಲ್ಲ. ಗಾಂಧೀಜಿ ಮಾರ್ಚ್ ಮೂರನೇ ದಿನಾಂಕದಂದು ಮಾಡಿದ ಕಸ್ತೂರಿಬಾ ಫೋಷಿಸಿ ತಕ್ಷಣ ರಿಸವನ್ನು ಸೇವನಿಗೆ ಸ್ವೀಕರಿಸುವ ಮಾಲಿಕ ಮಾತ್ರ ಯಶಸ್ವಿಯಾಗಿ ಸಿದರು. ಆಗ ಗಾಂಧೀಜಿಯು ನೆಚ್ಚಿದ ಫಲಪೆಗಳಿಗೆ ಹಾಡಲಾಯಿತು. ಶ್ರೀಮತಿ ಸರೋಜಿನಿ ನಾಯ್ಡು "ದೇವನಿಗೆ ಇದೋ ನನ್ನ ಪ್ರಾರ್ಥನೆ" ಎಂಬ ರವೀಂದ್ರರ ಗೀತೆಯನ್ನು ಹಾಡಿದರು. ಗಾಂಧೀಜಿ ಉಪವಾಸದ ಕರಿಣ ಅನುಭವವನ್ನು ಎದುರಿಸಿದರು ಗಾಂಧೀಜಿ ಸಾವಿಗೆ ಸಮೀಪದಲ್ಲಿದ್ದರು. ಆದರೆ ನನ್ಮೆಲ್ಲರನ್ನೂ ಹೂರ್ಣರಾಗಿ ಮಾಡಿದರು ಎಂದು ವೈದ್ಯ ಡಾ. ಬಿ. ಸಿ. ರಾಯ್ ನುಡಿದರು.

ಪಾವನ ಕ್ಷೇತ್ರ

ಆಗಾಖಾನ್ ಅರಮನೆ ಕಸ್ತೂರಿಬಾ ಅವರ ಫಿಫನದಿಂದ ವತ್ತೊಂದು ಸ್ಮಾರಕ ಹೊಂದುವುದರ ಮೂಲಕ ಪಾವನಗೊಂಡಿತು. ದೇಶದಾದ್ಯಂತ ಸ್ವಾತಂತ್ರ್ಯ ಯೋಧರನ್ನು ಬಂಧಿಸಿದ ಘಟನೆ ಹಾಗೂ ಪತಿಯು ಉಗ್ರ ಉಪವಾಸವನ್ನು ಕೈಗೊಂಡ ದಾರುಣತೆ ಕಸ್ತೂರ್ಬಾ ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿತು. ಅನೇಕ ಹೃದಯಘಾತಗಳನ್ನು ಅನುಭವಿಸಿದ ಕಸ್ತೂರಿಬಾ 1944ನೇ ಇಸವಿ ಫೆಬ್ರವರಿ 22ರಂದು ಮಹತ್ತಿನ ರಾತ್ರಿಯು ದಿವ್ಯ ಗಾಂಧೀಜಿಯು ತೊಡೆಯ ಮೇಲೆ ತಲೆಯಿಟ್ಟು ಮಲಗಿದಾಗ ಕೊನೆಯುಸಿರೆಳೆದರು. ಅಕೆ ಖಾಯಿಲೆಯಿಂದ ನರಳಿದಾಗ ಮರಣದಿಂದ ಬೇರ್ಪಡುವ ವರೆಗೆ ಗಾಂಧೀಜಿ ಪತ್ನಿಯ ಜತೆಯಿದ್ದರು. ಅಫಾತ್ಸೆತ ಮರಣ ಬ.—ಬಾಪುವಿಗೆ 62 ವರ್ಷಗಳ ಅಪೂರ್ವ ಬಾಂಧವ್ಯಕ್ಕೆ ಅಂತಿಮ ಗೀತೆ ಹಾಡಿತು. ಅಕೆಯ ಅಂತಿಮ ವಿಧಿಗಳು ಅರಮನೆಯೂಳಿ ಮಕ್ಕಳು ಹಾಗೂ ಬಂಧುಗಳ ಸಮಕ್ಷಮದಲ್ಲಿ ನಡೆಯಬೇಕೆಂದು ಬಾಪು ತಿಳಿಸಿದರು. ಇಷ್ಟಿದ್ದರೂ ಮಹಾದೇವ ದೇಸಾಯಿಗೆ ಮಾಡಿದ ಅಂತಿಮ ವಿಧಿಯಂತೆ ಅರಮನೆಯ ಬಯಲಿನಲ್ಲಿ ನಡೆಸುಲೆಂದು ನುಡಿದರು. ಸರ್ಕಾರಿ ಎಂಡನೆಯ ಕೋರಿಕೆಗೆ ಒಪ್ಪಿರಿ ಕೀಡಿತು. ಕಸ್ತೂರಿಬಾ ಬಂಧುಗಳು ಅಂತಿಮ ವಿಧಿಗೆ ಹಾಜರಿರುವಂತೆ ಅನುಮತಿ ಕೀಡಿತು. ಅಕೆಯ ಪುತ್ರರು ವಾರ್ಧಿನ ಶರೀರವನ್ನು ಹೊತ್ತರು. ಗಾಂಧೀಜಿಯು ಕಣ್ಣೀರು ಕಸ್ತೂರಿಬಾ ಅವರ ಶರೀರ ಅಗ್ನಿದೇವನಿಗೆ ಅರ್ಪಿತವಾಯಿತು.

ಆಗಾಖಾನ್ ಅರಮನೆಯಲ್ಲಿ ಕಸ್ತೂರಿಬಾ ಜೀವನಕ್ಕೆ ಸಂಬಂಧಿಸಿದ ನಿರ್ಜೀವ ವಸ್ತುಗಳೂ ಗಾಂಧೀಜಿಯು ಹೃದಯವನ್ನು ಕರಗಿಸಿತು. ಪತ್ನಿ ಖಳಸುತ್ತಿದ್ದ ಮೇಜು ಜವನ್ನು ತರಿಸಿ ಅದರ ಮುಂದೆ ಕುಳಿತು ಸರಳ ಉಪಹಾರ ಸ್ವೀಕರಿಸಿದಾಗ ಹಿಂಗೆ ನುಡಿದರು: ಈ ಮೇಜು ನನ್ನ ಅತ್ಯಮೂಲ್ಯ ವಸ್ತುವಾಗಿತ್ತು. ಈ ಮೇಜಿನ ಮೇಲೆ ಬಾ ತಲೆಮಾಸಿನ ಅಸಂಖ್ಯ ಲೇಖನಗಳಿದ್ದವು. ಚಿತ್ರ ಸದಾ ನನ್ನ ಕಣ್ಣೆದುರಿಗೆ ಕಟ್ಟಿದೆ. ಮಹಾದೇವ ದೇಸಾಯಿಯು ಸಮಾಧಿಯು ಇಲ್ಲಿ ಮತ್ತೊಂದು ಸಮಾಧಿ ಎದ್ದು ನಿಂತಿತು.

ಅನಾರೋಗ್ಯದ ಕಾರಣಕ್ಕಾಗಿ ಗಾಂಧೀಜಿಯನ್ನು ಮೇ 6ನೇ ದಿನಾಂಕದಂದು ಬಿಡುಗಡೆ ಮಾಡಲಾಯಿತು. ಗಾಂಧೀಜಿ ಸೆರೆಯಿಂದ ಹೊರಬರುವ ವನ್ನ ಸಮಾಧಿಗೆ ಅಂತಿಮ ದರ್ಶನ ನೀಡಿದರು. ಸಮಾಧಿಗು ಮೇಲೆ ಪುಷ್ಪಗುಚ್ಛ ಇರಿಸಿ, ಪ್ರಾರ್ಥನೆ ಸಲ್ಲಿಸಿದರು. ಆಗಾಖಾನ್ ಅರಮನೆಯಿಂದ ಹೊರಬರುವ ಮುನ್ನ ಬಾಪೂ ವಿಚಾರಲಹರಿ ಹೀಗೆ ಹರಿಯಿತು: "ಮಹಾದೇವ ಭಾಯಿ ಹಾಗೂ ಕಸ್ತೂರಿಬಾ ಸ್ವಾತಂತ್ರ್ಯದೇವಿಯ ಪದತಲದಲ್ಲಿ ಜೀವ ಅರ್ಪಿಸಿ ಅಮರರಾದರು. ಅವರು ಸೆರೆಮನೆಗಳಲ್ಲಿ ಮರಣ ಅಪ್ಪಿದ್ದರೆ ಇದೇ ಕೀರ್ತಿ ಬರುತ್ತಿತ್ತೇ?"

ಬಾಪೂ ಜೀವಿತಯಾತ್ರೆ ಹಾಗೂ ಕಾರ್ಯಕ್ಷೇತ್ರದಲ್ಲಿ ಅತ್ಯಂತ ಘೋರ ಸಹಚರರಾಗಿದ್ದವರ ಸಮಾಧಿ ಪವಿತ್ರಕ್ಷೇತ್ರವೆನಿಸಿತು. ಗಾಂಧೀಜಿ ಮೇ 6ನೇ ದಿನಾಂಕದಂದು ಬೊಂಬಾಯಿ ಸರ್ಕಾರಕ್ಕೆ ಪತ್ರ ಬರೆದರು: 'ಮಹಾದೇವ ದೇಸಾಯಿ ಹಾಗೂ ಕಸ್ತೂರಿಬಾರವರ ದಹನ ನಡೆದ ಸ್ಥಳವನ್ನು ಜೋಪಡಿಸಲಾಗಿದೆ. ಅದು ಪವಿತ್ರ ಭೂಮಿ ಒಂಭತ್ತರ ತಂಡ ಈ ಸ್ಥಳಕ್ಕೆ ದಿನಂಪ್ರತಿ ಎರಡು ಬಾರಿ ಹೋಗಿ ದಿವಂಗತರ ಸ್ಮರಣೆಗೆ ಪುಷ್ಪಾಂಜಲಿ ಅರ್ಪಿಸಿ, ಪ್ರಾರ್ಥನೆ ಸಲ್ಲಿಸಿದೆ. ಸರ್ಕಾರ ಈ ಸ್ಥಳವನ್ನು ಪಡೆಯುತ್ತೆ ಎಂದು ನಂಬಿನ್ನೇನೆ ಆಗಾಖಾನ್‌ಗೆ ಸೇರಿದ ಪ್ರದೇಶದ ಪೂರ್ವಭಾಗವನ್ನು ಈ ಸಮಾಧಿಗೆ ಹೋಗಿ ಬರಲು ಪಿತ್ರರು ಹಾಗೂ ಬಂಧುಗಳಿಗೆ ಅವಕಾಶ ಸಿಗಲಿ. ಸರ್ಕಾರದ ಅನುಮತಿಯಿಂದ ಈ ಪವಿತ್ರ ಸ್ಥಳದ ನೈರ್ಮಲ್ಯ ಹಾಗೂ ಭೌತಿಕ ಪ್ರಾರ್ಥನೆಗೆ ಏರ್ಪಾಟು ಮಾಡಲು ಇಚ್ಛಿಸುವೆ. ನನ್ನ ಪ್ರಾರ್ಥನೆಯನ್ನು ಸರ್ಕಾರ ಸೂಕ್ತವಾಗಿ ಪರಿಗಣಿಸುವುದೆಂದು ನಂಬಿದ್ದೇನೆ. ಗಾಂಧೀಜಿ ಮೇ 9ರಂದು ಮತ್ತೆ ಆಗಾಖಾನ್ ಅರಮನೆಗೆ ಹೂ ಗಿಡಗಳನ್ನು ತಂದು ಸಮಾಧಿಗಳಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಔದಾರ್ಯದ ಫಲ

ಆಗಾಖಾನ್ ಅರಮನೆ ಅವರ ಮೂಲೇಕರ ಔದಾರ್ಯದ ಫಲವಾಗಿ ಪವಿತ್ರ ರಾಷ್ಟ್ರೀಯ ಸ್ಮಾರಕವಾಗಲು ಕಸ್ತೂರಿಬಾ. ಮರಣದ ನಂತರ 25 ವರ್ಷ ಕಾಲ ಬೇಕಾಯಿತು. ಯಾತ್ರಾ ಸ್ಥಳವಾಗಿದ್ದ ಈ ಅರಮನೆಗೆ ಗಾಂಧೀಜಿಯು ಜೀವನ ಮತ್ತಿತರ ಕಾರ್ಯಕ್ರಮಗಳಲ್ಲಿ ಸಾಂಕೇತಿಕ ಸಂಬಂಧವೊಂದಿದೆ. ಗಾಂಧೀಜಿ ಆಗಾಖಾನ್ ಅರಮನೆಯಲ್ಲಿ ತೀವ್ರ ಅಧ್ಯಯನ ಮಾಡಿದರು. 74ನೇ ವಯಸ್ಸಿನಲ್ಲಿ ಪ್ರಪ್ರಥಮವಾಗಿ ಕಾರ್ಲೈಲ್‌ರ ಕೃತಿ ಓದಿದರು. ಈ ಅರಮನೆಯಲ್ಲಿ ಸ್ವಲ್ಪಕಾಲ ಗಾಂಧಿಜಿ ದಿನಂಪ್ರತಿ ಒಂಭತ್ತಾರು ಕಸ್ತೂರಿಬಾಗೆ ಗುಜರಾತಿಯಲ್ಲಿ ವ್ಯಾಕರಣ, ಕಾವ್ಯಗಳಿಗೆ, ಇತಿಹಾಸಗಳನ್ನು ಬೋಧಿಸಿದರು. ಗಾಂಧೀಜಿ ಪತ್ನಿಗಾಗಿ ಈ ತಾಣದಲ್ಲಿ ರಾಮಾಯಣ, ಭಾಗವತಗಳ ಕೆಲವು ಅಧ್ಯಾಯಗಳನ್ನು ಸಂವಾದಿಸಿದರು. ಈ ಅರಮನೆಯಲ್ಲಿದ್ದಾಗ ಬಾಪೂ ಆರೋಗ್ಯ

ಉಳಿದ

ಪಿಷ್ಟಪುಟಗಳಿಗೆ ತಿರುಗಿಸಿ

ಸರ್ವ ಶರಣನಲ್ಲಿ ಶರಣಾಗತಿ

"ಆನಂದ"ವೆಲ್ಲರೂ ಬಯಸುವ ವಸ್ತು. 'ಬ್ರಹ್ಮಾನಂದ'ವೇ ಎಲ್ಲ ಆನಂದಗಳಿಗೂ ನೆಲೆಯೆಂದು ಅಧ್ಯಾತ್ಮವಾದಿಗಳ ಹೇಳಿಕೆ. 'ಕಾವ್ಯಾನಂದ'ವು ಬ್ರಹ್ಮಾನಂದದ ಸಹೋದರವಷ್ಟೇ ಹೊರತು ಬ್ರಹ್ಮಾನಂದವಾಗಲಾರದು. ಬ್ರಹ್ಮಾನಂದ ಅಪೂರ್ವ ಚಿನ್ನೀಯವಾದರೂ ಅನುಭವವೇದ್ಯ. ಇದನ್ನು ಹೊಂದುವುದಕ್ಕೆ ಭಗವದ್ಭಕ್ತಿಯೇ ಏಕೈಕ ಸಾಧನ; ಇದು ಸರಳ ಮತ್ತು ಸುಗಮ ಉಪಾಯ.

ಭಕ್ತಿಯೆಂದರೇನು? ಭಕ್ತಿಯೆಂದು ಹೇಳಲು ಬಹಳ ಸುಲಭ; ಆದರೆ, ಅದನ್ನು ಸಾಧಿಸಲು ಮಾತ್ರ ಬಹಳ ಕಠಿಣ. ಭಕ್ತಿಯೆನ್ನುವುದು ಬಾಹ್ಯಾಡಂಬರವಲ್ಲ; ಅದು ಪ್ರದರ್ಶನಯೋಗ್ಯ ವಸ್ತುವಲ್ಲ, ಅದು ಹೃದಯದಲ್ಲಿನ ಗುಪ್ತ ಧನ ಅಥವಾ ಗಟ್ಟು. ಈ ಗುಪ್ತಧನವು ರಹಸ್ಯದಲ್ಲಿ ರಹಸ್ಯವಾಗಿರುವಷ್ಟು ಅದರ ಮೌಲ್ಯವು ಹೆಚ್ಚುತ್ತಹೋಗುತ್ತದೆ. ಭೂಮಿಯಲ್ಲಿ ಹೂತಿಟ್ಟ ಗಂಟು ಆಳ ಆಳಕ್ಕಿಳಿದಂತೆ ಅಗೆಯುವವರಲ್ಲಿ ಕೌತುಕ ಹೆಚ್ಚುತ್ತಹೋಗುವುದಲ್ಲವೆ? ಭಕ್ತಿಯೆಂಬುದೂ ಪ್ರೀತಿಯಂತೆಯೇ, ನೀತಿಯಂತೆಯೇ ಒಂದು ತತ್ವ. ಉಳಿದ ತತ್ವಗಳಿಗಿಂತ ಭಕ್ತಿ ತತ್ವಗಳನ್ನು ಅಧಿಗಮಿಸಿಕೊಳ್ಳುವುದು ತ್ರಾಸದಾಯಕ. ಆದರೆ, ದಯಾಮಯನಾದ ಪರಮೇಶ್ವರನ ಅನನ್ಯ ಶರಣರಿಗೆ ಭಕ್ತಿ ತತ್ವವು ಜೇಗನೆ ಮನದಂಗಳಕ್ಕೊಗುವುದು ಸಾಧ್ಯ. ತನ್ನ ಅನನ್ಯ ಭಕ್ತರಿಗೆ ಸ್ವಯಂ ಭಗವಂತನೇ ಭಕ್ತಿ ತತ್ವದ ಕ್ಲಿಷ್ಟ ಪಾರಿಭಾಷೆಯನ್ನು ಕಲಿಸಿಕೊಡುತ್ತಾನೆ; ಮನದುಂಬಿಸುತ್ತಾನೆ.

ಹೃತ್ಪೂರ್ವಕವಾಗಿ ಭಗವಂತನ ಶರಣು ಬಯಸಿದವರಿಗೆ ಆತ ಅಭಯದಾನ ನೀಡುತ್ತಾನೆ. 'ನಂಬಿದವರಿಗೆ ತಪ್ಪು ತಿಳಿವಿಕೆಯೆಂಬ ಬಿರುದು' ಆತನಿಗೆ. ವಾಲ್ಮೀಕಿ ರಾಮಾಯಣದಲ್ಲಿ ಹೀಗೆ ಹೇಳಿದೆ.

'ಸಕೃದೇವ ಪ್ರಪನ್ನಾಯ ತವಾಸ್ಮೀತಿ
ಚ ಯಾಚತೇ।
ಅಭಯಂ ಸರ್ವಭೂತೇಭ್ಯೋ
ದದಾಮ್ಯೇತದ್ವ್ರತಂ ಮಮ ॥
೬।೧೮। ೩೩

ಭಗವಂತನಲ್ಲಿ ಶರಣಾಗತನಾಗುವುದೆಂದರೆ ಬಹು ಮಹತ್ವಪೂರ್ಣವಾದ ಸಾಧನೆ. ಸಂಪೂರ್ಣ ಅನನ್ಯ ಭಾವ ಸ್ಥಿತಿಯನ್ನು ಹೊಂದಿದ ಭಕ್ತನ ಮೇಲೆ ಭಗವಂತ ತಕ್ಷಣದಲ್ಲೇ ಸಂಪ್ರೀತನಾಗುತ್ತಾನೆ. ಲಂಕಾಧಿಪತಿ ರಾವಣನ ತಮ್ಮ ವಿಭೀಷಣ ಶ್ರೀ ರಾಮಚಂದ್ರಪ್ರಭುವಿನ್ನೇ ತನ್ನ ಸರ್ವಸ್ವವೆಂದು ನಂಬಿ ಆತನ ಮರೆ ಹೋದನು. ಶ್ರೀ ರಾಮನು ಆತನ ಭಕ್ತಿಯ ಆಳವನ್ನು ಮನದಂದು ಕೂಡಲೇ ತನ್ನವನನ್ನಾಗಿ ಮಾಡಿಕೊಂಡನು. ದ್ಯೂಧನನು ರಜಸ್ವಲೆಯಾದ ದ್ರೌಪದಿಯನ್ನು ರಾಜ ಸಭೆಯಲ್ಲಿ ಅಪಮಾನಿಸಲು ಎಳಸಿದಾಗ, ದುಃಶಾಸನನು ಆಕೆಯ ಸೀರೆಯನ್ನು ಹಿಡಿದೆಳೆದಾಗ, ಆಕೆ ಭಕ್ತವತ್ಸಲ ಶ್ರೀಕೃಷ್ಣನನ್ನು ಅನನ್ಯ ಭಕ್ತಿಯಿಂದ ನೆನೆದು ತನ್ನ ಮಾನಾಪಮಾನಗಳ ಭಾರವನ್ನು ಆತನ ಮೇಲೆ ಹೊರಿಸಿದಾಗ 'ಅಕ್ಷಯಾಂಬರ' ದಾನ ಮಾಡಿದ ಭಗವಂತ ಇದೇ ದ್ರೌಪದಿ ಅರಣ್ಯದಲ್ಲಿ ದುರ್ವಾಸರ ಲಕ್ಷೋಪಲಕ್ಷ ಪರಿವಾರವನ್ನು ಶ್ರೀ ಕೃಷ್ಣನ ಒನಗ್ರಹದಿಂದಲೇ ಆರೋಗಿಸಿದನು. ಇದೇ ಅನನ್ಯ ಶರಣಾಗತಿ. ಇದೇ ರೀತಿಯಲ್ಲಿ ಭಗವಂತನ ಪ್ರಾಪ್ತಿಗಾಗಿಯೂ ಭಗವಂತಕಲ್ಲಿ ಶರಣು ಹೋಗಬೇಕು. ಬಾಲಕ ಧ್ರುವನ ಅನನ್ಯ ಶರಣಾಗತಿಯಿಂದಲೇ ವಿಷ್ಣುವನ್ನು ಒಲಿಸಿಕೊಳ್ಳಲು ಸಶಕ್ತನಾದ; ಪ್ರಹ್ಲಾದನು ಕಂಬದಿಂದಲೇ ನರಹರಿಯನ್ನು ಪ್ರತ್ಯಕ್ಷೀಕರಿಸುವಲ್ಲಿ ಸಫಲನಾದ. ಅನನ್ಯ ಶರಣಾಗತಿಯೇ ಭಕ್ತಿ ತತ್ವದ ಮೂಲ.

(ಹಿರಿಯರಲ್ಲಿ) ಶರಣೊಕ್ಕನಲ್ಲಿರುವ ಅತ್ಯಂತ ಅನನ್ಯ ವಿಶಿಷ್ಟ ಪ್ರೇಮವೇ ಭಕ್ತಿ. ಶ್ರೀ ಭಕ್ತವತ್ಸಲತೆಯಲ್ಲಿ ಭಕ್ತಿಯು ಉಲ್ಲೇಖ ಹಲವೆಡೆ ಇಂದಿದೆ.

'ಮಯಿ ಜ್ಞಾನನ್ಯಯೋಗೇನ ಭಕ್ತಿ-
ರವ್ಯಭಿಚಾರಿಣೀ' ।-೧೩।೧೦

'ಮಾಂ ಚ ಯೋಽವ್ಯಭಿಚಾರೇಣ
ಭಕ್ತಿಯೋಗೇನಸೇವತೇ ।೧೪-೧೬

ಇತ್ಯಾದಿ.

ವಿಶುದ್ಧ ಪ್ರೇಮದಿಂದ ಲಭ್ಯವಾಗುವ ಆನಂದ ಅಪರ್ಯಾಪ್ತವು. ಇದೇ ಬ್ರಹ್ಮಾನಂದ. ಇದನ್ನು ಭಗವಂತನ ಅನನ್ಯ ಪ್ರೇಮಿ ಮಾತ್ರ ಬಲ್ಲನು. 'ಕಲ್ಲು ಸಕ್ಕರೆ ಸವಿಯು ಬಲ್ಲನೇ ಬಲ್ಲರು.' ಪ್ರೇಮವು ಮೂರು ಅವಸ್ಥೆಯನ್ನು ಹೊಂದಿದೆ. ಗೌಣ ಮುಖ್ಯ ಮತ್ತು ಅನನ್ಯ. ದನವೊಂದು ತನ್ನ ಎಳೆಗರುವನ್ನು ಬಿಟ್ಟು ವಿಶಾಲ ನೈದಾನದಲ್ಲಿ ಮೇಯುತ್ತಿದೆ. ಆಗ ದನವು ವಸ್ತುತಃ ಹುಲ್ಲನ್ನು ಪ್ರೇಮಿಸಿ ತಿನ್ನುತ್ತಿದ್ದರೂ ಅದರ ಮನಸ್ಸು ತನ್ನ ಎಳೆಗರುವಿನ ನೆನೆಪಿನಲ್ಲಿರುತ್ತದೆ. ಹುಲ್ಲಿನ ಪ್ರೀತಿ ಗೌಣವಾದರೆ, ಕರುವಿನ ನೆನಪು ಮುಖ್ಯವಾದುದು. ಅದೇ ದನದ ಮೇಲೆ ಹೆಬ್ಬುಲಿಯೊಂದು ಆಕ್ರಮಣ ಮಾಡಬಂದರೆ ಅದು ಹುಲ್ಲನ್ನೂ ಮರೆಯುತ್ತದೆ; ಕರುವನ್ನೂ ಮರೆಯುತ್ತದೆ; ತನ್ನ ಪ್ರಾಣವನ್ನಷ್ಟೇ ಪ್ರೇಮಿಸಿ ಅದರ ರಕ್ಷಣೆಗಾಗಿ ಶಕ್ತಿ ಪ್ರಯತ್ನ ಮಾಡುತ್ತದೆ. ಪ್ರಾಣದ ನೆನೆಪಿನ ಪ್ರೀತಿ ಅನನ್ಯವಾಗುತ್ತದೆ. ಅನನ್ಯ ಪ್ರೀತಿಯು ಪ್ರಾಣದ ಮೇಲಿದ್ದರೂ ದನವು ಹುಲ್ಲನ್ನು ಗೌಣವಾಗಿಯೂ ಕರುವನ್ನು ಮುಖ್ಯವಾಗಿಯೂ ಪ್ರೀತಿಸುತ್ತಿರುತ್ತದೆ. ಹಾಗೆಯೇ ಉತ್ತಮ ಸಾಧಕನು ವ್ಯಾವಹಾರಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರೂ ಪರಮಾತ್ಮನನ್ನು ಅನನ್ಯ ಭಾವದಿಂದ ಪ್ರೀತಿಸುತ್ತಿರುತ್ತಾನೆ.

ಗೌಣ ಪ್ರೇಮಿಯು ಪರಮಾತ್ಮನಲ್ಲಿ ನೆಲೆಯಾಗಿರುವ ಪ್ರಯತ್ನವೇನೋ ಮಾಡುತ್ತಾನೆ. ಆದರೆ, ಅಧ್ಯಾತ್ಮ ಮಾತ್ರ ಅಶಕ್ತಿವಶನಾಗಿ ಭಜನೆ-ಧ್ಯಾನಗಳ ಹೊತ್ತಿನಲ್ಲಿಯೂ ಅನನ್ಯ ಮನಸ್ಸು ವಿಷಯಾಸಕ್ತವಾಗುತ್ತದೆ. "ಮನಸ್ಸಿನಂತೆ ವಸ್ತುಗಳನ್ನು ಹಿಡಿಯಲಿರಿಯೆನು ದೇವ" ಎಂದು ಹಿಡಿಯುವ ಪ್ರಯತ್ನ ಮಾಡುತ್ತಾನೆ. ಮುಖ್ಯ ಪ್ರೇಮಿಯು ತನ್ನಿತರ ಕಾರ್ಯಕಲಾಪಗಳನ್ನು ನೋಡುತ್ತಿರುವಾಗಲೂ ದೇವರಲ್ಲೇ ಮನಸ್ಸನ್ನು ಪಣಕ್ಕಿಡುತ್ತಾನೆ. ಅನನ್ಯ ಪ್ರೇಮಿಯು ಇಡಿಯ ವಿಶ್ವವನ್ನೇ ವಾಸುದೇವ ಮಯವೆಂದು ಭಾವಿಸುತ್ತಾನೆ. ಋಣತ್ರಯ ತೃಣಕಾಷ್ಠಗಳಲ್ಲಿಯೂ ಆತನಿಗೆ ಭಗವಂತನೇ ದೃಗ್ಗೋಚರವಾಗುತ್ತಾನೆ. ಇದನ್ನೇ ಶ್ರೀ ಭಗವದ್ಗೀತೆಯಲ್ಲಿ ಹೀಗೆ ಹೇಳಿದೆ:

ಬಹೂನಾಂ ಜನ್ಮನಾಮಂತೇ
ಜ್ಞಾನವಾನ್ಮಾಂ ಪ್ರಪದ್ಯತೇ
ವಾಸುದೇವಃ ಸರ್ವಮಿತಿ
ಸ ಮಹಾತ್ಮಾ ಸುದುರ್ಲಭಃ॥ ೭-೧೯

ಆದರೆ, ಇಂತಹ ಅನನ್ಯ ಪ್ರೇಮಿಗಳು ದುರ್ಲಭರೇ ಸರಿ.

ಈ ಬಗೆಯ ಅನನ್ಯ ಪ್ರೇಮಿಗಳು ಲೌಕಿಕ ದೃಷ್ಟಿಯಲ್ಲಿ ಹುಚ್ಚರ ಸಾಲಿಗೆ ಸೇರಿದವರು. ಬಾಲಿಶ ಮನೋವೃತ್ತಿಯವರು ಅಕವರ್ಣಿಯರು. ಕೆಲವೊಮ್ಮೆ ಭಗತ್ಪ್ರಹ್ಲಾದಾದಿ ಸಮಂತರಂತೆ ಕಾರ್ಯಾನ್ವಿತವಾಗಿರುವವರೂ ಇರುವುದುಂಟು. ಈ ದುರ್ಲಭರಾದ ಅನನ್ಯ ಭಕ್ತರು ದೇವರನ್ನು ಕ್ಷಣಕಾಲವೂ ಮರೆಯುವುದಿಲ್ಲ.

ಇದೇ ಬಗೆಯ ಭಾವಗಳು ನಾರದ ಮತ್ತು ಶಾಂಡಿಲ್ಯ ಭಕ್ತಿಸೂತ್ರಗಳಲ್ಲಿಯೂ ಅಭಿವ್ಯಕ್ತವಾಗಿವೆ. ಅನನ್ಯ ಪ್ರೇಮದ ಸ್ಥಿತಿಯನ್ನು ಹೀಗೆ ಸಂಕ್ಷೇಪಿಸಿಬಹುದು. ಭಗವಂತನೊಬ್ಬನನ್ನು ಬಿಟ್ಟು ಮತ್ತಾರಲ್ಲಿ ಹೊನ್ನವೇ ಸಮಯದಲ್ಲಿಯೂ ಅನಾಸಕ್ತನಾಗಿರುವುದು; ಆತನೊಬ್ಬನ ಪರಿಜ್ಞಾನವಲ್ಲದೆ ಮತ್ತಾವುದರ ಬಗ್ಗೆಯೂ ಅನಭಿಜ್ಞನಾಗಿರುವುದು ಮನಸ್ಸು ಎಲ್ಲೆಲ್ಲಿ ಸುಳಿದಾಡಿತ್ತದೆಯೋ ಅಲ್ಲೆಲ್ಲ ಬರಿಯು ಭಗವಂತನ್ನೇ ಗೋಚರಿಸಾಗಿಸುವುದು.

ದೇವರನ್ನು ದೇವರ ಪ್ರೇಮಕ್ಕಾಗಿಯೇ ಪ್ರೇಮಿಸಬೇಕೇ ಹೊರತು ಅನ್ಯಥಾ ಪ್ರೇಮಿಸುವುದು ಸರಿಯಲ್ಲ. ಮೋಕ್ಷ, ದೊಡ್ಡಸ್ತಿಕೆ, ಗೌರವ ಮತ್ತಿತರ ಲೌಕಿಕ ಆಧಿಪತ್ಯಗಳಿಗೆ ಇಚ್ಛಗಾಗಿ ಭಗವಂತನನ್ನು ಪ್ರೇಮಿಸಬಾರದು. ಇಚ್ಛೆಯು ಗಂಧವು ಈ ಪ್ರೇಮವನ್ನು ಸೋಂಕಬಾರದು ಭಗವಂತನು ಪ್ರತ್ಯಕ್ಷನಾಗಿ ಪ್ರೀಲೋಕ್ಯ ಸಂಪತ್ತನ್ನು ಕೊಟ್ಟರೂ ಅದನ್ನು ಸ್ವೀಕರಿಸಬಾರದು. ಇದರಿಂದ ಆತನು ಕೆಂಡವಾದರೂ ವಿಚಲಿತನಾಗಬಾರದು. ಭಕ್ತನು ತನ್ನ ಸ್ವಾರ್ಥದ ಸಾಧನೆಯನ್ನು ಕಂಡಾಗ, ಅದರ ಕೊನೆಯು ಕೇಳಿದಾಗ ಪರಿಭ್ರಮಿಸಾದೇಕು. ಭಗವಂತನ ಬಾಯಿಂದ ಇಂತಹ ವಸ್ತು ದಾನದ ಮಾತು ಕೇಳಿದಾಗ ಭಕ್ತನ ಹೃದಯ ನೋಯುತ್ತದೆ. ತನ್ನ ಭಕ್ತಿಯಲ್ಲಿ ಅದಾವುದೋ ಕಂದು—ಕೊರತೆ ಇದೆ; ಆದ್ದರಿಂದಲೇ ಭಗವಂತ ಹೀಗೆ ವಸ್ತುವನ್ನು ದಯಪಾಲಿಸಿದನೆಂದು ಕೊಳ್ಳುತ್ತಾನೆ. ಭಗವಂತನು ಅದಾವ ರೀತಿಯಿಂದ ಕೇಳಿದರೂ ಆತನ ಪ್ರೇಮವೊಂದಲ್ಲದೆ ಅಳಿದಾವುದನ್ನೂ ಭಕ್ತನು ಬೇಡುವುದಿಲ್ಲ. ಭಗವಂತನು ತನ್ನನ್ನು ಪ್ರಲೋಭನೆಗೆ ಗುರಿಮಾಡಲು ಬಯಸುವ ಸಮಯ, ಪರೀಕ್ಷೆಗೆ ಗುರಿಮಾಡುವ ಸಮಯ ಹೊತ್ತು ತನ್ನಲ್ಲಿ ವಿಷಮಸ್ಥಿತಿ ಮನೆ ಮಾಡಿದೆಯೆಂದು ತಿಳಿಯುತ್ತಾನೆ. ಹೀಗೆ ತಿಳಿಯದೆ ಹೋದರೆ, ಭಗವಂತನು

(ಮುಂದುವರಿದ ಭಾಗ ನೋಡಿರಿ)

ಕಾಂತ ಕೆಲವು ಪ್ರಾರಂಭಿಕ ಬರಹಗಳನ್ನು ಮತ್ತೆ ತಿದ್ದಿ ಬರೆದರು. ಅನಂತರ ಆ ಬರಹ "ಆರೋಗ್ಯದ ಕೀಲಿ" ಎಂಬ ನಾಮಾಂಕಿತದಲ್ಲಿ ಪ್ರಕಟವಾಯಿತು. ಅಹಿಂಸೆಯು ಅವತಾರವಾದ ಬಾಪೂ ಈ ಪರಮಾಣೆಯ ಬಗ್ಗೆ ಧಾರವಾಡದ ಬಗ್ಗೆ ನಿಬಂಧ ಬರೆಯಲು ಪ್ರಯತ್ನಿಸಿದರು ಆದರೆ, ತೀವ್ರ ಅಂತರ್ಮಥನತೆಯ ಧಾರ್ದಷ್ಟಿದ್ದಾಗ ನಾನೆಲ್ಲಿದ್ದೇನೆ? ನಾನು ಬೈಹಿಕವಾಗಿ, ಅಂತರಿಕವಾಗಿ ಅಹಿಂಸೆಯನ್ನು ಪ್ರತಿನಿಧಿಸುವೆನೇ? ಹಾಗಾಗಿದ್ದರೆ ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ದ್ವೇಷ, ವಂಚನೆಗಳು ಮಾಯವಾಗಬೇಕು ಎಂದು ಚಿಂತಿಸಿ ಪ್ರಯತ್ನವನ್ನು ಕೈಬಿಟ್ಟರು.

ಅನಾಖಾನ್ ಅರಮನೆಯಂತಹ ಸೆಚ್ಚದಾಯಕವಾದ ಶ್ರೀಮಂತ ತಾಣದಲ್ಲಿ ಸೆರೆಮನೆಗಿಂತಲ್ಲಿರುವ ಬಗ್ಗೆ ಗಾಂಧೀಜಿ ವಿರೋಧಿಸಿದ್ದರು. ಇಂತಹ ಸೆರೆ ಅನಗತ್ಯವೆಂದರು. ಸರ್ಕಾರ ಆಯೋಜಿಸುವ ನೈಜ ಸೆರೆಮನೆಯಲ್ಲಿ ತಪ್ಪನ್ನೂ ಸಹೋದ್ಯೋಗಿಗಳನ್ನೂ ಬಂಧನದಲ್ಲಿಡಬೇಕೆಂದು ಸರ್ಕಾರಕ್ಕೆ ವಿನಂತಿಸಿಕೊಂಡರು.

ಆದರೆ ವಿಧಿಯು ಚಿಂತನೆಯೇ ಬೇರೆಯಿದ್ದಿತ್ತು. ಆಗಾಖಾನ್ ಅರಮನೆ ಪವಿತ್ರ ಸಮಾಧಿ ಸ್ಥೇತ್ರವಾಗಿ ರಾಷ್ಟ್ರೀಯ ಸ್ಮಾರಕವಾಗುವ ಯೋಗವಪಡೆದಿತ್ತು.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಆಶಾವಾದದ ಚಕ್ರ

(ಐದನೇ ಪುಟದಿಂದ)

ಆಂಜಹ ಗ.ಜಗಳನ್ನು ಅಳವಡಿಸುವುದ ರಲ್ಲೇ ಎಲ್ಲರಿಗೂ ಗ.ರಿ. ಗಟ್ಟಿಗರು ಗೆ ಲ್ಲುವರು, ಪಾಪದವರು ಸೋಲುವರು.

ಹಾಗೆ ಗೆದ್ದ ಮಂತ್ರಿಗಿಂತ್ರಿಗಳದರೂ ಐದು ವರ್ಷ ತಾನೆ? ಆ ಸೇಲೆ? ಗಟ್ಟಿ ನಿಷ್ಠೆದೇಕಾದರೆ? — ಪ್ರಶ್ನೆಯೇ!

ಆ ಪ್ರಶ್ನೆಯನ್ನು ನಿವೃತ್ತಿ ಮಾಡುವು ದರಲ್ಲೇ ಹಿಟ್ಲರನ ಶ್ರದ್ಧೆ ಇರಬೇಕಾಗು ತ್ತೆ. ಅವರನ್ನು ಮುರಿಯಲು ಇತರರೂ ಸಿದ್ಧರಾಗಿರುತ್ತಾರೆ.

ಈ ಬಲ ಸಂಚಯಕ್ಕೆ ಕ್ಷೇತ್ರಾಭಿವೃದ್ಧಿ ಕಾರ್ಯಗಳನ್ನು ಸಾಧಿಸುವುದಕ್ಕಿಂತ ಲೂ ದೊಡ್ಡ ದೊಡ್ಡ ಪರ್ವತ ಕುಳಿಯಲಿ ದ ಧನಸಂಗ್ರಹ ಮಾಡಿಕೊಳ್ಳುವುದೇ ಸು ಲಭವಾಗಿದ್ದೆ. ಲಂಚವೆಂಬ ಕೆಟ್ಟ ಹೆಸರಿ ದಿಂದಲೂ, ಬಹುಮಾನಗಳೆಂಬ ಭವ್ಯ ಹೆ ಸರಿನಿಂದಲೂ.

ಒಟ್ಟನ ವೇಲೆ ಸಂದುಗೊಂದುಗಳಲ್ಲಿ ರುವ ಪಾಪದ ಪಾತ್ರರ ಸನ್ಮಾನಾರ್ಥ ಕ್ಕಾಗಿ, ಅವರ ಸುಮುಖತೆಗಾಗಿ ದೊರದ ಬೆಟ್ಟಗಳಂತೆ ಘನ್ನಗೆನ್ನಿಸುವ ಅಭಿವೃದ್ಧಿ ಕಾರ್ಯಗಳ ಚಿತ್ರಮಾಡಿಸುವರಾದರೂ, ಮುಖ್ಯ ಗಮನವೆಲ್ಲ ರಾಜಕೀಯಾನಾಗಳ ದಕ್ಕಾಟದಲ್ಲೇ ಇರುತ್ತೆ. ಇರಬೇಕಲ್ಲ?

ರಾಜ ಪರಂಪರೆಯು ಹಿಂದಿನ ಕಾಲ ವಾಗಿರುತ್ತಿದ್ದರೆ, ಪ್ರಜೆಗಳೇ ತನ್ನ ಸ್ಥಾನ ವನ್ನು ಅಕ್ರಮಿಸುವರೆಂಬ ಭಯ ರಾಜ ನಿಗಿಲ್ಲ. ಆವನಿಗಿರುವುದೂ ಶತ್ರು ರಾಜರ ಭಯ ಒಂದೇ ಪ್ರಜೆಗಳು ಯಾವಾಗ ಲೂ ಪ್ರಜೆಗಳೇ. ರಾಜರು ಯಾವಾಗ ಲೂ ರಾಜರೇ.

ರಾಜಭಕ್ತಿ, ಸ್ವಾಮಿ ವಿಶ್ವಾಸಗಳೆಲ್ಲ ಮೂಲೆಸೇರಿದವು. ಎಲ್ಲರೂ ಮನುಷ್ಯ ರೇ. ಎಲ್ಲರೂ ಯಾವ ಅರ್ಹತೆಯನ್ನಾದ ರೂ ಪಡೆಯಬಹುದು. ಸರ್ಕಾರಿ ಕೆಟ್ಟ ಭಿಕ್ಷುಕನ ಊರುಗೋಲನ್ನು ಸಹಾ 'ಲೋ' ಎನ್ನಬಾರದು.

ಇದನ್ನೆಲ್ಲ ಅಭಿವೃದ್ಧಿಯ ಲಕ್ಷಣವೆಂದು ಹೇಳಲೇಬೇಕು.

ಯಾಂತ್ರಿಕ ಅಭಿವೃದ್ಧಿ 'ಹೊರ ದೇಶ ಗಳಿಗೆ ಸರಿಸಮಾನವಾಗಿ ನಾವೂ ಇದ್ದೇ ವೆ' ಎಂದು ತೋರಿಸಿಕೊಡುವಂತಹ ಅ ಭಿವೃದ್ಧಿ, ವೇಷ, ಸಕ್ಕನೆ ಹಾಕಿಕೊಂಡ ಹೊಸ ವೇಷವೇನೂ ಅಲ್ಲ. ಪರದೇಶೀಯ ರು ಒಂದಂದಿಂದಲೂ ಹಾಕಿಕೊಳ್ಳಲಾ ರಂಭಿಸಿದ ವೇಷವೇ.

ಹೊಂದೇಶಗಳ ಸಂಪರ್ಕವಿಲ್ಲದೇ ಇ ದ್ದ ಒಂದು ಕಾಲವೂ ಇತ್ತು. ಸ್ವಜಲ ಸ್ವಫಲ ಸಸ್ಯಶ್ಯಾಮಲವಾಗಿದ್ದ ಈ ದೇಶದ ನೆಲದಲ್ಲಿ ಬೆಳೆದ ತಂಡಿ ತೀರ್ಥಗ ಳೇ ಇವುಗಳೆಲ್ಲ ಸಾಕಾಗಿ ದಾನಧರ್ಮಗಳ ಗೂ ವಿಗುತ್ತಿತ್ತು. ಸೇರು ಬತ್ತಗಳಲ್ಲಿ ಅಳೆದಳೆದು ಕೊಡುವಷ್ಟು ಮುತ್ತು ರತ್ನ ಗಳ ರಾಶಿಗಳದ್ದುವು. ಸುಪ್ರಸಿದ್ಧವೋ ಕುಪ್ರಸಿದ್ಧವೋ ಆದ ಕೋಹಿನೂರ್ ವಜ್ರ ಇಲ್ಲಿಯ ವಜ್ರಕರೂರಿನ ಖನಿ ಸಿತ್ತು. ಇತ್ತೀಚೆಗೆ ಕೂಡಾ ಖಾಮರ ಪಟ್ಟಸೊಬ್ಬಸಿಗೆ ಕೋಹಿನೂರ್‌ಗಿಂತಲೂ ದೊಡ್ಡದಾದ ವಜ್ರ ಸಿಕ್ಕಿತ್ತಲ್ಲ? ಭಾರತ ದೇಶವು ಬಹು ಭಾರವಾದ ಕಣಜವೆಂತ ಲೇ ದೊಚಿಕೊಳ್ಳಲ್ಪಟ್ಟಿತ್ತು — ಪರದೇಶ ದವರಿಂದ. ಈ ದೇಶವನ್ನು ಕಂಡ ಹಿಡಿ ಯುವ ಪ್ರಯತ್ನದಲ್ಲಿಯೇ, ಕಪ್ಪು ಅಮೆರಿ ಕಾಕ್ಕೆ ಹೋಗಿ, ಅದನ್ನೇ ಇಂಡಿಯಾ ಎಂದು ಭ್ರಮಿಸಿ ಅಲ್ಲಿನವರಿಗೆ ರೆಡ್ ಇಂಡಿಯನ್ನರೆಂದು ಹೆಸರಿಟ್ಟರಂತೆ. ಪರದೇಶ ದವರು ದೋಚಿಕೊಂಡೊಯ್ದು, ಇಲ್ಲಿ ಯ ಏಳಿರಿಯನ್ನು ನೆನೆಯುತ್ತಾ ನಿದ್ದೆ ಬಾರದೆ ಇಲ್ಲಿಗೇ ಒಂದು ರಾಜಕೀಯ ತಂತ್ರವನ್ನು ಅವಲಂಬಿಸಿ, ಪರಿವಾಲಣೆ ಗೂ ತಂತರು. ಕಾಲಕ್ರಮೇಣ ಇಲ್ಲಿ ಯವರೂ ಆದರು.

ಅಮೇಲೆ ಇಲ್ಲಿಯ ಸಾರಗ್ರಾಹಿಗಳಾ ಗುವಂತೆ ಬಂದು, ಅಧಿಕಾರ, ಪರಿಪಾಲನೆ ವಿಕಚಕ್ರಾಧಿಪತ್ಯಗಳವರೆಗೂ ಸಾಗಿಸಿದ ಪರಕೇಸರು ಕೊನೆಗೂ ಪರಕೇಸರಾಗಿಯೇ ಉಳಿದು ಬರಡಾಗಿಸಿದ ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ಬೇರೆ ವಿಧ ವಾಗಿ ಅಂಟಿಕೊಂಡೇ ಇದ್ದಾರನ್ನಿ. ಸ್ನೇ ಹಿತರಾಗಿ, ಸಾಲಕೊಡುವವರಾಗಿ, ಆ ಹಾರ ಪದಾರ್ಥ ಸಪ್ಲೈ ಮಾಡುವ ಉಗ್ರಾಣದವರಾಗಿ, ಸಹಾಯಕರಾಗಿ, ಮಿತ್ರರಾಗಿ, ತುಸು ಕೆಚ್ಚುಕಡಿಮೆಯಾದ ರೆ ಕಣ್ಣು ಕೆಂಪು ಮಾಡುವವರಾಗಿ, ಸಿಡಿದೆದ್ದಾಗ ನಮ್ಮ ನಮ್ಮೊಳಗೆ ಹಿಡಿಸಿ ಹಾಕುವ ಮಧ್ಯಸ್ಥರವರಾಗಿ ಇದ್ದೇ ಇದ್ದಾರೆ. ಮುಂದುವರಿದ ಕಾಲಸ್ಥಿತಿ ಯಿಂದಾಗಿ ಈ ಬಗೆಯ ಸಂಬಂಧವನ್ನು ಬಿಡಲಿಕ್ಕೂ ನಿಧ್ಯವಿಲ್ಲ.

ಲಾಟ್ರೀ ವಿಷಯ ಹೇಳುತ್ತಾ ಎಲ್ಲಿ ಗೋ ಬಂದೆನೆಂದು ಕಾಣುತ್ತೆ ಹೌದೆ? ಲಾಟ್ರೀಯು ಸಂತಾನ ಹುಟ್ಟಿಕೊಳ್ಳಲು ದೇಶವು ಹೇಗೆ ಪಂಡಿತ್ಯಕ್ಕೆ ಖಂಡಿತೆ ಎಂ ಬುದಕ್ಕೆ ಹೀಗೆಲ್ಲ ಹೇಳಿದೆ.

"ಒಂದು ಹೊತ್ತಿಗೆ ಲಾಟ್ರೀ ಹೊಡೀ ತಾನೆ —" ಅಂದರೆ ವಿನರ್ಥ? ಗೊತ್ತಿ ದೆಯಷ್ಟೆ? ರಾಜನ ಹಾಗೇ ಪ್ರಜೆಗಳೂ ಸುಂಕ ಹಾಕಿದರೆ, ತೆರಿಗೆ ವಿಧಿಸಿದರೆ ಪ್ರ ತಿಭಟನೆ ಬರುತ್ತೆ. ಎಷ್ಟು ಕಣ್ಣುಗಳ ನ್ನು ಎಳೆಬೆಂಟ್ಲಿ ಹೊಡಿ ಮಾಡಿ ತೆರಿಗೆ ಹಾಕಿಸೂ ಆಯಿತು. ಇನ್ನು ಲಾಟ್ರೀ ಎಂಬ ಮೋಹಿನಿಸ್ತ್ರ ತಿರುಗಾಡಿಸುವುದು. ಹೇಗೆ ಬಂತೀತು ಹಣದ ಪ್ರವಾಹ? ಪ್ರಜೆಗಳಿಗೂ ದುಃಖವಿಲ್ಲ, ಸಂತೋಷ ವೇ. ಸರಕಾರವೇ ಶುರು ಮಾಡಿತು ಪ್ರೈಸ್‌ಬಾಂಡ್ ಅಂತ. ಪ್ರಜೆಗಳಿಗಿ ರುವ ಆಟಗಳ ಹಕ್ಕುಗಳಲ್ಲಿ ಜೂಜು ಜುಗಾರಿಗಳೂ ಒಂದು ಹಕ್ಕು. ಕೆಲವ ರು ಸರಕಾರದ ಅನುಮತಿ ಲೈಸೆನ್ಸ್ ಪಡೆದು ಲಾಟ್ರೀ ನಡೆಸುತ್ತಿದ್ದುದುಂಟು. ಲೈಸೆನ್ಸ್ ಕೊಡುವ ಸರಕಾರದೇ ಲಾ ಟರಿ ಕೆದಾಗ, ಎಲ್ಲರಿಗೂ ಒಂದು ಮತ್ತು ಮಾಡ್ದ ಕುಡಿಸಿದ ಹಾಗಾಯಿತು.

ಮನುಷ್ಯ ಜೀವಿಗುವುದೇ ಆಶಾವಾದ ಎಂಬ ತತ್ವದಲ್ಲಿ ನಡತ್ತುವ ಚಕ್ರದಲ್ಲಿ ನಿ ಕ್ಕೆಕೆಂಡೆ. ಆ ತತ್ವವನ್ನು ಪದೇಪದೇ ವಿಂಚಿಗುವಂಥಾದ್ದು ಲಾಟ್ರೀ ಸುತ್ತು.

ಆದರೆ ಆಶಾವಾದ ಬೇರೆ. ಅದೃಷ್ಟ ಬೇರೆ. ಆದರಲ್ಲೂ ಕುರುಡು ಅದೃಷ್ಟ ಇ ನ್ನೂ ಬೇರೆ. ಆಶಾವಾದವಂತೂ ಎಲ್ಲದ ರಲ್ಲೂ ಇರುವಂಥಾದ್ದು. ಲೋಕದಲ್ಲಿ ಎದ್ದು ಕಾಣಿಗುವಂತಹ ಪ್ರತಿಭಾಶಾಲಿ ಗಳು ಕೆಲವರಿದ್ದರೆ ಬಿದ್ದುಕೊಂಡಿರುವ ಪ್ರತಿಭಾಸ್ವಿತರೂ ಇದ್ದಾರೆ, ಬಹಳ ಇದ್ದಾ ರೆ. ಕೆಲವೊಮ್ಮೆ ತಕ್ಕ ಪ್ರತಿಫಲವನ್ನೂ ಬಹುಮಾನವನ್ನೂ ಪಡೆಯುವವರು ಅ ದೃಷ್ಟವಂತರು. ಕೆಲವೊಮ್ಮೆಯೂ ತಕ್ಕ ಫಲ ಪಡೆಯುವವರು ಅದೃಷ್ಟವಿಲ್ಲದ ಪ್ರತಿ ಭಾಶಾಲಿಗಳು. ಕೆಲವೊಮ್ಮೆ ಅದೃ ಷ್ಟಕೂಡಿ ಬಂದವರು ಬೇಕಾದವರು; ಕೆಲವೊ ಮ್ಮೆ ಅದೃಷ್ಟಹೀನರಾದವರು ಮಣ್ಣಾ ಕೆನಲ್ಲಿರುವರು. ಕೂಡಿಬಂದ ಹಣ ಸಂಪಾ ದಿಸುವ ವಿಧಾನವು ಕುರುಡು ಅದೃಷ್ಟ; ಉಳಿದುದೆಲ್ಲ ಸ್ವೇಚ್ಛೆ ಅದೃಷ್ಟ. ಒಳ್ಳೆಯ ಅದೃಷ್ಟ.

ಕುರುಡು ಅದೃಷ್ಟಕ್ಕೆ ಪ್ರಯೋಜನ ಕೊಡಿಸಿ, ಕೆಲವರ ವೈಲಿನ ಶ್ರದ್ಧೆಯನ್ನು ತಗ್ಗಿಸುವಂಥಾದ್ದು ಲಾಟ್ರೀ-ಇಸ್ಪೀಟು ಜುಗಾರಿಗಳನ್ನಾದರೆ ಮನಸಾರೆ ಗೊಟ್ಟು ಅಡುವ ಕೆಲವನ್ನಾದರೂ ಮಾಡಬೇಕು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ —
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ —
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾತ್ರಿಯಮಳಕ್ಕೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 72

HOTEL SHIVAPRASAD

High Class Boarding, Lodging & Restaurant

COONDAPUR, S. K.

In the Court of Munsif
Kundapur

O. S. 374/68

G. Surendranath Nayak & Co., Coondapoor —Plaintiffs.

vs.

P. S. Murugiah Mudaliar and 4 others— Defendants.

To

3rd defendant—

K. Shivaraya Shetty, son of Cheluviah Shetty, Kargal village Sagar Taluk, P. O. Kargal.

Please take notice that the suit filed by the Plaintiffs against you for recovery of Rs.1478—00 etc. due in respect of dealings is posted for your appearance on 21—7—69 at 11 A. M. In the absence of your appearance, the suit will be decided in your absence.

By order of Court.

Narayana Kamath,
Advocate for Plaintiffs.

Coondapoor,
18—6—69.

READ & ADVERTISE IN
NAVAYUGA WEEKLY

ಸರ್ವ ಶರಣಾನಲ್ಲಿ ಶರಣಾಗತಿ

(ನಿಳಿದ ಪುಟದಿಂದ)

ಬೀಸಿದ ಮೊಯ್ ಬಲೆಯ ಲ್ಲಿ ಸಿಕ್ಕಿ ಬಿದ್ದ ಕೈಆತನ ಸಾಧನೆಯು ವ್ಯರ್ಥವಾಗುತ್ತದೆ.

ಕುಜೇಲ ಸ್ವಾರ್ಥಸಾಧಕನಾಗಿಯೇ ದ್ವಾರಕೆಗೆ ನಡೆದ. ಆದರೆ, ಹರಕು ಚಿಂದಿಯಲ್ಲಿ ಕಟ್ಟಿದ ಉಡ.ಗೊರೆಯು ಚಿಂತೆಯಲ್ಲೇ ಆತ ತಾನು ಬಂದ ಉದ್ದೇಶವನ್ನೇ ಮರೆತ. ಸ್ವಾರ್ಥವನ್ನು ಮರೆತು ಅನನ್ಯಭಾವದಿಂದಲೇ ಭಕ್ತಿಯಿಂದಲೇ ಕೃಷ್ಣನನ್ನು ಮರೆಹೋದ. ಪ್ರಸನ್ನನಾದ ಭಗವಂತ ಏನು ಬಂದೆ ಎಂದಾಗ, ಹಳೆಯ ಗೆಳೆಯನನ್ನು ಕೋಡಿಹೋಗ ಬಂದೆಫೆಂದ. ಕುಚೇಲನ ಹೃದಯ ನಿರ್ಮಲವಿತ್ತು, ಪರಿಶುದ್ಧವಿತ್ತು. ನಿಸ್ವಾರ್ಥವಿತ್ತು. ಆತನಿಗೆ ತಾನು ಬಂದ ಉದ್ದೇಶದ ವಾಸನೆಯೂ ಉಳಿದಿರಲಿಲ್ಲ. ಭಗವಂತ ವೆಚ್ಚಿದ; ಕುಚೇಲ ಸುಧಾವನ್ನಾದ. ಆದರೇ ಆತ ಈ ಲೌಕಿಕ ಜಗತ್ತಿಗೆ ಇಳಿದುಬಿಟ್ಟ

ಯೋ ಮೊಂ ಪಶ್ಯತಿ ಸರ್ವತ್ರ
ಸರ್ವಂ ಚ ಮಯಿಪಶ್ಯತಿ
ತಸ್ಯಾಹಂ ನ ಪ್ರಣಶ್ಯಾಮಿ
ಸಚ ಮೇನ ಪ್ರಣಶ್ಯತಿ॥

—ಗೀತೆ ೬।೩೦

"ಎಲ್ಲೆಲ್ಲಿಯೂ ನನ್ನನ್ನೇ, ಎಲ್ಲವನ್ನೂ ನನ್ನಲ್ಲಿಯೇ ನೋಡುವವನಿಗೆ ನಾನು ಅದೃಶ್ಯನಾಗಿರುವುದಿಲ್ಲ; ಅವನೂ ನನಗೆ ಅದೃಶ್ಯನಾಗಿರುವುದಿಲ್ಲ ಏಕೆಂದರೆ, ಅವನ ಪ್ರಜ್ಞೆಯಲ್ಲಿ ಏಕೀಭವಿಸಿರುತ್ತಾನೆ.

ಭಕ್ತ ವಿಠಾಬಾಯಿ, ಅಕ್ಕಮಹಾದೇವಿ, ಭಕ್ತಿ ಭಂಡಾರಿ ಬಸವಣ್ಣ ಮೊದಲಾದವರು ಇದೇ ಬಗೆಯ ಅಪರೂಪ ಭಕ್ತಿಯಿಂದಲೇ ದೇವರಲ್ಲಿ ಏಕೀಭವಿಸಿಹೋದರು.

—ಗೋರಾ.

ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ

O. S. No. 404/1968

ಮರವಾಡಿ ತಿಮ್ಮಪ್ಪ ಪೂಜಾರಿ, ಬೊಗ್ಗಿ ಹೆಂಗ್ಸಿನ ಮಗ, ಕಾರ್ಕಳ ತಾಲ್ಲೂ ಮರವಾಡಿ ಗ್ರಾಮದ ಮುರಿಂತಬೆಟ್ಟು —ವಾದಿ

ಮತ್ತು

ಚಂದು ಹೆಂಗ್ಸು ವಗ್ಗೆರೆಯ—ಪ್ರತಿವಾದಿರು

6ನೇ ಪ್ರತಿವಾದಿ ಕಾರ್ಕಳ ಪೂಜಾರಿ, ಚಂದು ಹೆಂಗ್ಸು ಮಗ, ಕಾರ್ಕಳ ತಾಲ್ಲೂ ಪಡು ಮೂನಾರ್ಡು ಗ್ರಾಮದ ಜೋಳಿಯೂರು. 14ನೇ ಪ್ರತಿವಾದಿ ಆನಂದ ಪೂಜಾರಿ, 15ನೇ ಪ್ರತಿವಾದಿ ಸುಗಂಧಿ, 16ನೇ ಪ್ರತಿವಾದಿ ಸುಂದರ ಪೂಜಾರಿ, 17ನೇ ಪ್ರತಿವಾದಿ ದೇವಕಿ —ನಾಗವ್ಮಾಪ ಮುಳ್ಳು, ಕಾರ್ಕಳ ತಾಲ್ಲೂ ಸಾರಾಳವಟ್ಟು ಗ್ರಾಮ, ಯಿವರೆಗೆ—

ವಾದಿಯು ಪ್ಲೈಂಟು B. ಶೆಡ್ಯೂಲು ಆಸ್ತಿಯಲ್ಲಿ, ತನ್ನ ಪಾಲು ಕೇಳಿ ಮತ್ತು ಮುಂದಿನ ಉತ್ಪತ್ತಿಕೇಳಿ ಹಿಂಜೆ ಬಗ್ಗೆ ಮಾಡಿದ ಮೇಲಿನ ದಾವೆಯು ನಿನ್ನು ಹಾಜರಾತಿಯ ಬಗ್ಗೆ ಮೇಲ್ಕಂಡಕೋರ್ಟಿನಲ್ಲಿತಾರೀಕು8.7.1969 ನೇ ಬೆಳಿಗ್ಗೆ 10 ಗಂಟೆಗೆ ಯಿಟ್ಟರುವದರಿಂದ ನೀವು ಸದರಿ ತಾರೀಕಿನಲ್ಲಾ ಸ್ವತಃ ಅಥವಾ ವಕೀಲರ ಮು.ಕಾಂತರ ಹಾಜರಾಗಿ ಸದರಿ ದಾವೆಯ ವಿಶಯದಲ್ಲಿ ನಿನ್ನು ಉದಾಹರಣೆಯು ಯಿರುವಲ್ಲಿ ಜ್ಞಾಪೀರುವಷ್ಟಿಕೊಳ್ಳ ಬಹುದಾಗಿಯೂ ತಪ್ಪಿದರೆ ಸದರಿ ದಾವೆಯು ನಿನ್ನ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂದು ಬದಾಗಿಯೂ ಯಿ ಮೂಲಕ ನಿನಗೆ ತಿಳಿಯ ಪಡಿಸಿಕೋಡಾಗುತ್ತದೆ.

S. Rajagopal Achar
Advocate for Plaintiff

Karkala,
ತಾರೀಕು 10_6_1969.

ನಗೆಹನಿ

—ಶ್ರೀ ಬಿ. ನರಸಿಂಗ ರಾವ್.

ಅಧ್ಯಾಪಕ: ಲೆಕ್ಕದ ಉತ್ತರದಲ್ಲಿ ರೂಪ್ಯಾ ಎಂದು ಬರೆಯದವರಿಗೆ ಎರಡು ನೂರ್ಕನ್ನು ಕಡಿಮೆ ಮಾಡಲಾಗುವುದು.

ಒಬ್ಬ ಹುಡುಗ: ಹಾಗಾದ್ರೆ ರೂಪ್ಯಾ ಅಂತ ಮಾತ್ರ ಬರೆದವರಿಗೆ ಎರಡು ನೂರ್ಕೆದೆ ನಾರ್?

೦ ೦ ೦ ೦ ೦

ಅಧ್ಯಾಪಕ: 625 ರೂಪ್ಯಾ ಸಂಬಳ ದೊರೆಯುವ ಒಬ್ಬಾತ ತನ್ನ ಖರ್ಚು ಕಳೆದು ತನ್ನ ಹೆಂಡತಿಗೆ ಉಳಿದ ಹಣ ಕಳಿಸುತ್ತಾನೆ. ಆತನ ಖರ್ಚು 600 ರೂಪ್ಯಾ ಆದರೆ ಹೆಂಡತಿಗೆ ಏನು ಬರುತ್ತೆ?

ವಿದ್ಯಾರ್ಥಿ: ಸುಟ್ಟು....!

೦ ೦ ೦ ೦

ಓರ್ವ ಹೆಂಗುಸು: ಫಲ್ಗು ಹದಿನಾರು ವರ್ಷದ ವೈವಾಹಿಕ ಜೀವನದಲ್ಲಿ ನಾನು ಹಬ್ಬಿನೆದೂ ಮುಳ್ಳಳ ತಾಯಿಯಾದೆ.

ಮಿಡ್‌ವೈಫ್: ಹದಿನಾರು ವರ್ಷದೊಳಗೆ ನಾನು ಎರಡುಸಾವಿರಕ್ಕಿಂತಲೂ ಅಧಿಕ ಮಕ್ಕಳನ್ನು ಭೂಮಿಗಿಳಿಸಲು ಸಹಾಯಮಾಡಿದ್ದೆ.

ಲೇಡಿ ಡಾಕ್ಟರ್: ಆದರೆ ನಾಲ್ಕು ಸಾವಿರಕ್ಕಿಂತಲೂ ಅಧಿಕ ಜನರನ್ನು ದೇವಸನ್ನಿಧಿಯಲ್ಲಿ ಹಿಂದಿರುಗಿಸಿದ್ದು ನಾನೇ.....

೦೦ ೦೦ ೦೦ ೦೦

ಅಧ್ಯಾಪಕ: ಕಪಟತೆಯ ತಲೆಗೂದಲು ಹಾವಿನಂತೆ ಹೆಣೆದಿರುತ್ತದೆ. ಈ ಉಪಮಾಲಂಕಾರ?

"ಕೇಶಾಲಂಕಾರ.....!"

೦ ೦ ೦ ೦

ಸಂಪಾದಕ: ನಿಮ್ಮ ಕಾದಂಬರಿಯಲ್ಲಾ ಚೆನ್ನಾಗಿದ್ದರೂ ಕೃತಿ ಕೆಲವೆಡೆ ಮಹಾ ತಪ್ಪುಗಳನ್ನೆಸಗಿದ್ದೀರಿ.

ಲೇಖಕ: ಎಲ್ಲಿ....?

ಸಂಪಾದಕ: ಪೋಡಿ ಇಲ್ಲ! ರಾಧೆಯೂ ರಾಮನೂ ರೆಸ್ಟೋರೆಂಟಿನಲ್ಲಿ ಕಾಫಿ ಕುಡಿದು ಕೆಳಗಿಳಿದರು ಎಂಬ ಭಾಗ ವಿದೆಯಲ್ಲ? ಅಲ್ಲಿ ಅವರು ಹಣ ನೀಡಿದ ಬಗ್ಗೆ ಹೇಳಿಲ್ಲವಲ್ಲ.....! !

೦ ೦ ೦ ೦

ಮಾನಸಿಕ ರೋಗಿ: ಡಾಕ್ಟ್ರೆ! ಕೆಲವೊಮ್ಮೆ ನನ್ನನ್ನೆ ಕೊಲ್ಲುವ ಭಯಂಕರ ನನಗೆ ಆಗುತ್ತದೆ.....

ಡಾಕ್ಟರ್: ಪರವಾಯಿಲ್ಲ, ಅದೆಲ್ಲಾ ನಮಗೆ ಬಿಡಿ. ನಾವು ನೋಡ್ಕೊಳ್ತೀವಿ....

೦ ೦ ೦ ೦

ನರ್ಸ್: ಡಾಕ್ಟರ್ ಬೋಧ ತಪ್ಪಿಲು ಕ್ಲೋರೋಫಾರಂ ಮುಗಿದಿದೆಯಲ್ಲಾ...

ಡಾಕ್ಟರ್: ಪರವಾಯಿಲ್ಲಾ, ಸ್ವಲ್ಪ ರೇ ಶಕ್ತಿ ಕಡಿಮೆ ತಂದು ಬಿಡು.

೦ ೦ ೦ ೦

ಮೇನೇಜರ್: (ಹೊಸ ಕಾರಕೂನನಿಗೆ) ನೋಡಪ್ಪಾ ಈ ಕೆಲ್ಸಾ ಬಹಳ ಜೋಪಾನವಾಗಿ ಮಾಡಬೇಕಾಗುತ್ತೆ, ಬಹಳಷ್ಟು ಜವಾಬ್ದಾರಿ ವಹಿಸಿಕೊಳ್ಳಬೇಕು....

ಯುವಕ: ತಾವೇಕೆ ಅದರ ಬಗ್ಗೆ ಚಿಂತಿಸ್ತೀರಿ. ನಾನೇನು ತಪ್ಪು ಮಾಡಿದ್ರೂ ನಾನೇ! ಹೊಣೆಗಾರ ಅಂತ ಒಪ್ಪೇನೆ...

ಆಫ್ಘಾನಿಸ್ತಾನದ ಅಜಂತಾ-ಬಾಮಿಯಾನ್

ಈಗ ಆಫ್ಘನಿಸ್ತಾನದಲ್ಲಿ ಪ್ರವಾಸ ಕೈಕೊಂಡಿರುವ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಬಾಮಿಯಾನದಲ್ಲಿರುವ ಸುಪ್ರಸಿದ್ಧ ಬೌದ್ಧ ಅವಶೇಷಗಳನ್ನು ಸಂದರ್ಶಿಸಿದರು. ಬುದ್ಧನ ಬೃಹದಾಕಾರದ ಎರಡು ಪ್ರತಿಮೆಗಳು ಇವುಗಳಲ್ಲಿ ಮುಖ್ಯವಾಗಿವೆ. ಈ ಪೈಕಿ ಒಂದು ಪ್ರತಿಮೆಯದ್ದು 53 ಅಡಿ ಎತ್ತರದ ಬಂಡೆಸಲ್ಲೂ ಇನ್ನೊಂದು ಪ್ರತಿಮೆಯನ್ನು 120 ಮೀಟರ್ ಎತ್ತರದ ಬಂಡೆಯಲ್ಲಲ್ಲಾ ಕೆತ್ತಲಾಗಿದೆ. ಈ ಬಂಡೆಗಳಲ್ಲಿ ಅನೇಕ ಗುಹೆಗಳಿದ್ದು, ಅಜಂತಾ ಹಾಗೂ ಎಲ್ಲೋರಾ ಮಾದರಿಯ ಚಿತ್ರಕಲೆಯನ್ನು ಇಲ್ಲಿ ಕಾಣಬಹುದಾಗಿದೆ.

ಒಂದು ಸಾವಿರ ವರ್ಷಗಳ ಹಿಂದೆ ಬಾಮಿಯಾನ ಕಣಿವೆ ಒಂದು ಅತಿದೊಡ್ಡ ಬೌದ್ಧವಿಹಾರವಾಗಿದ್ದಿತು. ಕ್ರಿಸ್ತಶಕ ಎರಡನೆಯ ಶತಮಾನದಿಂದ ಆರನೆಯ ಶತಮಾನದ ವರೆಗಿನ ಅವಧಿಯಲ್ಲಿ ಬಾಮಿಯಾನ ಬೌದ್ಧ ಧರ್ಮದ ಜ್ಞಾನ ಪೀಠವಾಗಿ ಅಭಿವೃದ್ಧಿಹೊಂದಿತ್ತು.

ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಕೆಂಪ ನಗರ (ರೆಡ್‌ಸಿಟಿ) ಯ ಭಗ್ನಾವಶೇಷಗಳನ್ನು ಸಂದರ್ಶಿಸಿದರು. ಈ ಅವಶೇಷಗಳು ಬಾಮಿಯಾನದಿಂದ ಸುಮಾರು 10 ಕಿಲೋ ಮೀಟರ್ ದೂರದಲ್ಲಿದೆ.

ಬಾಮಿಯಾನದಲ್ಲಿರುವ ಬುದ್ಧನ ಎರಡು ಬೃಹದಾಕಾರದ ಪ್ರತಿಮೆಗಳಲ್ಲಿ ಬಿರುಕುಗಳು ಕಂಡು ಬಂದಿವೆ. ಈ ಪ್ರತಿಮೆಗಳನ್ನು ರಿಪೇರಿ ಮಾಡಲು ಮೂವತ್ತು ಲಕ್ಷ ರೂ. ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ. ಈ ಪುರಾತನ ಸ್ಮಾರಕಗಳನ್ನು ರಕ್ಷಿಸಲು ತಗಲುವ ವೆಚ್ಚವನ್ನು ಭಾರತ-ಆಫ್ಘನಿಸ್ತಾನ ಸಮನಾಗಿ ವಹಿಸಿಕೊಳ್ಳುವುದು. ಇದು ವಿವಿಧ ಪ್ರೇಕ್ಷಣೀಯ ಸ್ಥಳಗಳಲ್ಲಿ ಈ ಎರಡೂ ದೇಶದ ನಡುವೆ ಬೆಳೆಯುತ್ತಿರುವ ಸ್ನೇಹದ ಪ್ರತ್ಯಕ್ಷ ನಿದರ್ಶನ.

ಟೀಕೆಗಳಿಗೆ ಲಕ್ಷಕೊಡಿರಿ

"ಯಾವಾರಲೂ ಕೆವಿ ತೆರೆದಿಡಬೇಕು. ನಾವು ನಮ್ಮ ನಿಂದೆ ಹಾಗೂ ಪ್ರಶ್ನೆಯೇ ಲಿಪ ಟೀಕೆಯನ್ನು ಶಾಂತಿಯಿಂದ ಕೇಳಿ ಕೊಳ್ಳಬೇಕು. ಆ ಟೀಕೆಯಲ್ಲಿ ಏನಾದರೂ ಸತ್ಯಾಂಶವಿದ್ದರೆ ಅದನ್ನೊಪ್ಪಿಕೊಳ್ಳಬೇಕು. ಮತ್ತು ಧೈರ್ಯವಿದ್ದರೆ ಜಾಹೀರಾಗಿ ಪಡಿಸಿ ತಪ್ಪು ತಿದ್ದಿಕೊಳ್ಳಬೇಕು! ಆದರೆ ಟೀಕೆಯಲ್ಲಿ ಸತ್ಯಾಂಶವೇ ಇಲ್ಲದಿದ್ದರೆ ಅದನ್ನ ನಗ್ಣ ಬಿಟ್ಟುಬಿಡಬೇಕು! ವಕ್ತು ಮನಸ್ಸಿನಿಂದಲೂ ಅದನ್ನು ಮರೆತು ಬಿಡಬೇಕು! ಅದು ನನಗೆ ಹೇಳಿತ್ತಲ್ಲ! ಅಂಥ ಕೆಟ್ಟ ಕೆಲಸ ಮಾಡುವವರ ಬಗ್ಗೆ ಅದು ಹೇಳಿಬಿಡ್ಡ' ಎಂಬುದಾಗಿ ಮನಸ್ಸಿಗೆ ತಿಳುವಳಿಕೆ ಕೊಟ್ಟುಕೊಳ್ಳಬೇಕು" ಎಂದು ಗಾಂಧಿಯವರು ಹೇಳಿದ್ದಾರೆ.

ಇದೊಂದು ಅಮೂಲ್ಯವಾದ ಉಪದೇಶ. ಇದರಲ್ಲಿ ತನ್ನ ವೈಲಿನ ಟೀಕೆಯನ್ನು ಉಪೇಕ್ಷಿಸಿಬಿಡಬೇಕೆಂದೂ ಹೇಳಿಲ್ಲ. ಇಲ್ಲವೆ ಅದರಿಂದ ಕಪ್ಪುಬರಿಗದೆಯೆಂದೂ ಹೇಳಿಲ್ಲ. ಇಂಥ ಟೀಕೆಯಾದಾಗ ಆಕ್ಷಣದಲ್ಲೇ ಕ್ಷಣೆಮಾಡಿಕೊಳ್ಳಲು ಆದೊಂದು ಸುಸಂಧಿ ಎಂದು ತಿಳಿದು ಅದರ ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳಲಾಗಿದೆ.

ನಾವು ನಮ್ಮ ಕೆಲಸ ಹಾಗೂ ನಮ್ಮ ನಡತೆಯಿಂದಲೇ ಇನ್ನೊಬ್ಬರ ಸಂಶಯ ನಿವಾರಿಸಬಲ್ಲೆವು. ಯಾಕೆಂದರೆ ಇಲ್ಲದೆ ಉಪೇಕ್ಷೆ ಮಾಡಿ ಸಂಶಯ ನಿವಾರಿಸುವುದು ಶಕ್ಯವಿಲ್ಲ.

(ರವಿಶಂಕರ ಮಹಾರಾಜ)

ಕಾಸರಗೋಡು ವಾರ್ತೆಗಳು

(ನಮ್ಮ ಪ್ರತಿನಿಧಿಯಿಂದ)

● ಕಾಸರಗೋಡು ಸರಕಾರೀ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರದಲ್ಲಿ ಸ್ನಾತಕೋತ್ತರ ತರಗತಿಯನ್ನೂ ವಾಣಿಜ್ಯ ವಿಭಾಗವನ್ನೂ ಪ್ರಾರಂಭಿಸುವಂತೆ ಕಲ್ಲಿಕೋಟೆ ವಿಶ್ವವಿದ್ಯಾಲಯವನ್ನು ವಿದ್ವಾನ್ ಸಭಾ ಸದಸ್ಯ ಶ್ರೀ ಯು. ಪಿ. ಕುಜಿಕಾಣ್ಯಾಯರು ವಿನಂತಿಸಿದ್ದಾರೆ.

● ರೂ. 14,000 ವೆಚ್ಚದಲ್ಲಿ ನಿರ್ಮಿಸಿದ ಕಳಕ್ಕೂರು ಕುಟುಂಬ ಕಲ್ಯಾಣ ಕೇಂದ್ರವನ್ನು ವಿಧಾನ ಸಭಾ ಸದಸ್ಯ ಶ್ರೀ ಕೆ. ಮಹಾಬಲ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳು ಉದ್ಘಾಟಿಸಿದರು.

● ಮಲಪ್ಪುರಂ ಜಿಲ್ಲೆ ರೋಟರಿಯನ್ನು ಪ್ರತಿಭಟಿಸಿ ಶಾಲಾ ವಿದ್ಯಾರ್ಥಿಗಳು ಮುಷ್ಕರ ಹೂಡಿದ ವರದಿಗಳು ತಾಲೂಕಿನ ವಿವಿಧ ಭಾಗಗಳಿಂದ ಬರುತ್ತಿವೆ.

● ಈ ವರ್ಷ ಮಳೆ ಕಡಿಮೆ. ಕಳೆದ ವರ್ಷ ಈ ಹೊತ್ತಿಗೆ ಹೆಕ್ಕು ಮಳೆ ಬಂದಿತ್ತು. ನದಿಗಳೆಲ್ಲವೂ ಉಕ್ಕಿ ಹರಿಯುತ್ತಿದ್ದುವು.

● ಉಕ್ಕಿ ದೇವಸ್ ಪ್ರವೂಡವನ್ನು ತಲಾ 6ಪೈಸೆಗೆ ಪರಿಷ್ಕರಿಸಿದೆ. ಸೆ. 30ರ ತನಕವೂ ಈ ಹೆಚ್ಚಳವಿರಲಿರುವುದೆನ್ನಲಾಗಿದೆ.

● ಕಾಸರಗೋಡು ಪ್ರಸಿದ್ಧಿಯ ಅಡಿಕೆ ನಿವಾಸಿಗಳ ತೆರಿಗೆ ಕೂಡಿಸುವನ್ನು ಕಡಿಮೆ ಮಾಡುವ ಬಗ್ಗೆ ನಿರ್ಧರಿಸಿದೆ. ಈ ಬಗ್ಗೆ ಕ ವಿವರಣೆಗಳಿಗೆ ಸಲಹೆ ಆಹ್ವಾನಿಸಿದೆ. ಪುರ ಸಭಾಧ್ಯಕ್ಷೆ ಶ್ರೀ ಎಂ. ರಾಮಣ್ಣ ರೈ ಅಧ್ಯಕ್ಷತೆ ವಹಿಸಿದ್ದರು.

● ವಿದ್ಯಾನಗರದ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಕೂಡಲೇ ಎಸ್. ಕೈಗಾರಿಕೆಗಳನ್ನು ಪ್ರಾರಂಭಿಸಲಾಗುವುದು. ಇನ್ನೂ ಹೆಚ್ಚಿನ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಲಾಗುವುದು ಎಂದು ಕೇರಳ ವಾಣಿಜ್ಯ ಕೈಗಾರಿಕಾ ಡೈರೆಕ್ಟರ್ ಮಾದಿಗಾರರೊಂದಿಗೆ ಸಂಘಸಡೆ ಬೇಳೆ ತಿಳಿಸಿದರು.

—೦—

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S 39/66

ವಿಷ್ಣು ಭಟ್ ಯಂಡ್ ಕೋ. ಮಂಗಳೂರು —ವಾದಿ

ಮತ್ತು

H.K. ಸೋಮಪ್ಪ ಕೂಡಾ—ಪ್ರತಿವಾದಿರು.

ಈ ಮೂಲಕ ಎಲ್ಲಾ ಸಾರ್ವಜನಿಕರಿಗೆ ತಿಳಿಪಡಿಸಿಕೊಡುವುದೇನೆಂದರೆ—

ವೈಲಿನ ದಾವೆಯ 1ನೇ ಪ್ರತಿವಾದಿಯಾದ H.K. ಸೋಮಪ್ಪ ಎಂಬವರು ವಾದಿಗೆ ಹಣ ತೆರಬೇಕಾಗಿರುತ್ತಿದ್ದು ಅದನ್ನು ತೆರದೆ ತನ್ನ ಹಕ್ಕನ್ನು 2ನೇ ಪ್ರತಿವಾದಿ ಕೃಷ್ಣಪ್ಪ ಗೌಡ ಎಂಬವರಿಗೆ ಕ್ರಯಪತ್ರ ಎಂಬ ಮೂಡಿಸಿದ್ದರಿಂದ ಸದ್ರಿ ಕ್ರಯಪತ್ರ ವಾದಿಗೆ ಅಥವಾ ಸಾಲಗಾರರಿಗೆ ಯಾವುದೂ ತಮ್ಮ ಸಾಲ ವಸೂಲಾತಿ ಬಗ್ಗೆ ಅಡ್ಡಿ ಬರತಕ್ಕದ್ದಲ್ಲವೆಂದೂ 1ನೇ ಪ್ರತಿವಾದಿಗೆ ಇರುವ ಎಲ್ಲಾ ಸಾಲಗಾರರ ಬಗ್ಗೆ ಕೂಡಾ ಮೇಲಿನ ದಾವೆಯನ್ನು ಮಾಡಿದ್ದಾಗಿರುತ್ತದೆ ಎಂಬ ಈ ಮೂಲಕ ತಿಳಿಸೋಣಾಗಿದೆ.

(By order of the court)

Sd/- K. T. BHAT
Adv. for Petr.

Puttur, S. K., 20-6-69.

ಸದಾಚಾರ - ದುರಾಚಾರ

(ಬುದ್ಧ ವಚನ)

ನಮ್ಮ ಅಸ್ತಿತ್ವವೆಲ್ಲವೂ ನಮ್ಮ ವಿಚಾರಗಳ ಫಲವಾಗಿದೆ; ನಮ್ಮ ವಿಚಾರಗಳೇ ಆದರ ತಳಹದಿಯು; ನಮ್ಮ ಯೋಚನೆಗಳಿಂದಲೇ ಆದು ನಿರ್ಮಿಸಲ್ಪಟ್ಟಿದೆ. ಖಂಡಿಯನ್ನೆಳೆಯುವ ಎತ್ತಿನ ಕಾಲುಗಳನ್ನು ಯಾವ ರೀತಿ ಗಾಲಿಗಳು ಹಿಂಬಾಲಿಸುವವೋ ಆ ರೀತಿಯಲ್ಲಿಯೇ ವಿಚಾರಗಳಿಂದ ಮೂಡುವ ಅಥವಾ ವರ್ತಿಸುವ ಮನುಷ್ಯನನ್ನು ದುಃಖವು ಅವಶ್ಯವಾಗಿ ಹಿಂಬಾಲಿಸುತ್ತದೆ.

ಅಂತೆಯೇ ಸದ್ವಿಚಾರಗಳಿಂದ ಮೂಡುವ ನಾಡುವವನನ್ನು ಅಥವಾ ವರ್ತಿಸುವವನನ್ನು ಎಂದೂ ಬೆನ್ನು ಬಿಡದ ನೆರಳಿನಂತೆ ಸುಖವು ಹಿಂಬಾಲಿಸುತ್ತದೆ.

೦ ೦ ೦

"ಆತನು ನನ್ನನ್ನು ಬೈದನು; ಆತನು ನನ್ನನ್ನು ಹೊಡೆದನು; ನನ್ನನ್ನು ಸೋಲಿಸಿದನಾತ; ಕನ್ನಕ್ಕೆ ಸುಲಿಗೆ ಮಾಡಿದನೀತ' ಇಂತಹ ವಿಚಾರಗಳು ಯಾರಲ್ಲಿ ನೆಲಸಿರುವವೋ ಅವರಲ್ಲಿ ದ್ವೇಷಬುದ್ಧಿಯು ಎಂದಿಗೂ ಕೊನೆಗಾಣದು.

—ಹಂದರೆ ಯಾರು ಇಂತಹ ವಿಚಾರಗಳಿಗೆ ಸರ್ವಥಾ ಎಡೆಗೊಡುವುದಿಲ್ಲವೋ ಅವರನ್ನು ದ್ವೇಷವು ಸೋಂಕದು.

ಯಾಕೆಂದರೆ, ದ್ವೇಷವು ಎಂದೆಂದಿಗೂ ದ್ವೇಷದಿಂದ ಕೊನೆಗೊಳ್ಳುವುದಿಲ್ಲ; ಕೇವಲ ಪ್ರೇಮದಿಂದಲೇ ದ್ವೇಷವು ಅಡಗುವುದು. ಇದು ಶಾಶ್ವತವಾದ ಧರ್ಮವಾಗಿದೆ.

ನಮ್ಮಿಷ್ಟದ ಅಂತ್ಯವು ಇಷ್ಟವೇ ಇದೆ ಎಂಬುದನ್ನು ಲೋಕವು ಅರಿಯದು. ಆದರೆ ಸತ್ಯವನ್ನು ಮನಗಂಡವರ ಜಗಳಗಳೆಲ್ಲವೂ ಕೂಡಲೇ ಶಾಂತವಾಗುತ್ತವೆ.

ಕೇವಲ ವಿಷಯಸುಖದ ಗಡಿಗೆ ಕಮನ ಕೊಡಬೇಡ, ಇಂದ್ರಿಯಗಳನ್ನು ನಿಯಂತ್ರಣದಲ್ಲಿಡು, ಆಹಾರ-ವಿಹಾರಗಳಲ್ಲಿ ಮಿತವಿರಲಿ; ನೋಡುವುದಕ್ಕೂ ಕಿವಿಗೊಡುವುದಕ್ಕೂ ಆಗಿ ಜೀವನವು ಜೀವಿಸುತ್ತಾನೆಯೋ ಆತನನ್ನು ಕಾಮವಿಲ್ಲದ ಮಾರನು ಸಿಕ್ಕಿಯು ಬಾಗಿಲುಗಳುಸುವಂತೆ ಮಾರನು ಸಿಕ್ಕಿಯು ಬಾಗಿಯೂ ಕೆಡಿಸುತ್ತಾನೆ.

೦ ೦ ೦ ೦

ಅದರಿ ದುಷ್ಟಕರ್ಮವಿಡಿಗೆ ಲಕ್ಷ್ಯ ಕೊಡದೆ ಶಕ್ತ ಇದ್ದಿದುಗಳನ್ನು ಚೆನ್ನಾಗಿ ಸ್ವಾಧೀನದಲ್ಲಿಟ್ಟುಕೊಂಡ, ಆಚಾರ ವಿಚಾರಗಳಲ್ಲಿ ಸಂಯಮವನ್ನೀಸಿ, ಶ್ರದ್ಧಾವಂತನೂ ಶಕ್ತಿವಂತನೂ ಆಗಿ ಯಾವನು ಬಾಳುತ್ತಾನೋ ಅಂತಹವನಿಗೆ ಬಲವರ್ತಕವನ್ನು ಕೆಡಿಸಲಾರದ ಪರ್ವತದಂತೆ ಮೂರನು ಎಂದೆಂದಿಗೂ ಹಾನಿಮಾಡಲಾರದು.

೦ ೦ ೦ ೦

ಅನಿತ್ಯದಲ್ಲಿ ನಿತ್ಯವನ್ನು ಕಲ್ಪಿಸುವವರು ಮತ್ತು ನಿತ್ಯದಲ್ಲಿ ಅನಿತ್ಯವನ್ನು ನೋಡುವವರು ಕ್ಷುದ್ರ ಆಲೆಗಳನ್ನು ಹಿಂಬಾಲಿಸುತ್ತಿದ್ದು, ಎಂದಿಗೂ ಸತ್ಯವನ್ನು ತಲುಪರು.

ನಿತ್ಯದ ನಿತ್ಯತೆಯನ್ನೂ ಅನಿತ್ಯದ ಅನಿತ್ಯತೆಯನ್ನೂ ಅರಿತು, ನಿತ್ಯವನ್ನೇ ಅಪೇಕ್ಷಿಸುವವರು ನಿತ್ಯದಲ್ಲಿ ನೆಲೆಗೊಳ್ಳುವರು.

೦ ೦ ೦

ಚೆನ್ನಾಗಿ ಹೊದಿಸದ ಛಾವಣಿಯಿರುವ ಮನೆಯೊಳಗೆ ಯಾವ ರೀತಿ ಮಳೆನೀರು ನೋರುವುದೋ ಅದೇ ರೀತಿ ವಿಚಾರಶೂನ್ಯ ಮನಸ್ಸಿನೊಳಗೆ ಮೋಹವು ನುಸುಳುವುದು.

ಉತ್ತಮ ಛಾವಣಿಯುಳ್ಳ ಮನೆಯೊಳಗೆ ಮಳೆ ನೀರು ಎಂದು ನೋರಲಾರದೋ ಅಂತೆಯೇ ಸುವಿಚಾರಿ ಮನಸ್ಸನ್ನು ಯಾವ ವಿಚಾರಗಳೂ ಬಾಧಿಸಲಾರವು.

ದುರಾಚಾರಿಯು ಇಹಪರಗಳೆರಡರಲ್ಲೂ ನರಳುತ್ತಾನೆ. ತಾನು ಮಾಡಿದ ಅನಿಷ್ಟಕಾರ್ಯಗಳನ್ನು ನೆನೆಯುವಾಗ ಆತನು ವ್ಯಥೆಪಡುತ್ತಾನೆ. ದುರ್ಮಾರ್ಗದಲ್ಲಿ ನಡೆಯುತ್ತಿರುವಾಗ ಅದಕ್ಕೂ ಹೆಚ್ಚು ದುಃಖಪಡುತ್ತಾನೆ.

ಸದ್ಗುಣಿಯು ಇಹ ಪರಗಳೆರಡರಲ್ಲೂ ಪ್ರಮೋದಿಸುತ್ತಾನೆ. ತಾನು ಮಾಡಿದ ಸತ್ಕರ್ಮಗಳನ್ನು ಸ್ಮರಿಸುವಾಗ ಆತನು ಆಹ್ಲಾದಿಸುತ್ತಾನೆ. ಸತ್ಪಥದಲ್ಲಿ ಮುಂದುವರಿಯುತ್ತಿರುವಾಗ ಅದಕ್ಕೂ ಹೆಚ್ಚು ಸುಖಪಡುತ್ತಾನೆ.

(ಧರ್ಮದರ್ಶನದಿಂದ)

ಬ್ಯಾಂಕ್ ವಿಜೇತರಿಗೆ ಸನ್ಮಾನ

ಶಿವಮೊಗ್ಗ ರಿಕ್ರಿಯೇಶನ್ ಕ್ಲಬ್ (ರಿ)ನವರು ತಾರೀಖು 14ರಂದು ಮೈಸೂರು ರಾಜ್ಯದಲ್ಲಿ S. S. L. C ಪರೀಕ್ಷೆಯಲ್ಲಿ ಪ್ರಥಮ ರ್ಯಾಂಕ್ ವಿಜೇತ ಶ್ರೀ ಸಿಲಿಪ್ ಡಿಸೋಜರನ್ನು ಸನ್ಮಾನಿಸುವ ಸಮಾರಂಭವು ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಯಪ್. ಟಿ. ಜೆ. ರೋಡ್ರಿಗ್ಸ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಲಯನ್ ಡಾ. ಆರ್. ವೆಂಕಟಕೃಷ್ಣನವರು ಸ್ವಾಗತ ಭಾಷಣ ಮಾಡಿದರು. ಉಡುಪಿ ತಾಲೂಕು ಬೋರ್ಡ್ ಸದಸ್ಯ ಶ್ರೀ ಶಿತಾನಂದ ವಿಲಿಯಂ ಪಿಂಟೋರವರು ಪರಿಚಯ ಭಾಷಣವನ್ನಾಡಿದರು. ಸಭಿಕರಲ್ಲಿ ಕ್ಲಬ್ಬಿನ ಸದಸ್ಯರಾದ ಶ್ರೀ ಸಿ. ನೀತಾರಾಮ್ M. ಬಿಟ್ಸ್, ಲಯನ್ಸ್ ಡಾ. ಯು. ಕೆ. ಆಚಾರ್, ಶ್ರೀ ಭು ಬಿಟ್ಟಿ, ಯಲ್. ಮೆಂಡೋನ್ಸ್, ಶ್ರೀ ಡಾ. ವೈ. ಆರ್. ಶೆಟ್ಟಿ ಹಾಗೂ ಕಾರ್ಕಳ ಭುವನೇಂದ್ರ ಕಾಲೇಜಿನ ಲೆಕ್ಚರರ್ ಶ್ರೀ ಕೆ. ಜಿ. ಪ್ರಭುರವರು ರ್ಯಾಂಕ್‌ವಿಜೇತರನ್ನು ಹರಸಿದರು. ರಿಕ್ರಿಯೇಶನ್ ಕ್ಲಬ್ ಹಾಗೂ ಶಿವಮೊಗ್ಗ ಸ್ಪೋರ್ಟ್ಸ್ ಯೂನಿಯನ್‌ಗಳ ಪರವಾಗಿ ಹಾರಾರ್ಪಣೆ ಗೈದರು. ಕ್ಲಬ್ಬಿನ ಪರವತಿಯಿಂದ ಪಾರಿತೋಷಕವನ್ನು ಅರ್ಪಿಸಿದರು. ಅಧ್ಯಕ್ಷರು ಕಾಲೋಚಿತ ಭಾಷಣಗೈಯುತ್ತ ಹರಸಿ, ಉನ್ನತ ಭವಿಷ್ಯವನ್ನು ಕೋರಿದರು. ಲಘುಉಪಹಾರ ಹಾಗೂ ಚಿಕ್ಕ ಬಾಲಕರಿಗೆ ಸಿಹಿತಿಂಡಿ ಹಂಚಲಾಯಿತು. ಶ್ರೀ ಸಿಲಿಪ್ ಡಿಸೋಜಾರವರು ತನ್ನ ಸರಳ ವಿದ್ಯಾಭ್ಯಾಸ, ಆರ್ಥಿಕ ಪರಿಸ್ಥಿತಿಯನ್ನು ವಿವರಿಸುತ್ತಾ, ತಾನು ರ್ಯಾಂಕುಗಳಿಸಿದ ರೀತಿಯನ್ನು ಹೇಳಿ ತನ್ನ ಅಭಿನಂದನೆ ಸಲ್ಲಿಸಿದರು. ಜತೆಕಾರ್ಯದರ್ಶಿ ಶ್ರೀ ಕೆ. ಆರ್. ಹೆಗ್ಡೆಯವರು ಧನ್ಯವಾದಾರ್ಪಣೆ ಮಾಡಿದ ಬಳಿಕ ಜನಗಣಮನದೊಂದಿಗೆ ಸಭೆ ಮುಕ್ತಾಯಗೊಂಡಿತು.

ಲೋಕತಂತ್ರದ ಮೂಲತತ್ವ

(ಮೂರನೇ ಪುಟದಿಂದ)

ತೆ ಇರದಿದ್ದರೆ ನಾವು ನಮ್ಮಲ್ಲಿಯ ಮತಭೇದಗಳನ್ನು ಎಂದೂ ಮಿತ್ರತ್ವದಿಂದ ಬಗೆಹರಿಸಿಕೊಳ್ಳಲಾರೆವು.

ಬಹುಸಂಖ್ಯಾಕರ ಶಾಸನವು ಬಹುಮತಸ್ಥರಿಗೆ ಅವಶ್ಯವೆಂದು ನಾವು ಒಪ್ಪಲೇಬೇಕು. ಎವರಗಳ ವಿಷಯದಲ್ಲಿ ಬಹುಸಂಖ್ಯಾಕರ ನಿರ್ಣಯವನ್ನು ನಾವು ಸ್ವೀಕರಿಸಬೇಕು. ಆದರೆ ಅವರು ಏನೇ ನಿರ್ಣಯಮಾಡಿದರೂ ಅದಕ್ಕೆ ಸದಾಕಾಲ ಶಿರಸಾವಹಿಸುತ್ತ ಹೋಗುವುದು ಗುಲಾಮಗಿರಿಯ ಚಿನ್ಹವಾದೀತು. ಜನರು ಕುರಿಗಳಂತೆ ವರ್ತಿಸುವನಕ್ಕೆ ಲೋಕಶಾಹಿ ಎಂದು ಬೇಳುವದಲ್ಲ! ಲೋಕಶಾಹಿಯಲ್ಲಿ ವ್ಯಕ್ತಿಗಳ ಮತಸ್ವಾತಂತ್ರ್ಯ ಹಾಗೂ ಕಾರ್ಯಸ್ವಾತಂತ್ರ್ಯಗಳು ಅತ್ಯಂತ ಸಾವಧಾನತೆಯಿಂದ ರಕ್ಷಿಸಲ್ಪಡುತ್ತಿರಬೇಕು! (ಗಾಂಧಿ)

ದಯಮಾಡಿ

ನಿಮ್ಮ ಬಾಕಿ ಚಂದಾ

ಹಣವನ್ನು ಕಳುಹಿಸಿರಿ

ಸಿಂಡಿಕೇಟ್ ಬ್ಯಾಂಕು

300 ಕ್ಕೂ ಮಿಕ್ಕಿದ ಶಾಖೆಗಳೊಡನೆ ರಾಷ್ಟ್ರಕ್ಕೆ ಸೇವೆ ಸಲ್ಲಿಸುತ್ತಿದೆ.

4 ಹೊಸ ಶಾಖೆಗಳನ್ನು ದೆಹಲಿ ಮತ್ತು ಬೆಂಗಳೂರಿನಲ್ಲಿ 1969ರ ಜೂನ್ 27 ಮತ್ತು 28ರಂದು ತೆರೆಯುವದರೊಂದಿಗೆ ಸಿಂಡಿಕೇಟ್ ಬ್ಯಾಂಕು ಒಟ್ಟು 300 ಶಾಖೆಗಳ ಮೂಲಕ ಈ ಕೆಳಗಿನ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೇವೆಸಲ್ಲಿಸುವುದು.

ಆಂಧ್ರ ಪ್ರದೇಶ, ಮಹಾರಾಷ್ಟ್ರ, ದೆಹಲಿ, ಮೈಸೂರು, ಗೋವಾ, ತಮಿಳುನಾಡು, ಗುಜರಾತ್, ಪಶ್ಚಿಮ ಬಂಗಾಳ, ಕೇರಳ

20 ವರ್ಷಗಳಲ್ಲಿ (1925ನೇ ನವಂಬರದಿಂದ 1945 ನವಂಬರದ ವರೆಗೆ) ಸಿಂಡಿಕೇಟ್ ಬ್ಯಾಂಕು ತನ್ನ ಮೊದಲ 52 ಶಾಖೆಗಳನ್ನು ಪ್ರಾರಂಭಿಸಿದ್ದು, ಇದೀಗ ಕೇವಲ 6 ತಿಂಗಳಲ್ಲಿ (1969ನೇ ಜನವರಿಯಿಂದ 69ನೇ ಜೂನ್ ವರೆಗೆ) 52 ಶಾಖೆಗಳನ್ನು ತೆರೆದಿದೆ.

ಸಿಂಡಿಕೇಟ್ ಬ್ಯಾಂಕು ಈ ಆರು ತಿಂಗಳಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ತನ್ನ 52 ಶಾಖೆಗಳನ್ನು ತೆರೆಯಿತು.

ಆಂಧ್ರ	ಗುಜರಾತ್	ದೆಹಲಿ
ತಿರುಪತಿ, ವಾರಂಗಲ್	ಸೂರತ್	ಕಂಟೋನ್‌ಮೆಂಟ್, ಪಂಜಾಬಿ ಬಾಗ್, ಆರ್. ಕೆ. ಪುರಂ, ಶಹದಾರ
ಕೇರಳ	**ಗೋವಾ**	**ಮಹಾರಾಷ್ಟ್ರ**
ಮಂಜೇಶ್ವರ, ಪೆರ್ಲ, ಶ್ರೀಕರಿಯಂ, ತ್ರಿವೇಂದ್ರಂ ಪಟ್ಟಂ	ಆಗಾಸಿಯಂ, ಕರಂಜಾಲಂ, ಕವಲೆಂ, ಮರ್ಸಸ್, ರಿಬಂದರ್, ವಾಸ್ಕೋ-ಡ-ಗಾಮಾ-ಬಿಯಾನ	ಬಾಂಬೆ ಅಂಧೇರಿ, ಬಾಂಬೆ ಜೆಂಬೂರ್, ದೊಂಬಿವ್ಲಿ, ನಾಗಪುರ

ಮೈಸೂರು: ಆವರ್ಸ, ಬೆಂಗಳೂರು ಅರಳೇ ಪೇಟೆ, ಕೃಷ್ಣರಾಜಪುರಂ, ಲಾಂಗ್‌ಫೋರ್ಡ್ ಟೌನ್, ಮಡಿವಳ. ಎನ್. ಆರ್ ಕಾಲೊನಿ. ಶೂಲೆ, ಸರ್ ಪುಟ್ಟಣ್ಣಚೆಟ್ಟಿ ರಸ್ತೆ, ವಸಂತನಗರ; ಮೈಸೂರು ಲಷ್ಕರ್ ಮೊಹಲ್ಲಾ, ಸಾಸ್ತಾನ್, ಸಿಂಧನೂರ್, ಉದ್ಯಾವರ, ಬನವಾಸಿ, ಬೈಲಕುಪ್ಪೆ, ಚಿಟ್ಟಳ್ಳಿ, ಚಿಕ್ಕೋಡಿ, ಘಟಪ್ರಭ ಗೋಕಾಕ, ಗುಲ್ಬರ್ಗಾದ ಸ್ಟೇಷನ್ ಬಜಾರ್, ಹೆಜಮಾಡಿ, ಹುಬ್ಬಳ್ಳಿಯ ಸೂಪರ್ ಮಾರ್ಕೆಟ್, ವಿದ್ಯಾನಗರ, ಕಲ್ಲಮುಂಡ್ಕೂರು, ಮಡಿಕೇರಿ, ಮೂಡಲ್ಗಿ, ಮುರ್ಡೇಶ್ವರ.

ಪ. ಬಂಗಾಳ: ಕಲ್ಕತ್ತಾ—ದಕ್ಷಿಣ ತಮಿಳುನಾಡು: ಕಾಂಚೀಪುರಂ, ತಿರುವೆಲ್ಲೂರ್, ತಿರುತ್ತಣಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

"ಪ್ರತಿಯೊಂದು ಬ್ಯಾಂಕಿಂಗ್ ಆವಶ್ಯಕತೆಗಾಗಿ ಪ್ರತಿಯೋರ್ವನ ಬ್ಯಾಂಕು"

ರಿಜಿಸ್ಟರ್ಡ್ ಆಫೀಸು:
ಮಣಿಪಾಲ, ಮೈಸೂರು ರಾಜ್ಯ

ಟಿ. ಎ. ಪೈ,
ಚೇಯರ್‌ಮೆನ್.

ಕಲಾದೇವಿ

(ಎರಡನೇ ಪುಟದಿಂದ)

ರೂಂನಲ್ಲಿ ನಿನಗಾಗಿ ಕಾದಿರುತ್ತೇನೆ. ದಯವಿಟ್ಟು ಬನ್ನಿ. ನಿರಾಶೆಗೊಳಿಸಬೇಡಿ. ನಿಮ್ಮ — ಪ್ರತಿಭಾ" ಎಂದಿತ್ತು.

ನಾಟಕ ಮುಗಿಯಿತು.

ಗೆಳೆಯರೊಂದಿಗೆ ಹೊರಕ್ಕೆ ಬಂದೆ. ನನ್ನ ಕೈಗೆ ಚೀಟು ಸುಳಿಸಿದ್ದ ನಾಟಕ ಸಂಸ್ಥೆಯ ಬಾಲಕ ಬಾಗಿಲಲ್ಲೇ ಕಾಯುತ್ತಿದ್ದ ಅವಸರವನ್ನೆ ಹಿಂಬಾಲಿಸಿದೆ.

"ಮೂರ್ತಿ ಪರಿಚಿತರು ಯಾರೋ ಕಂಪೆನಿಯಲ್ಲಿದ್ದಾರೆ. ನೋಡಿಕೊಂಡು ಬರೋಣ ಬನ್ನಿ" ಎಂದು ಉಳಿದವರಿಗೆ ತಿಳಿಸಿದ ಅವಂಕ. ಎಲ್ಲರೂ ನನ್ನನ್ನೆ ಅನುಸರಿಸಿದರು.

ರಂಗದ ಮೇಲಿಂದ ನಿಷ್ಕ್ರಮಿಸಿದ ಲಲಿತಾ ತನ್ನ ಉಡುಪನ್ನು ಕಳಚಲಿದೆ ಬಾಗಿಲಲ್ಲಿಯೇ ಕಾದು ನಿಂತಿದ್ದು, ನನ್ನನ್ನು ಕಂಡೊಡನೆಯೇ "ನನ್ನ ನೆನಪಿದೆಯೇ ಅಣ್ಣಯ್ಯ?" ಎಂದು ಕೈ ಮುಗಿದಳು.

"ಇದೆಯಮ್ಮ" ಎಂದು ಕೈ ಜೋಡಿಸಿದೆ.

"ನೀವು ನಾಟಕಕ್ಕೆ ಬಂದದ್ದು ಬಹಳ ಸಂತೋಷ. ಇಲ್ಲಿಗೆ ಬಂದಿರುವ ಕಂಗತಿಯನ್ನು ನನಗೆ ತಿಳಿಸಬಾರದಿತ್ತೇ? ನಾನು ಹೇಳಿಕಳುಹಿಸಿದೆ ಇದ್ದಿದ್ದರೆ ಹಾಗೆ ಹೊರಟು ಹೋಗುತ್ತಿದ್ದಿರೆ" ಎಂದು ಆಕ್ಷೇಪಿಸಿದಳು.

"ಖಂಡಿತ ಇಲ್ಲವಮ್ಮ, ನಿನ್ನ ಪ್ರತಿಭಾ ಪೂರ್ಣ ನಟನೆ, ಸಂಗೀತ, ನರ್ತನ ಕಂಡು ಬಹು ಸಂತೋಷಪಡುತಿದ್ದು. ಮೊದಲ ಅಂಕದಲ್ಲಿಯೇ ನಿನ್ನನ್ನು ಗುರುತಿಸಿದೆ. ನಾಟಕ ಮುಗಿದ ಕೂಡಲೆ ನಂದನೆಗಳನ್ನು ಹೇಳಲು ತಪ್ಪದೆ ಬರುತ್ತಿದ್ದೆ" ಎಂದೆ. ಆ ವೇಳೆಗೆ ನಾಟಕದ ನಟನಟಿಯರು, ಕೆಲಸಗಾರರು ಎಲ್ಲರೂ ಬಂದು ಸೇರಿದರು. ಎಲ್ಲರಿಗೂ ಕುರ್ಚಿಗಳೇ ಅವರ ಬಳಿಗೆ ಬಂದವು. ಕಂಪೆನಿಯ ಯಜಮಾನ ರಾಘಣ್ಣನವರು ಮಿತ್ರರೆಲ್ಲರಿಗೆ ಕಾಫಿ ಕೊಡುತ್ತಾ "ಏನಮ್ಮ ಅಲ್ಪ ಸೇವೆ" ಎಂದರು.

"ನಿನ್ನ ಸೇವೆ ಅಲ್ಪವಿರಬಹುದು ಸ್ವಾಮಿ; ನಿಮ್ಮ ಹೃದಯ ದೊಡ್ಡದು" ಎಂದೆ. ರಾಘಣ್ಣ ತಮ್ಮ ನೋಟದಲ್ಲಿಯೇ ಕೃತಜ್ಞತೆಯನ್ನು ಅರ್ಪಿಸಿದರು.

ಲಲಿತಾ ಕಂಪನಿಯ ಮಾಲೀಕರನ್ನು ಪ್ರಮುಖ ನಟನಟಿಯರನ್ನು ಪರಿಚಯ ಮಾಡಿಸಿಕೊಟ್ಟಳು.

ರಾಘಣ್ಣ ನನ್ನ ಎರಡು ಕೈಗಳನ್ನೂ ಹಿಡಿದು "ನೀವು ಸರಸ್ವತಿ ಪುತ್ರರು ಸ್ವಾಮಿ, ನೀವು ಬಂದದ್ದು ಬಹಳ ಸಂತೋಷ. ಮೊದಲೇ ಗೊತ್ತಾಗಲಿಲ್ಲ. ನಿಮ್ಮ ಭಾಷಣವನ್ನು ಕೇಳಬಹುದಿತ್ತು. ನಿಮ್ಮ ಕೀರ್ತಿ ಕೇಳಿದ್ದೇನೆ" ಎಂದು ಮನಃಪೂರ್ವಕವಾಗಿ ನುಡಿದರು.

"ನಿಮ್ಮ ಆಭಿಮಾನ ದೊಡ್ಡದು" ಎಂದೆ.

"ನಾಳೆಯ ಪ್ರದರ್ಶನಕ್ಕೆ ಇರುತ್ತೀರಲ್ಲ ಸ್ವಾಮಿ" ಎಂದರು ನಟರೊಬ್ಬರು.

"ನಾಳೆ ಪ್ರಯಾಣ ಮಾಡಬೇಕು. ನಾಲ್ಕು ದಿನವಾಯ್ತು ಊರು ಬಿಟ್ಟು" ನಂದೆ.

"ದೊಡ್ಡ ವಿಷಯ ಮಾಡಬೇಕು." ಎಂದು ರಾಘಣ್ಣನವರು ಕೈಮುಗಿದರು.

"ಖಂಡಿತ ಅವಶ್ಯ ಬಿಡಬೇಡಿ ಸ್ವಾಮಿ" ಎಂದ ಅವಂತ.

ಎಲ್ಲರೂ ಚಪ್ಪಾಳೆ ತಟ್ಟಿದರು.

ಲಲಿತಾ ಉಡುಪು ಬದಲಿಸಿ ಬಂದು— "ಅವರು ಖಂಡಿತ ನಾಳೆ ಇರುತ್ತಾರೆ" ಎಂದಳು.

"ಏನಮ್ಮಾ...." ಎಂದೆ.

"ಹುಮ್ಮನಿರು ಅಣ್ಣಯ್ಯ ಇದ್ದೇಇದೆ ಊರು." ಎಂದಳು ಲಲಿತಾ.

"ಹೊರಡೋಣವೇ ಮೂರ್ತಿ" ಎಂದ ಅನಂತ"

ಲಲಿತ ಸಂಕೋಚದಿಂದಲೇ "ಅಣ್ಣಯ್ಯ" ಎಂದಳು.

"ಏನಮ್ಮ...."

'ನನ್ನ ಜೊತೆಗೆ ಈಡ ನೀವು ಬರಲು ಆಭ್ಯಂತರ ಇಲ್ಲವಷ್ಟೆ?"

"ಅದಕ್ಕೇನಮ್ಮ ಬರುತ್ತೇನೆ'

'ಸರಿಯಣ್ಣ ಹುಂಬ ಧೈರ್ಯಸ್ಥ" ಎಂದು ರಂತೋಷದಿಂದ ನುಡಿದಳು.

'ಸರಿ ಹಮಗೆ ಅಪ್ಪಣೆಕೊಡಿ' ಎಂದ ಅವಂಕ. ಒಬ್ಬ ವಿಶ್ವನ ಫೋಟ ವಿಚಿತ್ರವಾಗಿತ್ತು.

'ಅಣ್ಣಯ್ಯನನ್ನು ಪುಃಷ ಹಮಗೆ ಒಪ್ಪಿಸ ತ್ತೇನೆ. ಅಂಜಬೇಡಿ ' ಎಂದಳು ಲಲಿತಾ.

ಗೆಳೆಯರೆಲ್ಲರೂ ಮನೆಯಾರಿ ಹಿಡಿದರು.

ನಾನು ಲಲಿತಳೊಂದಿಗೆ ಅವಳ ಕಾರಿನಲ್ಲಿಯೇ ಅವಳಿದ್ದ ಮನೆ ತಲಪುವ ವೇಳೆಗೆ ಮಧ್ಯರಾತ್ರಿ ಮೂರುಗಂಟೆಗೂ ಮಿಕ್ಕಿತ್ತು.

ಲಲಿತಳ ಕೆಲಸದವಳು ಮನೆಯ ಬಾಗಿಲು ತೆರೆದಳು. ಲಲಿತಾ ಕಾಫಿ ಮಾಡಲು ತೊಡಗಿದಳು.

"ಈಗೇಕಮ್ಮ ಈ ಕಷ್ಟ" ಎಂದೆ.

"ಅಣ್ಣಾಜಿಗೆ ತಂಗಿಯು ಅಲ್ಪ ಶತ್ರಾರವೂ ಆಹುವುದು ಬೇಡವೇ" ಎಂದಳು.

"ಲಲಿತಾ"

"ಏಕಣ್ಣ"

'ನೀನು ಬೇಕಾದಷ್ಟು ಕೊಳ್ಳದಿದ್ದಲ್ಲಿ ಒಂದು ಪ್ರಶ್ನೆ ಕೇಳಬೆಕೂಂತ".

'ಕೇಳು, ಆಪಕ್ಕೇನು?'

"ನೀನು ಓದಿ ವಿದ್ವಾಂಸಳಾಗಿ ಗೃಹಿಣಿಯಾಗುವುದೂ ಬಿಟ್ಟು ನಾಟಕ ಕ್ಷೇತ್ರಕ್ಕೆ ಹೇಗೆ ಬಂದೆ ಅಂತ"

"ಎಲ್ಲಾ ನನ್ನ ಕರ್ಮವಣ್ಣ. ನಾನೇನು ಮೂಡಲ ನನ್ನ ಗೃಹಚಾರ ಎಳೆದು ತಂದುಬಿಟ್ಟಿತು. ನಿಮ್ಮನ್ನು ಕಂಡರೆ ಒಡಹುಟ್ಟಿದ ಅಣ್ಣನನ್ನು ಕಂಡಂತಾಗುತ್ತದೆ. ನಿಮಗೆ ನನ್ನ ಕೃಥೆಯನ್ನೂ ಹೇಳಬೇಕೆಂಬೇ ಕರೆಕಂದೆ" ಎಂದಳು ಲಲಿತಾ.

ಕಾಫಿ ಸಿದ್ಧವಾಯಿತು. ಇಬ್ಬರೂ ಕಾಫಿ ಮುಗಿಸಿ ಕೋಣೆಯಲ್ಲಿ ಕುಳಿತೆವು. ಲಲಿತಾ ತನ್ನ ಕಥೆ ಆರಂಭಿಸಿದಳು—

ತನ್ನ ತಂದೆಗೆ ಒಂದು ಸಂಸಾರವನ್ನು ಸುಗಮವಾಗಿ ನಿರ್ವಹಿಸುವ ಸರ್ಕಾರಿ ಉದ್ಯೋಗವಿತ್ತು. ಕಿರಿಯ ವಯಸ್ಸಿನಿಂದಲೂ ನಾನು ನಮ್ಮ ತಮ್ಮ ಮತ್ತು ತಂಗಿ ಎಲ್ಲರೂ ಸುಖವಾಗಿಯೇ ಇದ್ದೆವು. ನಾವೇ ಎಲ್ಲರಿಗಿಂತಲೂ ಹಿರಿಯರು, ದುರದೃಷ್ಟದಿಂದ ನಮ್ಮ ತಂದೆಗೆ ಸಹವಾಸ ದೋಷದಿಂದ ಕುಡಿಕ ಗಂಟು ಬಿತ್ತು. ಮಿಕ್ಕಿನ ರಳವಾಯಿತು. ಅಮ್ಮನಿಗೆ ಅದೇ ದೊಡ್ಡ ಕೊರಗಾಯಿತು. ನನಗೆ ಮೊದಲಿಂದಲೂ ಕಲೆಗಳಲ್ಲಿ ಅಪಾರ ಅಭಿರುಚಿ ಸಂಗೀತ ನರ್ತನವೆಂದೂ ಪನ್ನ ಎರಡು ಕಣ್ಣುಗಳು. ಕೆಲ ಉತ್ಸವಗಳಲ್ಲಿ, ಕಾಲೇಜುಗಳಲ್ಲಿ ಪಾತ್ರವಹಿಸಿ ಹೆಸರು ಗಳಿಸಿದ್ದೆ. ನನ್ನ ತಾಯಿಗೆ ಎಣೆಯಿಲ್ಲದ ಸಂತೋಷ. ನಮ್ಮ ತಂದೆಗೆ ಕುಡಿಕದ ಓಟದೊಂದಿಗೆ ಇಸ್ಪೀಟಾಟವೂ ಹಂಟುಬಿತ್ತು. ನುಣಿಯ ಪಾತ್ರೆ, ಪುಸ್ತಕ ಎಲ್ಲವೂ ಅಂಗಡಿಗಳ ಪಾಲಾಗತೊಡಗಿದವು.

ಇದೇ ಕೊರಗಿನಲ್ಲಿಯೇ ಅಮ್ಮ ಕಣ್ಣು ಮುಚ್ಚಿದಳು.

ಅಮ್ಮ ಇಲ್ಲವಾದ ತರುವಾಯ ಅಪ್ಪನಿಗೆ ಯಾರ ನಿರ್ಬಂಧವೂ ಇರಲಿಲ್ಲ. ಜಾತಿಜನರಿಂದ ಕಪ್ಪುಚುಕ್ಕೆ ಸಂಸಾರ ಸಾಗಿಸುತ್ತಿದ್ದೆ. ತಲೆಯೆತ್ತಿ ತಿರುಗಲೂ ನಾಚಿಕೆಯಾಗುತ್ತಿತ್ತು. ಒಂದು ಬಾರಿ ತಂದೆಗೆ ಹೆಸರಾದ ಮುಗ್ಗಟ್ಟು ಒದಗಿತು. ಒಂದೆಳೆಯ ಚಿನ್ನದ ಸರವನ್ನು ಬಹು ಜೋಪಾನವಾಗಿ ಕಾಪಾಡಿಕೊಂಡಿದ್ದೆ. ಅದನ್ನು ಬೇಡಿದಳು. ನೊಂದಳು ನಿರಾಕರಿಸಿದೆ. ದವಡೆಗೆ ಬಡಿಯುವಂತೆ ಬಡಿದರು. ಪನಗೆ ಎಚ್ಚರ ತಪ್ಪಿತು. ಎಚ್ಚರ ಬಂದಾಗ ನನ್ನ ತಮ್ಮ ತಂಗಿ ಪಕ್ಕದಲ್ಲಿ ಅಳುತ್ತಾ ಕೂತಿದ್ದರು.

ಉಳಿದ ಒಂದೇ ಮಾರ್ಗವನ್ನು ನಿರ್ಧರಿಸಿದೆನೆನ್ನಲ್ಲಿ ಕಾಲೇಜು ಪುಸ್ತಕ ಮಾರಿ ಒಂದೆರಡು ಸೀರೆಗಳನ್ನು ಮಾಡಿಕೊಂಡು ತಮ್ಮ, ತಂಗಿಯೊಂದಿಗೆ ನನ್ನ ತಾತನಿದ್ದ ನಂಜನಗೂಡಿಗೆ ಬಂದೆ. ನನ್ನ ತಾತನವರದೂ ಆಂತಹದೆ ಹೇಳಿಕೊಳ್ಳುವ ಸ್ಥಿತಿಯಿರಲ್ಲಿ, ವಿಷಯ ತಿಳಿದು ತಾತ ಕಂಬನಿಗರೆದ. ಹುಡುಗರನ್ನು ಅವರ ವಶಕ್ಕೆ ಒಪ್ಪಿಸಿ "ತಾತ ಎಂತಹ ಕಷ್ಟಬಂದರೂ ಆದರ್ಶವನ್ನು ಬಿಡಬೆ ಫಿಷ್ಟೆಯಿಂದ ಬಾಳುವಂತೆ ಆಶೀರ್ವದಿಸು. ಕೆಲಸ ಹಂಪಾಯಿಸಿ ಈ ಹುಡುಗರ ಓದುವ ತ್ಕ ಜೀವನಕ್ಕೆ ಖರ್ಚಿಗೆ ಹಣ ಕಳಿಸುತ್ತೇನೆ. ನನಗೆ ಹೋಗಲು ಅಪ್ಪಣೆ ಕೊಡು" ಎಂದೆ. ತಾತ ಗದ್ಗದಿತನಾಗಿ "ಎಲ್ಲಿಯಾದರೂ ಸುಖವಾಗಿರಮ್ಮ" ಎಂದ.

ಬೆಂಕಳೂರಿಗೆ ಬಂದೆ. ಒಂದು ತಿಂಗಳಾದರೂ ಕೆಲಸ ದೊರೆಯುಲಿಲ್ಲ. ಅಷ್ಟರಹತ್ಕೆಗೂ ಪ್ರಯತ್ನಿಸಿದೆ. ರಾಘಣ್ಣನವರೇ ಉಳಿಸಿಕೊಂಡರು. ನನ್ನ ಕಥೆ ಕೇಳಿ ತಮ್ಮ ಕಂಪೆನಿಯಲ್ಲಿಯೇ ಸ್ಥಳ ಕೊಟ್ಟರು. ಆಂದಿನಿಂದಲೂ ರಂಗಭೂಮಿಯ ಸೇವೆಯನ್ನೇ ಮಾಡಿಕೊಂಡಿದ್ದೇನೆ. ದೇವರ ಕೃಪೆ ಹಾಯಿತ. ಹಣ ಕೀರ್ತಿ ಎರಡೂ ನನ್ನನ್ನು ಬೆನ್ನು ಹತ್ತಿವೆ. ಇಂದು ತಮ್ಮ ತಂಗಿ ಇಬ್ಬರೂ ನಂಜನಗೂಡಿನಲ್ಲಿಯೇ ತಾತಕ ಮನೆಯಲ್ಲಿ ಸುಖವಾಗಿ ಓದಿಕೊಂಡಿದ್ದಾರೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ತೋಷವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 33
Licensed to Post without Prepayment

ಕೂದಲು ಕಸಿ

ಕರಪತ್ರಗಾರರು: ಶ್ರೀ ಪಾಡಿಗಾರು ಶ್ರೀರಮಣಾಚಾರ್ಯ

ಒಂದು ಹೊಸ ಆಂದೋಲನ. ದೊಡ್ಡ ಕ್ರಾಂತಿ. ಜನತೆಯ ತಲೆಗೇನೇ ಬಂದಂಥ ಬಹು ದೊಡ್ಡ ಪ್ರಶ್ನೆ. ಎಲ್ಲರೂ ಬೇಡ ಎಂದು ರೊಕ್ಕಕೊಟ್ಟು ತೆಗೆಸಿಕೊಳ್ಳುವ ದಕ್ಕೆಯೇ! ಇಂದು ಬೆಲೆ ಬಂದು ಬಿಟ್ಟಿದೆ. ಇದರಿಂದಾಗಿ ಕಾಡಿಗೆಗೆ ಬೆಲೆ ಕಡಿಮೆಯಾಗುವ ನಿರೀಕ್ಷಣೆ ಇದೆ. ಹಿಂದಿನ ಜನ್ಮದಲ್ಲಿ ಮನೆಗೆ ಬೆಂಕಿ ಇಕ್ಕು ಪಾಪವೂ ಅವರಿಗೆ ನನ್ನನ್ನು ನೋಡಬೇಕೆನಿಸಿದಾಗ ತಾತನೊಂದಿಗೆ ಅವರೇ ಬರ್ತಾರೆ. ಇಷ್ಟವೇ ನಾನೇ ಅಲ್ಲಿಗೆ ಹೋಗ್ತೇನೆ. ತಂದೆಯೂ ನನ್ನನ್ನು ಮರೆತಿಲ್ಲ. ವರ್ಷ ಕೊಂದಾವರ್ತಿಯಾದರೂ ಒಂದು ಜೋಡಾದಷ್ಟು ಹಣವನ್ನು ಕಿತ್ತುಕೊಂಡು ಹೋಗುತ್ತಾರೆ.

ಸಮೂಹ ನನ್ನನ್ನು ಟೀಕಿಸದೆಯೂ ಬಿಡಲಿಲ್ಲ. ನ್ಯಭಿಚಾರಿಣಿ ಎನ್ನಲೂ ಹೇಸಲಿಲ್ಲ. ರಾಘಣ್ಣನ ಉಪಪತ್ನಿ ಎಂದು ನನ್ನನ್ನು ಬಯಸಿ ಸಿರಾಕರಿಸಿದ ಜನ ಹಿಗ್ಗಿದರು. ನಮ್ಮ ಮನಸ್ಸು ಇಂದಿಗೂ ಪರಿಶುದ್ಧವಾಗಿದೆ. ಒಂದು ಆದರ್ಶವನ್ನೇ ಅನುಸರಿಸಿ ಬದುಕುತ್ತಿದ್ದೇನೆ. ನನ್ನ ಆದರ್ಶಕ್ಕೆ ಊನ ಬಂದ ದಿನ ವಿಷಕುಡಿದು ಪ್ರಾಣಬಿಡುತ್ತೇನೆ.

ಎಂದು ದೀರ್ಘವಾದ ನಿಟ್ಟುಸಿರು ಬಿಟ್ಟಳು ಲಲಿತಾ.

"ನಿನ್ನದು ನೋವು ಕಂಡ ಜೀವ ಕಣಮ್ಮ. ನಿನ್ನ ಹೃದಯ ಪಕ್ವವಾಗಿದೆ; ಆದರಿಂದಲೇ 'ಲಲಾದೇವಿ' ನಾಟಕ ಯಶಸ್ವಿಯಾಗಿರ್ತು" ಎಂದೆ.

"ಏನೋ ಅಣ್ಣಾ, ನೀವಾದರೂ ನನ್ನ ಮಾತನ್ನು ನಂಬಿದಿರಲ್ಲ. ಅದೇ ಸಂತೋಷ."

"ನಿನ್ನ ಪರಿಚಯವಾದ ದಿನ ನಾನೂ ನಿನ್ನನ್ನು ದೂಷಿಸಿದ್ದೆ. ನಿನ್ನ ತಂಗಿಗೆ ಸ್ನೇಹಕ್ಕೆ ಯೋಗ್ಯಳಲ್ಲವೆಂದೇ ಹೇಳಿದ್ದೆ. ನಿನ್ನದು ಕಲಾವಂತಿಕೆ ಒಲಿದು ನಲಿದ ನರ್ತಿಸಿರುವ ಹೃದಯ; ಕಣಮ್ಮ" ಎಂದು ಸಂತೋಷದಿಂದಲೇ ಹೇಳಿದೆ.

ಬೊದಲು ಲಲಿತಾಳ ಬಗೆಗೆ ತಾಳಿದ್ದ ಭಾವನೆಗೆ ಪನಗೇ ಪರಿತಾಪವಾಯಿತು. ಹೃದಯ ಪಶ್ಚಾತ್ತಾಪಪಟ್ಟಿತ್ತು.

"ನಾನು ಈಗ ಲಲಿತ ಅಲ್ಲವಣ್ಣ; ರಂಗ ಭೂಮಿಯ ನೇಪಥ್ಯದಿಂದ ಬಂದಿದ ದಿಫದಿಂದ ಪ್ರತಿಭಾ" ಎಂದಳು ಲಲಿತಾ.

"ಸಂತೋಷವಮ್ಮ, ಪ್ರತಿಭೆಯಿಂದಲೇ ಬಾಳು."

"ನಾನು ಆನ ಸರಿಸಿದ ಪೂರ್ಣ ಸರಿ ಹೌದೇ. ಅಣ್ಣಯ್ಯ, ನೀನೇ ಹೇಳಣ್ಣಾ?" ಎಂದು ಕಂಬನಿದುಂಬಿದ ನೇತ್ರದಳಿಂದಲೇ ಪ್ರಶ್ನಿಸಿದಳು ಲಲಿತಾ.

ನನ್ನ ಕಣ್ಣಾಂಚಿನಿಂದ ಹರಿದ ಕಂಬನಿಯೇ ಆ ಪ್ರಶ್ನೆಗೆ ಉತ್ತರ.

ಅವರಿಗೆ ನನ್ನನ್ನು ನೋಡಬೇಕೆನಿಸಿದಾಗ ತಾತನೊಂದಿಗೆ ಅವರೇ ಬರ್ತಾರೆ. ಇಷ್ಟವೇ ನಾನೇ ಅಲ್ಲಿಗೆ ಹೋಗ್ತೇನೆ. ತಂದೆಯೂ ನನ್ನನ್ನು ಮರೆತಿಲ್ಲ. ವರ್ಷ ಕೊಂದಾವರ್ತಿಯಾದರೂ ಒಂದು ಜೋಡಾದಷ್ಟು ಹಣವನ್ನು ಕಿತ್ತುಕೊಂಡು ಹೋಗುತ್ತಾರೆ.

ಸಮೂಹ ನನ್ನನ್ನು ಟೀಕಿಸದೆಯೂ ಬಿಡಲಿಲ್ಲ. ನ್ಯಭಿಚಾರಿಣಿ ಎನ್ನಲೂ ಹೇಸಲಿಲ್ಲ. ರಾಘಣ್ಣನ ಉಪಪತ್ನಿ ಎಂದು ನನ್ನನ್ನು ಬಯಸಿ ನಿರಾಕರಿಸಿದ ಜನ ಹಿಗ್ಗಿದರು. ನಮ್ಮ ಮನಸ್ಸು ಇಂದಿಗೂ ಪರಿಶುದ್ಧವಾಗಿದೆ. ಒಂದು ಆದರ್ಶವನ್ನೇ ಅನುಸರಿಸಿ ಬದುಕುತ್ತಿದ್ದೇನೆ. ನನ್ನ ಆದರ್ಶಕ್ಕೆ ಊನ ಬಂದ ದಿನ ವಿಷಕುಡಿದು ಪ್ರಾಣಬಿಡುತ್ತೇನೆ.

ಎಂದು ದೀರ್ಘವಾದ ನಿಟ್ಟುಸಿರು ಬಿಟ್ಟಳು ಲಲಿತಾ.

"ನಿನ್ನದು ನೋವು ಕಂಡ ಜೀವ ಕಣಮ್ಮ. ನಿನ್ನ ಹೃದಯ ಪಕ್ವವಾಗಿದೆ; ಆದರಿಂದಲೇ 'ಲಲಾದೇವಿ' ನಾಟಕ ಯಶಸ್ವಿಯಾಗಿರ್ತು" ಎಂದೆ.

"ಏನೋ ಅಣ್ಣಾ, ನೀವಾದರೂ ನನ್ನ ಮಾತನ್ನು ನಂಬಿದಿರಲ್ಲ. ಅದೇ ಸಂತೋಷ."

"ನಿನ್ನ ಪರಿಚಯವಾದ ದಿನ ನಾನೂ ನಿನ್ನನ್ನು ದೂಷಿಸಿದ್ದೆ. ನಿನ್ನ ತಂಗಿಗೆ ಸ್ನೇಹಕ್ಕೆ ಯೋಗ್ಯಳಲ್ಲವೆಂದೇ ಹೇಳಿದ್ದೆ. ನಿನ್ನದು ಕಲಾವಂತಿಕೆ ಒಲಿದು ನಲಿದ ನರ್ತಿಸಿರುವ ಹೃದಯ; ಕಣಮ್ಮ" ಎಂದು ಸಂತೋಷದಿಂದಲೇ ಹೇಳಿದೆ.

ಬೊದಲು ಲಲಿತಾಳ ಬಗೆಗೆ ತಾಳಿದ್ದ ಭಾವನೆಗೆ ಪನಗೇ ಪರಿತಾಪವಾಯಿತು. ಹೃದಯ ಪಶ್ಚಾತ್ತಾಪಪಟ್ಟಿತ್ತು.

"ನಾನು ಈಗ ಲಲಿತ ಅಲ್ಲವಣ್ಣ; ರಂಗ ಭೂಮಿಯ ನೇಪಥ್ಯದಿಂದ ಬಂದಿದ ದಿಫದಿಂದ ಪ್ರತಿಭಾ" ಎಂದಳು ಲಲಿತಾ.

"ಸಂತೋಷವಮ್ಮ, ಪ್ರತಿಭೆಯಿಂದಲೇ ಬಾಳು."

"ನಾನು ಆನ ಸರಿಸಿದ ಪೂರ್ಣ ಸರಿ ಹೌದೇ. ಅಣ್ಣಯ್ಯ, ನೀನೇ ಹೇಳಣ್ಣಾ?" ಎಂದು ಕಂಬನಿದುಂಬಿದ ನೇತ್ರದಳಿಂದಲೇ ಪ್ರಶ್ನಿಸಿದಳು ಲಲಿತಾ.

ನನ್ನ ಕಣ್ಣಾಂಚಿನಿಂದ ಹರಿದ ಕಂಬನಿಯೇ ಆ ಪ್ರಶ್ನೆಗೆ ಉತ್ತರ.

ಈ ಕೂದಲು ಕಸಿಯಿಂದಾಗಿ ಭಾರತೀಯರಿಗೆ ಮತ್ತೊಂದು ಕಸಿವಿಸಿ ಉಂಟಾಗಿದೆ. ಏಕಸಕ್ಕೆರುವ 24 ಗಂಟೆಗಳಲ್ಲಿ 8 ಗಂಟೆಗಳ ಕಾಲ ತಲೆ ಬಾಚಲಿಕ್ಕೆಂದೇ ಉಪಯೋಗಿಸುತ್ತಿದ್ದ ಜನರು ಈಗ ಕೂದಲು ಕಾಣದಂಥ ವ್ಯವಸ್ಥೆಗೆ ಬಂದಿದ್ದಾರೆ. ಯೂರೋಪಿನವರಲ್ಲಿ ಬೋಳು ತಲೆಯವರು ಇದ್ದಾರೆಂದು ಸರಕಾರಕ್ಕೆ ತಿಳಿದುದೇ ದೊಡ್ಡ ಆಶ್ಚರ್ಯದಲ್ಲಿ ಒಂದು. ಎಷ್ಟೋ ಲಕ್ಷ ತಲೆಗಳಲ್ಲಿ ಒಂದು ತಲೆ ಬೋಳಾಗಿರಬಹುದು. ಇಂತಹ ಸೂಕ್ಷ್ಮವಾದ ವಿಚಾರವೂ ಸರಕಾರಕ್ಕೆ ತಿಳಿದು ಅದರ ನಿವಾರಣೋಪಾಯ ಕೂಡಾ ಕಂಡುಕೊಂಡಿತೆಂದ ಮೇಲೆ ಭಾರತ ಸರಕಾರದ ಆದರ್ಶ ಕಾರ್ಯಕ್ಕೆ ಹಾಗೂ ಸೂಕ್ಷ್ಮದೃಷ್ಟಿಗೆ ಮೆಚ್ಚಲೇಬೇಕು.

ಏನಗೆ ಒಂದು ಸಂಶಯ. ಆನೆಗೆ ಕಣ್ಣು ಕಣ್ಣಂದು; ಹಾಗೆಯೇ ಸರಕಾರನ ಕಣ್ಣೂ ಕಣ್ಣಂದೇ? ಎಂದು. ಇಲ್ಲವಾದಲ್ಲಿ ಭಾರತದಲ್ಲಿ 80% ಬಡವರು. 60% ನಿರುದ್ಯೋಗಿಗಳು ಆರ್ಥಕ್ಕಿಂತಲೂ ಹೆಚ್ಚಿನ ಜನರಲ್ಲಿ ಹಲವಾರು ಕಂಡು ಕೊರತೆಗಳು ಎಲ್ಲಾ ತಂಬಿರುವಾಗ ಆದಾವುಗಳ ಮೇಲೆಯೂ ದೃಷ್ಟಿ ಹರಿದಿಲ್ಲ ಯಾಕೆ? ಮೇಲಿನ ಕಾರಣವೇ ಇರಬೇಕಲ್ಲವೇ?

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಭಾಷಾಂಬೋಧಿನಿ.
ಬೆಲೆ: ರೂ. 2—00

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — **ಭಗವದ್ಗೀತೆಯ ಸಮೂಲ ಭಾಷಾಂತರ**

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅಪೂರ್ವ ಅನುವಾದ.
450 ಪುಟಗಳ ಸುಂದರ ಕೈಪಿಡಿ. ಬೆಲೆ: ರೂ. 1—50

ಮನೆ-ಮದ್ದು — **Home Remedies**

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ವಸ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಈ ಕೂದಲು ಕಸಿಯಿಂದಾಗಿ ಭಾರತೀಯರಿಗೆ ಮತ್ತೊಂದು ಕಸಿವಿಸಿ ಉಂಟಾಗಿದೆ. ಏಕಸಕ್ಕೆರುವ 24 ಗಂಟೆಗಳಲ್ಲಿ 8 ಗಂಟೆಗಳ ಕಾಲ ತಲೆ ಬಾಚಲಿಕ್ಕೆಂದೇ ಉಪಯೋಗಿಸುತ್ತಿದ್ದ ಜನರು ಈಗ ಕೂದಲು ಕಾಣದಂಥ ವ್ಯವಸ್ಥೆಗೆ ಬಂದಿದ್ದಾರೆ. ಯೂರೋಪಿನವರಲ್ಲಿ ಬೋಳು ತಲೆಯವರು ಇದ್ದಾರೆಂದು ಸರಕಾರಕ್ಕೆ ತಿಳಿದುದೇ ದೊಡ್ಡ ಆಶ್ಚರ್ಯದಲ್ಲಿ ಒಂದು. ಎಷ್ಟೋ ಲಕ್ಷ ತಲೆಗಳಲ್ಲಿ ಒಂದು ತಲೆ ಬೋಳಾಗಿರಬಹುದು. ಇಂತಹ ಸೂಕ್ಷ್ಮವಾದ ವಿಚಾರವೂ ಸರಕಾರಕ್ಕೆ ತಿಳಿದು ಅದರ ನಿವಾರಣೋಪಾಯ ಕೂಡಾ ಕಂಡುಕೊಂಡಿತೆಂದ ಮೇಲೆ ಭಾರತ ಸರಕಾರದ ಆದರ್ಶ ಕಾರ್ಯಕ್ಕೆ ಹಾಗೂ ಸೂಕ್ಷ್ಮದೃಷ್ಟಿಗೆ ಮೆಚ್ಚಲೇಬೇಕು.

ಏನಗೆ ಒಂದು ಸಂಶಯ. ಆನೆಗೆ ಕಣ್ಣು ಕಣ್ಣಂದು; ಹಾಗೆಯೇ ಸರಕಾರನ ಕಣ್ಣೂ ಕಣ್ಣಂದೇ? ಎಂದು. ಇಲ್ಲವಾದಲ್ಲಿ ಭಾರತದಲ್ಲಿ 80% ಬಡವರು. 60% ನಿರುದ್ಯೋಗಿಗಳು ಆರ್ಥಕ್ಕಿಂತಲೂ ಹೆಚ್ಚಿನ ಜನರಲ್ಲಿ ಹಲವಾರು ಕಂಡು ಕೊರತೆಗಳು ಎಲ್ಲಾ ತಂಬಿರುವಾಗ ಆದಾವುಗಳ ಮೇಲೆಯೂ ದೃಷ್ಟಿ ಹರಿದಿಲ್ಲ ಯಾಕೆ? ಮೇಲಿನ ಕಾರಣವೇ ಇರಬೇಕಲ್ಲವೇ?

ನಕೇಶಿಗಳಾಗಬೇಕೆಂದ ಆಜ್ಞೆ ನೀಡಿದರೆ? ಅಥವಾ ನಕೇಶಿಗಳು ಒಂದು ನೆನೆ ಕಟ್ಟೆ ಸಕೇಶಿಗಳ ವಿರುದ್ಧ ಹೋರಾಟ ನಡುವು ಮಾಡಿದರೆ?

ಇನ್ನೊಂದು ಸವಸ್ಯೆ ನಾವು ಎದುರಿಸಬೇಕಾದೀತು. ತಲೆಕೂದಲು ಕಸಿ ಮಾಡುವಾಗ ಕೂದಲು ಕಡಿವೆ ಬಿದ್ದಾಕ್ಕೆ ಕಾಲಿದ್ದ ಕೈಯಿದ್ದು ಎಲ್ಲಾ ಕೆತ್ತರಂತೆ. ಇನ್ನೂ ಕಡಿವೆಯಾಯಿತು ಅಂದರೆ ಏನು ಮಾಡಲಿ? ಬೋಳು ತಲೆಯವರ ಒಳ ತಲೆನುನ್ನು ಹೊಂದಿಕೊಂಡು ಅದೇ ರೀತಿಯು ವಿದುಳುಳ್ಳವರ ತಲೆಯಿಂದ ಕೂದಲನ್ನು ಕೆತ್ತುಕೊಂಡರೆ ಹೇಗೆ? ಹೀಗೆ ಮಾಡಿದರೆ ಕತ್ತೆಗಳ ತಲೆಯೆಲ್ಲಾ ಖಾಲಿಯಾಗಿ ಬಿಡುತ್ತದೆ. ಆಗಲೂ ಸಮಸ್ಯೆ—ವೇದನೆಯನ್ನು ಸಹಿಸಲಾಗದೆ ಕತ್ತೆಗಳೆಲ್ಲಾ ಕಾಡಿಗೆ ಓಡಿ ಕೋಡಿರೆ? ನವ್ಯ ನಡುವೆ ಕತ್ತೆಗಳಿಲ್ಲವಾದರೆ ಏನು ಪ್ರಯೋಜನ?

ಇತ್ತೀಚೆಗೆ ತಿಂಗಿನ ತೋಟಕ್ಕೆ ಬಾವಳಿ ಕೊಡುತ್ತಿರುವ ರೈತರಿಗೆ ಕಾಟ ಕಡಿಮೆಯಾಗಿದೆಯೆಂದು ಸಮೀಕ್ಷೆಯಿಂದ ತಿಳಿದು ಬಂದು. ಪ್ರಾಯ ಅವಶ್ಯವೋ ಏನೋ ಪಾಪ ಕಣ್ಣು ತಪ್ಪಿಸಿಕೊಂಡಿರಬೇಕು.

ಇನ್ನು ಕೆಲವು ಶ್ರೀಮಂತ ಬೇಳೆಯ ಚೆನ್ನದ ಸರಿಗೆಯನ್ನೇ ತಲೆಗೆ ನೆಡಿಸಿಕೊಳ್ಳಲು ಡಾಕ್ಟರರಿಗೆ ಸಲಹೆ ನೀಡಬೇಕಾದೀತು. ಚಿನ್ನದ ಕೂದಲು ಯಾರಿಗೆ ಬಾಸ್ತಿಯೋ ಅವರು ಹಿಚ್ಚಶ್ರೀವಂತರಲ್ಲಿ ದುಪರಿಗಣಿಸಲ್ಪಡುತ್ತಾರೆ. ಅಂಬ್ಲರ ಕೇಶ ತಲೆಯು ಹಾಗೆ ಇದು ಕೂಡ ಜನಪ್ರಿಯವಾಗುವ ಸಂಭವವಿದೆ. ಈ ಚಿನ್ನದ ಕೂದಲನ್ನು ವ್ಯಕ್ತಿ ಮಾಡಿದರ ತದನಂತರ ಆತನ ನಕ್ಕಳಿಗೆ ಇದನ್ನು ಕೆತ್ತುಕೊಳ್ಳಲು ಆನ ಕೂಲವಾಗುತ್ತದೆ. ಇದರಿಂದ ನಷ್ಟ ಕಾಣನು.

ಆದರೆ ಇಂದಿನ ಆಧುನಿಕ ಸಮಸ್ಯೆಯನ್ನು ನೇರವಾದ ಬಹುದ ಸಮಸ್ಯೆಯನ್ನು ಬಲೆಯುಳ್ಳಿ ನೆಟ್ಟರೇನು? ಹೀಗೆ ಮಾಡಿದರೆ ಭಾರತದ ಬಡತನದ ಬಂಡು ಪಾಲು ನಿವಾರಣೆಯಾದ ಹಾಗೆ. ಇದಕ್ಕೆ ಬೋಳರು ಮೊಕ್ಕ ಅಲ್ಲ ಸಕೇಶಿಗಳೂ ಅಂದರೆ ಕೂದಲಕ ಇದ್ದವರೂ ನೆರವಾಗಬಹುದು. ಯಾಕೆಂದರೆ ಹೊಟ್ಟೆ ಚುರ್ರೆನ್ನುವದಕ್ಕಿಂತ ಇದು ಎಷ್ಟೋ ಮೇಲಲ್ಲವೇ? ಆದುದರಿಂದ ಬಹುಸಂಖ್ಯೋಗಿಯಾಗಿರುವ ಈ ಕಸಿಯೇ ದೇಶದಾದ್ಯಂತ ಹೆಚ್ಚು ಮೆಚ್ಚುಗೆಯನ್ನು ಪಡೆಯಲಿ ಎಂಬ ಭಿನ್ನಪ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/61-66 dated 26-4-1966.

Edited, Printed & Published by K. U. Shetty, at the Navayuga Press, Udipi, S. India.

ನವಯುಗ

3—7—1969

೨೦
ಪೈಸ

ಕನಸು

ಲೇಖಕರು: ಶ್ರೀಪತಿ ಚಂಪಾ.

ಬೆಳಿಗ್ಗೆ ಎಂಟೂ ಹೊಡೆದ್ನೆದಕ್ಕೆ ಬರಬೇಕಾಗಿದ್ದ ಸಿಟಿಬಸ್ ಒಂಭತ್ತಾದರೂ ಬಂದಿರಲಿಲ್ಲ. ಬೇಸರ ತರುವಷ್ಟು ಹೊತ್ತು ಕಾಯಿಸಲು ಹಚ್ಚಿದ ಬಸ್ಸನ್ನು ವರ್ಣಿಸಲಿಕ್ಕೆ ನನ್ನಲ್ಲಿಯೇ ಶಬ್ದಗಳ ಅಕ್ಷಯವೇ ಸಮಿಾಪದಲ್ಲಿದ್ದ ಕಲ್ಲುಬೆಂಚಿನ ಮೇಲೆ ಕುಳಿತುಕೊಂಡೆ. ಬೇಕೆಂದಾಗ ಡಾಳು ಬಸ್ಸುಗಳು ಒಂದೂ ಬರುವದಿಲ್ಲ, ಬೇಡವಾದಾಗ ಸಾಲು ಸಾಲಾಗಿ ಬಂದು ಬಿಡುತ್ತವೆ— ಕಾಲು ಅಳತಲ ಎಂಬುದನ್ನು ನೋಡದೆ ಬಂದು ಬಿಡುವ ಹಳೆಯ ನೆನಪುಗಳಂತೆ.ಎಂಟಕ್ಕೇ ಅಲ್ಲಿಗೆ ಬಂದ, ನಿಂತಿದ್ದೆ ನಾನೆ. ಹತ್ತ ಹದಿನೈದಕ್ಕೆ ಅವರ ಲಗ್ನ ಮುಹೂರ್ತ. ಇಷ್ಟಿಂದ ಅವರ ವನೆಗೆ ಅರ್ಧ ತಾಸಿನ ದಾರಿ ಬಸ್ಸಿನಲ್ಲಿ. ಮುಹೂರ್ತ ತಪ್ಪಿಸಿಕೊಳ್ಳಬಾರದು ಎಂದು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗುವದೋ ಇಲ್ಲವೋ ಎಂಬ ಸಂದೇಹ ನನಗೆ ಬರತೊಡಗಿತು. ನಾನು ಅಲ್ಲಿಗೆ ಸರಿಯೂದ ವೇಳೆಗೆ ತಲುಪುವಂತೆ ಮಾಡುವ ಇಚ್ಛೆ ಭಗವಂತನಿಗೇ ಇದೆಯೋ ಇಲ್ಲವೋ ಯಾರಿಗೆ ಗೊತ್ತು? ಇಲ್ಲವಾದರೆ ಈ ರೀತಿ ವ್ಯರ್ಥವಾಗಿ ಪ್ರತೀಕ್ಷೆಯಲ್ಲಿ ಕಿಲ್ಲುವ ಕೆಲಸ ನನಗೇಕೆ ಬರುತ್ತಿತ್ತು?

ಪ್ರತೀಕ್ಷೆ ಎಂದೊಡನೆಯೇ ನನಗೆ ದೇಡ ವೈಡನೆಂದರೂ ಹಿಂದಿನ ದಿನಗಳ ನೆನಪಾಗಿ ಬಿಡುತ್ತದೆ. ಈಗಿಶ್ಚಲಾಗಿರುವಂತೂ ಸುಮ್ಮನೆ ಕುಳಿತರೆ, ನಿಂತರೆ ಅದೇ ಪ್ರಸಂಗಗಳ ಮಹಾನರಾವರ್ತನೆಯಾಗಿ ಮನಸ್ಸಿನಲ್ಲಿ ಸುಳಿದಾಡುತ್ತಿವೆ. ಪ್ರಿಯನಾದ್ದಿನ್ನೇ —ಅಪ್ರಿಯವಾದುನ್ನದರೆನ್ನೇ —ಧುತ್ತೆಂದು ಎದುರು ಬಂದು ಫಿಂತು ನನ್ನನ್ನೇ ಅಣಕಿಸತೊಡಗುತ್ತವೆ. ಕೇಕೆಹಾಕಿ ಫಗವಂತೆ ಧಾವಿಸಿಬಿಗುತ್ತವೆ. ಆ ದಿನವು ಹಾಗೆಯೇ ಆಯಿತು. ಒಸ್ಸು ಕಾದು ಕಾದು ನಿರಾಶಳಾದ ನನ್ನ ವಿಕ್ಷಿಪ್ತಳಿಷ್ಟ ಅಲೆಯಲೆಯಾಗಿ ತೇಲಿಬಂದಿತು ಆ ಕಥೆಯ ನೆನಪು.

ಸಿಟಿ ಬಸ್ಸಿನಲ್ಲಿ ಪ್ರಯಾಣಿಸಬೇಕಾದ ವಯಸ್ಸಿನಲ್ಲಿ ಸೈಕಲಿನಿಂದ ಇರದೇ ಹೋದರೆ ಆ ಜೀವನ ನಿಜವಾಗಿಯೂ ಜೀವನ ಅಲ್ಲ. ಓದುಕಲಿಯೂ ಓದುಕೆರದಂತೆ, ಇದ್ದೂ ಸತ್ತಂತೆ ಇರುವ ಆ ಬಡಿಕ ಇದ್ದರೇ ಏನು—ಇಲ್ಲವಾದರೇನು ? ಎಂದು ಅವರೇ ಆಗಾಗ ಹಲುಬುತ್ತಿದ್ದರು. ಆದರೆ ಅದೇ ಆದರ್ಶದ ಸಂಕಲ್ಪ, ಪೂರ್ಣವಾದ ಪ್ರತಿನಿಧಿ ಈಗ ಹೀಗೆ ವರ್ತಿಸುತ್ತಾರೆಂದು ನಾನು ಕನಸು ಮನಸಾರಲ್ಲಿಯೂ ಎಣಿಸಿರಲಿಲ್ಲ. ತನ್ನನ್ನೇ ನಂಬಿರುವ ಒರ್ವ ಹೆಣ್ಣಿನ ಮನಸ್ಸಿನ ಒಳ ಹೊರಗುಗಳನ್ನು ಲೆಕ್ಕಹಾಕದೆ ಇಷ್ಟು ತೀವ್ರವಾಗಿ ತಮ್ಮ ನಿರ್ಧಾರಕ್ಕೆ ಸುಲಭವಲ್ಲಿನಿದ್ದರೂ ಸುಲಭವೆಂಬ ಹಾಗೆ ಅಂಟಿಕೊಂಡಾರೆಂಬ ತಿಳುವಳಿಕೆ ನನಗಿರಲಿಲ್ಲ. ಅವರನ್ನು ವಿಚಾರಶೂನ್ಯರು ಎನ್ನಲಾರೆ. ವಿಚಾರವಿದ್ದ ದೊಡ್ಡ ಮನುಷ್ಯರು ಅವರು. ಅಂತಹ ಮನುಷ್ಯರೂ ತಮ್ಮ ಸ್ವಾರ್ಥದ ಜಾಲದಲ್ಲಿಯೇ ಎಷ್ಟು ಸಲೀಸಾಗಿ ಬಹು ಬೇಗ ಸಿಲುಕಿಕೊಂಡು ಬಿಡುತ್ತಾರೆ ಎನ್ನುವದು ಸೋಜಿಗದ ಸಂಗತಿ. ಅವರು ನನ್ನನ್ನು ಮೋಸಗೊಳಿಸಿರಲಿಕ್ಕಿಲ್ಲ; ಆದರೆ ನಾನು ಮಾತ್ರ ಖಂಡಿತವಾಗಿಯೂ ಮೋಸಹೋದೆ. ಗಂಡಸರನ್ನು ನಂಬಲೇ ಬಾರದು ಎಂದು ನಾನು ಚಿಕ್ಕಂದಿನಿಂದಲೂ ಅನ್ನಿಸಿಕೊಂಡಿದ್ದರೂ ಅವರನ್ನು ಮಾತ್ರ ನಂಬಿಬಿಟ್ಟೆ, ನಂಬಿ ಕೆಟ್ಟೆ.

ಮೂರು ವರುಷದ ಹಿಂದೆ ಮುಕಾಂಬಿಕಾ ದೇವಾಲಯದಲ್ಲಿ ನಾನು ಅವರನ್ನು ಮೊದಲಬಾರಿ ಕಂಡುದು. ಅವರು ಕಾಲೇಜಿನ ವಿದ್ಯಾರ್ಥಿಸಂಘದ ಅದೇ ವರುಷ ಬಂದಿದ್ದರು. ನಾನು ದೇವಾಲಯದ ಆಫೀಸಿನಲ್ಲಿ ಟೈಪಿಸ್ಟ್ ಆಗಿ ಸೇರಿದುದೂ ಅದೇ ವರುಷವೇ ಆಫೀಸಿನಲ್ಲಿ ಮೆನೇಜರುಪನ್ನು ಹುಡುಕಿಕೊಂಡು ಬಂದಿದ್ದವರು. ಹೆಸ್ಕೇಜರರು ಆಡಲೇ ಹೊರಟು ಹೋಗಿದ್ದರು. "ಈಗ ಬರುತ್ತಾರೆ ಕುಳಿತು ಕೊಳ್ಳಿರಲ್ಲಿ" ಎಂದು ಹೇಳಿ ಅವರನ್ನು ಕೂಡ್ರಿಸಿದೆ. ಟೈಪ್ ಮಾಡುವದನ್ನು ಬಿಟ್ಟು ನಾನೇಕೆ ಅವರನ್ನು ಹಾಗೆ ನೋಡುತ್ತ ಕುಳಿತುಕೊಂಡೆನೋ ಈಗ ನೆನೆದು ಕೊಂಡರೆ ನಗು ಬರುತ್ತದೆ. ಅವರೇ ನನ್ನ ಕೆಲಸವನ್ನು ತೀರಾ ಎಚ್ಚರಿಸಿದರು. ನಾನು ಗಡಿಬಿಡಿಯಿಂದ ಒಂದಕ್ಕೊಂದೇ ಟೈಪು ಮಾಡಿ ನಗೆಗೀಡಾಗಿದ್ದೆ ಅಂದ. ಅದೇ ನನ್ನ ಪ್ರಥಮ ಭೇಟಿ. ನನ್ನ ಪಾಲಿಗಂತೂ ಹಿತಕರವಾಗಿತ್ತು.

ಆ ದಿನ ಅವರಿಗೆ ನಮ್ಮ ಮೆನೇಜರ ಸಾಹೇಬರ ಭೆಟ್ಟಿಯಾಗಲೇ ಇಲ್ಲ. ಸುಮಾರು ಒಂದು ಒಂದೂವರೆ ತಾಸು ಕುಳಿತು ನನ್ನೊಡನೆಯೇ ಅದೂ ಇದೂ ಮಾತನಾಡಿ ಹೊರಟು ಹೋಗಿದ್ದರು. ಮೂರನೆಯ ದಿನ ಮತ್ತೆ ಬಂದರು. ಆ ದಿನ ಅವರು ಬಂದ ಕೆಲಸವಾಗಿರಬೇಕು. ಅದರೂ ಆಗೊಮ್ಮೆ ಈಗೊಮ್ಮೆ ಅವರು ನಮ್ಮ ಆಫೀಸಿಗೆ ಬರುತ್ತಲೇ ಇದ್ದರು.

ಸುಮಾರು ಹದಿನೈದು ದಿನದ ಮೆಲೆ ಒಂದು ದಿನ ಅವರು ಬಂದರು. ಹೋದವಾಗ —"ಫೀಲೇಕಡೆ ಸುಳ್ಳಿ ನಮ್ಮನುವೆಯಿದೆ. ಅತ್ತಕಡೆಗೆ ಬಂದಾಗ ಆಗತ್ಯವಾಗಿ ಬಿನ್ನ" ಎಂದು ಹೇಳಿ ಕಮ್ಮ ಹೆಸರಿನ ಕಾರ್ಡ್ ಕೊಟ್ಟುಹೋದರು. ಕಾರ್ಡ್ ಕೊಡುವಾಗ ತಾಕಲಾಡಿದ ಅವರ ಕೈಬೆರಳಿನ ಹಿಕಕರ ಸ್ಪರ್ಶ ನನಗೆ ಹಿಡಿಸಿತು. ಆ ದಿನವಿಡೀ ನನಗೆ ಅವರದೇ ವಿಚಾರ. ಅವರದೇ ಹಂಬಲ. ಯಂತ್ರಿಕವಾಗಿ ಟೈಪರೈಟರಿನ ಮೇಲೆ ಬೆರಳುಗಳಾಡುತ್ತಿದ್ದವೇ ಹೊರತು ಮನಸ್ಸು ಅವರ ಮೇಲೆಯೇ ಹೆಟ್ಟುಹೋಗಿತ್ತು!

ನನ್ನ ಜೀವನದಲ್ಲಿಯೇ ನನಗೆದುರಾದ ಪ್ರಥಮ ಅನುಭವ; ನನ್ನ ಭಾವನೆಯ ವಿಶಿಷ್ಟತೆಗಳು, ನನ್ನ ಮನಸ್ಸಿನ ಹೊಯ್ದಾಟ ಎಲ್ಲವೂ ನನಗೆ ಹೊಸವಾದ ಅನುಭವವನ್ನೇ ತಂದುವು. ಒಮ್ಮೆ ಅವರ ಮನೆಗೇಕೆ ಹೋಗಿ ಬರಬಾರದು ಎಂದು ನಾನು ಯೋಚಿಸತೊಡಗಿದೆ. ನನ್ನ ಬಯಕೆಯನ್ನು ನನ್ನಿಂದ ಬಚ್ಚಿಡಲು ಸಾಧ್ಯವಾಗಲಿಲ್ಲ. ಆಫೀಸಿನಿಂದ ಕಾಲೇಜಿಗೆ ಫೋನ್ ಮಾಡಿದೆ. ಅವರೇನೋ ಇದ್ದರು. ಆದರೆ ಏನೆಂದು ಫೋನ್ ಮಾಡುವುದು, ಹಾಗೆಯೇ ಫೋನ್ ಇಟ್ಟುಬಿಟ್ಟೆ. ಆ ದಿನ ನಾನು ಎಷ್ಟು ಅಸ್ವಸ್ಥಳಾಗಿದ್ದೆನೆಂದರೆ ಆಫೀಸಿನಲ್ಲಿ ಕುಳಿತಿರುವುದು ಕೂಡ ಸಾಧ್ಯವಾಗಲಿಲ್ಲ. ಆ ದಿನ ಸಂಜೆಯೇ ಆಫೀಸಿನ ಕೆಲಸ ಸ್ವಲ್ಪ ಬೇಗ ಮುಗಿಯಿಸಿ ನೆಟ್ಟಗೆ ಬಸ್ ಸ್ಟಾಪ್‌ಗೆ ನಡೆದು ನೀಲೇಶ್ವರಕ್ಕೆ ಸುಳ್ಯ ಕಡೆಗೆ ಹೋಗುವ ಬಸ್ ಹತ್ತಿದೆ. ಅಲ್ಲಿ ಅವರ ವನೆ ಹುಡುಕುವದು ನನಗೆ ಸ್ವಲ್ಪವೂ ಕಷ್ಟವಾಗಲಿಲ್ಲ.

ಇದ್ದಕ್ಕಿದ್ದ ಹಾಗೆ ನನಗೆ ಇಷ್ಟೊಂದು ಧೈರ್ಯ ಹೇಗೆ ಬಂದಿತು ಎಷ್ಟು ಯೋಚಿಸಿದರೂ ಸಮಸ್ಯೆ; ಅದೂ ಇಂತಹ ವಿಚಿತ್ರವಾದ ರೀತಿಯಲ್ಲಿ. ನಾನೇನು ಕೂಡುತ್ತಲಿದ್ದೇನೆ—ಕಾನು ಮಾಡುತ್ತಲಿರುವದು ಸರಿಯೇ ತಪ್ಪೇ—ಎನ್ನುವದನ್ನು ಯೋಚಿಸುವಷ್ಟು ಕೂಡ ಮನಸ್ಸಿನ ಹಿಡಿತವನ್ನು ನಾನು ಕಳೆದುಕೊಂಡು ಬಿಟ್ಟಿದ್ದೆ. ಇಲ್ಲವಾದರೆ ಇನ್ನೂ ಪೂರ್ಣ ಪರಿಚಯ ಕೂಡ ಇರದ ಪ್ರೊ. ಶೆಟ್ಟರರ ಮನೆಗೆ ನಾನು ಹೋಗಲು ಯತ್ನಿಸುತ್ತಿದ್ದೆನೆ? ನಿಜವಾಗಿಯೂ ಆ ದಿನ ನಾನು ಶೆಟ್ಟರರನ್ನು ಕಾಣದೇ ಹೋಗಿದ್ದರೆ ಏನಾಗಿ ಹೋಗುತ್ತಿತ್ತೊ!

. ಶೆಟ್ಟರರು ನನ್ನನ್ನು ಬಹುದಿನದ ಪರಿಚಿತಂತೆಯೇ ಸ್ವಾಗತಿಸಿದರು. ನನಗಿನ್ನೂ ಆಶ್ಚರ್ಯವಾಯಿತು. ಅವರ ಮಾತುಕತೆಯಲ್ಲಿಯ ಸ್ನೇಹಪೂರ್ಣ ಧಾವಪೆಯ ಹೊಸ, ಅವರ ವರ್ತನೆಯಲ್ಲಿಯ ಸರಳತನವನ್ನೂ, ನಾನು ಗಮನಿಸಿದೆ. ನನ್ನ ಆಯ್ಕೆ ಸರಿಯಾಗಿಯೇ ಇದೆ ಎಂಬ ಹೆಮ್ಮೆಯೂ ನನ್ನನ್ನು ಆವರಿಸದಿರಲಿಲ್ಲ. ನನ್ನೆಣಿಕೆ ಸರಿಯಾಗಿಯೇ ಇತ್ತು.

ಆ ದಿನ ಅವರ ವನೆಯಲ್ಲಿ ಸ್ವತಃ ಅವರೇ ತಯಾರಿಸಿದ್ದ ಕಾಫಿ ಕುಡಿಸಿ ಬಂದ ಮೇಲೆ ನನ್ನ ಪಡವಳಿಕೆಯೇ ವಿಚಿತ್ರವಾದ ರೀತಿಯಲ್ಲಿ ಬದಲಾಯಿತು. ನನ್ನ ಈ ಪರಿವರ್ತನೆಗಿಂತಲೂ ಅವರ ದಿನಚರಿಯಲ್ಲಾದ ಬದಲಾವಣೆ ಇನ್ನೂ ವಿಸ್ಮಯಕಾರಕ ರೀತಿಯಲ್ಲಿ ಇತ್ತು. ಕಾಲೇಜಿನಿಂ

(ಹನ್ನೊಂದನೇ ಪುಟ ನೋಡಿರಿ)

ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯಗಳು

ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸುವ ಉಪಯುಕ್ತ ಯೋಜನೆಗಳನ್ನು ಹಾಕಿದ ಬ್ಯಾಂಕುಗಳಲ್ಲಿ ಭಾರತದಲ್ಲಿ ಕೆನರಾ ಬ್ಯಾಂಕು ಪ್ರಪ್ರಥಮ ಬ್ಯಾಂಕ್ ಆಗಿರುತ್ತದೆ.

ಇಂದು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಕೆನರಾ ಬ್ಯಾಂಕ್‌ನಲ್ಲಿ ಹಲವುತರ ಆಕರ್ಷಣೀಯ ಸಾಲ ಸೌಲಭ್ಯವ ಯೋಜನೆಗಳಿವೆ.

ಉದಾಹರಣೆಗೆ ಭಾರತದಲ್ಲಿ ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಪರದೇಶಗಳಿಗೆ ವಿದ್ಯಾಭ್ಯಾಸಕ್ಕೆ ಹೋಗಲು, ಹಾಗೂ ಭಾರತದಲ್ಲಿಯೇ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪೋಷಕರಿಗೆ ಪುಸ್ತಕ-ಉಪಕರಣ ಪಡೆದುಕೊಳ್ಳಲು ಅನುಕೂಲವಾದ ಸಾಲದ ಯೋಜನೆಗಳಿವೆ. ಈ ಸಾಲದ ಯೋಜನೆಗಳೆಲ್ಲಾ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಾ ಇವೆ.

ಹೆಚ್ಚಿನ ವಿವರಗಳನ್ನು ಕೆನರಾ ಬ್ಯಾಂಕ್ ಆಡಳಿತ ಕಛೇರಿ, ಬೆಂಗಳೂರು ಇವರಿಂದ ಪಡೆಯಬಹುದು. ಇಲ್ಲವೇ ಕೆನರಾ ಬ್ಯಾಂಕಿನ ಯಾವುದೇ ಶಾಖೆಯ ಮ್ಯಾನೇಜರರಿಂದ ಪಡೆಯಬಹುದು.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪಿತ 1906)

ರಿಜಿಸ್ಟರ್ಡ್ ಆಫೀಸ್ ಮಂಗಳೂರು

ಆಡಳಿತ ಕಛೇರಿ ಬೆಂಗಳೂರು

ಭಾರತದ ಆರನೆಯ ಅತಿ ದೊಡ್ಡ ಬ್ಯಾಂಕು

ಫೋನ್ : 526 1921 ನ್ಯಾಪನೆ

ಸಂಪುಟ ೪೮
ಸಂಚಿಕೆ ೧೧
VOL. 48
No. 41

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೩—೨—೧೯೬೯

ನ್ಯಾಪಕರು:
ದಿ| ವಿ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ದೊಡ್ಡವರ ದೊಡ್ಡತನ

ಡಾ| ಚೆನ್ನಾರೆಡ್ಡಿ, ಮಾಜಿ ಸಚಿವ ಶ್ರೀ ಲಕ್ಷ್ಮಣ ಬಾಪೂಜಿ, ಶ್ರೀ ಜೋಕಾ ಮತ್ತಿತರ ತೆಲಂಗಾಣವಾದಿಗಳು ಬೇಡವಾದ ಮನಸ್ಸಿನಿಂದಲೇ ಕೇಂದ್ರ ಗೃಹಸಚಿವರೊಡನೆ ಆಂಧ್ರದ ಬಗ್ಗೆ ಮಾತುಕತೆ ನಡೆಸಲು ನವದೆಹಲಿ ಯಾತ್ರೆ ಮಾಡಿ ಮರಳಿ ಬಂದರು. ಪ್ರಚಲಿತ ಮುಖ್ಯಮಂತ್ರಿ ಡಾ| ಕಾಳು ಬ್ರಹ್ಮಾನಂದ ರೆಡ್ಡಿಯವರ ರಾಜಿನಾಮೆ, ಆಂಧ್ರ ಪ್ರದೇಶದಲ್ಲಿ ರಾಷ್ಟ್ರಪತಿ ಆಳಿಕೆಯ ಘೋಷಣೆ ಮತ್ತು ಪ್ರತ್ಯೇಕ ತೆಲಂಗಾಣ ರಾಜ್ಯದ ರಚನೆ—ಈ ತ್ರಿಸೂತ್ರದಿಂದ ಬಂಧಿತರಾದ ತೆಲಂಗಾಣವಾದಿಗಳು ತಮ್ಮ ಬಂಧನದಿಂದ ಕಿಂಚಿತ್ತೂ ಚಲಿಸಲು ನಿರಾಕರಿಸಿದ್ದರು. ಅವರ ಈ ವರ್ತನೆ ಸಮಸ್ಯೆಯನ್ನು ಬಿಗಿಸುವಲ್ಲಿ ಎಳ್ಳಷ್ಟೂ ಪ್ರಯೋಜನವಾದಲಿಲ್ಲ; ಆದರ ಬಿಗುಮಾನ ಮತ್ತು ಚಳುವಳಿ ಪ್ರಿಯತೆಗೊಂದು ಘಾದರ್ಶ ಮಾತ್ರ ವಾಯಿತ್ತು. ಆಂಧ್ರ—ತೆಲಂಗಾಣಗಳ ನಾಯಕೋತ್ತಮರೊಡನೆ ಮಾತುಕತೆ ನಡೆಸಲು, ಸಮಸ್ಯೆಯೊಂದು ಸರ್ವಸಮ್ಮತವಾದ ಪರಿಹಾರ ಕಂಡು ಹಿಡಿಯಲು ಉಪ ಪ್ರಧಾನಿ ಮೊರಾರ್ಜಿ ಭಾಯಿಯವರು ಹೈದರಾಬಾದಿಗೆ ಹಾರಿ ಬರುವುದಕ್ಕೂ ಸಿದ್ಧರಿದ್ದರು; ಆದರೆ ಡಾ| ಚೆನ್ನಾರೆಡ್ಡಿ ಮತ್ತು ಬಳಗದವರ ಫಲಾನುಭವಿ ಅಚಲವಾಗಿದ್ದು ಅದು ಸಂಘಾತದ ಮಾತುಕತೆಗಳಿಗೆ ಅನುಕೂಲವೆನಿಸದ್ದರಿಂದ ದೇಸಾಯಿ ತಾನು ಹೈದರಾಬಾದಿಗೆ ಬರುವುದಿಲ್ಲವೆಂದು ಸ್ಪಷ್ಟವಾಗಿಯೇ ಹೇಳಬೇಕಾಯಿತು.

ತೆಲಂಗಾಣವಾದಿಗಳ ಬೇಡಿಕೆಗಳನ್ನು ಪರಿಶೀಲಿಸಿದರೆ, ಅವಕ್ಕೆ ಕೇಂದ್ರಸರಕಾರವು ಒಪ್ಪುತ್ತದು ಸಾಧ್ಯವಾಗದು. ಡಾ| ಬ್ರಹ್ಮಾನಂದ ರೆಡ್ಡಿಯವರಂದೆ ರಾಜಿನಾಮೆ ಕೊಡಿಸುವುದು ದೊಡ್ಡ ಪ್ರಶ್ನೆಯಲ್ಲ. ಕೇಂದ್ರ ನಾಯಕರು ಖಾಯ್ದಟ್ಟು ಕೇಳಿದರೆ ಮುಖ್ಯಮಂತ್ರಿಯವರೂ ಇಲ್ಲವೆನ್ನಲಾರರು; ತಪ್ಪ ರಾಜಿನಾಮೆಯಿಂದ ಒಟ್ಟಿನಲ್ಲಿ ಆಂಧ್ರಪ್ರದೇಶದ ಹಿತ ಸಾಧಿತವಾಗುವುದಾದರೆ ತಾನು ಆ ತ್ಯಾಗ ಕೈಕೊಳ್ಳಲು ಸದಾ ಸಿದ್ಧವೆಂದೂ ಯಾವ ಬದಲಿಕೆಯೂ ಹೂರ ಗದರಿಕೆಗೂ ತಲೆ ವಾಗಿ ತಾನು ರಾಜಿನಾಮೆ ಕೊಡುವುದಿಲ್ಲ ವೆಂದೂ ಅವರ ನಿಲುಮೆ ಡಾ| ಬ್ರಹ್ಮಾನಂದ ರೆಡ್ಡಿಯವರ ಸಚಿವ ಸಂಪುಟದಲ್ಲಿ ತೆಲಂಗಾಣದವರೇ ಬಹು ಸಂಖ್ಯಾಕರಿದ್ದರು. ವಿಧಾನ ಸಭೆಯು ಕಾಂಗ್ರೆಸ್ ಪಕ್ಷದಲ್ಲಿಯೂ ಇವರಿಗೆ ಸಂಪೂರ್ಣ ಬೆಂಬಲ ಇಂದಿಗೂ ಇದೆ. ಮಧ್ಯ ಪ್ರದೇಶದಲ್ಲಿ ಮುಖ್ಯ ಮಂತ್ರಿ ಶುಕ್ಲರ ವಿರುದ್ಧ ಸಹ ಸಂಗ್ರಹವಾಗುತ್ತಿರುವಂತೆ ಇಲ್ಲೇನೂ ನಡೆಯುತ್ತಿಲ್ಲ. ಡಾ| ಚೆನ್ನಾರೆಡ್ಡಿ ವಕ್ತಿತರ ಕೆಲವರು ಬೀಸಿದ ಬಲೆಯಲ್ಲಿ ಸಿಕ್ಕಿಬಿದ್ದವರು ಬೆರಳೆಣಿಕೆಯ ಶಾಸಕರು ಮಾತ್ರ. ಸದ್ಯ ತೆಲಂಗಾಣದ ಸಚಿವರು ಹೆದರಿ ರಾಜಿ ನೀಡಿದರು. ಪರಿಸ್ಥಿತಿಯಂತು ರೆಡ್ಡಿಯವರೂ ಕೊಟ್ಟರು. ಬಹುಮತ ಪಡೆದಿರುವ ಮುಖ್ಯಮಂತ್ರಿಯೊಬ್ಬನಿಂದ ರಾಜಿನಾಮೆ ನೀಡುವಂತೆ ಕೇಂದ್ರ ಪ್ರೇರೇಪಿಸಿದರೆ, ಇದರ ಪರಿಣಾಮವೇನಾಗಬಹುದು? ದಾರಿಯಲ್ಲಿ ಹೋಗುತ್ತಿರುವ ವಾಹಿಯನ್ನು ಮನೆಗೆ ಕರೆಯುವುದಕ್ಕಿಂತ ಬೇರೆಯಾಗದು. ಹೆಚ್ಚು ಲಿಯ ಬಾಯಿಂದ ಇದಕ ಹೋಗಿ ಹೆಬ್ಬಾವಿಗೆ ಬಿದ್ದಂತಲ್ಲದೆ ಮತ್ತೇನು? ಅದು ದರಿಂದಲೇ ಈ ಬೇಡಿಕೆಯನ್ನು ಕಾಂಗ್ರೆಸ್ ಅಧ್ಯಕ್ಷರೂ ಇತರ ನಾಯಕರೂ ಮನ್ನಿಸಲು ಸುತರಾಂ ಒಪ್ಪುವುದಿಲ್ಲ. ಮುಖ್ಯ ಮಂತ್ರಿಯವರು ತಾವಾಗಿಯೇ ರಾಜಿನಾಮೆ ನೀಡುವುದಕ್ಕೆ ಮೊದಲು ಮುಂದಿನ ಯಾವ ಕ್ರಮವನ್ನೂ ಕೈಕೊಳ್ಳುವ ಅನಾಧ್ಯ. ರಾಷ್ಟ್ರಪತಿಆಳುವರು ತನ್ನ ಆಡಳಿತೆಯನ್ನು ಅಲ್ಲಿ ಘೋಷಿಸುವುದು ಎಂದಿಗೂ ಸಾಧ್ಯವಿಲ್ಲ. ಬಹುಮತೀಯ ಪಕ್ಷದ ಸರಕಾರವಿರುವಾಗ, ಇದರ ಬಹುಮತದಲ್ಲಿ ಯಾವ ಶಂಕೆಗಳಿಗೂ ಲೇಶ ಮಾತ್ರವೂ ಅವಸರಂಬಿಕೆ ತಲೆದೋರದಾಗ ಅದನ್ನು ಮನೆಗೆ ಕಳಿಸುವುದು ಎಂದೆಂದಿಗೂ ಆಗದ ಮಾತು.

ಇನ್ನು ಉಳಿದಿರುವುದೆಂದರೆ ಪ್ರತ್ಯೇಕತೆಲಂಗಾಣರಚನೆಯ ಅಂಶ. ರಾಜ್ಯ ವಿಭಜನೆಯಿಂದ ಏನೆಲ್ಲ ಅನಾಹುತಗಳುನ್ನಡೆಯಬಹುದೋ ಅವೆಲ್ಲವೂನಮ್ಮ ದೇಶದಲ್ಲಿ ನಡೆದಿವೆ. ಆದರ ಕಹಿ ಫಲಗಳನ್ನುಣ್ಣುತ್ತಿರುವುದೇ ಯೂಉಂಡಿದ್ದೇವೆ. ಇಂದೂಉಣ್ಣುತ್ತಿದ್ದೇವೆ; ಮುಂದೆಯೂ ಉಣ್ಣಬೇಕಾಗಿದ್ದೆ. ಒಂದು ಕಾಲದಲ್ಲಿ ಭಾಷಾವಾರು ರಾಜ್ಯ ರಚನೆಯು ಅನ್ಯ ಮಾರ್ಗವರ್ತನೆಯಿಸಿದವರಲ್ಲಿ ಹಚ್ಚನವರೇದ ಇದನ್ನು ಪ್ರಬಲವಾಗಿ ವಿರೋಧಿಸತೊಡಗಿದ್ದಾರೆ. ರಾಷ್ಟ್ರದ ಐಕ್ಯಕ್ಕೆ ಈ ಬಗೆಯ ರಾಜ್ಯಗಳು ಮಾರಕವೆನಿಸಬಹುದಾದರೆ, ಈಗಾಗಿ ರಾಜ್ಯವ್ಯವಸ್ಥೆಯನ್ನು ಕಿತ್ತುಹಾಕುವುದಕ್ಕೂ ತಮ್ಮ ಬೆಂಬಲವನ್ನು ವ್ಯಕ್ತ ಪಡಿಸಿದವರು ಹಲವರಿದ್ದಾರೆ. ರಾಜ್ಯ ಪುನರ್ವಿಂಗಡಣಾ ಆಯೋಗವು ಭಾಷಾ ರಾಜ್ಯಗಳ ನಿರ್ಮಾಣದ ಅನಿಷ್ಟಗಳನ್ನು ಮನನಮಾಡಿಯೇ ಹೇಳಬೇಕು ಇದರಿಂದಲೇ ಅದು ವಲಯ ಸಮಿತಿಯ ರಚನೆಗೆ ಜೊಬಲ ನೀಡಿತು. ಆದರೆ ಈ ವಲಯ ಸಮಿತಿಯ ಸ್ಥಿಯು ನಿರ್ದಿಷ್ಟ ಪರಿಣಾಮ ಬೀರುವಲ್ಲಿ ಅಸಫಲವಾಯಿತೆಂದೇ ಹೇಳಬೇಕು. ಪ್ರತ್ಯೇಕ ತೆಲಂಗಾಣದ ಪ್ರಶ್ನೆಯಲ್ಲಿ ಧಾಜೆಯು ಕಡೆಯೂ ಖರ್ಚುವುದಿಲ್ಲ. ಹಿಂದೆ ಕರ್ಜನ್ ಸಾಹೇಬರು ಒಂದಾಗಿದ್ದ ಬಂಗಾಳವನ್ನು ವಿಭಜಿಸಲು ಮುಂದಾದಾಗ ಬಂಗಾಳಿಗಳು ಮಾತ್ರವಲ್ಲ ಭಾರತೀಯರೆಲ್ಲರೂ ಒಂದಾಗಿ ಒಕ್ಕೊರಲಿನಿಂದ ಅದನ್ನು ಪ್ರತಿಭಟಿಸಿದ್ದರು. ತಪ್ಪಣಾಮವಾಗಿ ವಿಭಜನೆಯ ಉದ್ದೇಶವನ್ನು ಖದಿಗಿರಿಸಲಾಯಿತು. ಆದರೆ, ಇಂದೀಗಾಗ ತ್ರಿದೇ ಒಂದಾಗಿದ್ದ ದ್ವಿಭಾಷಾ ರಾಜ್ಯ ಬೊಂಬಾಯಿ ಎರಡಾಯ್ತು. ಪಂಜಾಬಿನ ವಿಭಜನೆ ಹೋಳಾಯ್ತು. ಇದೀಗ ಆಂಧ್ರ ಪ್ರದೇಶದ ವಿಭಜನೆಗೆ ಹಲವರ ಬೆಂಬಲ ಲಭ್ಯವಿದೆ; ಕರ್ನಾಟಕವೂ ಎರಡಾಗಬೇಕೆಂಬ ಕೂಗು ಬಲಿಯಬಹುದಿದೆ; ಮಹಾರಾಷ್ಟ್ರದಿಂದ ವಿದರ್ಭದ ಪ್ರತ್ಯೇಕತೆಗೆ ದೊಡ್ಡ ಸ್ವರ ಸೇರಬಹುದು; ದೊಡ್ಡದಾಗಿರುವ ಉತ್ತರ ಪ್ರದೇಶವನ್ನೂ ಒಡೆಯುವ ಸಿತೂರಿ ನಡೆಯಬಹುದು. ಮತ್ತೆ ಮಧ್ಯಪ್ರದೇಶದೇನು ಹೆಚ್ಚೆ? ಇದೇ ಬಗೆಯ ವಿಘಟನೆಗೆ ಜನ ಮನಸೋಲುತ್ತ ಬಂದರೆ, ನವ್ಯ ದೇಶ ಭಗ್ನವನ್ನು ಹೋಳುಗಳಾಗದೆ ಬಿಟ್ಟೀತೆ? ಸಂಘಟನೆಯ ಆವಶ್ಯಕತೆಯಿರುವ ಈ ದಿನಗಳಲ್ಲಿ ವಿಘಟನೆಗೆ ಪ್ರೇರೇಪಣೆ ಕೊಡುವ ಬುದ್ಧಿ ಜೀವಿಗಳ ಬುದ್ಧಿಗೆ ಏನೆನ್ನಬೇಕು? ಈ ನಡುವೆ ಇನ್ನೊಂದು ಅಪಸ್ವರವೂ ಕೇಳತೊಡಗಿದೆ. ಹಿಂದಿನ ವೈಜಾಮರ ಹೈದರಾಬಾದ ರಾಜ್ಯದಿಂದ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಿಗೆ ಸೇರಿಕೊಂಡ ಜಿಲ್ಲೆಗಳನ್ನು ಒಂದು ಪೂರ್ಣ "ಡೆಕ್ಕನ್ ಪ್ರದೇಶ" ವೆಂದು ನಾಮಕರಣ ಮಾಡಬೇಕಂತೆ! ರಾಜ್ಯಗಳನ್ನು ಹೆಚ್ಚಿಸುತ್ತ ಹೋದರೂ ಹೆಸರುಗಳಗೇನೂ ಅಭಾವ ಕಾಣಿಸದು. ಅಭಾವವಿರುವುದು ಮಾನಸಿಕ ವಿಕ್ಷಿಪ್ತತೆಯಲ್ಲಿ ಮಾತ್ರ. ಇವಿಲ್ಲದೆ ಬರಿಯ ಒಂದೊಂದೇ ರಾಜ್ಯ ನಿರ್ಮಾಣಮಾಡುತ್ತ ಹೋದರೆ, ದೇಶ ಪುಟ್ಟ ಹಂಚಾದೀತೇ ಹೊರತು ಮತ್ತೇನೂ ಸಾಧಿಸಲಾರದು. ಭಾರತಾಂಬೆಯ ಅಂಗಾಂಗಗಳು ಬೇರೆ ಬೇರೆಯೊದರೆ, ಪಾಪ, ಅಬ್ಬೆಯ ಗತಿ ಏನು?

ಕೇಂದ್ರನಾಯಕರೂ ಆಂಧ್ರ ಪ್ರದೇಶದ ಹಾಲಿ ಸರಕಾರವೂ ಪ್ರತ್ಯೇಕ ತೆಲಂಗಾಣದ ರಚನೆಯನ್ನೊಳಗೊಂಡ ತೆಲಂಗಾಣ ಪ್ರದೇಶದ ಅಭಿವೃದ್ಧಿಗೆ, ಅಖಿಲ ಜನತೆಯ ಆಶೋತ್ತರಗಳಿಗೆ ಸರ್ವತೋಮುಖವಾದ ಉಭಯ ಸಮ್ಮತವಾದ ಪರಿಹಾರವರಸಲು ಉತ್ಸುಕರಾಗಿವೆ. ಈ ದಿನೆಯಲ್ಲಿ ಅವು ರಾಯತತ್ಪರವೂ ಆಗಿವೆ. ಆದರೆ, ಇದನ್ನು ಬಯಸುವ ತೆಲಂಗಾಣವಾದಿಗಳು ತಮ್ಮ ಚಳುವಳಿಯನ್ನು ವ್ಯಾಪ್ತಿಪ್ಪ ತೀವ್ರರೊಳಿದ್ದಾರೆ. ಪರಿಣಾಮವಾಗಿ ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಗಳು ಕೆಟ್ಟು ಹೋಗಿವೆಯೆಂದೇ ಹೇಳಬೇಕು. ಮಿತಿಮೀರಿದ ಭಾವಾವೇಶ ಪ್ರೇರಿತವಾದ ಈ ಚಳುವಳಿಯು ಬಗ್ಗೆ ರಾಜ್ಯಸರಕಾರವು ಅತ್ಯಂತ ಸಹನೆಯಿಂದಲೇ ಪಡೆದುಕೊಂಡಿದೆ. ಹಾಗಿದ್ದರೂ ಲಂಠಿಚಾರ್ಜು, ಅಶ್ರುವಾಯು ಪ್ರಯೋಗ, ಗೋಲಿಬಾರು, ತಪ್ಪರಿಣಾಮವಾಗಿ ಸಾವು ನೋವುಗಳು ಅನಿವೇಕ್ಷಣೀಯವಾದರೂ ಅನಿವಾರ್ಯವೆನಿಸಿದೆ. ಪರಿಣತಿನ್ನವ ಸಾರ್ವಜನಿಕರ ನಿಕ್ಕ ಜೀವನವನ್ನು ಕೆಡಿಸುವ ಮತ್ತು ಕಷ್ಟೂಲಕ ರಾಜ್ಯದ ಆರ್ಥವ್ಯವಸ್ಥೆಯನ್ನು ಕೆಡಿಸಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿ, ಪ್ರಜೆಗಳನ್ನು ಕಷ್ಟಕಾರ್ಪಣ್ಯಗಳಿಗೆ ಘೋರವ ಈ ಬಗೆಯ ಚಳುವಳಿಗೊಂದು ಕೊನೆಮೊಗುವುದು ಅತ್ಯಗತ್ಯ. ಈ ಹಿಂದೆ ಕೇಂದ್ರ ಸರಕಾರವು ಇಂತಹುದೇ ಚಳುವಳಿಗಳಿಗೆ ಹೆದರಿ ರಾಜ್ಯ ವಿಭಜನೆಗೆ ಒಪ್ಪಿಗೆ ನೀಡಿದ್ದ ಘಟನೆಗಳಿಂದ ತೆಲಂಗಾಣವಾದಿಗಳು ಸ್ಫೂರ್ತಿಗೊಂಡಿರಲೂ ಬಹುದು. ಏನಾದ್ದೆ ರಾಜ್ಯದ ಪರಿಸ್ಥಿತಿಯು ತೀವ್ರ ಉಲ್ಬಣಾವಸ್ಥೆಯನ್ನು ಮುಟ್ಟುವುದಕ್ಕೆ ಮೊದಲೇ ಏನಾದರೂ ಕ್ರಮ ಕೈಕೊಳ್ಳಬೇಕೆಂಬ ನಿರ್ಧಾರಕ್ಕೆ ಕೇಂದ್ರ ಸಚಿವ ಸಂಯುಟ ಬಂದಿದೆ. ಆದರೆ ಯಾವುದೇ ಕ್ರಮ ಕೈಕೊಳ್ಳಲು ಪರಿಸ್ಥಿತಿ ಶಾಂತವಾಗಲೇಬೇಕು. ರೆಡ್ಡಿ ರಾಜಿನಾಮೆಯಿಂದ ಅದು ಸಾಧಿತವಾದೀತೆ?

ಪ್ರತ್ಯೇಕ ಆಂಧ್ರ ರಾಜ್ಯದ ರಚನೆಯಿಂದ ಆರಂಭವಾದ ರಾಜ್ಯವಿಭಜನಾ ಸರಪಳಿಗೆ ಈಗ್ಗೆ ಹದಿನೈದು ವರ್ಷಗಳಲ್ಲಿ ಒಂದೊಂದೇ ಕೊಂಡಿಗಳು ಸೇರಿದುವು. ಅಂತಿಫಿಂದ ಆರಂಭವಾದ ಈ ಸರಪಳಿ ಆಂಧ್ರಪ್ರದೇಶದಲ್ಲೇ ಕೊನೆಗಾಡಲಿಬುದೇ ಎಂದು ಕಾದು ನೋಡಬೇಕಷ್ಟೆ. ತೆಲಂಗಾಣದ ಜನತೆಯ ದೊಡ್ಡವರ ದಶ್ಡತನ. ಈ ಬಗೆಯು ದೊಡ್ಡವರಿಂದ ದೇಶವನ್ನು ದೇವರೇ ಕಾಪಾಡಬೇಕು.

ವಿಶ್ವಾಸ ತಪ್ಪುವತ್ತೆ

ಸತ್ಯವನು ಬಾಯಿಕಿ ಬಂದಾಗ ಎಷ್ಟಾದೀತು? ಸಾವಿನ ದವಡೆಯಲ್ಲಿ ಹೋರಾಟ ನಡೆಸಿ ಗೆದ್ದು ಬಂದಾಗ ಹೇಗಿರುತೀತು? ಮಡಿಕೇರಿ ಜಿಲ್ಲಾ ಮಟ್ಟದ ಎಳನೆ ತರಗತಿಯ ಪರೀಕ್ಷೆಯಲ್ಲಿ ತಾವಾಸಾದನೆಂದು ಘೋಷಿಸಲಾದ ವಿದ್ಯಾರ್ಥಿ ಪರೀಕ್ಷೆಯಲ್ಲಿ ಮೂರಾಳೇ ಸ್ಥಾನವನ್ನು ಗಳಿಸಿದ್ದಾನೆ ಆತನು ವಿದ್ಯಾನಿಧಿಯಲ್ಲಿ ಅನುತ್ತೀರ್ಣನೆಂದು ಹೇಳಲಾಗಿತ್ತಂತೆ; ಇವರಲ್ಲಿ ಆತನು ನೊರಕ್ಕೆ ಎಂಭತ್ತು ಗುಣದಳ

(ಹಸ್ತಕ್ಷೇ ಸುಖ ನೋಡಿ)

ಶೇಷರಾಜ್ಯದಲ್ಲಿ

ಕಾಲಕ್ಕೆ ತಕ್ಕ ಕೋಲ

"ಕೇಳಿದ್ಯೇನೆ?"

"ಏನನ್ನ?"

'ಪಾಕಿಸ್ತಾನದ ಜುರ್ಮಾ ನುಹಿಳೆಯರು ಇನ್ನು ಜುರ್ಮಾ ಧರಿಸುವಂತಿಲ್ಲ....'

"ಏನಂತೆ? ಹೊಸ ಧರ್ಮಕ್ಕೇನಾ ಕಾಡ್ದೆ ಮೂಡಿದರೇನು?'

'ಕಾಯದೆ ಮೂಡಿದರೇನು? ಬಿಟ್ಟರೇನು? ಒಂದು ವೇಳೆ ಕಾಯ್ದೆ ಮೂಡಿದ್ದರೂ ಅದರಿಂದ ತಪ್ಪಿಸಿಕೊಳ್ಳೋ ಗೀಡುಬಿದ ಜಪ ಸುಡುಕದಿ ನಿತ್ತೆಯೆ?'

"ಮತ್ತೀಗ ಆದದ್ದಾದರೂ ಏನು?"

"ಏನೂಂತನ್ನೋದು? ಬರೀ ನಾಚಿಗೆ ಆಗುತ್ತೆ....'

"ಅಯ್ಯಯ್ಯ, ಇದ್ರಲ್ಲೆಲ್ಲಾ ನಾಚಿಗೆ ಪಡತೇಕೂಂತ?"

"ದಾಗಲ್ಲ ಣಿಣೆ, ಪಾಕಿಸ್ತಾನದಲ್ಲಿ ನಾರಿಯರು ನಗ್ನಚಿತ್ರಗಳಿಗೆ ಫೋಸ್ ಗಿರಾಕಿಯಂತೆ...."

"ಹ್ಞೂಂ.... ಅಸೀ ಅಂದದ್ದು...."

'ಆಪ್ರಲ್ಲೇನು ವಿಶೇಷ? ಬಾಯಲ್ಲಿ ಮೈತುಂಬ ಸೀರೆ ಉಡಬೇಕು ಅಂತ ಇತರರಿಗೆ ಹೇಳೋರು ತನ್ನ ಲೇಡಿಂಗ್ ರೂಮಲ್ಲಿ ಸೊಂಟಕ್ಕೊಂದು ಕಾಚ ಎತ್ತಿಕೊಂಡು ಮೊಲೆಪಟ್ಟು ತೊಟ್ಟ ನಾರಿಯ ಚಿತ್ರ ನೋಡಿ ನೋಡಿ ಬಾಯ್ಬಿಟ್ಟು ಮೈವರೆಯುತ್ತಾರಲ್ಲಾ ಗಂಡಸ್ರು?'

"ಕರಬಹುದೂನ್ನ. ಇದು ಮತ್ತೂ ಒಂದು ಹೆಜ್ಜೆ ಮುಂದೆ; ಅದೂ ಪಾಕಿಸ್ತಾನದಲ್ಲಿ."

"ಅಲ್ರಿ ನನ್ನ ಸನಾತನ ಹಿಂದೂ ಧರ್ಮದ ಪವಿತ್ರ ಕರ್ಮ ಭೂಮಿ ಭಾರತದಲ್ಲೇ ನಗ್ನತೆಯ ಅಂಗಾಂಗಾಂಶಗಳು ಅಧಿಕಾಧಿಕ ಪ್ರಕಟವಾಗುವ ಸಿನೆಮಾಗಳೇ ಬಾಕ್ಸ್ ಆಫೀಸುಗಳನ್ನ ತಂಬಿ ಕೊಟ್ಟವೆ. ಬಾಕ್ಸ್ ರೂಮಿಂತಿಂದ ಹುಡಿದು ಲೆವೆಲ್ಲಿನ ದರಿಗಿನ ದೃಶ್ಯ ಸಂಯೋಜನೆಯಿದ್ದು ಬಿಟ್ಟರೆ ಮತ್ತೆ ಬೇಳುವುದೇನು? ಹಾಗಿರುವಾಗ ಸ್ತ್ರೀಲಂಪಟತನಕ್ಕೆ ಹೆಸರಾದ ಇಸ್ಲಾಂ ಸಾಮ್ರಾಜ್ಯದಲ್ಲಿ...."

'ಅಲ್ವೆ ಲಂಪಟತನದಲ್ಲಿ ನಂಪತನ ಹಿಂದ ಬಿದ್ದವ? ನವ್ಯ ದೇವ ದೇವತೆಗಳೆಲ್ಲ ಲಂಪಟರೇ ತಾನೆ? ಹಣ್ಣು ಮತ್ತು ಹೂಡಗಳ ಮುಂಡೆ ಜೀವನವನ್ನೇ ಬಿಡುವ ಅದೊಂದು ಜಾತಿಯನ್ನ ಇತ್ತು ನೋಡು, ಇದಿದೂ....'

'ಹ್ಞೂನ್ನಿ, ಅದರೆ ದೇವ ದೇವತೆಗಳು ಲಂಪಟರಂದು ನಾವು ನಂಬುವುದಿಲ್ಲ....'

"ಅಯ್ಯೋ, ನಮ್ಮ ರಾಧಾಕೃಷ್ಣ, ಶಿವ ಪಾರ್ವತಿ..."

"ಏನ, ಹೇಳ್ತ ಇದ್ದೀರಿ? ಜೀವದೇವತೆಗಳನ್ನು ಲಂಪಟರನ್ನಾಗಿ ಚಿತ್ರಿಸಿ ನಾವು ನಮ್ಮ ಲಂಪಟತನವನ್ನು ಮುಚ್ಚಿಡುವ ಪ್ರಯತ್ನ ಮಾಡಿದವೆನ್ನಿ...."

'ಇದೊಳ್ಳೆ ಬೇಸಾಯನ್ರು; ಹಾಗಾದರೆ ಶ್ರೀಕೃಷ್ಣ ಹದಿನಾರು ಸಾವಿರದೆಂಟು ಸ್ತ್ರೀಯರೊಡನೆ ಸಂಬಂಧವಿಸಿಕೊಂಡದ್ದು ಸುಳ್ಳೇನ.?'

"ಅಲ್ರಿ, ನನಗೆ ಸೆನ ಬರತ್ತೆ, ನೀನೂ ಇದನ್ನ ನಂಬುತ್ತೀರಾ? ಏನುವಿನ ಭಕ್ತ ರಂತೆ...."

"ಅಲ್ವೆ, ನವ್ಯ ಪುರಾಣಗಳೆಲ್ಲ ಸುಳ್ಳು ಅಂತೀಯ?"

"ಆತೆ ಅಂದ ಮೇಲೆ ಸುಳ್ಳೂ ಇರಬೇಕು, ಜೊಳ್ಳೂ ಇರಬೇಕು. ಒಬ್ಬ ಪರುಷ ಸಾವಿರ ಸಂಖ್ಯೆಯ ಸ್ತ್ರೀಯರೊಡನೆ ಅವನೆಸ್ಟೆ ಲಂಪಟನಿದ್ದರೂ ಸಂಬಂಧವಿರಿಸುವುದು ಸಾಧ್ಯವೆ? ನೀನೇ ಹೇಳಿ.'

"ಅವ ದೇವ್ರು... ನಾವು ಮಾನವ್ರು"

"ನೀವು ಹೇಳುವವ ದೇವರಲ್ಲ..."

"ಮತ್ತೆ?"

"ನಿಮ್ಮ ಪುರಾಣಕರ ಕೈಗೊಂದೆಯೂ ದ ದೇವಪಶು...."

"ಒಳ್ಳೇ ಮೊಸದು. ಅದು ಹೋಡಲಿ, ಕೆಲವರು ಸಾವಿರದೆಂಟು ಹೆಂಡತಿರೆನ್ನುತ್ತಾರೆ. ಇದೂ ಸತ್ಯವಿರಬಾರದೇಕೆ?"

'ಮೊದಲಿನದು ಸುಳ್ಳಾದರೆ ಇದೂ ಸುಳ್ಳೆ'

'ಅದ್ರೆ ನೋಡ, ನಮ್ಮ ಪುರಾಣಗಳಲ್ಲಿ ಕಾವ್ಯಗಳಲ್ಲಿ 'ಲಂಪಟತನ'ಕ್ಕೂ ಬಹಳ ಮನ್ನಣೆಯಿತ್ತಿದ್ದಾರೆ. ವೇತ್ಯೆಯರು ಊರಿಗೊಂದು ಅಲಂಕಾರ—ಅವಶ್ಯಕ ಅಲಂಕಾರವೆಂದವರ ಅಂಬೋಣ....'

'ಇರಬಹುದು ಆ ಕಾಲಕ್ಕೆ ಹಾಗೆ. ಹಿಂದೆ ಹೆಂಗಸರ ಸಂಖ್ಯೆ ಕಡಿಮೆಯಿದ್ದಿರಬೇಕು. ಬೇಕು ಯಾಕೆ, ಇತ್ತು....'

"ಹೇಗೆ ಹೇಳ್ತೀರೂ?"

"ಗಂಡು ಬೇಗನೆ ಮನುವೆಯಾದ್ರೆ ಗಂಡುಸಂತಾನ ಹೆಚ್ಚು ಅಂತ ವೈಜ್ಞಾನಿಕರು ಹೇಳಿದ್ದಾರಲ್ಲಾ?"

"ಹ್ಞೂಂ, ಅದು ಸರಿ...."

"ಆದ್ದರಿಂದ ಫೀವೆಂದ ಹೆಣ್ಣು-ಹೆಂಡಗಳಿಗೆ ಬಲಿಬಿದ್ದವರೂ ಇದ್ದಿರಬಹುದು. ದೇವಜಾತಿಯೂ ಮೂಡಬು ಕೆಲಸವಿಲ್ಲದ್ದರಿಂದ ಲಂಪಟತನದಶ್ಟ ಮನಹರಿದಿರಬಹುದು. ಆದರೆ ನೋಡಿ, ಈ ಲಂಪಟತನದಿಂದ ಏನಾಯ್ತು? ಸ್ಪಳಯವಾಗಿ ದೇವಜಾತಿಯು ಶರ್ವಸ್ವ ನಾಶವಾಯ್ತು.

"ಅದಂತಿರಲಿ. ಈಗಿನ ಕಾಲಕ್ಕೆ ಬಾ, ನಾರಿಯು ಮೂನಮುಚ್ಚಿಕೊಳ್ಳಲು ನೆಪ ತುಂಬ ಬಟ್ಟೆ ತೊಡಬೇಕು ಅನ್ನೋ ಕಾಲ ದೂರ ಸರಿದು, ಬಟ್ಟೆ ಎಷ್ಟು ಕಡಿಮೆ ತೊಟ್ಟರೋ ಅಷ್ಟು ಆಕೆ ಮೂನವತಿ ಅಂತ...."

'ಅಲ್ರಿ, ಆಕೆ ಮೂನವತಿ ಅಂತ ಅನ್ನೋರು ಯಾರು?'

"ವ.ತ್ತಾರು? ಜನ...."

"ನೋಡಿ ಶುಂಗುಮ್ಮೆ ಹಾಗನ್ನಬೇಡಿ. ನಾರಿಯ ನ್ನ ಮೆಚ್ಚುವುದು, ತೆಗಳುವುದು ಸುರುಷ ಜಾತಿ. ಆಕೆ ಮೂನವಂತಳೋ ಮೂನಗೆಟ್ಟವಳೋ ಅಂತ ಅನ್ನುವುದೂ ಫೀವೆ...."

"ಅಂದರೆ, ಇದಕ್ಕೆಲ್ಲಾ ಪುರುಷರೇ ಕಾರಣಕಾರಂತೀಯ?"

'ಅಲ್ರಿ, ನೋಡುವವರು, ಮೆಚ್ಚುವವರು ಇಲ್ಲವಾದ್ರೆ ನಾರಿ ಯಾಕೆ ಅರಿವಿಗ್ನ ಳಾಗುತ್ತಾಳೆ? ನಗ್ನತೆಯನ್ನು ತೋರಿಸುತ್ತಾಳೆ?'

"ಒಂದ್ರೀತಿಯಿಂದ ಇದೂ ಸರೀನ್ನ. ಪುರುಷರ ಸುಪ್ತ ಲಂಪಟತನವೇ ನಗ್ನತೆಯ ಪ್ರವರ್ಧನನ್ನು ಹೆಚ್ಚಿಸುತ್ತದೆ.'

'ಹಾಗೆ ಅಲ್ಲಿ ಮತ್ತೆ. ವೃಭಿಚಾರ ವ್ಯಾಭಿಚಾರಗಳೆಲ್ಲಿ ಒಬ್ಬಾಕೆಯಿಂದ ಆಗುವಂಥದ್ದಲ್ಲ ನೀವು ನಗ್ನತೆಯ ಚಿತ್ರಕ್ಕೆ ಆ ಬಿಟ್ಟಲ್ಲಿ ೪೦೦ ರೂಪಾಯಿ ಕೊಡುತ್ತಿರಂತೆ, ನಾವ್ಯಾಕೆ ತೋರಿಸಬಾರದು?'

'ಅದ್ರ ಪಾಪವೂ ನಮ್ಮ ತಲೆಗೆ.'

'ಲ್ರಿ, ನೀವು ಹಣಕೊಡ ತ್ತೀನೆ ಅನ್ನದಿದ್ರೆ, ನಾನೇನು ನಗ್ನರಾಗ ತ್ತೀನೆಯೆ?'

"ಹ್ಞಾ..."

"ಏನು ಬಾಯ್ಬಾಯಿ ಬಿಡ್ತೀರಿ?"

"...ಹ್ಞೂಂ....ಅದಿರಲಿ, ಈಗ ನಿನೆಮೂ ದಲ್ಲಿ...."

"ನೋಡಿ, ಅಲ್ಲೂ ತಾರೆಯದ್ದೇನು ತಕ್ಕು?"

"ಏನೂ ತಪ್ಪಿಲ್ಲೆ? ಆಕೆ ಹಾಗೆಲ್ಲ ಅಂಗಾಂಗ ಪ್ರದರ್ಶನ ಮೂಡಿ ಲಂಪಟತನಕ್ಕೆ ಉತ್ತೇಜನ...."

"ಶೂ... ಸುಸು ಬಾಯ್ಮುಚ್ಚಿ. ಆಕೆ ಅಷ್ಟಿ ಸಂಬಳ ತೆಗೆದುಕೊಂಡು ಡೈರೆಕ್ಟರ್ ಹೇಳಿದಂತೆ ಕಣೇಶಾಳೆ. ಡೈರೆಕ್ಟರ್‌ಗೆ ಆಕೆ ತುಂಡು ಲಂಗದಲ್ಲೇ ಬರಬೇಕೂಂತಿದ್ರೆ ಆಕೆ ಅಗೇಲ್ಲ ಅನ್ನೋದು ಹೇಗೆ ಸಾಧ್ಯ?"

'ಅಂದ್ರೆ ಅಲ್ಲೂ ತಪ್ಪು ಡೈರೆಕ್ಟರದ್ದೇ....'

"ಅವರದ್ದಲ್ಲವಾದ್ರೆ ಆವ್ಯಂಥ ಉಳಿದವ್ರದ್ದು. ಜನ ಒಲವು ಎತ್ತ ಇದೇಂತ ಊಹಿಸಿ ಅವ್ರು ಮೂಡ್ತಾರೆ. ಅವ್ರು ಪಾಪ ನಿಮ್ಮಿಂದ ದುಡ್ಡು ಎಳೀಬೇಕಲ್ಲಾ...."

"ನೀನನ್ನೋದು ಇದ್ರಲ್ಲಿ ನಾರಿಯ ತಪ್ಪೇನೂ ಇಲ್ಲ ಅಂತ...."

'ತಪ್ಪ—ಒಪ್ಪಿನ ಮಾತು ಬೇರೆ. ಆ ಪ್ಪು ವಿಜೇತನೆ ಮೂಡೋ ಶಕ್ತಿ—ಅವಕಾಶ ಯಾರಿಗಿದೆ ಹೇಳಿ? ಅಂತೂ ಇವೆಲ್ಲಾ ನೋಡವಾಗ ಜನ ವರುಳೋ ಜಾತ್ರೆ ಮಯಳೋ ಅಂತ ಅನ್ನಿಸುತ್ತೆ...'

"ಅದು ಸರಿಯಮ್ಮ. ನೋಡು ಆಕ್ಷೀಲತೆಯನ್ನ ಪಿಂಡಿಸಿವ ಇಟೆಲಿಯ ಫಿದೇರಕೊಬ್ಬನನ್ನು ಚಲಚಿತ್ರ ನಿರ್ದೇಶಕ ನಂ

(ಒಂಭತ್ತನೇ ಪುಟ ನೋಡಿ)



ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ಸಾಧನೆ ಸಂಪತ್ತು: ರೂ. 140 ಕೋಟಿ. | ಶಾಖೆಗಳು: 300ಕ್ಕೂ ಮಿಕ್ಕಿ. | ಟಿ. ಎ. ಪೈ, ಚೆಯರ್‌ಮೇನ್.

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರ, ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17-4/65—66ರ ಪತ್ರದಂತೆ ನಿಪಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇವೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ತರಿಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇನೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಶುದ್ಧ ಹರಟೆ—

ಮೂವರು ಸೋದರರ ದಾರುಣ ಕತೆ

ರಾಜಸ್ಥಾನದ ಜೈಪುರ ಸಮೀಪದ ಒಂದು ಹಳ್ಳಿಯಿಂದ ಮಹತ್ವದ ಸುದ್ದಿ—"ವೈಕುಂಠ ಸಮಾರಾಧನೆಯಲ್ಲಿ ಉಂಡು ತೇಗಿದವರಲ್ಲಿ ೨೫ ಮಂದಿ ವೈತ್ಯುಮಬಿ ರಾದರು; ಎಂಭತ್ತು ಜನರು ತೀವ್ರ ಅಸ್ವಸ್ಥಗೊಂಡರು; ಅದ್ದರಿಂದ ಅವರೆನ್ನು ಆಸ್ಪತ್ರೆಗೆ ಸಾಗಿಸಿ ಉಚಿತೋಪಚಾರಗಳನ್ನು ನೀಡಲಾಯಿತು. ಡಾಕ್ಟರರೆಲ್ಲರೂ ಕೊಲೆರಾ ಪ್ರತಿರೋಧಕ ಚುಚ್ಚುಮದ್ದು ನೀಡುವಲ್ಲಿ ತನ್ಮಯರಾಗಿದ್ದಾರೆ. ಇಷ್ಟೇ ಅಲ್ಲ; ಪೋಲೀಸು ಇಲಾಖೆಯು ಕೇಸು ದಾಖಲು ಮಾಡಿಕೊಂಡ, ಸಮಾರಾಧನೆ ಏರ್ಪಡಿಸಿದ ಮೂವರು ಸಹೋದರರನ್ನು ಬಂಧಿಸಿದೆ!

ಹಿಂದೂ ಸಂಪ್ರದಾಯದಲ್ಲಿ ಅಕ್ಕನ ದೇಹವೆಂಬ ಅಂಗಿಯನ್ನು ತ್ಯಜಿಸಿ ಹೊರ ಬಂದ ಮೇಲೆ, ಆ ಆತ್ಮವನ್ನು ವೈಕುಂಠ ಲೋಕಕ್ಕೆ ಕಳಿಸುವ ಉದ್ದೇಶದಿಂದ ವೈಕುಂಠ ಸಮಾರಾಧನೆ ಮಾಡಿಸುತ್ತಾರೆಂದು ವಿಶ್ವಾತ. ಅಲ್ಲಲ್ಲಿ ತಿರುಗಾಡುತ್ತಿರುವ ಆತ್ಮದಾರಿ ಯಾವುದಯ್ಯ ವೈಕುಂಠಕ್ಕೆ?' ಎಂದು ಹಡಪಡಿಸುತ್ತಿರುವ ನೇಳೆ ಸಮಾರಾಧನೆಗೆ ಬಂದ ಬ್ರಾಹ್ಮಣರು ದಾರಿತೋರಿಸುತ್ತಾರೆ; ಅಂದರೆ, 'ವೈಕುಂಠಲೋಕ ಪ್ರಾಪ್ತಿರಸ್ತು' ಎನ್ನುತ್ತ ತಮ್ಮ ಉಬ್ಬಿದ ಹೊಟ್ಟೆ ಸವರಿದಾಗ ವೈಕುಂಠದ ಬಾಗಿಲು ತನಗೆ ತಾನಾಗಿಯೇ ತೆರೆಯುತ್ತದೆ. ಫಿರವಜ್ಜಿಯೊಡನೆ ಆತ್ಮ ವೈಕುಂಠಪತಿಯ ಸಾನ್ನಿಧ್ಯ ಹೊಂದುತ್ತಾನೆಂದು ಇಟ್ಟುಕೊಳ್ಳಿ.

ಸಮಾರಾಧನೆಯಲ್ಲಿ ಬ್ರಾಹ್ಮಣರು ತಮ್ಮ ಉಬ್ಬಿದ ಹೊಟ್ಟೆಯನ್ನ ಸವರುವಾಗ, ಅಲ್ಲಿ ವೈಕುಂಠದ ಬಾಗಿಲು ಹೇಗೆ ತೆರೆಯುತ್ತದೆ ಎಂದು ಸಂದೇಹ ಬಂತೆ? ಇಲ್ಲಿ ಗುಬ್ಬಿ ಒತ್ತಿದೊಡನೆಯೇ ಅಲ್ಲಿ ದೀಪ ವಾರುವುದನ್ನು ನೋಡಿದ್ದುವಿದಲ್ಲವೇ? ರೇಡಿಯೋ 'ಅ, ಮೀರಿ ಗಲೆ ಲಗ್‌ಜಾ' ಅಂತ ಕರೆಯುವುದನ್ನು ಕೇಳಿಲ್ಲವೆ? ಅದು ಸಾಧ್ಯವಾಗುವಾಗ ಇನ್ನೇಕೆ ಅಸಾಧ್ಯ? ರೇಡಿಯೆತಿನಲ್ಲಿ ಅಲೆಗಳನ್ನು ಸೆಳೆಯುವ, ಸೆಳೆದುಕೊಂಡ ಅಲೆಗಳನ್ನು ಧ್ವನಿಯಾಗಿ ಸುವ ಯಂತ್ರಗಳಿವೆ ಅನ್ನುತ್ತೀರಾ? ಅವೇ ಇನ್ನೊಂದು ಬಗೆಯ ಯಂತ್ರಗಳು ವೈಕುಂಠದ ಬಾಗಿಲಿಗೂ ಏಕೆ ಜೋಡಿಸಿರಬಾರದು? ಇಲ್ಲಿ ಬ್ರಾಹ್ಮಣರು ಉಬ್ಬಿದ ಹೊಟ್ಟೆಯನ್ನು ಸವರಲು ಆರಂಭವಾದೊಡನೆಯೇ ಅಲ್ಲಿ ಪಕ್ಕೆಂದು ಬಾಗಿಲೇಕೆ ತೆರೆದು ತೊಡಗಬಾರದು? ನಿನೆಮಾ ಥಿಯೇಟರಿನಲ್ಲಿ ಆಪರೇಟರ್ ಕನ್ನ ಕೋಣೆಯಲ್ಲಿ ಸ್ವಿಚ್ ಒತ್ತಿದೊಡನೆಯೇ ರಜತ ಪರದೆಯ ಮೇಲಿನ ಮಂಕು ಪರದೆ ಅತ್ತ ಇತ್ತ ಸರಿದು ನಿಲ್ಲುವುದಿಲ್ಲವೆ? ಬ್ರಾಹ್ಮಣರ ಹೊಟ್ಟೆ ಮತ್ತು ವೈಕುಂಠದ ಬಾಗಿಲುಗಳ ನಡುವೆ ತಂತಿಯೆಲ್ಲವೆಂದೇ ದೂರು ತ್ತೀರಿ? ಅದು "ನಿತ್ಯಂತ" "ಯರ್ ಲೆಸ್" ಏಕಿರಬಾರದು?

ಜೈಪುರದ ಬಳಿಯ ಮೂವರು ಸಹೋದರರು ಭರ್ಜರಿ ಊಟವೇನೋ ಮಾಡಿಸಿದರು; ಪ್ರಾಯಃ ಕೈತುಂಬ ದಕ್ಷಿಣೆ ಕೊಡಲಿಲ್ಲವೆಂದು ತೋರುತ್ತೆ. ಊರ ದೇವಾಲಯದ ಪೂಜಾರಿ ಹೇಳುವದಿದೆ, 'ನಿತ್ಯ ಬರುವ ಮಂಡೆಯಂಗೂ ಕೊಡೋದ್ನಿ, ಅಪರೂಪಕ್ಕೆ ಬರುವ ದೊಂಡೆಗೇನಂತೆ' ಅಂತ. ಏನು ಎಂದು ಕೇಳುತ್ತೀರಾ? ಪೂಜಾರಿ ಮಂತ್ರೇನು ಬಯಸಿಯೂನು? ಎರಡು ಕಾಸು ಕ್ಷಿಪ್ತಿಕೆ ಅಷ್ಟೆ. ಅಲ್ಲ, ಈ ದೊಂಡೆ ಯೂರು ಎಂದೂ ಸಂದೇಹ ಬಂತೆ? ಫಿವಿನ್ನೂ ಬ್ರಾಹ್ಮಣರಿ (ವ್ಯವಹಾರಕ್ಕೆನ್ನಿ) ಎಂದು ತೋರುತ್ತೆ. ಗೃಹಶಾಸ್ತ್ರವಿನಿಗಳಿಗೆ ಗೊತ್ತು—ತಮ್ಮ ಹೆಂಡದಿರ ದೊಂಡೆ ಗಟ್ಟಿಯಾದ್ದರಿಂದ ಮುತ್ತೈದೆಯರಿಗೆ ದೊಂಡೆ ಎಂಬ ಅಡ್ಡ ಹೆಸರು ಈ ಕಾಲದಲ್ಲಿ. ಸ್ತ್ರೀಸ್ವಾತಂತ್ರ್ಯದ ಚಳುವಳಿ ತೀವ್ರವಾಗಿ ಪಡೆದದ್ದರಿಂದ ಅವರಿಗೆ ಸಿಕ್ಕಿದ್ದು ಇದೇ—ಅಳುವ ಸ್ವಾತಂತ್ರ್ಯ, ಬೊಬ್ಬಿಡುವ ಸ್ವಾತಂತ್ರ್ಯ ಗಂಡನನ್ನು ಬೇರೆಯವರಿದುರು ಬೈಯುವ ಸ್ವಾತಂತ್ರ್ಯ....ಇನ್ನೂ ಏನೇನೋ ಸ್ವಾತಂತ್ರ್ಯಗಳು....

ಇಂದಿರಮ್ಮ ಮಹಾರಾಣಿಯೆನಿಸಿದಾಗ ತಾನೊಬ್ಬ ರಾಜವೈಭವಬೇಕೆಂಬ ಇರಾದೆ ಸಾಮ್ಯವಾದದ ನಂಬೂದರಿಗಿರಲಾರದು. ಅವರ ಅಂಜಿಕೆ ಬೇರೆಯೇ. ತನ್ನ ಮೇಲೂ ಭ್ರಷ್ಟಾಚಾರದ ಆರೋಪ ಇಂದಲ್ಲ, ಮುಂದೊಂದು ದಿನ ಬಾರದುಳಿಯದು. ಕಾಳಧನ ಬೆನ್ನೇರಿದ ಬಡಾ ಬೊಳ್ಳವನ್ನ ಬಿಟ್ಟೀತೆ? ಅಂತಹ ದುರ್ದಿನ ಬಂದಾಗ, ತನ್ನ ಭವಿಷ್ಯಕ್ಕೆ ಮಸಿ ಹಚ್ಚಿಕೊಳ್ಳಬಾರದೆಂಬ ಇರಾದೆ ಅವರದು. ಅದಕ್ಕಾಗಿ ಈಗಿಂದೀಗಲೇ ಎಚ್ಚರಿಕೆ. ಆದರೂ ಬಲ ಪಂಥೀಯರು ಬಿಡಬೇಕಲ್ಲ? ಎಳೆದೇ ಎಳೆಯುತ್ತಾರೆ.

ಕವಿಯೊಂದು ಗಗನಯಾತ್ರೆಗೆ ತೊಡಗಿದೆ. ಈ ಪ್ರಯೋಗ ಯಶಸ್ವಿಯಾದರೆ, ಚಂದ್ರಲೋಕದಲ್ಲಿ ಮೊತ್ತಮೊದಲು ಇಳಿಯುವ ಭಾಗ್ಯ ಕೋತಿಗಿದೆ. ರಷ್ಯಾ ಗಗನ ಯಾತ್ರಿಗಳು ತಮ್ಮ ಸಂಗಡ ನಾಯಿಯನ್ನು ಒಯ್ದು ದಾಖಲೆ ಸ್ಥಾಪಿಸಿದ್ದರು. ಆದರೆ, ಅದೇಕೋ ಅಂತಹ ಪ್ರಯೋಗಗಳಾಗಲಿಲ್ಲ. ನಾಯಿಯಲ್ಲಿರುವ ಕಾರ್ಯನಿಷ್ಠೆ, ಪರಾಕ್ರಮ, ಧೈರ್ಯ, ವಿಶ್ವಾಸಪ್ರಿಯತೆಗಳಿಂದ ಮಾನವ ದೂರವಾಗುತ್ತ ಬಂದ. 'ನಾಯಿತನ'ದಿಂದ "ನಾಗರಿಕತನ"ಕ್ಕೆ ಪಾದಾರ್ಪಣಮಾಡತೊಡಗಿದ ವೇಳೆ ನಾಯಿ ಮಾನವನಿಗೆ ಸರಿಹೊಂದಕಂಪೆನಿಯೂಗಳು. ಇತಿಹಾಸವು ಮರುಕೊಳಿಸುತ್ತಿರುವುದು ನಿಜವಾದರೆ, ನವ ಜಾಗತೀಕರಣೆಯ ಚಾಪಲ್ಯವನ್ನೂ ಫ್ಯಾಷನ್ನನ್ನೂ ಗಮನಿಸುವಾಗ ವಾನರನಿಗೇ ನಾವು ಹೆಚ್ಚರ ಹೋಗುತ್ತಿರುವುದು ಭಾಗ್ಯವಾಗದಿರದು. ಮಾನವನ ವಿಕಾಸ ಮಂಗಗಳಿಂದಲೇ ಆಯಿತೆಂಬುದನ್ನ ಗಮನಿಸುವಾದ ಮಾನವನಿಗೆ ಮಂಗನೇ ಯೋಗ್ಯ ಸಾಥಿಯೊಗುಬ್ಬನೆನಿಸುತ್ತದೆ.

ಮಂಗವು ಭೂಲೋಕದಲ್ಲಿ ಮಾನವನ ಮೂಲಪುರುಷನೆನಿಸಿದಂತೆ ತಾಳಿನ ಸಂಶೋಧಕರು ಚಂದ್ರಲೋಕದಲ್ಲೂ ಹಾಗೆಯೇ ಎನ್ನಬೇಡವೆ? ಬದ್ಧಿಜೀವಿ ಇತಿಹಾಸ ರೂಪಿಸುತ್ತಲೇ ಹೋಗುತ್ತಾನೆ; ಭಾವಜೀವಿ ಇತಿಹಾಸದಿಂದ ಮಾರವೋಡುತ್ತಾನೆ. ಇವೆರಡರ ಸಮನ್ವಯನೇ ಇತಿಹಾಸದೊಡನೆ ನಡೆಯುತ್ತಾನೆ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29887

Grams. HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ನವರಂಗ

17—7—1969

NAVAYUGA 10—7—1969
Registered with the Registrar
of News Papers for India
under No. R. N. 3546/'57

REGD: No: B. Ga 176
LICENCE No. 33
Licensed to Post without Prepayment

ಚತುರ್ಥ ಯೋಜನೆಯ ರೂಪರೇಷೆಗಳು

ಸಂಪನ್ಮೂಲಗಳು, ಮೂಲವ ಶಕ್ತಿ, ಮತ್ತು ಸಾಮಗ್ರಿಗಳು ಮತ್ತು ಆರ್ಥಿಕ ವಿಷಯಗಳ ಆಧಾರದ ಮೇಲೆ 1969-74ರ ಚತುರ್ಥ ಪಂಚವಾರ್ಷಿಕ ಯೋಜನೆಯ ಕರಡು ಪ್ರತಿಯನ್ನು ತಯಾರಿಸಲಾಗಿದೆ. ಆದನ್ನು ಪ್ರಸ್ತುತ ಅಂದಾಜಿನ ಮೇಲೆ ಗೊತ್ತುಪಡಿಸಲಾಗಿದೆ.

ಸ್ಥಿರರೂಪದ ಅಭಿವೃದ್ಧಿ ಸಾಲ್ಯನೆಯ ಯೋಜನೆಯು ಮುಂಬ್ಯಿ ಸುರಿ. ಸುಮಾರು 850 ಕೋಟಿ ರೂ.ಗಳ ವರೆಗೆ ಕೊರತೆ ಧನ ವಿನಿಯೋಗದ ಸೌಲಭ್ಯವನ್ನು ಈ ಕರಡು ಪ್ರತಿಯಲ್ಲಿ ಸೂಚಿಸಿದೆ. ಗೊತ್ತುಪಡಿಸಿರುವ ಈ ಪ್ರಮಾಣದ ಕೊರತೆ ಧನವಿನಿಯೋಗ (ಡಿಫಿಸಿಟ್ ಫೈನಾನ್ಸಿಂಗ್) ರಾಷ್ಟ್ರದ ಆರ್ಥಿಕತೆಗೆ ಕಾರಣವಾಗುವುದಿಲ್ಲ ಎಂಬುದಾಗಿ ಭಾವಿಸಲಾಗಿದೆ.

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಮಂತ್ರಿಶಾಖೆಗಳು ತಮ್ಮ ಕಾರ್ಯಯೋಜನೆಗಳಿಗಾಗಿ ಮಾಡುವ ಹೆಚ್ಚಿದ ಪ್ರಮಾಣ ಕರಡು ಪ್ರತಿಯಲ್ಲಿ ಸೂಚಿಸುವ ಪ್ರಮಾಣವನ್ನು ವಿಂಗಡಿಸಿರುವುದು. ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಸಾಧ್ಯವಾಗುವ ಸಂದರ್ಭಗಳಲ್ಲಿ ಹೆಚ್ಚುವರಿಯನ್ನು ಕಡಿಮೆ ಪಡಿಸಲು ಪ್ರಯತ್ನಗಳನ್ನು ಮಾಡಬೇಕು, ಎಂಬುದಾಗಿ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರಗಳ ಮಂತ್ರಿಶಾಖೆಗಳಿಗೆ ಈ ಹಿಂದೆಯೇ ತಿಳಿಸಿದೆ. 1966-71ರ ಸಾಲ್ಯನೆಗಾಗಿ ಯೋಜನೆಗಾಗಿ ಕರಡು ಪ್ರತಿಯೊಂದನ್ನು ತಯಾರಿಸಲಾಗಿತ್ತು. ಸರ್ಕಾರಿ ಕ್ಷೇತ್ರದಿಂದ ಸುಮಾರು 16,000 ಕೋಟಿ ರೂ. ಗಳನ್ನು ಯೋಜನೆಗಾಗಿ ಮಂಜೂರು ಮಾಡಬೇಕೆಂದು ಅದರಲ್ಲಿ ಸೂಚಿಸಿತ್ತು. ಆದರೆ ಅದನ್ನು 1969-74 ಯೋಜನೆ ಪ್ರತಿಯು ಅನ್ವಯ 19,000-20,000 ಕೋಟಿವರೆಗೆ ಏರಿಸಿದೆ.

ರಾಜ್ಯಸರ್ಕಾರಗಳಿಗೆ ಕೇಂದ್ರ ಫೀಡುವ ಆರ್ಥಿಕ ಹೆರವು ಹಾಗೂ ಅದರ ಪ್ರಮಾಣದ ಬಗ್ಗೆ 1969-74ರ ಯೋಜನೆಯ ಕರಡು ಪ್ರತಿಯಲ್ಲಿ ವಿಶೇಷ ಗಮನವನ್ನು ಕೊಡಲಾಗಿದೆ. ರಾಜ್ಯಗಳಿಗೆ ಸುಮಾರು 3,571 ರೂ.ಗಳಷ್ಟು ಹಣದ ನೆರವನ್ನು ಕೇಂದ್ರ ಫೀಡುವಂತೆ 1966-71ರ ಯೋಜನೆಯ ಕರಡು ಪ್ರತಿಯೂ ಒಪ್ಪಿತು.

ರಾಜ್ಯಗಳು ಈ ಹಿಂದೆ ತಮ್ಮ ಅಭಿವೃದ್ಧಿ ಕಾರ್ಯಯೋಜನೆಗಳಿಗಾಗಿ ಸಾಲವನ್ನು ಪಡೆದಿವೆ. ರಿಸರ್ವ್ ಬ್ಯಾಂಕ್‌ಫಂಡ್ ಹಿಂದೆ ಡ್ರಾನ್ಸ್‌ಗಳನ್ನು ಬಳಸಿಕೊಂಡಿವೆ. ಅವುಗಳ ಮೇಲೆ ಬಡ್ಡಿ ಕೆತ್ತಬೇಕಾಗಿರುವುದರಿಂದ ಮತ್ತು ಇನ್ನೇ ಮುಂತಾದ ಕಾರಣಗಳಿಂದಾಗಿ ರಾಜ್ಯಸರ್ಕಾರಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೂಡಿಸಲು ಸಾಧ್ಯವಾದಂತೆ ಕಾಣಬಹುದು. ಆದರೆ ತಮ್ಮ ಅಭಿವೃದ್ಧಿ ಕಾರ್ಯಯೋಜನೆಗಳಿಂದಾಗಿ ಈಗೀಗ ಅವು ಆದಾಯವನ್ನು ಗಳಿಸುತ್ತಿವೆ. ಸಾಲ್ಯನೆ ಯೋಜನೆ ಸಂಪನ್ಮೂಲಗಳ ಯೋಜನೆ. ಆದ್ದರಿಂದ ಈಗಿರುವ ಹಣಸ್ಥಿತಿಯಲ್ಲಿ ಆದರ ವ್ಯಾಪ್ತಿಯನ್ನು ಹೆಚ್ಚಿಸಲು ಸಾಧ್ಯವಿಲ್ಲ. ಸಂಪನ್ಮೂಲದಲ್ಲಿ ಪ್ರಮಾಣ ಜಾಸ್ತಿಯಾದರೆ ಮಾತ್ರ ಅವುಗಳ ವ್ಯಾಪ್ತಿಪ್ರಮಾಣ ಹೆಚ್ಚಿಸಬಹುದು.

ಕೇಂದ್ರ ಯೋಜನೆಗಳಿಗಾಗಿ ರಾಜ್ಯ ಸರ್ಕಾರಗಳಿಗೆ ಶೇಕಡಾ 70ರಷ್ಟು ನೆರವನ್ನು ಸಾಲದ ರೂಪದಲ್ಲಿ 30ರಷ್ಟು ಭಾಗವನ್ನು ಸಹಾಯಧನವಾಗಿಯೂ ಕೇಂದ್ರ ಫೀಡುವದು. ಇನ್ನರ ಜೊತೆಗೆ ರಾಜ್ಯಗಳಿಗೆ ದೊಡ್ಡ ಪ್ರಮಾಣದ ಸಹಾಯ-ಧನ ದಿಂದಲೂ ನೆರವನ್ನು ಕೊಡಲಾಗುವುದು. ಈ ನೆರವಿನಿಂದ ಪಡೆಯುವ ಹಣವನ್ನು ರಾಜ್ಯಗಳು ತಮಗೆ ಸೂಕ್ತ ಕಂಡುಬಂದ ಯೋಜನೆಗಳಿಗೆ ಉಪಯೋಗಿಸಿಕೊಳ್ಳಬಹುದು.

ನಾಲ್ಕನೇ ಯೋಜನೆಯಲ್ಲಿ ಸುಮಾರು 45 ಯೋಜನೆಗಳನ್ನು ಕೇಂದ್ರ ಸರ್ಕಾರದ ಯೋಜನೆಗಳನ್ನಾಗಿ ಪರಿಗಣಿಸಲಾಗಿದೆ. ಇವುಗಳ ಆರ್ಥಿಕ ಮತ್ತಿತರ ಜವಾಬ್ದಾರಿಯನ್ನು ಕೇಂದ್ರಸರ್ಕಾರ ವಹಿಸಿಕೊಳ್ಳುವುದು.

ನಿರುದ್ಯೋಗ ಸಮಸ್ಯೆ ಬಗ್ಗೆ ಅಧ್ಯಯನ ಮಾಡಲು ಯೋಜನಾ ಆಯೋಗ ಅರ್ಥ ಶಾಸ್ತ್ರಜ್ಞರ, ಸಂಖ್ಯಾ ಶಾಸ್ತ್ರಜ್ಞರ ಸಮಿತಿಯೊಂದನ್ನು ರಚಿಸಿದೆ. ಪ್ರೊ. ಎಂ. ಎಲ್. ದಂತವಾಲಾ, ಪ್ರೊ. ಕೆ. ಎನ್. ರಾಜ್ ಮತ್ತು ಡಾ.| ಲಾಹಿರಿ ಅವರುಗಳು ಈ ಸಮಿತಿಯಲ್ಲಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಗೊಳ್ಳುವುದು, ಕೃಷಿಕ ಕೊಬ್ಬರ ತಯಾರಿಸುವ, ಟ್ರಾಕ್ಟರ್ ಇವೇ ಮುಂತಾದ ಬೇಸಾಯಕ್ಕೆ ಸಂಬಂಧಿಸಿದ ಕೈಗಾರಿಕೆಗಳನ್ನೂ ವೃದ್ಧಿಪಡಿಸುವುದು. ಇವೇ ಮುಂತಾದುವುಗಳಿಗಾಗಿ ಹಣ ವೆಚ್ಚಮಾಡಲಾಗುವುದು.

ಐತಿಹಾಸಿಕ, ಸಾಮಾಜಿಕ, ಆರ್ಥಿಕ, ಮತ್ತು ಭೌಗೋಳಿಕ, ಕಾರಣಗಳಿಂದಾಗಿ ಹಿಂದುಳಿದಿರುವ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು. ಪ್ರಾದೇಶಿಕ ಅಂತರಗಳನ್ನು ನಿವಾರಿಸಲು ಯತ್ನ ಮಾಡುವುದು. ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ದೃಷ್ಟಿಕೋನಗಳನ್ನು ಸಾಧಿಸುವುದು ಇವೇ ಮುಂತಾದುವುಗಳ ಬಗ್ಗೆ ನಾಲ್ಕನೇ ಯೋಜನೆಯಲ್ಲಿ ಯೋಚಿಸಲಾಗಿದೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಅಂಗ್ಲಭ್ಯಾಸಬೋಧಿನಿ.
ಬೆಲೆ: ರೂ. 2—00

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು — **Home Remedies**

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಕೈಹೊತ್ತಗೆ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಕ್ತಿಯ ಶಕ್ತಿ

(ರವಿಶಂಕರ ಮಹಾರಾಜ)

ಉಗಿಯ ಶಕ್ತಿಯಿಂದ ರೇಲ್ವೆ ಎಂಜಿನ ನಡೆಯುತ್ತದೆ. ಆದರೆ ಭಕ್ತಿಯ ಶಕ್ತಿಯಾದರೋ ವಿಶ್ವಕಂಚಾಲನೆಗೇ ನೆರವಾಗಬಲ್ಲುದು.

ಉಗಿಯನ್ನು ಸಂಗ್ರಹಿಸುವ ಸಾಧನದಲ್ಲೇ ಛಿದ್ರಗಳಿದ್ದರೆ ಉಗಿಯು ಸಂಪ್ರಜ್ಞವಾಗಲಾರದು! ಮತ್ತು ಎಂಜಿನ್ನು ನಡಿಸುವ ಶಕ್ತಿಯೂ ಅದರಲ್ಲಿ ಬರಲಾರದು. ಅದೇ ಪ್ರಕಾರ ಭಕ್ತಿಯನ್ನು ಸಂಪ್ರಜ್ಞಿಸುವ ಸಾಧನದಲ್ಲೂ ಗಾಯನ, ರೋದನ ಮತ್ತು ಪ್ರದರ್ಶನ ಎಂಬ ಮೂರು ಛಿದ್ರಗಳು ಬೀಳುತ್ತಿರುತ್ತವೆ. ಮತ್ತು ಈ ಛಿದ್ರಗಳ ಮಾರ್ಗವಾಗಿ ಭಕ್ತಿಯ ತತ್ವವು ಹೊರಬಿದ್ದು ಹೋಯಿತೆಂದರೆ ಭಕ್ತಿಯು ಸಂಜಾತವೇ ಬಂದಾಗುತ್ತದೆ.

ಜೀವನಕ್ಕೆ ಉಪಯುಕ್ತವಾದ ಭಜನೆಗಳನ್ನೇನೋ ಕೆಲವರು ಹಾಡುತ್ತಾರೆ! ಆದರ ಮುಂದೆ ಅವರು ಚಿಂತನವನ್ನೇ ಮಾಡುವುದಿಲ್ಲ. ಆದರಿಂದ ಅವರ ಭಕ್ತಿಯಲ್ಲಿ ಮುಂದೆ ಶಕ್ತಿಯು ವ್ಯಾದುರ್ಭವಿಸುವುದಿಲ್ಲ.

ಕೆಲವರು ಇನ್ನಿತರರ ದಃಖ ನೋಡಿ ಕಣ್ಣೀರು ಸುರಿಸುತ್ತಾರೆ! ಆದರೆ ಅವರ ದಃಖನಿವಾರಣೆಗೆ ಏನೊಂದೂ ಪ್ರಯತ್ನ ಕೆಲಸಮಾಡುವುದಿಲ್ಲ! ಹಾಗೆ ಕಣ್ಣೀರು ಸುರಿಸಿಯೇ ಸಹಭಾಗವ ಪಟ್ಟುಕೊಳ್ಳುತ್ತಾರೆ! ಹೃದಯದಲ್ಲಿ ಅಂಕುರಿಸಿದ ಅನುಕಂಪನದ ಭಾವನೆಯು ಕಣ್ಣೀರಿನೊಂದಿಗೆ ಹುದುಹೋಗುತ್ತದೆ, ದುಃಖವನ್ನು ದೂರಪಡಿಸುವ ಪ್ರಯತ್ನ ಕೆಲಸ ಮಾಡಿದರೆಯೇ ಮಾತ್ರ ಜಗತ್ತಿಗೆ ಕಲ್ಯಾಣವಾಗುತ್ತದೆ! ಇಲ್ಲವಾದರೆ ಅಳುವದು ಭಕ್ತಿಯನ್ನು ಕಡಿಮೆಮಾಡುವಷ್ಟೂ ಛಿದ್ರವ ಗಿಬಿಡುತ್ತದೆ.

ಬೇರೆ ಕೆಲವರು ಭಕ್ತಿಯ ಪ್ರದರ್ಶನ ನಡೆಸುವುದರಲ್ಲೇ ತಲ್ಲೀನರಾಗಿಬಿಡುತ್ತಾರೆ. ಆಂಥ ಪ್ರದರ್ಶನವಾದರೂ ಎಷ್ಟಕಷ್ಟೂ ಹೆಚ್ಚಿನ ಛಿದ್ರವಾಗಿದೆ. ಅವರಲ್ಲಿ ಭಕ್ತಿಯ ತತ್ವವು ಒಂದಿಷ್ಟೂ ಉಳಿಸುವುದಿಲ್ಲ.

ಒಟ್ಟಿಗೆ ಗಾಯನ, ರೋದನ ಮತ್ತು ಪ್ರದರ್ಶನಗಳೆಂಬ ಮೂರು ಛಿದ್ರಗಳಿಂದಾಗಿ ಎಳು ಹೊಲಿಸುವಷ್ಟರಲ್ಲಿ ಹದಿನೇಳು ಕಡೆ ಹರಿಯುತ್ತವೆ ಎಂಬಂತೆ ಭಕ್ತಿಯು ಅವಸ್ಥೆಯಾಗಿ ಬಿಡುತ್ತದೆ.

ಭಕ್ತಿಯ ತತ್ವದಲ್ಲಿ ಶಕ್ತಿಯು ವ್ಯಾಪ್ತವಾಗಿರುವಂತೆ ವಿಚಾರ ಪೂರ್ವಕವಾಗಿಯೇ ಭಕ್ತಿಯನ್ನು ಮಾಡಬೇಕು.

Edited, Printed & Published by K. H. Shetty, at the Navayuga Press, Udupi, S. India.

ಕಥಾಪ್ರಪಂಚ

ನೋಡಿದ್ದೊಂದು ಕೇಳಿದ್ದೊಂದು

ಬರೆದವರು : ಕು. ಗೋ.

ಆಕಾಶವೆಲ್ಲ ಕರಿಮೋಡಗಳಿಂದ ತುಂಬಿತ್ತು, ಗಾಳಿ ಸುರ್ರನೆ ಬೀಸುತ್ತಿತ್ತು. ಆಗೊಂದು ಈಗೊಂದು ಗಡುಗು ಏಂಚು. ಹಿಡಿಲಿನ ಆರ್ಭಟ. ಮಳೆ 'ಧೋ' ಎಂದು ಸುರಿಯುತ್ತಲೇ ಇತ್ತು. ಕೈಯಲ್ಲಿ ಹಿಡಿದಿದ್ದ ಕೊಡೆಗೂ ಮಳೆಯ ಪೆಟ್ಟು ತಾಳಲಾರದೆ ನೀರು ತಲೆಯ ಮೇಲೆ ಬೀಳುವಂತೆ ದಾರಿಮಾಡಿ ಕೊಡುತ್ತಿತ್ತು. ಕೆಳಗೆ ಬಿದ್ದ ನೀರು ಸೊಂಟದ ವರೆಗೂ ಹಾರಿ ಎತ್ತಿಕಟ್ಟಿದ್ದ ಪುಟ್ಟ ಸೀರೆಯನ್ನೂ ಒದ್ದೆ ಮಾಡಿತ್ತು. ಕೊಡೆಯನ್ನು ಯಾವ ಕಡೆ ಹಿಡಿದರೂ ಮಳೆಯ ಫೀರು ವೈಮೇಲೆ ಯೇ ಬೀಳುವಂತಿತ್ತು. ಛೀ ಈ ಮಳೆಗೆ ಎಲ್ಲಗೂ ಹೋಗುವುದು ಬೇಡ, ಮನೆಗೆ ಹೋಗಿ ಬಿಸಿ ಕಾಯಿಸುತ್ತಾ ಕುಳಿತುಕೊಳ್ಳೋಣವೆಂದು ವನಸ್ಸಾದರೂ ರಸ್ತೆಯ ಪಕ್ಕದಲ್ಲಿ ಬೀಳುತ್ತಿದ್ದ ದೃಶ್ಯ ನನ್ನನ್ನು ಎಲ್ಲಿಗೂ ಹೋಗಗೊಡಲಿಲ್ಲಿ; ಎಂದೂ ಇಲ್ಲದ ಅಪೂರ್ವ ದೃಶ್ಯ. ಆಹಾ! ಎಂದು ಎಷ್ಟೊಮ್ಮೆ ಬಾಯಿಬಿಟ್ಟರೆ, ಕೆಲವರ ಅವಸ್ಥೆಯನ್ನು ಕಂಡು 'ಅಯ್ಯೋ' ಎನ್ನುವಂತೆಯೂ ಆಗುತ್ತಿತ್ತು.

ರಸ್ತೆಯ ಉದ್ದಗಲಕ್ಕೂ ಕಣ್ಣು ಹಾಯಿಸಿದೆ. ಕರಿಕೊಡೆಗಳ ನಾಲೇ ನಾಲು-ನಾಯಿ-ಕೊಡೆಗಳನ್ನೂ ನಾಚಿಸುವಂಥಾ ಕಾಲು, ಬಾಲಾ ಕಾಲೇಜು ಗಳಿಗೆ ಹೋಗುವವಳೆ, ಸಂತೆಗೆ ಹೋಗುವವಳೆ, ಆಫೀಸುಗಳಿಗೆ ಕೊಟೆ-ಕಛೇರಿಗಳಿಗೆ ಗೌಡಿಗೋಷ್ಠಿಗಳಿಗೆ ಹೋಗುವವರು, ಹೊಟೆಲಿಗೆ ನುಗ್ಗುವವರು ನಾತ್ರ ಎಲ್ಲಿ ಹೋಗುವವರ ನಾಲೇ ನಾಲ.

ಬೇರೆ ದಿನಗಳಲ್ಲಿ ಕಾಣುತ್ತಿದ್ದ ಹಾವಭಾವ ಸಂದರ್ಭ, ಅಡುವ ಜಡೆ, ತುಂಡು ಲಂಗ, ಉಬ್ಬಿದ ಎದೆ ಒಂದೂ ಇಲ್ಲ. ರಾತ್ರಿ ರಾತ್ರಿ ಮಸ್ತಕಗಳನ್ನು ಒತ್ತಿ ಹಿಡಿಸುಕೊಂಡು ಬಳಕುತ್ತಾ ನಡೆಯುವ ಲತಾಂಗಿಯರು ಯಾರು, ಕುಂಬಳಕಾಯೋಗಿಯರು ಯಾರು ಎಂಬುದೂ ತಿಳಿಯುವಂತಿರಲಿಲ್ಲ. ಟೈಟ್ ಪ್ಯಾಂಟ್, ಹೂಪು ಬೂಟ್ಸು, ಕೆದರಿದ ಕ್ರಾಪಿನ ಹುಡುಗರ ವೇಷವೂ ಬದಲಾಗಿದೆ. ಹರಟೆ ಕೊಚ್ಚುತ್ತಾ, ವಶದಿಕ್ಕುಗಳನ್ನೂ ವೀಕ್ಷಿಸುತ್ತಾ ಭೋಜನ ಶಾಲೆಯತ್ತ ಸೆಳೆಯುತ್ತಿದ್ದ ಮೂಡೆಗಳು ಛಳಿಯಾದ ನಡುಗುತ್ತಾ ಲೋಟ ಹಿಡಿದುಕೊಂಡು ಅರ್ಧಂಬರ್ಧ ನೆನೆಯುತ್ತಾ ಜಾರುವ ನೆಲದಲ್ಲಿ ಜಾಗರೂಕತೆಯಿಂದ ಓಡುತ್ತಿದ್ದುವು. ಕೆಚ್ಚೆನವಳ ನೆತ್ತಿಯೇಲೆ ರೈನ್‌ಕೋಟು, ತಲೆಯಮೇಲೆ ಟೋಪಿ, ಕಾಲಿಗೆ ಗಮ್ ಬೂಟ್, ಕೈಯ ಲ್ಲಿ ಕೊಡೆ ರೈನ್ ಕೋಟುಗಳಲ್ಲಿ ಗಂಡು ಹೆಣ್ಣೆಂಬ ಭೇದವನ್ನು ತಿಳಿಯುವುದೂ ಕಷ್ಟಕರ. ಹೆಜ್ಜೆಯ ಮೇಲೆ ಹೆಜ್ಜೆ, ಜೋರಾಗಿ ನಡೆದರೆ ಎಲ್ಲಿ ಜಾರಿಬೀಳುತ್ತೇವೆಯೋ ಎಂಬ ಭಯ ಅಥವಾ ರಸ್ತೆಯಲ್ಲಿರುವ ಕಣ್ಣಿಗೆ ರಾಚುವ ಕೆಸರಾವಿಗಳಿಗೆ ಅಪ್ಪಿತಪ್ಪಿ ಕಾಲಿಡುವೆನೋ ಎಂಬ ಆಂಜಿಕೆ; ಕೆಳಗೆ ಕೆಸ್ಸೀರು, ಮೇಲೆ ಪನ್ನೀರು. ಸುತ್ತಮುತ್ತಲೂ ಜಾಗ್ರತೆಯ ನಡಿಗೆ. ರಸ್ತೆಯ ಕೆಸ್ಸೀರನ್ನು ಹಾರಿಸಿಕೊಂಡ ಓಡುವ ಬಸ್ಸು ಕಾರು ಸ್ಕೂಟರ್ ಸೈಕಲ್‌ಗಳಿಗೆ ಹೆದರಿ ವೈವಾಲಿಸಿ ಕೊಡೆ ಅಡ್ಡ ಹಿಡಿದು ನಡೆಯುವವರು ಎಷ್ಟೋ ಮಂದಿ. ನೋಡುತ್ತಲೇ ನಿಂತೆ. ಆಲ್ಲ ನೋಡುತ್ತಲೇ ಮನ್ನೆಡೆದೆ.

ಮಳೆ ಧೋ ಎಂದು ಸುರಿಯುತ್ತಲೇ ಇತ್ತು. ವ್ಯಾಂಟ್ ಹಾಕುತ್ತಿದ್ದವರೂ ಪಂಚೆ ಉಟ್ಟಿದ್ದರು. ಉದ್ದ ಲಂಗ ತೊಡುತ್ತಿದ್ದವರು ತುಂಡು ಲಂಗ ತೊಟ್ಟಿದ್ದರು. ಹೈ ಹೀಲ್ಡ್ ಚಪ್ಪಲಿಗಳು ಮಾಯವಾಗಿದ್ದುವು. ಸೀರೆಯಲ್ಲಿ ಫೀರೆಯರು ನೀರಿನೊಡನೆ ಹೋರಾಡುತ್ತಾ, ಹೆಜ್ಜೆ ಹಾಕುತ್ತಿದ್ದರು. ವ್ಯಾಪಾರಿಗಳೆಲ್ಲಾ ವ್ಯಾಪಾರವಿಲ್ಲದೆ ಕುಳಿತು ನೊಣ ಹೊಡೆಯುತ್ತಿದ್ದರು.

ತರುಣಿಯೊಬ್ಬಳು ಕಾಲು ಜಾರಿ ರಸ್ತೆಯ ಮೇಲೆ ಬಿದ್ದಳು. ಬಹಳ ವೇಗದಿಂದ ಬರುತ್ತಿದ್ದ ಕಾರೊಂದು ಗಕ್ಕನೆ ನಿಂತಿತು. ಎರಡನ್ನೂ ಕಂಡೆ.

ರಸ್ತೆಯ ಬಯಿಯಲ್ಲೇ ಜಾಗ್ರತೆಯಿಂದ ಕಾಲು ಹಾಕುತ್ತಿದ್ದರೂ ಬಹಳ ವೇಗವಾಗಿ ಅವಳು ನಡೆಯುತ್ತಿದ್ದಳು. ಬ್ಯಾಂಕಿನಲ್ಲೋ ಪೋಸ್ಟ್ ಆಫೀಸಿನಲ್ಲೋ ಅಥವಾ ಇನ್ಯಾವುದಾದರೂ ಆಫೀಸಿನಲ್ಲೋ ಕೆಲಸದಲ್ಲಿರುವವಳೆಂದು ಕಾಣಿಸುತ್ತೆ. ಪಾಪ, ಕಾಲು ಜಾರಿ ರಸ್ತೆಯ ಮೇಲೆ ಬಿದ್ದಳು. ಎಷ್ಟರಸಿಂದ ಬರುತ್ತಿದ್ದ ಕಾರಿನ ಡ್ರೈವರ್ ತನ್ನ ಜಾಕಬಕ್ಕತೆಯನ್ನು ತೋರಿ ಕಾರನ್ನು ಫಿಳಿಸದಿದ್ದರೆ ಕಾರಿನ ಚಕ್ರ ಆಕೆಯ ತಲೆಯ ಮೇಲೆ ಹರಿದು ಪೋಲೀಸಿನವರಿಗೂ, ಸರ್ಕಾರಿ ಆಸ್ಪತ್ರೆಯ ಡಾಕ್ಟರರಿಗೂ ಒಂದು ಕೆಲಸವಾಗುತ್ತಿತ್ತು. ಎಲ್ಲಿತ್ತೋ ಆಸ್ಪ ಜನ! ಎಲ್ಲರೂ ಕಾರಿನಿಕ್ಕೆ ಮುತ್ತಿದರು. ಏನಾಯ್ತು ಏನಾಯ್ತು ಎಂಬ ತವಕ, ಗಾಬರಿ, ಕಾರನ್ನು ನೋಡಿದವರು ಕಡಿಮೆ. ಎಲ್ಲರೂ ಬಿದ್ದಿದ್ದ ಆ ತರುಣಿಯನ್ನು ನೋಡುತ್ತಿದ್ದರು.

ಪಾಪ! ಆಕೆಯ ಮುಖದ ಪೌಡರೆಲ್ಲ ಮಳೆಯು ನೀರಿನಿಂದ ತೊಯ್ದು ಹೋಗಿತ್ತು. ಉರುಟು ಕುಂಕುಮ ಉದ್ದ ನಾಮ ವಾಗಿತ್ತು. ತಲೆಯ ಕೂದಲ ಗಳೆಲ್ಲಾ ಕೆದರಿದ್ದವು, ಬಹುಷಃ ಗಾಳಿಗರಬೇಕು. ಒಂದು ಕೈಯಲ್ಲಿದ್ದ ಕೆಲವು ಬಳೆಗಳು ಒಡೆದು ಜೂಂಗಾಗಿದ್ದವು, ವ್ಯಾನಿಟಿ ಬ್ಯಾಗ್ ತುಸು ದೂರದಲ್ಲಿ ಹೋಗಿ ಬಿದ್ದಿತ್ತು. ಒಂದು ಸಣ್ಣ ಬಾಚಣಿಗೆ, ಒಂದು ಪೆನ್ನು ಮತ್ತು ಸ್ವಲ್ಪ ಚಿಲ್ಲರೆ ಹಣವಲ್ಲದೆ ಮತ್ತೇನೂ ಆದರಲ್ಲಿ ಇದ್ದಂತೆ ಕಾಣಲಿಲ್ಲ. ಬಿದ್ದ ರಭಸಕ್ಕೆ ಸೀರೆ ಮೊಣಕಾಲಿನ ವರೆಗೂ ಸರಿದು ಅವಳ ಕಾಲುಗಳು ತವ್ಯ ಅಂದವನ್ನು ಪ್ರದರ್ಶಿಸುವಂತಾಗಿತ್ತು. ಒಂದು ಕಾಲಿನ ಚಪ್ಪಲಿ ಕಳಚಿ ದೂರ ಹೋಗಿ ಬಿದ್ದಿತ್ತು. ಕೊಡೆಯು ಕೋಲು ಬಿಗ್ಗಿ ತಲೆಯಡಿಗೆ ಬಿದ್ದಿತ್ತು. ಆಕೆ ನಾಚಿ ನೀರಾಗಿ ಎದ್ದೆಯಾಗಿದ್ದಳು. ಬಿದ್ದ ಪೋಜಾಗಿದ್ದರೂ ಮುಖದಲ್ಲಿ ಗೆಲುವು ತರಲು ಪ್ರಯತ್ನಿಸುತ್ತಿದ್ದಳು. ಫಜೀತಾಗಿಯೂ ಆಕೆ ಸುಂದರಿಯಾಗಿದ್ದಳು

ಬಿದ್ದಿದ್ದ ವಸ್ತುಗಳನ್ನೆಲ್ಲ ಬೇಗಬೇಗನೆ ಹೆಕ್ಕಿ, ಕಾಲಿಗೆ ಚಪ್ಪಲಿ ಸಿಕ್ಕಿಸಿಕೊಂಡು, ತನಗೇನೂ ಆಗಿಲ್ಲವೆಂಬಂತೆ, ಬಟ್ಟೆಗಾಗಿದ್ದ ಕೆಸರನ್ನೂ ಲೆಕ್ಕಿಸದೆ, ಕೈಗಂಟಿಗಾದ ಗಾಯವನ್ನೂ ನೋಡದೆ ಸರಸರನೆ ನಡೆದು ಟ್ಯಾಕ್ಸಿಯೊಂದನ್ನು ಹಿಡಿದು ಎಲ್ಲಿಗೋ ಹೋಗಿಯೇ ಬಿಟ್ಟಳು.

ಗುಂಪಿನಲ್ಲಿ ಗುಜುಗುಜು ಶಬ್ದ ಕುರು ವಾಯ್ತು. ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಸುದ್ದಿ ಹರಡತೊಡಗಿತು. ಗುಂಪು ಕರಗಿತು. ವಾಹನಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಹೋದುವು. ಮಳೆ 'ಧೋ' ಎಂದು ಸುರಿಯುತ್ತಲೇ ಇತ್ತು. ನಾನು ಮುನ್ನಡೆಯುತ್ತಲೇ ಇದ್ದೆ.

ಸವೂರು ದೊಡ್ಡದಲ್ಲಿ ಒಬ್ಬ ಹುಡುಗ ಒಂದು ಬೀಡಿ ಅಂಗಡಿಯು ಬಳಿ ನಿಂತು ಹೇಳುತ್ತಿದ್ದ — ಭಾರೀ ಆಕ್ಸಿಡೆಂಟ್ ಆಂತೆ, ಒಂದು ಕಾರು ಹುಡುಗಿಯು ಮೇಲೆ ಹರಿದು ತಲೆ ಒಡೆದಿದೆಯಂತೆ. ಜೀವ ಉಳಿಯುವುದು ಕಷ್ಟ ಅಂತೆ ಅಪ್ಪ. ಪೋಲೀಸಿನವರು ಬಂದು ಕಾರನ್ನು ಹಿಡಿದು ಹುಡುಗಿಯನ್ನು ಅಸ್ಪತ್ರೆಗೆ ಹಾಕಿದ್ದಾರಂತೆ. ಡ್ರೈವರ್ ಲಾಕಪ್ ನಲ್ಲಿದ್ದಾನಂತೆ..... ಆಗ ಇನ್ನೂ ಏನೇನೋ ಹೇಳತ್ತಲೇ ಇದ್ದ. "ಎಲ್ಲಿ? ಎಲ್ಲಿ?" ಎಂದು ಕೇಳಿದೆ. "ಅವೇ ಈ ಸರ್ಕಲ್‌ನ ಹತ್ತಿರ" ಎಂದ.

"ನೀನು ನೋಡಿ ಬಂದೆಯಾ?"

'ಇಲ್ಲ, ಯಾರೋ ಹೇಳಿದ್ದು ಕೇಳಿದ್ದು. ಕೆಲವರು ಹೇಳ್ತಾರೆ ಆ ಹುಡುಗಿ ಬೇಕೆಂತಲೇ ಕಾರಿನವಿಗೆ ಬಿತ್ತಿದ್ದು ಅಂತ. ನವ ಗ್ಯಾಂಗ್‌ಗಳಲ್ಲಿ ಹೆಣ್ಣಾ' ಹುಡುಗ ಬೀಡಿಸೇದುತ್ತಾ ಮುಂದೆ ಹೋದ.

ಸುದ್ದಿಗೆ ಕೈಕಾಲು ಎಷ್ಟು ಬೇಗ ಹುಟ್ಟಿ ಹರಡಿನೆಯ ಲ್ಲಾ ಎಂದುಕೊಂಡೆ.

ಸಂಜೆ ಮನೆಗೆ ಕಾಲಿಟ್ಟಾಗ ಆಕೆ ಕೇಳಿದಳು : ಕಾರು ನೋರಿಗೆ ಬಿದ್ದು ಅಪಘಾತ್ವಾಯ್ತಂತೆ ಜಪ ಸತ್ಯರಂತೆ ಇವತ್ತು ಹೌದೇ?"

"ಯಾರು ಹೇಳಿದ್ದು?"

"ಯಾರೋ ಹೇಳಿದ್ರಲ್ಲ. ಅದರಲ್ಲಿ ಬ್ಯಾಂಕಿನ ಹುಡುಗಿಯೂ ಒಬ್ಬಳಂತೆ. ಹೌದೇ?"

"ಹೌದು" ಎಂದು ಸುಮ್ಮನಾದೆ. "ಪಾಪ, ಪಾಪ" ಎಂದಳು ಅವಳು. ಪಾಪ ಹೆಹ್ಹೆಹ್ಹೆ ಎಂದು ಮನಸ್ಸಿನಲ್ಲೇ ನಕ್ಕೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಹರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕೆರನಸ್ತದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
O. S. 408/1968.
ವಾಜೀವಿ ಹೆಗಡ್ತಿ ಸಹಾ — ವಾದಿರು
ಸಂಜೀವಿ ಹೆಗಡ್ತಿ ಸಹಾ — ಪ್ರತಿವಾದಿರು
ಕಾರ್ಕಳ ತಾಲೂಕು ಬೆದಿಂಜೆ ಗ್ರಾಮದ ವಾಸಿಸದನ ಎಂಬಲ್ಲಿರುವ 1ನೇ ಪ್ರತಿವಾದಿಳ ಮಗ 4ನೇ ಪ್ರತಿವಾದಿ ಚಿಂದರ್ಳ ಹೆಗ್ಡೆರಿಗೆ—
ನಿಮಗೆ ಮೇಲ್ಕಂಡ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ದಾವೆಯನ್ನು ಹೂಡಿರುತ್ತಾರೆ. ಆ ದಾವೆಯಲ್ಲಿ ನಿಮಗೆ ಸಮನ್ಸು ಜಾರಿಯಾಗಿದ್ದು ಅದರಂತೆ ನೀವು ದಿನಾಂಕ 28-7-69ಕ್ಕೆ ಇಪ್ಪತ್ತೆರಡನೆಯ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ಸ್ವತಃ ನೀವಾಗಲೀ ನಿಮ್ಮ ಪರವಾಗಿ ಅಧಿಕೃತ ವಕೀಲರಾಗಲೀ ಹಾಜರಾಗಿ ಉತ್ತರ ಕೊಡಬೇಕಾಗಿದ್ದು, ತಪ್ಪಿದಲ್ಲಿ ಕೋರ್ಟಿಗೆ ಯಾವ ಅಧಿಕಾರವಿದೆಯೋ ಅದರಂತೆ ತೀರ್ಮಾನವಾಗುವುದು.
K. S. Hegde
Advocate for Plffs.
Karkala,
7—7—69.

ಫೋನ್ : 526

1921 ಸ್ಥಾಪನೆ

ಸಂಪುಟ ೪೮

ಸಂಚಿಕೆ ೪೩

VOL. 48

No. 43

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೭—೭—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಬಂಡವಾಳದ ಅಕ್ಷಯಪಾತ್ರೆ

ಬೆಂಗಳೂರಲ್ಲಿ ಎ ಐ ಸಿ. ಸಿ. ಯ ಅಧಿವೇಶನ ಆದ್ದೂರಿಯಿಂದ ಪ್ರಾರಂಭವಾಯಿತು. ಈ ಅಧಿವೇಶನವು ಇತಿಹಾಸ ಪ್ರಸಿದ್ಧವಲ್ಲವಾದರೂ ಇತಿಹಾಸ ನಿರ್ಮಿಸಬಲ್ಲ ಶಕ್ತಿಯೇನೋ ಇತ್ತು. ಈ ಶಕ್ತಿಯು ಸದುಪಯೋಗವಾಯಿತೇ ಇಲ್ಲ, ದುರುಪಯೋಗವಾಯಿತೇ ಈಗಲೇ ಏನೂ ಹೇಳುವಂತಿಲ್ಲ. ಆಂಧ್ರದಲ್ಲಿನ ಪ್ರತ್ಯೇಕತಾ ಚಳುವಳಿ, ರಾಷ್ಟ್ರಪತಿ ಅಭ್ಯರ್ಥಿಯ ಆಯ್ಕೆ, ಪಕ್ಷದ ಸಂಘಟನೆ ಮತ್ತು ಆರ್ಥಿಕ ನೀತಿ ಸೂಚಿಸಲಾಗುವುಗಳ ಜಗ್ಗೆ ಉಪಸಮಿತಿಗಳು ನೀಡಿದ್ದ ವರದಿ—ಇವೆಲ್ಲವೂ ಕಡಿಮೆ ಮಹತ್ವದವೆನ್ನಲಾಗದು. ಸದ್ಯಕ್ಕೆ ಕಾಂಗ್ರೆಸ್ಸನ್ನು ಅಧಿಕಾರ ಗದ್ದುಗೆಯಿಂದ ಇಳಿಸಿ, ಅದನ್ನು ವಿರೋಧ ಪಕ್ಷವೊಂದು ಆಸನ ಧರ್ಮಾದುದರಿಂದ ದೇಶದ ಆಗು ಹೋಗುಗಳ ಮೇಲೆ ಕಾಂಗ್ರೆಸ್ಸಿನ ನೀತಿ — ಸಡಾ ವಳಿಗಳು ನೇರವಾಗಿಯೇ ಪರಿಣಾಮ ಬೀರುತ್ತವೆ. ಹಾಗಾಗಿ ಕಾಂಗ್ರೆಸ್ ಕೈಕೊಂಡ ನಿರ್ಣಯಗಳಲ್ಲಿ ಜನಕ್ಕೆ ಆಸಕ್ತಿ ಹೆಚ್ಚಿಗೂ ಹೆಚ್ಚು.

ಪಕ್ಷದ ಸಂಘಟನೆ—ಪುನಾರಚನೆಯ ಆವಶ್ಯಕತೆ ಎಲ್ಲರಿಗೂ ತಿಳಿದಿದೆ ಪ್ರಾಥಮಿಕ ಸದಸ್ಯತನದ ಶುಲ್ಕ ಏರಿಕೆಯ ಸಲಹೆ ಪಕ್ಷದ ಅರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ನೆರವಾಗಬಹುದೆ; ಕಂಪೆನಿಗಳು ರಾಜ್ಯಕೀಯ ಪಕ್ಷಗಳಿಗೆ ದಾನನೀಡುವುದನ್ನು ಪ್ರತಿಬಂಧಿಸಿದ್ದರಿಂದ ರಾಜ್ಯಕೀಯ ಪಕ್ಷಗಳು ಹಣ ಸಂಪಾದಿಸಲು ಬೇರೆಯೇ ರಾಜಮಾರ್ಗವನ್ನು ಅರಸಬೇಕಾಗಿದೆ. ಆದರೆ, ಈ ಅಲ್ಪಪ್ರಮಾಣದ ಹೆಚ್ಚಳದ ಸಲಹೆ ಮಾತ್ರದಿಂದಲೇ ಎದ್ದ ಆಕ್ರೋಶ-"ಕಾಂಗ್ರೆಸ್ಸು ಬಿರ್ಲಾ ತಾತಾರಿಗೆ ಮಾತ್ರ ವಿಸಲಾಗಿರಬೇಕೆ?" ಇದು ಅಪ್ರಾಕಂಗಿಕವಲ್ಲವಾದರೂ ಪಕ್ಷೇಯ ಆರ್ಥವ್ಯವಸ್ಥೆಯ ನ್ನು ಸಂಘಪಡಿಸುವ ಇತರ ವಿಧಾನಗಳಿಲ್ಲದಿರುವಾಗ ಹೀಗೆನ್ನಲೇಬೇಕಾಗಿದೆ. ಕಾಂಗ್ರೆಸ್ ಶಾಸಕರು ತಮ್ಮ ವೇತನದ ಒಂದಂಶವನ್ನು ಪಕ್ಷಕ್ಕೆ ದೇಣಿಗೆಯಾಗಿ ಕೊಡಬೇಕೆನ್ನುವ ಸೂಚನೆಯೂ ಪ್ರತ್ಯಕ್ಷ ಕೆಂಬಲ ದೊರೆಯಲಿಲ್ಲ. "ಪದ ಸ್ಥರಿಂದ ನಿಮಗೆ ಹಣ ಬೇಕೇ ಸೇವೆ ಬೇಕೋ" ಎಂಬ ಪ್ರಶ್ನೆ ಮುಂದೆ ಬಂತು. ಖರಿಯ ಸೇವೆಯಿಂದ ಹಿಂದಲೇ ರಾಜ್ಯಕೀಯ ಪಕ್ಷ ಖಡುಕು ವುದಿಲ್ಲ. ತನ್ನ ಕಾರ್ಯಕಲಾಪಗಳಿಗೆ ಅದಕ್ಕೆ ಹಣವೂ ಬೇಕು. ಈ ಹಣವೆಷ್ಟಿಂದ ಖರಬೇಕು? ವಿದೇಶಗಳಿಂದ ಖರಬೇಕೆನು? ಮದ್ಯಪಾನದ ಪ್ರಶ್ನೆಯೂ ಹೀಗೆಯೇ. ಇದಕ್ಕೆ ಪ್ರತಿಬಂಧಕವಿದ್ದ ಶಾಸನವನ್ನು ಸಡಿಲುಗೊಳಿಸುವಲ್ಲಿ ಕಾಂಗ್ರೆಸ್ ಸರಕಾರವೇ ಅಧ್ಯರ್ಯವಾಯ್ತು. ಇದರ ನ್ಯಾಯೂನ್ಯಾಯಗಳ ಬಗ್ಗೆ ಪ್ರತಿ ಬಾರಿಯೂ ಚರ್ಚೆ ನಡೆಯುತ್ತಲೇ ಇದೆ. ಇಲ್ಲಿ ಭಾರಿ ಪ್ರಮಾಣದ ಮದ್ಯ ಮಾರಾಟವಾಗುತ್ತಲೇ ಇದೆ. ಒಂದು ನಿರ್ಣಯಕ್ಕೆ ಖರುವುದು ಸಾಧ್ಯವಾಗುವುದೂ ಇಲ್ಲ; ಪ್ರಾಯ: ಆದರ ಅಗತ್ಯವೂ ಇಲ್ಲ. ಕೆಲವು ಹಳಬರನ್ನು ಬಿಟ್ಟರೆ, ಉಳಿದವರಿಗೆ ಈ ವಿಚಾರದಲ್ಲಿ ಆಸಕ್ತಿಯಿಲ್ಲ. ಆದ್ದರಿಂದ ಹಳಬರ ತೃಪ್ತಿಗಾಗಿ ಚರ್ಚೆ—ನಿದ್ರೆಗೇಡು.

ಬೆಂಗಳೂರಲ್ಲಿ ತೆಲಂಗಾಣವಾದಿಗಳು ತಮ್ಮ ವಿಷಯವನ್ನು ಮೇಲೆ ಬರಲು ಪ್ರಯತ್ನಿಸಿದರು. ತೆಲಂಗಾಣ ಪ್ರಾದೇಶಿಕ ಕಾಂಗ್ರೆಸ್ಸಿಗೆ ರಾಷ್ಟ್ರಪತಿಯ ಮನ್ನಣೆ ಪಡೆಯಲು ಕೆಲವು ಪ್ರಮುಖ ಕಾಂಗ್ರೆಸಿಗರು ಬಯಸಿದ್ದರು. ಪ್ರತ್ಯೇಕ ತೆಲಂಗಾಣವಿಲ್ಲವೆಂದವರು ಕಾಂಗ್ರೆಸ್ಸಿಗೊಂದಕ ಪ್ರಾದೇಶಿಕ ಸಮಿತಿಯಿರುವುದನ್ನೂ ಒಪ್ಪಲಿಲ್ಲ ರಾಷ್ಟ್ರಪತಿ ಅಭ್ಯರ್ಥಿಯ ಆಯ್ಕೆಯು ಪ್ರಶ್ನೆಯಲ್ಲಿ ಒಮ್ಮತ ಕಂಡುಬರಲಿಲ್ಲ, ಪ್ರಧಾನಿ ಇಂದಿರಾ ಗಾಂಧಿಯವರೂ ಫಕ್ರುದ್ದೀನ್ ಅಲಿ ಮಹಮ್ಮದರೂ ಅಲ್ಪ ಸಂಖ್ಯಾಕರ ಪ್ರತಿನಿಧಿ ಜಗಜ್ಜೀವನರಾಮರನ್ನು ಬೆಂಬಲಿಸಿದರೆಂದೂ ಮಂತ್ರಾಜೀ ಚವ್ಹಾಣ್, ಎಸ್. ಕೆ. ಪಾಟೀಲ್ ಮತ್ತು ಕಾಮರಾಜರು ಸಂಜೀವ ರೆಡ್ಡಿಯವರಿಗೆ ಮತ ನೀಡಿದರೆಂದೂ ವರದಿ ಬಂದಿದೆ. ಹಾಗಾಗಿ ಕೇಲಂ ಸಂಜೀವ ರೆಡ್ಡಿಯವರು ಲೋಕಸಭಾ ಅಧ್ಯಕ್ಷ ಸ್ಥಾನಕ್ಕೆಂದು ಮೇಲೇರುವ ಸಂಭವ ಹೆಚ್ಚು. ಇನ್ನು ಪ್ರಧಾನಿ ಇಂದಿರಾ ಗಾಂಧಿಯವರು 'ತನ್ನ ಅಭ್ಯರ್ಥಿ' ಎಂದು ರೆಡ್ಡಿಯವರನ್ನು ಕರೆಯುವುದು ಬಾಕಿಯುಳಿದಿದೆ, ಅಥವಾ ಲೋನೆಯ ಗಳಿಗೆಯಲ್ಲಿ ಉಪರಾಷ್ಟ್ರಪತಿ ಗಿರಿಯವರ ಹೆಸರು ಮೇಲೆ ಬಂದರೂ ಬರಬಹುದು. ಅವರು ಎಲ್ಲರ ಅಭ್ಯರ್ಥಿಯಾಗುವ ಸಾಧ್ಯತೆಯಿದೆ. ನೀಲಂರ ಹೆಸರಿಗೆ ದೊರೆತ ಪುರಸ್ಕಾರವನ್ನು ಪ್ರಧಾನಿಯವರು ಹೇಗೆ ತಿಳಿದುಕೊಳ್ಳುತ್ತಾರೆ ಎಂಬುದು ಮುಖ್ಯ. ತನ್ನ ಸೋಲು ಎಂದು ಅವರು ಅರ್ಥ ಕಟ್ಟಲಾರರು. ರಾಜ್ಯಕೀಯ ವ್ಯಕ್ತಿಗಳು ಎಂದಿಗೂ ಸೋಲನ್ನು ಸೋಲೆಂದು ಒಪ್ಪುವುದಿಲ್ಲ.

ಎಲ್ಲಕ್ಕಿಂತ ಹಗರಣವೆಬ್ಬಿಸಿದ ಸಂಗತಿಯೆಂದರೆ, ಬ್ಯಾಂಕುಗಳ ರಾಷ್ಟ್ರೀಕರಣ ಸಂಬಂಧದಲ್ಲಿ ಪ್ರಧಾನಿಯವರು ಆನಿರೀಕ್ಷಿತವಾಗಿ ಕಳಿಸಿದ ಟಿಪ್ಪಣಿ. ಇದು ಆರಂಭದಲ್ಲಿ ಬಹಳ ಕೋಲಾಹಲಕ್ಕೆ ಕಾರಣವಾಯಿತು. ಬ್ಯಾಂಕುಗಳ ರಾಷ್ಟ್ರೀಕರಣವು ಕಾಂಗ್ರೆಸ್ ಬಹಳ ಹಿಂದೆಯೇ ಸ್ವೀಕರಿಸಿದ ನೀತಿ. ತಾನು ಅದನ್ನೇ ಈಡೇ ಪ್ರಸ್ತಾಪಿಸಿದ್ದೇನೆಯೆ ಎಂದು ಪ್ರಧಾನಿಯವರು ಸ್ಪಷ್ಟೀಕರಿಸಿದರು. ಅದೇನೋ ಹಿಂದಿನದಿನವಿದ್ದ ಗುಲ್ಲು ಗದ್ದಲಗಳೆಲ್ಲ ಮಾಯವಾದುವು. ಪ್ರಧಾನಿಯವರ ಟಿಪ್ಪಣಿಗಳು ಅವಿರೋಧವಾಗಿ ಸ್ವೀಕೃತವಾದುವು. ದೇಶದ ಐದಾರು ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡುವುದು ಅಥವಾ ಅವುಗಳ ಸಾಧನ ಸಂಪತ್ತಿನಲ್ಲಿ ಹೆಚ್ಚಿನ ಪಾಲನ್ನು ಸರಕಾರಿ ರಂಗಕ್ಕೆ ಭಂಡವಾಳವಾಗಿ ದೊರೆಯುವಂತೆ ಮಾಡುವುದು ಈ ಟಿಪ್ಪಣಿಗಳ ಮುಖ್ಯ ಆಶಯ. ಬ್ಯಾಂಕುಗಳ ವೇಲೆ ಸಾಮೂಹಿಕ ಹತೋಟಿಯನ್ನು ತಂದು ಆದೀಗ ನ್ಯಾಯೋಗಿಕ ಹಂತದಲ್ಲಿದೆ. ಹೆಚ್ಚಿನ ಬ್ಯಾಂಕುಗಳು ಇದಕ್ಕೆ ಹೊಂದಿಕೊಂಡು ಹೋದರೆತೊಡಗಿವೆ ರಾಷ್ಟ್ರೀಕೃತವಾದ ಜೀವ ವಿಮಾ ಸಂಸ್ಥೆಯು ಬಗ್ಗೆ ಜನ ಅಘಿಕೂಲಾಭಕಾರಿಯು ವ್ಯಕ್ತ ಪಡಿಸುತ್ತಿಲ್ಲ. ಆದರಿಂದ ಸರಕಾರಿಕ ಸೇವೆ ಲಭ್ಯವಿಲ್ಲವೆಂಬ ದೂರು ಎಲ್ಲರ ಬಾಯಿಂದಲೂ ಬರುತ್ತಿದೆ. ರಾಷ್ಟ್ರೀಕೃತ ಕೈಕಾರಿಕೆ — ಉದ್ಯಮಗಳೆಲ್ಲವೂ ಲಾಭದಾಯಕವಾಗಿ ನಡೆಯುತ್ತಿಲ್ಲ. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ಈ ಕೊರತೆಯಲ್ಲಿ ಏಕಸ್ವಾನ್ಯತೆಯನ್ನು ತಂದಲ್ಲಿ ಬ್ಯಾಂಕಿಂಗ್ ಸೇವೆ ಸಡಿಲುವುದಕ್ಕೂ ಜನ ಹಿಂದುಳಿದಾರು. ಖಾಸಗಿ ರಂಗದಲ್ಲಿ ಸ್ಪರ್ಧಾತ್ಮಕ ಮನೋಭಾವನೆಯಿರುತ್ತದೆ. ಎಲ್ಲವೂ ರಾಷ್ಟ್ರೀಕೃತವಾಯಿತೆಂದರೆ, ಈ ಸ್ಪರ್ಧೆ ಫಲ್ಲುತ್ತದೆ. ನೌಕರರಲ್ಲಿಯೇ ವೇಲುಗೈ ಹೊಗುತ್ತದೆ. ಸ್ಟೇಟ್ ಬ್ಯಾಂಕ್, ಅಂಚೆ ತಂತಿ, ರೈಲು ನೊದಲಾದ ಆವಶ್ಯಕ ಸೇವೆಗಳಲ್ಲಿ ಅಗಾಧ ನಷ್ಟವಾಗುತ್ತಿರುವ ಸಂಪತ್ತಿಗೆ ಇವಕ್ಕೂ ಖಡಿಯುತ್ತದೆ. ಇದರಿಂದ ಜನಕ್ಕೆ ಸರಳ-ಸುಲಭ ಬ್ಯಾಂಕಿಂಗ್ ಸೌಕರ್ಯ ದೊರೆಯುತ್ತದೆಂದು ಯಾರಾದರೂ ನಂಬಿದ್ದರೆ, ಅದು ಭ್ರಮೆ ಮಾತ್ರ.

ಬ್ಯಾಂಕು ರಾಷ್ಟ್ರೀಕರಣಕ್ಕೆ ಬೇಕಾದ ನೀತಿಯನ್ನು ಕಾಂಗ್ರೆಸ್ಸು ಹಿಂದೆಯೇ ಸ್ವೀಕರಿಸಿದೆ. ಆದರೆ, ಆಂದಿಗೂ ಇಂದಿಗೂ ತುಂಬ ಬದಲಾವಣೆಯಾಗಿದೆ. ಒಂದೊನ್ನೆ ಭಾಷಣಕಾರರು ರಾಜ್ಯರಚನೆಯನ್ನು ಕಾಂಗ್ರೆಸ್ಸು ಒಪ್ಪಿತ್ತು ಅದು ಹಳೆಯ ನೀತಿಯೆಂದು ಮೊನ್ನೆ ಮೊನ್ನೆಯವರೆಗೂ ದೇಶವೊಡೆಯುತ್ತಲಿತ್ತು. ಈಗ ಆ ನೀತಿ ಐಕ್ಯಕ್ಕೆ ಭಂಡಿತರಾಗುತ್ತದೆಂಬ ಮಾತು ನಾಯಕ ವರ್ಗದಲ್ಲೇ ಕೇಳಿಬರುತ್ತಿದೆ. ಇನ್ನು ವಿಭಜನೆಯಿಲ್ಲವೆಂಬ ನಿರ್ಣಯದೊಡನೆ ರಾಜ್ಯಗಳ ಸಂಖ್ಯೆ ಕಡಿಮೆಗೊಳಿಸುವ ಮಾತೂ ಕೇಳುತ್ತಿದೆ. ಪಾಕ್ಷಿಕ ಪ್ರತಿಬಂಧಕವನ್ನು ಅನ್ಯಾಯವಾಗಿದೆಂದು ಕೈಬಿಡಲಾಯಿತು. ಹಳೆಯು ಗೋಳಿಮರೆಯೆಂದು ನೇಣು ಹಾಕಿಕೊಳ್ಳುವುದು ಎಂದಿಗೂ ಸರಿಯಲ್ಲ. ಅದಿಷ್ಟರ ಮಟ್ಟಿಗೆ ವ್ಯವಹಾರ್ಯ ಮತ್ತು ಅನಿವಾರ್ಯವೆಂಬುದನ್ನು ಮೊದಲು ಮನನಮಾಡಬೇಕು. ಇಂದು ಖಾಸಗಿ ರಂಗದಲ್ಲಿ ಬ್ಯಾಂಕುಗಳು ನಾವುಂಡು-ತಾವುಂದು ಎಂದು ನೇವಣಾತಿ ಸಂಸ್ಥಿಸುತ್ತವೆ, ನಾಲಗೆಗಳನ್ನು ಫೀಡು ಕೊಡುತ್ತವೆ, ಸೇವೆಸಲ್ಲಿಸುತ್ತಿವೆ. ಈ ರೀತಿಯ ವ್ಯವಹಾರ ನಡೆಸುವುದು ಸರಕಾರಿ ವಲಯದಿಂದ ಸಾಧ್ಯವಿಲ್ಲ. ಅಂಚೆಮನೆಯ ಬ್ಯಾಂಕಿಂಗ್ ವ್ಯವಸ್ಥೆಯನ್ನು ಎಷ್ಟು ಜನ ಬಳಸುತ್ತಾರೆ? ಸರಕಾರಿ ವ್ಯವಹಾರಗಳಲ್ಲಿ ವಾದರೆ, ಸ್ಟೇಟ್ ಬ್ಯಾಂಕಿನ ವ್ಯವಹಾರವೆಷ್ಟು? ಇದರಿಂದ, ಸಾಮಾಜಿಕ ಹತೋಟಿಯು ಪರಿಣಾಮಕಾರಿಯಾಗುವುದೆಂಬುದನ್ನು ನೊದಲು ತೋರಿಕೊಂಡು, ಮುಂದೆ ಅಥಿವಾರ್ಯವೆನಿಸಿದರೆ ಮಾತ್ರ ರಾಷ್ಟ್ರೀಕರಣದತ್ತ ಮುಂದುವರಿಯಬೇಕು. ರಾಷ್ಟ್ರೀಕರಣವು ಭಂಡವಾಳದ ಅಕ್ಷಯ ಪಾತ್ರೆಯೆಂದಿಗೂ ಆಗದು. ಭಂಡವಾಳ ತೊಡಿಕೆಳ್ಳವಲ್ಲಿದ ಡಿದರೆ ಮಾತ್ರ ಅದು ಅಕ್ಷಯ ಪಾತ್ರೆಯಾಪಿತ್ತು. ರಾಷ್ಟ್ರೀಕೃತ ಉದ್ಯಮಗಳು ಈ ದಿಸೆಯಲ್ಲಿ ಕಾರ್ಯಶೀಲವಾಗುವ ಪಲ್ಲಕ್ಷಣಗಳು ಇದುವರೆಗೂ ಗೋಚರವಾಗಿಲ್ಲವೆಂದೇ ಹೇಳಬೇಕು.

ವಿಜಯ
ಪ್ರತಿದಿನ ಸಂಜೆ ಹೊರಡುವ
ದಿನಪತ್ರಿಕೆ
ಸಂಪಾದಕ. ಎ. ರಾಮಣ್ಣ
ವಿಜಯ ಪ್ರೆಸ್, ಮೈಸೂರು.

ಬಿಡಿ ಪತ್ರಿಕೆ 3 ಪೈಸೆ
ತಿಂಗಳ ಚಂದಾ 75 ಪೈಸೆ
ಅಂಚೆ ಮೂಲಕ ವರ್ಷಕ್ಕೆ ರೂ. 15-00
ಚಾಲ್ತಿರಾತು ದರಗಳಿಗೂ ಹೆಚ್ಚಿನ ವಿತರಣೆಗೂ ಖರೆಯಿರಿ.
ವಿಜಯ ಏಜನ್ಸೀಸ್, ಮೈಸೂರು-1

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26-4-1966.

ಗೇಹರಾಜ್ಯದಲ್ಲಿ

ಆಷಾಢ ಶ್ರಾವಣಗಳ ನಡುವೆ ಡೊಂಬರಾಟ

"ಕೇಳಿದ್ದೇನೆ?"

"ಏನನ್ನ?"

"ಪತ್ರಿಕೇಲಿ ಬಂದಿರೋ ಸುದ್ದಿ ಯನ್ನ...."

"ಏನಪ್ಪಾ, ಅಂಥಾದ್ದು?'

'ನಾನು ಏನೋ ಅಂತಿದ್ದೆ; ಈಗ ನೋಡುವಾಗ ಸರ್ವಾಸಿಲ್ವೆ?"

"ಎಂಥದ ?"

"ಅಲ್ವೆ, ನಿನ್ನ ಇಂದಿರಮ್ಮ...."

"ಏನಾಯ್ತು?"

"ಅಸೋದೇನು? ಪಾಪ, ಅತ್ತ ಹುಲಿ, ಇತ್ತ ದರಿ ಅನ್ನೋ ಸ್ಥಿತಿಯಿಂದ ಕೊಂ ಬಾಟವಾಡಿ ಜಾರಿಕೋ ಬೇಕೂಂತ."

'ಅಲ್ವಿ, ಅಂಥಾದ್ದು ಏನಾಯ್ತೋಗ?"

"ಅಲ್ವೆ, ನೋಡ , ಮೊನ್ನೆ ಬೆಂಗ್ಳೂರ ಲ್ಲಿ ಏಐಸಿಸಿ ಅಧಿವೇಶನ ನಡೀತು...."

"ಹೌದು..."

'ಈ ಅಧಿವೇಶನಕ್ಕೆ ನಿನ್ನ ಇಂದಿರಮ್ಮ

"ಅಡೇನು ನಿಮ್ಮಜ್ಜಿ ಅಲ್ಲವೆ?'

"ಫಮ್ಮ ಪ್ರಧಾನಿ, ನಿನ್ನ ಇಂದಿರಮ್ಮ"

"ಆಯ್ತಪ್ಪ, ಏನು?"

"ಆರ್ಥಿಕ ವಿಷಯಗಳ ಬಗ್ಗೆ ಟಪ್ಪಣಿ ಕಳಿಸಿದ್ದು ..."

"ಸರಿ, ಸರಕಾರದ ನಾಯಿಕೆಯೊಗಿ ಕಳಿಸಿದ್ದು, ಇದ್ರಲ್ಲಿ ತಪ್ಪೇನು? ಅಂದ್ರೆ, ಹಿಂದೆ ಯಾರೂ ಈ ರೀತಿ ಮಾಡ್ದಿ ಲ್ಲಂತಿಲ್ಲ?'

'ಹಿಂದಿನ ಕತೆ ಬಿಡು, ನೆಹರು ಇರು ವಾಗ, ಸರಕಾರವಿಟ್ಟ ಹೆಜ್ಜೆಯೇ ಸರಿ ಯೆನ್ನಬೇಕಾಗಿತ್ತು. ಕಾಂಗ್ರೆಸ್ಸು ಆ ಕಾಲ ಗತಕಾಲವಾಯ್ತು.'

'ಮತ್ತೆ ಇದ್ದಿಷ್ಟಿ ಪ್ರಧಾನಿಯದ್ದು ತಪ್ಪೇ ನಾಯ್ತಲ್ಲಾಂತ...."

"ತಪ್ಪು ಒಪ್ಪಿನ ಪ್ರಶ್ನೆ ಬೇ. ಆದರೂ ಇಷ್ಟು ಮುಂದೇವರಿಯ ಬಾರದಿತ್ತು ಅಂತಾರೆ. ಮುದುಕರು...."

"ಒಲ್ರೆ, ಯಾವ ವಿಷಯವದು?"

"ಬ್ಯಾಂಕುಗಳ ರಾಷ್ಟ್ರೀಕರಣದ ನೀ ತಿಯೊಂದು.... ಭೂಸುಧಾರಣೆ ಮತ್ತು ಸರ್ವಸ್ವಾಮ್ಯಹಿಯಂತ್ರಣವಿನ್ನೊಂದು.."

"ಹ್ಞೂಂ.... ಭೂಸುಧಾರಣೆ ಮತ್ತು ಸರ್ವಸ್ವಾಮ್ಯ ತ್ಯ ಹಿಯಂತ್ರಣ ಭಾರಿ ಹಳೆ ಯ ನೀತಿ. ಬ್ಯಾಂಕುಗಳ ಸಂಗತಿ ಕೆಲ ವರ್ಷಗಳ ಹಿಂದೆಯೂ ಬಂದಿತ್ತಿನ್ನಿ...."

"ಅದು ಸರಯೇ. ಆದರೆ, ಬೇರೆ ಬೇರೆ ಕಾರಣಗಳಿಂದ ಭೂಸುಧಾರಣೆಯ ಕೆಲ್ಸ ಭೂಮೂಲಿಕಕ್ಕಿದ ವಿಶ್ವಾಸ್ಯವನ್ನ ಹಿಯಂ ತ್ರಣವನ್ನೂ ಕಾಂಗ್ರೆಸ್ಸು ಸರಕಾರಕ್ಕು ಕಾರ್ಯಕೃತಗೊಳಿಸಿಲ್ಲ...."

'ಅದು ಬೇಡನೆ ಆಗಬೇಕೆನ್ನುತ್ತಾರೆ ಇಂದಿರಮ್ಮ. ಇದ್ರಲ್ಲಿ ತಪ್ಪೇನು."

"ತಪ್ಪು-ಒಪ್ಪಿನ ಪ್ರಶ್ನೆಯಲ್ಲ. ಈಗ ಭೂಸುಧಾರಣೆಯಿಂದ ಧನಿ-ಒಕ್ಕಲುಗಳ ನಡುವಣ ಮಧುರ ಸಂಬಂಧ ಕೆಡಿದು ಹೋಗಿದೆ. ಭೂಮಿಯನ್ನೇ ಜೀವನಕ್ಕೆ ನಂಬಿ ಕುಳಿತ ಭೂಮಾಲಿಕರೆಲ್ಲ ತಿರುಪೆಗೆ ತಿರುಗಬೇಕಾಗಿದೆ. ಈ ದಿಸೆಯಲ್ಲಿ ಕಾಂ ಗ್ರೆಸ್ ಇಟ್ಟ ಹೆಜ್ಜೆಯನ್ನು ಖಡಲಿಸಿ, ಒ ಕ್ಕಲುಗಳಿಗೆ ನ್ಯಾಯಗೇಣಿ-ಭದ್ರತೆಗಳ ನ್ನು ಒದಗಿಸಿ ಉಳಿದ ಪಕ್ಷಗಳಿಗೂ ಮಧ್ಯಮ ಮಾರ್ಗ ನಿರ್ಮಿಸಬೇಕೆಂಬ ಅ ಭಿಪ್ರಾಯವೂ ಕೆಲವರಲ್ಲಿರಬಹುದು...."

'ಅದರೆ ಇಂದಿರಮ್ಮ...'

"ಅವರು ಇದಕ್ಕೆ ಸಮ್ಮತಿಸಲ್ಲ. ಆದರ ಮೇಲೆ ಬ್ಯಾಂಕುಗಳ ಮೇಲೂ ವಕ್ರ ದೃಷ್ಟಿ..."

"ಅಲ್ರಿ, ಬ್ಯಾಂಕು ಅಂದರೆ, ಹಣ ಕೂ ಡಿಕೆಯ ಕೇಂದ್ರ. ಕೃಷಿ, ಕೈಗಾರಿಕೆಗಳು ತ್ವರಿತ ಅಭಿವೃದ್ಧಿ ಹೊಂದಬೇಕಾದ್ದು ಪ್ರಗ ತಿ ನಾಧನೆಗೆ ಅಗತ್ಯವಲ್ಲವೆ?"

"ಹೌದು, ಯಾರಲ್ಲಾಂತಾರೆ?"

"ಇದಕ್ಕಾಗಿ ಹೆಚ್ಚಿನ ಬಂಡವಾಳ ಬೇ ಕಲ್ಲವೆ?"

"ಕಂಡಿತಕ್ಕೂ ..."

"ಬ್ಯಾಂಕುಗಳ ರಾಷ್ಟ್ರೀಕರಣದಿಂದ ಈ ಬಂಡವಾಳ ಸಿಕ್ಕುತ್ತದೆಂದು ಇಂದಿರ ಮ್ಮನ ಅಭಿಪ್ರಾಯವಿರಬೇಕು."

"ಅಭಿಪ್ರಾಯವೇನೋ ಸರಿ. ಆದರೆ, ಅಧಿಕ ಬಂಡವಾಳ ಬೇಕೆನಿಸಿದರೆ, ರಾ ಷ್ಟ್ರೀಕರಣವೊಂದೇ ತಾರಕ ಮಂತ್ರ ವಲ್ಲ ..."

"ನತ್ತೆ?"

"ನೋಡ', 'ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿ' ಎಂಬ ಬೆಕ್ಕಿಟ್ ನಾಟಕವಾಡಿದರೆ; ಇದರ ಲಾಭಾಲಾಭ ಗಳು ತೀರ ಕಿರಾತಾದಾಯಕವಾಗಲಿಲ್ಲ. ಕೃಷಿ ಮತ್ತು ಉದ್ಯಮ ರಂಗಗಳಿಗೆ ಹೆಚ್ಚಿ ನ ಬಂಡವಾಳ ವಿನಿಯೋಗವಾಗುವಂತೆ ಮಾಡುವುದೇ ಇದರ ಉದ್ದೇಶ....'

"ಅದು ಸರಿ. ಆದರೆ, ಈ ಹತೋಟಿ ಯಿಂದ ಖಾಸಗಾರಂಗಕ್ಕೆ ಮಾತ್ರ ಬಂಡ ವಾಳ ಸರಕಾರಿ ಉದ್ಯಮಗಳಿಗೆ?'

"ಅದಕ್ಕೇಂತೆ? ಸರಕಾರಿ ಸಾಲಪತ್ರ ಮಾತ್ರಗಳ ಆಂಗೀಕೃತ ಭದ್ರತೆಗಳ ಮೇಲೆ ಕೊಡಗಿಸುವ ಬಂಡವಾಳದ ಪ್ರಮಾಣ ಹೆ ಚ್ಚು ಮಾಡಲಿ."

"ಅದು ಮಾಡಬಹುದು..."

'ಆದು ತಿಂಗಳ ಹಿಂದೆ ಹಾಟೆದ ಮಾತ ಫೇರವಾಗುವುದಿಲ್ಲವೆಂದು ಈಗಲೇ ಹೇಳಿ ಆದಕ್ಕೆ ಕತ್ತರಿ ಪ್ರಯೋಗ ಮಾಡುವುದು ಯಾವ ನ್ಯಾಯ? ಇನ್ನೂ ನಾಲ್ಕಾರು ವರ್ಷ ಕಾದು ನೋಡಲಿ. ಬ್ಯಾಂಕುಗಳು ಹೊಸ ವಾತಾವರಣಕ್ಕೆ ಹೊಂದಿಕೊಳ್ಳ ದೆ ಹೋದರೆ, ಆ ಮೇಲೆ ಮುಂದಿನ ಮಾತ . ಮತ್ತೂ ಒಂದು...'

'ಏನು?'

'ನಮ್ಮ ಸರ್ಕಾರಕ್ಕೆ ಈ ರಾಷ್ಟ್ರೀಕರಣದ ಹುಚ್ಚು ಇಷ್ಟು ಬೇಗನೇ ತಾಗಬಾರದಿತ್ತು...'

"ಯಾಕೆ ಹಾಗಂತೀರಿ? ಸಮೂಹವಾದ ಮೂದರಿಯ ಸಮಾಜ ಕಟ್ಟಹೊರಟವರು ನಾವು..."

'ಅಷು ಖರೆ. ಆದರೆ ನಮ್ಮ ಸಮಾಜ ಹೇಗಿದೆ?'

"ಏತಾಗಿದೆ ಸಮಾಜಕ್ಕೆ?"

"ಮತ್ತೆಲ್ಲಾ ಸರಿಯಿದೆ. ಆದರೆ, ಸಾ ಮಾಜಿಕ ಪ್ರಜ್ಞೆ ಮಾತ್ರ ಇನ್ನೂ ಮೂ ಡಿಲ್ಲ.'

"ಹ್ಞೂಂ...."

"ರಾಷ್ಟ್ರದಲ್ಲಿ ರಾಷ್ಟ್ರೀಯ ಪ್ರಜ್ಞೆ ಯಿಲ್ಲವೇ ಇಲ್ಲ.... ಅಲ್ಪ ಸ್ವಲ್ಪ ಅರಂಭ ದಲ್ಲಿ ಇದ್ದರೂ ಅದು ಫಲ್ಗುಣವಾ ಗಿದೆ."

'ಹ್ಞೂಂ...."

'ಇಂತಹ ದೇಶದಲ್ಲಿ ರಾಷ್ಟ್ರೀಕೃತ ಉದ್ಯಮಗಳು, ಸರಕಾರಿ ಒಡೆತನದ ಸಂಸ್ಥೆ ಗಳು, ಸರ್ವಾರ್ಥವಾಗಿ ದಡಿಯುತಿ ಲ್ಲವೆಂಬ ದೂರೂ ಇಂದು ಫಿನ್ನೆಯದಲ್ಲ."

"ಹ್ಞೂಂ...."

"ಹಾಗಿರುವಾಗ ರಾಷ್ಟ್ರೀಯ ಪ್ರಜ್ಞೆ ಜನತೆಯಲ್ಲಿ ಮೂಡದೆಹೋದರೆ, ರಾಷ್ಟ್ರೀ ಕರಣವೆಂದರೆ, ಜೀವಂತ ಸಮಾಧಿ ಅಂತ ಅರ್ಥ...."

"ಅದು ಸರಿನ್ನಿ. ಮತ್ತೆ ನಮ್ಮ ಇಂ ದಿರಮ್ಮ ದೂರಿಗೆ ಅದಕ್ಕೆ ಮುಂದಾದರು?"

"ಇಂದಿರಮ್ಮ ತಾನು ಯುವ ಕಾಂ ಗ್ರೆಸಿಗರ ನಾಯಿಕೆಯೆನಿಸಿಕೊಳ್ಳಬಯ ಸಿದಂತಿದೆ."

"ಅಂದರೆ?"

"ಅದೇ. ಇಂದಿನ ಯುವ ಕಾಂಗ್ರೆಸಿಗ ರು. ಅಂದರೆ, ಎಡಪಿಲ್ಲಿಗಳೂ ಎಡಪಿಲ್ಲಿಯ ವರ; ಪ್ರಕೃತದ ಫೀತಿಯ ಬಗ್ಗೆ ತೀವ್ರ ಅಕ್ಷರಾಭಿಪ್ರಾಯ ಹೊಂದಿರುವವರು...."

"ಓ, ಚಂದ್ರಶೇಖರ್, ಮೋಹನ್ ಧಾರಿಯೂ ಮುಂತಾದವರು...."

'ಹೌದು. ಅವರು ಇಂದಿರಮ್ಮನ್ನ ಟಪ್ಪಣಿಗಳನ್ನು ಬಹಳವಾಗಿ ಮೆಚ್ಚಿಕೊಂಡಿ ದ್ದಾರೆ."

'ಆದರೆ, ಹಳಬರು?'

'ಅವರದು ಆಷಾಢದ ಮೋಡುಗು —ಮಿಂಚು:—ಮಳೆ-ನೆರೆಯಲ್ಲ, ಶ್ರಾವಣ ಮಾಸದ ನದಿ-ಮೋಹಗಳು...."

'ಓ, ಈಗ ನೀವನ್ನೋ ಮಾತು ತಿಳಿಯಿತು...'

'ಏನು?'

'ಇಂದಿರಮ್ಮ ಎಡದಲ್ಲಿ ಎಡದಲ್ಲಿರುವ ವರನ್ನೂ ಬಲದಲ್ಲಿ ಬಲದಲ್ಲಿರುವವರನ್ನೂ ಸಮಧಾನಪಡಿಸುತ್ತ ತಾನೊಬ್ಬಳೇ ಇ ವರೆಲ್ಲರನ್ನೂ ಸಮನಾಗಿ ಒಯ್ಯಬಲ್ಲ ಸ ರ್ವಸಮರ್ಥೆಯೆಂಬುದನ್ನು ತೋರಿಸ ಹೊರಟಿದ್ದಾರೆ; ತಮ್ಮ ನಾಯಕತ್ವವನ್ನು ಬಲಪಡಿಸಕೊಡಗಿದ್ದಾರೆ ಅನ್ನೋದು ತಾ ಫೇ ನೀವು?'

'ನಾವ್ಯಾಕೆ ಹಾಗನ್ನಬೇಕು? ಇದ್ದ ರೂ ಇಗಬಹುದೇನೋ...'

'ಏನು?'

'ಏನೂ ಇಲ್ಲನ್ನೋ...'

"ಆಯ್ಕೋ ಪಾಪವೆ, ಉಸಿರ ವೈರಾ ಗ್ಯವಿದು!"

"ಹಾಗೇನೂ ಇಲ್ಲಾನ್ನೂ...."

"ಹೇಗೆ?"

"....ಹೀಗೆ...."

"ಶ್ಯೂ....."

—ಗೋರಾ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

Ex. Case 295/1968.

P.K. ಶ್ರೀನಿವಾಸ ರಾವ್—ಅರ್ಜದಾರ ಮತ್ತು

1. U. G ಶ್ರೀನಿವಾಸ ರಾವ್, ಗೋಪಾಲಕೃಷ್ಣ ಉಡುಪ್ಪರ ಮಗ,
2. U. ಕಮಲಾರಾವ್, ಗಂ/ ಎದ್ರಿ ಹೆಂಡ್ತಿ.— ಉಡ್ಪಿ ತಾಲ್ಲೂ ಶಿವಳ್ಳಿ ಗ್ರಾಮದ ಅಂಬಾಗಿಲು ಬಳಿ ಕಂಚಿ ಗಾರಗುಡಿ ಎಂಬಲ್ಲಿರುವವರು —ಎದ್ರಿರು ಇವರಿಗೆ

ಸದ್ರಿ ಎದ್ರಿರಿಗೆ ಯಿಂ ಮೂಲಕ ತಿಳಿಯಪಡಿ ಸುವುದೇನೆಂದರೆ :—

ಅರ್ಜದಾರನು ಉಪ್ಪಿ ಶಿವಳ್ಳಿ ಜಡ್ಡರ ಕೋರ್ಟು S C. 13/65 ನೇಗೆ ಪಡದ ಡಿಕ್ರಿ ಮೇಲೆ ನಡ್ಸಿದ ಮೇಲಿನ ಅಮಲ್ಜಾರಿ ಯಲ್ಲಿ ಯೆದ್ರಿರ ಹಕ್ಕಿನ ಸ್ಥಿರಾಸ್ತಿ ವಸ್ತುಗೆ ಜಪ್ತು ಮಾಡ್ಸಿರುತ್ತೆಂತಾಗಿಯೂ ಸದ್ರಿ ಜ ಪ್ತಿಯ ಪ್ರೊಹಿಬಿಟರಿ ಆರ್ಡರ ಯೆದ್ರಿರೀಗೆ ಆಯ್ಕೆರು ಸರ್ವ ಜ್ಯಾರಿ ಬಗ್ಗೆ ಸದ್ರಿ ಅಮಲ್ ಬ್ಯಾರಿಯು ತಾ. 2.8.1969ಕ್ಕೆ ಯಿಡೇತಾಗಿಯೆ ಎಂತಲೂ ಸದ್ರಿ ಅಮಲ್ಜಾರಿಯಲ್ಲಿ ಖಂಡು ಜಪ್ತಿಸಲಪೆಯೆದ್ದಕ್ಕೆ ಸದ್ರಿ ದಿನ್ನ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟ ನಲ್ಲಿ ಬಂದು ಜ್ಯಾಜೀರುಮಾಡಿಕೊಳ್ಳಕ್ಕೆ ದೆಂತಲೂ ಸಹಾ ಯಿ ಮೂಲಕ ತಿಳಿಸೋಣಾಗಿಯದೆ

B. Krishna Bhat,
Advocate for Petitioner.
Udipi. 9—7—69.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No — 1 28337, 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

READ & ADVERTISE IN NAVAYUGA WEEKLY

ಅವರು ಚಂದ್ರನಲ್ಲಿ ಕಾಲಿರಿಸಿದಾಗ

(ಮನುಷ್ಯ ಪೃಥ್ವಿಯಾಚೆಗೆ ಚಂದ್ರನ ನೆಲದಲ್ಲಿ ಕಾಲಿಡುವಾಗಿನ ದೃಶ್ಯ ಹೇಗಿರಬಹುದೆಂಬ ಬಗೆಗೆ ಲೇಖಕರೊಬ್ಬರ ಕಲ್ಪನೆ.)

ಲೇಖಕರು:— ಶ್ರೀ ವಾಲ್ಟರ್ ಫ್ರೋಲಿಚ್

ಯಾರೂ ಇದುವರೆಗೆ ಅಲ್ಲಿಗೆ ಹೋಗಿಲ್ಲ. ಕೋಟ್ಯಂತರ ವರ್ಷಗಳಿಂದ ಆಕಾಶದಲ್ಲಿರುವ ಚಂದ್ರನನ್ನು ಪ್ರಾಯಶಃ ಇದುವರೆಗೆ ಯಾವ ಜೀವಿಯೂ ಸ್ಪರ್ಶಿಸಿಲ್ಲ.

ಈಗ ಅದು ಬದಲಾಗಿದೆ. 1969ರ ಜುಲೈ ತಿಂಗಳು... ಮಾನವಸಹಿತ ಗಗನವಾಹನವೊಂದು ಸುರುಳಿಬಾಂಬಿರುವ ತಪ್ಪ ನಾಲ್ಕು ಪಾದಗಳ ಸಹಿತ ಚಂದ್ರನ ನೆಲದ ಮೇಲೆ ವ್ಯೋಮಯಾನ ಇಳಿದಿದೆ. ವಾಹನನೊಳಗಿರುವ ಭೂಲೋಕವಾಸಿಗಳು ಹೊರಬರಲು ಹವಣಿಸುತ್ತಿದ್ದಾರೆ.

.... ಅವರಿದ್ದಿಗೆ ಬಂದು ಆಗಲೇ 15 ಗಂಟೆಗಳಾದವು. ವಾಹನ ಇಳಿಯುವ ಸಮಯದಲ್ಲಿ ಕಂಡ ದೃಶ್ಯ ಮತ್ತು ವಾಹನದ ಎರಡು ಚಿಕ್ಕ ಪ್ರತಿರೋಧಾಕೃತಿಯ ಕಿಟಕಿಗಳ ದ ಕಿರಿದ ಕ್ಷಣನೂಕ್ಷದ ನೋಟಗಳನ್ನು ಬಿಟ್ಟರೆ ಅವರು ಇನ್ನೂ ಚಂದ್ರನನ್ನು ಅತಿ ಸವಿೂಪದಲ್ಲಿ ನೋಡಿಲ್ಲ.

ಚಂದ್ರನಲ್ಲಿಳಿದೊಡನೆಯೇ, ತಮ್ಮ ಸುರಕ್ಷಿತತೆಯ ಬಗ್ಗೆ ಗಮನಕೊಡುವುದು ಅವರ ಪ್ರಥಮ ಕರ್ತವ್ಯ. ಅವಕಾಶದ ಸಮಯದಲ್ಲಿ ವಾಹನಕ್ಕೆ ಅಪಾಯವಾಗುವ ಸಂಭವಗಳನೆನೆ, ಅದರಿಂದ ಅವರು ವಾಹನ ಮತ್ತು ಅದರ ಎಲ್ಲ ವ್ಯವಸ್ಥೆಯ ಪರೀಕ್ಷೆ ಮಾಡಬೇಕು. ಅವರು ಚಂದ್ರನೀಕ್ಷೆಯಲ್ಲಿರುವಾಗ ವಾಹನವೇ ಅವರ ವಾಸ ಹಾಗೂ ಕಾರ್ಯಕ್ಷೇತ್ರವಾಗಿರುವುದು; ಹಾಗೂ ಅಲ್ಲಿಂದ ಬಂದಿರಲು ಇರುವ ಏಕೈಕ ಸಾಧನವಾಗಿರುವುದು.

ಹಾಸಾಟದ ಯೋಜನೆಯು ಮೇರೆಗೆ, ಮುಂದೆ ಕೈಕೊಳ್ಳಲಿರುವ ಅಪಾಯಕರ ಕಾರ್ಯಗಳಲ್ಲಿ ತೊಡಗುವ ಮುನ್ನ ಆಹಾರ ತೆಗೆದ ಕೊಂಡು 8 ಗಂಟೆಗಳ ಕಾಲ ನಿದ್ರಿಸಿದರು.

ಅವರು ಕಿಟಕಿಗಳು ಮೂಲಕ ಇಣಿಕಿಸಿದಾಗ ಅವರ ಕಣ್ಣುಗಳು ಕಂಡರಿಯದ ಅಪರೂಪದ ದೃಶ್ಯವನ್ನು ನೋಡಿದವು. ಅವರ ಮುಂದೆ ಬೇರೆಯಂದು ನಿಸರ್ಗದ ಪ್ರಪಂಚ ಹರಡಿದೆ. ಸವಿೂಪದಲ್ಲಿಯೇ ಜ್ವಾಲಾಮುಖಿಯ ಕಂದರಗಳಿಂದ ಕೂಡಿದ, ಕಲ್ಲುಗಳು ಹರಡಿರುವ ಮರುಭೂಮಿ.

ಅನೇಕ ಶತಮಾನಗಳಿಂದ ಸಂಗ್ರಹಿಸಿರುವ ಸಾಕ್ಷ್ಯಾಧಾರಗಳ ಪ್ರಕಾರ, ಮತ್ತು ಇತ್ತೀಚಿನ ವರ್ಷಗಳಲ್ಲಿ ಗಗನವಾಹಕಗಳ ಮೂಲಕ ಸಂಗ್ರಹಿಸಲಾಗಿರುವ ಮಾಹಿತಿಗಳ ಪ್ರಕಾರ ಇದುವರೆಗೆ ಯಾವುದೇ ಪ್ರಾಣಿ ಅಥವಾ ಸಸ್ಯ ಕ್ರಿಮಿ ಅಥವಾ ಬ್ಯಾಕ್ಟೀರಿಯಾಗಳು ಈ ಪ್ರದೇಶದ ನೆಸ್ಸು ದಿಯನ್ನು ಕಲಕಿಲ್ಲ ಅಥವಾ ಅವರ ಪ್ರಶಾಂತತೆಗೆ ಧಕ್ಕೆಯುಂಟುಮಾಡಿಲ್ಲ. ಇಲ್ಲಿನ ಪ್ರಕೃತಿ ಅಸ್ಪರ್ಶಿತ.

ಅದರ ಇಳಿಯಲು ಆಯ್ಕೆ ಮಾಡಲಾಗಿರುವ ಜಾಗ ಇಯಲಾದ "ಪ್ರಶಾಂತ ವಲಯ"ದಲ್ಲಿ ಚಿಕ್ಕ ಕಂದರಗಳನ್ನೇ ಇನೆ. ಈ ಪ್ರದೇಶದ ಸ್ವರೂಪ ಅತ್ಯಂತ ವ್ಯತ್ಯಾಸ ಹಾಗೂ ಮಟ್ಟಸವಾಗಿರುತ್ತದೆ ಸ್ಥಳ ಇದು.

.... ಗಗನಯಾನಿಗಳೀಗ ಧಾರವಾದ ಗಗನದುಡುಪುಗಳನ್ನು ಧರಿಸಿ, ವಾಹನದ ಹೊರಗೆ ಕೈಕೊಳ್ಳಬೇಕಾಗಿರುವ ಆಶ್ಚರ್ಯ ಸಾಹಸಗಳಿಗೆ ಸನ್ನದ್ಧರಾಗಿದ್ದಾರೆ. ವಾಹನದಿಂದ ಹೊರಬರಲು, ಭೂಮಿಯ ಸ್ಥಿರವ ಹಾಗಾಟದ ಡೈರೆಕ್ಟರಿಂದ ಅಂತಿಮ ಆಜ್ಞೆ ದೊರೆಯಬೇಕಾಗಿದೆ.

ಮೇಲೆ ಸುಮಾರು 70 ವೈಲಿಗಳೆತ್ತರದಲ್ಲಿ ಅಪೊಲೋ ಮೂಕಸ್ಥಾನಿಕೆ ಕಕ್ಷೆಯಲ್ಲಿ ಸಂಚರಿಸುತ್ತಿರುವ ದೃಶ್ಯ ಈಗ ಕಾಣಿಸುತ್ತಿದೆ. ಚಂದ್ರನಲ್ಲಿರುವ ಗಗನಯಾನಿಗಳಿಗೆ ಮೂಕಸ್ಥಾನಿಕೆಯ ವಾಹನವ ಸಹಿತ ಸಂಪರ್ಕ ಉದಗ್ರಜವಾಗಿದೆ. ಆ ಗಗನಯಾನಿಗಳು ಮತ್ತು ಭೂವಿಯಲ್ಲಿನ ರತಿಗಾಮಿಕ ತಂಡದವರ ನಡುವಣ ವಿಚಾರವಿನಿವಿಯಗಳಿಗೆ ರೇಲೇ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು. ಚಂದ್ರವಲ್ಲರಿಯ ಮನುಷ್ಯರಿಗೆ ತಮ್ಮ ಚಂದ್ರಾವತರಣ ವಾಹನದಿಂದಲೇ ಭೂವಿಯೊಂದಿಗೆ ನೇರ ಸಂಪರ್ಕ ಪಡೆಯಲೂ ಸಾಧ್ಯವಿದೆ.

ಗಗನಯಾನಿಗಳ, ಮೂಕಸ್ಥಾನಿಕೆಯಲ್ಲಿರುವ ತಮ್ಮ ಸಹಯಾತ್ರಿಕನೊಂದಿಗೆ ಹಾಗೂ ಭೂಮಿಯಲ್ಲಿರುವ ಗತಿಗ್ರಾಹಕ ಹಾಗೂ ಸಂಪರ್ಕ ಕೇಂದ್ರಗಳೊಡನೆ ಸಂಭಾಷಿಸುವರ.

...ಊಹಿಸಲೂ ಸಾಧ್ಯವಾಗದಂತ ಒಂದು ಕಲ್ಪನೆ, ಮಾನವನಷ್ಟೇ ಪುರಾತನವಾದ ಬಯಕೆ ಈಗ ಫಲವಾಗುತ್ತಿದೆ....

ಗಗನಯಾನಿಗಳು ನಿಧಾನವಾಗಿ ಬೋಲ್ಟ್ ತಿರುಗಿಸಿ ತಮ್ಮ ವಾಹನದ ಕಂಡಿಯನ್ನು ತೆರೆಯುತ್ತಾರೆ.

ಭಾರವಾದ ಗಗನದ ಡುಪು ಧರಿಸಿದ ಯಾತ್ರಿಯೊಬ್ಬ ಬಹು ಎಚ್ಚರಿಕೆಯಿಂದ ಕಂಡಿಯೊಳಗಿಂದ ನುಸುಳಿ ಹೊರಬರುತ್ತಾನೆ. ಮೊದಲು ಒಂದು ಕಾಲನ್ನು ಹೊರಗಿಟ್ಟು ಅನಂತರ ಇನ್ನೊಂದನ್ನು ಕರಿದಾದ ಪ್ಲಾಟ್‌ಫಾರಂ ಮೇಲಿಡ ತ್ತಾನೆ. ಈ ಪ್ಲಾಟ್‌ಫಾರಂಗೆ ಗಗನಯಾನಿಗಳಲ್ಲಿರುವ ಅಡ್ಡ ಹೆಸರು "ಮೋರ್ಸ್". ಒಂದು ಕ್ಷಣ ಕಾಲಕೆಳಗಿರುವ ಹೊಸ ಪ್ರಪಂಚವನ್ನು ಅವಲೋಕಿಸುತ್ತಾನೆ, ಅನಂತರ ಚಂದ್ರನ ನೆಲಕ್ಕೆ ಕರೆಯೊಯ್ಯುವ ಏಣಿಯ ಮೊದಲ ಮೆಟ್ಟಿಲ ಮೇಲೆ ಕಾಲಿಡುತ್ತಾನೆ

ಭೂ ಕೇಂದ್ರಗಳಲ್ಲಿ ಗಗನಯಾನಿಗಳೊಂದಿಗೆ ನಡೆಸುವ ರೇಡಿಯೋ ಸಂಭಾಷಣೆಗಳನ್ನು ಬಿಟ್ಟು ಬಾಕಿ ಎಲ್ಲವೂ ನಿಶ್ಶಬ್ದವಾಗಿರುತ್ತದೆ. ನೆರೆಗಳಲ್ಲಿ ಪಟ್ಟಣಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಎಲ್ಲೆಲ್ಲಿ ರೇಡಿಯೋ ಹಾಗೂ ಟೆಲಿವಿಷನ್ ಸೆಟ್‌ಗಳಿವೆಯೋ ಅಲ್ಲೆಲ್ಲಿ ಪ್ರಿಸ್ಕ್ರಿಪ್ಷನ್ ಪರದೆಗಳು ನೀರವದಿಸ್ತಬ್ಧವಾಗಿರುತ್ತವೆ. ಸುಮಾರು 250,000 ವೈಲಿಗಳ ದೂರದಲ್ಲಿ ನಡೆಯುತ್ತಿರುವ ಪರಮಾದ್ಭುತ ಘಟನೆಗಳನ್ನು ನೋಡಲು ಉದ್ಯುಕ್ತರಾಗಿರುವರು.

ಗಗನಯಾನಿ ಈಗ ಏಣಿಯ ಕಟ್ಟಕಡೆಯ ಮೆಟ್ಟಿಲನ್ನು ಸವಿೂಪಿಸಿದ್ದಾರೆ.

ಭೂಮಿಯಲ್ಲಿರುವ ಜನ ನಮ್ಮ ಉಸಿರನ್ನು ಬಿಗಿ ಹಿಡಿದಿದ್ದಾರೆ.

ಗಗನಯಾನಿ ಈಗ ವಾಹನದ ತೆರೆದ ಕಿಂಡಿಯಲ್ಲಿ ನಿಂತಿರುವ ತನ್ನ ಸಹಯಾತ್ರಿಕನ್ನು ನೋಡಿ ತ್ತಾನೆ, ಅನಂತರ ಇಬ್ಬರೂ ಮೇಲೆ ನೋಡತ್ತಾರೆ.

....ಅದೊಂದು ಅದ್ಭುತ ದೃಶ್ಯ. ಚಿರಸ್ಮರಣೀಯ ಗಳಿಗೆ

ದಿಗಂತದ ಎತ್ತರದಲ್ಲಿ, ತೂಗುಬಿಟ್ಟಿರುವ ಅರ್ಧ ಗೋಳಾಕೃತಿಯ ಭೂಮಿ ಕಪ್ಪು ಆಕಾಶದಲ್ಲಿ ಮೆಲ್ಲಿಗೆ ತಿರುಗುತ್ತದೆ. ಬೆಳಕಿನಿಂದ ಕೂಡಿರುವ ಭೂಮಿಯ ಅರ್ಧ ಮುಖ ನೀಲಿ ಸಾಗರಗಳಿಗೆ, ಕಂದು ಬಣ್ಣದ ಭೂಭಾಗಗಳಿಗೆ ಹಾಗೂ ಬೆಳ್ಳಿಮೋಡಗಳಿಗೆ ಒಂದು ವರ್ಣರಂಜಿತ ದೃಶ್ಯವಾಗಿ ತೋರುತ್ತದೆ. ಗಗನಯಾನಿಗಳು ಚಂದ್ರನಲ್ಲಿರುವ 24 ಗಂಟೆಗಳ ಅವಧಿಯಲ್ಲಿ ಭೂಮಿ ಒಂದುಬಾರಿ ಪೂರ್ತಿ ಪರಿಭ್ರಮಿಸುವುದು.

ಚಂದ್ರನಲ್ಲಿ ನಡೆಯುವುದು ಭೂಮಿಯು ಮೇಲೆ ನಡೆಯುವಷ್ಟು ಸುಲಭವಲ್ಲ ಎಂದು ಹಿಂದೆ ನಡೆಸಿದ ಅಭ್ಯಾಸಗಳಿಂದ ಗಗನಯಾನಿಗಳಿಗೆ ತಿಳಿಸಿದೆ. ಚಂದ್ರನ ಗುರುತ್ವ ಶಕ್ತಿಯು ಭೂಮಿಯದರ ಆರನೇ ಒಂದರಷ್ಟು ಮಾತ್ರ. 24 ಪೌಂಡ್ ತೂಕದ ಗಗನದಿಡುಪು, ಮತ್ತು ಬೆನ್ನ ಮೇಲೆ ಹೊತ್ತಿರುವ 120 ಪೌಂಡ್‌ಗಳ ಆಕ್ಸಿಜನ್ ಪ್ಯಾಕ್, ಇವೆಲ್ಲ ಸೇರಿಯೂ ಕೂಡ ಮನುಷ್ಯ ಚಂದ್ರನಲ್ಲಿರುವಾಗ ಕೇವಲ 15 ಪೌಂಡುಗಳಷ್ಟು ತೂಕ ಇರುವಂತೆ ಮಾಡಿದೆ. ಸಾಂದ್ರವಾಯಕ ರೀತಿಯಲ್ಲಿ ನಡೆಯಲು ಪ್ರಯತ್ನಿಸಿದರೆ ಅತಿ ಕೆಳಗೆ ಬೀಳುವಂತೆ

ಭೂವಿಯಲ್ಲಿ ನಿರೀಕ್ಷಣೆಗಳಿಂದಾಗಿ ಈ ಹಿಂದೆ ಸೈನ್ಯೆಯುರಿಸಲು ಅವನು ಸಿದ್ಧನಾಗಿದ್ದಾನೆ ಇಗೆ ಚಂದ್ರನ ಮೇಲೆ ಮಾನವನ ಒಡಾಟಕ್ಕೆ ನಡಿಗೆ ಎಷ್ಟಾಲಾಮುವುದಿಲ್ಲ, ಅದು ಕಾರ್ಯಸಮರ್ಥ. ಗಗನಯಾನಿ ಕಾರ್ಯಗಳು ತ್ತಾ ಚಂದ್ರನಲ್ಲಿ ಓಡಾಡುವನು.

ಈಗವನು ಭೂಮಿಯಲ್ಲಿ ವಿಶ್ಲೇಷಣೆಗೊದಗಿಸುವ ಸಲುವಾಗಿ ಬೇರೆ ಬೇರೆ ಚಂದ್ರನ ನೆಲದ ಕಲ್ಲುಗಳನ್ನು ಆಯು

(ಎಂಟನೇ ಪುಟ ನೋಡಿರಿ)

ಕೃಷಿ ಬಾಹ್ಯವನ್ನು ಉಣಿಸುತ್ತವೆ

ಸಿಂಡಿಕೇಟ್ ಬ್ಯಾಂಕು ಕೃಷಿಯನ್ನು ಪೋಷಿಸುತ್ತವೆ

ಆಧುನಿಕ ಕೃಷಿ ಪದ್ಧತಿಯು ಬರಕೆಯೇ ರಂಪ್ಪವನ್ನು ಸ್ವಯಂಪೂರ್ಣಗೊಳಿಸಿ, ನಾಡಿನ ಆರ್ಥಿಕ ಬದುಕನ್ನು ಸುಭದ್ರ ಅಡಿಪಾಯದ ಮೇಲೆ ನಿಲ್ಲಿಸುವುದ;

ಹೊಲದ ಸಾಗುವಳಿಯಲ್ಲಿ ಯಾಂತ್ರೀಕರಣ ಮತ್ತು ನವೀನ ವಿಧಾನದ ಅಳವಡಿಕೆ ಮುಂತಾದ ಸಾಧ್ಯಗೊಳಿಸಲು ಸಿಂಡಿಕೇಟ್ ಬ್ಯಾಂಕು ನಾಡಿನ ಕೆಲವೊಂದು ಆಯ್ದ ಪ್ರದೇಶಗಳ ಕೃಷಿಕರಿಗೆ ಫೀರಾವರಿ ಸಂಪುಸೆಟ್ಟು, ಟ್ರಾಕ್ಟರು ಮುಂತಾದ ಕೃಷಿ ಉಪಕರಣಗಳನ್ನು ಕೊಂಡುಕೊಳ್ಳಲು ಹಣದ ನೆರವನ್ನು ಕೊಡಿಸಿದೆ.

ಸಿಂಡಿಕೇಟ್ ಬ್ಯಾಂಕು ಕೃಷಿರಂಗಕ್ಕೆ ಇನ್ನೂ ಮಿಗಿಲಾಗಿ ಮತ್ತು ವ್ಯಾಪಕ ನೆಲೆಯಲ್ಲಿ ನೆರವನ್ನು ನೀಡಲು ಬಯಸುತ್ತದೆ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಮಣಿಪಾಲ, ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ರಾಜ್ಯ)

ಸಾಧನೆಯ ಸಂಕ್ಷಿಪ್ತ:	ಶಾಖೆಗಳು	ಟಿ. ಎ. ಪೈ
ರೂ. 110 ಕೋಟಿ.	300ಕ್ಕೂ ಮಿಕ್ಕಿ	ಚೇರ್‌ಮೇನ್

ಹೈಸ್ಕೂಲುಗಳಿಗೆ

ನವಯುಗ

ರಾಜ್ಯದ ಡಿ. ಪಿ. ಐ. ಯವರು ನವಯುಗ ವಾರಪತ್ರಿಕೆಯನ್ನು ರಾಜ್ಯದ ಹೈಸ್ಕೂಲು ಮತ್ತು ಸಾರ್ವಜನಿಕ ವಾಚನ ಭಂಡಾರಗಳಿಗೆ ತಮ್ಮ ನಂ. ಸಿ. ಎಲ್. 4. 17–4/65—66ರ ಪತ್ರದಂತೆ ಸಿಫಾರಸು ಮಾಡಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇನೆ. ಈ ವರೆಗೆ ಚಂದಾದಾರರಾಗಿರದ ಎಲ್ಲಾ ಹೈಸ್ಕೂಲಿನವರೂ ನವಯುಗವನ್ನು ಶಂಸಿಕೊಂಡು ಪ್ರೋತ್ಸಾಹಿಸುವಂತೆ ವಿನಂತಿಸುತ್ತೇನೆ.

ವಾರ್ಷಿಕ ಚಂದಾ ರೂ. 10/- ಮಾತ್ರ.

ಮೆನೇಜರ್, ನವಯುಗ, ಉಡುಪಿ.

ಯಶಸ್ವಿ ಪ್ರಜಾತಂತ್ರದ ಸಂಕೇತ: ಕಾಶ್ಮೀರದ ಉಪಚುನಾವಣೆ

ಕಾಶ್ಮೀರ ವಿಧಾನಸಭೆಯಲ್ಲಿ ತೆರವಾಗಿದ್ದ ಸ್ಥಾನಗಳನ್ನು ತುಂಬಲು ಇತ್ತೀಚೆಗೆ ನಡೆದ ಉಪಚುನಾವಣೆಗಳಿಂದ ಆ ರಾಜ್ಯದಲ್ಲಿ ಪ್ರಜಾತಂತ್ರ ಸಂಪೂರ್ಣವಾಗಿ ಕಾರ್ಯಶೀಲವಾಗಿರುವದಲ್ಲದೆ ಬೇರೆಬಿಟ್ಟಿರುವುದು ಗೋಚರವಾಗುತ್ತದೆ. ಉಪಚುನಾವಣೆಯಲ್ಲಿ ಸ್ಪರ್ಧಿಗಳ ನಡುವೆ ತೀವ್ರ ಸ್ಪರ್ಧೆಯಿದ್ದಿತು. ಮತದಾರರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದರು. ಈ ಘಟನೆಗಳು ಉಪಚುನಾವಣೆಯ ಬಗ್ಗೆ ಕಳವಳ ಹೊಂದಿದ್ದವರ ಶಂಕೆ ನಿರಾಧಾರವೆಂಬುದನ್ನು ಪ್ರದರ್ಶಿಸಿತು. ಕಾಶ್ಮೀರದ ಜನತೆ ಮತದಾನದ ಹಕ್ಕನ್ನು ಚಲಾಯಿಸಿ ಪ್ರಜಾತಂತ್ರದ ಹಕ್ಕನ್ನು ಸ್ಥಾಪಿಸಿದರು.

ಸೋಪೋರೆ ಕ್ಷೇತ್ರದ ಚುನಾವಣೆ ಕೊನೆಯಲ್ಲಿ ನಡೆಯಿತು. ಈಪ್ರದೇಶ ಅಧಿಕ ಹಿಮಪಾತವಾದುದರಿಂದ ಚುನಾವಣೆಯನ್ನು ಮುಂದೂಡ ಬೇಕಾಯಿತು. ಇಂತಹ ಸನ್ನಿವೇಶದಲ್ಲೂ ಈ ಕ್ಷೇತ್ರದಲ್ಲಿ 9,000 ಮತದಾರರು ಹಕ್ಕನ್ನು ಚಲಾಯಿಸಿದರು. ಎಂಟು ಸ್ಪರ್ಧಿಗಳು ಚುನಾವಣೆ ಕಣದಲ್ಲಿದ್ದರು. ಈ ಕ್ಷೇತ್ರದಲ್ಲಿ 1967ನೇ ಇಸವಿಯಲ್ಲಿ ಕೇವಲ ಮೂವರು ಸ್ಪರ್ಧಿಗಳಿದ್ದರು. ಈ ವರ್ಷದ ಚುನಾವಣೆಯಲ್ಲಿ ಎಂಟು ಸ್ಪರ್ಧಿಗಳಿದ್ದುದು ಕಾಶ್ಮೀರದ ಜನತೆ ರಾಜ್ಯದಲ್ಲಿ ಪ್ರಜಾತಂತ್ರವನ್ನು ಬಲಪಡಿಸುವರೆಂಬುದಕ್ಕೆ ನಿದರ್ಶನವಾಗಿದೆ.

ಈ ವರ್ಷ ಏಪ್ರಿಲ್ 27 ರಂದು ಬೀರ್ವಾ, ಪುಲ್ವಾರಬಾಲ್, ಸೋಪೋರಾವರಿ ಮತ್ತು ರಾಜಪುರ ಕ್ಷೇತ್ರಗಳಲ್ಲಿ ಚುನಾವಣೆ ನಡೆಯಿತು. ಈ ಉಪ ಚುನಾವಣೆಯ ಸ್ಪರ್ಧೆಯಲ್ಲಿ, ಕಾಂಗ್ರೆಸ್ ಪಕ್ಷವನ್ನು ಸ್ಥಾನ ಗಳಿಸಿತು. ಮತ್ತೊಂದು ಸ್ಥಾನ ಸ್ವತಂತ್ರವಾಗಿ ನಿಂತಿದ್ದ ಅಭ್ಯರ್ಥಿಗೆ ದೊರಕಿತ.

ಸ್ವಾತಂತ್ರ್ಯೋದಯ ಕಾಲದಿಂದ ಈ ರಾಜ್ಯದಲ್ಲಿ ನಡೆದಿರುವ ಎಲ್ಲ ಚುನಾವಣೆಗಳ ಫಲಿತಾಂಶವು ಕಾಶ್ಮೀರಿಗಳು ತಮ್ಮ ಹಕ್ಕನ್ನು ಸ್ಥಾಪಿಸಿರುವ ಅಂಶವನ್ನು ಪ್ರತ್ಯಕ್ಷಪಡಿಸುತ್ತದೆ. ಕಾಶ್ಮೀರ ರಾಜ್ಯದಲ್ಲಿ ಪ್ರಥಮ ಚುನಾವಣೆಯು 1951ನೇ ಇಸವಿಯಲ್ಲಿ ನಡೆಯಿತು. ಆಗ ಶ್ರೀ ಷೇಕ ಅಬ್ದುಲ್ಲ ರಾಜ್ಯಸರ್ಕಾರದ ನಾಯಕರಾಗಿದ್ದರು. ಇವರ ಅಡಳಿತ ಕಾಲದಲ್ಲಿ "ರಾಷ್ಟ್ರೀಯ ಸಮ್ಮೇಳನ" ಎಂಬ ಏಕೈಕ ರಾಜಕೀಯ ಪಕ್ಷವಿದ್ದಿತು. ಈ ಪಕ್ಷದ 75 ಸ್ಪರ್ಧಿಗಳು ಚುನಾವಣೆಯಲ್ಲಿ ಭಾಗವಹಿಸಿ ಎಲ್ಲರೂ ಆಯ್ಕೆಗೊಂಡರು. ಆದರೆ ರಾಜಕೀಯ ಪಕ್ಷಗಳ ವಿಕಾಸದಿಂದ ಜಮ್ಮು-ಕಾಶ್ಮೀರರಾಜ್ಯದಲ್ಲಿ ಇಂದು ಅನೇಕ ರಾಜಕೀಯ ಪಕ್ಷಗಳಿವೆ. ಇಲ್ಲಿ ಕಾಂಗ್ರೆಸ್, ಜನಸಂಘ ಹಾಗೂ ಸ್ವತಂತ್ರ ಪಕ್ಷಗಳ ರಾಜ್ಯಶಾಖೆಗಳು ಕಾರ್ಯಶೀಲವಾಗಿವೆ.

1967ನೇ ಇಸವಿಯಲ್ಲಿ ನಡೆದ ಚುನಾವಣೆ ಅಪೂರ್ವ ರೀತಿಯಲ್ಲಿ ಅಪೂರ್ವ ನೆನಿಸಿಕೊಂಡಿತು; ಈ ಚುನಾವಣೆ ಕಾಶ್ಮೀರದಲ್ಲಿ ಪ್ರಜಾತಂತ್ರದ ಪ್ರಗತಿಯ ಸಂಕೇತವಾಗಿತ್ತು. ಕಾಶ್ಮೀರದ ಜನತೆ ರಾಜ್ಯ ವಿಧಾನಸಭೆಗೆ 75 ಪ್ರತಿನಿಧಿಗಳನ್ನು ಆಯ್ಕೆ ಮಾಡಿದುದಲ್ಲದೆ ಪ್ರಪ್ರಥಮವಾಗಿ ಲೋಕಸಭೆಗೆ ಆರು ಪ್ರತಿನಿಧಿಗಳನ್ನು ನೇರವಾಗಿ ಆಯ್ಕೆ ಮಾಡಿತು. ಇದಕ್ಕೆ ಮುಂಚೆ ಲೋಕಸಭೆಯು ಸದಸ್ಯರನ್ನು ರಾಜ್ಯ ವಿಧಾನಸಭೆಯ ಸದಸ್ಯರು ಅಪ್ರತ್ಯಕ್ಷ ಪದ್ಧತಿಯಿಂದ ಆಯ್ಕೆಮಾಡುತ್ತಿದ್ದರು.

ಕಾಶ್ಮೀರದ ವಿಧಾನಸಭೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮತದಾರರ ಸಂಖ್ಯೆ 1962ನೇ ಇಸವಿಯಲ್ಲಿ 10,21,698 ಇದ್ದಿತು; ಇದು 1967ನೇ ಇಸವಿಯಲ್ಲಿ 14,19,253ಕ್ಕೇರಿತು.

ಕಾಳ್ಮನೇ ಮತ್ತು ಚುನಾವಣೆಯಲ್ಲಿ ಮತದಾರರಲ್ಲಿ ಶೇಕಡ 59ರಷ್ಟು ಎಂದರೆ 8,06,169 ಮತದಾರರು ಮತ ಚಲಾಯಿಸಿದರು. ಈ ಅಂಕಿ-ಸಂಖ್ಯೆಗಳು ಕಾಶ್ಮೀರದಂತಹ ಹಿಮಾವೃತ ಹಾಗೂ ಭೂಪ್ರದೇಶವಿರುವ ಇತರ ರಾಜ್ಯಗಳೊಂದಿಗೆ ಸರಿತೂಗುತ್ತವೆ. 1967ನೇ ಇಸವಿಯಲ್ಲಿ ಹಿಮಾಚಲ ಪ್ರದೇಶದಲ್ಲಿ ಶೇಕಡ 61.22 ಮತ ಚಲಾವಣೆಯಾಗಿತ್ತು.

ಕಾಶ್ಮೀರದ ಚುನಾವಣೆಯಲ್ಲಿ 1967ನೇ ಇಸವಿಯಲ್ಲಿ 223 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ಆದರೆ ಈ ಅವಿರೋಧ ಆಯ್ಕೆಯಾದವರ ಸಂಖ್ಯೆ ಕಡಿಮೆಯೆಂದೇ ಹೇಳಬೇಕು, ಏಕೆಂದರೆ 1957ನೇ ಇಸವಿಯಲ್ಲಿ 41 ಅಭ್ಯರ್ಥಿಗಳೂ, 1962ನೇ ಇಸವಿಯಲ್ಲಿ 34 ಅಭ್ಯರ್ಥಿಗಳೂ ಅವಿರೋಧವಾಗಿ ಆಯ್ಕೆಯಾಗಿದ್ದರು.

ಇತ್ತೀಚಿನ ಉಪಚುನಾವಣೆಯಲ್ಲಿ ಧಾವಿಕ ಪ್ರಭಾವಿಗಳನ್ನು ಬೀರಲು ಯತ್ನ ನಡೆದರೂ ಕಾಶ್ಮೀರದ ಮತದಾರರು ಮುಕ್ತ ಚುನಾವಣೆಯಲ್ಲಿ ಮತ ಚಲಾಯಿಸಿ ಪ್ರಜಾತಂತ್ರದಲ್ಲಿ ತಾವು ಹೊಂದಿರುವ ಅಚಲ ದೃಢ ಮನೋಭಾವವನ್ನು ಪ್ರದರ್ಶಿಸಿದರು.

ಈ ಚುನಾವಣೆಗಳನ್ನು ವಿಮರ್ಶಿಸಿದ "ಟೈಮ್ಸ ಆಫ್ ಇಂಡಿಯಾ" ಆಂಗ್ಲ ದೈನಿಕವು (9—5—1969) ಅಗ್ರಲೇಖನದಲ್ಲಿ ಹೀಗೆ ಬರೆಯಿತು:

ಕಾಶ್ಮೀರದಲ್ಲಿ ಐದು ಕ್ಷೇತ್ರಗಳಲ್ಲಿ ನಡೆದ ಇತ್ತೀಚಿನ ಉಪಚುನಾವಣೆಯಲ್ಲಿ ಕಾಂಗ್ರೆಸ ಪಕ್ಷವು ನಾಲ್ಕು ಸ್ಥಾನಗಳನ್ನು ಪಡೆಯಿತ. ಪ್ಲೆಬಿಸೈಟ್ ಪಕ್ಷವು ಚುನಾವಣೆಯ ಬಹಿಷ್ಕಾರಕ್ಕೆ ಕರೆಯಿತ್ತಿದ್ದರೂ, ಅಧಿಕ ಸಂಖ್ಯೆಯಲ್ಲಿ ಮತದಾರರು ಮತ ಚಲಾಯಿಸಿದ್ದರು. ಬೀರ್ವಾ ಕ್ಷೇತ್ರದಲ್ಲಿ ಶೇಕಡ 59ರಷ್ಟು ಮತದಾರರು ಚುನಾವಣೆಯಲ್ಲಿ ಪಾಲ್ಗೊಂಡರು. ಚುನಾವಣೆ ಶಾಂತಿಯುತವಾಗಿತ್ತು; ಕ್ರಮಬಗತವಾಗಿತ್ತು. ಚುನಾವಣೆ ಮುಕ್ತಾಯವಾಗಿದ್ದುದಲ್ಲದೆ ಕಳಂಕರಹಿತವಾಗಿತ್ತು. ಕೇಂದ್ರ ಚುನಾವಣಾ ಆಯೋಗ ಈ ದಿಸೆಯಲ್ಲಿ ತೀವ್ರ ಎಚ್ಚರಿಕೆ ವಹಿಸಿತು.

ಪ್ಲೆಬಿಸೈಟ್ ಪಕ್ಷವು ಚುನಾವಣೆಯಲ್ಲಿ ಭಾಗವಹಿಸದಿರುವ ಮುಂಚಿನ ನಿರ್ಧಾರವನ್ನು ರದ್ದು ಮಾಡಿದ್ದರಿಂದ ಷೇಕ್ ಅಬ್ದುಲ್ಲ ಮತ್ತು ಅವರ ಮಿತ್ರರು ರಾಜ್ಯ ಸರಕಾರದ ವ್ಯಾವಹಾರಿಕ ವೈಮನಸ್ಯದ ಬಗ್ಗೆ ಹಾಗೂ ಕೇಂದ್ರ ಚುನಾವಣಾ ಆಯೋಗವು ರಾಜ್ಯದಲ್ಲಿ ಚುನಾವಣೆ ನಡೆಸುವ ಅಧಿಕಾರ ಚಲಾಯಿಸುವ ಹಕ್ಕು ಹೊಂದಿರುವ ಬಗ್ಗೆ ಗೊಂದಲಕ್ಕೆ ಹೊಂದಿದ್ದಾರೆಂದು ತಿಳಿಯಬಹುದು. ಕೇಂದ್ರ ಸರಕಾರ ಹಾಗೂ ಸಾರ್ವಿಕ ಧೀಧಣ್ಣದ ರಾಜ್ಯ ಸರಕಾರ ಕಾಶ್ಮೀರದ ಉಪಚುನಾವಣೆಯಲ್ಲಿ ಕಡಿಮೆ ಮತದಾನ ಮಾಡುವುದರಲ್ಲಿ ಒಂದು ಬಗೆಯ ಪಟ್ಟಭದ್ರ ಹಿತ ಹೊಂದಿದೆಯೆಂಬ ಅರೋಪವನ್ನು ಅಂತಿಮವಾಗಿ ಬಗೆಹರಿಸಲಾಗಿದೆ.

ದೆಹಲಿಯ "ಹಿಂದೂಸ್ತಾನ ಟೈಮ್ಸ" ಎಂಬ ಆಂಗ್ಲ ದೈನಿಕದ ಮೇ 14ನೇ ದಿನಾಂಕದ ಸಂಚಿಕೆಯಲ್ಲಿ ಪ್ರಕಟವಾಗಿರುವ ಶ್ರೀ ರಷೀದ್ ತಾಲಿಬ ಅವರ "ಕಾಶ್ಮೀರ ವರದಿ"ಯಲ್ಲಿ ಹೀಗೆ ಬರೆಯಲಾಗಿದೆ: "ಕಾಶ್ಮೀರದ ಇತಿಹಾಸದಲ್ಲಿ ಕಳೆದ ತಿಂಗಳು ನಡೆದ ಉಪಚುನಾವಣೆಯನ್ನು ವೀಕ್ಷಿಸಿದ ಯಾರೊಬ್ಬನಾಗಲಿ ಆತ್ಮತೃಪ್ತಿಯ ಅಭಿಪ್ರಾಯ ಪಡೆದು ಹಿಂದಿರುಗುವುದು ನಿಸ್ಸಂಶಯ. ಈ ರಾಜ್ಯದ ರಾಜಕೀಯ ಘಟನೆಗಳಿಗೆ ಹೊರತಾಗಿರುವ ಪ್ರಶ್ನೆ ಇತೆ ಚುನಾವಣೆಯ ಸಮಯದಲ್ಲಿ ಗೋಚರವಾಗಲಿಲ್ಲ. ಉಪಚುನಾವಣೆ ನಡೆಯಬೇಕಾಗಿದ್ದ ನಾಲ್ಕು ಕ್ಷೇತ್ರಗಳ ಅನೇಕ ಮತದಾರರಿಗೆ ನಾನು ಭೇಟಿ ನೀಡಿದೆ. ದೇಶದ ಮತ್ತಿನ್ಯಾವ ಭಾಗದ ಮತದಾರರಿಗಾದರೂ ಇಂತಹ ವಾತಾವರಣ ಇಲ್ಲಿ ಕಂಡಿತು.

"ಸ್ವಾತಂತ್ರ್ಯೋತ್ಸವದ ತೆರವಾಗಿರುವ

ಬೆಳ್ತಂಗಡಿ ಲೇಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

R. R. C. 57/69.

ಉಮ್ಮೈ — ಅರ್ಜಿದಾರ
ವೀರಪ್ಪ ಪೂಜಾರಿ — ಎದ್ರಿ

ಬೆಳ್ತಂಗಡಿ ತಾಲ್ಲೂ ಕರಂಬಾರು ಗ್ರಾಮ ಧರ್ಮರುವ ಶಾಂತಪ್ಪ ಪೂಜಾರಿಯ ಮಗ ವೀರಪ್ಪ ಪೂಜಾರಿಯವರಿಗೆ ಕೋರ್ಟಿನ ಹುಕುಂ ಪ್ರಕಾರ ತಿಳಿಸುವುದೇನೆಂದರೆ —

1967-68ರ ಗೇಣಿ ಬಾಕಿ ಬಗ್ಗೆ ಅರ್ಜಿದಾರನು ಸೂಡಿದ ಅರ್ಜಿಯಲ್ಲಿ ನಿಮ್ಮ ಹಾಜ್ರಾತಿ ಬಗ್ಗೆ ತಾ 30-7-1969ಕ್ಕೆ ಇಟ್ಟಿರುತ್ತದೆ. ಆದ್ರಿಂದ ಆ ದಿನಾ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಸ್ವತಹಾ ಯಾ ವಕೀಲರ ಮುಖಾಂತರ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಸೂಡಿ ಅರ್ಜಿಯನ್ನು ಮುಂದುವರಿಸಲಾದೀತು.

N. J. Kadamba,
Advocate, Belthangady
Advocate for Applicant.

ಬೆಳ್ತಂಗಡಿ, 8-7-69.

Announcement

Dear Sir / Sirs,

You are quite aware that the INDEPENDENCE SPECIAL of your favourite Weekly 'NAVAYUGA' has over all these years earned a reputation for the sumptuous fare it offers to its extensive readers spread all over the nineteen districts of Mysore State.

This year's Special will be issued as usual on August 15th this year to mark the 22nd Anniversary of our Independence. To commemorate this occasion it will contain essays and skits by noted authors and journalists from all Karnataka and pictures and sketches narrating the steady progress of this state in the various spheres of our national life social, economic, religious and educational.

August 15th is an auspicious day and the 'Navayuga Independence Special' is a fitting medium to convey the message of your fare to hundreds of homes in the State. Kindly send in your advertisement material on or before August 5th 1969.

ADVERTISEMENT RATES

Full Page	... Rs. 200/-	Back Cover Page	... Rs 500/-
Half Page	... Rs. 100/-	Inside 1st Cover Page	... Rs. 400/-
Quarter Page	... Rs. 60/-	Inside 2nd Cover Page	... Rs. 300/-

Date of Publication: 15—8—1969

Thanking you in anticipation of your valued support,
Yours cordially,
ADVT. MANAGER.

NAVAYUGA,
Udipi.

ಅದೃಷ್ಟದೊಂದಿಗೆ ಸೆಣಸಲಿರುವ ಚಂದ್ರ ಯಾತ್ರಿಕರು

ಇತಿಹಾಸದಲ್ಲಿ ಅವರಿಗೊಂದು ಶಾಶ್ವತ ಸ್ಥಾನ ಲಭಿಸುವುದು. ಚಂದ್ರನ ಮೇಲೆ ಮೊದಲ ಹೆಜ್ಜೆಯಿಡುತ್ತಿದ್ದಂತೆಯೇ ಅವರು ಅಮರತ್ವದ ಹಾದಿಯಲ್ಲಿ ಮುನ್ನಡೆಯಲಿರುವರು.

ಚಂದ್ರನ ಮೇಲೆ ನಡೆಯಲಿರುವ ಅವರು ಕೇವಲ ಸಾಹಸೀ ವ್ಯಕ್ತಿಗಳಾಗುಳಿಯುವುದಿಲ್ಲ. ಹೊಸ ಪ್ರಪಂಚದಲ್ಲಿ ಇಡಿ ಮಾನವಕುಲದ ಮೊದಲ ರಾಯಭಾರಿ ಗಳಾಗಿರುವರು.

ಮಾನವರನ್ನು ಚಂದ್ರನಲ್ಲಿಳಿಸುವ ಅಪೋಲೋ—11ರ ಉಡಾವಣೆಯುಳ್ಳ ಜುಲೈ 16 'ಂದು ಫಡೆಲು ಗೊತ್ತುಪಡಿಸಲಾಯಿತು.

ಈ ಐತಿಹಾಸಿಕ ಯಾತ್ರೆಯನ್ನು ಕೈಗೊಂಡ ಮೂವರು ಗಡನಯಾನಿಗಳಿವರು:

ನೈಲ್ ಆರ್ಮ್‌ಸ್ಟ್ರಾಂಗ್, ಪ್ರಧಾನ ಚಾಲಕರು,

ಮೈಕೇಲ್ ಕಾಲಿನ್ಸ್, ಕಮಾಂಡ್ ಮಾಡ್ಯೂಲ್ ಚಾಲಕರು,

ಎಡ್ವಿನ್ ಡಿ. ಆಲ್ಡ್ರಿನ್ಸ್, ಲೂನಾರ್ ಮಾಡ್ಯೂಲ್ ಚಾಲಕರು.

ಈ ಮೂವರೂ 1930ನೇ ಇಸವಿಯಲ್ಲಿ ಜನಿಸಿದವರು, ಪ್ರತಿಯೊಬ್ಬರೂ 165 ಪೌಂಡ್ ತೂಕವಿರುವರು. ಆರ್ಮ್‌ಸ್ಟ್ರಾಂಗ್ ಮತ್ತು ಕಾಲಿನ್ಸ್ 5 ಅಡಿ 11 ಅಂಗುಲ ಎತ್ತರ, ಮತ್ತು ಆಲ್ಡ್ರಿನ್ ಅವರು 5 ಅಡಿ 10 ಅಂಗುಲ ಎತ್ತರ ಇರುವರು. ಮೂವರೂ ವಿವಾಹಿತರು. ಟೆಕ್ಸಾಸ್‌ನ ಹೂಸ್ಟನ್‌ನಲ್ಲಿರುವ ಅಮೆರಿಕದ ಮಾನವ ಸಹಿತ ಗಗನ ಹಾರಾಟ ಕೇಂದ್ರದ ಬಳಿ ಇವರ ನಿವಾಸ.

ಅಮೆರಿಕದ ನ್ಯಾಷನಲ್ ಏರನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (ನಾಸಾ)ದ ಯೋಜಿತ ಕಾರ್ಯಕ್ರಮದ ಪ್ರಕಾರ ಚಂದ್ರನಲ್ಲಿಳಿದನಂತರ ಗಗನ ವಾಹನದಿಂದ ಮೊದಲು ಹೊರಬರುವವರು ಕಮಾಂಡರ್ ನೈಲ್ ಆರ್ಮ್‌ಸ್ಟ್ರಾಂಗ್. ಇವರು ವೃತ್ತಿಯಲ್ಲಿ ಅಪಾರ ದೂರದೃಷ್ಟಿ, ಸ್ಥೈರ್ಯ, ಕೌಶಲ್ಯ ಹಾಗೂ ಪರಿಣತಿಗಳನ್ನು ಹೊಂದಿರುವರು.

ಸಂಶೋಧನ ವಿಮಾನವೊಂದರ ಟೆಸ್ಟ್ ಪೈಲಟ್ ಆಗಿ ಅವರು ಅಮೆರಿಕದ ಪ್ರಖ್ಯಾತ ಎಕ್ಸ್-15 ವಿಮಾನವನ್ನು ಸುಮಾರು 200,000 ಮೈಲಿಗಳಿಗೂ ಹೆಚ್ಚು ಎತ್ತರಕ್ಕೆ, ಭೂವಿಯ ವಾತಾವರಣದ ಅಂಚಿಗೆ ಕೊಂಡೊಯ್ದರು ಮತ್ತು ವಾಹನವನ್ನು ಗಂಏಗೆ ಸುಮಾರು 4000 ಮೈಲಿಗಳ ವೇಗದಲ್ಲಿ ಫಡೆಸಿದರು. (ಇದು ಶಬ್ದದ ವೇಗಕ್ಕಿಂತ ಐದು ಪಟ್ಟು ಹೆಚ್ಚು)

ಜೆಮಿನಿ—8ರ ಹಾರಾಟದಲ್ಲಿ ಆರ್ಮ್‌ಸ್ಟ್ರಾಂಗ್ ಅವರು ಪ್ರಧಾನ ಚಾಲಕರಾಗಿದ್ದರು. ಅವರು ಸಹಚಾಲಕ ಡೇವಿಡ್ ಸ್ಕಾಟ್‌ರೊಂದಿಗೆ ಕಕ್ಷೆಯಲ್ಲಿ ಸಂಚರಿಸುತ್ತಿದ್ದ ಇನ್ನೊಂದು ಮಾನವ ವಾಹನವನ್ನು ಗುರುತಿಸಿ, ಮೊದಲಬಾರಿಗೆ "ಕೂಡಿಕೆ" ಸಾಧಿಸಿದರು. ಆದರೆ ಕೆಲವು ಗಂಟೆಗಳ ನಂತರ ಜೆಟ್ ಥ್ರಸ್ಟರ್‌ನ ದೋಷದಿಂದಾಗಿ ಅವರ ವಾಹನವು ಹತೋಟಿ ತಪ್ಪಿ ಸುತ್ತತೊಡಗಿದುದರಿಂದ, ಮೂರು ದಿವಸಗಳಿಗೆ ಗೊತ್ತುಪಡಿಸಿದ್ದ ಹಾರಾಟವನ್ನು ಮೊಟಕುಗೊಳಿಸಬೇಕಾಯಿತು. ಈ ಪರಿಸ್ಥಿತಿಯಲ್ಲಿ ಗಗನಯಾನಿಗಳು ಅದ್ಭುತ ಕೌಶಲ್ಯ ಹಾಗೂ ಸಮಯಸ್ಫೂರ್ತಿಯಿಂದ ಈ ಸಮಸ್ಯೆಯನ್ನು ಫಿವಾಸಿ ವಾಹನವನ್ನು ಸುರಕ್ಷಿತವಾಗಿ ಧರೆಗೆ ಇಳಿಸಿದರು.

1968ರ ಮೇ 7ರಂದು ಚಂದ್ರನಲ್ಲಿಳಿಯುವ ತರಬೇತಿ ವಾಹನವೊಂದರೊಂದಿಗೆ ಪ್ರಯೋಗ ನಡೆಸುತ್ತಿದ್ದಾಗ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡು ವಾಹನವು ಟೆಕ್ಸಾಸ್‌ನ ತರಬೇತಿ ವೈದಾನವೊಂದರಲ್ಲಿ ಉರುದುಬಿತ್ತು. ಈ ಅಪಾಹಕ ಸಂಭವಿಸುವುದಕ್ಕೆ ಕೆಲವೇ ಸೆಕೆಂಡುಗಳಿಗೆ ಮುಂಚೆ ಆರ್ಮ್‌ಸ್ಟ್ರಾಂಗ್ ಅವರು ವಾಹನದಿಂದ ಧುಮುಕಿ ಪ್ಯಾರಾಚೂಟ್ ಸಹಾಯದಿಂದ ಸುರಕ್ಷಿತವಾಗಿ ಕೆಳಗಿಳಿದರು.

ಅವರು 1955ರಲ್ಲಿ ನಾಸಾದ ಲೂಯಿಸ್ ರಿಸರ್ಚ್ ಸೆಂಟರ್‌ನಲ್ಲಿ (ಆಗ ಅದಕ್ಕೆ ನ್ಯೂ ಲೂಯಿಸ್ ಫ್ಲೈಟ್ ಪ್ರಪಲ್ಷನ್ ಲ್ಯಾಬೊರೇಟರಿ ಎಂದೇ ಹೆಸರಿತ್ತು) ಏರೋನಾಟಿಕಲ್ ರಿಸರ್ಚ್ ಪೈಲಟ್ ಆಗಿ ಕೆಲಸಕ್ಕೆ ಸೇರಿದರು. ಅನಂತರ ಅವರನ್ನು ಕ್ಯಾಲಿಫೋರ್ನಿಯಾದಲ್ಲಿರುವ ನಾಸಾದ ರಿಸರ್ಚ್ ಫ್ಲೈಟ್ ಸೆಂಟರಿಗೆ ವರ್ಗಾಯಿಸಲಾಯಿತು. ಅದಕ್ಕೆ ಮುನ್ನ ಅವರು 1949ರಿಂದ 1952ರ ವರೆಗೆ ಅಮೆರಿಕದ ನೇವಿಯಲ್ಲಿ ಏವಿಯೇಟರಾಗಿದ್ದರು, ಕೊರಿಯಾ ಯುದ್ಧದಲ್ಲಿ 78 ಯುದ್ಧ ಹಾರಾಟಗಳನ್ನು ನಡೆಸಿದರು.

ಓಹಾಯೋದ ವಪಕೋನೆಟಾದಲ್ಲಿ ಜನಿಸಿದ ಆರ್ಮ್‌ಸ್ಟ್ರಾಂಗ್ ಅವರು ಪರ್ಡ್ಯೂ ವಿಶ್ವವಿದ್ಯಾನಿಲಯದಿಂದ ಏರನಾಟಿಕಲ್ ಎಂಜಿನಿಯರಿಂಗ್‌ನಲ್ಲಿ ಬ್ಯಾಚಲರ್ ಆಫ್ ಸೈನ್ಸ್ ಡಿಗ್ರಿ ಪಡೆದರು. ಅನಂತರ ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಪದವಿಯೋತ್ತರ ಅಧ್ಯಯನ ಕೈಗೊಂಡರು. ಅವರಿಗೆ ಪತ್ನಿ, ಇಬ್ಬರು ಗಂಡು ಮಕ್ಕಳಿದ್ದಾರೆ.

ಚಾಂದ್ರನಲ್ಲಿ ಕಾಲಿಂಸಲಿರುವ ಎರಡನೆಯ ವ್ಯಕ್ತಿ, ಲೂನಾರ್ ಮಾಡ್ಯೂಲ್ ಚಾಲಕ ಆಲ್ಡ್ರಿನ್. ಅವರೂ ಎಂಜಿನೀಯರ್ ಹಾಗೂ ಗಗನ ಹಾರಾಟಗಳಲ್ಲಿ ಅಪಾರ ಅನುಭವ ಪಡೆದಿದ್ದಾರೆ.

ಅವರು ಮಸಾಚುಸೆಟ್ಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಡಾಕ್ಟರ್ ಆಫ್ ಸೈನ್ಸ್ ಡಿಗ್ರಿ ಪಡೆದಿದ್ದಾರೆ. 1963ರಲ್ಲಿ ಆರ್ಬಿಟಲ್ ಮೆಕಾನಿಕ್ಸ್ ಬೋಧಿಸಲು ಅವರು ತಮ್ಮ ಡಾಕ್ಟೋರಲ್ ಪ್ರಬಂಧವನ್ನು ಬರೆದರು.

1966ರ ನವೆಂಬರ್‌ನಲ್ಲಿ ಅವರು ಜೆಮಿನಿ—12ರ ಸಹಚಾಲಕರಾಗಿ ಆಯ್ಕೆಯಾದರು. 59 ಕಕ್ಷಾ ಸಂಚಾರಗಳಲ್ಲಿ ನಾಲ್ಕು ದಿನಗಳ ಆ ಹಾರಾಟದಲ್ಲಿದ್ದವರು ಗಗನ ವಾಹನದ ತೆರೆದ ಕಂಡಿಯಲ್ಲಿ ನಿಂತು 203 ನಿವಿ ಷಗಳ ವರೆಗೆ ಭೂಮಿಯು ಛಾಯಾ ಚಿತ್ರಗ್ರಹಣ ಮಾಡಿದರು. ಅನಂತರ ವಾಹನದಿಂದ ಹೊರಬಂದು 129 ನಿಮಿಷಗಳಕಾಲ ಅಂತರಿಕ್ಷದಲ್ಲಿ "ನಡೆದರು". ಅವರು ವಾಹನವ ಹೊರಗಿದ್ದ ಅವಧಿಯಲ್ಲಿ ಗಗನ ಫಡೆಗೆಗಳಲ್ಲೇ ದಾಖಲೆಯಾದು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಹಾಗೂ ಪುತ್ರಿ ಇರುವರು.

ಅಪೋಲೋ ವಾಹನದಲ್ಲಿ ಮುಖ್ಯದ ಅಸಫದಲ್ಲಿರುವ ಇನ್ನೊಬ್ಬ ಗಗನಯಾನಿ ಮೈಕೇಲ್ ಕಾಲಿನ್ಸ್ ಚಂದ್ರನಲ್ಲಿಳಿಯುವುದಿಲ್ಲ. ಆದರೆ ಯಾತ್ರೆಯ ಯಶಸ್ಸಿಗೆ ಅವರೂ ಬಹು ಮುಖ್ಯರೆಂಬುದನ್ನು ಮರೆಯುವಂತಿಲ್ಲ. ಏಕೆಂದರೆ ಚಂದ್ರನಲ್ಲಿಳಿದ ಗಗನಯಾನಿಗಳಿಗೆ, ಮಾತೃವಾತೆಗೆ ಹಿಂದಿರುಗಲು ಏನಾದರೂ ತೊಂದರೆಯಾದರೆ ಕಾಲಿನ್ಸ್ ಅವರು ಸಹಾಯ ಮಾಡಬೇಕಾಗುವುದು. ಗಗನಯಾನಿಗಳು ಚಂದ್ರನಲ್ಲಿರುವಾಗ ಕಾಲಿನ್ಸ್ ಅವರು 76 ಬೆಸ್ಯಲಿಗಳ ಕಕ್ಷೆಯಲ್ಲಿರುವರು.

ಕಾಲಿನ್ಸ್ ಅವರು ಜೆಮಿನಿ—10ರ ಮೂರು ದಿನಗಳ ಹಾರಾಟದಲ್ಲಿ ಚಾಲಕರಾಗಿದ್ದರು. (ಜಾನ್ ಯಂಗ್ ಪ್ರಧಾನ ಚಾಲಕರಾಗಿದ್ದರು). ಈ ಯಾನದಲ್ಲಿವರು 475 ಮೈಲಿಗಳ ಎತ್ತರದ ದಾಖಲೆ ಸ್ಥಾಪಿಸಿದರು, ಮತ್ತು ಕಕ್ಷೆಯಲ್ಲಿ ಸಂಚರಿಸುತ್ತಿದ್ದ ಮಾನವರಹಿತ ಗುರಿ ವಾಹನದೊಂದಿಗೆ 'ಕೂಡಿಕೆ' ನಡೆಸಿದ ಬಳಿಕ ತಮ್ಮ ಕಕ್ಷಾ ಪಥವನ್ನು ಬದಲಿಸಲು ಆ ವಾಹನದ ಪ್ರೊಪೆಲ್ಲೆಂಟನ್ನು ಬಳಸಿದರು. ಇದೊಂದು ಅದ್ಭುತ ಗಗನ ಸಾಹಸ. ಆ ದೇ ಹಾರಾಟದಲ್ಲವರ ವಾಹನದ ದೊರೆಗೆ 39 ನಿವಿ ಷಗಳ ಕಾಲ ಗಗನದಲ್ಲಿ ನಡೆದರು, ಮತ್ತು 49 ನಿವಿ ಷಗಳ ಕಾಲ ತೆರೆದ ಕಂಡಿಯಲ್ಲಿ ನಿಂತಿದ್ದರು.

ಇಟಲಿಯು ರೋಂಗೆ ಸೇರಿದವರಾದ, ಅಮೆರಿಕದ ಸೈನ್ಯದ ಅಧಿಕಾರಿಯೊಬ್ಬರ ಮಗನಾದ ಕಾಲಿನ್ಸ್ ಅವರು ವೆಸ್ಟ್‌ಪಾಯಿಂಟ್‌ನ ಯು. ಎಸ್. ಮತ್ತು ಅಮೆರಿಕದ ವಿಲಿಟರಿ ಅಕೆಡೆಮಿಯ ಶಾಲೆಗಳಿಂದ ಪದವೀಧರರಾದರು. ಅನಂತರ ಅಮೆರಿಕದ ವಿಮಾನಬಲದಲ್ಲಿ ಎಕ್ಸ್‌ಪೆರಿಮೆಂಟಲ್ ಫ್ಲೈಟ್ ಟೆಸ್ಟ್ ಆಫೀಸರಾಗಿ ಕೆಲಸ ಮಾಡಿದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಒಬ್ಬ ಪುತ್ರ ಇದ್ದಾರೆ.

ಎಲ್ಲಾ ಸ್ಥಾನಗಳನ್ನು ಚ ನಾವಣೆಯ ಮೂಲಕ ತುಂಬುವ ಜನಪ್ರಿಯ ವಿಧಾನವು ಇದೀಗ ಪ್ರಪ್ರಥಮವಾಗಿ ಕಾರ್ಯಗತವಾಗಿದೆಯೆಂಬ ಭಾವನೆಯಿದೆ. ಹೇಳಬಹುದಲ್ಲ ಕಾಶ್ಮೀರದ ಪ್ರಧಾನಿಯೆಂದಿದ್ದಾಗ ನಡೆದ ಪ್ರಥಮ ಮಹಾ ಚ ನಾವಣೆಯಲ್ಲಿ ರಾಜ್ಯವಿಧಾನ ಸಭೆಯ 42 ಸ್ಥಾನಗಳು ಅವಿರೋಧವಾಗಿ ತುಂಬಿಕೋಗಿತ್ತು.

ಕಾಶ್ಮೀರದಲ್ಲಿ ನಡೆದ ಉಗ್ರಜನಾವಣೆ ದೇಶದ ಮಂತ್ರಿಕರ ಭಾಗಗಳಲ್ಲಿ ಫಡೆಯುವ ಚುನಾವಣೆಯಂತೆಯೇ ಮಹತ್ವವಾಗಿದ್ದಿತು. ಹಾಗೂ ಪ್ರಾಮುಖ್ಯವಾಗಿತ್ತು. ಸಾಧಿಕ್ ಸರ್ಕಾರದ ಬಗ್ಗೆ ವೈಶ್ವಿಭಾವನೆ ಹೊಂದಿರುವ ಹಾಗೂ ಕಾಶ್ಮೀರದ ಇಂದಿನ ನಾಯಕ ಪಾಕಾದಲ್ಲಿ ವಿಚಾರಶೀಲರೆಂದು ಸಾಗಣಿಸಿರುವ ವ್ಯಾಖ್ಯಾನ ಸಯೀದ ಮುಸೂದಿಯ, ಇತ್ತೀಚಿನ ಉಪಚ ನಾವಣೆಯು ಕಾಶ್ಮೀರ ಕಣಿವೆಯಲ್ಲಿ ಫಡೆದಿರುವ ಅತ್ಯಂತ ಪ್ರಾಮುಖ್ಯಕರ ಚುನಾವಣೆಯೆಂದು ಅಭಿಪ್ರಾಯ ಪಟ್ಟಿದ್ದಾರೆ."

ಸುವ್ಯವಸ್ಥಿತ ರೀತಿಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

95 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ಫಿಸ್ಕು ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

Phone— 5711, 5712, 5713 } 3 Lines.

ಬೆಳ್ತಂಗಡಿ ಟೌಂಟ್ ಮ್ಯುನ್ಸಿಪಲ್ ಕೋರ್ಟ್‌ನಲ್ಲಿ

P. R. C. 67/69.

ಸೇವಿಂಗ್ಸ್ ಬ್ಯಾಂಕ್ — ಅರ್ಜಿದಾರರು

ಇನ್ಸಾಯಿಲ್ ಬ್ಯಾಂಕ್ — ಎದುರುದಾರರು

ಬೆಳ್ತಂಗಡಿ ತಾಲ್ಲೂಕು ಪಡಂಗಡಿ ಗ್ರಾಮದಲ್ಲಿರುವ ಬಾಬೂ ಬ್ಯಾಂಗಿಗರ ಮಗ, ಇನ್ಸಾಯಿಲ್ ಬ್ಯಾಂಗಿಗವರಿಗೆ ಕೋರ್ಟಿಗ್ ಹುಕುಂ ಪ್ರಕಾರ ತಿಳಿಸುವುದೇನೆಂದರೆ—

1967—68ರ ಸೇಜೆ ಬಾಕಿ ಬಗ್ಗೆ ನಿಮ್ಮ ಮೇಲೆ ಅರ್ಜಿದಾರನು ಮಾಡಿದ ಅರ್ಜಿಯನ್ನು ತಾ. 1-8-1969ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆದ್ರಿಂದೆ ಆ ದಿವಸ ಮೇಲ್ಕಂಡಿಸಿದ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ನಿಮ್ಮುದೇನಾದರೂ ಆಕ್ಷೇಪಣೆ ಇದ್ದಲ್ಲಿ ಸ್ವತಹಾ ಯಾ ವಕೀಲರ ದ್ವಾರ ತಿಳಿಸಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟಾ ಪೂರ್ತಿ ಆರ್ಜಿಯನ್ನು ಮುಂದುವರಿಸಲಾದೀತು. ತಿಳಿದಿರಲಿ.

Advocate for Applicant.

N. J. Kadamba,

Advocate, Belthangady.

ಬೆಳ್ತಂಗಡಿ, 8.7.1969.

ಸಿಂಹಾವಲೋಕನ

ಜೂನ್ 23ರಿಂದ 30ರೊಳಗಿನ ಮಹತ್ವ ಸುದ್ದಿಗಳ ಸಾರಸಂಗ್ರಹ

ರಾಜ್ಯ ಕುಟುಂಬ ಯೋಜನಾಧಿಕಾರಿಗಳ ಸಮ್ಮೇಳನ

ವಿವಿಧ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೈಗೊಂಡಿರುವ ಕುಟುಂಬ ಯೋಜನಾ ಕಾರ್ಯಕ್ರಮದ ಪ್ರಗತಿಯನ್ನು ವಿಮರ್ಶಿಸಲು ಆಗಸ್ಟ್ 11 ಮತ್ತು 12 ರಂದು ರಾಜ್ಯ ಕುಟುಂಬ ಯೋಜನಾ ಅಧಿಕಾರಿಗಳ ಸಮ್ಮೇಳನ ಶಿವಮೊಗ್ಗೆಯಲ್ಲಿ ಏರ್ಪಡಿಸಲಿದೆ

ರಾಜಕೀಯೇತರ ಪಕ್ಷಗಳಿಗೆ ಕಂಪೆನಿಗಳ ದೇಣಿಗೆಯನ್ನು ಪ್ರತಿಬಂಧಿಸುವ ಕಾಯ್ದೆ ಜಾರಿಗೆ ಬಂದಿತು

ಸಂಸತ್ತಿನ ಎರಡೂ ಸಭೆಗಳಿಂದ ಪಾಸಾದ ಕಂಪೆನಿಗಳ (ತಿದ್ದುಪಡಿ) 1969 ವಿಧೇಯಕ್ಕೆ ರಾಷ್ಟ್ರಪತಿಗಳು ಕಳೆದ ಜೂ. 23ರಂದು ಅನುಮತಿ ನೀಡಿದರು.

ಭಾರತ ನಾಳೆ ಚಿತ್ರಕ್ಕೆ ಬಹುಮಾನ

ಭಾರತ ಚಲನಚಿತ್ರ ವಿಭಾಗದವರು ತಯಾರಿಸಿರುವ 'ಕೆಲ್ಲೀಪಡ ನೆಚುರೇಸ್—ಒಪಿನಿಂಗ್ ಇಯರ್ಸ್' ಎಂಬ ವಿಷಯ ನಿರೂಪಕ ಸಾಕ್ಷ್ಯಚಿತ್ರ ಅಖಿಲ ರಾಷ್ಟ್ರಾಡಳಿತ ನಡೆದ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ವಿಶೇಷ ಬಹುಮಾನ ಗಳಿಸಿದೆ.

ಲಾವೋಸನಲ್ಲಿ ಭಾರತ ವಿದೇಶಾಂಗ ಕಾರ್ಯದರ್ಶಿ

ಭಾರತ ವಿದೇಶಾಂಗ ಕಾರ್ಯದರ್ಶಿಗಳಾದ ಶ್ರೀ ಟಿ. ಎನ್. ಕೌಲರವರು ಇಂದು ಜೂನ್ 18ರಂದು ಲಾವೋಸ್‌ಗೆ ತೆರಳಿ ಅಲ್ಲಿನ ಪ್ರಧಾನಮಂತ್ರಿಗಳೊಡನೆ ಸೌಹಾರ್ದ ಮಾತುಕತೆ ನಡೆಸಿದರು.

ಭಾರತಕ್ಕೆ ಫಿಲಿಪೈನ್ಸ್ ಯುನೆಸ್ಕೋ ಕಮಿಷನರ್

ಫಿಲಿಪೈನ್ಸಿನ ಯುನೆಸ್ಕೊ ನ್ಯಾಷನಲ ಕಮಿಷನ್ನಿನ ಅಧಿಕಾರಿಗಳಾದ ಶ್ರೀಜಾನ್ ದಯೂಂಗ ಅವರು ಭಾರತಕ್ಕೆ ಆರುದಿನಗಳ ಭೇಟಿಗಾಗಿ ಜೂನ 24 ರಂದು ಆಗಮಿಸಿದರು.

ಸ್ಥಳೀಯ ಅಧಿಕಾರಿಗಳ ವಿಶ್ವ ಸಮ್ಮೇಳನ

ಇದೀಗ ವಿಯೆನ್ನಾದಲ್ಲಿ ನಡೆಯುತ್ತಿರುವ ಹತ್ತೊಂಭತ್ತನೆಯ ಸ್ಥಳೀಯ ಅಧಿಕಾರಿಗಳ ವಿಶ್ವ ಸಮ್ಮೇಳನದಲ್ಲಿ ಭಾರತದ ನಿಯೋಗವೊಂದು ಭಾಗವಹಿಸಿದೆ.

ವರಿಷ್ಠತ ವನಸ್ಪತಿ ಬೆಲೆ

ಜೂನ್ 23ರಿಂದ ಎಲ್ಲಾ ವಲಯಗಳಲ್ಲಿ ವನಸ್ಪತಿ ಬೆಲೆ ಕೆ. ಜಿ. 25ಪೈಸೆಯಷ್ಟು ಜಾಸ್ತಿಯಾಗಿದೆ.

ಅಂಚೆಕಛೇರಿಗಳ ಸೂಪರಿಂಟೆಂಡೆಂಟ್ ಕಛೇರಿ

ನಗರದ ಮ್ಯೂಸಿಯಂ ರಸ್ತೆಯಲ್ಲಿ ನಂ. 14ನೇ ವಿನಾಯಕ ಇದ್ದ ಜೆಂಗಲರಾವ್ ವೆಸ್ಟ್ ಡಿವಿಶನ್ ಕಛೇರಿಗಳ ಸೂಪರಿಂಟೆಂಡೆಂಟರವರ ಕಛೇರಿಯನ್ನು ಜೂನ್ 23ರಿಂದ ಶೇಷಾದ್ರಿಪುರದಲ್ಲಿನ 1ನೇ ಪ್ಲಾಟ್‌ಫಾರಂ ರಸ್ತೆಯಲ್ಲಿರುವ 41 ನಂಬರಿಗೆ ವರ್ಗಾವಣೆ ಮಾಡಲಾಗಿದೆ.

ಜಪಾನಿಗೆ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ

ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಜಪಾನಿಗೆ ಜೂನ್ 23ರಿಂದ 28ರ ನಡುವೆ ಅಧಿಕೃತ ಭೇಟಿ ಕೈಗೊಂಡಿದ್ದರು. ಅವರು 28ರಂದು ಟೋಕಿಯೋದಿಂದ ಹಿಂತಿರುಗಿದರು.

ಸೋಮಾಲಿಯಾದ ವಾಣಿಜ್ಯ ಮೇಳದಲ್ಲಿ ಭಾರತದ ಪಾತ್ರ

ಸೋಮಾಲಿಯಾದ ಮೊಗಾದಿಸಿಯೋದಲ್ಲಿ ಸೆಪ್ಟೆಂಬರ 28ರಿಂದ ಅಕ್ಟೋಬರ 12ನೆ ದಿನಾಂಕದ ವರೆಗೆ ನಡೆಯುವ 10ನೇ ವಿಶ್ವ ವಾಣಿಜ್ಯ ಮೇಳದಲ್ಲಿ ಭಾರತ ಭಾಗವಹಿಸಲು ನಿರ್ಧರಿಸಿದೆ.

ಆಹಾರ ವಿಷಯ ಸಮಾಲೋಚನೆಗೆ ಸಲಹಾ ವೇದಿಕೆ

ದೇಶವು ಎದುರಿಸುತ್ತಿರುವ ಆಹಾರ ವಸ್ತು ಕೃಷಿ ಸಮಸ್ಯೆಗಳನ್ನು ಕುರಿತು ವಿವಿಧ ದೃಷ್ಟಿಕೋನವನ್ನು ಪ್ರತಿಬಿಂಬಿಸಲು ಸಹಾಯವಾಗುವಂತೆ ಒಂದು ವೇದಿಕೆಯನ್ನು ನಿರ್ಮಿಸುವ ಪ್ರಶ್ನೆ ಭಾರತ ಸರ್ಕಾರದ ಅವಗಾಹನೆಯಲ್ಲಿದೆ.

96 ಲಕ್ಷ ರೂ.ಗಳ ಅಕ್ರಮ ಸರಕುಗಳ ವಶ

ಸುಮಾರು 96.55 ಲಕ್ಷ ರೂ. ಬೆಲೆ ಬಾಳುವ ಸರಕುಗಳನ್ನು ಕಸ್ಟಮ್ಸ್ ಅಧಿಕಾರಿಗಳು ಕಳೆದ ವೇಳೆಯಲ್ಲಿ ವಶಪಡಿಸಿಕೊಂಡಿದ್ದಾರೆ.

ಅಕ್ಟೋಬರ ಸೇಳೆಗೆ ಝಂಡ—ಕಾಂಡ್ಲಾ ಮೊರ್ಗ ಪೂರ್ಣ

16.33 ಕೋಟಿ ರೂ. ಗಳ ವೆಚ್ಚದಿಂದ ನಿರ್ಮಿಸುತ್ತಿರುವ 231 ಕಿ.ಮೀ. ಉದ್ದದ ಝಂಡ-ಕಾಂಡ್ಲಾ ಬ್ರಾಡ್‌ಗೇಜ ಮಾರ್ಗವು ಕಾರ್ಯಕ್ರಮವು ಪ್ರಕಾರ ಈ ವರ್ಷದ ಅಕ್ಟೋಬರ ವೇಳೆಗೆ ಪೂರ್ಣವಾಗುವ ನಿರೀಕ್ಷೆಯಿದೆ.

ರಾಜ್ಯದ ಕ್ಷೇಮನಿಧಿ ಯೋಜನೆಯ ಪ್ರಗತಿ

ಮೈಸೂರು ರಾಜ್ಯದ 3318 ಸಂಸ್ಥೆಗಳಲ್ಲಿನ 3,36ಲಕ್ಷ ಉದ್ಯೋಗಿಗಳಿಗೆ ಒದಗಿಸಿರುವ ಕ್ಷೇಮನಿಧಿ ಯೋಜನೆಯು ಸೌಲಭ್ಯವನ್ನು ಈ ವರ್ಷದ ಮೇ ಮಾಸದಲ್ಲಿ ಮತ್ತು 22 ಸಂಸ್ಥೆಗಳ 991 ಉದ್ಯೋಗಿಗಳಿಗೆ ವಿಸ್ತರಿಸಲಾಗಿದೆ.

ಹೊಸಶ್ರೇಣಿಯ ಒಂದು ರೂಪಾಯಿ ನೋಟಿನ ಚಲಾವಣೆ

ಇನ್ನು ಕೆಲವು ಕಾಲದಲ್ಲೇ ಹೊಸ ಶ್ರೇಣಿಯ ಒಂದು ರೂಪಾಯಿ ನೋಟುಗಳನ್ನು ಕೇಂದ್ರ ಸರಕಾರ ಚಲಾವಣೆಗೆ ಬಿಡುಗಡೆ ಮಾಡುತ್ತಿದೆ.

ವನಮಹೋತ್ಸವದ ಯಶಸ್ಸು—ಮಾನವನ ಯಶಸ್ಸು

ಜುಲೈ 1ರಿಂದ ಪ್ರಾರಂಭವಾಗುವ ಒಂದುವಾರದ ಇಪ್ಪತ್ತೈದನೆಯ ವಾರ್ಷಿಕ ವನಮಹೋತ್ಸವ ಸಂದರ್ಭದಲ್ಲಿ ಕೇಂದ್ರಸರ್ಕಾರದ ಆಹಾರ, ಕೃಷಿ, ಸಮಾಜ ಅಭಿವೃದ್ಧಿ ಮಂತ್ರಿಗಳಾದ ಶ್ರೀ ಜಗಜೀವನರಾಮ ಅವರು ನಾನಿರೊಂದನ್ನು ಮಾಡಿ, ವನಮಹೋತ್ಸವ ಯಶಸ್ವಿಯಾದರೆ ಭಾರತೀಯರ ಮನಸ್ಸಿನ ಸೂಕ್ಷ್ಮತೆ ಹೆಚ್ಚಾಗುವುದೆಂದು ತಿಳಿಸಿದ್ದಾರೆ.

ಕುಂದಾಪುರದ ಅಂಜೆಕಛೇರಿಯ ನ್ಯಾನಸಮಾನ ಏರಿಕೆ

ದಕ್ಷಿಣ ಕನ್ನಡದ ಅಂಚೆ ವಿಭಾಗದಲ್ಲಿರುವ ಉಡುಪಿ ಕೇಂದ್ರ ಅಂಚೆಕಛೇರಿಯು ಅಧೀನದಲ್ಲಿದ್ದ ಕುಂದಾಪುರದ ಉಪ-ಅಂಚೆಕಛೇರಿಯನ್ನು ಜುಲೈ 1ರಿಂದ ಕೇಂದ್ರ ಅಂಚೆ ಕಛೇರಿಯೂಗಿ ಪರಿವರ್ತಿಸಲಾಗಿದೆ.

ಅವರು ಚಂದ್ರನಲ್ಲಿ ಕಾಲಿರಿಸಿದಾಗ

(ಐದನೇ ಪುಟದಿಂದ)

ಕೊಳ್ಳಲಾರಂಭಿಸುತ್ತಾನೆ. ಶೀಘ್ರದಲ್ಲಿಯೇ ಇವನ ಸಹಭೂತ್ರಿಕನೂ ಇತನಿಗೆ ಕೂಡಿಕೊಳ್ಳುತ್ತಾನೆ. ಇಬ್ಬರೂ ನೇರ ಅವಿ ವೈಜ್ಞಾನಿಕ ಪ್ರಯೋಗಗಳ ಉಪಕರಣಗಳನ್ನು ಸ್ಥಾಪಿಸುತ್ತಾರೆ. ಅವರು ಸ್ಥಿರ ಸ್ಥಾನಗಳಲ್ಲಿ ಚಲನಚಿತ್ರಗಳನ್ನು ತೆಗೆಯುತ್ತಾರೆ. ಮತ್ತು ಅವರ ಅಪೂರ್ವ ಅನುಭವಗಳನ್ನು ಭೂಮಿಯಲ್ಲಿನ ಜನಪ್ರತಿನಿಧಿಗಳಿಗೆ ಸಾಧ್ಯವಾಗುವಂತೆ ವಿವಿಧ ವಿಷಯ ಕ್ಯಾಮೆರಾಗಳ ಚಾಲನೆಗೊಳಿಸುತ್ತಾರೆ.

ಅವರು ಅಲ್ಲಿ ನೋಡುವುದನ್ನೆಲ್ಲ ನೋಡಲು ಮಾನವರಿಗೆ ಸಾಧ್ಯವಾಗುವುದು. ಅವರು ಕಲೆಹಾಕಿರುವ ವಿಷಯಗಳನ್ನೆಲ್ಲ ಮಾನವರಿಗೂ ಪಾಲು ಕೊಡಿಸಬಲ್ಲರು.

ಒಂದು ದಿನ ಕಳೆದನಂತರ ಅವರು ಭೂಮಿಗೆ ಒಂದಿರಿಗುವ ಕಾರ್ಯಕ್ರಮವನ್ನು ರಚಿಸುವರು.

ದುಂಬರುವ ಹಾರಾಟಗಳಲ್ಲಿ ಇನ್ನು ಅಭೇಕರು ಚಂದ್ರನಲ್ಲಿಗೆ ಹೋಗಿಬರುವರು. ಅಲ್ಲಿ ಇನ್ನೂ ಹೆಚ್ಚಿನ ಕಾಲ ವಾಸಿಸುವರು, ಹೆಚ್ಚು ಕಲ್ಲುಮಣ್ಣುಗಳನ್ನು ಸಂಗ್ರಹಿಸುವರು, ಹೆಚ್ಚು ಚಿತ್ರಗಳನ್ನು ತೆಗೆಯುವರು, ವಿವಿಧ ವೈಜ್ಞಾನಿಕ ಪ್ರಯೋಗಗಳನ್ನು ನಡೆಸುವರು ಹಾಗೂ ಚಂದ್ರನ ಇನ್ನೂ ಹೆಚ್ಚಿನ ವಿಶಾಲ ಪ್ರದೇಶಗಳನ್ನು ಪರಿಶೋಧಿಸುವರು.

ಆದರೆ, ಇತರರು ಏನನ್ನೇ ಸಾಧಿಸಲಿ, ಪ್ರಪಂಚದ ಇತಿಹಾಸದಲ್ಲಿ ಅಪೋಲೋ-11ರ ಪ್ರಯಾಣಿಕರುಗಳಿಗೇ ಪ್ರಥಮ ಸ್ಥಾನ, ಏಕೆಂದರೆ ಅವರೇ ಮೊಟ್ಟಮೊದಲು ಚಂದ್ರನನ್ನು ತಲಪಿದವರು.

ಸಂಗ್ರಾಮ ಮೈಗಿದೀತು ..... ಆದರೆ ಜೀವನ ಸಂಗ್ರಾಮ?

ಸಾಗುತ್ತಲೇ ಇರುತ್ತದೆ.

ಅಂತಹ ನವೀನ "ಜೀವನ ಸಂಗ್ರಾಮ" ಚಿತ್ರಪ್ರೇಮಿಗಳನ್ನು ಚಿತ್ರಿಸಿದ ನವೀನ ಸಾಮಾಜಿಕ ನಾಟಕವೇ—

ಜೀವನ ಸಂಗ್ರಾಮ

ಲೇಖಕರು : ಶ್ರೀ ಪಿ. ಶೀನ ಶೆಟ್ಟಿ.

ಆಭಿನಯಕ್ಕಿಲ್ಲಿ, ಓದಲಿಕ್ಕೂ ತಕ್ಕುದಾದ ಚೊಕ್ಕ ಪುಸ್ತಕ.

ಬೆಲೆ : ೧—೫೦ (ಟಿ. ಖರ್ಚು ಬೇರೆ)

ವಿಕ್ರಯಾಧಿಕಾರಿಗಳು:—

(1) ಕರಿಯರ ಪ್ರಪಂಚ, ಉಡುಪಿ

(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಹಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಪುಂಚ ಸುಮನ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ವಿಕಾಂಕಿ ನಾಟಕಗಳು	1—00
ಭಾರತದ ನಾಲ್ಕುಮುಖಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಹೆಂಗುಸರ ಕತೆಗಳು	2—00
ನುಡಿಮುತ್ತುಗಳು	1—50
ಪುಂಜಗಜ್ಜಾಯ	2—00
ಪುಷ್ಪಕ್ಷನ	2—00
ಸರಸ್ವತಿ	1—50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪದ್ಮಶ್ರೀ ಪೈಯವರ ನವೀನ ಯೋಜನೆ

ನಮ್ಮಿಂದಲೇ ನಮ್ಮೆಲ್ಲರ ಉದ್ಧಾರ



ಡಾ। ಟಿ. ಎಂ. ಎ. ಪೈ.

ದೇಶದ ಅರ್ಥದಂಡದಲ್ಲಿ ವಾಣಿಜ್ಯ ರಂಗದಲ್ಲಿ ಸೈ ಎನಿಸಿಕೊಂಡ ಹೆಸರು. ಶೈಕ್ಷಣಿಕ ಕ್ಷೇತ್ರದಲ್ಲಿ ದೇಶಕ್ಕೆ ಇವರದ್ದೇ ಮೊದಲು. ಇದೀಗ ಇವರಾರ್ಜಿಸಿಕೊಂಡು ದ.ಡಿಯವ ರಂಗ "ಬರಿಯ ಕೆಸರು." ಶೈಕ್ಷಣಿಕರಾದರೇನು ಸಾಮಾನ್ಯ ಜನರಂತೆ ಹೊಸರು.

ಸಮತೋಷದ ಸಮಿಶ್ರಗೊಬ್ಬರ ಸಫಲ. ಅದರ ಬಳಕೆಯಿಂದ ರೈತಕ್ಷ ಶ್ರಮ ಸಫಲ, ಅವನಿಗೆಹೊರಕಾಷ್ಟದು ಸರ್ಫಲ; ಏಪುಟಫಲ. ಇದರ ಗುಟ್ಟು ಡಾ। ಪೈಯ ವರಿಂದ ಭೇದಿಸಲು ಪ್ರಯೋಗ ಮೂಲಕ ಸಾಧಿತ. ಬಂದ ನಿರ್ಧಾರ — ಸಫಲಾ ಬಳಕೆಯಿಂದ ದೇಶದ ಆಹಾರೋತ್ಪನ್ನ ಇಳವರಿಯಲ್ಲಿ ಕ್ರಾಂತಿ-ಸಮೃದ್ಧಿ ಕಂಡಿತ.

ನಮ್ಮ ಜಿಲ್ಲೆಯ ಆಹಾರೋತ್ಪಾದನೆಗಳ ಮೌಲ್ಯ ಸ್ಥೂ. ರೂ. ೧೧ ಕೋಟಿ. ಸುಫಲಾ ಬಳಕೆಯಿಂದ ಅದು ಹೆಚ್ಚುವುದು ರೂ ೩೦ ಕೋಟಿಗೆ. ಇದು ಸಾಧಿತವಾಗಬೇಕಾದರೆ ಮಾಡಬಹುದಾಗಬೇಕು ಜನರೊಟ್ಟಿಗೆ.

ರೈತ ಜನರಿಗೆ ಸಫಲಾ ಗೊಬ್ಬರದ ಮತ್ತಿತರ ಕೃಷಿಗಪಯುಕ್ತ ಸಾಧನ ಸಲಕರಣೆಗಳು ಹೊರಿಕೆಯೂಗಬೇಕು; ಇದಕ್ಕಾಗಿ ಅಲ್ಲಲ್ಲಿ ವಿತರಣಾ ಕೇಂದ್ರಗಳು ತೆರೆಯಲ್ಪಡಬೇಕು; ಈ ಕೇಂದ್ರಗಳಲ್ಲಿ ಟ್ರಾಕ್ಟರು, ಪವರ್ ಟಿಲ್ಲರ್, ಪಂಪುಸೆಟ್ಟು ಮೊದಲಾದುವೂ ಕೃಷಿ ನೀರಾಶಕರಣ, ಸ್ಪ್ರೇಯರ್ ಇತ್ಯಾದಿಗಳೂ ಕಡಿಮೆ ಬಾಡಿಗೆಗೆ ದೊರೆಯುವಂತಾಗ ಬೇಕು.

ಇದಕ್ಕೆಲ್ಲಾ ಭಾರಿ ಹಣ ಬೇಕು. ಸರಕಾರದ ಮುಖನೋಡುತ್ತ ಕುಳಿತು ಕೊಳ್ಳುವುದು ಸಾಕು; ಶತಮಾನ ಸಂದರೂ ಹೆಳ್ಳಿ ಹಳ್ಳಿಗಳಯದೆಂದರೆ ಇದ್ದಲ್ಲ ಬರಿಯು ಜೇಕು. ಇವ ಒಂದಾನ ಬೆಳು; ತಮ್ಮ ಅವಶ್ಯಕತೆಗಳನ್ನು ತಾವೇ ಆವಶ್ಯ ಪೂರಯಿಸಿಕೊಳ್ಳಬೇಕು. ಇದಕ್ಕೆ ಸೂಕ್ತ ಮಾರ್ಗದರ್ಶನ — ನಾಯಕತ್ವ ಬೇಕೇ ಬೇಕು.

ಡಾ। ಪೂರ್ಣ ಪೈಯವರ ಹಾಗೆ ಕಳ್ಳಕ್ಕೆ ಸವಾಲಿಲ್ಲ ಅಡು ಮುಟ್ಟದ ಸೋಗೆಯಲ್ಲ. ಪೂರ್ಣ ಪೆಟ್ಟದ ರಂಗ ಸ್ಥಳವಿಲ್ಲ. ಅವರಲ್ಲಿ ಯೋಜನೆ-ಸಾಧನೆ ಗಳಿಗೆಂದೂ ಬರಗಾಲವಿಲ್ಲ.

ಒಂದು ಕೇಂದ್ರದಲ್ಲಿ ೫೦೦ ಗ್ರಾಹಕರು ತಿಂಗಳಿಗೆ ರೂ. ೧೦೦।- ರಂತೆ ಉಳಿಸಿ, ಈ ಮೊತ್ತವನ್ನು ೨ ಸಾವಿರಕ್ಕೆ ತರ ಬೇಕು. ೫೫ ವರ್ಷಗಳ ನಂತರ ಈ ೨ ಸಾವಿರದ ಬದಲಿಗೆ ಸು. ೧೨ಸಾವಿರದಷ್ಟ ಹಣ ಮನೆಗೆ ಪಡೆಯುವೇಕು.

ಇದು ಸಾಧ್ಯವೆಂದೂ ಅವರು ತೋರಿಸುತ್ತಾರೆ. ಜಿಲ್ಲೆಯ ೧೩ಲಕ್ಷ ಜನರಲ್ಲಿ ೬ ಲಕ್ಷ ಜನರು ಯಾವುದೇ ಉಳಿತಾಯ ಯೋಜನೆಗಳಲ್ಲಿ ಭಾಗವಹಿಸಲು ಅರಕ್ಷ ರೆನ್ನುತ್ತಾರೆ ಆಗ ೬ ಲಕ್ಷ ಉಳಿಯು ತ್ತಾರೆ.ಇವರಲ್ಲಿ ಒಬ್ಬರು ಇದರಲ್ಲಿ ತೊಡಗಿದಲ್ಲಿ ಸಫಲಾ ಯೋಜನೆ ಸಫಲವೆನ್ನುತ್ತಾರೆ.

ರೂ. ೧೦ ಸಾವಿರಕ್ಕೆ ಮಿರಿ ಈ ಯೋಜನೆಯಲ್ಲಿ ತೊಡಗಿಸುವವರಿಗೆ ಇತರ ಹಲವು ಲಾಭಗಳು: ತಮ್ಮ ಪುಟ್ಟ ಮಕ್ಕಳ ವಿದ್ಯಾಭಿವೃದ್ಧಿಯಲ್ಲಿ ರೂ ೬೨/-ರ ಪುಸ್ತಕಗಳ ಕೊಡುಗೆ. ಎಕೆಡೆಮಿ ವಿದ್ಯಾ ಸಂಸ್ಥೆಗಳಲ್ಲಿ ಕೃಷಿಯ ಪ್ರಾಥಮಿಕ ಪಾಠ ಶಾಲೆ, ಮಣಿಪಾಲ ಆಸ್ಪತ್ರೆಯಲ್ಲಿ ರಿಯಾಯಿತಿ ದರದ ಚಿಕಿತ್ಸೆ, ಮಣಿಪಾಲ ಇಡಿಂ ಸ್ಟ್ರೀಸ್‌ನ ನಿರ್ಮೋಪಯೋಗಿ ವಸ್ತು ಗಳನ್ನೂ ಬೆಲೆಸುಲ್ಲಿ ಕಡಿಕ, ಇತ್ಯಾದಿ ಇತ್ಯಾದಿ.

ಪ್ರಕೃತ ಜಿಲ್ಲೆಯಲ್ಲಿ ತೆರೆಯಲ್ಪಡುವ ಸಮೂಹಯೋಜನಾ ಇಂತಹ ಕೇಂದ್ರಗಳನ್ನು. ಕೇಂದ್ರಾಧಿಕಾರಿಗಳಾಗಿ ನೇಮಕಗೊಡುವುದೂ ಹಳ್ಳಿಗರನ್ನು.

ನಿರುದ್ಯೋಗ ನಿವಾರಣೆ ಆಹಾರೋತ್ಪಾದನೆ, ಉಳಿತಾಯ ಯೋಜನೆ, ಸಹಕಾರ ಭಾವನೆ, ಆರ್ಥಿಕ ಸೌಲಭ್ಯ ಸಾಧನೆ-ನೊದಲಾದ ಹಲವು ಲಾಭಗಳ ತಂಗೊಡ್ರಿಯೆ ಫಿನಿಸ ಈ ಯೋಜನೆ ಕಾರ್ಯರೂಪಕ್ಕೆ ಬರಬೇಕು; ನಮ್ಮ ಉದ್ಧಾರ ನಮ್ಮಿಂದಲೇ ಸಾಧ್ಯವಾಗಬೇಕು.

ಕಾರ್ಕಳ ಮುನ್ಸಿಫ್ ಕೋರ್ಟ್‌ನಲ್ಲಿ

P & S C 5/1969.

1, ನೇತ್ರ ಹೆಗ್ಗಡ್ತಿ, 2, ಮನಾಪಾ, 3, ಚಂದ್ರಶೇಖರ, 4, ವಿನೋದ, 5, ಜಯಕ.ಮೂರ — ಮೈನರ್ಸು ಬಗ್ಗೆ ಗಾರ್ಡಿಯಾನ್ ತಾಯಿ 1ನೇ ಅರ್ಜಿದಾರಳು. 6 ಮುಯಿಯಂಮ ಹೆಗ್ಗಡ್ತಿ .... ಅರ್ಜಿದಾರರು.

ಮೃರ್ಜ ಗ್ರಾಮದಲ್ಲಿದ್ದು ವೃತವಾದ 1ನೇ ಅರ್ಜಿದಾರಳ ಗಂಡ ವರನೇ ಅರ್ಜಿದಾರಳ ಮಗ ಲಿಂಗಯ್ಯ ಹೆಗ್ಗಡಿಗೆ ಬರತಕ್ಕ ಡಿ. ನೆಕ್ರಿ. ನೋಟಿನ ವಿಚಾರ ವಿಸಾಲು ಹೊಂಡುವರೆ 1ನೇ ಅರ್ಜಿದಾರಳ ಹೆಸರಲ್ಲಿ ಸ್ಥಿರ ಸರ್ಪತ್ತೆಗಳಿಗೆ ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 29.7.1969 ಕ್ಕೆ ಇಟ್ಟಿರುತ್ತದೆ. ಆ ಕಾರಣ ಆಕ್ಷೇಪವುಳ್ಳವರು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿನ ಪೂರ್ವಾಹ್ನ ಗಂಟೆ 11ಕ್ಕೆ ಹಾಜರಾಗಿ ಉದ್ದರಿಸಿಕೊಳ್ಳತ್ತದ್ದು. ತಪ್ಪದಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಪನ್ನಾಜ್ಞೆಯಾಗುವುದು.

M. S. Hegde,
Advocate for Applicants.
Karkala.
10—7—1969.

ಸ್ವಯಂ ಸಹಾಯಕ್ಕೆ ಅವಸ್ಥವೇಕೆ?

ವಿದ್ಯಾರ್ಥಿಗಳಿಂದ ಸಹಾಯಧನ ಪಡೆಯುತ್ತಿರುವ ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜು ವರ್ಷಕ್ಕೆ ರೂ. ೬ ಲಕ್ಷ ಕೊರತೆಯಲ್ಲಿ ನಡೆಯುತ್ತದೆ— ಇದು ಎಕೆಡೆಮಿಯ ಕಾರ್ಯದರ್ಶಿ ಶ್ರೀ ರಮೇಶ್ ಪೈಯವರು ವಾರ್ಷಿಕ ಮಹಾಸಭೆಯು ವಂದಿಟ್ಟ ವರದಿಯಲ್ಲಿ ಉಲ್ಲೇಖವಾಗಿದೆ.

ಕೇಳಿಕೇಳಿ "ಕಸ್ತೂ" ಕಾಲೇಜು ಎಂದು ಹೆಸರಾದ ಮಣಿಪಾಲದ ಕಾಲೇಜಿಗೇ ಇಷ್ಟು ನಷ್ಟವಾಗುವಾಗ, ಸರಕಾರಿ ಕಾಲೇಜುಗಳ ಗತಿಯೇನು? ಒಂದು ವೇಳೆ, ಇಲ್ಲಿ ಸಹಾಯಧನ ವಿದ್ಯಾರ್ಥಿಗಳಿಂದ ಪಡೆಯದೆ ಹೋಗಿದ್ದರೆ, ಈ ಕಾಲೇಜುಗಳನ್ನು ನಡೆಸಲು ಸರಕಾರ ಎಷ್ಟು ಕರ್ಚು ಮಾಡಬೇಕಾಗುತಿತ್ತು? ನಾವೆಷ್ಟು ಜಿಜ್ಞಾಸೆ ತೆರಿಗೆ ಕೊಡಬೇಕಾಗುತಿತ್ತು?

ಎಕೆಡೆಮಿಯ ವೃತ್ತಿಪರ ಕಾಲೇಜುಗಳಲ್ಲಿ ಮಾತ್ರ ಸಹಾಯಧನ ಪಡೆಯಲಾಗುವುದೆಂಬುದನ್ನು ವರಿಸುವಾಗ ಎ ರೆಸುಬಾರವೇ. ಎಕೆಡೆಮಿ ನಡೆಸುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿಯೂ ಸವರ್ಧ ಶಿಕ್ಷಣದ ವ್ಯವಸ್ಥೆಯಿರುವುದಲ್ಲದೆ ವಿದ್ಯಾರ್ಥಿಗಳಿಗೆ ಹಲವಾರು ಬಗೆಯ ಛಾತ್ರವೃತ್ತಿಗಳು, ಸುಲಭ ಸಾಲಸೌಲಭ್ಯಗಳು ದೊರೆಯುತ್ತವೆ.

ಸದ್ಯದಲ್ಲೇ ಮಣಿಪಾಲದ ಆಸ್ಪತ್ರೆಯು ವಿಸ್ತರಣೆಗೊಳ್ಳಲಿದೆ. ಇಲ್ಲಿ ೨೦೦ ಹಾಸಿಗೆಗಳ ವ್ಯವಸ್ಥೆಯಾಗುತ್ತದೆ. ಆಗ ಹೆಚ್ಚು ಹೆಚ್ಚಾಗಿ ರೋಗಿಯು ಮಿಗಿಲಾದೀತು. ದುಡ್ಡಿಲ್ಲವರಿದ್ದಿನ್ನಲಾಗುವ ಎಕೆಡೆಮಿಯ ಆಸ್ಪತ್ರೆಯನ್ನು ಬಯಸಿ ನಾಲ್ಕು ಕೋಟಿ ರೂಪಾಯಿ. ಇದ ಇಷ್ಟಕ್ಕೆ ನಿಲ್ಲದ್ದು ಪಡೆದ ಸಹಾಯಧನದ ಬೂತಿಕೆಯಾಯಿದ್ದು. ಎಕೆಡೆಮಿಯ ಅಡಳಿತಾಧಿಕಾರಿ. ವೇತನ ಪಡೆಯದೆ ಸೇವಾಧಿವನೆಯಿಂದ ಅಹರ್ನಿಶಿ ದುಡಿಯುತ್ತಿರುವುದರಿಂದ, ಸ್ವತಃ ವೆಚ್ಚನ ವೇಲೂ ಹಿಡಿದಿನ ಕಣ್ಣು ಇಟ್ಟಿರುವುದರಿಂದ

ಸಾರ್ವಜನಿಕ ರಂಗದಲ್ಲಾಗುತಿದ್ದರೆ, ಸಾಧನ ಸಂಪತ್ತು ದೂರವಿರಲಿ, ರಾಲೇಜೇ ಇರುತ್ತಿರಲಿಸ್ಸಪ್ಪಾ ವಿನೋ! ಬಸ್ಸುಡಿಪೋ ಟಯರ್‌ಗಳನ್ನೇ ಮೂರು ಬಿಡಿ.ವಂಥ ನೌಕರರನ್ನು ಟಚ್ಚುಕೊಂಡು ಎಸ್ ಟಿ. ವಿಮಾಳಿಯೂಗುತ್ತಿರುವ ಒಂದೇ ಒಂದು ಉದಾಹರಣೆ ಸಾಕು.

ಸಹಾಯಧನ ಕೊಡಲು ಜನ ಸಿದ್ಧವಿರುವಾಗ ಅದಕ್ಕೆ ಪಡೆಯೊಡ್ಡುವುದ ಏಂದಿಗೂ ನ್ಯಾಯವಲ್ಲ. ಸ್ವಯಂ ಸೇವರಿಗೆ ಅಶ್ವರ ಕೇಳಿಸುವುದು ಸಲ್ಲದ, ಜೊಲ್ಲದು.

ರೋಟರಿ ಕ್ಲಬ್, ಭದ್ರಾವತಿ

ಇದರ ನೂತನ ವರ್ಷದ ಪದಾಧಿಕಾರಿಗಳಾಗಿ ಈ ಕೆಳಗಿನವರು ಆರಿಸಲ್ಪಟ್ಟಿದ್ದಾರೆ.

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಮೆನೇಜಿಂಗ್ ಡೈರೆಕ್ಟರ್ ಮತ್ತು ಉಪಾಧ್ಯಕ್ಷ ರೊಟೇರಿಯನ್ ಎಂ. ಜಿ. ವಿ. ರೆಡ್ಡಿ, ಪಿ ಎ ಎಸ್. [ಅಧ್ಯಕ್ಷರು] ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಚೀಫ್ ಅಕೌಂಟ್ಸ್ ಫೈನಾನ್ಸಿಯಲ್ ಮೆನೇಜರ್ ರೊಟೇರಿಯನ್ ಜಿ. ಎನ್. ಸ್ವಾಮಿ ಮತ್ತು ಡಾ। ಟಿ.ಯರ್ನಾರಾಜಗೋಪಾಲ್ [ಉಪಾಧ್ಯಕ್ಷರು] ಎಸ್. ಜಿ. ಪೊಲಿಟೆಕ್ನಿಕ್ ಕಾಲೇಜಿನ ಪ್ರಿನ್ಸಿಪಾಲ್ ರೊಟೇರಿಯನ್ ಬಿ.ಎನ್. ಪುಟ್ಟಯ್ಯ ಗೌಡ [ಕಾರ್ಯದರ್ಶಿ] ಮೈಸೂರು ಕೆಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಪಬ್ಲಿಕ್ ರಿಲೇಶನ್ಸ್ ಆಫೀಸರ್ ರೊಟೇರಿಯನ್ ಎಸ್. ಸುದ್ದಾಕರ ಶೆಟ್ಟಿ [ಜೊತೆಕಾರ್ಯದರ್ಶಿ] ರೊಟೇರಿಯನ್ ಎಚ್. ಜಿ. ಬಾಲಗೋಪಾಲ್ [ಕೋಶಾಧಿಕಾರಿ]

ಬಂಟರ ಯೂನೆ ನಾಡವರ ಸಂಘ

ಮುಂಬಾಯಿ

ಮೇಲಿನ ಸಂಘದ 41ನೇ ದುಹಾಕಾಧೆ ಮತ್ತು 10ನೇ ಸ್ನೇಹ ಕೂಟ ಸವರೂಂಭವು ತಾ.೨೮-6-69ರಂದು ಅರ್ ಏ ಪೊದರ್ ಕಾಲೇಜ್, ಮಟುಂಗ ಇದರ ಸಭಾಗೃಹದಲ್ಲಿ ವಿಜೃಂಭಣೆಯಿಂ ಜರಗಿತು. ಹೊಸ ವರ್ಷದ ಆಡಳಿತ ಸಮಿತಿಗೆ ಈ ಕೆಳಗಿನ ಮಹಾಶಯರು ಆರಿಸಲ್ಪಟ್ಟರು.

ಡಾ। ಪಡುಎಡ್ರಿ ಜಗನ್ನಾಥ ಶೆಟ್ಟಿ, ಅಧ್ಯಕ್ಷರು, ಶ್ರೀ ಆತ್ತೂರು ಭೋಜ ಶೆಟ್ಟಿ, ಉಪಾಧ್ಯಕ್ಷರು, ಶ್ರೀ ಮುಲ್ಕಿ ಗಂಗಯ್ಯ ಶೆಟ್ಟಿ, ಗೌ। ಪ್ರಧಾನ ಕಾರ್ಯದರ್ಶಿ, ಶ್ರೀ ಕೆ. ಸೀತಾರಾಮ ಶೆಟ್ಟಿ, ಗೌ। ಉಪ ಕಾರ್ಯದರ್ಶಿ, ಶ್ರೀ ವೈ ಮುದ್ದು ಶೆಟ್ಟಿ, ಗೌ। ಕೋಶಾಧಿಕಾರಿ, ಶ್ರೀ ಗೋಪಾಲ ಬಿ ಶೆಟ್ಟಿ, ಗೌ। ಉಪ ಕೋಶಾಧಿಕಾರಿ, ಶ್ರೀ ಯನ್. ಗೋಪಾಲ ಶೆಟ್ಟಿ, ಜಾಲಾ ಜಯರ್‌ಮನ್; ಶ್ರೀ ಕೆ ಕರು ಣಾಕರ ಶೆಟ್ಟಿ, ಜಾಲಾ ಕಾರ್ಯದರ್ಶಿ; ಶ್ರೀ ರಾಮಣ್ಣ ಶೆಟ್ಟಿ, ಮುಚ್ಚೂರು, ಜಾಲಾ ಕೋಶಾಧಿಕಾರಿ.

ಸಭಿಕರಲ್ಲಿ ಶ್ರೀಗಳಾದ ಕಳವಾರು ಶ್ಯಾಮ ಶೆಟ್ಟಿ, ಕೆ. ಸೀತಾರಾಮ ಶೆಟ್ಟಿ, ಯನ್. ಗೋಪಾಲ ಶೆಟ್ಟಿ ಮತ್ತು ಕಲ್ಲ ಕೆಲವೆಡೆಗಳ ಆಸ್ಥಿತ ಪಲ್ಲಿರಾದ ಶ್ರೀಮತಿ ಸುನೀತ ಮಹಾಬಲ ಶೆಟ್ಟಿಯವರ ಸವಾಜ ಮತ್ತು ಸಂಘದ ಏಳಿಗೆಯ ಕುರಿತು ಸಮಾಯೋಚಿತ ಭಾಷಣಗಳನ್ನಿತ್ತರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಸ್ವಸ್ಥಿಗಾಗಿ ದುಡಿಯಲು ಸವಾಜದ ಬಂಧು ಭಗಿಣಿಯರಲ್ಲಿ ವಿನಂತಿಸಿಕೊಂಡರು ಸಂಘದ ಸದಸ್ಯತನವನ್ನು ಹೆಚ್ಚಿಸುವರೆ ಎಷ್ಟೊರೆ ಪ್ರಯತ್ನಿಸಬೇಕೆಂದೂ ಆಜೀವ ಸದಸ್ಯತನವನ್ನು ಒಂದು ಸಾವಿರಕ್ಕೆ ಮುಟ್ಟಿಸಬೇಕೆಂದೂ ವಿನಂತಿಸಿದರು. ಅವ್ಯಕ್ತ ನವ್ಯ ಸಂಘಕ್ಕೆ ಶೋಷಣೆಯಿಂಗಿ ಸಾಧ್ಯವಿದ್ದಷ್ಟು ಗಣ ಪ್ರಯ ವ್ಯಕ್ತಿಗಳನ್ನು ಸೇರಿಸಬೇಕೆಂದು, ಇತರ ರನ್ನು ಕೇಳಿಕೊಳ್ಳುವ ಮೊದಲು ತಾವು ಸಂಘದ ಶೋಷಕರನ್ನಾಗಿ ಸೇರುವುದಾ ವಾಗ್ದಾನ ಶಿಕ್ಷರು ಅನಂತರ ಗೌ ಪ್ರಧಾನ ಕಾರ್ಯದರ್ಶಿಯವರಾದ ಮುಲ್ಕಿ ಗಂಗಯ್ಯ ಶೆಟ್ಟಿ ಧನ್ಯವಾದವನ್ನರ್ಪಿಸಲು ಕೊಡ ಭೋಜ ಶೆಟ್ಟಿ ಬರೆದು ದಿಗ್ದರ್ಶಿಸಿದ ಎನ್ ಕಟ್ಟೆ ಒಂ ಜೆ ಕುಡುಲಿ ಎಂಬ ತುಳು ನಾಟಕ ಮತ್ತು ವಿವಿಧ ವಿನೋದಾವಳಿಗಳಿಂದ ಅಂದಿನ ಕಾರ್ಯಕ್ರಮವು ಪರಿಪೂರ್ಣಯವಾಯ್ತು.

ಕಟೀಲಿನಲ್ಲಿ ಧ್ವಜಮಂಟಪದ ಶಿಲಾನ್ಯಾಸ

ಜಿಲ್ಲೆಯ ಪವಿತ್ರ ಪಾವನ ಕ್ಷೇತ್ರ ಶ್ರೀ ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರವಾಂಗವಾಗಿ ಮುಖ್ಯಮಂಟಪದ ಪಿದಿರು ಧ್ವಜಮಂಟಪದ ಪುನರ್ರಚನಾ ಕಾರ್ಯಕ್ರಮವು ತಾ.೬.7.೬೯ರಂದು ಜರಗಿತು.

ದಿ। ಕಂತ್ರೆತ್ತೂರು ಸೀತಾರಾಮಾಯರ ಸ್ಮಪತ್ರಗೆ ವಶವಾಗಿ ಭೂತ್ತಾಗಿ ನಿರ್ವಹಣೆ ವಾಗಲಿರುವ ಈ ವಿನೂತನ ಧ್ವಜಮಂಟಪದ ಶಿಲಾನ್ಯಾಸವನ್ನು ಶ್ರೀ ಕೆ. ನಾರಾಯಣ ದಾಸರ ದಿವ್ಯ ಹಸ್ತದಿಂದ ನೆರವೇರಿತು.

ಅಡಳಿತ್ ಮೊಕ್ತೇಸರ್ ಡಾ। ಗಣನಾಥ ಶೆಟ್ಟರು ಶ್ರೀ ಕೆ. ನಾರಾಯಣದಾಸ್ ಹಾಗೂ ಪಾವಾರಿಸೆವರನ್ನು ಹೂಹಾರಗಳ ಮೂಲಕ ಗೌರವಿಸಿದರು.

ದೇವಳದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಕೀಲ ಪಿ.ಸಂಜೀವರಾಯರು ಕೋಶಾಧಿಕಾರಿ ಶ್ರೀ ಕೆ ಭಾಸ್ಕರರಾಯರು ಮತ್ತು ಶ್ರೀ ಬಿ. ಎಂ. ಎಸ್. ತಾಳ್ತಾಯರೇ ಮೊದಲಾದವರು ದಿ। ಕೆ. ಸೀತಾರಾಮರಾಯರ ಸಾಮಾಜಿಕ ಧಾರ್ಮಿಕ ಸತ್ಕಾರ್ಯದ ಬಗೆ ಸ್ಮರ್ತಿಸಿದರು ಶಿಲಾನ್ಯಾಸ ಪ್ರಕ್ರಿಯೆಯಲ್ಲಿ ಸಹಕರಿಸಿದವರನ್ನು

ಕಣ್ಮರೆಯಾದ ನಿಷ್ಠಾವಂತ ಕಾಂಗ್ರೆಸಿಗ

ಬಾಳೆಬ್ಬಬೀಡು ಕೃಷ್ಣಯ್ಯ ಹೆಗ್ಡೆ



ದಿ. ಬಿ. ಕೃಷ್ಣಯ್ಯ ಹೆಗ್ಡೆ

ಜನ್ಮ ತಿಂಗಳ ಎಂಟನೆಯ ತಾರೀಕು.

ಶ್ರೀ ಬಾಳೆಬ್ಬಬೀಡು ಕೃಷ್ಣಯ್ಯ ಹೆಗ್ಗಡೆಯವರು ಹೃದಯ ವೇದನೆ ಕಾಣಿಸಿಕೊಂಡದರಿಂದ ಮಂಗಳಾಲದ ಕಸ್ತೂರ್ಬಾ ಜನರಲ್ ಆಸ್ಪತ್ರೆಗೆ ವೈದ್ಯಕೀಯ ಸೇವೆ ಪಡೆಯಲೆಂದು ಹೊರಟುಬಂದರು. ಆದರೆ, ಹೃತ್ಕಿಯೆ ನಿಂತುಹೋಯಿತ; ಶ್ರೀ ಹೆಗ್ಗಡೆಯವರು ವಿಧಿವಶರಾದರು.

ಶ್ರೀ ಹೆಗ್ಗಡೆಯವರಿಗೆ ನಡೆಯುತ್ತಿದ್ದ ದು ಒಟ್ಟನೆಯ ವಯಸ್ಸು. ಸೋಡಲು ಸುದೃಢವಾದ ದೇಹದಾರ್ಢ್ಯ ಅವರನ್ನು ಇನ್ನೂ ಬಹು ವರ್ಷ ಭವ್ಯ ಮುಂದಿರುವಂತೆ ರಕ್ಷಿಸಿಕೊಳ್ಳಬೇಕಿತ್ತು. ಆದರೆ, ವಿಧಿಯಾಳ್ವ ಯಾರೂ ಮಿರುವಂತಿಲ್ಲ.

ಶ್ರೀ ಬಾಳೆಬ್ಬಬೀಡು ಕೃಷ್ಣಯ್ಯ ಹೆಗ್ಗಡೆಯವರು ಜಿಲ್ಲೆಯ ನಿಷ್ಠಾವಂತ ಕಾಂಗ್ರೆಸಿಗರಲ್ಲಿ ಒಬ್ಬರು. ದೇಶದ ಬಂಧ ವಿಮೋಚನಾ ಹೋರಾಟ ನಮ್ಮ ಜಿಲ್ಲೆಯಲ್ಲಿ ಕಾಣಿಸಿಕೊಂಡಾಗ, ಇವರು ಆ ದರಲ್ಲಿ ಸಕ್ರಿಯವಾಗಿ ಭಾಗವಹಿಸಿದ ಧೀರರಲ್ಲಿ ಒಬ್ಬರು. ಪರಿಣಾಮವಾಗಿ ಕಾರಾಗೃಹವಾಸದ ದಂಡನೆಯನ್ನೂ ಅನುಭವಿಸಿದವರು. ಕಾಂಗ್ರೆಸ್‌ನ ಎಲ್ಲ ಕಾರ್ಯಕ್ರಮಗಳಲ್ಲೂ ನಿರ್ಭೀಡೆಯಿಂದ ಪಾತ್ರಧಾರಿಗಳಾಗಿ ನಡೆದುಕೊಂಡವರು ಉಡುಪಿ ತಾಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಬಹುಕಾಲ ಸೇವೆ ಸಲ್ಲಿಸಿದವರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿಯೂ ದುಡಿದಿದ್ದರು. ರಚನಾತ್ಮಕ ಯೋಜನೆಗೆ ಬಹಳ ಮೊದಲೇ ತಮ್ಮ ತಾವು ರಾಜೀನಾಮೆ ಮಾಡಿಕೊಂಡು ಹಳ್ಳಿಯ ಉದ್ಧಾರಕ್ಕೆ ಕೈಹಾಕಿದ್ದರು. ಕೃಷಿಯಲ್ಲಿ ಅಪಾರ ಆಸಕ್ತಿ ಇಟ್ಟುಕೊಂಡಿದ್ದ ಇವರು ಹಳ್ಳಿಯಲ್ಲಿ ಉಳಿದು, ಸಕ್ರಿಯ ರಾಜಕಾರಣವನ್ನು ತ್ಯಜಿಸಿ, ಬದಲಿಗೆ ಸುಧಾರಿತ ಕೃಷಿಪದ್ಧತಿಯನ್ನು ಕಾರ್ಯರೂಪಕ್ಕೆ ತಂದು ರಚನಾತ್ಮಕ ಕಾರ್ಯಕರ್ತರಾಗಲಿಕ್ಕೆ ತೊಡಗಿದರು ನಿಸ್ಪೃಹರೂ ಕ್ರಿಯಾಶೀಲರೂ ಆಗಿದ್ದಾರೆ.

ಶ್ರೀ ಕೃಷ್ಣಯ್ಯ ಹೆಗ್ಡೆಯವರದ್ದು ಉತ್ತಮ ಸಾಮಾಜಿಕ ಸಂಬಂಧ. ಉಡುಪಿ ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್‌ನ ಆರಂಭದಲ್ಲಿ ಡೈರೆಕ್ಟರರಾಗಿ ಕೆಲವು ವರ್ಷಗಳಿಂದ ಆದರ ಅಧ್ಯಕ್ಷರಾಗಿ ದುಡಿದಿದ್ದಾರೆ. ಹೆರ್ಗ ಕೃಷಿಕ ಸಹಕಾರಿ ಸಂಘದ ಅಧ್ಯಕ್ಷರಾಗಿ ಕೃಷಿರಂಗಕ್ಕೆ ಇವರು ಸಲ್ಲಿಸಿದ ಸೇವೆ ನಿಜಕ್ಕೂ ಅವಿಸ್ಮರಣೀಯವಾದುದು. ಇವಲ್ಲದೆ ಇನ್ನೂ ಹತ್ತಾರು ಸಾರ್ವಜನಿಕ ಸಂಸ್ಥೆಗಳಲ್ಲಿಯೂ ದುಡಿದ ಶ್ರೀ ಬಾಳೆಬ್ಬಬೀಡು ಕೃಷ್ಣಯ್ಯ ಹೆಗ್ಡೆಯವರು ಕೂನೆಯುಸಿರಿರುವತನಕವೂ ಕ್ರಿಯಾಶೀಲರಾಗಿಯೇ ಇದ್ದರು.

ಶ್ರೀ ಹೆಗ್ಗಡೆಯವರು ಆರಂಭದಿಂದ ಕೊನೆಯತನಕವೂ ಕಾಂಗ್ರೆಸ್‌ನ ತತ್ತ್ವಗಳನ್ನು ನಿಷ್ಠೆಯುಳಿಸಿಕೊಂಡವರು; ಆ ತತ್ತ್ವಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನವನ್ನು ಮಾಡಿ ಬಹುಪಾಲು ಯಶಸ್ವಿಯಾದವರು. ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಗೊಸ್ತುಗುರಿಗಳು ಗಾಳಿಪಟವಾಡುತ್ತಿದ್ದರೂ ಅವುಗಳ ಬಗ್ಗೆ ಹೃದಯ ನೋಯುತ್ತಿದ್ದರೂ ತಮ್ಮ ಕಾಂಗ್ರೆಸ್ ನಿಷ್ಠೆಯನ್ನು ಉಳಿಸಿಕೊಂಡು ಬಂದ ಕೆಲವೇ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಶ್ರೀ ಹೆಗ್ಡೆಯವರ ನಿಧನದಿಂದ ರಾಜ್ಯದ ನಿಷ್ಠಾವಂತ ಕಾಂಗ್ರೆಸಿಗನೊಬ್ಬ ಕಣ್ಮರೆಯಾದಂತಾಯಿತು.

ಶ್ರೀ ಹೆಗ್ಗಡೆಯವರು ತಮ್ಮ ಹಿಂದೆ ಸಹಧರ್ಮಿಣಿ, ಇಬ್ಬರು ಗಂಡು ಹಾಗೂ ಮೂವರು ಹೆಮ್ಮಕ್ಕಳನ್ನೂ ಅಪಾರ ಬಂಧು-ಬಾಂಧವ-ಮಿತ್ರಗಣವನ್ನೂ ಬಿಟ್ಟುಹೋಗಿದ್ದಾರೆ. ಇವರ ಕುಟುಂಬದ ದುಃಖದಲ್ಲಿ 'ನವಯುಗ'ವೂ ಭಾಗಿಯಾಗುತ್ತದೆ ತಪ್ಪು ಹೃದಯಿಗಳು ಅತ್ಯಲ್ಪ ಕಾಲದಲ್ಲಿ ಅಪಾರ ಶಾಂತಿ ಲಭ್ಯವಾಗಲೆಂದು ಭಗವಚ್ಚರಣದಲ್ಲಿ ಅನನ್ಯಭಾವದಿಂದ ಪ್ರಾರ್ಥಿಸುತ್ತದೆ.

ಪುಸ್ತಕ ಪರಿಚಯ

ದೇವಭೂಮಿ ಗೋಮಾಂತಕ :

ಲೇಖಕರು. ಶ್ರೀ ಶಾ. ಮಂ. ಕೃಷ್ಣರಾಯ

ಪ್ರಕಾಶಕರು. ಸಾಹಿತ್ಯನಿಧಿ, ಖಿಲೆ.

ಬಾಂದ-ಮಡಗಾಂವ(ಗೋವಾ)

ಪುಟಗಳ 176 ಬೆಲೆ: ರೂ ೪-೦೦

ಪೋರ್ಚುಗೀಸರು ಪರತಾಂತರದಲ್ಲಿ ಉದ್ಯುಕ್ತರಾದಾಗ, ಹಿಂದೂ ಧರ್ಮವನ್ನು ಬಿಡಲೊಪ್ಪದೆ ಗೋವೆಯಿಂದ ಮೂರಾಬಟ್ಟೆಯಾಗಿ ಹೊರಬಂದ ಹಿಂದುಗಳಲ್ಲಿ ಹೆಚ್ಚಿನವರ ವಂಶ ಆಂಧ್ಯ ದೈವ ಇಂದಿಗೂ ಗೋವೆಯುಲ್ಲೇ ಉಳಿದಿದೆ ಆದರೆ ಒಂದೊಂದು ಕುಲಕ್ಕೆ ಒಂದೊಂದು ಆರಾಧ್ಯ ದೈವವಿದ್ದು, ಇಂದು ಹೆಚ್ಚಿನವರಿಗೆ ಇದರ ಪರಿಚಯವೂ ಇರುವುದಿಲ್ಲ, ಅಥವಾ ಅದು ಎಲ್ಲಿದೆ ಎಂಬುದರ ತಿಳಿವಳಿಕೆಯೂ ಸುಲಭದಲ್ಲಿ ಆಗುವಂತಿಲ್ಲ. ಹಾಗಿದ್ದರೂ ತಮ್ಮ ಕುಲದೇವರು ಗೋವೆಯುಷ್ಟಿದ್ದಾರೆಂದು ಅಭಿಮಾನದಿಂದಲೇ ಹೇಳುತ್ತಾರೆ. ಒಂದು ಕಾಲದಲ್ಲಿ ದೇವ-ದೇವತೆಗಳ ವೈಭವದಿಂದ ಮೆರೆದಾಡಿದ ಗೋವೆಯುಲ್ಲಿ ಇಂದ ಅವರ ವೈಭವಕ್ಕೆ ಪರಕೀಯರಾಡಳಿತೆಯಿಂದ ಚ್ಯುತಿ ಶಿಟ್ಟಿ ದೆಯಾದರೂ ಮೂಲೀಕ ರಾಚಾರ್ಯರೋ ವಾಗಿಲ್ಲ; ಛಛರತೆಗೆ ಕೊರತೆ ಬಂದಿಲ್ಲ

ನೆರೆಹೊರೆಯ ಮಾಜಿ ಗೋಮಾಂತರ ಸಹಾಯಕ್ಕಾಗಿ ಶ್ರೀ ಶಾ. ಮಂ. ಕೃಷ್ಣರಾಯರು ಗೋಮಾಂತಕದೊಳಗಿರುವ ಹೆಚ್ಚಿನ ಸಣ್ಣ ದೊಡ್ಡ ದೇಗುಲಗಳ ಪರಿಚಯವನ್ನು ಇಲ್ಲಿ ಮೂಡಿಕೊಟ್ಟಿದ್ದಾರೆ ಅಲ್ಲಲ್ಲಿ ಪೌರಾಣಿಕ ಹಾಗೂ ಚಾರಿತ್ರಿಕ ಆಧಾರಗಳನ್ನೂ ಐತಿಹ್ಯಗಳನ್ನೂ ಸಂಗ್ರಹಿಸಿ ನೀಡಿದ್ದಾರೆ. ಇದರಿಂದ ಗೋವೆಯಂತಹ ಒಂದು ಪುಟ್ಟ ಕ್ಷೇತ್ರದೊಳಗೆ ಅನೇಕ ದೇಗುಲಗಳ ಅಸ್ತಿತ್ವವಿರುವುದು. ಪೋರ್ಚುಗೀಸ್ ಪ್ರಭಗಳ ಳ ಶತಮಾನಗಳ ದಬ್ಬಾಳಿಕೆಯ, ಮತಾಂತರ ಸಹವಾದ ಆಳಕೆಯುಲ್ಲೂ ಅವು ಮೂಲೆಪಾಲಾಗದಿರುವುದು ಅನುಭವವೇದ್ಯವಾದುದೆ.

'ದೇವಭೂಮಿ ಗೋಮಾಂತಕ' ಸಂಶೋಧನಾ ಗ್ರಂಥವೇನೂ ಅಲ್ಲ. ಸಂಶೋಧನೆ ಇದರ ಉದ್ದೇಶವೂ ಅಲ್ಲ ಇದೊಂದು ಕುಲದೈವದಳ ಕೈಪಿಡಿ ಪರಿಚಯ ಮಾತ್ರ. ಆದರೂ ಅನೇಕಾಂಗಿಕವಾಗಿ ಕೆಲವೆಡೆ 'ಸಂಶೋಧನೆ'ಯ ಗಾಳಿ ತಾಗಿದೆ. ಗೋವೆಯೊಳಗಣ ಹಿಂದೂ ದೇವಾಲಯಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಲಿಚ್ಛಿಸುವವರಿಗಿದೊಂದು ಮಾರ್ಗದರ್ಶಿಕೆ.

ಶ್ರೀ ಕೃಷ್ಣರಾಯರ ಶ್ರಮ ಸಾರ್ಥಕವಾಗಿದೆ. ಅವರ ಉದ್ದೇಶ ನಿರೀಕ್ಷೆಗಿಂತ ಹೆಚ್ಚು ಯಶಗಳಿಸಿದೆ. ಈ ಪುಸ್ತಕದ ಪ್ರಕಟಣೆಯು ಸಕಾಲಿಕ ಹಾಗೂ ಅತ್ಯುಪಯುಕ್ತ.

—ಗೋರಾ

ಕ್ರಿಮಿಕೀಟಕ ವಿಕೆ ಹೆಚ್ಚುತ್ತಲಿನೆ?

ಹಳೇ ಪದ್ಧತಿಯ ಒಕ್ಕಲತನದಲ್ಲಿ ಕೀಟಾಣುಗಳ ಬಾಧೆ ಕಡಿಮೆ, ಸುಧಾರಿಸಿದ ಹೊಸ ಸಾಗುವಳಿ ಪದ್ಧತಿಯಲ್ಲಿ, ವಿಶೇಷತಃ ದೊಡ್ಡ ಫಾರ್ಮ್‌ಗಳಲ್ಲಿ ಒಂದೇ ತರಹದ ಬೆಳೆಯನ್ನು ಬೆಳೆಯುವಲ್ಲಿ ಕೀಟಾಣುಗಳ ಬಾಧೆ ಹೆಚ್ಚು. ಯಾಕೆಂದರೆ ಹಳೇ ಪದ್ಧತಿಯ ಸಾಗುವಳಿಯಲ್ಲಿ ಗೋಧಿಯು ಜತೆಯಲ್ಲಿಯೇ ಇನ್ನಿತರ ಬೆಳೆಯನ್ನೂ ಬೆಳೆಸಲಾಗುತ್ತಿತ್ತು ಅದರಿಂದ ಭಿನ್ನ ಭಿನ್ನ ಪ್ರಕಾರದ ಬೆಳೆಗಳ ವೈವಿಧ್ಯ ಭಿನ್ನ ಭಿನ್ನ ಕ್ರಿಮಿಕೀಟಗಳು ಹುಟ್ಟುತ್ತಿದ್ದವು. ಮತ್ತು ಅವು ಒಂಡಕ್ಕೊಂದು ಪ್ರತಿಬಂಧಕವಾಗುತ್ತಿದ್ದವು! ಒಂದು ಪ್ರದೇಶದಲ್ಲಿಯ ವನಸ್ಪತಿಯನ್ನು ಬೇರೊಂದು ಪ್ರದೇಶದಲ್ಲಿ ಶಂಡಾಗ ಕ್ರಿಮಿಗಳ ಸಂಖ್ಯೆ ಬೇರೆ ವಿಧದ ಕೀಟಾಣುಗಳೂ ಬಂದುಬಿಡುತ್ತವೆ! ಆದರೆ ಅವುಗಳ ಬೆಳವಣಿಗೆಯನ್ನು ಪ್ರತಿಬಂಧಿಸುವ ಪ್ರಾಕೃತಿಕ ಸಾಧನೆಗಳು ಆ ಹೊಸ ಕ್ಷೇತ್ರದಲ್ಲಿ ಉಪಲಬ್ಧವಿರುತ್ತಿರುವುದಿಲ್ಲ. ಇಂದಿನ ಕೃಷಿವಿಜ್ಞಾನ ಶಕರೀ ಜೀವನವೂ ಇದೇ ಸಮಸ್ಯೆಯನ್ನು ಹೆಚ್ಚಿಸುತ್ತಲಿದೆ!

(ಸಾಯಲೆಂಟ್ ಸ್ಪ್ರಿಂಗ್‌ದಿಂದ)

ಹಳ್ಳಿ ಡಾಕ್ಟರ

ಸ್ಯಾಂಟು ಬೂಟಿನ ಜೊತೆಗೆ ಕೊಲಿಂಗುಣ್ಣಾ ಸುಮೂಲಷಿ ಹೇ ವ್ಯಗನೆ ಬರಕು ಇಂಗ್ಲೀಷು! ಕಲಿಸೋವಾಗೂ ಕೊಡುವ ನಾಲ್ಕು ಇಂಜಕ್ಷನ್ ಬಡ ಜನನ ಸುಲಿಯುವ ನಮ್ಮ ಸ್ವಾತಂತ್ರ್ಯ!

ಬೇಕಾಗಿದ್ದಾರೆ

ಅನುಭವಸ್ಥ ಪ್ರೆಸ್ ಕೆಲಸಗಾರರು, ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ಕೆಲವು ಶಿಕ್ಷಿಯ ಹುಡಗರು.

ವಿವರಗಳಿಗೆ ವ್ಯವಸ್ಥಾಪಕರು

ನವಯುಗ ಪ್ರೆಸ್, ಉಡುಪಿ

ನವಯುಗ ಸ್ವಾತಂತ್ರ್ಯ ವಿಶೇಷಾಂಕ

ಕರ್ನಾಟಕದ ಹೆಸರಾಂತ ಬರಹಗಾರರ ಲೇಖನ, ಕವನ, ಹರಟೆ ಮೊದಲಾದುವುಗಳಿಂದ ಕೂಡಿ ಅಗೋಸ್ಟ್ 15ರಂದು, ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವ ಸ್ವಾತಂತ್ರ್ಯ ವಿಶೇಷ ಸಂಚಿಕೆಯನ್ನು ನಿರೀಕ್ಷಿಸಿರಿ.

Letter Writing Made Easy

ಸುಲಭದಲ್ಲಿ ಪತ್ರಲೇಖನ

(75 Every day letters)

Second Revised Edition

ಆಂಗ್ಲ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲು ಸಹಕಾರಿಯಾದ ಪುಸ್ತಕ ಇದೀಗ ದ್ವಿತೀಯಾವೃತ್ತಿ ಹೊರಬಂದಿದೆ.

ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇತರ ಸಾರ್ವಜನಿಕರಿಗೂ ಪ್ರಯೋಜನಕಾರಿಯಾಗಿದೆ. ಬೆಲೆ: ರೂ. 1—50.

ವಿಚಾರಿಸಿರಿ:

ನವಯುಗ ಪ್ರೆಸ್ ಉಡುಪಿ || ನವಭಾರತ ಪುಸ್ತಕ ಭಂಡಾರ ಉಡುಪಿ

ಅಧಿಕಾರಾವಧಿಗೊಂದು ನಿರ್ಬಂಧ

ಭಾರತವು ಪ್ರಜಾಸತ್ತಾತ್ಮಕ ರಾಷ್ಟ್ರ. ಪ್ರಜೆಗಳಿಂದಲೇ ಪ್ರಜೆಗಳಿಗಾಗಿ ಇಲ್ಲಿನ ಆಡಳಿತ. ಸಂವಿಧಾನದಲ್ಲಿ ಇದು ಸರ್ವ ವಿದಿತ. ಇದರಂತೆ ರಾಷ್ಟ್ರಪತಿ ಕೈಗೊಂಬೆ; ಪ್ರಧಾನಿ ನಡೆಯುವ ಗೊಂಬೆ. ಒಂದು ರಕ್ತಮಾಂಸ ತುಂಬಿದ ನಿರ್ಜೀವ ಮೂರ್ತಿ; ಮತ್ತೊಂದು ಸಜೀವ ಮೂರ್ತಿ. ರಾಷ್ಟ್ರಪತಿಗಳ ಹೆಸರಿನಲ್ಲಿ ಯಾವ ಕಾರ್ಯಾನ್ವಾದರೂ ಮಾಡಿಯೇ ಬಿಡುವ ತಾಕತ್ತು ಪ್ರಧಾನಿಗಿದೆ—ಇದು ಒಂದು ಅಭಿಪ್ರಾಯ. ಹಾಗಿಲ್ಲ; ರಾಷ್ಟ್ರಪತಿಯು ಪ್ರಧಾನಿಯ ಕೈಕೂಸಲ್ಲ; ಆತ ಸಾರ್ವಭೌಮ ಅಧಿಕಾರಿ; ತ್ರಿಬಲಗಳ ವರಿಷ್ಠ ಸೇನಾಪತಿ; ಕೇಂದ್ರ ಸಚಿವ ಸಂಪುಟದ ಸಲಹೆಯು ಮೇಲೆ ರಾಷ್ಟ್ರದ ಆಡಳಿತವನ್ನು ನಡೆಸಬೇಕಾದುದು ನಿಜವಾದರೂ ಅದರ ಮುಖವನ್ನೇ ನೋಡಬೇಕಾಗಿಲ್ಲ. ಆತ ಆರ್ಟಿಕಲ್ ಜನರಲ್ಲದ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಯಾವ ವಿಷಯದ ಮೇಲಾದರೂ ಕೇಳಬಹುದು, ಏನೂ ಮಾಡಬಹುದು..... ಇತ್ಯಾದಿ ಇತ್ಯಾದಿ ಇನ್ನೊಂದು ಮತ.

ಡಾ| ಜಾಕೀರ್ ಹುಸೇನ್ ಸಾಹೇಬರ ನಿಧನದಿಂದ, ಅಧಿಕಾರ ಬಲದಿಂದ ಶ್ರೀ ವಿ. ವಿ. ಗಿರಿಯವರು ಆ ಸ್ಥಾನವನ್ನು ಅಲಂಕರಿಸಿದ್ದಾರೆ. ಅಕ್ರಮಿತ ಸ್ಥಾನವನ್ನು ಅವರಿಗೇ ಬಿಟ್ಟು ಕೊಡಬೇಕು—ಬೇಡ ಎಂಬುದರ ಬಗ್ಗೆ ಬಹಳಷ್ಟು ತಕರಾರು. ಅವರು ಸಲಹಬದಲ್ಲಿ ನಿಮ್ಮಿ ಬರುವುದಾದರೆ ಅವರೇ ಏಕಾಗಬಾರದು? ಕೇಳಿಲೆಕೊಡುವ ಮನಸ್ಸಿನಲ್ಲ; ಕಾರ್ಮಿಕ ನಾಯಕರಾಗಿ ಹೆಸರುಗಳಿಸಿದ್ದರಿಂದ ಹಲಕೆಲವು ವಿರೋಧಿ ಪಕ್ಷೀಯರ ಬೆಂಬಲವೂ ಅವರಿಗಿದ್ದೀತು.

ಇದು ಏಕೆ? ಹೊಸಬರಿಗೆ ಅವಕಾಶ ಬರಗಾಲವೆ? ಸಂಪ್ರದಾಯವೆಂದು ಹೊಕೆ ಹೇಳಬೇಕು? ವಿರೋಧಿಗಳಿಗೆ ಯಾಕೆ ಹೆದರಬೇಕು? ಸಂಧಾನವೆಂದು ಯಾಕೆ ತಲೆಬಾಗಬೇಕು? ನೋಡಿಯೇ ಬಿಡೋಣ್ಣ ಸಮ್ಮ ಮಂಗವಷ್ಟಿಯಲ್ಲಿ ಬಹುಮತ ನಿರ್ವಾಗವಂಡುರೆ ಹಾಳುವ ಹೊಸ ಅಭ್ಯಾಸವೇಕೆ ಮಾಡಿಕೊಳ್ಳಬೇಕು? ಇದು ಇನ್ನೊಂದು ಸಕ್ಷದ ವಾದ.

ವಿರೋಧಿ ಪಕ್ಷದ ಅಭ್ಯರ್ಥಿಯಾ ? ಎಂಬ ಪ್ರಶ್ನೆಗೆ ಉತ್ತರ ನಿಗಬೇಕಾ ರೆ, ಕಾಂಗ್ರೆಸ್ ಅಭ್ಯರ್ಥಿ ಯಾರು ಎಂದಾಗಬೇಕು. ಕಾಂಗ್ರೆಸ್ ಅಭ್ಯರ್ಥಿಯ ಹೆಸರಿನಲ್ಲಿ ಸಾಲು ಬೆಳೆಯುತ್ತ ಇದೆ. ಸೊಸ ಹೆಸರುಗಳು ಮುಂದೆ ಬರುತ್ತವೆ; ಕೆಳೆಯು ಹೆಸರು ಜಾರಿ ತ್ತವೆ. ಈ ನೋ ವಿರೋಧಿ ಪಕ್ಷಗಳಿಗೂ ನೋಂಕೆದೆ. ನಿವೃತ್ತ ನ್ಯಾಯಾಧೀಶ ಕೋಕ ಸುಬ್ಬ ಯರ ಹೆಸರು ಅಡಿಗೆ ಬಿದ್ದು ಜಯ ಪ್ರಕಾಶ ನಾರಾಯಣರತ್ತ ಬೆಂಬಲ ಬೆಳೆ ಯಿತು. ಮಿ| ಜ| ಕಾರ್ಯಪ್ಪನವರ ಹೆಸ ರೂ ಇದೆ. ಈ ಸಡುವೆ ತಾವಾಗಿಯೇ ರಾಷ್ಟ್ರಪತಿಯಾಗುವ ಅಶಯ ಹೊಂದಿ ರುವರು ಒಬ್ಬಿಬ್ಬರಲ್ಲ. 'ಹಾಲು ಸುರಿವ ದೇನು ಹರಿವ ದೇಶಕಟ್ಟಲು' ಪಣತೊಟ್ಟವರೆಷ್ಟುವರಿ! ಹೀಗಿದ್ದರೂ ಸಂಧಾನದ ಅಭ್ಯರ್ಥಿಯನ್ನೇ ಆರಿಸಬೇಕೆಂದು ಜನತಂತ್ರದ ಅಟಲಬಿಹಾರಿ ವಾಜಪೇಯಿ ಅಶಯ.

ಇನ್ನೇನು, ಬಹುಸಮ್ಮತ ಉಳ್ಳವರಿಲ್ಲ ತಾನೆ? ಈ ತಿಂಗಳ ಅಂತ್ಯದೊಳಗೆ ಹುರಿಯಾಳುಗಳ ನಿರ್ಧಾರವಾಗಬೇಕು; ಆಗುತ್ತದೆ. ಕೊನೆಯ ಗಳಿಗೆಗೆ ಯಾರು ಯಾರದೋ ಹೆಸರು ಮುಂದೆ ಬಂದರೂ ಬರಬಹುದು. ವಿರೋಧಿ ಪಕ್ಷೀಯರೊಡನೆ ಈ ಸಂಬಂಧದಲ್ಲಿ ಮಾತುಕತೆ ನಡೆಸುವ ಇಂದಿರಾ ನಾಟಕ ಕಾಂಗ್ರೆಸ್ ಅಧ್ಯಕ್ಷರಿಗೆ ಸಮ್ಮತವಿಲ್ಲವಾದರೂ ತೆರೆಯೆಳೆದ ಬಳಿಕ ಅಭಿನಯಿಸಲೇ ಬೇಕು ತಾನೆ?

ಇವೃತ್ತ ರಾಜಕಾರಣಿಗಳು ನಿಜಕ್ಕೂ ದೇಶಕ್ಕೆ ಗಂಡಾಂತರವಲ್ಲವೆ? ರಕ್ತದ ರುಚಿ ಹಿಡಿದ ಮದಿಹಲಿಯಂತೆ ಇವರು. ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನೇ ತೆಗೆದುಕೊಳ್ಳಿ. ತೊಂಭತ್ತು ಮೀರಿದ್ದರೂ ಹೇಗಿದ್ದಾರೆ! ಅವರ ಬುದ್ಧಿ ಎಷ್ಟು ಚುರುಕು! ರಾಜಾಜಿಯವರು ಅವರನ್ನು ಮದ್ರಾಸ್ ಮುಖ್ಯಮಂತ್ರಿಪದದಿಂದ ಕೆಳಗಿಳಿಸಿದ ಬಳಿಕ, ಪ್ರಧಾನಿ ನೆಹರು ಅವಂಡೇಕಾದರೊಂದು ಪದವಿ ನೀಡಬೇಕಿದ್ದರೆ ಸ್ವತಂತ್ರ ಪಕ್ಷ ರಚಿಸಿಕೊಳ್ಳುತ್ತಿರಲಿಲ್ಲ ಅಂದು ನೆಹರು ಮಾಡಿದ ಒಂದು ತಪ್ಪು ಕಾಂಗ್ರೆಸಿಗೆ ಮುಪ್ಪು ತಂದಿದೆ, ಅಕಾಲಿಕವಾಗಿ. ಏಕೆಂದರೆ, ಕಾಂಗ್ರೆಸಿನ ಗೋರಿ ಕಟ್ಟುವುದನ್ನೇ ನೋಡುವ ಕುತೂಹಲದಿಂದ ರಾಜಾಜಿ ಬದುಕಿದಂತಿದೆ.

ನಿವೃತ್ತ ನ್ಯಾಯಾಧೀಶರು, ಮಂತ್ರಿಪದಗಳು ದೇಶದ ಅಶಾಂತಿಗೆ ಹೇಗೆ ಕಾರಣರಾಗುತ್ತಿದ್ದಾರೆಂಬುದಕ್ಕೆ ಆಂಧ್ರದ ಉದಾಹರಣೆ. ಡಾ| ಚೆನ್ನಾರೆಡ್ಡಿ ವರ್ಸಸ್ ಡಾ| ಬ್ರಹ್ಮಾನಂದರೆಡ್ಡಿಯವರ ವೈಯಕ್ತಿಕ ಭಿನ್ನಾಭಿಪ್ರಾಯ, ತಪ್ಪು ತಿಳುವಳಿಕೆ ಮತ್ತು ಈರ್ಷ್ಯೆ-ಅಸೂಯೆಗಳು ಇಂದು ಆಂಧ್ರ ನಡೆಯುತ್ತಿರುವ ಉಪದ್ವ್ಯಾಪಗಳಿಗೆ ಮೂಲವೆಂದು ಹೆಚ್ಚಿನವರು ತಿಳಿಯರು. ಮೂಜಿಗಳ ಒಂದ ಬ್ರಹ್ಮಶ್ರೀ ಕಂಡವೇ ಚೆನ್ನಾರೆಡ್ಡಿಯ ಹಿಂದೆ ಫಿಂತ ಬಾಲವಲ್ಲಾಡಿಸುತ್ತಿದೆ.

ಪ್ರಮುಖ ಕಾಂಗ್ರೆಸಿಗರೂ ಉತ್ತರ ಪ್ರದೇಶದ ಮೂಜ ರಾಜ್ಯಪಾಲರೂ ಆದ ಶ್ರೀ ವಿಶ್ವನಾಥದಾಸರು ದೇಶದ ಮುಂದೆ ಮತ್ತೊಂದು ಸೂಚನೆ ಇಟ್ಟಿದ್ದಾರೆ. "ಭಾರತೀಯ ಸಂವಿಧಾನವನ್ನು ಮೂಲ ಭೂತ ಬದಲಾವಣೆಗಳು." ಎಂಬ ವಿಷಯದ ಮೇಲೆ ಭಾಷಣ ಮಾಡುತ್ತ ಪ್ರಧಾನಿಯ ಪದದ ಮೇಲೆ ಕಣ್ಣಿಟ್ಟರು. "ಪ್ರಜಾಂಚಿದ ಯಾವದೇ ದೇಶದಲ್ಲಿ ಪ್ರಧಾನಿಗೆ ಭಾರತದ ಪ್ರಧಾನಿಗಿರುವಷ್ಟು ಅಧಿಕಾರವಿಲ್ಲ. ಈ ಅಸಿರ್ಬಂಧಿತ ಅಧಿಕಾರದಿಂದ ಪ್ರಧಾನಿಯು ರಾಷ್ಟ್ರಪತಿಯ ಹೆಸರನ್ನಲ್ಲಿ ಏನು ಬೇಕಾದರೂ ಮಾಡಬಹುದು" ಎಂಬುದವರ ಒಂದು ಅಭಿಪ್ರಾಯ. ಇದಕ್ಕೆಂದೇ ಪ್ರಧಾನಿಗಳು ತಮಗೆ ಬೇಕಾದವರೇ ರಾಷ್ಟ್ರಪತಿಯಾಗ ಬೇಕೆಂದು ಬಯಸುವುದಲ್ಲವೆ?

ಶ್ರೀ ವಿಶ್ವನಾಥ ದಾಸರ ವಿಚಾರಧಾರೆ ಮತ್ತೂ ಮುಂದೆ ಹರಿದಿದೆ. "ಪ್ರಧಾನಿಯು ಅಧಿಕಾರಾವಧಿಯನ್ನು ಮೊಟಕು ಮಾಡಬೇಕು". ಯಾಕೆ? ಈ ಒಗ್ಗೆ ನಿರ್ಬಂಧ ವಿಲ್ಲದಾದರೆ, ಅಧಿಕಾರದಾಹ ಬೆಳೆಯುತ್ತದೆ. ಕ್ಷಮಾಂತರಕ್ಕೆ ಕಾರಣವಾಗುತ್ತದೆ." ಇಾಬಹುದು. ಆದರೆ ಪ್ರಧಾನಿಯು ಅಧಿಕಾರಾವಧಿಯನ್ನು ಮೂರೆ ಮೊಟಕು ಮಾಡಬೇಕೆಂದಲ್ಲ; ಶಾಸಕರಿಲ್ಲರ ಅವಧಿಯನ್ನೂ ನಿರ್ಬಂಧಗೊಳಿಸಬಹುದು. ಆಗ, ಪ್ರಜೆಗಳಿಗಾಗಿ ಪ್ರಜೆಗಳಿಂದಲೇ ನಡೆಯುವ ಆಡಳಿತೆಯಲ್ಲಿ ಇದು ಸರಿಯೇ? ಎಷ್ಟೆ ನೀಡಿದ ಸಾಲಭ್ಯವನ್ನು ಮತ್ತೆ ತೆತ್ತು ಕೊಂಡರೆ ಏನಾದೀತು? 'ರಾಮರಾಜ್ಯ' ಯೋಜನೆಗೆ ಕಾಂಗ್ರೆಸ್ಸಿನಲ್ಲಿ ಯಾವ ಪುರಸ್ಕಾರ ದೊರೆಯಬಹುದು? ಇತರ ರಾಜ್ಯಕೀಯ ಪಕ್ಷಗಳಲ್ಲೂ ಅಧಿಕಾರ ದಾಹ ಬೇಗಿದೆಯೆಂಬುದೆಲ್ಲರಿಗೂ ಗೊತ್ತು. ಈ ಬಗೆಯ ನಿರ್ಬಂಧ ವಿದೇಶದಲ್ಲೂ ಇರಲಾರದು.

ಸಲಹೆ ನೀಡುವುದು ಸುಲಭ; ಆದರೆ, ಅದನ್ನು ಕಾರ್ಯಾಚರಣೆಗೆ ತರುವುದು ಮತ್ತ ಕ್ಲಿಷ್ಟಯೂ ಪ್ರಾಯೋಗಿಕ ನೀಡುವ ಸಲಹೆಗಳಲ್ಲಿ ನೂರಕ್ಕೆ ಒಂದರಷ್ಟಾ ಕಾರ್ಯರೂಪಕ್ಕೆ ಬರಲಾರದೆನಿಸುತ್ತದೆ. ರಾಮರಾಜ್ಯಾಧಾನಿಗಳನ್ನು ಕಾನೂನುಗಳಿಂದ ತಡೆಗಟ್ಟುವುದು ಸಾಧ್ಯವಿಲ್ಲ. ಪಾನ-ಚಾರ್ಮಿಗಳ ಕತೆಯೇನು? ಇವುಗಳ ಪ್ರತಿಬಂಧ ನಡೆಯಿತು. ಪಾಕಿಸ್ತಾನ ಶಾಸನ ಸಮ್ಮತವೆನಿಸಿತು; ಚಾರ್ಮಿಕೆ ಅನುಮತಿ ಮಾತ್ರ ದೊರೆತಿಲ್ಲ. ವೃಥಾ ಜಾರಿಬಿಸುವಿಗೆ ಶಾಸನದ ಜಲವಿದೆ—ಅಧಿಕಾರ ಲೋಲುಪತೆಯುಳ್ಳವರೂ ಕಾಯದೆ ಜಲದಿಂದ ತಡೆಗಟ್ಟಬಹುದೆಂದು ನಂಬುವುದು ಪರ್ಯಾಲನಾತೀತ. ಹೃದಯದಾಳದಿಂದ ಅಧಿಕಾರದ ಬಗ್ಗೆ ಉದಾಸೀನತೆ ಮೂಡಬೇಕೇ ಹೊರತು, ಒತ್ತಾಯ, ಬಲಾತ್ಕಾರಗಳಿಂದಲ್ಲ. ಅಂತಹ ವಿರಕ್ತಿ-ವೈರಾಗ್ಯಗಳಿಗೆ ಹೆಸರಾಗಿದ್ದ ನಮ್ಮ ದೇಶವಿಂದು ಏನಾಗಿದೆ! ಶಿಸಿದರೇ ನೇ ಮೈ ಜಮ್ಮನ್ನುತ್ತದೆ.

ಎಐಸಿಸಿ ರಾಜ್ಯಮಟ್ಟ ಶ್ರೀ ನಿತ್ಯಾನಂದ ಕೂನಂಗೋ ಅವರು ಅಲ್ಲಿ ರಾಷ್ಟ್ರಪತಿ ಆಡಳಿತೋದಯದ ಬೇಳೆ ಅಧಿಕಾರಾವಧಿ ವ್ಯತ್ಯಯಿಸಿತ್ತು ಈ ಆಡಳಿತ ಆರುದಿನವೇ ಉಳಿಯಬಹುದು, ಅಥವಾ ಆರು ತಿಂಗಳೂ ಮುಂದೆ ವರಿಯಬಹುದೆಂದರು. ಯಾವುದೇ ಒಂದು ಗುಂಪು ಶುದ್ಧ (ತಾತ್ಕಾಲಿಕ) ಸರಕಾರ ರಚಿಸಲು ಸಮರ್ಥವಾಗುವವರೆಗೆ ರಾಷ್ಟ್ರಪತಿ ಆಡಳಿತ ಉಳಿಯುವುದೆಂದು ಇದರ ಅರ್ಥ. ಇಂತಹ ಸರಕಾರ ಯಾವಾಗ ರಚಿಸಿಗೊಂಡೀತು? ಅದು ಯಕ್ಷಪ್ರಶ್ನೆ.

ರಾಜ್ಯಪಾಲ ಕೂನಂಗೋ ಅವರು ವಿಧಾನ ಸಭೆಯನ್ನು ಬರಾಸ್ತು ಮಾಡಲಿಲ್ಲ; ವಿಧಾನಸಭೆಯ ಮೂಡಲಿಲ್ಲ; ಬರಿಯ ಅವಕಾಶವನ್ನು ಮಾಡಬಹುದೆಂದು ಸೂಚಿಸಿದ್ದರು. ಮುಂದಿನ ತಿಂಗಳು ರಾಷ್ಟ್ರಪತಿ ಅವಶ್ಯವೆನಿಸಿದರೆ, ಉಪರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆಗಳು ಘಡಿಸಲಿರುವುದರಿಂದ ವಿಚಾರದ ಪ್ರತಿನಿಧಿಗಳೂ ಇಲ್ಲಿ ಮತದಾನ ನೀಡುವುದಕ್ಕೆ ಅವಕಾಶ ಮಾಡಿಕೊಡುವುದೂ ಇದರ ಹಿನ್ನೆಲೆಯೆಂದರೆ ತಪ್ಪಲ್ಲ. ಇದರಿಂದ ಕಾಂಗ್ರೆಸ್ಸಿಗೇತಲೂ ವಿರೋಧೀ ದಳಗಳಿಗೆ ಹೆಚ್ಚು ಲಾಭ. ನಿತ್ಯಾನಂದ ಕೂನಂಗೋ ಕಾಂಗ್ರೆಸ್ ಪಕ್ಷಪಾತಿಯಲ್ಲವೆಂದೀಗ ಸಿದ್ಧವಾಯಿತು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ಹಿಂದಿಷಿಸು ಪಾಕೋಯಿಸಿಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ಷಿಕ ಚಂದಾ ರೂ. ೧೦.

NAVAYUGA 17—7—1959
Registered with the Registrar of News Papers for India under No. R. N. 3546/'57

REGD: No. B. G. 176
LICENCE No. 33
Licensed to Post without Prepayment

ಗ್ರಾಮೀಣ ಪ್ರದೇಶಗಳಲ್ಲಿ ವಸತಿ ಕಾರ್ಯಕ್ರಮ

ಗ್ರಾಮೀಣ ಪ್ರದೇಶಗಳ ವಸತಿ ಸಮಸ್ಯೆ ಈಗ ಭಾರತದ ಸಮಸ್ಯೆಗಳಲ್ಲಿ ಒಂದಾಗಿ ಈ ಸಮಸ್ಯೆ ದಿನೇ ದಿನೇ ಬೆಳೆಯುತ್ತಿದೆ. ಚತುರ್ಥ ಯೋಜನೆಯ ವಸತಿ ಅಧ್ಯಯನ ತಂಡ ಗ್ರಾಮೀಣ ವಸತಿ ಸಮಸ್ಯೆಯ ಬಗ್ಗೆ 196೦ರ ಸೆಪ್ಟೆಂಬರ್ ತಿಂಗಳಲ್ಲಿ ಪರಿಶೀಲಿಸಿತು. ಸುಮಾರು ನೂರಕ್ಕೆ ಎಪ್ಪತ್ತಕ್ಕಿಂತಲೂ ಮುಂದೆ ಹಳ್ಳಿಗರು ಪಡಿಪಾಟಲು ಗಳಲ್ಲಿ ವಾಸಮಾಡುತ್ತಿದ್ದಾರೆ. ಹುಲ್ಲು ಮಣ್ಣಾದಿಗಳಿಂದ ಕಟ್ಟಿರುವ ಮನೆಗಳು ಹೆಚ್ಚಾಗಿವೆ. ನೂರಕ್ಕೆ ಹೆಚ್ಚೆಂದರೆ ಎರಡು ಮನೆಗಳು ಮಾತ್ರ ಸುಟ್ಟ ಇಟ್ಟಿಕೆ, ಸಿಮೆಂಟ್, ಮರಗಳಿಂದ ಕೂಡಿದ ಪಕ್ಕಾ ಮನೆಗಳಿವೆ. 1961ರ ಸೆನ್ಸಸ್ ಪ್ರಕಾರ ಸುಮಾರು 651 ಲಕ್ಷ ಗ್ರಾಮೀಣ ಮನೆಗಳನ್ನು ಸುಮಾರು 689 ಲಕ್ಷ ಕುಟುಂಬಗಳು ಆಕ್ರಮಿಸಿಕೊಂಡಿವೆ. 651 ಲಕ್ಷ ಗ್ರಾಮೀಣ ಮನೆಗಳಲ್ಲಿ 124 ಲಕ್ಷ ಮನೆಗಳು ಮಾತ್ರ ಪಕ್ಕ ವಾಗಿವೆ.

ಗ್ರಾಮೀಣ ವಸತಿ ಯೋಜನೆ

ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 560 ಲಕ್ಷ ಪಕ್ಕಾ ಮನೆಗಳ ಅವಶ್ಯಕತೆ ಇದೆ. ಈ ಸಮಸ್ಯೆಯನ್ನು ಪರಿಹರಿಸಲು 21,೦೦೦ ಕೋಟಿ ರೂ. ಗಳನ್ನು ಹೆಚ್ಚು ಮಾಡಬೇಕಾಗುವುದು. ಇಷ್ಟೊಂದು ಹಣವನ್ನು ಹೆಚ್ಚುಮಾಡಲು ಸರ್ಕಾರಕ್ಕೆ ಈಗ ಸಾಧ್ಯವಿಲ್ಲ. ಆದ್ದರಿಂದ 1957ರ ಆಗಸ್ಟ್ ತಿಂಗಳಿನಲ್ಲಿ ಗ್ರಾಮೀಣ ವಸತಿ ಯೋಜನೆಯೊಂದನ್ನು ಪ್ರಾರಂಭಿಸಲಾಯಿತು. ನೇರವಾಗಿ ಹೆಚ್ಚಿನ ಸ್ವಸಹಾಯ ಈ ಯೋಜನೆಯ ಮುಖ್ಯಾಂಶ.

ಜೊಸ ಮನೆಗಳನ್ನು ಕಟ್ಟಲು, ಅಥವಾ ಹಳೇಮನೆಗಳನ್ನು ದೇಸೀ ಮಾಡಿಸುವುದಕ್ಕಾಗಿ ಅದಕ್ಕೆ ತಗಲುವ ವೆಚ್ಚದಲ್ಲಿ ಶೇಕಡಾ 80 ಭಾಗವನ್ನು ಸಾಲದ ರೂಪದಲ್ಲಿ ನೀಡುವುದು. ಹಾಗೂ ಚರಂಡಿ ವ್ಯವಸ್ಥೆಯನ್ನು ಕೈಗೊಳ್ಳಲು ರಾಜ್ಯಸರ್ಕಾರಗಳಿಗೆ ಧನ ಸಹಾಯವನ್ನು ನೀಡುವುದು. ಮನೆಗಳನ್ನು ಕಟ್ಟುವಾಗ ಅವಶ್ಯಕವಾದ ತಾಂತ್ರಿಕ ನೆರವನ್ನು ನೀಡುವುದು. ಇದೇ ಮುಂತಾದ ಸೌಕರ್ಯಗಳನ್ನು ಈ ಯೋಜನೆ ಒದಗಿಸಿದೆ. ಈ ಯೋಜನೆಯ ಪ್ರಾರಂಭದಿಂದಲೂ ಕೇವಲ 41,461 ಮನೆಗಳು ಪೂರ್ಣವಾಗಿ ರಾಜ್ಯ ಸರ್ಕಾರದಲ್ಲಿ 9.79 ಕೋಟಿ ರೂ. ಧನ ನೆರವನ್ನು ಪಡೆದಿದೆ.

ಗ್ರಾಮೀಣ ವಸತಿ ಸಮಸ್ಯೆಯನ್ನು ಕುರಿತು ಹೆಚ್ಚಿನ ವಿಷಯವನ್ನು ಸಂಗ್ರಹಿಸಲು ನಾಲ್ಕನೆ ಯೋಜನೆಯ ವಸತಿ ಕಾರ್ಯತಂಡ ದೇಶಾದ್ಯಂತ ಅರಿಸಿದ ಎಂಟು ಹಳ್ಳಿಗಳಿಗೆ ನಾಲ್ಕು ಅಧ್ಯಯನ ತಂಡಗಳನ್ನು ಕಳುಹಿಸಿತು.

ಗ್ರಾಮೀಣ ಪ್ರದೇಶಗಳಲ್ಲಿ ವಸತಿ ಸೌಕರ್ಯಕ್ಕಾಗಿ ಕೈಗೊಂಡಿರುವ ಕಾರ್ಯಕ್ರಮಗಳು ಯಶಸ್ವಿಯಾಗದಿರುವುದಕ್ಕೆ ಕಾರಣಗಳನ್ನು ತಜ್ಞ ವರದಿಯಲ್ಲಿ ಅಧ್ಯಯನ ತಂಡದ ಸದಸ್ಯರು ತಿಳಿಸಿದ್ದಾರೆ. ರಾಜ್ಯ ಸರ್ಕಾರದಲ್ಲಿ ಗ್ರಾಮೀಣ ವಸತಿ ಸೌಕರ್ಯದ ಬಗ್ಗೆ ಹೆಚ್ಚಿನ ಆಧ್ಯತೆ ನೀಡದಿರುವುದು ರಾಜ್ಯಗಳ ಮಟ್ಟದಲ್ಲಿ ಗ್ರಾಮೀಣ ವಸತಿ ಸಮಸ್ಯೆಯನ್ನು ನಿವಾರಿಸಲು ಪರಿಣಾಮಕಾರಿಯಾದ ವ್ಯವಸ್ಥೆಯಿಲ್ಲ. ಕೆಲವು ಮನೆಗಳ ನಿರ್ಮಾಣ, ಹಣ ಕಾಸಿನ ತೊಂದರೆಗಳಿಂದಾಗಿ ಪೂರ್ಣವಾಗದೆ ಉಳಿದಿವೆ ಎಂಬ ದಾಖಲೆ ವರದಿಯಲ್ಲಿ ತಿಳಿಸಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣವಾಗದೆ ಉಳಿದಿರುವ ಮನೆಗಳ ನಿರ್ಮಾಣಕ್ಕಾಗಿ ಹಣದ ನೆರವನ್ನು ನೀಡಬೇಕು ಸೂಕ್ತವೆಂದು ಅಧ್ಯಯನ ತಂಡ ಸಲಹೆಯನ್ನು ಮಾಡಿದೆ.

ಪ್ರಾಯೋಗಿಕ ಗ್ರಾಮೀಣ ವಸತಿ ಯೋಜನೆ

ಚತುರ್ಥ ಯೋಜನೆಯ ಮೊದಲನೆ ಎರಡು ವರ್ಷಗಳ ಕಾಲ ಗ್ರಾಮೀಣ ವಸತಿ ಯೋಜನೆಯನ್ನು ಪ್ರಾಯೋಗಿಕ ಯೋಜನೆಯಾಗಿ ಪರಿಗಣಿಸಿ ಮುಂದುವರಿಸಬೇಕು. ರಾಜ್ಯ ಮತ್ತು ಪ್ರಾದೇಶಿಕ ಮಟ್ಟದಲ್ಲಿ ಕಾರ್ಯಕ್ರಮಗಳು ಯಶಸ್ವಿಯಾಗಲು ಸರಿಯಾದ ವ್ಯವಸ್ಥೆ ಮಾಡಬೇಕು. ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಅವಶ್ಯಕವಾಗಿರುವ ಅಧಿಕಾರ ನೆರವನ್ನು ಹೆಚ್ಚು ಕಡೆಗಳಿಂದ ಕೇಂದ್ರೀಕರಿಸಬೇಕು. ವಸತಿ ಸೌಕರ್ಯವನ್ನು ವೃದ್ಧಿಪಡಿಸಲು ಹಳ್ಳಿಗರ ಸಹಾಯವನ್ನು ಗಳಿಸಬೇಕು. ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳ ಧಾರಾ ಪ್ರಾದೇಶಿಕ ವ್ಯವಸ್ಥೆಗಳ ಮೇಲೆ ಹೆಚ್ಚಿನ ಧನವನ್ನು ಕೊಡಬೇಕು. ಮತ್ತು ಅಗತ್ಯಕ್ಕೆ ತಕ್ಕಂತೆ ಕಡಿಮೆಬೇಕು, ಎಂಬ ಸಲಹೆಗಳನ್ನೂ ಮಾಡಲಾಗಿದೆ.

ಗ್ರಾಮೀಣ ವಸತಿ ಸಮಸ್ಯೆ ಒಂದೆರಡಲ್ಲ. ಕೊನೆಯಪಕ್ಷ ಹಳ್ಳಿಗರಿಗೆ ಅತ್ಯಾವಶ್ಯಕವಾಗಿ ಬೇಕಿರುವ ಶೌಚ ಕೂಪ, ಹಳ್ಳಿ ಸೌಂದರ್ಯ ಸೌಕರ್ಯಗಳನ್ನು ಒದಗಿಸುವುದು, ಸಹಕಾರ ಪ್ರಯತ್ನದ ವತಿಯಲ್ಲಿ ವನೆಗಳನ್ನು ಕಟ್ಟುವ ಕಾರ್ಯಗಳಿಗೆ ಉತ್ತೇಜನ ನೀಡುವುದು, ಇದೇ ಮುಂತಾದ ವಿಷಯಗಳಲ್ಲಿ ರಾಜ್ಯ ಸರ್ಕಾರಗಳು ಹೆಚ್ಚಿನ ಆಸಕ್ತಿ ವಹಿಸಬೇಕು ಎಂಬುದಾಗಿ ಚತುರ್ಥ ಯೋಜನೆಯು ಕರಡು ಪ್ರತಿ ಶಿಫಾರಸು ಮಾಡಿದೆ.

ಶಾಂತಿಸೈನಿಕರಿಗೆ

ಪ್ರತಿಯೊಂದು ದಂಗೆ ನಡೆದಲ್ಲಿ ನೀವು ಹೋಗಿ ಬಂದು ಮಾಡಲಾರಿ. ಸರಕಾರದ ಪೋಲೀಸರಂತೆ ಹಾಗೂ ಸೈನಿಕರಂತೆ ಆಗಲಾದ್ದು ಕೆಲವೇ ಶಾಂತಿ ಸೈನಿಕರಂತೆ ಆಗುವದು ಶಕ್ಯವಿಲ್ಲ! ಆದರೆ ಒಂದಾದ ಮೇಲೊಂದು ಪ್ರಸಂಗದಲ್ಲಿ ನೀವು ಜೀವದ ಹಂಗು ತೊರೆದು ದಂಗೆಯನ್ನು ತಿಳ್ಳಿಸಲು ಪ್ರಯತ್ನಪಟ್ಟರೆ ಪರಿಸ್ಥಿತಿಯ ಮೇಲೆ ಪರಿಣಾಮವಾಗದೆ ಉಳಿಯದು. ಆಗ ಜನ ವಿಚಾರ ಮಾಡಹತ್ತಿಯಾರು! ಆದರೆ ಅದೇ ಕೆಲಸ ನಮ್ಮಿಂದ ಆಗುತ್ತ ಇಲ್ಲಾ. ಆದ್ದರಿಂದ ನಾವು ಕೇವಲ "ಶಾಂತಿಪಥ" ಮಾಡುವವರು ಎಂದು ಜನ ತಿಳಿಯುತ್ತಾರೆ. ನಾವು ಶಾಂತಿ ಪ್ರಸ್ಥಾಪಿಸಲು ನಮ್ಮ ಜೀವವನ್ನಾದರೂ ಕೊಟ್ಟೇವು ಎಂದು ಜನರಿಗೆ ಅನಿಸುವದೇ ಇಲ್ಲ. ದಂಗೆಗಾರರಾದರೇ ಜೀವದ ಹಂಗು ಬಿಟ್ಟು ಉತ್ಪಾತ ಮಾಡುತ್ತಾರೆ! ನಾವು ಹಾಗೆ ಮಾಡಬಹುದೆಂದು ಜಗತ್ತು ಅಂದುಕೊಂಡಿಲ್ಲ! ನಮ್ಮ ಶಾಂತಿಸೈನಿಕರ ಸಮೂಹಂಘವನ್ನು ಪೋಲೀಸರ ಬಂದೋಬಸ್ತಿನಲ್ಲಿ ನಡೆಸುವ ಪ್ರಸಂಗ ಬಾರದಿದ್ದರೆ ಸಾಕು! ದೇಶದಲ್ಲಿ ಮೈತ್ರೀ ಭಾವವನ್ನು ಸ್ಥಿರಪಡಿಸುವದಿದ್ದರೆ ಮುಂಬಯಿಯಂಥ ಬಹುಧಾರ್ಮಿಕ ಪ್ರಗರಗಳಲ್ಲೇ ಅದನ್ನು ಆರಂಭಿಸಬೇಕು. ಅದಿಲ್ಲದಿದ್ದಲ್ಲಿ ಸಿರಿಂಕರವಾಗಿ ಪ್ರಯೋಗ ಹಾಗೂ ಬಂದೋಧನ ನಡೆಸಬೇಕು.

(ದಾದಾ ಧರ್ಮಾಧಿಕಾರಿ)

ಕಮಿಶನ್ನುಗಳ ನಿರ್ಣಯ

ಸರಕಾರವು ನೇಮಿಸಿದ ಯಾವದೇ ಒಂದು ಕಮಿಶನ್ನು ತನ್ನ ವರದಿ ಕಳಿಸಿದ ತರುವಾಯ ಅದರ ಕೊನೆಯ ನಿರ್ಣಯವನ್ನು ಸರಕಾರವೇ ಕೈಕೊಳ್ಳಬೇಕೆಂಬ ವಾಡಿಕೆಯನ್ನು ಜವಾಹರಲಾಲ ನೆಹರು ಇವರೇ ಅಗ್ರಹಪೂರ್ವಕ ರೂಢಿಗುತ್ತ ಬಂದರು. ಇದರಿಂದ ಪ್ರತಿಯೊಂದನ್ನೂ ಮುನ್ನ ಮೊದಲಿನಿಂದ ವಿಚಾರ ಮಾಡಬೇಕಾಗಿ ಬರುತ್ತದೆ. ಇದರಿಂದಾಗಿ ವಿವಿಧ ರಾಜಕೀಯ ಶಕ್ತಿಗಳಿಗೆ ಒತ್ತಾಯ ತರಲು ಅವಕಾಶವಾಗುತ್ತದೆ. ಹೀಗೆ ಮಾಡುವುದಾದರೆ ಕಮಿಶನ್ ನೇಮಿಸಿಯಾದರೂ ಪ್ರಯೋಜನವೇನು? ಆದ್ದರಿಂದ ಒಮ್ಮೆ ಕಮಿಶನ್ನು ನೇಮಿಸಿದ ಮೇಲೆ ಅದರ ನಿರ್ಣಯವು ಸರಕಾರ ಸಹಿತ ಎಲ್ಲರಿಗೂ ಬಂಧನಕಾರಕವಾಗಲೇಬೇಕು. ಇಲ್ಲದಿದ್ದರೆ ಇಂಥ ಕಮಿಟಿಗಳಿಗೆ ಕೊನೆ ಎಂಬುದೇ ಉಳಿಯದು.

(ಜಯಪ್ರಕಾಶ ನಾರಾಯಣ)

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — English Made Easy

ಅಪ್ಪರ ಸಹಾಯವಿಲ್ಲದೆ ಇಂಗ್ಲಿಷ್ ಕಲಿಯಬಹುದಾದ ಆಂಗ್ಲಶ್ಯಂಬೋಧಿನಿ.
ಬೆಲೆ: ರೂ. 2—00

Letter Writing Made Easy — ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿಪುಲ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ — ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಅಪೂರ್ವ ಅನುವಾದ.
450 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು — Home Remedies

ಡಾ। ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಸ್ವಹಸ್ತೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ವಿಧಾನಗಳಿವೆ. ಹೆಂಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಮೃತಾಂಜನ

● ತಲೆ ಸಿಡಿತ ● ಪೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳನ್ನು ಜಾಗ್ರತೆಯಾಗಿ, ಶೀಘ್ರವಾಗಿ, ನಿಜವಾಗಿಯೂ ಗುಣಪಡಿಸುತ್ತದೆ.

ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty, at the Navayuga Press, Udipi, S. India.

ನವಯುಗ

24—7—1969



NAVAYUGA

೨೦
ಪೈಸೆ

ಕಥಾಪ್ರಪಂಚ

ಬದುಕಲು ಬಂದವ

ಬರೆದವರು: ಶ್ರೀಮತಿ ಯಶೋದಾ ಯನ್. ಜೆನ್ನಿ.

"ಇನ್ನು ಹೋಗೇಂಣ ರಾಮಣ್ಣ" ನೆರೆಮನೆಯ ಗೋವಿಂದಯ್ಯ ಹೊದಲು ಹೇಳುತ್ತಿದ್ದುದ್ದನ್ನೇ ಪುನಃ ಹೇಳಿದರು.

"ಹಾ....ಹೂಂ...." ಎಂದ ರಾಮಣ್ಣ ಕುಳಿತಲ್ಲೇ ಸ್ವಲ್ಪ ನಿಃಶಕ್ತಾಡಿದರೂ ಏಳುವ ಮನಸ್ಸು ಮಾಡಲಿಲ್ಲ. ಒರಗಿ ಕುಳಿತುಕೊಂಡೇ ಸುತ್ತಲೂ ಕಳವಳದಿಂದ ಫಿಂತಿದ್ದ ತನ್ನ ಬಳಗವನ್ನೊಮ್ಮೆ ನೋಡಿದ.

ಮಡದಿ ರುಕ್ಮಿಣಿ ಎಳೆ ಮಡುವನ್ನೆತ್ತಿ ಕೊಂಡು ಕಣ್ಣೀರನ್ನೊರಸಿಕೊಳ್ಳುತ್ತಾ ಉಕ್ಕಿ ಬಂದ ಅಳುವನ್ನು ತಡೆ ಕಟ್ಟಿ ಹತ್ತಿಕ್ಕಿಕೊಳ್ಳುತ್ತಿದ್ದಳು. ಹಿರಿಯ ಮಗ ಹತ್ತೊಂಬತ್ತರ ಪ್ರಾಯ. ಈಗಲೇ ಸಂಸಾರದ ಸಮಸ್ತ ಭಾರವನ್ನೂ ಹೊತ್ತವನಂತೆ ಕಲೆಬಾಗಿಸಿ ಮುಖ ಬಾಡಿಸಿಕೊಂಡು ನಿಂತಿದ್ದ. ಹತ್ತು ವರ್ಷದ ಶಾರದೆ ತಾಯಿಯೊಂದಿಗೆ ತಾನೂ ಕಣ್ಣೀರು ಸುರಿಸಿ ತನ್ನ ಕರ್ತವ್ಯ ದಕ್ಷತೆಯನ್ನು ತೋರಿದ್ದಳು. ಮುದ್ದಿನ ಮಗ ಐದು ವರ್ಷದ ಕೃಷ್ಣ ಇವರೆಲ್ಲರನ್ನೂ ಕೌತುಕದಿಂದ ನೋಡುತ್ತಿದ್ದರೂ ವಾತಾವರಣದ ವ್ಯಥೆಯನ್ನು ತುಂಬಿಕೊಂಡವನಂತೆಯೇ ಕಂಡು ಬರುತ್ತಿದ್ದ. ಎಲ್ಲರ ವೃದ್ಧಿಗೆ ಕಾರಣವಾದ ಅಳು ಬೆಳಗಿನಿಂದಲೂ ಒಂದೇ ಸವನೆ ನಡೆದಿತ್ತು.

"ಅಯ್ಯೋ ಮಾ.... ನಿನಗೆ ಶಾಯಿಲೆ ಬರುವ ಬದಲು ನನಗಾದರೂ ಬರಬಾರದಾಗಿತ್ತೇ? ಈ ಮುದಿ ಕೊರಡಿಗೆ ಇನ್ನೂ ಏನೆಲ್ಲ ನೋಡಲು ಕಾದಿದೆಯೋ? ಇಲ್ಲದಿದ್ದರೆ ಇಷ್ಟೊಬ್ಬ ಮಗನ ಗತಿಯೂ ಹೀಗಾಗಬೇಕೆ? ದೇವರಂಗೂ ಕಣ್ಣಿಲ್ಲವೆ?" ಎಂದು ಬಡಬಡಿಸುತ್ತಾ ಲೋಕಿಸುತ್ತಿದ್ದರು.

"ಅಳಬೇಡವ್ವ; ಎಲ್ಲಾ ಸರೂಧಾನ ತಂದೊಳ್ಳೆ ಹವಿನೈದೇ ದಿನಗಳಲ್ಲಿ ಹುಷಾರಾಗಿ ವಾಪಸು ಬರ್ತೇನೆ. ರುಕ್ಮಿ.... ಮಕ್ಕಳನ್ನೆಲ್ಲ ಜಾಗ್ರತೆಯಾಗಿ ನೋಡ್ಕೋ. ಹಾಳು ಬೇಗ ಹಿಂತುರುಗಿ ಬರ್ತೇನೆ." ಇಷ್ಟು ಹೇಳುವಾಗಲೇ ರಾಮಣ್ಣನಿಗೆ ದಿಂಟಲುಬ್ಬು ಬಂದು ಧ್ವನಿ ನಡುಗಿ ಮುಂದೆ ಮಾತನಾಡಲಾಗದೆ ಕಂಬನಿದುಂಬಿ ಎದ್ದು ನಿಂತಳವ.

"ಖಾ ರಾಮಣ್ಣ, ಕವಲಮ್ಮ! ನಿಮಗೂ ಸೊತ್ತಾಗೋಯಿಲ್ವಾ? ಮಕ್ಕಳೆದಿರು ಫೀನೇ ಹೀಡೆ ಕಂಗಾಲಾಗಿ ಬಿಟ್ಟರೆ ಆ ಹಸುಳೆಗಳೇನು ಮಾಡ್ಬೇಕು, ಪಾಪ. ಫ ಮಗೆ ಹೊತ್ತಾಯ್ತು. ಕಾವಿನ್ನ ಬರ್ತೀನೆ. ಆ ಮೇಲೆ ಅಸ್ಸು ಸಿಗಲಿಕ್ಕಿಲ್ಲ" ಎಂದು ರಾಮಣ್ಣನ ಕೈ ಹಿಡಿದುಕೊಂಡೇ ಹೊರಟುಬಿಟ್ಟ ಗೋವಿಂದಯ್ಯ.

"ಬೇಗ್ನೇ ಹುಣವಾಗಿ ಬಂದ್ಬಿಡು ಮಗೂ" ಎಂದು ಕೂಗುತ್ತಲೇ ಅಂದಳದ ವರೆಗೂ ಹಿಂಬಾಲಿಸಿದ ಕಮಲಮ್ಮನ ಅಳುವ ಶಂರದೊಂದಿಗೆ ಮಕ್ಕಳ ಆರ್ತ ಸ್ವರವೂ ಸೇರಿದಾಗ ರಾಮಣ್ಣನ ಹೆಜ್ಜೆ ಕಡವರಿಸಿತು. ಆತ ಕಾಲೆಳೆದು ಕೊಂಡೇ ನಡೆಯುತ್ತಿದ್ದು ಬೀದಿಯಲ್ಲಿ ವಾರಕ್ಕೊಮ್ಮೆ ಬರುವ ಸರಕಾರಿ ಆಸ್ಪತ್ರೆಯ ಡಾಕ್ಟರರನ್ನು ಭೇಟಿ ಮಾಡಿದಾಗ ಅವರು ಅವರನ್ನು ಪರೀಕ್ಷಿಸಿ ತಿರಸ್ಕಾರದಿಂದ ಮುಖ ತಿರುಗಿಸಿ ನುಡಿದಿದ್ದರು.

"ಈ ವರೆಗೂ ಹೀಗೆ ಅಲಕ್ಷ್ಯ ಮಾಡಿ ಕುಳಿತದ್ದೇಕೆ? ಕೂಡಲೇ ಪೇಟೆಯ ದೊಡ್ಡ ಆಸ್ಪತ್ರೆಗೆ ಹೋಗಿ ಸೇರಿಕೊ. ಇಲ್ಲವಾದರೆ ಆಗುವಂತಿಲ್ಲ."

ಆತ ಸುಲಭವಾಗಿ ನಿರ್ಲಕ್ಷ್ಯದಿಂದ ಆಡಿದ ಮಾತುಗಳು ರಾಮಣ್ಣನ ಇದ್ದ ಶಕ್ತಿಯನ್ನೂ ಸಂಪೂರ್ಣವಾಗಿ ಹೀರಿಬಿಟ್ಟವು. ಆತ ಚೈತನ್ಯಹೀನನಾಗಿ ದೈನ್ಯತೆಯಿಂದ ಡಾಕ್ಟರರೊಡನೆ ಹೇಗಾದರೂ ಮಾಡಿ ಇಷ್ಟಿಯೇ ಯಾವುದಾದರೂ ಔಷಧಿ ಕೊಟ್ಟು ಋಣಪಡಿಸಿ ಎಂದು ಕೈ ಮುಗಿದು ಬೇಡಿಕೊಂಡ. ಆದರೆ ಅದರು ಅವನ ವಿಪ್ಪ್ರಯೋಜಕ ಮಾತುಗಳಿಗೆ ಪ್ರತ್ಯುತ್ತರವನ್ನೇ ಕೊಡಲಿಲ್ಲ.

ನಡುಗುವ ಹೆಜ್ಜೆಗಳನ್ನಿಡುತ್ತಾ ನೋವು, ವ್ಯಥೆ, ಸಂಕಟಗಳಿಂದ ಬಳಲಿ ಬಂದ ಪತಿಯನ್ನು ಕಾತರದಿಂದ ಸ್ವಾಗತಿಸಿದಳು ರುಕ್ಮಿಣಿ. ಆರು ಮೈಲು ದೂರದ ದೊಡ್ಡ ಆಸ್ಪತ್ರೆಗೆ ಸೇರುವುದೆಂದರೆ ವನೆಯಲ್ಲಿ ಅಶಾಂತಿ, ಗೊಂದಲಗಳೇರ್ಪಟ್ಟವು. ಹೆಂಡತಿಯ ದಃಖ, ತಾಯಿಯ ಶೋಕ, ಮಕ್ಕಳ ಅಳು ಇವಕ್ಕೆಲ್ಲ ಸರೂಧಾನ ಹೇಳುವ ಶಕ್ತಿ, ಧೈರ್ಯ ರಾಮಣ್ಣನಲ್ಲಿರಲಿಲ್ಲ. ಆಗ ನೆರೆಮನೆಯ ಗೋವಿಂದಯ್ಯನ ಮನಕರಗಿ ಅವರೆಲ್ಲರನ್ನೂ ಸಾಂತ್ವನಗೊಳಿಸಲು ಯತ್ನಿಸಿದ್ದ.

"ಏನು ನೂರಾರು ಮೈಲು ದೂರವಿದೆಯೇ? ಆಸ್ಪತ್ರೆಗೆ ಹೋದ್ರೆ ಕಾಯಿಲೆ ಪೂರ್ತಿವಾಸಿಯಾಗುತ್ತದೆ. ಕೆಲವೇ ದಿನಗಳಲ್ಲಿ ಗುಣವಾಗಿ ಮನೆಗೆ ಬರಬಹುದು. ಹೀಗೆ ಯಾವಾಗಲೂ ಕೆಮ್ಮು ಕೆಮ್ಮು ಅಂತ ಫಿತ್ಯ ನರಳುವುದಕ್ಕಿಂತ ಒಮ್ಮೆ ಹೋಗಿ ಸೌಖ್ಯವಾಗಿ ಬರೋದು ಮೇಲು ಅಲ್ವಾ?"

ಗೋವಿಂದಯ್ಯನ ಮಾತಿಗೆ ಒಪ್ಪಿಕೊಳ್ಳದೆ ಬೇರೆ ದಾರಿಯಿರಲಿಲ್ಲ. ಹೀಗೆ ನರಳುತ್ತಾ ಜಾಪೆ ಹಿಡಿದು ಮಲಗಿಬಿಟ್ಟರೆ ಮುಂದೆ ಸಂಸಾರದ ಗತಿಯೇನು? ಅದಕ್ಕಿಂತ ಕಷ್ಟವಾದರೂ ಕೆಲವು ದಿನ ಆಸ್ಪತ್ರೆಯಲ್ಲಿ ನಿಂತು ಆರೋಗ್ಯವಂತನಾಗಿ ಮನೆಗೆ ಮರಳುವುದೇ ಉಳಿದ ದಾರಿ ಎಂದು ಎಲ್ಲರಿಗೂ ತೋರಿತು.

ಆದರೂ ಏಕೋ ದೂರದ ಆಸ್ಪತ್ರೆಗೆ ಹೋಗಿ ಅಲ್ಲೇ ಕೆಲವು ದಿನ ಕಳೆಯಬೇಕಾಗುವುದೆಂದರೆ ಎಲ್ಲರಿಗೂ ಒಂದು ರೀತಿಯ ಅಳುಕು, ವ್ಯಥೆ, ಜೇಕರ. ಆದರೆ ಆಗಲಿಕೆ ಅನಿವಾರ್ಯವೆಂದಾದ ಮೇಲೆ ಸಹಿಸಿಕೊಳ್ಳದೆ ನಿರ್ವಾಹವಿರಲಿಲ್ಲ. ಎಂದು ಒಬ್ಬರನ್ನೊಬ್ಬರು ಸಮಾಧಾನಪಡಿಸಿದರೂ ಕೂಡ ಹೊರಡುವ ವೇಳೆ ಬಂದಾಗ ಎಲ್ಲರಿಗೂ ತಾಳಲಾರದ ವೇದನೆಯೇ. ರಾಮಣ್ಣ ದೈಹಿಕ ಬಳಲಿಕೆಯೊಂದಿಗೆ ಮಾನಸಿಕ ವ್ಯಥೆಯನ್ನು ನೇರಿಸಿಕೊಂಡು ಕಂಗಾಲಾಗಿ ಕುಳಿತಿದ್ದಾರಲೇ ಬಹು ಬಂತು.

ಬಸ್ಸು ಹತ್ತಿ ಇಳಿದು ಒಂದು ಫರ್ಲಾಂಗ್ ದೂರ ನಡೆಸಲು ಅವರು ವಿಶಾಲವಾದ ಆಸ್ಪತ್ರೆಯ ಭವ್ಯ ಕಟ್ಟಡವನ್ನು ತಲಪಿದರು. ಅಲ್ಲಿ ಡಾಕ್ಟರರನ್ನು ಕಾಯುತ್ತಾ ಮುಖ ಬಾಡಿಸಿಕೊಂಡು ಕುಳಿತ ನೂರಾರು ರೋಗಿಗಳೆಡೆ ಸುಲ್ಲಿ ತಾನೂ ಒಬ್ಬನಾಗಿ ರಾಮಣ್ಣ ಕುಳಿತಾಗ ತಾನೆಲ್ಲೋ ಹೊಸ ಲೋಕಕ್ಕೆ ಬಂದು ಸೇರಿದೆ ನೇನೋ ಎಂದುಕೊಳ್ಳುವಂತಾಯಿತು. ಅಲ್ಲಿಯ ಗಂಭೀರ ವಾತಾವರಣ ಶ್ಮಶಾನದ ಪೆನಪನ್ನು ತಂದ ಕೊಟ್ಟಂತೆಯೂ ದೂರದಿಂದ ಕೇಳಿಬರುವ ರೋಗಿಗಳ ನರಳಾಟ ಸಾವಿನ ಜ್ಞಾಪಕ ಹುಟ್ಟಿಸಿದಂತೆಯೂ ಭಾಸವಾಗಿ ಆತ ಕುಳಿತಲ್ಲೇ ಬೆವರಿದ. ಸುಮಾರು ಒಂದು ಗಂಟೆ ಕಾಲ ಕಾದ ಮೇಲೆ ರಾಮಣ್ಣನ ಸರದಿಯೂ ಬಂದು ಆತನನ್ನೂ ಪರೀಕ್ಷಿಸಿದರು.

"ಒಂಗು ತಿಂಗಳಾದರೂ ಇಲ್ಲೇ ಇರ್ಬೇಕು" ಎಂದು ಒಂದೇ ಮಾತಿನಲ್ಲಿ ಹೇಳಿದ ಡಾಕ್ಟರರ ಗಂಭೀರ ವದನವನ್ನು ನೋಡಿದಾಗಲೇ ರಾಮಣ್ಣನಿಗೆ ಕೇಳಬೇಕೆಂದುಕೊಂಡ ಪ್ರಶ್ನೆಗಳೆಲ್ಲ ತುಟಿಯಲ್ಲೇ ಅಡಗಿ ಹೋದವು. ಆತ ಯಾಂತ್ರಿಕವಾಗಿ ತನಗಾಗಿ ತೋರಿಸಿದ ವಂಚನ ಮೇಲೆ ಹೋಗಿ ಮಲಗಿದ; ಎಚ್ಚರವಾದಾಗ ಕಣ್ಣು ಕೋರೈಸುವ ವಿದ್ಯುದ್ದೀಪಗಳಿಂದಾಗಿ ರಾತ್ರಿ ಜ್ಞಾನಕ್ಕೆ ನಿಜ ಪ್ರಪಂಚದ ಅನುಭವವಾಯಿತು. ಆತ ಕಣ್ಣೆರೆದು ಸುತ್ತು ಮುತ್ತಲೂಮ್ಮೆ ದೃಷ್ಟಿ ಹಾಯಿಸಿದ. ಎಲ್ಲಿ ನೋಡಿದರೂ ಹಾಸಿಗೆಯ ಮೇಲೆ ಮಲಗಿ ನರಳುತ್ತಿರುವ ರೋಗಿಗಳು. ಅವರಲ್ಲಿ ತಾನೂ ಒಬ್ಬನಾಗಿ ಸೇರಿಕೊಂಡಿದ್ದೇನೆ, ನೋವು, ಅಳುವಿನ ಪ್ರಪಂಚಕ್ಕೆ ಬಂದು ಬಿದ್ದುಕೊಂಡಿದ್ದೇನೆ ಎಂದು ಕೊಂಡನಾತ. ಹತ್ತಿರದ ಹಾಸಿಗೆಯನ್ನೊಬ್ಬ ಎರಡೂ ಕೈಗೆ

(ಹನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರನಸ್ಸಿದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋಲಿಯೋ : 526

1921 ಸ್ಥಾಪನ

ಸಂಪುಟ ೪೮

ಸಂಚಿಕೆ ೪೪

VOL. 48

No. 44

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೪—೭—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಪ್ರಧಾನಿಯವರ ದಿಟ್ಟತನ

ಶ್ರೀಮತಿ ಇಂದಿರಾ ಗಾಂಧಿ ಕಾಂ[illegible]ಸ್ ಸರಕಾರದ ಪ್ರಧಾನಿ. ಅವರಿಂದ [illegible]ದಿಸಿಗೆ ಆರ್ಥಿಕ ಕ್ಷೇತ್ರ ಟಸ್ಸಾಗಿ ರವಾ[illegible]. ಬ್ಯಾಂಕುಗಳ ರಾಷ್ಟ್ರೀಕರಣದ ಉ[illegible]ಸ್ಸು ಕ್ರಾಂತಿಕಾರಿ ಅತೀಕ್ಷ. ಆರಂಭ[illegible]ಲ್ಲಿ ಗುಲ್ಲಾಗದ್ದಲ. ವಿರೋಧ—ಪರ. [illegible]ನೆಗೆಲ್ಲ ಒಂದೇ. ವಿಭಿನ್ನತೆಯಲ್ಲೂ ಏ[illegible]ತೆ- ಇದು ಕಾಂಗ್ರೆಸ್ಸಿನ ನೈಜತೆ. ಪ್ರ[illegible]ನಿಯವರ್ [illegible]ಶವದೆಹಲಿಯೂಪಮನ: [illegible]ರಾಜ್ಯಿಯವರಿಂದ ಅರ್ಥಶಾಖಾ [illegible]ತ್ವಾಪಹರಣ. ಉಸಪ್ರಧಾನಿಯಾಗಿ [illegible]ತ್ವ ಮುಂದು ವ ರಿಯೋ ಣ— [illegible]ತ್ವು ಹೋಯಿತೇ!ಅವರ ಆತ್ಮಾಭಿಮಾನ. [illegible]ಬೆಲ್ಲುಗಳಿಂದ ಎಲ್ಲರಿಗೂ ಅಭಿಮಾನ. [illegible]ಂದಿರಾಗಾಂಧಿ ಹೀಗೇಕೆ ಮಾಡಿದರು? [illegible]ುರಾರ್ಜಿಗೇಕೆ ತೀಚೋವೆ ಮಾಡಿದ [illegible]? ವೆ ಬದಲಾಯಿತೆ. ಸಂಧಾನ ಇಂದಿ [illegible]ಯ ಪ್ಪಪ್ಪ ಸಮಾಧಾನ. ಅರ್ಥಶಾಖೆ [illegible]ನ್ನು ಮರಳಿಸೋಣವೆಂಬುದಿಲ್ಲ. ಸಂ [illegible]ನದ ಬಾಗಿಲು ಮುಚ್ಚಿತು. ಸಂಗ್ರಾ [illegible]ಯದ ಬಾಗಿಲುಮಾತ್ರ ತೆರೆದುಲಿಲ್ಲ.

ಮಾಡಿದ ಅನುಮಾನ ಬೆಳೆಯಿತು. ಇಂದಿರಾಗಾಂಧಿಯು ಈ ಬಹು ಜನ ಅ [illegible]ಯ ಕಿಚ್ಚೆಯೇಕೆಯಿಟ್ಟರು? ಬ್ಯಾಂ [illegible]ುಗಳ ರಾಷ್ಟ್ರೀಕರಣ ನೀತಿಯನ್ನೇ [illegible]ಷ ಸ್ಥಾನಕ್ಕೆ ತರಲು ಮುರಾರ್ಜಿ ಬಿಡ [illegible]ಾರದೆಂದೆ? ಎಐಸಿಸಿ ಅನುಮೋದಿಸಿದ ನೀತಿಯನ್ನು ಕಾರ್ಯಗತಗೊಳಿಸುವ ಕೆಣಕೆ ತನ್ನದು ಮಾತ್ರವೆಂದೇ? ಮುರಾ [illegible]ರ್ಜಿ ಸಾಮಾಜಿಕ ಹತೋಟಿಯನ್ನು ತಂ [illegible]ಯ ವರ್ಷವೊಂದೂ ಸಂದಿಲ್ಲ; ಈಗಲೇ ಅ [illegible]ವೇಕೆ ಎಂದಕೆ, ತಾನು ದೃಢ ಧೋ [illegible]ಣಿ ತಳೆದಂತಾಗುವುದಿಲ್ಲವೆಂದೆ? ಅದೇ [illegible]ದ್ದರೂ ಇಂದಿರಾಗಾಂಧಿಯವರ ಮೂಲ [illegible]ಕ ಬೆಳವಣಿಗೆಗೆ ಎಲ್ಲರಲ್ಲೂ ಅನುಮಾನ ಮೂಡಿಸಿತ್ತು.

ಆರ್ಥಿಕ ಮಂತ್ರಾಲಯ ಮತ್ತು ರಾ [illegible]ಮೂಲ ಸಚಿವಾಲಯಗಳ ವಕ್ತಾರರು ಬ್ಯಾಂಕು ರಾಷ್ಟ್ರೀಕರಣದ ಸಂಧಾನ್ಯತೆ [illegible]ನ್ನು ಅಲ್ಲಗಳೆಯುತಿದ್ದಂತೆಯೇ ಶ್ರೀ [illegible]ವಿ. ಗಿರಿಯವರು ರಾಷ್ಟ್ರಪತಿ ಪದ [illegible]ಕ್ಕಾಗಿ, ಉಪರಾಷ್ಟ್ರಪತಿ ಪದಕ್ಕೆ ರಾಜಿ [illegible]ನಾಮೆ ಕೊಡುವ ತಯಾರಿ ಮಾಡುತಿದ್ದಂ [illegible]ತೆಯೇ ಸಂಸ್ಥಾವಾಜ್ಞೆಯ ಹೊರಡಿಸಿ ರೂ. [illegible]ಗಂ ಕೋಟಿ ಆಥವಾ ಹೆಚ್ಚಿನ ರೇಷನಾತಿ [illegible]ಯುಳ್ಳಗಿಳ ಬ್ಯಾಂಕುಗಳನ್ನು ರಾಷ್ಟ್ರೀ [illegible]ಕರಣಗೊಳಿಸಲು ದಾರಿ ಹಸನು ಮಾಡಿದರು. ಎಐಸಿಸಿ ಸ್ವೀಕರಿಸಿದ ನಿರ್ಣಯಗಳಲ್ಲಿ ಇಷ್ಟು ಬೇಗ ಕಾರ್ಯಗತವಾದ ಬೇರೊಂದು ನಿರ್ಣಯವಿಲ್ಲವೆಂತಲೇ ಇದು ಕ್ರಾಂತಿಕಾರಿ ದಿಟ್ಟತನದ ಹೆಜ್ಜೆ. ಇದರಿಂದ ಇಂದಿರಾ ಗಾಂಧಿಯವರು ನೀತಿಯನ್ನು ರೂಪಿಸುವಲ್ಲಿಯೂ ಅದಕ್ಕೆ ಅನುಷ್ಠಾನಕ್ಕೆ ತರುವಲ್ಲಿಯೂ ಎಲ್ಲರಿಗಿಂತಲೂ ಮುಂದೆ ಎಂಬುದನ್ನು ತೋರಿಸಿಕೊಟ್ಟರು. ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು, ಬ್ಯಾಂಕರರ್ಸ್ ಇವರ ಸಾಮಾನ್ಯರು ಇಂದಿರಾ ವರ್ತನೆಯಿಂದ ತಾಳಿದ್ದ ಅನುಮಾನ ನಿಜವಾಗಿ ಪರಿಣಮಿಸಿತು.

ದೇಶದ ಐದು ಅರು ಬ್ಯಾಂಕುಗಳು ಮಾತ್ರ ರಾಷ್ಟ್ರೀಕರಣವಾಗಬಹುದೆಂದು ಕೆಲವರಂದು ಕೊಂಡಿದ್ದರೆ, ಈಗ ಅದೂ ಸುಳ್ಳಾಯಿತು. ಆದರಿಂದಲೇ ಎಲ್ಲರೂ ಆಶ್ಚರ್ಯಗೊಂಡದ್ದು ಸಹಜವೇ. ಬ್ಯಾಂಕು ರಾಷ್ಟ್ರೀಕರಣದ ಪ್ರಶ್ನೆ ಇಂದ-ನ್ನೆಯ ದಲ್ಲ. ಸಾಕಷ್ಟು ಹಳಸಲು. ಇದನ್ನೆ ಆನು ಷ್ಠಾನಕ್ಕೆ ತರಬೇಕೆಂದು ಎಡ ಪಕ್ಷಗಳೂ ಕಾಂಗ್ರೆಸ್ಸಿನ ಒಂದು ಗುಂಪೂ ಬಹು ಕಾಲದಿಂದ ಒತ್ತಾಯ ಹೇರುತಿದ್ದುವು. ಆದರೆ, ಬಲ ಪಂಥೀಯರೆ ಒಬವಿತ್ತ ಇರಲಿಲ್ಲ. ಈಗ್ಗೆ ಆರ್ಥಮಂತ್ರಿ ಹಾಗೂ ಉಪಪ್ರಧಾನಿ ಮುರಾರ್ಜಿಯವರನ್ನು ದೂರವಿಟ್ಟು ಪ್ರಧಾನಿ ತಾನೇ ಮುಂದು ನಿಂತು ಶ್ರೀ ವಿ. ವಿ. ಗಿರಿಯವರ ಅಧಿಕಾರದ ಹಿನ್ನೊಂದನೆ ಗಳಿಗೆಯಲ್ಲಿ ಈ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಿ ಐತಿಹಾಸಿಕ ನಿರ್ಧಾರ ಕೈಕೊಂಡೆವೆಂದು ಹೆಗ್ಗಳಿಕೆಯು; ಎಡ ಪಂಥೀಯರಿಂದ ಭೇಳಿತೆ ಶಹಭಾಸ್ ಎನ್ನಿಸಿಕೊಳ್ಳಬಹುದು. ಆದರೆ, ವಿವೇಕಯುತವಾಗಿಯೂ ವಿವೇಚನಾಯುಕ್ತವಾಗಿಯೂ ರಾಷ್ಟ್ರೀಕರಣವು ಅಕಾಲಿಕ ಅವಸರೇಕ್ಷಣೀಯ ಮತ್ತು ಅವಿವೇಕದ ಕೃತ್ಯವೆಂದು ಮೊದಲೇ ಹೆಚ್ಚಿನ ಪತ್ರಿಕೆಗಳು ಅಭಿಪ್ರಾಯ ಪಟ್ಟಿವೆ.

ಈಗ, ಹೆಜ್ಜೆಯನ್ನು ಮುಂದಿಟ್ಟು ದಿಟ್ಟತನವನ್ನು ತೋರಿಸಿಯಾಯಿತು. ಮುಂದೇನು? ಕಳದ ಜೂನ್ ೩೦ನೇ ತಾರೀಕಿನಲ್ಲಿ ದೇಶದ ಎಲ್ಲ ಬ್ಯಾಂಕುಗಳಲ್ಲಿನ ಒಟ್ಟು ಠೇವಣಾತಿಗಳ ಮೊತ್ತ ರೂ. ೪,೬೦೦ ಕೋಟಿ. ಈ ಪೈಕಿ ರೂ. ೨,೬೨೦ ಕೋಟಿಗಳಷ್ಟು, ಅಂದರೆ, ಸೇ. ೫೯ರಷ್ಟು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತಿತರ ಉಪ ಬ್ಯಾಂಕುಗಳಲ್ಲಿವೆ. ಈಗ ಸುಗ್ರೀವಾಜ್ಞೆಯ ಮೂಲಕ ರಾಷ್ಟ್ರೀಕರಿಸಿದ ಬ್ಯಾಂಕುಗಳಲ್ಲಿರುವ ಒಟ್ಟು ಠೇವಣಾತಿ ರೂ. ೧,೩೦೦ ಕೋಟಿ. ಅಂದರೆ, ಸೇ. ೨೬ ಉಳಿದ ರೂ. ೬೦೦ ಕೋಟಿಗಳು ಈಗ ರಾಷ್ಟ್ರೀಕೃತವಾಗದ ಬ್ಯಾಂಕುಗಳಲ್ಲಿವೆ. ಇದರಿಂದಾಗಿ ಸರಕಾರದ ಪೇರ ಹತೋಟಿಗೆ ಸೇ. ೮೫ ರಷ್ಟು ಠೇವಣಾತಿಗಳು ಬಂದಂತಾಯ್ತು. ಆದರೆ, ಈಗಾಗಲೇ ಅವುಗಳ ಮೇಲೆ ವಿಧಿಸಿರುವ ಫಿಡುಮಗಳಕ್ಕೆಯೇ ಸರಕಾರ ಮತ್ತು ಸರಕಾರದ ಅಂಗೀಕೃತ ಸಾಲ-ಪತ್ರಗಳಲ್ಲಿ ಬ್ಯಾಂಕುಗಳು ತಮ್ಮ ಧಂಡವಾಳಗಳನ್ನು ವಿನಿಯೋಗಿಸಿರುವುದರಿಂದ ಸರಕಾರದ ಕೈಗೆ ದೊರೆಯುವ ಹೊತ್ತೇ ಹೆಚ್ಚಾಗದು.

ರಾಷ್ಟ್ರೀಕರಣದ ಮೂಲೋದ್ದೇಶ ದೇಶದ ಸಂಪತ್ತನ್ನು ಕೃಷಿ, ಕೈಗಾರಿಕೆ, ವಾಣಿಜ್ಯಗಳಿಗೆ ದೊರೆಯಂತೆ ಮಾಡಿ ಆರ್ಥಿಕ ಪುನಾರಚನೆ ದಾರಿ ಸುಗಮ ಮಾಡುವುದು. ಬ್ಯಾಂಕುಗಳ ಮೇಲೆ ಹೇರಿದ ಸಾಮಾಜಿಕ ಹತೋಟಿಯ ಉದ್ದೇಶವೂ ಇದೇ ಆಗಿದ್ದರೂ ಹತೋಟಿ ಹತೋಟಿ ಮಾತ್ರ. ಬ್ಯಾಂಕುಗಳ ರಾಷ್ಟ್ರೀಕರಣದಿಂದಾಗಿ ಶ್ರೀಸಾಮಾನ್ಯನಿಗೆ ಅಫಿವೃದ್ಧಿ ಸಂದರ್ಭಗಳಲ್ಲಿ ದೊರೆವ ಸಾಲ-ಪತ್ರಗಳಿಗೆ ತಡೆ ಬಿದ್ದಂತಾಯ್ತು. ವ್ಯಾಪಾರೋದ್ಯಮಿಗಳಿಗೂ ಹಿಂದಿನಷ್ಟು ಉದಾರವಾಗಿ ಸಾಲಗಳು ಲಭ್ಯವಾಗಬೇಬುಡು ಕಂಡಿತ. ಇದರಿಂದಾಗಿ ಹಲವು ಸಮಸ್ಯೆಗಳು ತಲೆಯೆತ್ತುವುದು ಸ್ವಾಭಾವಿಕವೇ. ರಾಷ್ಟ್ರೀಕೃತವಾಗದ ಸಣ್ಣ ಬ್ಯಾಂಕುಗಳೂ ರಾಷ್ಟ್ರೀಕರಣವಾಗಬೇಕೆಂಬ ಬೇಡಿಕೆ ಬ್ಯಾಂಕು ಪೌಕರರಿಂದಲೂ ಎಡ ಪಂಥೀಯರಿಂದಲೂ ಪ್ರಬಲವಾಗಿ ಕೇಳಿಬರಬಹುದು. ರಾಷ್ಟ್ರೀಕೃತ ಉದ್ಯಮಗಳನ್ನು ಸರಕಾರ ವಹಿಸಿಕೊಂಡು ಬರುತ್ತಿರುವ ಪರಿಪಾಟವನ್ನು ನೋಡಿದರೆ, ಶ್ರೀಸಾಮಾನ್ಯನಿಗೆ ಬ್ಯಾಂಕು ರಾಷ್ಟ್ರೀಕರಣದಿಂದ ಹೆಚ್ಚಿನ ದೊರೆಯಲಾರದು. ಜನಜೀವನದಲ್ಲಿ ಮಹತ್ವಪೂರ್ಣ ಅಂಗವೆನಿಸಿದ ಈ ಉದ್ಯಮವು ಸಮರ್ಪಕವಾಗಿ ಸೇವೆ ಸಲ್ಲಿಸದೆ ಹೋದರೆ, ಇವ ರೊಟ್ಟಿಗೆದ್ದಿತೇ; ನಮ್ಮ ಹಲವು ಆರ್ಥಿಕ ಸಮಸ್ಯೆಗಳಿಗೆ ಇದೇ ನಾಂದಿಯಾಡಬೇಕು. "ಇಂದಿರಾಗಾಂಧಿ ಇಟ್ಟ ಗಂಭೀರ ತಪ್ಪು ಹೆಜ್ಜೆ" ಯೆಂದು ರಾಷ್ಟ್ರೀಕರಣದ ಬಗ್ಗೆ ಆಡಿದ ಸ್ವತಂತ್ರ ಪಕ್ಷದ ನಾಯಕರ ಉದ್ಗಾರ ಸತ್ಯವಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಈಗ ಅರ್ಥಮಂತ್ರಿಯಾಗಿ ಅದ್ಯ ಪ್ರಧಾನಿಯ ಅದ್ಯ ಕರ್ತವ್ಯ.

ಚೆಂದ್ರನನ್ನು ಮೆಟ್ಟಿದರು

ಅಮೆರಿಕನ್ ಗಗನಯಾತ್ರಿಗಳು ಚಂದ್ರನಲ್ಲಿಳಿದರು; ಈ ಐತಿಹಾಸಿಕ ದಾಖಲೆ ಗೆಂದು ತಮ್ಮ ಅಗಮನವನ್ನು ಸೂಚಿಸುವ ಫಲಕವನ್ನು ಅಲ್ಲಿಸೆದು ಬಂದರು. ಟಿ.ವಿ. ಯ ಮೂಲಕ ಇದನ್ನು ನೋಡಿದವರೂ ಇದ್ದಾರೆ. ನೋಡದೆ ನಂಬದವರೇ ಹೆಚ್ಚಿನವರು. ವಿಜ್ಞಾನದ ಬಲದಿಂದ ಏನೇನೋ ಸಾಧಿಸಬಹುದು; ಋದ್ಧಿಯು ತೀವ್ರತೆಯೆಷ್ಟು ಎಂಬುದನ್ನು ಅಳೆಯಲು ಪ್ರಹ ಯೋಗ್ಯ ಸಾಧ್ಯತೆಯೇ ಸಾಧನ. ಈ ಅ ನೋಘ ಸಾಧನೆಯಲ್ಲಿ ಯಶಪಡೆಸಿದ ಅ ಮೆರಿಕೆಗೂ, ಅಪೊಲೊ ೧೧ರಲ್ಲಿ ಚಂದ್ರ ಮಮಪಸಿಗಿದ ಗಗನಯಾತ್ರಿತ್ರಯರಿಗೂ ಅಭಿನಂತನೆಂತ ಅಭಿನಂದನೆಗಳು.

ಅಮೆರಿಕನ್ ಉಪಾಧ್ಯಕ್ಷರು ಪ್ರತಿ ನಿಧಿ ಸಭೆಯಲ್ಲಿ ಮಾತನಾಡುತ್ತ, ನಾವು ಮುಂದಿನ ಕೆಲವೇ ವರ್ಷಗಳಲ್ಲಿ ಎಲ್ಲ ಗ್ರಹಗಳನ್ನೂ ಮುಟ್ಟಿ ಅವುಗಳ ಬಗ್ಗೆ ಅಧ್ಯಯನ ನಡೆಸಬೇಕು ಎಂದರಂತೆ. ಆಗ ಯಾರೋ ಒಬ್ಬ ಎದ್ದು ನಿಂತು, ಇದಕ್ಕೆ ಆಕ್ಷೇಪ ಸೂಚಿಸಿದನಂತೆ. ನಮಗೆ ನಮ್ಮ ದೇಶದಲ್ಲಿಯೂ ಈ ಭೂ ಲೋಕದಲ್ಲಿಯೂ ಅಧ್ಯಯನ ಮಾಡಲು ಮತ್ತು ನಿವಾರಿಸಲು ಬೇಕಾದಷ್ಟು ಸಮಸ್ಯೆಗಳಿರುವಾಗ ಇತರ ಲೋಕಗಳ ಚಿಂತೆಯೇಕೆ ಎಂದವರ ಸವಾಲು. 'ಇಸರಿ ಹಾರದವನು ಗಡನ ಪಾರಲಾರ' ಎಂಬ ಸಂಪ್ರದಾಯದ ಇಂತಹ ವಂದಗಾಮಿಗಳಿಗೆ ಈಗ ಅವಕಾಶವಿಲ್ಲ. ರಾತ್ರೆ ಬೆಳಗಾಗುವುದರೊಡನೆ ಲೋಕವನ್ನು ಉದ್ಧಾರ ಮಾಡಬಲ್ಲ ಅಲ್ಪಾವಧಿದ್ದೀನವ ಪೂಯಾದೀಕ ಹೂರ ಬಳಿಯೂ ಇಲ್ಲವಾದರೂ ಸ್ವನಾರ್ಥದಲ್ಲೇ ಅದನ್ನು ಸುಟ್ಟು ಖಾದಿ ಮಾಡವ ಬಾಂಬುಗಳನ್ನು ಅನೇಕರು ಹೊಂದಿದ್ದಾರೆ— ಇಂದು ಇಂದಿನ ಲೋಕದ ಸತ್ಯ ಪರಿಸ್ಥಿತಿ.

ಮುಖಪತ್ರ:

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಉತ್ಸಾಹೀ ಅಧ್ಯಕ್ಷರಾದ ಡಾ|| ಕೆ. ನಾಗಪ್ಪ ಅವರು.

ಪುತ್ತೂರು ಲೇಂಡ್ ಟ್ರಿಬ್ಯೂನಲಿನಲ್ಲಿ

Rent Petition 13/1968

K. R Achar — Applicant
ಕುಂಳ ಗುಂಡ ಕೊಡಾ — Opponents.

೭ನೇ ಎದ್ರಿ ಬಾಲಕೃಷ್ಣ ಶೆಟ್ಟಿ ಇವರ ತಂದೆಯವರಾದ ದಿವಂಗತ ಜಿ. ಕೆಂಚಪ್ಪ ಶೆಟ್ಟಿ ಇವರಿಂದ ಗ್ರಾಮದ ಮೇಲೊರು ಬೈಲು ಯಿಂ ಬಲ್ಲಿವರೆಗಳು.

ಸದ್ರಿ ಯೆದ್ರಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವ್ಯವಹಾರಕ್ಕಾಗಿ ಮೈಸೂರು ಲೇಂಡ್ ರಿಫೋರ್ಮ್ಸ್ ಆಕ್ಟಿನ ಸೆಕ್ಷನ್ ೪೨ (೪)ಮತ್ತು ೧೭ನೇ ರೂಲ್ ಪ್ರಕಾರ ಗೇಣಿ ವಸೂಲಿ ಬಗ್ಗೆ ಅರ್ಜಿದಾರನು ಅರ್ಜಿಕೊಟ್ಟಿರುವುದಿಂದ ಆ ಕಾರಣ ನಿಮಗೆ ಏನಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ತಾ. ೨-೮-೧೯೬೯ನೇ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಖುದ್ದಾ ಸದ್ರಿ ಟ್ರಿಬ್ಯೂನಲ ಮುಂದೆ ಹಾಜ್ರಾಗಿ ಉದಪರಿಸಿಕೊಳ್ಳತಕ್ಕದ್ದು.

(ಟ್ರಿಬ್ಯೂನಲ್ ಕೋರ್ಟಿನ ಮುಖಾಂ ಪ್ರಕಾರ)

S. Soorappaya
Vakil for Applicant.

ಗೇಹರಾಜ್ಯದಲ್ಲಿ

ಆತ್ಮಾಭಿಮಾನ ಮತ್ತು ಬಿಗುಮಾನ

"ಏ.... ತುಸು ಇಲ್ಲಿ ಕೇಳೇ...'

"ಅಲ್ರಿ, ಏ ಏ ಅಂತ ಏನಪದು ಕೂಗೋದು? ಥಮಗೂ ಆಪ್ಪ ಅಮ್ಮಂದಿರು ಒಳ್ಳೇ ಒಳ್ಳೇ ಹೆಸ್ರು ಇಟ್ಟಿದ್ದಾರೆ....'

"ಹಾದಮ್ಮ, ಯಾರು ಇಟ್ಟಲ್ಲಾಂ ತಾರಿ?'

'ಮತ್ಯಾಕೆ.....'

'ನೋಡು, ಅಪ್ಪಪೂ ಹೆಸ್ರು ಇಟ್ಟಿದ್ದಾನೆ. ನೀರಿ, ರಮಣಿ, ಭಾವೆ, ಪ್ರಾಣೇಶ್ವರಿ, ಹೃದಯೇಶ್ವರಿ, ಪ್ರಿಯೆ, ಪ್ರಾಣಪ್ರಿಯೆ, ಚಂದ್ರಮುಖಿ, ಕಮಲಲವಣಿ, ಅಬಲೆ....'

"ಸಾಕು ಸಾಕು....'

'ಹೀಗೆಲ್ಲಾ ಕವಿಗಳು ಹೆಸರಟ್ಟಿದ್ದಾರೆ .....'

'ಆದು ನಿಜಾನ್ನಿ. ಆದರೆ ನೀವನ್ನುವ ಏನಿ"

'ಆಯ್ಯೋ, ಅದು ಗಂಡಂದಿರೇ ತಂತಮ್ಮ ಹೆಂಡಂದಿರಿಗೆ....'

"ಸಾಕು ಬಿಡೀಂಪ್ರೆ... ಗಂಡು ಅಂತಾದ ಕೂಡ್ಲೆ ನಿಮಗೆಲ್ಲಾ ಸಾಲ್ದು ಕೊಡು ಮೂಡಿ ಬರುತ್ತೆ."

"ಆಯ್ಯೋ, ಏ ಆನ್ನೋದು ಕೋಡು ಮೂಡಿದ ಅಹಂಕಾರದಿಂದ ಹೊರಟಿದ್ದಷ್ಟಿಮ್ಮ. ಅದು ಅಂತರಾಳದ ಪ್ರೀತಿ ಉಳುಕ್ಕಿ ಹರಿದ ಊಟೆ...."

"ನಿಮ್ಮ ಹತ್ರ ಮಾತಾಡಿ ಗೆಲ್ಲೋದು ದೂರು? ಆ ಹುಟ್ಟ, ಈಗ ಹೇಳಿ, ಏನು ವಿಷಯಾಂತ?'

"ವಿಷಯ ಮತ್ತೇನೂ ಇಲ್ಲ. ಅಲ್ಲಾ, ನಿನ್ನ ಇಂದಿರಮ್ಮನ ಎದೆ ಧಾರಿ ಗಟ್ಟಿ...."

"ನಿನೆಲ್ಲ ಅಬಲೆ ಅಬಲೆ ಅಂತ ತಿರಸ್ಕಾರ ಮಾಡ್ತೀರಿ ನೋಡಿ, ಆದಕ್ಕ ತಾನು ಸಬಲೆಯೆಂಬುದನ್ನ ತೋರಿಸಿಬಿಡೋ ಛಲವಾದಿ..."

'ಇರಬಹುದು. ಆದ್ರೂವೂ....'

"ಏನು?"

"ಎಷ್ಟಾದರೂ ಅಬಲೆ ತಾನೆ?"

"ಮಪ್ಪೆ ಸುರು ಮಾಡಿದ್ರಿ. ನೀವು ಗಂಡಸ್ರ ಜಾತಿಯೇ ಹಾಗೆ. ಚಂದ್ರಮುಖಿ, ಇಂದ್ರಮುಖೀ ಲತಾಂಗಿ, ಕೋಮಲಾಂಗಿ ಅಂತ ಹೊಗಳಿಹೊಗಳಿ ಅಟ್ಟಕ್ಕೆ ಏರಿಸೋದು ಈ ಹೊಗಳಿಕೆಯಿಂದ ನಾರಿ ಉಬ್ಬಿ ಉಬ್ಬಿ ನ್ಯಾದಾವಸ್ಥೆಗೇದಾಗ ನೀವು ಅಬಲೆ ಎಂಬ ಬಿರುದನ್ನ ಪಟ್ಟ ಮಾಡಿಸುವುದು, ಉತ್ಕಾದವಿಲ್ಲದ್ರೂ ಈ ಬಿರ ಮರಿಯೋ ವಂತಿಲ್ಲ. ಆದ್ರೆ ನೋಡಿ, ನಮ್ಮ ಇಂದಿರಮ್ಮ ಇದನ್ನೆಲ್ಲ ಎದುರಿಸಿ ತಾನೂ ಗಂಡೆದೆಯವಳು ಎಂಬುದನ್ನು ನಿಮ್ಮಂಥ ಗಂಡುಬೀಗಿಗೆ ತೋರಿಸಿ ಹೊಡಬರೆ ಲಶ್ಕರ್ ನೇನು?"

'ಒಳ್ಳೇ ಲಕ್ಚರ್ರು ಬಿಟ್ಟೆ ಕಣೆ. ಒಂದೆರಡು ಎನ್ಮೆನಾದ್ರು ಇರ್ತಿದ್ರೆ ಹೊವ್ವದಾದ್ರೂ ಕಾಲೇಜಿಗೆ ಸೇರ ಬಹುದಿತ್ತು; ಕೈತುಂಬ ಸಂಬಳ ತರಬಹುದಿತ್ತು.

"ನಿಮ್ಮಂಥವರ ಕೈಹಿಡಿದದ್ದಕ್ಕೆ ನಾನು ಎಷ್ಟೆ ಕಟ್ಟೆ ಹಾಲು ಮೊರಿ ಗಳಿಸಬೇಕೇನು?"

'ಯೂರೇ ನಿನ್ನ ಗೌಳಿಗತ್ತಿಯೂಗು ಅಂದೋರು? ಕಾಲೇಜಿನಲ್ಲಿ ಲೆಕ್ಚರರಾಗಬದುದಿತ್ತು ಅಂದೆ.'

'ಆಲ್ರಿ, ಎಸ್ಟೆ ಕಟ್ಟಿಕೊಂಡ್ರೆ ಲೆಕ್ಚರರಾಗುತ್ತಾರೇನ್ರಿ?'

'ಆಯ್ಯೋ ಪೆದ್ದಿ ನೀನೊಬ್ಬಳು. ಎನ್ಮೆ ಅಂದರೆ, ಎಂ. ಎ. ಎಂದೆರಡು ಅಕ್ಷರಗಳ ಕೂಡಿಕೆ.

'ಓ, ಈ ನಿಮ್ಮ ಭಾಷೆ ಯೂರಿಗೆ ಅರ್ಥವಾಗಬೇಕು!'

"ಆದಕ್ಕೇ ಆನ್ನೋದು...."

"ಸಾಕು ಬಿಡೀಂಪ್ರೆ.... ಈಗ ಏಗಿರೋ ದಾದ್ರೂ ಏನು?'

"ಪ್ರಾಯಃ ಇನ್ನು ಆಗಬೇಕಾದುದೇನೂ ಇಲ್ಲವೆಂದು ತೋರುತ್ತದೆ....'

"ಹೂಕೆ? ಅಂಥ ಊರು ಮುಳುಗಿ ಹೋಗೋದು ಏತಾಯ್ತು?'

"ಅಲ್ಲ, ನಿನ್ನ ಇಂದಿರಮ್ಮ ಬೆಂಗಳೂರಿನಲ್ಲಿ ಒಂಬೆಡೆ ಗೆದ್ದರುಃ ಮತ್ತೊಂಬೆಡೆ ಸೋತರು. ದಿಲ್ಲಿಗೆ ಖಂದು ಬೇರೆಯೇ ಮಾಡಿದರು....'

"ಅಂಪ್ರೆ, ಮುರಾರ್ಜಿಯವರಿಂದ ಅರ್ಥ ಶಾಖೆಯನ್ನು ಕಿತ್ತುಕೊಂಡು ತಾನೇ ಇಟ್ಟುಕೊಂಡದ್ದಕ್ಕೆ ನೀವು ಹೀಗನ್ನೋದು ತಾನೆ?"

"ಹ್ಞೂ, ನೋಡು, ಇಂದಿರಾ ಗಾಂಧಿಯವರ ಈ ಕ್ರಮ ತೀರ ಅಫೀಕ್ಷಿತ ಮತ್ತು ಸಗ್ಗ ಅನಪೇಕ್ಷಣೀಯ....'

"ಆದರೆ, ಯೂರಿಗೆ ಯಾವ ಮಂತ್ರಿತಾಪಿ ಕೊಡ ಬೇಕೆಂದು ನಿರ್ಧರಿಸುವುದು ಪ್ರಧಾನಿ ತಾನೆ?"

"ಯೂರು ಅಲ್ಲಾಂತಾರೆ? ಅದರೂ ಇದ್ದದ್ದನ್ನ ಇದ್ದಕ್ಕಿದ್ದಂತೆ ಬದಲಾಯಿಸುವುದೆಂದರೆ, ಅತ್ಮಾಭಿಮಾನಕ್ಕೆ ಏಟು ಕೊಡದಂತೆ, ಮತ್ತೆ ಮುರಾರ್ಜಿ ಹೊರ ಬಾರದೆ ಹೇಗುಳಿದಾರು?'

"ಅದು ಸರೀನ್ನಿ. ಇನ್ನೀಗ ಇಂದಿರಮ್ಮ ಮಂತ್ರಾರ್ಜಿಗೆ ಮತ್ತೆ ಅರ್ಥಶಾಖೆಯನ್ನು ಕೊಟ್ಟುಬಿಟ್ಟರೆ ಅವರ ಆತ್ಮಾಭಿಮಾನಕ್ಕೆ ಕುಂದು....'

"ಅದು ಆತ್ಮಾಭಿಮಾನವಲ್ಲ; ಬರಿಯ ಬಿಗುಮಾನ....'

"ನೀವು ಅದಕ್ಕೆ ಏನು ಬೇಕಾದರೂ ಕರೆಯಿರಿ. ಆದರಂದೇನೆಂತೆ?'

'ನೋಡು, ರಾಷ್ಟ್ರಪತಿ ಆಯ್ಯೆಯ ವಿಷಯದಲ್ಲಿಯೂ ಪ್ರಧಾನಿಯವರ ಸಲಹೆಯಂತೆ ಶ್ರೀ ಗಿರಿಯವರು ಸ್ಪರ್ಧೆಗಿಳಿದ್ದದು ಎಂಬ ವದಂತಿಯಿದೆ....'

"ಇಷ್ಟನ್ನು ಪ್ರಧಾನಿಯೂ ಶ್ರೀ ಗಿರಿಯವರೂ ಅಲ್ಲಗಳೆದಿದ್ದಾರೆ ತಾನೆ?!

'ಅವರು ಅಲ್ಲಗಳೆದಿರಬಹುದು. ಆದರೆ ಒಳಗಿನ ಗುಟ್ಟು ತಿನ್ನೇ ಬಲ್ಲ...."

'ಅಲ್ರಿ, ಪ್ರಧಾನಿಯವರು ಶ್ರೀ ನೀಲಂರಿಗೇ ತನ್ನ ಸಂಬೂರ್ಣ ಬೆಂಬಲ ಆಂತಿದ್ದಾರಲ್ಲಾ?'

'ಅನ್ನಬಹುದು. ಇದರ ನಡುವೆಯೂ ಒಂದು ಗರಡಿಯಿರಬಹುದು."

'ಏನು?'

'ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನಾಯುವಲ್ಲಿ ಹೈಕಮಾಂಡಿನ ನಿರ್ಧಾರಕ್ಕೆ ತಾನು ತಲೆವಾಗಿದಂತೆ 'ಮಂತ್ರಿ ಮಂಡಳದ ಸಂಗತಿ ಬಂದಾಗ ಪ್ರಧಾನಿಯು ನಿರ್ಧಾರದ ಮುಂದೆ ಎಲ್ಲರೂ ತಲೆವಾಗಬೇಕು' ಎಂಬ ಅಹ್ವಾಪವಿರಬಹುದು.'

"ಹ್ಞೂಂ...."

"ಆದರೆ ನೋಡು, ಸದ್ಯದ ಪರಿಸ್ಥಿತಿಯು ಇಂದಿರಮ್ಮನಿಗೂ ಪೋಷಕವಾಗಲಾರದು.'

"ಯೂಕೆ? ಎಡ ಪಂಥೀಯರ ಬೆಂಬಲ ಅವರಿಗೆ ಸದಾ ಇದೆ.'

"ಯೂರ ಬೆಂಬಲವಿದ್ದರೂ ಪಕ್ಷದಲ್ಲಿ ಒಕ್ಕುಟ್ಟು ಇಲ್ಲದೆ ಹೋದರೆ ಏತಾಗುತ್ತೆ?'

'ಅಂದರೆ, ಕಾಂಗ್ರೆಸ್ಸು ಇಬ್ಭಾಗವಾಗುತ್ತೆ ಅನ್ನುತ್ತೀರೇನ್ರಿ?"

"ಕಾಂಗ್ರೆಸ್ಸು ಇಬ್ಭಾಗವಾಗದೆ ಇರಬಹುದು. ಆದರೆ, ಎತ್ತು ಏರಿಗೆಳೆಯುಬೇಕೆನ್ನುತ್ತೆ; ಹೋರ ನೀರಿಗೆಳೆಯುಬೇಕೆನ್ನುತ್ತೆ...'

"ಹಾಗಾದಲ್ಲಿ?"

'ವಿರೋಧಿ ಪಕ್ಷೇಯರಿಗೆ ತಲೆ ಹೊಗಿಸುವ ಅವಕಾಶ ಲಾಭವಾಗುತ್ತೆ. ಪ್ರಧಾನಿಯು ಮೇಲೆಯೇ ಅವಿಶ್ವಾಸ ಸೂಚನೆ ಮಂಡಿತವಾಗಬಹುದು; ಜೀವನಾಡಿ ನಾಯಕರೂ ರಾಜಿನಾಮೆ ನೀಡಬಹುದು.'

"ಹೌದೆ? ಹಾಗಾದರೆ....'

'ಹಾಗಾದರೆ ಏನಂತೆ? ಒಬ್ಬ ರಾಜಿನಾಮೆ ನೀಡಿದರೆ, ಮತ್ತೊಬ್ಬ ನೀ ಮಕಗೊಳ್ಳುತ್ತಾನೆ ಅನ್ನಿ. ಆದರೆ, ಇಂದಿರಾ ತನ್ನ ಪ್ರಭಾವವನ್ನು ಪಕ್ಷದ ಒಂದು ಪಂಥೀಯರ ಮೇಲೆ ಸ್ಥಾಪಿಸಿ, ತಾನೆಂಬುಳು ಸಮರ್ಥಳು ಎಂಬ ಭಾವನೆಯನ್ನು ಹರಡಿಸಿ ಹೊರಬರೆ ಪರಿಣಾಮ ನೆಟ್ಟಗಾಗಬಹುದು."

"ಯೂಕೆ ಹಾಗನ್ನುತ್ತೀರಾ?"

"ಯೂಕೆ ಅಂದರೆ ಏನು? ಇಂದಿರಾ ಗಾಂಧಿಯಲ್ಲಿ ಎದೆಗಾರಿಕೆಯಿದೆ ನಿಜ, ತಂದೆಯ ಮಗಳಲ್ಲವೆನೆ?'

"ಅಡಲಪ್ಪ..."

"ಆದರೆ ನೆಹರೂ ಕಾಲದಲ್ಲಿದ್ದಂತೆ ಪರಿಸ್ಥಿತಿ ಈಗ ದೇಶದಲ್ಲಿಲ್ಲ....."

"ಅದು ಸರೀನ್ನಿ...."

'ಕಾಂಗ್ರೆಸ್ ಪಕ್ಷದಲ್ಲೀಗ ಹಳತು ಹೊಸತು ವಿಚಾರಧಾರೆಯ ಸಂಘರ್ಷ ಆರಂಭವಾಗಿದೆ. ಇದು ಅನಿವಾರ್ಯವೂ ಹೌದು.'

"ಹ್ಞೂಂ...."

'ಇಂದಿರಾ ಗಾಂಧಿಯವರು ಹೊಸತರ ಸಮರ್ಥಕರಾಗಿದ್ದಾರೆ.

"ಇರಬಹುದೂನ್ನಿ. ಮುರಾರ್ಜಿ ಕೈಯಲ್ಲಿ ಅರ್ಥಶಾಖೆಯಿದ್ದರೆ, ಹೊಸ ಅರ್ಥ ನೀತಿಯನ್ನು ವ್ಯವಹರಿಸಲು ಅಸಾಧ್ಯವೆಂದು ಅವರೆ ತಿಳಿದು ಕೊಂಡಿದ್ದರೂ ಇರಬಹುದು.'

"ಒಂದು ವೇಳೆ ಹಾಗೆ ತಿಳಿದು ಕೊಂಡಿದ್ದರೂ ಅದಕ್ಕೆ ಅವಸರವೇಕೆ? ರಾಷ್ಟ್ರಪತಿ ಚುನಾವಣೆಯ ವ್ಯಾಕ್ಷಾಕಾಲವನ್ನೇ ಅದಕ್ಕೇಕ ಆರಿಸಿಕೊಂಡರು? ಪಕ್ಷವು ಸ್ವೀಕರಿಸಿದ ನೀತಿಯನ್ನು ಅನುಷ್ಠಾನಕ್ಕೆ ತರಲು ಮುಂದಾಜ್ ಎಂದಿಗೂ ಹಿಂದೆ ಮುಂದೆ ನೋಡಿದ ವ್ಯಕ್ತಿಯಲ್ಲ.'

'ಆದು ಸರಿ, ನೀವನ್ನುವ ಮಾತು ಕೇಳುವಾಗ ಇಂದಿರಾ ಗಾಂಧಿ ಆದೇನೋ ಅವಸರ ಮಾಡಿದರೆಂಬ ಸಂದೇಹ ಬರುತ್ತದೆ.'

'ಮತ್ತು ಈ ಅವಸರವೇ ಕಾಂಗ್ರೆಸ್ಸಿನ

(ಒಂಭತ್ತನೇ ಪುಟ ನೋಡಿರಿ)



ಮೊತಿನ ಮಲ್ಲಿಗೆ

ಕರಿಯ ಕೈಯ ವರಣಮಾಲೆ

ವಿಶ್ವನಾಯಕ ಜವಾಹರಲಾಲರ ನಿಧನಾನಂತರ ಅವರ ಮಗಳು ಶ್ರೀಮತಿ ಇಂದಿರಾ ಗಾಂಧಿ ಭಾರತ ಮಂತ್ರಿಯಾದರು; ಪ್ರಧಾನಿಯಾಗಿ ತಂದೆಯ ಉತ್ತರಾಧಿಕಾರಿ ನಿಸಲಿಲ್ಲ. ನೆಹರೂ ಪಂತರು ಯಾರು ಎಂಬ ಪ್ರಶ್ನೆ ಭಾರತೀಯರಿಗಿಂತಲೂ ಹೆಚ್ಚಾಗಿ ವಿದೇಶೀಯರ ತಲೆ ತಿನ್ನುತಿತ್ತು. ಶಾಸ್ತ್ರಿಯವರ ಸಂಪುಟದಲ್ಲಿ ಆಕಾಶವಾಣಿ ಮಂತ್ರಿಯಾಗಿದ್ದ ಇಂದಿರಾ ಗಾಂಧಿ ಅವರ ಬಳಿಕ ನಾಯಕತ್ವಕ್ಕೂ ಮುಂದೆ ಆಸನ್ನು ಉಳಿಸಿಕೊಂಡಿದ್ದಾರೆ. ಶ್ರೀಮತಿ ಗಾಂಧಿಯವರು ರಾಜಿ ಆಭ್ಯರ್ಥಿಯೆಂದು ಆರಂಭದಲ್ಲಿ ನಾಯಕತ್ವವನ್ನು ಪರಿಗಣಿಸಿದರು, ಮುಂದೆಯೂ ಹೆಚ್ಚು ಕಡಿಮೆ ಹಾಗೆಯೇ ವರ್ತಿಸುವರೆಂದರು.

ತಂದೆಯಂತೆ ಸರ್ವ ಜನಪ್ರಿಯತೆಯನ್ನು ಪಡೆದು ಇಂದಿರಾ ನಾಯಕತ್ವವಹಿಸಲಿಲ್ಲ. 'ನೆಹರೂ ಮಗಳು' ಭಾರತೀಯರಿಗೆ ಪರಿಚಿತಳೇನೋ ನಿಜ; ಆದರೆ ಇಂದಿರಾ ಗಾಂಧಿಯಲ್ಲ. ಆದರೆ, ಈಗಿನ ಬಾಲ್ಯದಿಂದಲೇ ದೇಶ ಸೇವಾ ದೀಕ್ಷೆ, ಸತ್ಯಾಗ್ರಹ- ಜಳುವಳಿಯ ಜಾತ- ಸಕ್ರಿಯ ಕಾರ್ಯಕಲಾಪಗಳು, ದೇಶ ಸ್ವತಂತ್ರವಾದ ಮೇಲೆ ತಂದೆಗೆ ಸಹಕಾರ, ಹಾಗಾಗಿ ಉಚ್ಚ ವರ್ಗದಲ್ಲೂ ಇಂದಿರಾ ಗಾಂಧಿಯ ಬಗ್ಗೆ ವಿರೋಧಾಭಿಪ್ರಾಯವಿಲ್ಲ.

ನೆಹರು ತನ್ನ ನಂತರ ತಮ್ಮ ಮಗಳೇ ಭಾರತದ ಪ್ರಧಾನಿಯಾಗಬೇಕೆಂದು ಬಯಸಿದ್ದರು ಎಂಬ ಸಂಗತಿಯನ್ನು ಮಹಾ ನೀಯರೊಬ್ಬರು ಈಗ ಹೊರಗೆಡಹಿದ್ದಾರೆ. ಆದುದರಿಂದಲೇ ತನ್ನ ಉತ್ತರಾಧಿಕಾರಿಯ ಬಗ್ಗೆ ಅವರು ಹೆಚ್ಚಾಗಿ ಚಿಂತಿಸುತ್ತಿರಲಿಲ್ಲ.ಭಾರತವೂ ತಂತೆಯಂತೆ ಬಲ್ಲ. ಪ್ರಜಾತಂತ್ರದಲ್ಲಿ ಪೂರ್ಣ ವಿಶ್ವಾಸವಿರುವ ಭಾರತೀಯರು ತಮ್ಮ ನಾಯಕನನ್ನು ತಾವೇ ಆರಿಸಿಕೊಳ್ಳುತ್ತಾರೆ ಎನ್ನುತ್ತಿದ್ದ ನೆಹರುರವರ ಬಾಯಿಂದ ತನ್ನ ಮಗಳ ಉತ್ತರಾಧಿಕಾರದ ಮಾತು ಹೊರಟೀತೆ?

ಶ್ರೀಮತಿ ಗಾಂಧಿಯವರು ಹಲವಾರು ಪದಗಳನ್ನೇರಿ ಇಂದಿಷ್ಟ ಉಚ್ಚ ಗಿರಿ ಹತ್ತಿದ್ದಾರೆ. ಇದು ಕಲ್ಲು-ಮುಳ್ಳುಗಳದ್ದೇ ಶಿಖರ ರಾಷ್ಟ್ರಪತಿ ಚುನಾವಣೆಯು ಮುಂದಿರುವಾಗ ಶ್ರೀಮತಿಯವರ ಗಮನ ಹಲವೆಡೆ ಹರಿಯಬೇಕಾಗಿದೆ. ಆಂತರಿಕ ಬಾಹ್ಯ ಸಮಸ್ಯೆಗಳತ್ತ ಗಮನ ಹರಿಸಬೇಕಾಗಿದೆ. ಕಾಂಗ್ರೆಸ್ಸು ಹೈಕಮಾಂಡು ತಾನ್ಶಾಶಂಕ್ಯೆ ವಿರುದ್ಧವಾಗಿ ನೀಲಂ ಸಂಜೀವ ರೆಡ್ಡಿಯವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಆಯ್ದುದೇ ಒಂದು ಸಮಸ್ಯೆ ಆದರೆ, ಹಾಲಿ ರಾಷ್ಟ್ರಪತಿ ವಿ. ವಿ. ಗಿರಿಯವರೂ ಚುನಾವಣಾರಂಗಕ್ಕೆ ಇಳಿದುದು ಮತ್ತೊಂದು ಭಾರಿ ಸಮಸ್ಯೆ; ಜೀವನದಲ್ಲಿ ಏಳು-ಬೀಳುಗಳು ಸಹಜವೇನೋ ನಿಜ. ಬದ್ಧವೈರಿಗಳೂ ಮೂಗು ಮೇಲೆಂದು ವಾದಿಸುವವರು ಬೀಳಲು ಬಯಸುವುದುಂಟೆ?

ಂ ಂ ಂ

ಹಾಲಿ ರಾಷ್ಟ್ರಪತಿ ವಿ. ವಿ. ಗಿರಿಯವರು ಮುಂದಿನ ರಾಷ್ಟ್ರಪತಿ ಸ್ಥಾನಕ್ಕೆ ಕೈಗೆರ್ ಅಭ್ಯರ್ಥಿ ಎಂಬುದು ಬಹಳ ಹಿಂದೆನೇ ಎಲ್ಲರಿಗೂ ತಿಳಿದಿತ್ತು. ತಮ್ಮ ಉಚ್ಚ ಸ್ಥಾನಕ್ಕೇರಿದರೆ ಹೋದರೆ, ತಾನು ಕೆಳಗಿನ ಸ್ಥಾನದಲ್ಲಿ ಉಳಿಯಲಾರೆ ಎಂದು ಅವರು ಆಗಲೇ ತಿಳಿಸಿದ್ದರೆಂದೂ ವರದಿಯಾಗಿತ್ತು. ಶ್ರೀಮತಿ ಇಂದಿರಾ ಗಾಂಧಿಯವರು ಶ್ರೀ ಗಿರಿಯವರ ಹೆಸರನ್ನು ಪಾರ್ಲಿಮೆಂಟರಿ ಬೋರ್ಡಿನ ಮುಂದೆ ತಂದಿದ್ದೇನೆ ಎಂದಿದ್ದಾರೆ. ಆದರೆ ವಾಸ್ತವ ಬಿದ್ದುದು ಸಂಜೀವ ರೆಡ್ಡಿಗೆ ನಾಲ್ಕು ಜಡಜೀವನಂತಾಮೇಗೆ ಎರಡು. ಗಿರಿಗೆ?

ಇದರಿಂದ ಗಿರಿಗೆ ಕೋಪ ಬಂದಿದೆ. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧಿಕಾರವನ್ನು ತಾನು ಪ್ರಶ್ನಿಸುವುದಿಲ್ಲ ವಾದರೂ ತಮ್ಮ ನಿರ್ಧಾರದಿಂದ ಒಂದು ಪಕ್ಷಕ್ಕೂ ದೇಶಕ್ಕೂ ನ್ಯಾಯದಾನ ಮಾಡಿಲ್ಲವೆಂದು ದೂರಿದ ಅವರು ತಾವೂ ಚುನಾವಣಾ ರಂಗಕ್ಕಿಳಿಯುವುದಾಗಿ ಘೋಷಿಸಿದ್ದಾರೆ. ಕೆಲವರ ರಕ್ತ ಹೆಪ್ಪುಗಟ್ಟಿತು; ಕೆಲವರಲ್ಲಿ ಹೆಪ್ಪುಗಟ್ಟಿದ ರಕ್ತ ಮತ್ತೆ ಸಂಚಾರಸತೊಡಗಿತು. ಶ್ರೀಮತಿ ಗಾಂಧಿ ಮತ್ತಿತರರು ಪೆಚ್ಚಾದರು.

ಪಕ್ಷೇತರ ಜಂಜಾಟದಿಂದ ಹೊರ ಗಿರುವ ಸ್ಥಾನವೆಂದರೆ, ಪ್ರಧಾನ ದೇಶದಲ್ಲಿ ಉಪ್ಪ್ರಪತಿ ಮತ್ತು ಉಪರಾಷ್ಟ್ರಪತಿ ಸ್ಥಾನಗಳು. ಉಪರಾಷ್ಟ್ರಪತಿಸೂಡಿದ್ದು ರಾಷ್ಟ್ರಪತಿಯ ಅಧಿಕಾರಗಳನ್ನು ನಿರ್ವಹಿಸುವ ಶ್ರೀ ಗಿರಿಯವರು ತನ್ನ ಅಭ್ಯರ್ಥಿತನವನ್ನು ತಾನೇ ಘೋಷಿಸಿಕೊಂಡು ಚುನಾವಣೆಯ ರಂಗಕ್ಕೆ ತಾನೇ ದುಮುಕಬಹುದೆ? ಅವರು ನೀಡಿದ ಹೇಳಿಕೆಯು ಸಂವಿಧಾನದ ಉಲ್ಲಂಘನೆಯೆನಿಸಿದೆಯೆ? ಅವರಿಗೂ ಅಭ್ಯರ್ಥಿಯಾಗುವ ಅಧಿಕಾರ ವಿದೆ; ಆದರೆ ಅವರು ತನ್ನ ರಾಜಿನಾಮೆಯನ್ನೂ ಘೋಷಿಸಿ ಚುನಾವಣಾ ರಂಗಕ್ಕಿಳಿಯಬೇಕು. ಇಲ್ಲವಾದರೆ, ಉಪ್ಪ್ರಪತಿ-ಉಪರಾಷ್ಟ್ರಪತಿ ಭವನಗಳು ಚುನಾವಣಾ ಕಛೇರಿಗಳಾಗಿ, ಸಂವಿಧಾನದ ರಕ್ಷಣೆ ಅಸಂಭವವಾಗಬಹುದು.

ಮುಂದೇನು? ಇಷ್ಟರಲ್ಲೇ ತಿಳಿಯುತ್ತದೆ. ವಿರೋಧಿ ಪಕ್ಷಗಳ ಒಮ್ಮತಾಭಿಪ್ರಾಯ ಮತ್ತು ಕಾಂಗ್ರೆಸ್ ಪಕ್ಷದ, ಸಂಯುಕ್ತ ಪ್ರಯತ್ನಗಳೇ ಮುಂದಿನ ರಾಷ್ಟ್ರಪತಿ ಯೊರೆಂದು ಗೊತ್ತು ಮಾಡಬಲ್ಲವು. ಶ್ರೀ ಗಿರಿಯವರು ತಪ್ಪಿಗೆ ದೊರೆತ ಸ್ಥಾನದಲ್ಲೇ ತೃಪ್ತಿಪಡುವವರೆಂದು ಯಾರಾದರೂ ನಂಬಿದ್ದಾರೆ, ಅದೀಗ ಸ್ಪಷ್ಟವಾಯಿತು.

ಂ ಂ ಂ

ಕೇರಳದ ಮುಖ್ಯಮಂತ್ರಿ ಇ. ಎಂ. ಎಸ್. ನಂಬೂದಿರಿ ಪಾದ ಮತ್ತು ಕಮ್ಯುನಿಸ್ಟ್ ನಾಯಕ ಎ. ಕೆ. ಗೋಪಾಲನ್ ಇತ್ತೀಚೆಗೆ ನಾಲಿಗೆಯನ್ನು ಸಲೀಲವಾಗಿ ಹರಿಯಬಿಟ್ಟಿದ್ದಾರೆ. ರಾಜ್ಯಕೇಯ ವಿರಲಿ, ಕಾರ್ಮಿಕ ಅಥವಾ ಇನ್ನಾವುದೇ ಚಳುವಳಿಯಿರಲಿ, ಅವರ ಮುಖ್ಯ ಉದ್ದೇಶ ಸಂವಿಧಾನವನ್ನು ಮುರಿಯುವುದು. ಅಶಾಂತಿಯನ್ನು ಹರಡುವುದು, ಕ್ರಾಂತಿಯನ್ನು ಎಬ್ಬಿಸಿ ಸರ್ವನಾಶಕ್ಕೆ ನಾಂದಿ ಹಾಕುವುದು— ಇದಕ್ಕಾಗಿಯೇ ಅವರಿಗೆ ಅಧಿಕಾರ ಬೇಕು; ಅಧಿಕಾರ ಪ್ರಾಪ್ತಿಗಾಗಿ ಸಂವಿಧಾನವನ್ನು ಮನ್ನಿಸುವುದಾಗಿ ಪ್ರತಿಜ್ಞೆ ಮಾಡಬೇಕು.

ಪಶ್ಚಿಮ ಬಂಗಾಳದ ಜ್ಯೋತಿ ಬಸು ಅವರೂ ಈ ಪ್ರಾಯೋಗಿಕರಿಗೆ ಒತ್ತಾಸೆ ನೀಡುತ್ತಾರೆ. ರಾಜ್ಯ-ಕೇಂದ್ರಗಳ ನಡುವೆ ಉಗ್ರ ಹೋರಾಟನಡೆಸಲು ಅವರು ನಿರ್ಧರಿಸಿದ್ದಾರೆ. ಅಂದರೆ, ಸಂವಿಧಾನವನ್ನು ಮನ್ನಿಸುವ ಇರಾದೆ ಈ ಪ್ರಾಯೋಗಿಕರಿಗೂ ಇಲ್ಲ. ಅಧಿಕಾರ ಲಾಭಕ್ಕಾಗಿ ಸಂವಿಧಾನವನ್ನು ಧಿಂಕ್ಕಾರ ಲಾಭವಾದ ಬಳಿಕ ಅದನ್ನೇ ತಿರಿಯಲು ಹಾಕುವುದಾಗಿ ಬಹಿರಂಗ ಘೋಷಣೆ ಕೂಡುವುದಕ್ಕೂ ಹಿಂಜರಿಯದ ಈ ವೇಷಧಾರಿಗಳನ್ನು ನಂಬಿಸಬೇಕು? ಮುಂಬಾಜೀಧಾಯಿಯವರು ಕೇಂದ್ರ ಕಚೇರಿಯನ್ನು ನೋಡುತ್ತಿದೆ ಎಂಬುದರ ಅರ್ಥವೇನು?

ಂ ಂ ಂ

ವರಣಮಾಲೆ ಹೂರಿಗೆ? ಯಾರ್ಯಾರ ಕೊರಳಿಗೆ ಮುಂದೆ ಬಂತು. ಜಗಜ್ಜೀವನ ರಾಂ, ವಿ. ವಿ. ಗಿರಿ, ಸ್ವರ್ಣಸಿಂಗ್, ವೈ. ಎಸ್. ಪಾಟೀಲ, ಜಯಪ್ರಕಾಶ ನಾರಾಯಣ, ಗಜೇಂದ್ರ ಗಡಕರ್, ಕೊನೆಪಕ್ಷ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ ಬಹುಮತದಿಂದ ನೀಲಂ ಸಂಜೀವ ರೆಡ್ಡಿಯವರು ಕೊರಳೊಡ್ಡಬೇಕೆಂದು ನಿರ್ಧರಿಸಿತು. ಸದ್ಯ ಲೋಕಸಭಾಪತಿಯೊಬ್ಬರು ಸರಕಾರಿ ಹಾಗೂ ಪಕ್ಷೇತರ ಮೆಚ್ಚುಗೆಯನ್ನು ಪಡೆದ ನೀಲಂರವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದವರು. ಸ್ಪೀಕರ್ ಆದ ಮೇಲೆಯೇ ಅವರು ಪಕ್ಷಾತೀತರಾದವರು. ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲ ಚಳುವಳಿಯಲ್ಲಿ ಮಂಕಳ್ವದ ಪಾತ್ರ ವಹಿಸಿದ್ದ ನೀಲಂ ಸ್ವಾತಂತ್ರ್ಯಗಳಿಸಿದ ಬಳಿಕ ಹಲವಾರು ರಾಜ್ಯ ಕೇಯ ಪದವಿಗಳನ್ನೂ ಅಲಂಕರಿಸಿದರು. ಎರಡು ವರ್ಷಗಳ ಹಿಂದೆ ಈಗಿನ ಉಚ್ಚ ಪದವಿಗೆ ದೊರೆಯಿತು.

ನೀಲಂ ದಕ್ಷಿಣದ ಆಂಧ್ರ ಪ್ರದೇಶಕ್ಕೆ ಸೇರಿದವರು. ಇದೀಗ ಅವರಿಗಿರುವ ಒಂದು ಯೋಗ್ಯತೆ ತೆಲಂಗಾಣ ಚಳುವಳಿಯು ಅವರ ಈ ಯೋಗ್ಯತೆಗೊಂದು ಬೆಲೆ ತಂದಿದೆಯೆನ್ನಬೇಕು. ಪಾರ್ಲಿಮೆಂಟರಿ ಬೋರ್ಡಿನ ನಿರ್ಣಯದಿಂದ ಪ್ರಧಾನಿ ಬಿನ್ನರಾಗಿದ್ದರೆಂದು ಸುದ್ದಿ ಆದರೆ ಪಕ್ಷದ ನಿರ್ಣಯವನ್ನು ಅವರು ವಿರುದ್ಧವಾದು ಸಾಧ್ಯವಿಲ್ಲ. ಫೀಲ್ಡರ ಪರವಾಗಿ ಮತದಲಿಸಲು ಪ್ರಧಾನಿಯವರು ಜಾಕೀರ್ ಹುಸೇನರನ್ನು ಆಯ್ಕೆಯ ಕಾಲದಲ್ಲಿ ಪ್ರಸ್ತುತಿಸಿದಂತೆ ಈಗಲೂ ಪ್ರಯತ್ನಿಸಿದೆ ಹೋದರೆ, ಪಕ್ಷದ್ರೋಹವಾಗುತ್ತದೆ. ಬಹುಮತವಿರುವ ಕಾಂಗ್ರೆಸಿನ ಮಂಗವನ್ನು ಯಲ್ಲೇ ಉಳಿದಿರುವುದರಿಂದ ಪಕ್ಷದ ಸಬಲ ಸಂಘಟನೆಯು ಬಲವಾದ ನೀಲಂ ಗೆಲ್ಲುವುದು ಕಂಡಿತ.

ಂ ಂ ಂ ಂ

ಶ್ರೀಮತಿ ವಾಯಲೆಟ್ ಆಳ್ವ ಈಗ ರಾಜ್ಯ ಸಭೆಯ ಉಪ ಸಭಾಪತಿ. ಕಳೆದ ಇಪ್ಪತ್ತು ವರ್ಷಗಳಿಂದಲೂ ಅವರ ರಾಜ್ಯಕೇಯ ಬದ್ಧಲ್ಲಿ ಸಕ್ರಿಯವಾಗಿಯೇ ಪಾಲ್ಗೊಂಡಿದ್ದಾರೆ. ಅವರೂ ಅವರ ಪತಿ ಶ್ರೀ ಜೋಕಿಂ ಆಳ್ವರೂ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಅಕ್ರಿಯರಾಗಿದ್ದರು. ಈ ದಂಪತಿ ಜೋಡಿ ಒಂದಾಗಿ ಇಂದು ದೇಶ ಸೇವೆಗೆ ದುಡಿಯುತ್ತಿದೆ. ರಾಜ್ಯ ಸಭೆಯಲ್ಲಿ ಶ್ರೀಮತಿ ಆಳ್ವಾ ಸದಸ್ಯರ ಸಭಾಪತಿಯೆಂಬ ಹೆಸರು ಗಳಿಸಿದ್ದಾರೆ.

ಶ್ರೀಮತಿಯವರು ಭಾರತೀಯ ಸಂಸ್ಕೃತಿಯನ್ನು ವೈಜ್ಞಾನಿಸುತ್ತಾರೆ. ಆದರಂತೆ ನಡೆಯುವ ಅವರು ಭಾರತೀಯ ಮಹಿಳೆಯರಿಗೆ ಅನುಕರಣೀಯ ಸಲಹೆ ನೀಡುತ್ತಾರೆ. ನೀವು ಭಾರತೀಯ ಮಹಿಳೆಯರೆಂಬುದನ್ನು ಮರೆಯದಿರಿ. ಅಜ್ಞಾನ ಬಡತನಗಳಿಂದ ನರಳುತ್ತಿರುವ ತಮ್ಮ ಸೋದರ ಯರ ಬಗ್ಗೆ ಏನಾದರೂ ಮಾಡಿ ನಿಮ್ಮಲ್ಲಿ ಮಾನಸಿಕ ಬದಲಾವಣೆ ನಡೆಯುವಂತೆ ಸರ್ವ ಜನ ಸೇವೆ ನಡೆಯಬೇಕು. ಭವ್ಯ ರಾಷ್ಟ್ರಕ್ಕೆ ಭವ್ಯ ಪರಂಪರೆ, ಸಂಸ್ಕೃತಿ, ಇತಿಹಾಸಗಳಿವೆ ಅವನ್ನೆಲ್ಲ ಮರೆತು ಪಾಶ್ಚಾತ್ಯರ ಕುರುಡು ಅನುಕರಣೆಗಳಿಗೆ ಬಲಿಬೀಳಬೇಡಿ. ಹೀಗೆ ಜಾರಿಬಿದ್ದರೆ, ಅಕ್ಷಮ್ಯ ಪಾಪಕ್ಕೆ ಕಾರಣವಾಗುತ್ತದೆ.

ವಿಶಾಲಾನುಭವವಿರುವ ಶ್ರೀಮತಿ ಆಳ್ವರ ಈ ಎಚ್ಚರಿಕೆ ಮಹಿಳಾಮಣಿಗಳಿಗೊಂದು ಅಮೂಲ್ಯ ಅನುಭವದ ಮೂಸೆಯಿಂದ ಹೊರಬಂದ ಉಪಯುಕ್ತ ಸಲಹೆ.

ಸಂಗ್ರಾಮ ಮುಗಿದೀತು..... ಆದರೆ ಜೀವನ ಸಂಗ್ರಾಮ?

ಸಾಗುತ್ತಲೇ ಇರುತ್ತದೆ.

ಅಂತಹ ನವೀನ "ಜೀವನ ಸಂಗ್ರಾಮ" ಚಿತ್ರವೊಂದನ್ನು ಚಿತ್ರಿಸಿದ ನವೀನ ಸಾಮಾಜಿಕ ನಾಟಕವೇ—

ಜೀವನ ಸಂಗ್ರಾಮ

ಲೇಖಕರು : ಶ್ರೀ ಪಿ. ಶೀನ ರೆಟ್ಟಿ.

ಅಭಿಲಯಿಸಲಿಕ್ಕೂ, ಓದಲಿಕ್ಕೂ ತಕ್ಕ ದಾದ ಜೊಳ್ಳ ಪುಸ್ತಕ.

ಬೆಲೆ : ೧—೫೦ (ಟಿ. ಖರ್ಚ ಬೇರೆ)

ವಿಕ್ರಯಾಧಿಕಾರಿಗಳು:—

(1) ಕರಿಯರ ಪ್ರಸಂಚ, ಉಡುಪಿ.

(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಶಂಸೆ, ಪ್ರಚಾರ, ಪ್ರಭಾವ

ಬರೆದವರು: ಶ್ರೀ ಎಂ. ರಂಗರಾವ್

ಪವಂಗೆ ನಿಮಗೆ ಅವರಿಗೆ ಇವರಿಂಗೆ ಸಣ್ಣ ಮಕ್ಕಳಿಗೆ, ಕೊನೆಗೆ ನಾಯಿ, ಬೆಕ್ಕು, ದನ ಮುಂತಾದ ಪ್ರಾಣಿಗಳಿಗೆ ಕೂಡಾ ತುಂಬ ಇಷ್ಟವಾದುದೊಂದಿದೆ. ಅದಕ್ಕೆ ಆಕಾರವೇನಿಲ್ಲ. ಅಂತೆಯೇ ಸೌಂದರ್ಯ, ರುಚಿ, ಬಣ್ಣ, ವಾಸನೆಗಳೂ ಇಲ್ಲ. ಆದರೂ ಅದು ಎಲ್ಲರಿಗೂ ತುಂಬ ಇಷ್ಟ.

ಆದ ತನಗೆ ತುಂಬ ಇಷ್ಟವೆಂಬುದನ್ನ ಬಾಯಿ ಬಿಟ್ಟು ಯಾರೂ ಕೇಳಲಾರರು. ಹಾಗೆ ಹೇಳುವುದು ಅಗೌರವ, ನಾಚಿಕೆ. ಹೇಳಿ ಆದನ್ನು ಎಳೆದುಕೊಳ್ಳುವವನು ನಾಯಿಗಿಂತಲೂ ಹೀನನೆನಿಸಿಯಾನು.

ಅಂತಲೇ ಅದನ್ನು ಪಡೆಯಲು ಎಷ್ಟೆಷ್ಟೋ ಬಳಸು ದಾರಿಗಳನ್ನು ಹಿಡಿಯುವವರಿದ್ದಾರೆ.

ದೇವರು ಕೂಡ ಬೇರೆನೇ ಒಲಿದು ಬರುವ ವಸ್ತುವದು. ದೇವರನ್ನು ಕರೆಯಲು ಅದಕ್ಕೆಂತ ಹತ್ತಿರದ ಹಾದಿಯೂ ಇಲ್ಲವೆನ್ನುತ್ತಾರೆ.

ದೇವರೇ ಹಾಗೆ ಹೇಳಿದ್ದಾನೆ. ಡಾಣಾಡಂಡರವಾಗಿ ಹೇಳಿಕೊಂಡು, ಆಗೌರವ ಕ್ಕೀಡಾಗದೆ ಅದನ್ನ ಪಡೆದ ಕೊಳ್ಳುತ್ತಾ ಇರುವವನು ಅವನೇ ಸರಿ. ಎಷ್ಟಾದರೂ ಅವನು ದೇವರು. ಅವನಿಗಿಂತ ಮೇಲೆ ಳೇಳುವವರೂ ಇಲ್ಲ. ಹಾಗೆ ಅವನಿಗೆ ಪ್ರಿಯವಾದ ಆ ವಸ್ತುವನ್ನ ಪಡೆಯಲು ನವ್ಮಂಥವರು ಅಡ್ಡಹಿಡ್ಡ ದಾರಿಗಳಿಂದ ಪಾದಾ ಪೀಠಯಲ್ಲಿ ಹೆಣಗಾಡುವುದು.

ಈಗಾದರೂ ತಿಳಿಯಿತೇ ಅದು ಏನು ಅಂತ?

ಹೌದು, ಪ್ರಶಂಸೆ. ಸ್ತುತಿ, ಹೊಗಳಿಕೆ. ದೇವರು ಪ್ರಶಂಸಾಪ್ರಿಯ!" ಎಲ್ಲಾ ವಿಧದ ಹೆಚ್ಚಳಿಕೆಯಲ್ಲಿಯೂ ವನಗಿಂತ ಹೆಚ್ಚನದು ಬೇರಿಲ್ಲ. ದುಷ್ಪತ್ತಿದಲ್ಲಿ ಹೆಚ್ಚಿನ ದುಷ್ಪತೆಯೂ ಸತ್ಪತೆಯಲ್ಲಿ ಹೆಚ್ಚಿನ ಸತ್ಪತೆಯೂ ನಾನೇ!-ಅಂತ ಗೀತೆಯ ಮಾ ಖಾಂತರ ಹೇಳಿದ್ದಾನೆ. ಆದುದರಿಂದ ಆ ವನಿಗಿಂತ ಹೆಚ್ಚಿನ ಪ್ರಶಂಸಾಪಾತ್ರರು ಯಾರೂ ಇಲ್ಲವೆಂಬುದನ್ನು ಎಲ್ಲರೂ ಒಪ್ಪುವರು. ಆವನ ಒಲವನ್ನು ಪಡೆಯಲು ಆವನನ್ನು ಹೊಗಳುವುದು ಹೊರತು ಬೇರೆ ದಾರಿಯೂ ಇಲ್ಲ.

ಅದು ಹಾಗಿರಲಿ, ದೇವರ ಸಂಪತ್ತಿ ಆ ಪ್ಟೀಲ್ಲಿದ್ದ ವಿಷಯ.

ನವ್ಮ ಈ ಮನುಷ್ಯರಲ್ಲಿ ಯೋಗ್ಯತೆ ಇದ್ದವರು ಪ್ರಶಂಸೆಗಲ್ಪಡುವುದು ಸರಿಯೇ. ಅಂತಹ ನಿಜವಾದ ಯೋಗ್ಯತೆ ಎಷ್ಟಿಕರೂ ಇರಲಾರದು, ಇರಲು ಸಾಧ್ಯವೂ ಇಲ್ಲ. ಆದರೂ ಎಲ್ಲರೂ ಆದಕ್ಕಾಗಿಯೇ ಪೈಣಾಡಿಕೊಂಡಿರುವುದನ್ನು ಕೋಡವಾಗ ಪ್ರಶಂಸಾವಾಂಛೆ ಮಾನವನ ಸ್ವಾಭಾವಿಕ ಗುಣವೋ ಅನಿಸುತ್ತದೆ.

ಇಲ್ಲದಿದ್ದರೆ ಅಂತಹ ಶ್ರಮವೇಕೆ? ಪ್ರಶಂಸೆ ಬಾರದಿದ್ದರೆ ಏಏಾಗುತ್ತದೆ?

ಇದು ಮಂಕು ಪ್ರಶ್ನೆಯೇ ಸರಿ. ಪ್ರಶಂಸೆಯಿಂದಾಗುವ ಲಾಭವು ಸಾಮಾನ್ಯವೇನಲ್ಲ. ಪ್ರಪಂಚ ನಡೆಯುವುದೇ ಪ್ರಶಂಶಾವಾಂಛೆಯುಳ್ಳಿ. ಪ್ರಶಂಸೆಯ ಆಕಾಂಕ್ಷೆ ಇಲ್ಲದಿದ್ದವನು ಶುಷ್ಕ ಸೋದೂರಿ; ಗುಡ್ಡಿಟ್ಟ ಹುಣಿಸೇ ಮುದ್ದೆ; ಮೂಲೆಯಲ್ಲೇ ಬಿದ್ದಿರಬೇಕು.

ಹಾಗಿರಲು ಊರ ತಾನೇ ಬಯಸಿ ಯಾರು? ತನ್ನನ್ನು ನಾಲ್ಕು ಜನರು ಮೆಚ್ಚಬೇಕು, ಹೊಗಳಬೇಕು, ತನ್ನ ಮುಖ ನೋಡಬೇಕು, ತನ್ನ ವಿಚಾರ ಕೇಳಬೇಕು, ತನ್ನ ಪ್ರಭಾವ ಬೀಳಬೇಕು, ಅದು ವೇ ಜನ್ಮ ಸಾರ್ಥಕ್ಯ. ಇದುವೇ ಎಲ್ಲರ ಸುಪ್ತಾಭಿಲಾಷೆಯೂ.

ಬೆಕಾದರೆ ಹೆಂಗಸರನ್ನು ನೋಡಿ. ಆ ವರು ಶೃಂಗಾರ ಮಾಡಿ ಕೊಳ್ಳುವುದೆಲ್ಲಾ, ತನ್ನ ಮನೆಯವರಲ್ಲದವರು ತನ್ನನ್ನು ನೋಡಲಿ ಎಂತಲಾನೆ? ಅದರಲ್ಲೇ ಅವರ ಪ್ಪಳೆ, ಪೈಜೋಟು, ಮೇಲಾಟಗಳು. ಅದರಿಂದಲೇ ಯಜಮಾನಿಕೆ ಹಣಕ್ಕೂ ದುಬಾರಿ ಖರ್ಚು.

ಅದೇ ಭಾವವಿರುವ ಹುಡುಗಾಟನ ಸ್ವಂಶದ್ದೂ ಇನ್ನೊಂದು ಬಗೆ.

ಚಿಕ್ಕ ಮಕ್ಕಳು ಕೂಡಾ ಪ್ರಶಂಸಾ ಪ್ರಿಯರೇ. ತನ್ನ ಹೆಸರು ಅಚ್ಚಿನಲ್ಲಿ ಬೇಕಲು ನಕಲು ಬರೆಯುವವರು ಎಷ್ಟ ಮಂದಿ ಇಲ್ಲ?

ಬಾಯಿಬಾರದ ಮೂಕ ಪ್ರಾಣಿಗಳು ಕೂಡಾ ಬೆನ್ನು ತಟ್ಟಿದರೆ ಸಂತೋಷಪಡುತ್ತವೆಂದು—ನಿಜವೋ ಸುಳ್ಳೋ—ಆ ಗುಣವಿರುವವರಂತೂ ಖಾವು ಖಾವಿಯುತ್ತೇವೆ.

ದೇಶವೇ ಕೊಂಡಾಡುವವನು ತಾನಾ ಗಬೇಕು. ಆದಾದಿದ್ದರೆ ಊರೊಳಗಾದರೂ, ಅದೂ ಸಾಧ್ಯವಿಲ್ಲದಿದ್ದರೆ ತನ್ನ ಮನೆಯೊಳಗಾದರೂ ತಾನು ಹೊಗಳಲ್ಪಡಬೇಕು, ಪ್ರಭಾವ ಬೀರಬೇಕು ಎಂಬುದು ಪ್ರತಿಯೊಬ್ಬನಿಗೂ ಇರುವ ಇಚ್ಛೆ. ಆದಕ್ಕಾಗಿಯೇ ತಾಪು ಮಾಡಿದ ಕೆಲಸಗಳನ್ನ ಎರಡಷ್ಟಿಯವನೊಂದಿಗೆ ಹೇಳುತ್ತ, ಸೈ— ಎಂಬ ಮುದ್ರೆ ಬೀಳಲಿಕ್ಕಾಗಿ ಮೂರನೆಯವನ ಮುಖವನ್ನೂ ಅಡಿಗಡಿಗೆ ನೋಡುವುದು.

ತನ್ನ ಕೆಲಸದಿಂದ ಕಷ್ಟನಷ್ಟಗಳೇ ಪ್ರಾಪ್ತವಾದರೂ ಹೇಳಿಕೊಳ್ಳುವ ರೀತಿಯಲ್ಲಿ ತನ್ನರ್ಥಾ ಒಳ್ಳೆಯವನಿಗೆ ಹೀಗಾಯಿತು ಎಂಬ ಸಹಾನುಭೂತಿ ರೂಪದ ಹೊಚ್ಚಿಗೆ ಗಳಿಸಿ, ಆ ರೀತಿಯಲ್ಲಾದರೂ ತಾನು ನಾಲ್ಕು ಮಂದಿಯ ಕಣ್ಣಿಗೆ ಬೀಳುವಂತಾಗಲೆಂದೇ ಹಂಬಲಿಸುತ್ತಾನೆ. ಅದಕ್ಕೂ ಸಾಧ್ಯವಿಲ್ಲದವನು ಆತ್ಮಹತ್ಯವನ್ನಾದರೂ ಮಾಡಿಕೊಂಡು ತನ್ನ ಕಡೆಯವರ ಬಾಯಿಂದ ಸಹಾನುಭೂತಿ ರೂಪದ ಹೊಗಳಿಕೆಯನ್ನು ಗಳಿಸಿಕೊಳ್ಳುತ್ತಾನೆ. ಒಟ್ಟನು ಬದುಕಿರುವಾಗಿನದಕ್ಕಿಂತಲೂ ಸತ್ತೇ ಅವನಲ್ಲಿಯು ಸದ್ಗುಣಗಳು ಜಳಪಿಗೆ ಕಾಣುವುದ; ಅಥವಾ ಅವನ ದುರ್ಗುಣಗಳು ಕೂಡಾ ಸದ್ಗುಣಗಳಾಗಿ ಬದಲಾಯಿಸುವುದು.

ಇಂತಿರವ ಪ್ರಶಂಸೆಯೊಂದಿಗೆ ಅಂಟಿಕೊಂಡೇ ಪ್ರಚಾರವೂ ಇರುತ್ತೆ. ಮನುಷ್ಯನ ಮಹತ್ವ ಮೇಲೆ ಮೇಲೆ ಏರಬೇಕಾದರೆ ಪ್ರಚಾರದ ಮೆಟ್ಟಲು ಆತ್ಯವಶ್ಯ. ಮೆಲೆ ಮೇಲೆ ಹೋದಂತೆ ಲಾಭಗಳೂ ಕೈಗೂಡುತ್ತವೆ. ಅದಕ್ಕೇ ದೊಡ್ಡವರ ಸುತ್ತಮುತ್ತೂ ಹೊಗಳುಭಟ್ಟ ಪ್ರಜಾಕರರಿರುತ್ತಾರೆ. ಹಿಂದಿನ ರಾಜ ಮಹಾರಾಜರ ಆಸ್ಥಾನದಲ್ಲಿಯೂ ಹೊಗಳು ಭಟ್ಟತೆಯು ಪದವಿಗಳೇ ಇದ್ದುವು. "ರಾಜಾಧಿರಾಜ ಆರಿರಾಜ ವಿಭಾಂಡ, ಗಂಡರ ಗಂಡ...." ಇತ್ಯಾದಿ ಹೊಗಳುವಾಗ, ಅದನ್ನು ಕೇಳುವ ಶಸ್ತ್ರ ಗೂಢಾಚಾರರು ಹೆದರಲಿ, ನಡುಗಲಿ, ತನ್ನ ಪ್ರಭಾವ ಆವರ ದೇಶದಲ್ಲಿ ಹರಡಲಿ— ಎಂಬ ಬಯಕೆ ಹುದುಗಿರುತ್ತದೆನ್ನಬಹುದು.

ಕೆಲವೊಮ್ಮು ನಿರ್ದಿಷ್ಟ ವಿಷಯಗಳನ್ನು ಕುರಿತು ಪ್ರಶಂಸಿಲಿಕ್ಕೂ, ಪ್ರಚಾರಿಸಲಿಕ್ಕೂ ಎಲ್ಲರಿಗೂ ಯೋಗ್ಯತೆ ಇಲ್ಲದ ಪರಿಸ್ಥಿತಿಯೂ ಪ್ರಚಲಿತದಲ್ಲಿದೆ. ಆದರ ಬಗ್ಗೆ ಆಪಾರ ಅನುಭವವಿದ್ದವರೆ ಪೂರ್ತ ಸಾಲದು, ಯೋಗ್ಯತೆಯೂ ಬೇಕಾಗುತ್ತೆ. "ಶಂಖದಿಂದ ಬಂದರೇನೇ ತೀರ್ಥ" ಎಂಬ ಹಾಗೆ. ಯಾವುದಾದರೂ ಗಹನ ಗಂಭೀರ ವಿಚಾರವಿರಲಿ, ಅದಕ್ಕೆ ತಕ್ಕ ಪೀಠದ ವರೆಗೆ ಏಏಲು ಸಾಧ್ಯವಾದವರು ಹೇಳಿದರೆ ಬರೆದರೆ, ಟೀಕಿಸಿದರೆ, ವಿಮರ್ಶಿಸಿದರೆ ಅದಕ್ಕೆ ಬೆಲೆ ಬರುವುದಿಲ್ಲ. ಅದಕ್ಕೆ ತಕ್ಕ ಸ್ಥಾನಬಲದ ಅರ್ಹತೆ ಪಡೆಯದವರು, ಗಹನ ಗಂಭೀರ ವಿಷಯಗಳ ಅನುಭವ ಪಡೆದರೂ ಅವರು ಪ್ರಭಾವಶಾಲಿಗಳಾಗಲಾರರು. ಹಾಗೆ ಮಂದುಡಿರುವ ಪ್ರತಿಭಾಶಾಲಿಗಳು ಪ್ರತಿ ಕಂಗದಲ್ಲಿಯೂ ಇದ್ದಾರೆ, "ಯಃ ಕ್ರಿಯಾವಾನ್ ಪುರುಷಃ ಸ ವಿದ್ವಾನ್" ಎಂಬ ನ್ಯಾಯಕ್ಕೆ ಈಗ ತುಳ್ಳಿ ಹಿಡಿದು ಹೋಗಿದೆ. ಗಾಂಧಿಯಂತಹ ಮಹಾತ್ಮರನ್ನೂ ದೇಶಭಕ್ತರನ್ನೂ ಕುರಿತು ಏನಾದರೂ ಹೇಳಬೇಕಾದರೂ, ಬರೆಯಬೇಕಾದರೂ ಅದಕ್ಕೆ ಸಂಬಂಧಿಸಿದ ಯೋಗ್ಯತೆಯುಳ್ಳವರೇ ಹೇಳಬೇಕು ಬರೆಯಬೇಕು. ಉಳಿದವರು ಅಹರ್ನಲ್ಲವೆಂಬುದೊಂದು ಸಾಂತ್ವ ಭಾವನೆಯುಂಟು.

ಗಾಂಧಿ ಆಸ್ಮವಾಗ ನೆನಪಾಗುತ್ತದೆ. ಇದೀಗ ಗಾಂಧೀ ಶತಮಾನೋತ್ಸವದ ವರ್ಷ. ಗಾಂಧೀ ತತ್ವಗಳಿಗೆ ಪ್ರಚಾರ ಕೊಡಬೇಕಾದುದು ಅತ್ಯಗತ್ಯವೇ ಸರಿ. ವ್ಯವಹಾರಕ್ಕೆ ಅವಶ್ಯವಾಗಿದ್ದು, ಅನ್ಯಾಯಕ್ಕೂ ಅಭೀತಿಗೂ ಮೂಲವೂ ಆದ ರೂಪಾಯಿ ನೋಟಿನ ಮೇಲೆ ಗಾಂಧೀ ಚಿತ್ರವನ್ನು ಹಾಕುತ್ತಾರಂತೆ. ಅದರಿಂದ ಅನೀತಿ-ಅನ್ಯಾಯಗಳು ಧನಲೋಕದಲ್ಲಿ ತಗ್ಗಿ ನ್ಯಾಯವು ನೆಲೆ ಫಿಲ್ಲುವಂತಾಗುವುದೆಂದು ನಂಬಿಯೇ ಹೀಗೆ ಮಾಡುವರೆಂದು ನಾವೂ ನುಡಿಯೋಣ. ಆದಷ್ಟೇ ಹಾರೈಸೋಣ.

ಹೀಗೆ ಪ್ರಶಂಸೆಯಮ್ಮಹೊಂದಿ ಪ್ರಚಾರವಿದೆ. ಪ್ರಚಾರದಿಂದ ಲಾಭ ಬರುತ್ತೆ. ಲಾಭವೇ ಪ್ರಯೋಜನ. ಲಾಭದ ಸ್ವಾರ್ಥವಿಲ್ಲದೆ ಯಾರೂ ಏನೂ ಮಾಡಲಾರರು. ತ್ಯಾಗ ಮಾಡುವವನಂತೆ ತೋರಿದರೂ ಅದರಿಂದ ಬರುವ ದೊಡ್ಡ ಲಾಭದಲ್ಲಿ ಅವನ ಗುರಿ ಇದ್ದೇ ಇರುತ್ತೆ. ಆದನ್ನೆಲ್ಲ ಪೂರಿಫಿಂತ ಸಾವಿರಕ್ಕೊಬ್ಬ ಲಕ್ಷಕ್ಕೊಬ್ಬರ ಮಾತು ಬೇರೆ.

ಸ್ತುತಿ ಪ್ರಶಂಸೆಗಳಿಂದ ತುಂಬಿದ ಪುರಾಣಗಳ ಪ್ರಚಾರದಿಂದ ದೇವರ ಅಸ್ತಿತ್ವ ನಿಂತಿರುವ ಹಾಗೆ ರಾಜ್ಯದಳ ಮಹತೋಧಾರಗಳಿಂದ್ಯಾವಾರ ವ್ಯವಹಾರಗಳೂ, ಸಾಹಿತ್ಯ ಸಂಸ್ಥೆಗಳೂ ಪ್ರಶಂಸೆ ಪ್ರಚಾರಗಳ ತಳಹದಿಯಲ್ಲೇ ಸಾಗುತ್ತಾ ಇರುವುದನ್ನು ಕಾಣಬಹುದು. "ಅವರು ಅಂಥವರು, ಹಾಗೆ ಮಾಡಿದರು; ನಾನು ಅಂಥವನಲ್ಲ ಇಂತಿಂಥವನು. ಹೀಗೆ ಹೀಗೆ ಮಾಡುತ್ತೇನೆ, ಕಷ್ಟನ್ನೇ ಅರಿಸಿ ಕಿ ಎಂದು ಸ್ವತಂತ್ರವಾಗಿಯೋ, ತನ್ನವರ ಮೂಲಕವಾಗಿಯೋ, ಮರೆಸುಜಿಕೆಯಲ್ಲಿ ಪತ್ರಿಕೆಗಳ ಮೂಲಕವೋ ಭಾರೀ ಭಾರೀ ಜೇಬಿಸಿ, ಹೊಗಳಿಸಿ ಪ್ರಚಾರಪಡಿಸಿ ಅಧಿಕಾರಕ್ಕೆ ಬರುವವರಿಂದಲೇ ರಾಜ್ಯ ಭಾರವೆ ಸಾಗುವುದನ್ನು ನೋಡುತ್ತೇವೆ.

ಸಾಹಿತ್ಯದಲ್ಲಿಯೂ ಆಷ್ಟೇನೇ. ಪ್ರಶಂಸೆ ಪ್ರಚಾರಗಳಲ್ಲದಿದ್ದರೆ ಎಷ್ಟೋ ಒಳ್ಳೆಯ ಪುಸ್ತಕವಾದರೂ ಬಿಡಿಸಿ ನೋಡುವವರಿರಲಾರರು. ಆದಕ್ಕೂ ಹೊಗಳು

ಉಳಿದುದು

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
96 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.
ಕೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—೫.
Phone— 5711, 5712, 5713 } 3 Lines.

ಭುಟ್ಟರು ಬೇಕು. ಅದರಲ್ಲಿಯೂ ಕೀಳ್ಮಟ್ಟದ ಇಂದ್ರಿಯ ಚಾಪಲ್ಯವನ್ನು ಕೆರಳಿಸುವಂತಹ ಕೃತಿಗಳನ್ನು ಬರೆದ, ಜನತೆ ತೃರ್ಜನೆ ಭರ್ಜರಿ ಖಂಡಪೆ ವಂಡನೆಗಳಾದರೆ ಅಂತಹ ಕೃತಿಗಳಿಗೂ ಅದರ ಕರ್ತೃಗಳಿಗೂ ಪ್ರಚಾರ ಇನ್ನೂ ಜಾಸ್ತಿಯಾಗಿ, ಲಾಭವೂ ಕೈಗೂಡುತ್ತೆ. ಈ ರೀತಿಯಾಗಿ ರುಚಿ ಕೆಡಿಸುವರೆಂದಾದ ಮೇಲೆ, ಜನರ ಲಕ್ಷ್ಯವನ್ನಾ ಸೆಳೆಯುಲ್ಪಟ್ಟ ನೋಲೆ, ಉತ್ತಮ ಕೃತಿಗಾಗಿ ಉತ್ತಮ ಸಾಹಿತ್ಯವನ್ನೂ ರಚಿಸುವುದು ಬಹುಕಲು ತಿಳಿದವರಿದೊಂದು ಪದ್ಧತಿ. ಇದೇ ಪದ್ಧತಿ ರುಷ್ಟ ರಾಜಕೀಯದಲ್ಲಿ ಆಕ್ತಮನ ಗಳಲ್ಲಿಗುವವರೂ ಅನುಸರಿಸಿ, ಯಾವುದೋ ಖಂಡನೆ ಮಂಡನೆಗಳನ್ನಿಟ್ಟು ತಮ್ಮ ಪ್ರಚಾರವು ಕುಂದದಂತೆ ನೋಡಿಕೊಳ್ಳುತ್ತಾ ಇರುತ್ತಾರೆ.

ಪ್ರಚಾರದ ವೋಹವೂ, ಪ್ರಚಾರದ ಗುಣವೂ ಮಾನವರಲ್ಲಿ ಸ್ವಾಭಾವಿಕವೇ ಆದುದರಿಂದ, ಅಂತಹ ಪ್ರಚಾರ ಪ್ರಶಂಸೆಯ ಭೃಮೆಯನ್ನು ಬೇಗನೇ ಆವೇಶಕ್ಕೊಳಗಾಗುವ ವಿದ್ಯಾರ್ಥಿಗಳಲ್ಲಿಯೂ ಹುಟ್ಟಿಸಿ ಬಹಳ ಅಲ್ಲಕಲ್ಲೋಲವೆಬ್ಬಿಸುವ ಚಟವೀಗ ಸರ್ವೇಸಾಮಾನ್ಯವಾದ ಕಂಗತಿಯಾಗಿದೆ. ವಿದ್ಯಾರ್ಥಿಗಳೇ ತರದೇತಿ ಪಡೆಯದ ಸೈನಿಕರೋ ಎಂಬ ಹಾಗಾಗಿದ್ದಾರೆ.

ಇಷ್ಟೆಲ್ಲಾ ವನಸ್ಸಿಗೆ ಬಂದು ಇದನ್ನು ಬರೆಯಲು ಕಾರಣವೇನೆಂದರೆ, ಪ್ರಚಾರ ಪ್ರಶಂಸೆಯು ಖಾರ ನಮ್ಮ ಮನೆಯೇ ತಗಲಿಬಿಟ್ಟಿದೆ. ಇಷ್ಟು ದಿನ ಪ್ರಚಾರ ಪ್ರಶಂಸೆಗಳು ಪತ್ರಿಕೆಗಳಲ್ಲಷ್ಟೇ ಇದ್ದುವು. ನೋಡಿದವರು ನೋಡಿದರು, ಬಿಟ್ಟವರು ಬಿಟ್ಟರು. ಈಗ ರೇಡಿಯೋದಲ್ಲಿ ಪ್ರಚಾರ ವೃವಹಾರ ಶುರುವಾದ ಮೇಲೆ ಏನು ಹೇಳಲಿ? ಆ ಪ್ರಚಾರ ಧಾಟಿ,ವೈಖರಿ,ಸ್ವಾರಸ್ಯ, ಕವಿತೆಗಳನ್ನು! ಎಲ್ಲರಿಗೂ ಅದರ ಮೇಲೇ ಕಿವಿ.

"ಆ ಉಪ್ಪಿನಕಾಯಿ ತಕ್ಕೊಳ್ಳೀ ಬೇಕು"

"ಆಹಾ ! ಅಂಥಾ ಮಸಾಲೆ ಪದಾರ್ಥ..."

"ಓಹೋ ! ಇಂಥಾ ಬ್ರಾಂಡಾ?!"

ಪಾಡೆರೆ? ಸೋಪೆ? ಸೋಪಿಕ ಪುಡಿಯೇ? ಮನೆಯವರು ಒಕ್ಕಾಯ ಬಿದ್ದೂ ಬಿಟ್ಟು ಈ ವರೆಗೆ ಮನೆಯೊಳಗೆ ಬಾರದೆ ವಸ್ತುಗಳು ಈಗೀದ ಒಂದೊಂದೇ ಬರಲು ಶುರುವಾಗಿ ತಿಂಗಳ ಬಿರ್ಜು ಏರಿದೆ. ಏನು ಮಾಡಲಿ? ಪದೇ ಪದೇ ಎಲ್ಲರ ಕಿವಿಗೂ ಕೇಳಿವಾಗಿ? ಪ್ರಶಂಸೆ ಪ್ರಚಾರ ಗಳೆಂದರೆ ಏಕೋ ಬೈಯೆಲ್ಲಾ ಉರಿ ಶುರುವಾಗಿದೆ.

ಇದಕ್ಕಾಗಿ ಛಗಬೇಕೋ ಆಳಬೇಕೋ ಇನ್ನೂ ನಿರ್ಧರಿಸಿಲ್ಲ.

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4.17-4/65-66 dated 26--4--1966.

ಇಂತಾಳಿದರವರು.....

ಪ್ರಾಚೀನ ದಕ್ಷಿಣ ಭಾರತದಲ್ಲಿ ಜಾರಿಯಲ್ಲಿದ್ದ ಪ್ರಜಾರಾಜ್ಯ

ಲೇಖಕರು: ಡಾ। ಎಂ. ವಿ. ಕೃಷ್ಣರಾವ್, ಎಂ. ವಿ. ಡಿ. ಲಿಟ್.

ಪ್ರಾಚೀನ ದಕ್ಷಿಣ ಭಾರತದಲ್ಲಿದ್ದ ಸ್ವಪರಿಪಾಲನೆಗಳು ನಿರ್ಣಯ ಮತ್ತು ಕಾರ್ಯನಿರ್ವಹಣೆಯ ಎರಡೂ ಅಧಿಕಾರಗಳನ್ನು ಹೊಂದಿದ್ದವು. ಆಗ ಜಾರಿಯಲ್ಲಿದ್ದ ಸಂಘಗಳು, ವೌರಸಂಸ್ಥೆಗಳು ಮತ್ತಿತರ ಸಂಸ್ಥೆಗಳು ವ್ಯಕ್ತಿಗೆ ನ್ಯಾಯದ ಪ್ರಾಥಮಿಕ ಕಲ್ಪನೆಗಳನ್ನು ಸಮಾಜದ ಆದರ್ಶ ಮತ್ತು ಗುಣಗಳನ್ನು ತಿಳಿಸಿ, ವಂಶದಿನ ದಿನಗಳಲ್ಲಿ ವಿಸ್ತಾರವಾಗುವ ಸಮಾಜ ಸಂಬಂಧ ಮತ್ತು ಜವಾಬ್ದಾರಿಗಳ ನಿರ್ವಹಣೆಗಾಗಿ ಬಲವಾದ ಬುನಾದಿಯನ್ನು ಹಾಕುತ್ತಿದ್ದವು.

ಸ್ವಯಂಪೂರ್ಣಾಧಿಕಾರ ಪಡೆದಿದ್ದ ಈ ಸಂಸ್ಥೆಗಳು ಜನರಲ್ಲಿ ವ್ಯಕ್ತಿಗಳಿಗನ್ನ ಗುಣವಾಗಿ ವಿಭಾಗಿಸಲ್ಪಡುತ್ತಿದ್ದವು; ಈ ಪದ್ಧತಿಯು ಆರ್ಥ ನಾಗರಿಕತೆ ಜೀವಪದಲ್ಲಿ ಅವನ ವೃತ್ತಿಯೇ ಮುಖ್ಯ ಸಂಗತಿ ಎಂಬುದೇ ಅಗಿತ್ತು; ಅವನ ಮತ್ತು ಅವನ ಸಹಜೀವಿಗಳ ಸಂಬಂಧ ಇದರ ಆಧಾರದ ಮೇಲೆಯೇ ಸಾಮಾನ್ಯವಾಗಿ ನಿಶ್ಚಿತವಾಗುತ್ತಿತ್ತು. ಜನರು ಅವರವರ ಕಸಬುಗಳ ಪ್ರಮುಖವಾಗಿ ವಿಭಾಗಿಸಲ್ಪಡುತ್ತಿದ್ದುದರಿಂದ, ಆಯಾ ಕಸಬುಗಳ ನಿಷ್ಣಾತರಿಂದಲೇ ಉತ್ಕೃಷ್ಟವಾಗಿ ಸಮಾಜಕ್ಕೆ ಸೇವೆ ಸಲ್ಲುತ್ತಿತ್ತು.

ರಾಜಾಧಿಕಾರದ ಮೇಲೆ ಹತೋಟಿ

ಕೇರಳದಲ್ಲಿ ತ್ರಿವಿಧ ಸಭೆಗಳಿದ್ದವು. ಕುಟ್ಟವು ಎಂದು ಕರೆಯಲ್ಪಡುತ್ತಿದ್ದ ಇವುಗಳ ತಾರಾ—ಅಂದರೆ ಗ್ರಾಮಜೀವನಕ್ಕೆ; ನಾಡು—ಅಂದರೆ ಜಿಲ್ಲೆಗಳಿಗೆ, ಮತ್ತು ಇಡೀ ರಾಜ್ಯಕ್ಕೆ ಸಂಬಂಧಿಸುತ್ತಿದ್ದವು. ಕುಟುಂಬಗಳ ಹಿರಿಯರಿಂದ ಪ್ರತಿನಿಧಿಗಳಾಗುತ್ತಿದ್ದ "ತಾರಾ" ಸಭೆಗಳಲ್ಲಿ ಗ್ರಾಮ ಜೀವನಕ್ಕೆ ಸೇರಿದ ಸ್ಥಳೀಯ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. 'ನಾಡು' ಸಭೆಗಳಲ್ಲಿ ಇನ್ನಷ್ಟು ವಿಸ್ತೃತ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇವುಗಳಿಗೆ ಎಷ್ಟು ಅಧಿಕಾರವಿರುತ್ತಿತ್ತೆಂದರೆ ಕೆಲವೊಮ್ಮೆ ರಾಜನ ಅಧಿಕಾರವನ್ನು ಸಹ ನಿಷ್ಪ್ರಯೋಜಕಗೊಳಿಸುತ್ತಿದ್ದವು.

ಹೀಗೆ ರಾಜ್ಯವನ್ನು ಒಂದೊಂದು ಕಾರಣಕ್ಕಾಗಿ ಒಡೆಯುತ್ತಾ ಹೋದರೆ ಇದಕ್ಕೆ ಕೊನೆಯೆಂಬುದೆ ಇಲ್ಲ. ಈ ದೇಶ್ಯ ಬೇಡಿಕೆಗಳನ್ನು ಬೆಳೆಯಗೊಟ್ಟರೆ, ರಾಜ್ಯ ಇಬ್ಭಾಗ ಬೇಡಿಕೆಗಷ್ಟೆ ಸೀಮಿತವಾಗದೆ, ಜಿಲ್ಲೆ ಜಿಲ್ಲೆ ಒಡೆಯುವಕೇಳಿಕೆ ವರೆಗೂ ಬರಬಹುದು. ಇಂದು ವಿಧಾನ ಸಭೆಯಲ್ಲಿ ಮತ್ತು ಹೊರಗೆ ಹಳೇ ಮೈಸೂರು, ಹೊಸ ಮೈಸೂರು ಎಂದು ಹೇಳಿಕೊಂಡು ರಾಜ್ಯವನ್ನು ಒಡೆಯ ಬೇಕೆನ್ನುವ ಕೆಲವರ ಕೇಳಿಕೆ ಹೂವುದೇ ದೃಷ್ಟಿಯಿಂದ ರಾಜ್ಯಕ್ಕೆ ಹಿತವಲ್ಲದೆಂದು ಕನ್ನಡ ರಾಜ್ಯಕ್ಕೆ ಸಂಬಂಧಪಡದ ವ್ಯಕ್ತಿಗಾದರೂ ಹೇಳಿಕೆಯು ತ್ತದೆ. ಆದರಲ್ಲೂ ಇವರುಗಳು ಒಂದೇ ಕೋಮಿನವರು ರಾಜ್ಯ ಆಡಳಿತವನ್ನು ಭದ್ರವಾಗಿ ಹಿಡಿದಿರುವುದರಿಂದ ಫಮ್ಮಗೆ ಆಡಳಿತದಲ್ಲಿ ಪ್ರಾತಿನಿಧ್ಯವಿಲ್ಲದೆ ಫಮ್ಮ ಪ್ರದೇಶ ಹಿಂದುಳಿದಿದೆಂದ್ದೇಳಿ ಕೊಂಡು ಪ್ರತ್ಯೇಕ ರಾಜ್ಯಕ್ಕಾಗಿ ಆಂದೋಳನ ಮಾಡುವುದೆಂದರೆ ನಮ್ಮ ಮುಖದ ಮೇಲೆ ನಾವು ಉಗಳಿಕೊಂಡಂತೆ ಸರಿ. ರಾಜ್ಯದ ಆರ್ಥಿಕ ಬಿತ್ತನ್ನು ಬಿಕ್ಕುವುದರಲ್ಲಿ ರಾಜ್ಯ ಆಡಳಿತ ಗಾರರಿಂದ ಸ್ವಲ್ಪ ಕೆಚ್ಚು ಕಡಿಮೆಯಾಗಿ ರಬಹುದು. ಆದರೆ ಅದನ್ನೆ ದೊಡ್ಡದು ಮಾಡಿ ತೋರಿಸುವಂಥ ಪಕ್ಷ ಪಾತ ಈ ವರೆಗೆ ನಮ್ಮಲ್ಲಿ ಆದಂತಿಲ್ಲ. ಈ ಅನಾವಶ್ಯೇ ದೊಡ್ಡದು ಪೂಡಿ ತೋರಿಸುವುದು ಧರ್ಮವಲ್ಲ. ಇದಿನ ಆಶ್ರಯವಿದ್ದ ಭೂಮಿಗೆ ಕೆಲವೆ ಬಿತ್ತನ್ನು ಬಿತ್ತಿದರೂ ಅದು ಹುಲುಸಾಗಿ ಬೆಳೆಯಲು ಸಾಕಾಗುತ್ತದೆ. ಆದರೆ ಒಣಭೂಮಿಗೆ ಎಷ್ಟೆ ಬಿತ್ತನ್ನು ಬಿತ್ತಿದರೂ ಕೆಲವೆ ಕೆಲವು ಬಿತ್ತ ಹುಟ್ಟುವುದರಿಂದ ಅಂಥ ಭೂಮಿಗೆ ಕೆಲವು ಬಿತ್ತಳ್ಳು ಹೆಚ್ಚಾಗಿಯೆ ಬಿತ್ತಬೇಕಾಗುತ್ತದೆ. ನೈಸರ್ಗಿಕವಾದ ಇಂಥ ಭೂವಿಯ ಪರಿಸ್ಥಿತಿಯಂತೆ ಮೂಢವ ನಿರ್ಮಿತ ಆರ್ಥಿಕ ಸಮೂಹದ ಪರಿಸ್ಥಿತಿಯೂ ಆಗಿರುತ್ತದೆ ಇದೇ ಕಾರಣದಿಂದ ಹಳೇ ಮೈಸೂರಿಗಿಂತ ಹಿಂದುಳಿದ ಪ್ರದೇಶಗಳಿಗೆ ಸ್ವಲ್ಪ ಹೆಚ್ಚಾಗಿ ಸವಲತ್ತನ್ನು ರಾಜ್ಯಾಡಳಿತಗಾರರು ಕೊಟ್ಟೇಕಬಹುದು. ಆದರೆ ಅನಕ್ಕಾಗಿ ಆಕಾಶ ಪಾತಾಳವನ್ನು ಒಂದು ಮಾಡುವಂತಹ ಸಣ್ಣ ಸಣ್ಣ ಕಾರಣವನ್ನು ಆಡಿ ಪ್ರತ್ಯೇಕತೆಯನ್ನು ಸಮರ್ಥಿಸುವುದು ರಾಜಕೀಯ ಮುಸ್ಸದ್ದಿತನವಾಗದು.

ಈ ಪ್ರತ್ಯೇಕತಾವಾದಿ ಧುರೀಣರು ಹೇಳುವ ಪ್ರತ್ಯೇಕತಾ ವಿಚಾರವನ್ನು ಯಾರಾದರೊಬ್ಬ ರಾಜಕಾರಣಿ ಸವಾಲಾಗಿ ಸ್ವೀಕರಿಸಿ ಜನ ಮತ ಗಣನೆಗೆ ಇಳಿದರೆ ಈ ಪ್ರತ್ಯೇಕತೆಯವರ ಅದೂರ ದೃಷ್ಟಿಯನ್ನು ಕನ್ನಡಿಯಲ್ಲಿ ಮುಖ ತೋರಿಸಿದಂತೆ ತೋರಿಬಹುದು.

ಅದರಲ್ಲೂ ಬೇಸರದ ವಿಷಯವೆನೆಂದರೆ ಪ್ರತ್ಯೇಕತೆಯ ವಿಷಯಕ್ಕೆ ನಾಂದಿ ಹಾಕಿದವರಾರೂ ಯಾರು? ನಮ್ಮ ಹಿಂದಿನ ಪ್ರಾಮುಖ್ಯ ಆಡಳಿತಗಾರರು.

ಒಂದು ಪಕ್ಷ ಇವರೆ ಇಂದು ಆಡಳಿತ ಪ್ರಾಮುಖ್ಯ ಸ್ಥಾನದಲ್ಲಿ ಇದ್ದಿದ್ದು ಮೈಸೂರಿನವರು ಇವರ ಸ್ವಾರ್ಥದ ಲ್ಲಿದ್ದು, ಇಂಥವೆ ಪ್ರತ್ಯೇಕತೆಯನ್ನು ಬೇಡಿದ್ದರೆ ಈ ಹಳೆಮೈಸೂರಿರು ಏನು ಮಾಡುತ್ತಿದ್ದರು? ಇಂಥ ಬೇಡಿಕೆಗೆ ಇವರೇ ರಾಜ್ಯವನ್ನು ಒಡೆದು ಕೊಡುತ್ತಿದ್ದರೆ? ಅವರು ಹೀಗೆ ಹೇಳಬಹುದು—ನಾವು ಕೆಲ ಪ್ರದೇಶ ಹಿಂದುಳಿದಿರುವುತ್ತೆ ಕೆಲವು ಪ್ರದೇಶ ಅಭಿವೃದ್ಧಿ ಮಾಡುವ ಸಂಕುಚಿತ ಬುದ್ಧಿ ತಾಳುತ್ತಿರಲಿಲ್ಲ. ಒಂದೊಮ್ಮೆಗೆ ಹೊಸ ಮೈಸೂರಿನವರ ಬೇಡಿಕೆ ನಮ್ಮಂತೆ ಇದ್ದಿದ್ದರೆ ನಾವು ಅವರ ಬೇಡಿಕೆಯನ್ನು ಮನ್ನಿಸಲು ರಾಜ್ಯವನ್ನು ಒಡೆದು ಕೊಡುತ್ತಿದ್ದೆವು ಎಂದು. ಆದರೆ ಅಧಿಕಾರದಲ್ಲಿದ್ದಾಗ ಈ ಮಾತನ್ನಾಡುವ ದುಸ್ಸಾಹಸ ಯಾರೂ ತೋರಿಲಾರರು. ಬಾಲ ಕಳೆದುಕೊಂಡ ನರಿಯಷ್ಟೇ ಜಂಬ ಕೊಚ್ಚಿಕೊಳ್ಳುವುದು?

ನಮ್ಮ ರಾಷ್ಟ್ರ ವಿಂಪ್ಪರು ಆಹಾರ ವಲಯವನ್ನು ನಿರ್ಮಾಣ ಮಾಡಿದ್ದೆ ತಡ ಅಂಕುಚಿತತೆಗೆ ಎಡೆಕೊಡುತ್ತದೆಂದು ಪರ್ಯಾತ್ತಾಪ ಪಡುತ್ತಿರುವಾಗ ರಾಜ್ಯ ಒಡೆಯುವ ಪ್ರವೃತ್ತಿಗೆ ಅಂಟಿಕೊಂಡುದು ನಾಡ ಜನತೆಯ ದುರ್ದೈವ. ಹಳೇ ಮೈಸೂರು ಹೊಸ ಮೈಸೂರಿಗರ ಜಡಿಲ ಅಣ್ಣ ತಮ್ಮಂದಿರ ಜಗಳದಷ್ಟೆ ತೊಸಕಾದುದು. ಇದಂದ ನಾವು ಬಯಸಿದಷ್ಟು ಸುಖ ದೊರೆತಾದು.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No.— 1 28337 2 29887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸ್ಥಾಯಿ ರಂಗಶಾಲೆ ಮತ್ತು ಸಭೆ

ಬರೆದವರು: ಶ್ರೀ ಸ. ನಾರಾಯಣ

ಸಂಗೀತ ರತ್ನಾಕರ ಶ್ರೀಮತ್ ಗ್ರಂಥ ಗಳಲ್ಲಿಂದು ಇದು ಸಂಗೀತ ಶಾಸ್ತ್ರ ವ್ಯಾಖ್ಯಾನ ಗ್ರಂಥ. ಇದರಲ್ಲಿ ಪ್ರಾಚೀನ ಕಲಾ ಪರಂಪರೆಯ ಪ್ರಸ್ತಾಪವಿದೆ. ಇದರಲ್ಲಿ ಸಂಗೀತದ ವ್ಯವಸ್ಥೆಗಾಗಿ ಸ್ಥಾಪಿಸಿದ ಸಭೆಯು ಬಹು ಭವ್ಯ ವರ್ಣನೆ ಬರುತ್ತದೆ. ಗ್ರಂಥಕಾರ ಇದನ್ನು 'ರಂಗಶಾಲೆ' ಎಂದು ಉಲ್ಲೇಖಿಸಿದ್ದಾರೆ. "ಸ್ತಂಭ ವಿಭೂಷಿತ ಪುಷ್ಪ ಪ್ರಕರ ಶೋಭಿತ ನಾನಾ ವಿಶಾಲ ಮಂಪನ್ನ' ಅತ್ಯಂತ ಸಮೃದ್ಧಶಾಲಿ ರಂಗಶಾಲೆಯ ವರ್ಣನೆ ಈ ಸಂಗೀತ ರತ್ನಾಕರ ಗ್ರಂಥದಲ್ಲಿದೆ.

ಭಾರತದಲ್ಲಿ ಆತಿ ಪ್ರಾಚೀನ ಕಾಲದಿಂದಲೂ ಸಂಗೀತ, ಅಭಿನಯ ಮತ್ತು ಕಾವ್ಯವಾಚನಗಳಿಗಾಗಿ ಸ್ಥಾಯಿ ಸಭೆಗಳಿದ್ದ ಸಂಗತಿ ತಿಳಿದು ಬರುತ್ತದೆ. ಇಂದ ಶಾಲೆಯು ಮಧ್ಯದಲ್ಲಿ ಸಿಂಹಾಸನದ ಮೇಲೆ ಸಭಾಪತಿ ಕುಳಿತಿರುತ್ತಿದ್ದನು. ಈ ಸಭಾಪತಿ ಎಲ್ಲ ಬಗೆಯ ಕಲಾಮರ್ಮಜ್ಞನೂ ವಿವೇಕ ಶೀಲನೂ ಆಗಿರಲೇ ಬೇಕಾದ ಅಗತ್ಯವಿತ್ತು. ಸಭಾಪತಿಯು ಎಡಗಡೆಗೆ ಅಂತಃಪುರದ ರಮಣಿಯರಿಗೆ ಮತ್ತು ಇಲಗಡೆ ಪ್ರಧಾನ ಆಮಾತ್ಯಾದಿಗಳಿಗೆ ಸ್ಥಾನ ನಿರ್ದಿಷ್ಟವಾಗಿರುತ್ತಿತ್ತು. ಪ್ರಧಾನರ ಹಿಂದಿನ ಸಾಲಿನಲ್ಲಿ ಕೋಶಾಧ್ಯಕ್ಷ ಮತ್ತು ಇತರ ಅಧಿಕಾರಿಗಳಿಗಾಗಿ ಆಸನಗಳಿರುತ್ತಿದ್ದವು. ಪ್ರಮುಖ ಜ್ಯೋತಿಷಿ ಮತ್ತು ವೈದ್ಯರ ಆಸನಗಳು ವಿದ್ವಾಂಸರ ಸಾಲಿನೊಂದಿಗಿರುತ್ತಿದ್ದವು. ಇದೇ ಕಡೆ ಮಂತ್ರಿಮಂಡಲ ಕುಳಿತುಕೊಳ್ಳುತ್ತಿತ್ತು. ಸಭಾಪತಿಯ ಹಿಂದೆ ರೂಪ ಯೌವನ ಸಂಪನ್ನೆಯರಾದ ಚಾರು—ಚಾಮರ ಧಾರಿಣಿ ಸ್ತ್ರೀಯರು ವೆಲ್ಲ ವೆಲ್ಲಗೆ ಚವರಿ ಬೀಸುತ್ತಿದ್ದರು. ಅವರು ತಮ್ಮ ಕಂಕಣ ಕಿಂಕಿಣಿಯಿಂದ ದರ್ಶಕರ ಚಿತ್ತವನ್ನು ಆಕರ್ಷಿಸುತ್ತಿದ್ದರು. ಸಭೆಗೆ ಎದುರಾಗಿ ವಿಡಥಾಪದಲ್ಲಿ ಕಥಕ, ಮಂದಿ ಮತ್ತು ಕಲಾವಂತ ಮುಂತಾದವರು ಇರುತ್ತಿದ್ದರು. ಸಭೆಯು ಶಾಂತಿ—ಶಿಸ್ತುಗಳ ರಕ್ಷಣೆಗಾಗಿ ದಕ್ಷರಾದ ನೇತ್ರಧರರೂ ಇರುತ್ತಿದ್ದರು.

ಕಾವ್ಯ ವಿವೇಮಂಸೆಯಲ್ಲಿ ಕವಿ ರಾಜಶೇಖರ ಮತೆರ್ಒಂದು ಬಗೆಯು ಮನೋರಂಜಕ ಸಭೆಯ ವಿಚಾರವನ್ನು ವರ್ಣಿಸುತ್ತಾನೆ. ಅವನ ಹೇಳಿಕೆಯಂತೆ ಕಾವ್ಯ ಸಾಹಿತ್ಯಾದಿಗಳ ಚರ್ಚೆಗಾಗಿ ಇದ್ದ ರಾಜನ ಸಭಾಮಂಟಪದಲ್ಲಿ ಹದಿನಾರು ಸ್ತಂಭಗಳು, ನಾಲ್ಕು ದ್ವಾರಗಳು ಮತ್ತು ಎಂಟು ಅಂತಸ್ತುಗಳು ಇರುತ್ತಿದ್ದವು. ಅರಸನ ಕ್ರೀಡಾಗೃಹವು ಸಭಾಮಂಟಪಕ್ಕೆ ಹೊಂದಿಕೊಂಡಿರುತ್ತಿತ್ತು. ಇದರಲ್ಲಿ ಮುದ್ದೆ ಕಾಲ್ಬು ಕಂಬಗಳನ್ನು ಒಟ್ಟು ಸೇರಿಸಿತ್ತರ ಒಂದು ವೇದಿಕೆ ಇರುತ್ತಿದ್ದು. ಆದರ ಮೇಲೆ ಮಣೆ ಪೀಠ ವೇದಿಕೆ ಇರುತ್ತಿತ್ತು. ಅದರ ಮೇಲೆ ರಾಜನ ಪೀಠವಿರುತ್ತಿತ್ತು. ಇತರ ಉತ್ತರಕ್ಕೆ ಸಂಸ್ಕೃತ ಕವಿಗಳು ಕುಳಿತುಕೊಳ್ಳುತ್ತಿದ್ದರು. ಪೂರ್ವ ಕವಿ ಪ್ರಾಕೃತ ಭಾಷೆಗಳಲ್ಲಿ ಕವಿತ್ವ ಮಾಡುವುದಾದರೆ ಅವರು ಯಾವ ಭಾಷೆಯಲ್ಲಿ ಹೆಚ್ಚು ಪ್ರವೀಣನೊ ಆ ಭಾಷೆಯ ಕವಿ ಎಂದು ಪರಿಗಣಿಸಲ್ಪಡುತ್ತಿದ್ದ. ಸಂಸ್ಕೃತ ಕವಿಗಳ ಹಿಂದೆ ವೈದಿಕರು, ದಾರ್ಶನಿಕರು, ಪುರ ಪೌರಾಣಿಕರು, ಸ್ಮೃತಿಗಾರರು, ವೈದ್ಯ, ಜ್ಯೋತಿಷಿ ಮೊದಲಾದವರ ಸ್ಥಾನವಿರುತ್ತಿತ್ತು. ಪೂರ್ವಕ್ಕೆ ಪ್ರಾಕೃತ ಭಾಷೆಯ ಕವಿ ಅವರ ಹಿಂದೆ ಹಿಂದೆ ಭಟ್ಟ, ಶೆಕರ್ಕ, ಗಾಯಕ, ವಾದಕ, ವಾಗ್ವಿನಯ, ಕೈಶಿಲವ ಕಾಲಾವಚರ ಮುಂತಾದವರು ಇರುತ್ತಿದ್ದರು.

ಹುಟ್ಟಿಮಕ್ಕೆ ಅಪಭ್ರಂಶ ಭಾಷೆಯು ಕವಿ ಮತ್ತು ಅವರ ಹಿಂದೆ ಚಿತ್ರಕಾರ್ಮೆಲೆಪ ಕಾರ, ಮಣಿಕಾರ, ಚಿನ್ನಿವಾರ, ಜಡಗಿ, ಕಮ್ಮಾರ ಮುಂತಾದವರ ಸ್ಥಾನವಿರುತ್ತಿತ್ತು. ದಕ್ಷಿಣಕ್ಕೆ ಪೈಶಾಚಿ ಭಾಷೆಯು ಕವಿಯಃ ಪೀಠವಿರುತ್ತಿತ್ತು. ಆದರ ಹಿಂದೆ ಪೇತ್ಲೆ, ನೇಯ್ಕಾಲಂಪಟಿ, ಹಗ್ಗಗಳ ಸೇಲೆ ವಶಿಸುವವರು, ಮೂಟಗಾರ ಚಂಪಿಗಳು, ಕೈಲ್ವಾಸ್, ಸಿವಾಯಿ ಮುಂತಾದವರ ಸ್ಥಾನ ನಿರ್ದಿಷ್ಟವಾಗಿರುತ್ತಿತ್ತು.

ಈ ವಿವರಣೆಯಿಂದ ಸಭೆಯ 'ಕವಿ ಸಭೆ' ಎಂಬ ಸಂಗತಿಯನ್ನು ರಾಜಶೇಖರ ಪ್ರಸ್ತಾಪಿಸಿ, ಪ್ರಕಟಿಸಿದ್ದರೂ ವರ್ತಕ, ಗಾಯಕರ ಉಪಸ್ಥಿತಿಯಿಂದ ಈ ಜಗೆಯ ಸಭೆಗಳಲ್ಲಿ ವಿಶೇಷ ಸಂಭ್ರಮಗಳಲ್ಲಿ ಗಾನ, ವಾದ್ಯ ಮತ್ತು ವೈದ್ಯ ಶಾಸ್ತ್ರಗಳ ಮಂಡಳು ನಡೆಯಲು ಅವಕಾಶವಿತ್ತು.

ಸ್ಥಾಯಿ ಸಂಗೀತ — ಭವಷದಲ್ಲಿ ವೈದಂಗಕ್ಕೆ ಸ್ಥಳವಿರುತಿತ್ತು. ಕಾದಂಬರಿ ಗ್ರಂಥದಲ್ಲಿ ಇದಕ್ಕೊಂದು ಉಪಮೆ—ಉದಾಹರಣೆ ದೊರೆಯುತ್ತಿದೆ. ಆದ್ದರಿಂದ "ಸಂಗೀತ ಭವನ ವಿವಾಹೇತರ ಸ್ಥಾನ ಸ್ಥಾಪಿತ ವೈದಂಗಂ"ಎಂಬ ಈ ವ್ಯವಸ್ಥೆ, ಕ್ರಮ ತಿಳಿದು ಬರುತ್ತದೆ. ವೈದಂಗವು ಪ್ರಾಚೀನ ಕಾಲದಲ್ಲಿ ಸಂಗೀತ ಸಭೆಯ ಶ್ರೇಷ್ಠ ಅವಶ್ಯಕತೆ ಉಪಾದಾನವಾಗಿತ್ತು. ಸಂಗೀತ ಪ್ರಸಂಗ ಬಂದಾಗ ಪ್ರಾಕೃತ ಸಂಗೀತ 'ವೈದಂಗ ಘೋಷ'ವೆಂದು ಹೇಳಿ ಕಾಳಿದಾಸ ಗವನ ಸೆಳೆಯುತ್ತಾನೆ.

ರಜೆಯ ಹುಚ್ಚು!!

(ಪಾರಿ.ಸೋತ್ತಮ ಪೂವಣಕರ)

ರಾತ್ರಿಯಲ್ಲಿ ನಾನು ಉಚ್ಚ ವಿದ್ಯಾಭ್ಯಾಸಕ್ಕಾಗಿ ಲಂಡನದಲ್ಲಿ ಇದ್ದೆ. ಆಗ ನನಗೆ ಜಾರ್ಜರು ತೀರಿಕೊಂಡರು. ಇಂಗ್ಲಂಡಿನ ಕುಟುಂಬ ಶೋಕಛಾಯೆಯು ವ್ಯಾಪಿಸಿತು. ಧ್ವಜಗಳು ಅರ್ಧಕ್ಕೆ ಇಳಿಸಲ್ಪಟ್ಟವು. ಅಂಗಡಿಗಳಲ್ಲಿಯೂ ಇತರ ಕಡೆಗಳಲ್ಲಿಯೂ ಕಪ್ಪುಪಟ್ಟಿಗಳು ಹಚ್ಚಲ್ಪಟ್ಟವು. ಪ್ರಜೆಗಳು ದುಃಖಪೀಡಿತರಾದರು. ಅವರ ಮುಖ ಬಾಡಿದವು. ಆದರೆ ಯಾವದೇ ಕೆಲಸ ವ್ಯವಹಾರ ಮಾತ್ರ ನಿಲ್ಲಲಿಲ್ಲ. ಪ್ರತಿನಿತ್ಯದ ಯಾವಕ್ಕೂ ವ್ಯವಹಾರಗಳು ನಡೆಯುತ್ತಲೇ ಇರುವವು.

ಅದರೆ ಭಾರತದಲ್ಲಾದರೋ ಇಂಥ ಪ್ರಸಂಗದಲ್ಲಿ ಅರ್ಧಾಕ ಉತ್ಪಾದನೆಯು ಅನಿವಾರ್ಯತೆ ಎಷ್ಟೇ ಇದ್ದರೂ ಕೂಡ ನಮ್ಮಲ್ಲಿಯ ಕಾರಖಾನೆ, ಗಿರಣಿ ಸೊದಲಾದುವುದನ್ನು ೨-೩ ದಿನ ಬಂದಿಗಿಲಾಗುವುದೇ.

ನಾನು ಅಂದು ಶ್ರೀಮತಿ ಫ್ರೈಡ ಲೆಸ್ಲಿ ಇವರ ಮನೆಯಲ್ಲಿ ಇರುತ್ತಿದ್ದೆ. ಅವರ ಹೆಸ್ತರ ಸಹಜವಾಗಿ ಕೇಳಿದೆ. "ರಾಜಗು ತೀರಿಕೊಂಡದ್ದರಿಂದ ನಾಳೆ ನಮ್ಮ ಕಾಲೇಜಿಗೆ ರಜೆ ಇರಬಹುದಲ್ಲವೇ?" ಎಂದು. "ಇಲ್ಲ ಇಲ್ಲ, ರಜೆ ಇಲ್ಲ. ಇವೇನೂ ಭಾರತ ದೇಶವಲ್ಲ" ಎಂದು ಅವರು ಉತ್ತರ ಕೊಟ್ಟುಬಿಟ್ಟರು!! ಕೇಳಿ ನಾನು ಸ್ತಂಭಿತನಾದೆ. ಮತ್ತು ತುಂಬಾ ನಾಚಿಕೆಪಟ್ಟೆ.

ಮರುದಿನವೂ ಲಂಡನದಲ್ಲಿ ಎಲ್ಲ ವ್ಯವಹಾರವು ನಿತ್ಯದಂತೆ ನಡೆದೇ ಇತ್ತು! ಆದರೆ ಅಂದೇ ನಾಳುಂಕಾಲ ವೃತ್ತ ಪತ್ರಗಳಲ್ಲಿ ಓದಿದೆ 'ಇಂಗ್ಲಂಡದ ೬ನೇ ಜಾರ್ಜರ ಮರಣದ ನಿಮಿತ್ತವಾಗಿ ಭಾರತದಲ್ಲಿಯೂ ಲೋಕಸಭೆಯನ್ನು ಮುಂದಿಡಲಾಗಿದೆ! ಮತ್ತು ಶೋಕ ಸೂಚಕವಾಗಿ ಎಲ್ಲ ಕಡೆಗಳಲ್ಲಿ ೩ ದಿನ ಎಲ್ಲ ವ್ಯವಹಾರ ಬಂದಿಡಲಾಗುವುದು "ಎಂದು! ಇದನ್ನು ಓದಿಯಂತೂ ನಾನು ನಾಚಿಕೆಯಿಂದ ನೀರು ನೀರಾಗಿಬಿಟ್ಟೆ!! (ನಿರೀಕ್ಷಕದಿಂದ)

ಕಾಸರಗೋಡು ಪತ್ರ

● ಸ್ಕೌಟ್ ತಂಡಗಳಿಗೆ ಹೇರಬೇಕೆಂದು ವಿದ್ಯಾಧಿಕಾರಿಯವರ ಮುಖ್ಯಪಾಲಿಟಿಗಳ ಡೈರೆಕ್ಟರ್ ಅವರಿಗೆ ಪತ್ರವನ್ನು ಪುನಃ ಪರಿಶೀಲಿಸಬೇಕೆಂದೂ ಆ ತಂಡಗಳಿಗೆ ಹೇರುವುದರಿಂದಾಗಿ ಜನಸಾಮಾನ್ಯರಿಗೆ ಕರಭಾರ ಹೇರಿದಂತಾಗುವುದೆಂದೂ ಕಾಸರಗೋಡು ಪುರಸಭೆಯು ಡೈರೆಕ್ಟರರನ್ನು ವಿನಂತಿಸಿದೆ.

ಜಿಲ್ಲಾ ಪಂಚಾಯತ್ ಕೌನ್ಸಿಲಿನಲ್ಲಿ ಇತರ ಪುರಸಭೆಗಳಂತೆ ತನಗೂ ಪ್ರಾತಿನಿಧ್ಯ ನೀಡಬೇಕೆಂದು ಒಂದು ರೂಪಾಯಿನ ನೂಲಂಕಿತ ಪುರಸಭೆಯು ಕೇರಳ ಸರಕಾರವನ್ನು ವಿನಂತಿಸಿದೆ.

● ಮಹಾಜನ ವರದಿಯನ್ನು ಕೂಡಲೇ ಕಾರ್ಯರೂಪಕ್ಕೆ ತರುವಂತೆ ಕಾಸರಗೋಡಿನ ೨೦ ಮಂದಿ ಧುರೀಣರ ನಿಯೋಗವು ಬೆಂಗಳೂರಿಗೆ ತೆರಳಿ ಪ್ರಧಾನಿಯವರನ್ನೂ ಕಾಂಗ್ರೆಸ್ ಅಧ್ಯಕ್ಷರೆನ್ನೂ ವಿನಂತಿಸಿದೆ.

ವಿಧಾನ ಸಭಾ ಸದಸ್ಯರುಗಳಾದ ಕೆ. ಮಹಾಬಲ ಭಂಡಾರಿ, ಯು. ಎ. ಕುಣಿಕುಳ್ಳಾಯ, ಕೆ. ಕೆ. ಶೆಟ್ಟಿ, ದೇವಪ್ಪಾಪ್ಪ, ಎಂ. ಎಸ್. ಕಡಂಬಳಿತ್ತಾಯ ಮುಂತಾದವರು ನಿಯೋಗದಲ್ಲಿದ್ದರು.

● ಕಾಸರಗೋಡು ಜಿಲ್ಲಾ ವಿದ್ಯಾಧಿಕಾರಿಯ ಆಪ್ತ ಸಹಾಯಕರಾಗಿ ಅನೇಕ ವರ್ಷಗಳ ಅಮೂಲ್ಯ ಸೇವೆಸಲ್ಲಿಸಿದ ಬುನಾದಿ ಶಿಕ್ಷಣ ತಜ್ಞ ಶ್ರೀ ಕೆ. ರಾಮಕೃಷ್ಣ ಶೆಟ್ಟರನ್ನು ಬದಿಯಡ್ಕ ಪಂಚಾಯತ್ ಅಧ್ಯಕ್ಷ ಶ್ರೀ ಕೆ.ಕೆ. ಶೆಟ್ಟಿ ಮತ್ತು ಕುಂಬಳೆ ಉಪಜಿಲ್ಲಾ ಅಧ್ಯಾಪಕರುಗಳ ಸಂಘದ ಅಧ್ಯಕ್ಷ ಶ್ರೀ ಎನ್. ಜಿ. ಭಟ್ ಮೊದಲಶಸ್ತ್ರಗಳನ್ನರ್ಪಿಸಿ ಸತ್ಕರಿಸಿದ್ದರು.

ಅದೇ ಸಂದರ್ಭದಲ್ಲಿ ನವೆಂಬರ್ ೧೪ರಂದು ಬದಿಯಡ್ಕದಲ್ಲಿ ಗಾಂಧೀ ಶತಮಾನೋತ್ಸವವನ್ನು ಆಚರಿಸಲಾಯಿತು.

ಗಾಂಧೀ ಸಾಹಿತ್ಯದ ಕುರಿತು ಕವಿ ಸಮ್ಮೇಳನ ಹಾಗೂ ಬುನಾದಿ ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗೋಷ್ಠಿಯನ್ನೂ ಏರ್ಪಡಿಸಲಾಗಿತ್ತು. ಕನ್ನಡಿಗ ವಿಧಾನಸಭಾ ಸದಸ್ಯರೆಲ್ಲರೂ ಭಾಗವಹಿಸಿದ್ದರು.

12 ಮಂದಿ ಕೊರಗ ವಿದ್ಯಾರ್ಥಿಗಳಿಗೆ ಉಚಿತ ಉಡುಪುಗಳನ್ನು ಪಂಚಾಯತ್ ವಿಸ್ತರಣಾಧಿಕಾರಿ ಶ್ರೀ ಕೃಷ್ಣಪ್ಪನವರು ವಿತರಿಸಿದರು.

ವಿದ್ಯಾರ್ಥಿಗಳಿಗೂ ಇತರರೂ ಭಾಗವಹಿಸಿದ್ದರು.

● ಕೃಷಿ ಅಧಿಕಾರಿಯ ಕೆಲಸಗಾರರಿಗೆ ವೃಥಾ ಕೆಲಸಗಳಿಗೆಹಾಡಿದೆ ಕಳೆದ ವರ್ಷಗಳ ಅನಾವೃಷ್ಟಿಯ ಅಂದಾಜಿನ 'ಫಲಹಾನಿ'ಯನ್ನೂ ಬೆಳೆನಷ್ಟವನ್ನೂ ಪರಿಗಣಿಸಿ ಮೊನವಿಯಂತೆ ಯು ಹೃದಯದಿಂದ ತೆರಿಗೆ ನಿರ್ಧರಿಸಬೇಕೆಂದು ಶ್ರೀ ಕುಣಕುಳ್ಳಾಯರು ಮೇಲಧಿಕಾರಿಗಳಿಗೆ ಸಾಮರ್ಪಿಸಿದ ಮನವಿಯಲ್ಲಿ ವಿನಂತಿಸಿದ್ದಾರೆ.

● ● ●

ಚಂದಾದಾರರಲ್ಲಿ ವಿನಂತಿ

ಇದೇ ಬರುವ ಆಗೋಷ್ಟು ತಿಂಗಳಾಂತ್ಯಕ್ಕೆ "ನವಯುಗ"ದ 48ನೇ ಸಂಪುಟವು ಕೊನೆಗೊಂಡು ಸೆಪ್ಟಂಬರ್ ಅದಿಯಿಂದ 49ನೇ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಬಾಕಿ ಇರುವವರೂ ದಯವಾಡಿ ತಮ್ಮ ಚಂದಾಹಣವನ್ನು ಆದಷ್ಟು ತ್ವರ್ಯ ಕಳುಹಿಸಿಕೊಟ್ಟು ಪ್ರೋತ್ಸಾಹಿಸಲು ಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್, ನವಯುಗ, ಉಡುಪಿ.

ಬೇಕಾಗಿದ್ದಾರೆ

ಅನುಭವಸ್ಥ ಪ್ರೆಸ್ ಕೆಲಸಗಾರರು, ಪ್ರೆಸ್ಸಿನ ನಾನಾ ವಿಭಾಗಗಳಲ್ಲಿ ತರಬೇತಿಗಾಗಿ ಕೆಲವು ಸ್ಥಳೀಯ ಹುಡುಗರು,

ವಿವರಗಳಿಗೆ ವಿಚಾರಿಸಿರಿ

ನವಯುಗ ಪ್ರೆಸ್, ಉಡುಪಿ

In the Court of the Munsif of Udipi.

P. & S. C. 6/1969

1. Balappa Kallyani Amma.
2. Kumary Prabhavathi.
3. Parvathy Amma.
4. Kumari Mohini

—Petitioners.

In the matter of debts due to the estate of the deceased Balappa Stanu Krishnayya.

To

All persons who may concern:-

Notice is hereby given that the Petitioners have filed the above application praying for issue of a succession certificate to collect the 'A' schedule debt due to the estate of the deceased above named and the said petition is posted to 16—8—1969 for hearing. Those who have any objection may appear before the Court on that day at 11 A. M., failing which, the above application will be disposed off in their absence.

By order of Court.

(Sd.) V. G. Kedlaya,
M. A., LL. B.,
Adv. for Petitioners.

Udipi D/- 25-7-69.

ವಿಜಯಾ ಬ್ಯಾಂಕಿನ 100ನೇ ಶಾಖೆಯು ತೆರೆಯುವಿಕೆ

ನಿಮ್ಮ ಸೇವೆಗಾಗಿ—ನಮ್ಮ 100ನೇ ಶಾಖೆಯು ಮಾಹಿಮ್, ಬೊಂಬಾಯಿ-18

ಸಮ್ಮಿಹೊಸ ಶಾಖೆಯು (ಏರ್ ಕಂಡೀಶನ್ಡ್) ರಮ್‌ಜಾನ್ ಬಿಲ್ಡಿಂಗ್, ಲೇಡಿ ಜಮ್‌ಶೆಡ್ಜೀ ರೋಡ್, ಮಾಹಿಮ್, ಬೊಂಬಾಯಿ-18 ಇಲ್ಲಿ 1969ನೇ ಆಗಸ್ಟ್ 1, ಶುಕ್ರವಾರದಂದು ತೆರೆಯಲ್ಪಡುವುದೆಂದು ತಿಳಿಸಲು ನಾವು ಸಂತೋಷಪಡುತ್ತೇವೆ

ಈಗ ವಿಜಯಾ ಬ್ಯಾಂಕ್ ಮೈಸೂರು, ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿರುವ ತನ್ನ 100 ಶಾಖೆಗಳ ಮೂಲಕ ಸಣ್ಣ ಉಳಿತಾಯಗಳನ್ನು ದೊಡ್ಡ ಮೌಲ್ಯದ ಠೇವಣಿಗಳನ್ನಾಗಿ ಪರಿವರ್ತಿಸಲು ಅನೇಕ ಯೋಜನೆಗಳನ್ನು ನೀಡುತ್ತದೆ.

ಉಳಿತಾಯಕ್ಕಾಗಿ ನಮ್ಮ ಯಾವುದೇ ಒಂದು ಶಾಖೆಯನ್ನು ಸಂದರ್ಶಿಸಿರಿ. ಮತ್ತು ನಮ್ಮ ಬ್ಯಾಂಕಿನಲ್ಲಿರುವ ಉಳಿತಾಯವು ನಿಮಗೆ ಹಾಗೂ ನಿಮ್ಮ ಕುಟುಂಬಕ್ಕೆ ನೀವು ಬಯಸುವ ಭದ್ರತೆ ಮತ್ತು ಭರವಸೆಯನ್ನು ನೀಡುತ್ತದೆ

ವಿಜಯಾ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ವಿಜಯಾ ಬ್ಯಾಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್, **ಮಂಗಳೂರು-3.**

ಅಧ್ಯಕ್ಷ:
ಎಂ. ಸುಂದರರಾವು ಶೆಟ್ಟಿ

ಅಮೃತಾಂಜನ

● ತಲೆ ಸಿಡಿತ ● ಹೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳನ್ನು ಶೀಘ್ರವಾಗಿ, ಪ್ರಪಂಚಸ್ತುತಿ.

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಎಷ್ಟೆಂದರೂ ಅಬಲೆ!

(ಎರಡನೇ ಪುಟದಿಂದ)

ದಾ ಮೊಡುತ್ತ ಜವಿನ್ಯಾರ ಜಗ್ಗಯ್ಯ ಅಡಿಗೆ ಮನೆಗೆ ನುಗ್ಗಿದ. ಬಾಯಲ್ಲಿ ಡುವಾಕತೆ, ಕಣ್ಣು ಕೆಂಪ!—ಪೂರ್ಣಾ ಹಾಲು ಬಿಸಿಮಾಡಲು ಅದನ್ನು ಸ್ಟೌವ್ ಮೇಲೆ ಇಡುತ್ತಿದ್ದಳು. ಜಗ್ಗಯ್ಯ ಮುಂದಡಿಯಿಟ್ಟ. ಪೂರ್ಣಾ ಆತಪತ್ನಿಯನ್ನು ಕಡೆಯಲು ಯತ್ನಿಸಿದಳು. ಆದರೆ ಅಷ್ಟರಲ್ಲಿ ಜಗ್ಗಯ್ಯನ ಜಗ್ಗಿ ಹಿಡಿದ ಬಲಿಷ್ಠ ಬಾಹುಗಳಲ್ಲಿ ಆಕೆ ಬಂದಿಕಳಾಗಿದ್ದಳು. ಚೀರಲು ಪ್ರಯತ್ನಿಸಿದಳು. ಬಾಯಿ ಬಾಯಿಂದ ಮುಚ್ಚಲ್ಪಟ್ಟಿತ್ತು! ಉಳಿದು ಗಿಳಿಸಿಕೊಳ್ಳುವ ವ್ಯರ್ಥ ಸಾಹಸವನ್ನೂ ಮಾಡಿದಳು—ಎಷ್ಟೆಂದರೂ ಅಬಲೆ! ಆಕೆಯು ಸೆರೆಗು ಜಾರಿತ್ತು!!

ಸ್ಟೌವ್ ಮೇಲಿಟ್ಟ ಹಾಲು ಕುದಿಯುತ್ತಿತ್ತು. ಕುನಿನು ಸ್ಟೌವ್ ಮೇಲೆ ಬೀಳುತ್ತಾ ಹೋಯಿತು. ಬಿದ್ದಂತೆ "ಚ ಯಂ....' ಶಬ್ದದೊಂದಿಗೆ ಸ್ಟೌವ್ ಆರಿಹೋಯಿತು. ಜಗ್ಗಯ್ಯ ಎದ್ದು ಬಟ್ಟೆ ಸರಿಪಡಿಸುತ್ತಾ ಹೊರನಡೆದ—ಬಹುಶಃ ಸ್ನಾನಾಗಾರದತ್ತ.

ಪೂರ್ಣಾಳ ಸರ್ವಸ್ವ ಲೂಟಿಯಾಗಿತ್ತು. ಮೇಲೇಳಲು ಕೈಕಾಲು ಬಡಿದಷ್ಟೂ ಕೆಳಗೆ ಹೋಗುವಂತಹ ಕೆಸರಿನಲ್ಲಿ ಅಬಲೆ ಬಿದ್ದಿದ್ದಳು— ಏಕೆಂದರೆ ಇಂತಹ ನಾಲ್ಕಾರು ಮಧ್ಯವೆಗಳು ಆ ಹಳ್ಳಿಯಲ್ಲಿ ಮತ್ತೂ ಆಡಳಿತದ

NAVAYUGA 31—7—1969
Registered with the Registrar of News Papers for India under No. R. N. 3546/'57

REGD: No: B. G: 176
LICENCE No. 33
Licensed to Post without Prepayment

ಮಾತಿನ ಮಲ್ಲಿಗೆ

ಅನುಗಾಲವೂ ಚಿಂತೆ ತಪ್ಪಿದ್ದಲ್ಲ

ಶ್ರೀ ವಿ. ವಿ. ಗಿರಿಯವರು ಕಾಂಗ್ರೆಸ್ ಅಭ್ಯರ್ಥಿಯಾಗಿ ೧೯೬೭ರಲ್ಲಿ ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದು ಬಂದವರು. ಅವರ ರಾಜ್ಯಕೀಯ ಉನ್ನತಿಗೆ ಅವರು ಕಾಂಗ್ರೆಸ್ ಪಕ್ಷದಲ್ಲದ್ದು ಮೂಡಿದ ಕಾರ್ಮಿಕ ಕಲ್ಯಾಣ ಕಾರ್ಯಗಳೇ ಕಾರಣ. ಅದರೂ ಶ್ರೀ ಗಿರಿಯವರು ಕಾಂಗ್ರೆಸಿದರೇ ಆಗಿದ್ದವರು. ಡಾ| ಜಾಕೀರ್ ಸಾಹೇಬರ ಮರಣದಿಂದ ಹಂಗಾಮಿ ರಾಷ್ಟ್ರಪತಿಯಾದವರಿಗೆ ಖಾಯಂ ರಾಷ್ಟ್ರಪತಿಯೂ ಪಟ್ಟೇಕೆಂಬ ಬಯಕೆ ಮೂಡಿದ್ದು ಅಸಹಜವಲ್ಲ. ಆದರೆ, ಕಾಕಾಗಿ ಯಾವ ಸ್ಥಾನವನ್ನೂ ಅರಸಿಕೊಂಡು ಹೋಗಲಿಲ್ಲ, ಎಂದು ಮುಂತಾದ ಅವರ ಆತ್ಮಪ್ರಶಂಸೆ ಮತ್ತು ಸ್ವಪ್ರಶಕ್ತಿಗಳು ತೀರ ಸುಳ್ಳೆಂದು ಅವರ ಮೇಲಿನ ಉದ್ಗಾರವೇ ಸಾಕ್ಷಿ ಹೇಳುತ್ತದೆ. ಅಂದು ಉಪರಾಷ್ಟ್ರಪತಿ ಸ್ಥಾನಕ್ಕೆ ತಾವು ಸ್ಪರ್ಧಿಸಿದಾಗ ಮತಪೆಟ್ಟಿಗೆಯ ವಿರೋಧ ಪಕ್ಷೀಯರನ್ನೇ ಬಲವಾಗಿ ಅವರು ಈಗ ನಂಬಿದ್ದಾರೆ. ಅವರ ನಂಬಿಕೆಯನ್ನು ಕೆಲವರು ಸತ್ಯವೂಡಬಹುದು; ಆದರೆ, ಎಲ್ಲರೂ ಮೂಡಲಾರರು. ಆಗ ಶ್ರೀ ಗಿರಿಯವರ ರಾಜ್ಯಕೀಯಕ್ಕೆ ಅಂತದ ಪರದೆ ಬಿದ್ದಂತೆಯೇ.

ಂ ಂ ಂ ಂ

ಶ್ರೀ ವಿ. ವಿ. ಗಿರಿಯವರ ರಾಜಿನಾಮೆಯಿಂದ ಉಪರಾಷ್ಟ್ರಪತಿ ಸ್ಥಾನವು ಖಾಲಿ ಬಿತ್ತು. ತನ್ನನ್ನು ರಾಷ್ಟ್ರಪತಿ ಸ್ಥಾನಕ್ಕೆ ಕಾಂಗ್ರೆಸ್ ಆರಿಸಿದ್ದರೆ, ಉಪರಾಷ್ಟ್ರಪತಿಯಾಗಿ ಮಂದುವರಿಯುವುದು ಕಷ್ಟಸಾಧ್ಯವೆಂದವರಿಯುವುದು ಬಹಳ ಮೊದಲೇ ಶ್ರೀಧಾಫಿಗೆ ತಿಳಿಸಿದ್ದಾರೆಂದು ವದಂತಿ. ಶ್ರೀಧಾಫಿ ಇದಕ್ಕೆ ಸೈಗುಟ್ಟಿದರೋ ಇಲ್ಲವೋ ಗೊತ್ತಿಲ್ಲ; ಕಾಂಗ್ರೆಸ್ ಹೈಕಮಾಂಡು ಮಾತ್ರ ಸೊಪ್ಪು ಹಾಕಲಿಲ್ಲ. ತಾನು ಗಂಡೆಂಬುದನ್ನು ತೋರಿಸುವ ಚಪಲ ಶ್ರೀ ಗಿರಿಯವರಲ್ಲಾಗದ.ಳಿದೀತೇ? ತಾನೂ ಒಬ್ಬ ಅಭ್ಯರ್ಥಿ ಎಂದು ದೀಢೀರ ಹೇಳಿಕೆ ನೀಡಿದರು; ರಾಜಿನಾಮೆ ಕೊಡಲೇ ಬೇಕಾಯ್ತು. ಈಗ ಈ ಸ್ಥಾನಕ್ಕೆ ಮುಂದಾರು? ಬಗ್ಜೀವನ ರಾಮ್..... ಸಿಂಡಿಕೇಟಿನಲ್ಲಿ ಪ್ರಸ್ತಾಪಿತರಾದವರು. ಗಜೇಂದ್ರ ಗಡಕರ್, ಡಾ.ಲ್ಲಾರಿಲಾಲನಂದಾ, ಮುರಾರ್ಜಿ ದೇಸಾಯಿ. ಛೆ ಎಷ್ಟಿದು ನೂತು? ಹೌದು, ಈ ಬಗ್ಗೆ ಈಗಲೇ ಅಭ್ಯರ್ಥಿಯನ್ನು ಅಶಸವ ಆಗಬೇಕಾಗಿಲ್ಲ. ಕಳೆಯಲಿ ಕೆಲವುದಿನ. ಈ ಐದು ವರ್ಷಗಳಲ್ಲಿ ಎಷ್ಟು ಹುದ್ದಿಗಳಷ್ಟು ನೋಡಬೇಕಾಗಿದೆಯೋ!

ಂ ಂ ಂ

ಶ್ರೀ ವಿ. ವಿ. ಗಿರಿಯವರು ಉಪರಾಷ್ಟ್ರಪತಿ ಸ್ಥಾನಕ್ಕೆ ರಾಜಿನಾಮೆ ಕೊಡಿದರು; ರಾಷ್ಟ್ರಪತಿ ಸ್ಥಾನವನ್ನು ತ್ಯಜಿಸಿದರು. ಆಗ ಉತ್ತರಾಧಿಕಾರ ಶಾಸನದಂತೆ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯ ಮೂರ್ತಿಯಾದ ಶ್ರೀ ಹಿದಾಯತುಲ್ಲಾ ಅವರು ಹಂಗಾಮಿ ರಾಷ್ಟ್ರಪತಿಯಾಗುವುದು, ಆನಿವಾರ್ಯವಾಯ್ತು. ಡಾ| ಜಾಕೀರರು ಮೃತ್ಯುಮುಖರಾಗುವ ದಕ್ಕೆ ಮೊದಲು ಇಂತಹ ಶಾಸನವಿರಲಿಲ್ಲ; ಲೋಕಸಭೆಯು ಕರೆದ ಅಧಿವೇಶನದಲ್ಲೇ ಉಪರಾಧಿಕಾರ ಶಾಸನವನ್ನು ಸ್ವೀಕರಿಸಲಾಯ್ತು. ಅನಂತರ ದೇಶದಲ್ಲಿ ನಡೆದ ಘಟನೆಗಳನ್ನು ನೋಡುವಾಗ, ಈ ಶಾಸನವಿಲ್ಲದೆ ಹೋಗುತ್ತಿದ್ದರೆ ಏನಾಗಬಹುದಿತ್ತು! ಎಂಬುದರ ಕಲ್ಪನೆ ಬರುತ್ತದೆ. ಶ್ರೀ ಗಿರಿಯವರು ರಾಜಿನಾಮೆ ನೀಡುವ ಮತ್ತು ಅಧಿಕಾರ ತ್ಯಾಗವೂ ಡುವ ಸಂಗತಿಯನ್ನು ಸರಕಾರ ಮೊದಲೇ ಊಹಿಸಿಕೊಂಡಿತ್ತೆ? ಅಥವಾ ಶ್ರೀ ಗಿರಿಯವರೇ ತನ್ನ ರಹಸ್ಯವನ್ನು ರಹಸ್ಯವಾಗಿ ಸ್ಫೋಟಮೂಡಿದರೆ? ನ್ಯಾಯೂಂದದ ಹಿರಿಯನೊಬ್ಬ ದೇಶದ ವರಿಷ್ಠನಾಗುವಂತಾದುದು ಯೋಗಾಯೋಗವಷ್ಟೆ.

ಂ ಂ ಂ

ಶ್ರೀ ನೀಲಂ ಸಂಜೀವ ರೆಡ್ಡಿಯವರು ರಾಷ್ಟ್ರಪತಿ ಸ್ಥಾನದ ಆಭ್ಯರ್ಥಿಗಳಾದರೂ ಮುಂದೆ ರಾಷ್ಟ್ರಪತಿಯೂ ಆದಾರು ಎಂದು ಹಾರೈಸೋಣ. ಆದರೆ, ಲೋಕ ಸಭೆಯ ಅಧ್ಯಕ್ಷಸ್ಥಾನವಿರುವಾಗ ಹುಡುಕಿ ತೆಗೆಯುವುದು? ಪಾಪ, ಜಾಕೀರರ ಮೃತ್ಯುವಿನ ಬಳಿಕ ಪ್ರಧಾನಿ ಇಂದಿರಾಗಾಂಧಿಗೆ ಚಿಂತೆಯೇ ಚಿಂತೆ. ಜಾಕೀರರು ರಾಷ್ಟ್ರಪತಿಯಾಗುವುದಕ್ಕೆ ಮೊದಲೇ ಹುಟ್ಟಿಕೊಂಡ ಈ ಚಿಂತೆ ಇನ್ನೂ ಹೆಚ್ಚುತ್ತಲೇ ಇದೆ. ಕೆಲವು ರಾಜ್ಯಗಳಲ್ಲಿ ಅಧಿಕಾರ ಕೈಬಿಟ್ಟು ಚಿಂತೆ, ರಾಯಭಾರಿ, ರಾಜ್ಯಪಾಲರ ಹುದ್ದೆಗೆ ಜನ ಅಯವ ಚಿಂತೆ, ರಾಜ್ಯಗಳ ಕೇಂದ್ರದ ವಿರುದ್ಧ ಎಬ್ಬಿಸುವ ಚಳುವಳಿಯ ಚಿಂತೆ, ಪ್ರತ್ಯೇಕ ತೆಲಂಗಾಣದ ಚಿಂತೆ.... ನೀಲಂರನ್ನು ರಾಷ್ಟ್ರಪತಿ ಹುದ್ದೆರಿಯೂಗಿ ಆಯ್ದು ನೇಲಾದರೂ ಚಿಂತೆ ತಪ್ಪಿತೆ? ಈಗ ಉಪರಾಷ್ಟ್ರಪತಿ ಸ್ಥಾನಕ್ಕೊಬ್ಬ ಬೇಕು; ಅದಕ್ಕೆ ಮೊದಲು ಲೋಕ ಸಭೆಗೊಬ್ಬ ಅಧ್ಯಕ್ಷನಾಗಬೇಕು. ಹಿಂದಿನ ಮೈಸೂರಾಧ್ಯಕೀಯದ ಖಾಡಾ ಪದಗಳಲ್ಲಿ ಹೇಳಿದಾಡಿ ನಿಸ್ಪೃಹ ಕಾರ್ಯಕರ್ತನಾಗಿಯೂ ಅಪಹಾಸದ ಭಯದಿಂದ ದೂರ ನಿಂತ ಶ್ರೀ ಗುಲ್ಜಾರಿಲಾಲ ನಂದಾರ ಹೆಸರು ಮೇಲೆ ಬಂದಿದ್ದು ಜಗಜ್ಜೀವನರಾಮರೂ ಪ್ರಧಾನಿಯವರೂ ಆವರ ನಿವಾಸಕ್ಕೆ ಹೋಗಿ ಪ್ರಯತ್ನ ಮೂಡಿದರು. ಫಿಪ್ಟಿಯಲ್ಲಿ ಶ್ರೀ ನೊರಾರ್ಜಿ ದೇಸಾಯಿಯವರನ್ನು ಹೋಲುವ ನಂದಾ ಈ ಕೊಡುಗೆಯನ್ನು ಸ್ವೀಕರಿಸಿದರೆ? ಪಕ್ಷದಲ್ಲಿ ಏಕತೆ ಮೂಡಿಳುವ ಅಗತ್ಯವಿದೆ; ನಿಮ್ಮಿಂದ ಅದು ಸಾಧ್ಯವೆಂದು ಹೆಂಬಾಲು ಬಿದ್ದರೆ. ನಂದಾ ಒಪ್ಪಿದರೂ ಒಪ್ಪಬಹುದು.

ಂ ಂ ಂ ಂ

ಕೇರಳದ ಮುಖ್ಯಮಂತ್ರಿ ಶ್ರೀ ಇ.ಎಂ. ಎಸ್. ನಂಬೂದರಿಪಾದ ಮತ್ತು ನೂಕ್ಲಿರ್ ಸ್ಟ್ ಕಮ್ಯುನಿಸ್ಟ್ ನಾಯಕ ಶ್ರೀ ಎ. ಕೆ. ಗೋಪಾಲನ್ನರು ಸಾಂವಿಧಾತಿಕವಾಗಿ ಅಧಿಕಾರದಲ್ಲಿದ್ದುಕೊಂಡೇ ಸಂವಿಧಾನವನ್ನು ಮುರಿಯುವ ಛಲತೊಟ್ಟು ಹೇಳಿಕೆ ಹೊರಡಿಸಿದ್ದು ಇದು ಪ್ರಜಾತಂತ್ರವಾದಿಗಳಲ್ಲಿ ಭೀತಿಗೆ ಕಾರಣವಾಗಿದೆ. ಕೇಂದ್ರ ಗೃಹಮಂತ್ರಿ ಶಾಖೆಯು ಈ ಹೇಳಿಕೆಯನ್ನು ಪರಿಶೀಲಿಸಿದೆ. ಶ್ರೀ ಫಂಬೂದರಿ ಪಾದರು ಗೃಹಮಂತ್ರಿಗಳನ್ನು ಗಂಭೀರ ವಿಷಯಗಳ ಬಗ್ಗೆ ಮಾತುಕತೆಗಾಗಿ ಕಾಣಬೇಕೆಂಬ ಕರೆ ಹೊರಟಿದೆ. ಈ ಹೇಳಿಕೆಯನ್ನು ಮುಖ್ಯಮಂತ್ರಿಗಳು ನಿರಾಕರಿಸದೆ ಹೋದರೆ, ಅದು ಸಂವಿಧಾನ ಬಾಹಿರವಾಗುವುದು. ಶ್ರೀ ನಂಬೂದಿರಿಯವರು ಎರಡು ವರ್ಷಗಳಿಂದಲೂ ಪೆಡೆದು ಬಂದ ದಾರಿ ಕೇಂದ್ರವನ್ನು ಪೇಚಿಕ್ಕಿ ಸಿಕ್ಕಿಸುವಂಥಾದೇ. ತನ್ನನ್ನ ಕೇಂದ್ರ ಪೇ ಮನೆಗೆ ಕಳಿಸಲಿ ಎಂಬ ಇರಾದೆಯೋ ಏನೋ! ಆದರೆ, ನಂಬೂದಿರಿಯವರ ಎಲ್ಲ ಕಸರತ್ತುಗಳನ್ನೂ ಕೇಂದ್ರವು ಆರಂಭದಿಂದಲೂ ನುಂಗಿಕೊಂಡೇ ಬಂದಿದೆ. ಕೇಂದ್ರದ ಈ ವರ್ತನೆಯನ್ನು ಕಂಡು ಕೊಂಡೇ ಶ್ರೀ ನಂಬೂದಿರಿ ಒಂದೊಂದೇ ಹೆಜ್ಜೆ ಹುಡಿಯುತ್ತ ಬಂದಿದ್ದಾರೆ.

ಂ ಂ ಂ ಂ

ಚಂದ್ರನಲ್ಲಿ ಮಾನವ ಕಾಲಿಟ್ಟಿಯಾಯಿತು. ಅಮೆರಿಕೆಗೆ ಚಂದ್ರಲೋಕ ವಿಜಿಸಿ ಜಯ ಮೂಡಿದ ಕೀರ್ತಿ ಲಭ್ಯವಾಯ್ತು; ಇನ್ನು ಚಂದ್ರನ ವೈಜ್ಞಾನಿಕ ಅಧ್ಯಯನಕ್ಕೆ ಅರಂಭವಾಡಬಹುದು. ಇದೇ ಸಮಯದಲ್ಲಿ ರಶ್ಯನ್ ಲೂನಾ ಕೂಡಾ ಚಂದ್ರನಲ್ಲಿ ಇಳಿಯಿತು. ಎರಡೂ ಸಂಪನ್ನ ದೇಶಗಳು ವಿಶ್ವಮ ಸ್ಥಾಪಿಸಿದವು. ಅಮೆರಿಕನ್ನರು ಚಂದ್ರನಲ್ಲಿ ನಡೆದು ಖಂದರೆ, ರಶ್ಯನ್ನರು ಲೂನಾನಾಮ್ನ ಭೂಮಿಂದಲೇ ಚಂದ್ರಕಲ್ಲಿಗೆ ಕಳಿಸಿ ಇಷ್ಟಿಂದಲೇ ಹಿಂದೆ ಕರೆಸಿಕೊಂಡರು. ಯಾರ ಸಾಹಸ ದೊಡ್ಡದು? ಪ್ರಾಯಃ ಎರಡೂ ದೊಡ್ಡವೇ. ಚಂದ್ರನ ಮೇಲ್ಮೈ ಕಲ್ಲುಗೆ ಇದ್ದಲು ಪುಡಿಯಂತೆ ದೆಯಂದೂ ಇದೂ ತೇವಭರಿತವಾಗಿದೆಯೆಂದೂ ಕೈಗೆ ಕಾಲಿಗೆ ಹತ್ತುಕೊಳ್ಳುತ್ತದೆ ಎಂದೂ ತಿಳಿದು ಖಂದಿದೆ. ಚಂದ್ರನಿಗೆ ಹೆಸರೇ ಮಂಜುಕಾಡ, ಹಿಮಕರ, ತಂಗದಿರ ಇತ್ಯಾದಿ. ಅದುದರಿಂದ ಅಲ್ಲಿ ತೇವವು ಮಿತಿಮೀರಿ ಇರಲೇಬೇಕು. ನಮ್ಮ ಪೂರ್ವಿಕರು ಚಂದ್ರಲೋಕ ಗಮನ ಮಾಡಿದ್ದಾರೆಯೋ ಇಲ್ಲವೋ ಸ್ಪಷ್ಟವಾಗಿ ಹೇಳುವಂತಿಲ್ಲ. ಆದರೆ, ಅವರಲ್ಲಿಯೂ ಚಂದ್ರನ ಬಗ್ಗೆ ಪೂರ್ಣ ಕಲ್ಪನೆಯಿತ್ತೆಂಬುದು ಖಂಡಿತ. ವಿಕ್ರಮಗಳಿಗೆ ಚಂದ್ರಲೋಕ ಪ್ರಾಪ್ತಿಯೂಡಲೆಂದು ಅವರು ಹಾರಯಿಸುತ್ತಿದ್ದರು; ಅವರ ಆಶಿಕರಣೆಯನ್ನು ನಾವೂ ಪೂಡುತ್ತಿದ್ದೇನೆ.

ಂ ಂ ಂ ಂ

ನಮ್ಮ ರಾಜ್ಯ ಕರ್ನಾಟಕ ಉರುಫ್ ಮೈಸೂರು ಆದರೂ ಇದಕ್ಕೆ ತನ್ನದೇ ಆದ ಒಂದು ನೀತಿಯಿದ್ದಂತಿಲ್ಲ. ಯೂವರಾಜ್ಯದ ಯೂವ ಫೀತಿ ತವಗೆ ಲಾಭವಾಗುತ್ತದೆಯೋ ಆ ಫೀತಿಯನ್ನು ಅನುಕರಿಸುವುದು ನವ್ಮ ಚಟ. ಮಹಾರಾಷ್ಟ್ರದಿಂದ ಸಾವಯವ ಬಂಧ ಸಡಿಲಿಸಿಯನ್ನು ಕಡತಂದೆವು, ತಮಿಳುನಾಡಿನಿಂದ ನೌಕರರ ವೇತನವನ್ನು ಗೊತ್ತು ಮಾಡಿದೆವು. ಕೇಂದ್ರದಿಂದಲೇ ಶಾಸಕರ ವೇತನ-ಭತ್ತೆಗಳನ್ನು ನಿರಿಸುವ ಕಲೆಯನ್ನು ವಿಡಂಬಿಸಿದೆವು.... ಈಗ ಆಂಧ್ರಪ್ರದೇಶದಿಂದ ಪ್ರತ್ಯೇಕತೆಯ ಬೇಡಿಕೆಯನ್ನು ತಂದು ಬಿಸುವ ಸಾಹಸ ಮಾಡುತ್ತೀದ್ದೇವೆ. ಒಂದು ವೇಳೆ ಪ್ರತ್ಯೇಕತೆಗೆ ಕೇಂದ್ರ ಪುರಸ್ಕಾರ ನೀಡದೆ ಹೋದರೂ "ತೆಲಂಗಾಣ ಅಭಿವೃದ್ಧಿ ಸಮಿತಿ"ಯಂತೆಯೇ 'ಹಳೆಯ ಮೈಸೂರು ಅಭಿವೃದ್ಧಿ ಸಮಿತಿಯನ್ನಾದರೂ ತಂದುಕೊಳ್ಳಬೇಕೆಂಬ ಹುಚ್ಚು ಪ್ರಯತ್ನ ಒಂದು ವರ್ಗದ್ದು. ಹೀಗಾದಲ್ಲಿ ತವಗೆ ತಾವೇ ಏಕಭಕ್ತಾಧಿಪತಿಗಳಾಗಿ ಹಿಂದಿನ ಮಹಾರಾಜರ ಮುಂದೆಯೂ ತಲೆಯೆತ್ತಿ ಎದೆ ಮುಂದೆ ಮಾಡಿ ನಡೆಯಬಹುದಲ್ಲಾ ಎಂಬ ಹೆಬ್ಬಾಯಿನ ಹೆಬ್ಬಯಕೆ. ಇದಕ್ಕೆಂದೇ ಹಳೆಯ ಮೈಸೂರಿಗೆ ಅಪ್ಯಾಯವಾಗಿ; ಅನ್ಯಾಯದ ವಿಚಾರಣೆಯಾಗಬೇಕು; ವಿಚಾರಣೆಗೆ ಸಮಿತಿ ಏರ್ಪಡಬೇಕು ಎನ್ನುವ ಇವರು ಸಮಿತಿಯಲ್ಲಿ ನಾವೇ ಸದಸ್ಯರಾಗಿರಬೇಕು ಎನ್ನುವುದಕ್ಕೂ ಹಿಂದು ಮುಂದು ನೋಡುವುದಿಲ್ಲ.

ಂ ಂ ಂ ಂ

ಮದರಾಸಿನ ಏರ್ ಲೈನ್ಸ್ ಅಧಿಕಾರಿಗೆ ತರುಣರಿಬ್ಬರು ಪತ್ರ ಖರೀದು ಏರ್‌ಲೈನ್ಸ್ ವಿಮಾನದಲ್ಲಿ ಚಂದ್ರಲೋಕಕ್ಕೆ ಪ್ರಯಾಣ ಬೆಳೆಸುವಾಗ ತಮಗೆ ಅಗ್ರ ಪ್ರಾಶಸ್ತ್ಯ ನೀಡಬೇಕೆಂದು ಸಂಪರ್ಕಿಸಿದ್ದಾರೆ. ಇಚ್ಛೆದ ಬಗ್ಗೆ ವಿವರ ಕೇಳಿದ್ದಾರೆ.

—ತಮ್ಮ ವಿಮಾನ ಚಂದ್ರಲೋಕ ಪ್ರಯಾಣ ಆರಂಭ ಮಾಡಿದ ಮೇಲೆ ಈ ಖರ್ಚಿಗೆ ಹಣವು ಮಳವಿ ಮಾಡುವಂತೆ ಮಾಡಬಹುದೇ? ಅಥವಾ ಮಳವಿ ಕಡೆದ ಬಟ್ಟೆಯನ್ನೇ ಸೀರೀತೆ?

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
I. A. 3/1969.
O. S. No. 591/1966.

ಪಬ್ಲಿಕ್ ಟೆಟ್ಟ — ಅರ್ಜಿದಾರರು.
ಮತ್ತು
ಬಿಡುಗು ಟೆಟ್ಟ ಸಹಾ — ಎದ್ರಿರು.
ಇವರೆಲ್ಲಗೆ

ಈ ಮೂಲ್ಕ ಉಸ್ತಿ ತಾಲ್ಲು ಸಿಲಾರು ಗ್ರಾಮದ ಪಬ್ಲಿಕ್ ಟೆಟ್ಟರ ಮಕ್ಕಳು ಸಲಾರು ಕರಾಯಪ್ಪೆರೆವರು ೬ನೇ ಎದ್ರಿ ಟೆಟ್ಟಿಲ ಟೆಟ್ಟು ೨ನೇ ಎದ್ರಿ ಅಸ್ಯಂಗೆ ಟೆಟ್ಟು ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲ್ಕಂಡ ಹಿಂಶೆ ದಾವೆಯ ಫಿರ್ಯಾದಿ ಪಬ್ಲಿಕ್ ಪ್ರಾಸಿಕ್ಯೂಟರಾದ ನಿಮ್ಮ ಹಾಜರಿ ಬಗ್ಗೆ ಮೇಲಿನ ಕೋರ್ಟಿನಲ್ಲಿ ತಾರೀಕು ೨೨.೭.೧೯೬೯ ನೇ ಇಟ್ಟಿದ್ದ ತಡಿ ದಿವಸ ಬೆಳಿಗ್ಗೆ ೧೦-೩೦ ಗಂಟೆಗೆ ಖುದ್ದು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಂತ್ರ ಪೂರ್ವ ವಕೀಲರ ದ್ವಾರಾ ಹಾಜರಾಗಿ ಉಚಿತರೀತಿಕ್ಕದ್ದು. ತಪ್ಪಿದ್ದಲ್ಲಿ ನಿಂದು ನ್ನು ನಿಮ್ಮಾ ಮೇಲೆ ಮೇಲಿನ ಫಿರ್ಯಾದಿಯೇಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

/By order of the Court/
N. M. Adyanthaya
Advocate for Applicant

Karkala.
23—7—69.

Edited, Printed & Published by K. Ba. Shetty, at the Navayuga Press, Udipi, S. India.

ನವಯುಗ

ಸ್ವಾತಂತ್ರ್ಯ ವಿಶೇಷಾಂಕ ೧೯೬೯



Navayuga Independence Day Special
1969

50 P

ನಿಮಗೆ ಕೊಡುಗೆಯ ಸಮಸ್ಯೆಯಿದೆಯೇ?

ನಿಮ್ಮ ಬಂಧುಗಳಿಗಾಗಲೀ ಮಿತ್ರರಿಗಾಗಲೀ, ನೀವು ಉಡುಗೊರೆ ಕೊಡಲು ಇಚ್ಛಿಸಬಹುದಾದ ಸಂದರ್ಭಗಳಲ್ಲೆಲ್ಲಾ

ಸಿಂಡಿಕೇಟ್ ಬ್ಯಾಂಕಿನ ಗಿಫ್ಟ್ ಸರ್ಟಿಫಿಕೇಟುಗಳು

ಅತ್ಯಂತ ಪ್ರಶಸ್ತವೆನಿಸುವುವು.

ಜಯಂಟ್ ಹೋಪ್ ಸರ್ಟಿಫಿಕೇಟುಗಳು: ಪಕ್ವಗೊಳ್ಳುವ ಅವಧಿ 5 ವರ್ಷ. ರೂ. 10, 100, 1000ಗಳ ಮೌಲ್ಯಗಳಲ್ಲಿ ದೊರೆಯುತ್ತವೆ.

ಮಕ್ಕಳ ಹಿತರಕ್ಷಣೆಯ ಸರ್ಟಿಫಿಕೇಟುಗಳು: ರೂ. 10, 25, 50, 100 ಮತ್ತು 1000 ಗಳ ಮೌಲ್ಯಗಳಲ್ಲಿ ದೊರೆಯುತ್ತವೆ.

ಈ ಸರ್ಟಿಫಿಕೇಟುಗಳನ್ನು ನೀವು ಹುಟ್ಟುಹಬ್ಬ, ಉಪನಯನ, ವಿವಾಹ, ಪರ್ವದಿನ ಮತ್ತು ಇತರ ಸಂತೋಷ ಸಂದರ್ಭಗಳಲ್ಲಿ ನಿಮ್ಮ ಬಂಧುಗಳಿಗೆ ಮತ್ತು ಆತ್ಮೀಯರಿಗೆ ಉಡುಗೊರೆಯಾಗಿ ನೀಡಲು ಇದು ಉತ್ತಮ ಸಾಧನ.

ಮಕ್ಕಳ ಹಿತರಕ್ಷಣೆಯ ಸರ್ಟಿಫಿಕೇಟುಗಳು ನಿಮ್ಮ ಮಕ್ಕಳ ಭವಿಷ್ಯದ ಅನುಕೂಲತೆಗಳಿಗೆ, ಮಕ್ಕಳ ಕಾಲೇಜು ವಿದ್ಯಾಭ್ಯಾಸಕ್ಕೆ, ಅವರ ವಿವಾಹಗಳಿಗೆ, ಅವರು ಪ್ರೌಢರಾದಾಗ ಯಾವುದಾದರೂ ಉದ್ಯಮಗಳಲ್ಲಿ ತೊಡಗುವುದಿದ್ದರೆ ಭಂಡವಾಳ ತೊಡಗಿಸಲು ಅತ್ಯಂತ ಪ್ರಯೋಜನದಾಯಕ. ನಿಮ್ಮ ಅವಶ್ಯಕತೆಗಳಲ್ಲಿ ಈ ಸರ್ಟಿಫಿಕೇಟುಗಳು ತುಂಬ ಪ್ರಯೋಜನಕಾರಿಯಾಗುತ್ತವೆ.

ಸಿಂಡಿಕೇಟಿನ ಇತರ ಭದ್ರತಾ ಠೇವಣಿ ಯೋಜನೆಗಳು:

ನಿವೃತ್ತಿ ಭದ್ರತಾ ಸರ್ಟಿಫಿಕೇಟುಗಳು — 20 ವರ್ಷ ಅವಧಿ.

ಸ್ವಯಂ ವಿಸ್ತರಣಾ ಸರ್ಟಿಫಿಕೇಟ್ — ವಾಯಿದೆ ನಂತರವು ತಾನಾಗಿ ಮುಂದುವರಿಯುವ ಠೇವಣಾತಿ.

ಸಮಾಜ ಭದ್ರತಾ ಠೇವಣಾತಿಗಳು — ನಿವೃತ್ತರಾದ ಮೇಲಿನ ಅವಶ್ಯಕತೆಗಳನ್ನು ಪೂರೈಸಲು ತಿಂಗಳು ಕಟ್ಟುವ ಯೋಜನೆ.

ಆಸ್ತಿ ತೆರಿಗೆ ಠೇವಣಾತಿ — ಆಸ್ತಿ ತೆರಿಗೆಗೆ ತೆರವು ಮಾಡಲು ಅನುಕೂಲವಾದ ಯೋಜನೆ.

ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ಸಿಂಡಿಕೇಟ್ ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಸಿಂಡಿಕೇಟ್ ಬ್ಯಾಂಕ್

"ಪ್ರತಿಯೊಂದು ಬ್ಯಾಂಕಿಂಗ್ ವ್ಯವಹಾರಕ್ಕೆ ಪ್ರತಿಯೋರ್ವನ ಬ್ಯಾಂಕು"

ಹೆಡ್ ಆಫೀಸು:
ಮಣಿಪಾಲ, ದಕ್ಷಿಣ ಭಾರತ.

ಟಿ. ಎ. ಪೈ,
ಕಸ್ತೂರಿಯನ್.

Printed, published & published by T. A. Pai, Manipal, South Kanara, Madras State.

ಸಂಪುಟ 48
ಸಂಚಿಕೆ 46 & 47

ನವಯುಗ

ಸ್ವಾತಂತ್ರ್ಯ ವಿಶೇಷಾಂಕ ೧೯೬೯

ಸಂಪಾದಕ
ಕೆ. ಜೊನ್ನಯ್ಯ ಶೆಟ್ಟಿ

ಅಗ್ನಿಪರೀಕ್ಷೆಯ ವರ್ಷ

ಸ್ವಾತಂತ್ರ್ಯದಿನ ಮರಳಿ ಬಂದಿದೆ; ರಾಜಚಕ್ರ ಉರುಳುತ್ತಿರುವಾಗ ಈ ದಿನವೂ ಬಂದೇ ತೀರಬೇಕು ತಾನೆ? ಈ ವರ್ಷ ರಾಷ್ಟ್ರಜೀವನದ ಹಾದಿಯಲ್ಲಿ ವಿಶೇಷ ಮಹತ್ವವಿದೆಯೆ? ದೇಶದ ಒಳಗೂ ಹೊರಗೂ ನಡೆದ ಚಿತ್ರ-ವಿಚಿತ್ರ ಘಟನೆಗಳಲ್ಲೇ ಈ ವರ್ಷದ ವೈಶಿಷ್ಟ್ಯವೆನ್ನೋಣವೆ? ಎರಡೂ ಸರಿ; ಎರಡೂ ತಪ್ಪು ಎಂಬುದೇ ಕ್ಷೇಮಕರವೆ?

ನಮ್ಮ ಭಾರತವೀವರ್ಷ ಪ್ರಜಾಶಕ್ತಿಯ ಅಗ್ನಿಪರೀಕ್ಷೆಯಲ್ಲೇ ಕಳೆಯಿತೆಂದು ಧಾರಾಳವಾಗಿ ಹೇಳಬಹುದು. ಉತ್ತರ ಭಾರತದ ಹಿಂದಿನ ರಾಜ್ಯಗಳಲ್ಲಿ ವಿಧಾನಸಭೆಗಳಿಗೆ ನಡೆದ ೦೬ನೆಯ ಚುನಾವಣೆಗಳು ನಡೆದ ರೀತಿ ಶಾಂತವಾಗಿತ್ತು. ಪಂಜಾಬು, ಮತ್ತು ಒಂಗಳಗಳಲ್ಲಿ ಮಾತ್ರ ಕಾಂಗ್ರೆಸ್ಸೇತರ ಸಂಯುಕ್ತ ರಂಗವೇ ಅಧಿಕಾರಕ್ಕೆ ಬಂತು. ಉತ್ತರ ಪ್ರದೇಶದಷ್ಟೆ ಬೇಳೆನ ಬಹು ಮಂತ್ರದಿಂದ ಕಾಂಗ್ರೆಸ್ಸು ಕಳೆದುಕೊಂಡ ಗದ್ದುಗೆಯನ್ನು ಮತ್ತೆ ಪಡೆಯಿತ. ಬಿಹಾರದಲ್ಲಿ ಕಾಂಗ್ರೆಸ್ಸು ಸಾಯಲಪ್ಪದ ಸಂಯುಕ್ತ ರಂಗವು ಅಧಿಕಾರ ಪಡೆಯಿತ, ಪಂಗ್ರಂಸಿತು, ಮತ್ತೆ ಕಾಂಗ್ರೆಸ್ಸೇತರರ ರಾಜ್ಯ ೧೦-ದಿನ ನಡೆದು ನಿಂತಿತು. ರಾಷ್ಟ್ರಪತಿ ಆಳಿಕೆ ಅನಿವಾರ್ಯವಾಯಿತು. ಮಧ್ಯಪ್ರದೇಶದಲ್ಲಿ ಗೋವಿಂದ ನಾರಾಯಣ ಸಿಂಗರ ಶಕ್ತ ಸಂಯುಕ್ತದಳದ ಸರಕಾರವನ್ನು ತಾವೇ ಉರುಳಿಸಿದರು. ಕಾಂಗ್ರೆಸ್ ಈಗಲ್ಲಿ ಭದ್ರ ಸರಕಾರ ಸ್ಥಾಪಿಸಿತು. ಪಾಂಡಿಚೇರಿಯಲ್ಲಿ ದ್ರ. ಮು ಕ. ನೇತೃತ್ವದ ಸಂಯುಕ್ತ ಸರಕಾರವಿದೆ. ಕೇರಳದಲ್ಲಿ ಸಂಪುಟಕ್ಕೆ ಊರುಗೋಲು ನೀಡುವಲ್ಲಿ ನಂಬೂದಿರಿ ಸಮರ್ಥರಾಗಿದ್ದಾರೆ. ಸರಕಾರಗಳು ಪ್ರಜಾಶಕ್ತಿಗೆ ಕವಲಾಗಿ ಕಾರ್ಯವೆಸಗಲಿ, ಬಿಡಲಿ, ಬಿಹಾರ ಪೊಂದನ್ನು ಳಿದು ಬೇರೆಲ್ಲೆಡೆಯೂ ಚುನಾಯಿತ ಪ್ರತಿನಿಧಿಗಳ ಸರಕಾರವಿದೆ ಯೆಂಬುದು ಈ ವಿಷಯದ ಸಮಾಧಾನ.

ಕಾಂಗ್ರೆಸ್ ಪಕ್ಷದ ಆಂತರಿಕ ಛಿದ್ರಾಭಿಪ್ರಾಯ ವರ್ಷದ ಕೊನೆಯಲ್ಲಿ ಬೆಚ್ಚಿದೆ. ಪಕ್ಷೇಯ ಎಡ ಬಲ ಪಂಥಗಳ ಬಿರುಕು ಕಡಿವೆಯಾಗಿದೆ. ಎಐಸಿಸಿಯು ಬ್ಯಾಂಕು ರಾಷ್ಟ್ರೀಕರಣ ನೀತಿಯನ್ನು ಸ್ವೀಕರಿಸಿದ್ದೇ ತಡ ಪ್ರಧಾನಿ ಇಂದಿರಾ ಗಾಂಧಿಯವರದನ್ನು ಕಾರ್ಯರೂಪಕ್ಕೇ ತಂದ ಬಿಟ್ಟರು. ಇದರಲ್ಲಿ ಯಾರೂ ಸಫರಿಸುವುದಿಲ್ಲ, ಆದರೆ, ಉಪ ಪ್ರಧಾನಿಯೂ ವಿತ್ತಮಂತ್ರಿಯೂ ಆದ ಮುಂರ್ಜಿಯವರಿಂದ ಆರ್ಥ ಖಾತೆಯನ್ನು ಕಿತ್ತು ಕೊಂಡು ಇದನ್ನು ಸಾಧಿಸಿದ ವಿಧಾನದಿಂದ ಒಂದು ಪಂಥ ಬಲ ನೆಂದಿತು. ಇಂದಿರಾಗಾಂಧಿ ತನ್ನ "ವಿರೋಧಿ"ಗಳಿಗೆ ಛೀಡುತ್ತಿರುವ ಸಂಘಾತಾನ್ವಿತ ದಿಗ್ಬ್ರಮೆಗೊಳಿಸಿತ್ತಿದೆ. ಅದರೂ ಕಾಂಗ್ರೆಸ್ಸು ಒಂದಾಗಿಯೇ ಇದೆ. ರಾಷ್ಟ್ರಪತಿ-ಉಪರಾಷ್ಟ್ರಪತಿ ಚುನಾವಣೆಯಲ್ಲಿ ಒಂದಾಗಿ ದುಡಿಯುತ್ತಿದೆ

ರಾಜ್ಯ-ಕೇಂದ್ರ ಸರಕಾರಗಳ ಆಡಳಿತಾ ವಿಧಾನವು ಮೂವತ್ತೂರಿನಂತೆಯೇ ನಡೆದಿದೆ. ಜನತೆಯು ಅಶೆಕ್ಷಿತರಗಳನ್ನು ಹೆಚ್ಚಿನ ಸರಕಾರಗಳು ಈಡೇರಿಸುವಲ್ಲಿ ಅಶಕ್ತವಾಗಿವೆ, ಕಾರಣ ಪ್ರಪ್ಪ ಅಧಿಕಾರಾರೂಢ ಪಕ್ಷಗಳು ತಮ್ಮಲ್ಲಿ ಆಂತರಿಕ ತಿಕ್ಕಾಟಗಳಿಂದ ದಿಕ್ಕುಡೆಯುತ್ತಿರುವಾಗ ತಮ್ಮ ಸಿಂಹಾಸನವನ್ನು ಬಲಪಡಿಸುವುದರಲ್ಲಿಯೇ ಅವು ನಿಮಗ್ನವಾಗಿವೆ. ಕೊನೆಗೂ ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಪ್ರಸವವಾಯ್ತು. ಇದೆ ಮೂರು ವರ್ಷಗಳಲ್ಲಿ ಪಂಚವಾರ್ಷಿಕ ಯೋಜನೆಯೆ ಬ್ಲವಿದ್ದುದರಿಂದಾಗಿಯೋ ಆಥವಾ ಅಧಿಕ ಉತ್ಪಾದನೆಯ ಪರಿಣಾಮವಾಗಿಯೋ ಈಗ್ಗೆ ಕೆಲವು ತಿಂಗಳ ಗಳಂದ ಆವಶ್ಯಕ ವಸ್ತುಗಳ ಬೆಲೆವಿತಿ ವೀರ ಏಲ್ಲ ಪ್ರಾಸಾನಾನ್ನ ನಿರೆ ಇದ ಸೌವ್ಯಕಂವತ್ಸರ ನೀಡಿದ ಸುಫಲವಿಸುಹದ, ಅಥವಾ ಇಂದಿರಾ ಗಾಂಧಿಯವರ ಸೂಕ್ಷ್ಮ ನಾಯಕತ್ವದ ಪರಿಣಾಮವಿದ್ದರೂ ಇರಬಹುದು.

ವಿದ್ಯಾಸಚಿವ ವಿತ್ತಮಂತ್ರಿಯೂ ಆಗಿದ್ದ ಎರಡೇ ವರ್ಷಗಳಲ್ಲಿ ಪ್ರಪ್ಪತ್ತು ವರ್ಷಗಳ ಕೀರ್ತಿಗಳಿಸಿದ ಶ್ರೀ ಅಣ್ಣಾ ಬೊರೈಯವರನ್ನು ತಮಿಳರು ಮೂತ್ರ ವಲ್ಲ, ಭಾರತೀಯರೆಲ್ಲರೂ ಕಳೆದು ಕೊಂಡರು. ರಾಜ್ಯೇತರ ಸೀತ ನಿಲುಮೆಯಲ್ಲಿನ ಛಿನ್ನತೆಗಳೇನೇ ಇರಲಿ, ಅಣ್ಣಾ ಜನತಾಂತ್ರಿಕಾಯಕರಾಗಿ, ಮಾರ್ಗದರ್ಶಕರಾಗಿ ವೇದಿಕಾಡಿದರು. ಅವರ ಛಿದನ ಹೃದಯ ಘಾತ. ಅಣ್ಣಾಸಂತರ ದ್ರಾ. ಮು. ಕ. ಪಕ್ಷವೂ ಛಿದ್ರಗೊಳ್ಳುವುದಿಂದು ಹೇಳಲಾಗಿತ್ತು ಆದರೆ, ಇತ್ತೀಚೆಗೆ ಶ್ರೀ ಕರುಣಾನಿಧಿ ವಕ್ತು ಶ್ರೀ ನೆಡಂಚಿಳಿಯನ್ರವರ ನಡುವೆ ಎರ್ಪಟ್ಟ ಸಮರಸ ನನ್ನು ಜನದಲ್ಲಿ ಪ್ರಜಾತಂತ್ರದ ಸಾರ ಬಲವಾಗಿ ಬೇರೂರುವುದಕ್ಕೆ ಸಾಕ್ಷಿ.

ಒಬ್ಬರ ನಂತರ ಇನ್ನಿಬ್ಬರು ಹೀಗೆ ಇಬ್ಬರು ಪ್ರಧಾನಿಗಳನ್ನು ಕಳೆದುಕೊಂಡ ಅನುಭವ ನವ ನಾಗಿತ್ತು. ಈ ವರ್ಷ ರಾಷ್ಟ್ರಪತಿಗಳನ್ನೂ ನಾವು ಕಳೆದುಕೊಂಡೆವು, ಉಪರಾಷ್ಟ್ರಪತಿಯೂ ರಾಜೀನಾಮೆ ನೀಡಿದರು. ಲೋಕ ಸಭಾಧ್ಯಕ್ಷರೂ ತ್ಯಾಗಪತ್ರವನ್ನರ್ಪಿಸಿದರು. ಹೀಗೆ ಏಳಕಾಲದಲ್ಲಿ ಮೂರೂ ಉನ್ನತೋನ್ನತಪದವಿಗಳು ತೆರವಾದ ಶನ್ನಿವೇಶ ವ್ಯಾಯಃ ಮತ್ತಾವ ಪ್ರಜಾತಕ್ತಿಯಲ್ಲಾ ಇರಲಾರದು; ಲೋಕಸಭೆಯ ಉಪಾಧ್ಯಕ್ಷರೂ ಪದ್ಮದಲ್ಲೇ ರಾಜೀನಾಮೆ ನೀಡಲಿದ್ದಾರೆ. ಆಗ ಚುನಾವಣೆಗಳು ನಡೆದ ಮೂರನೆಯ ವರ್ಷದಲ್ಲಿಯೇ ರಾಜೀನಾಮೆಯ ಪ್ರಕರಣಗಳು ತಲೆದೋರುವಂತಾದುದು ನಮ್ಮ ಪ್ರಜಾತಕ್ತಿಗೊಂದು ಅಗ್ನಿಪರೀಕ್ಷೆಯೇ. ಆದರೂ ಶಾಸನ ಬಲದಿಂದ ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರನ್ನೇ ರಾಷ್ಟ್ರಪತಿಯೆಂದ ಹೆಸರಿಸಿ ನಮ್ಮ ಪ್ರಜಾ ತಂತ್ರ ನಡೆದಿದೆ.

ಸತ್ಪಾತ್ರ ಜಾಕೀರ್ ಹುಸೇನರನ್ನು ರಾಷ್ಟ್ರಪತಿಯಾಗಿ ಪಡೆದಾಗ ಜನತೆ ಅವರಿಂದ ಒಳ್ಳೆಯದನ್ನು ಫಿರಾಪೇಕ್ಷಿಸಿತ್ತು. ಎರಡೇ ವರ್ಷಗಳಲ್ಲಿ ಅವರು ಅಗಲಿ ಪೋಗುವಂತಾದುದು ದೇಶದ ದುರ್ವಿಷ್ಟ. ಉನ್ನತ ವ್ಯಕ್ತಿತ್ವದ, ಆದರ್ಶ ವ್ಯಕ್ತಿಯ ಶ್ರೇಷ್ಠ ಪುರುಷನಿಗೆ ಇಂದು ಶ್ರದ್ಧಾಂಜಲಿಯರ್ಪಿಸಲೇಬೇಕು. ಅವರ ಜಾತ್ಯತೀತ ಧೋರಣೆ, ದೇಶ ಸೇವಾ ನಿಷ್ಠೆ ಮತ್ತು ಅದಮ್ಯ ಉತ್ಸಾಹಗಳು ಪುನರ್ನವ ಪ್ರಾ|ಜಕರ್ ಸಾಹೇಬರ ವಿಧನ ದಿಂದಾಗಿಯೇ ದೇಶದ ಪ್ರಜಾತಂತ್ರ ತೀವ್ರ ಅಗ್ನಿ ಪರೀಕ್ಷೆಗೊಳಗಾಗುವಂತಾಯ್ತು. ಇದರಲ್ಲಿ ನಾವು ಯಶಸ್ವಿಗಳಾಗಿವೆಂಬ ದೃಢ ವಿಶ್ವಾಸವಿದೆ.

ಸ್ವಾತಂತ್ರ್ಯ ಗಳಿಸುವುದಕ್ಕೆ ನೆಂದಲು

(ಇಪ್ಪತ್ತೆಂಟನೇ ಪುಟ ನೋಡಿ)

ಶ್ರೀ ಎಂ ಸುಂದರರಾಮು ಶೆಟ್ಟಿ

ದೊಡ್ಡ ಗುರಿಯಿಟ್ಟುಕೊಂಡು ಬ್ಯಾಂಕನ್ನು ವೃದ್ಧಿಯಿಂದ ಅಭಿವೃದ್ಧಿ ಪಥದತ್ತ ಮುನ್ನಡೆಯುತ್ತಿರುವ ಮಹಾ ಸಾಧಕ ಹಾಗೂ ವಿನಯವಿಡೀ ಕಾರ್ಯೋನ್ಮುಖ ರಾದ ವಿಜಯ ಬ್ಯಾಂಕಿನ ಅಧ್ಯಕ್ಷರು.

ಸಂದೇಶ



ಭಾರತ [illegible]
ವನಿತೆ ವಿನಾ ನನಸಿ [illegible]
ಪಿಯು ನಮಂಗ ವಾಗ್ದೇ
ಕಯು ಈ ವಸ್ತ್ರ ಹಿಗ್ಗಿ
ಸಂಕಲ್ಪವನ್ನು ಕರಗದೆ
ನಾವು ಕಂಕಣ ಪತಿ ಪಡತಿ
ದ್ದಾನೆ ಪ್ರ ಯಾ ಣ ರಾಜಿ
ಸ್ವಾತಂತ್ರ್ಯ ಭಾರತಾಂಬೆ ಕರಂ
ದನ ನವಂ ಲಂಗಪ್ರಭಾ ಲಂ ಮಿ
ಪ್ರಿಯವ ದ ಲಂತ್ರವನಿ
ಧೈಯಗಳಂದ ನಾವಿ ನುಡಿಗಳ
ಸಾಮಾಜಿಕ ನ್ಯಾಯಕ್ಕೆ ಪ್ರೇರಿ
ಸುತ್ತಿದೆ

ವಿಶೇಷ ಸಂಚಿಕೆಯನ್ನು ಸರ್ವರೂ ಮೆಚ್ಚಲೆಂದು ಆಶಿಸುತ್ತೇನೆ

'ವಿಧಾನ ಸೌಧ'
ಬೆಂಗಳೂರು ೧
ದಿನಾಂಕ 26—7—1969

ವೀರೇಂದ್ರ ಪಾಟೀಲ
ಮುಖ್ಯ ಮಂತ್ರಿ
ಮೈಸೂರು ಸರ್ಕಾರ



ಶ್ರೀ ಟಿ. ಎ. ಪೈ

ಸಿಂಡಿಕೇಟ್ ಬೇಂಕಿನ ಚೆಯರ್‌ಮೆನ್ ಆಗಿರುವ ಇವರು ರಾಷ್ಟ್ರೀಕೃತವಾದ ಪದಿನಾಲ್ಕು ಬೇಂಕುಗಳ ಮುಖ್ಯ ಆಡಳಿತದಾರರಾಗಿ ಪೇ ಮುಕಗೊಳ್ಳುವ ಸಂಭವವಿದೆ ಎಂದು ತಿಳಿದು ಬರುತ್ತದೆ.

ವಿಶ್ವಾಸಾರ್ಹ ನೀರಾವರಿಯ ವ್ಯವಸ್ಥೆಗೆ

ಜಗದ್ವಿಖ್ಯಾತವಾದ

ಹಿಂದುಸ್ಥಾನ್ ಬ್ರೌನ್ ಬೊವೆರಿ

ಮೋಟಾರು ಪಂಪುಸೆಟ್ಟುಗಳು

ಮತ್ತು

ಕಟ್ಲರ್ ಹ್ಯಾಮರ್ ಸ್ಟಾರ್ಟರುಗಳನ್ನೇ

ಅರಿಸುತ್ತಾರೆ.

ನಿಮಗೆ ಬೇಕಾದ ಪಂಪುಸೆಟ್ಟುಗಳನ್ನು
ಕೆಳಗಿನವರಲ್ಲಿ ಸದಾ ದಾಸ್ತಾನಿನಿಂದ ಪಡೆಯಬಹುದು.

Sales & Service

VICTOR TRADING CORPORATION

FALNIR ROAD · · MANGALORE-1

Phone 5737

GOPAL FARM ENGINEERS

FALNIR ROAD · · MANGALORE-1

Phone 5757

You need . . . . .

A Friend with whom you can deposit and from whom you can borrow

A Philosopher who teaches the philosophy of how best you can earn

AND

A Guide for all those who wish our **Country** to be self-sufficient in the matter of **food**

All in one.....

The S.C.C.C. Bank Ltd.

MANGALORE

B. Prabhakar Rao,
M A, B L.,
Vice-President.

B. Narayana Nayak,
President

N. Venkappa Rai,
Secretary.

"BICCO" FOOD PRODUCTS

FARM FRESH AND ECONOMIC

RANGE OF PRODUCTS: Squashes, Crushes, Syrups, Canned Pineapple and Mango Slices, Pineapple Juice, Mango Pulp, Fruit Cocktail, Jams, Pickles, Ginger Preserve, Sweets and Toffees etc

Manufacturers:

BHARAT INDUSTRIAL AND CANNING CO. LTD.

P. O. KAUP (S. KANARA)

Gram: "BICCO" Phone: 29

Sales Depot: Res. 41

Bhavanthi Street, Mangalore.

Phone: 3266

ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ, ಲಿ., ಮಂಡ್ಯ.

ಪೊಟಾಷ್ ಲವಣದ ಉಪಯೋಗ

ಮಂಡ್ಯ ತಾಲ್ಲೂಕಿನ ರೈತರು ಕೃತಕ ಗೊಬ್ಬರಗಳ ಉಪಯೋಗದ ವಿಷಯದಲ್ಲಿ ಬಹಳ ಮುಂದುವರಿದಿರುತ್ತಾರೆ ಅಮೋನಿಯಂ ಸಲ್ಫೇಟು, ಯೂರಿಯ ಮುಂತಾದ ಸಾರಜನಕ ಗೊಬ್ಬರಗಳನ್ನು, ಸೂಪರ್ ಫಾಸ್ಫೇಟ್‌ನಂತಹ ರಂಜಕ ಗೊಬ್ಬರಗಳನ್ನು ಸಾಮಾನ್ಯವಾಗಿ ಎಲ್ಲರೂ ಎಲ್ಲಾ ಬೆಳೆಗಳಿಗೂ ಉಪಯೋಗಿಸುತ್ತಾರೆ. ಆದರೆ ಪೊಟಾಷ್ ಲವಣವನ್ನು ಅಗತ್ಯ ಪ್ರಮಾಣದಲ್ಲಿ ಉಪಯೋಗಿಸುತ್ತಿಲ್ಲ. ಮಿಶ್ರ ಗೊಬ್ಬರಗಳಲ್ಲಿ ನಾಕಷ್ಟು ಪ್ರಮಾಣದ ಪೊಟಾಷ್ ಸೇರಿರುತ್ತದೆ. ಮಿಶ್ರಗಳನ್ನು ಉಪಯೋಗಿಸದೇ ಇತರ ಗೊಬ್ಬರಗಳನ್ನು ಹಾಕುವವರು ಅಗತ್ಯ ಪ್ರಮಾಣದ ಪೊಟಾಷ್ ಲವಣಗಳನ್ನು ಹಾಕುವುದನ್ನು ಕಡ್ಡಾಯವಾಗಿ ಅಭ್ಯಾಸ ಮಾಡ ಬೇಕಾಗಿದೆ

ಪೊಟಾಷ್ ಲವಣಗಳಿಂದ ಈ ಮುಂದಿನ ಅನುಕೂಲಗಳಿವೆ.

1) ಪೈರು ಬೀಳುವುದಿಲ್ಲ
2) ಜಳ್ಳು ಕಡಿಮೆಯಾಗುತ್ತದೆ.
3) ಪೈರು ಒಂದೇ ಕಾಲದಲ್ಲಿ ಕಟಾವಿಗೆ ಸಿದ್ಧವಾಗುತ್ತದೆ.
4) ಕಬ್ಬಿನಲ್ಲಿ ಸಕ್ಕರೆಯ ಅಂಶವು (ಬಸಿ) ಹೆಚ್ಚುತ್ತದೆ
5) ಪೈರುಗಳ ರೋಗ ನಿರೋಧಕ ಶಕ್ತಿಯು ಅಭಿವೃದ್ಧಿಯಾಗುತ್ತದೆ.

ಆದುದರಿಂದ ರೈತರು ಪೊಟಾಷ್ ಸೇರಿರುವ ಮಿಶ್ರಣಗಳನ್ನಾಗಲಿ, ಸದಾ ಗೊಬ್ಬರ ಗಳ ಜೊತೆಗೆ ಪೊಟಾಷ್ ಲವಣಗಳನ್ನಾಗಲೀ ಕಡ್ಡಾಯವಾಗಿ ಉಪಯೋಗಿ ಸುವುದು ಅಗತ್ಯವಾಗಿದೆ. ಅದರ ಉಪಯೋಗ, ಎಂತಹ ಪ್ರಮಾಣ ಮುಂತಾ ದುವುಗಳ ಬಗ್ಗೆ ಮಾಹಿತಿಗಳನ್ನು ಸೇವಾ ಸಹಕಾರ ಸಂಘಗಳಿಗೆ ಒದಗಿಸಲಾಗಿದೆ. ಸರ್ವರೂ ಇದರ ಉಪಯೋಗವನ್ನು ಮರೆಯದೇ ಮಾಡಬೇಕೆಂದು ವಿನಂತಿ.

ಕೆ. ಎಲ್. ಭಟ್ಟ,
ವ್ಯವಸಾಯಾಧಿಕಾರಿ.

ಎಸ್. ಚನ್ನಕೇಶವಯ್ಯ,
ಕಾರ್ಯದರ್ಶಿ.

ಮಹಾತ್ಮಾ ಗಾಂಧಿ

ಅನ್ಯಾಯ ಮತ್ತು ದ್ವೇಷವನ್ನು ಸತ್ಯಾಗ್ರಹದ ಮೂಲಕ ಎದುರಿಸಿದ ನೈತಿಕ ವೀರ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಪ್ರಾಪ್ತಿಯ ಗುರಿಯಲ್ಲಿ ಯಶಸ್ವಿಯಾದರು. ರಾಮರಾಜ್ಯ ಸ್ಥಾಪನೆಯಲ್ಲೂ ಇದು ಸಫಲವಾಗಬೇಕು.

ಲೇಖಕರು:

ಗಾಂಧೀಜಿಯು ಹುಟ್ಟಿದ ಇರುವುದು ತಾನು ಕೂಡುವುದಾದರೊಂದು ವಿಶಿಷ್ಟ ಸಂಘ ಶಿಕ್ಷಣ ಅಥವಾ ದರ್ಶನದ ಸಂಸ್ಥಾಪಕನೆಂದು ಹೇಳಿಕೊಳ್ಳದಿರುವುದರಲ್ಲಿ. ಅವರು ಸದಾ ಪ್ರೇಮ ಸತ್ಯ ಮತ್ತು ಅಹಿಂಸಾ ತತ್ವಗಳಿಗೆ ಅಂಟಿಕೊಂಡಿದ್ದರಲ್ಲದೆ ಅವುಗಳನ್ನು ಅನ್ವಯಿಸಿದರಲ್ಲಿಯೇ ತನ್ನ ಜೀವನವನ್ನು ಕಳೆದರು. ಅವನ್ನು ಅವರು ಸತ್ಯದ ಶೋಧನೆಯೆಂದು ಕರೆಯುತ್ತಿದ್ದರು. ಅವರ ಜೀವನ ಪರ್ಯಂತರ ಈ ಸಂಶೋಧನೆಯೇ ಅವರ ಜೀವನದ ಧ್ಯೇಯವೇನೆಂಬುದಕ್ಕೆ ಸಿಹಿವಾದ ಉದಾಹರಣೆಯಾಗಿದೆ.

ಅಹಿಂಸೆ, ಸತ್ಯ, ಅಸ್ತೇಯ ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳು ಯೋಗಿ ಆದ ಪತಂಜಲಿಯು ಹೇಳಿದ್ದಾನೆ. ಪ್ರಪಂಚದ ವಿಷಯದಲ್ಲಿ ಕಡೆಗೆ ಹೆಚ್ಚು ವಾಲಿಕೊಂಡಿರುವ ನವ ಗೆ ಜೀವನದಲ್ಲಿ ಇಂಥ ತತ್ವಗಳನ್ನು ಅನ್ವಯಕ್ಕೆ ತರುವುದು ಅಸಾಧ್ಯವೆಂದು ತೋರುವುದು. ಈ ಜಡತ್ವಕ್ಕೆ ಕಾರಣ ಮೊಂಡುತನದಿಂದ ಕೂಡಿದ ಇಂಥ ಒಟ್ಟು ಮನಸ್ಸನ್ನು ಬಾಳಿ ಬದುಕಿದ್ದನೆಂಬುದನ್ನು ಮುಂದಿನ ಪೀಳಿಗೆಗೆ ನಂಬುವುದು ಕಷ್ಟವಾಗಬಹುದು.

ಆದರೆ ಸತ್ಯ ಮತ್ತು ಅಹಿಂಸೆಯನ್ನು ಆಧಾರವನ್ನಾಗಿ ಇಟ್ಟುಕೊಂಡಿದ್ದಲ್ಲದೆ ಪಣತೊಟ್ಟಿದ್ದಲ್ಲದೆ ಎಲ್ಲಾ ಎಳೆಗೆಗಾಗಿ ಪ್ರಯೋಗವನ್ನು ಸಾಧಿಸಿದರು. ತನ್ನ ಜೀವನದ ಧ್ಯೇಯಕ್ಕೆ ಗುಣವಾಗಿ ಪರಾಕ್ರಮ ನಮ್ಮ ರಾಷ್ಟ್ರವನ್ನು ದಾಸ್ಯದಿಂದ ಬಿಡುಗಡೆ ಆವರ ಮಹತ್ಕಾರ್ಯದಲ್ಲಿ ಜನತೆ ಸ್ವಾತಂತ್ರ್ಯದ ಕರೆಗೆ ಎಚ್ಚೆತ್ತರು. ಶತಮಾನಗಳಿಂದ ವಿದ್ಯಾಲಕ್ಷ್ಮಿಯೇ ವೈಮರೆತ ಭಾರತವನ್ನು ಕಾಲುಚಕ್ರ ನವ್ಯ ಪಾಶ್ಚಿಮಾತ್ಯ ವೈಭವ ಹಾಗೂ ಧರ್ಮ ಪೂರ್ವಜರ ಪರಂಪರೆಯ ಮಹತ್ವದ ಅನುಭವವನ್ನು ಮೂಡಿಕೊಟ್ಟರು. ಆದರೆ, ಸಾಂಪ್ರದಾಯಿಕ ಅರ್ಥದಿಂದ ಗಾಂಧೀಜಿಯೊಬ್ಬ ರಾಜಕಾರಣಿಯೆಂದು ಅಭಿಪ್ರಾಯಪಡುವುದು ಸರಿಯಲ್ಲ. ಅವರೊಬ್ಬ ಧಾರ್ಮಿಕ ಪುರುಷರು, ಅಧ್ಯಾತ್ಮ ಚಿಂತಕರು ಮತ್ತು ನೈತಿಕ ಯೋಧರು. ಅವರನ್ಯಾಯದ ಮೇಲಿರುವ ಶ್ರದ್ಧೆ ಮತ್ತು ಸತ್ಯದ ಕಡೆಗೆ ಇರುವ ಅನುರಾಗವೇ ಅವರನ್ನು ರಾಜಕಾರಣದ ಪ್ರೇರಕ್ಕೆ ತಂದದ್ದು. ಅಧಃಪತನದಲ್ಲಿರುವ ಜನತೆಯ ಸೇವೆಯೇ ಒಂದು ಧಾರ್ಮಿಕ ಕರ್ತವ್ಯವೆಂದು ಅವರು ಅಭಿಪ್ರಾಯಪಟ್ಟಿದ್ದರು.

(ಇಪತ್ತಾರನೇ ಪುಟ ನೋಡಿರಿ)

ಎಲ್ಲರೂ ದುಡಿಯಬೇಕು

ಎಲ್ಲಿಯ ತನಕ ನಮ್ಮ ದೇಶದಲ್ಲಿ ಸುದೃಢವಾದ ಪ್ರತಿಯೊಬ್ಬ ಗಂಡಸು ಹಾಗೂ ಹೆಂಗಸಿಗೆ ಕೆಲಸ ಹಾಗೂ ಅನ್ನ ದೊರೆಯುವುದಿಲ್ಲವೋ ಅಲ್ಲಿಯವರೆಗೆ ನಾವು ವಿಶ್ರಾಂತಿ ಪಡೆಯುವುದು ಮತ್ತು ಹೊಟ್ಟೆತುಂಬ ಉಣ್ಣುವುದು ತಪ್ಪು.



(ಯಂಗ್ ಇಂಡಿಯಾ, ಅಕ್ಟೋಬರ್ ೮, 1921)

ಮಹಾತ್ಮಾ ಗಾಂಧಿ

WITH BEST COMPLIMENTS FROM

THE MYSORE IRON & STEEL LIMITED,

BHADRAVATI

(MYSORE STATE).

(A GOVERNMENT OF MYSORE UNDERTAKING)

MANUFACTURERS OF

SPECIAL AND ALLOY STEELS (CARBON SPECIAL STEELS, CHROMIUM ALLOYED STEELS, MANGANESE ALLOYED STEELS, CHROMIUM MOLYBDENUM STEELS, CHROMIUM VANADIUM STEELS, CHROMIUM NICKEL STEELS, SILICO MANGANESE STEELS, RIMMING STEELS, FREE CUTTING STEELS), FERRO-SILICON, STEEL CASTINGS, GREY IRON CASTINGS, REFRACTORY BRICKS, CEMENT, ETC.

ಶ್ರೀ ಮ. ರಾಜೀವ

ಶತಮಾನ ಶ್ರೇಷ್ಠ-ಗಾಂಧಿ

ಗಾಂಧೀ ಶತಮಾನೋತ್ಸವವೀವರ್ಷ ನಡೆಯುತ್ತಿದೆ. ಗಾಂಧಿಗೊಂದು ದೇಗುಲಕಟ್ಟಿ ಹೂ ಹಾರವೇರಿಸಿ ನಾವು ಗಾಂಧಿಯೊಡನೆ ಗಾಂಧೀವಾದಗಳನ್ನೂ ಮರೆತುಬಿಟ್ಟಿದ್ದೇವು. ಸ್ವಾತಂತ್ರ್ಯ ಹೋರಾಟವನ್ನು ಸಾಮಾಜಿಕ ಆರ್ಥಿಕ-ಬಾಧ್ದಿಕ ಹಾಗೂ ನೈತಿಕ ಸಮರಗಳೊಂದಿಗೆ ಸಮನ್ವಯಗೊಳಿಸಿದ ಈ ಶತಮಾನ ಶ್ರೇಷ್ಠನ ರಚನಾತ್ಮಕ ಕಾರ್ಯ ಪ್ರವೃತ್ತಿ ನಮಗೆ ಬೇಡವೆ?

ಇಂದು ಗಾಂಧಿ ಶತಮಾನೋತ್ಸವದ ವರ್ಷ. ಭಾರತೀಯ ಇತಿಹಾಸದಲ್ಲಿ ಹಾಗೂ ಜಗತ್ತಿನ ಇತಿಹಾಸದಲ್ಲಿ ಗಾಂಧಿಯವರ ಪಾತ್ರದ ಮಹತ್ವವೇನು ಎಂಬುದನ್ನು ನಾವು ತಿಳಿಯುವುದು ಅಗತ್ಯ. ಪಶ್ಚಿಮದ ಮಹಾನ್ ವ್ಯಕ್ತಿಗಳನ್ನು ಗೌರವಿಸುವ ಎರಡು ವಿಶಿಷ್ಟ ವಿಷಯಗಳನ್ನು ಕಾಣ ಬಹುದು. ನಾವು ಮಹಾನ್ ವ್ಯಕ್ತಿಗಳನ್ನು ಸ್ಮರಿಸಲು ಪರಿಣಿತರಾದ ಬದಲಾಗಿ ಅವರನ್ನು ದೇವರ ಸ್ಥಾನಕ್ಕೆ ಕೊಂಡೊಯ್ದು ಪೂಜೆ ಸಲ್ಲಿಸುವ ಪರಿಪಾಠ ಬಂದಿದೆ; ಕಲ್ಲುಮಣ್ಣಿನ ಮೂರ್ತಿಗಳನ್ನು ಮಾಡಿ ಪೂಜೆ ಮಾಡುವ ಸಂಪ್ರದಾಯ ಬಂದಿದೆ. ಅವರ ಆದರ್ಶ ಅಂಶಗಳನ್ನು ಅನುದಿನದ ಜೀವನ ಕಾರ್ಯದಲ್ಲಿ ಬಳಸುವ ಬುದ್ಧಿಯನ್ನು ನಾವಿನ್ನೂ ಬೆಳೆಸಿಕೊಂಡಿಲ್ಲ. ಗಾಂಧಿಯವರ ಬಗ್ಗೆ ಇಂತಹ ಪರಿಪಾಠ ಈಗಾಗಲೇ ಭಾರತೀಯರಲ್ಲಿ ಕಾಣ ಬಹುದು. ಗಾಂಧಿಯವರ ಬಗ್ಗೆ, ಅವರ ಜೀವನ ಸಾಧನೆ ಆದರ್ಶ, ಕಾರ್ಯ ಸಾಧನೆಗಳ ಬಗ್ಗೆ ನಾವಿಂದು ವಿಮರ್ಶಾತ್ಮಕವಾದ ಹಾಗೂ ವಿಚಾರಾತ್ಮಕವಾದ ದೃಷ್ಟಿಯನ್ನು ಅಳವಡಿಸುವುದಿಂದ ಗಾಂಧಿಯವರನ್ನು ಸರಿಯಾಗಿ ಗೌರವಿಸಿದಂತಾಗುವುದಲ್ಲದೆ ನಮ್ಮನ್ನ ಸುದಾರಿಸುಲ್ಲಿ ಕೊಂಡೊಯ್ಯುವ ಕಾರ್ಯವನ್ನು ಮಾಡಿದಂತಾಗುವುದು.

ಗಾಂಧಿಯವರನ್ನು ರಾಷ್ಟ್ರಪಿತನೆಂದು ಕರೆಯುವುದು ಚರಿತ್ರೆಯ ದೃಷ್ಟಿಯಿಂದ ಸರಿಯೇ? ಗಾಂಧಿಯವರು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಅತ್ಯಂತ ಮುಖ್ಯ ಪಾತ್ರವನ್ನ ವಹಿಸಿದ್ದರೇ? ಗಾಂಧಿಯವರ ಧ್ಯೇಯ ಧೋರಣೆಗಳು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೋಷಕವಾದ ಹಾಗೂ ಪರಿಣಾಮಕಾರಿಯಾದ ಶಕ್ತಿಗಳಾಗಿದ್ದುವೇ? ಭಾರತದ ರಾಜಕೀಯ ಚಿಂತ್ರೆಯ ಚಲುವಳಿಯ ನ್ಯಾಯುಕ್ತವದಲ್ಲಿ ಗಾಂಧಿಯವರ ಪಾತ್ರ ಅನಿವಾರ್ಯವಾಗಿತ್ತೆ? ಇವೆಲ್ಲಾ ಸಹಜ ಪ್ರಶ್ನೆಗಳು, ಭಾರತೀಯ ಇತಿಹಾಸದಲ್ಲಿ ಗಾಂಧಿಯವರು ಅನುಸರಿಸಿದ ನೀತಿಯನ್ನೂ ಅವರು ಸಲ್ಲಿಸಿದ ಸೇವೆಯನ್ನೂ, ಅವರು ಭಾರತೀಯ ರಾಜಕೀಯದಲ್ಲಿ ಬೀರಿದ ಪ್ರಭಾವವನ್ನೂ ನಿರ್ವಿಕಾರವಾಗಿಯೂ ನಿಷ್ಪಕ್ಷಪಾತ ದೃಷ್ಟಿಯಿಂದಲೂ ನೋಡುವುದು ಅವಶ್ಯವಿದೆ.

ಗಾಂಧಿ ಗಾಂಧಿ ಶತಾಬ್ದಿ ವರ್ಷ. ಗಾಂಧಿಯವರ ಭಾವಚಿತ್ರಗಳಿಗೆ ಊದುಕಡ್ಡಿಯನ್ನು ಹಚ್ಚಿ, ಹೂಮಾಲೆ ಹಾಕಿ, ಬಾಯಿತುಂಬಾ ಹೊಗಳುವ ಹಾಡೂ ತುಂಬಾ ಹಣವೆಚ್ಚದ ಕಟ್ಟಡಗಳನ್ನು ಕಟ್ಟಿ ಗಾಂಧಿಯವರನ್ನು ಗೌರವಿಸುವವರಿದ್ದಾರೆ. ಆದರೆ ಇದು ಗಾಂಧಿಯವರನ್ನು ನ್ಯಾಯವಾಗಿ ಮತ್ತು ಸತ್ಯವಾಗಿ ಗೌರವಿಸುವ ದಾರಿಯಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಭಾರತೀಯ ಪ್ರಜೆಗಳಲ್ಲಿ ಅನೇಕರಲ್ಲಿ ಅವರು ಪ್ರಜ್ವಲಿಸಿದ ಪ್ರಜ್ಞೆಯು ಬೀಜ ಗಾಂಧಿಯವರ ಮಹತ್ವಕ್ಕೂ ಅವರ ಜೀವನ ಕ್ಕೂ ಸಾಕ್ಷಿಯಾಗಿದೆ. ನಮ್ಮ ಜನಾಂಗದಲ್ಲಾದ ಜಾಗೃತಿಯೊಂದೇ ಗಾಂಧಿಯವರನ್ನು ಗೌರವಿಸಲು ಸಾಕು. ಇನ್ನಾವುದೂ ಬೇಕಾಗಿಲ್ಲ.

ಭಾರತೀಯ ರಾಜಕೀಯ ಹೋರಾಟದಲ್ಲಿ ಗಾಂಧಿಯವರ ಪಾತ್ರ ಮಹತ್ವದ್ದು ಹಾಗೂ ಮಹತ್ವಾಕಾಂಕ್ಷಿಯದು. ಆದರೆ ಗಾಂಧಿಯವರು ದಾದಾಭಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಲಾಲಾ ಲಜಪತ ರೈಯವರ ಪರಂಪರೆಯ ಪ್ರಧಾನ ಮುಂದಾಳುಗಳು, ಅವರೊಬ್ಬರೇ ಸ್ವಾತಂತ್ರ್ಯದ ಮುಂದಾಳುಗಳಲ್ಲ ಎಂಬುದನ್ನ ಮರೆಯಬಾರದು. ಗಾಂಧಿಯವರು ಹೋರಾಟರಂಗಕ್ಕೆ ಇಳಿಯುವುದಕ್ಕೆ ಮೊದಲು ಮೂವತ್ತು ವರ್ಷಗಳ ರಾಜಕೀಯ ಹೋರಾಟ ಭಾರತದಲ್ಲಿ ನಡೆದಿತ್ತು. ಈ ದಾರಿಯಲ್ಲಿ ಗಾಂಧಿಯವರು ಮೂವತ್ತು ವರ್ಷ ಕಾಲ ಭಾರತೀಯ ಹೋರಾಟದ ಮುಂದಾಳತನವನ್ನು ನಿರ್ವಹಿಸಿದರು. ಅದು ವರ ಶಾಸನಬದ್ಧವಾದ ನೀತಿ ಚಾರಿತ್ರಿಕವಾದ ಹೋರಾಟವಾಗಿತ್ತು. ಅದು ಜಗತ್ತಿನ ಸ್ವಾತಂತ್ರ್ಯ ಚರಿತ್ರೆಯ ಮಹತ್ವಪೂರ್ಣವಾದ ಹೋರಾಟಗಳಲ್ಲೊಂದಾಗಿತ್ತು ಎಂಬುದೂ ನಿರ್ವಿವಾದ. ಇಲ್ಲಿ ಎರಡು ಅಭಿಪ್ರಾಯಗಳಿಲ್ಲ. ಒಂದು ಅಭಿಪ್ರಾಯದಂತೆ ಗಾಂಧಿಯವರೂ ಗೋಖಲೆಯವರ ದಾರಿಯಲ್ಲಿಯೇ ನಡೆದರು ಎಂದು ವಿಮರ್ಶಿಸಿದ್ದರೆ ಭಾರತದ ಸ್ವಾತಂತ್ರ್ಯ ಸಂಪಾದನೆಯಲ್ಲಿ ಹೆಚ್ಚು ಕಡಿಮೆ ಪಾಲು ಕರವಾಗುತ್ತಿತ್ತು. ಭಾರತದ ವಿಭಜನೆಯೂ ತಪ್ಪುತ್ತಿತ್ತು ಹಾಗೂ ಬಹಳ ಹಿಂದೆಯೇ ಭಾರತವು ಸ್ವತಂತ್ರವಾಗುತಿತ್ತು. ಇದು ಪೆಂಡರೆಲ್ ಮೂನ್ ರವರಂತಹ ಅನೇಕ ಮಂದಿ ಬ್ರಿಟಿಷ್ ಬರೆಹಗಾರರ ಅಭಿಪ್ರಾಯವಾಗಿದೆ. ಭಾರತೀಯ ಬರೆಹಗಾರರಲ್ಲಿ ಸನಾಧರ ಸಿನ್ಹಾ ಮತ್ತು ಶಾಂಜಿ ಡ್ವಾರಕದಾಸ್ ರವರ ಅಭಿಪ್ರಾಯವಾಗಿದೆ. ಗಾಂಧಿಯವರ ಶಾಸನಬದ್ಧವಾದ ನೀತಿಯನ್ನು ಅನುಸರಿಸುತ್ತಿದ್ದರೆ ಭಾರತಕ್ಕೆ ಬಹಳ ಬೇಗನೆ ಸ್ವಾತಂತ್ರ್ಯಪ್ರಾಪ್ತಿಯೂ ಗುತ್ತಿತ್ತೆಂದು ಶ್ರೀ ಶ್ರೀನಿವಾಸ ಶಾಸ್ತ್ರಿಯವರಂತಹ ಅನೇಕ ಮಂದಿಗಾಮಿ ಮುಂದಾಳುಗಳು ವಾದಿಸಿದ್ದರು.

ಭಾರತೀಯ ಇತಿಹಾಸಕಾರರಾದ ಆರ್. ಸಿ. ಮಜುಂದಾರ್, ಕೆ. ಎಂ. ಪಣಿಕ್ಕರ್ ಮತ್ತು ತಾರಾ ಚಂದ್‌ರವರು ಭಾರತದ ಇತಿಹಾಸದಲ್ಲಿ ಗಾಂಧಿಯವರ ಪಾತ್ರದ ಕುರಿತಾಗಿ ಬರೆದಿರುವರು. ಡಾ| ಮಜುಂದಾರರು ತನ್ನ History of the Freedom Movement in India ದಲ್ಲಿ ಗಾಂಧಿಯವರ ಕುರಿತು ಬರೆಯುತ್ತಾ, ಗಾಂಧಿಯವರನ್ನಾಯಕತ್ವದಲ್ಲಿ ಮುಖ್ಯವಾದ ಘಟ್ಟನೆಗಳಿರುವುದನ್ನು ಉಲ್ಲೇಖಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಗಾಂಧಿಯವರು "ರಾಷ್ಟ್ರಪಿತ" ವೆಂದು ಹೇಳಿಕೊಳ್ಳಲು ಅರ್ಹರಲ್ಲ. ಗಾಂಧಿಯವರು ಅವರ ಉದ್ದೇಶಗಳನ್ನು ಕಾರ್ಯಗೊಳಿಸುವ ಕಾರ್ಯದಲ್ಲಿ ವಿಫಲರಾಗಿದ್ದಾರೆ. ಅವರ ಆದರ್ಶಗಳಿಂದಾಗಿಯೂ ಮುಂದಾಳತನದಿಂದ ನಿಸ್ಸೂ ಭಾರತೀಯ ರಾಜಕೀಯ ಹಾಗೂ ಇತಿಹಾಸಕ್ಕೆ ನಷ್ಟವೂ ಆಗಿದೆ. ಗಾಂಧಿಯವರ ಮಹತ್ವ ಅವರ ಮಾನವೀಯ ಸೇವೆಯಾದಾಗಿದೆ ಎಂದು ಡಾ| ಮಜುಂದಾರರು ಬರೆದಿರುವರು.

ಡಾ| ಪಣಿಕ್ಕರರು The Foundations of New India ದಲ್ಲಿ ಗಾಂಧಿಯವರ ಅನೇಕ ಆದರ್ಶಗಳು—ಗ್ರಾಮೋದ್ಯೋಗ, ಗಾಂಧಿಯವರು ಬುನಾದಿ ರಚನೆಯ ಕಾರ್ಯದಲ್ಲಿ ಕೊಟ್ಟ ಮಹತ್ವ ಗುಡಿಕೈಗಾರಿಕೆಗಳಿಗೆ ಕೊಟ್ಟ ಗೌರವ ಪ್ರಾಥಾನ್ಯತೆ, ಸಾದಾ ಜೀವನ ಆದರ್ಶಕ್ಕೆ ಕೊಟ್ಟಿರುವ ಪ್ರಾಶಸ್ತ್ಯ, ಅಹಿಂಸೆಗೆ ಕೊಟ್ಟಿರುವ ಮಹತ್ವ – ಇವೆಲ್ಲ ವನ್ನೂ ಆಧುನಿಕ ಭಾರತದ ನಿರ್ಮಾಣದಲ್ಲಿ ನಾವು ಕಾಣಲಾರೆವೆ. ಗಾಂಧಿಯವರ ಮರಣಾನಂತರದ ಭಾರತವು ಗಾಂಧಿಯವರ ಅನೇಕ ಆದರ್ಶಗಳನ್ನು ಅಲ್ಲಗಳೆದಿದೆ. ಇತಹ ವೈಯಕ್ತಿಕ ಆದರ್ಶಗಳು ರಾಷ್ಟ್ರ, ಪ್ರೌಢರ ಸಾಮೂಹಿಕವಾದ ಆದರ್ಶಗಳಾಗಿಲ್ಲ, ಎಂದು ಬರೆದಿರುವರು. ಡಾ| ತಾರಾಚಂದ್‌ರವರು ಬರೆದಿರುವ History of the Freedom Movement in India ದ ಮೊದಲ ಸಂಪುಟದಲ್ಲಿ ಗಾಂಧಿಯವರ ನೇತೃತ್ವದಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟವನ್ನು ಭಾರತ್ತಿನ ಸ್ವಾತಂತ್ರ್ಯ ಹೋರಾಟದಲ್ಲಿ ಅದೊಂದು ಅಪೂರ್ವವೂ ಅದ್ವಿತೀಯ

(ಇನ್ನಷ್ಟನ್ನಾಳಿನ ಪುಟ ನೋಡಿರಿ)

ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು!

ಸೆಂಟ್ರಲ್ ಕೆಫೆ

ಉಪಾಹಾರ, ಊಟ ಮತ್ತು ವಸತಿ ಮಂದಿರ

ದಾಜಿಬನ್‌ಪೇಟೆ : : ಹುಬ್ಬಳ್ಳಿ

ಬಿ. ಕೃಷ್ಣಯ್ಯ ಹೆಗ್ಡೆ
ಪ್ರೊಪ್ರೈಟರ್

With Best Compliments from

CENTRAL CAFE

Restaurant & Lodging

DAJIBANPETH : : HUBLI

PROPRIETOR: SRI B. KRISHNAYYA HEGDE.

ಲೇಖಕರು:

§§ ¶

ಒಂದು ನೆನಪು

ಶ್ರೀ "ನವಗಿರಿನಂದ"

ಗಾಂಧೀಜಿಯ ಬಗ್ಗೆ ಅವರ ಸಾಹಚರ್ಯದಲ್ಲಿದ್ದವರದು ನೂರಾರು ಅನುಭವಗಳಿರಿ ಬಹುದು. ಅಡಿಗೇ ತಿಮ್ಮಪ್ಪಯ್ಯನದೂ ಒಂದು. ಅವರಿಂದಲೇ ಅದನ್ನು ತಿಳಿದುಕೊಳ್ಳುವುದು ಲೇಸು.

ಅಡಿಗೇ ತಿಮ್ಮಪ್ಪಯ್ಯನವರ ಮನೆಗೆ ಕಾಲ್ತೆಗೆದೆ; ಅವರು ಅಡಿಗೇ ಕೆಲಸದ ಮೇಲೆ ಊರೂರು ತಿರುಗಾಡಿ ಸದ್ಯ ಊರಿನಲ್ಲೇ ತಳ ಊರಿದ್ದಾರೆಂದು ತಿಳಿದು ಸಂತೋಷವಾಯಿತು. ಪ್ರಾಯವಾದುದರಿಂದ ಶಕ್ತಿ ಕುಂದಿ, ಕೆಲಸಕ್ಕೆ ಹೋಗುವುದನ್ನು ಬಿಟ್ಟು ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದಾರಂತೆ, ಸಣ್ಣ ಸಣ್ಣ ವೈದೀಕದ ಅಡಿಗೆಗೆ ಹೋಗುವುದುಂಟಂತೆ. ಹಾಗಿದ್ದರೆ ನಮ್ಮ ಮನೆಯ ವೈದೀಕಕ್ಕೆ ಅವರನ್ನೇ ಕರೆಯೋಣವೆಂದೇ ನಾನು ಹೊರಟದ್ದು.

ಅಂದಳವನ್ನು ತಲಪಿದಾಗ ಹೊತ್ತು ದೋ ಹಕ್ಕೇ ಕಾವ್ಯವನ್ನು ಓದುತ್ತಿರುವ ಅವರ ಕಂಠಸ್ವರ ಕೇಳಿಸಿತು.

"ಸಂತತಂ ಸುಯ್ಯಲರ ತಂಪಿನಿಂದಿಂಪಿ ನಿಂ—" ಹೊಸ ಕಾವ್ಯದ್ದೋ ತಿಳಿಯುವ ಕುತೂಹಲದಿಂದ ಹಾಗೇ ನಿಂತೆ...

"ಸಂತತಂ ತೋಟಗಳ ಗುಚ್ಛವಿನಿಂ—ಬಚ್ಚಿನಿಂ ಸಂತತಂ ಬಹುವಿಧ ದ್ರುಮಲತೆಯ ಪ.ಮತತೆಯ ಕಂಪಿನಿಂ ಸೊಂಪಿನಿಂದ; ಸಂತತಂ ನಿಂದಂದದಾಗರನಾಗಳೆ ವಸಂತಕಾಂಬಂತೆ ನೆರವರಿಂಗುರುವರಂ ಸಂತವರ ಗಾಂಧೀ ಮಹಾತ್ಮ ತಂಗಿದರ್ ನಂದೀದುರ್ಗ ಧನ್ಯಧನ್ಯ".

ಗಾಂಧಿಯ ಹೆಸರಿದೆ, ಆಧುನಿಕ ಕಾವ್ಯ— ಆಶ್ಚರ್ಯಪಡುತ್ತ ಮುಂದೆ ಹೋಗಿ ಜಾವಡಿಗೇರಿದೆ.

ಕೂಡಲೇ ಅವರು ಓದುತ್ತಿದ್ದ ಪುಸ್ತಕವನ್ನು ಮುಚ್ಚಿ, "ಓ! ಏನಾ! ಬಾ, ಬಾ" ಎಂದರು.

"ಏನು ಪುಸ್ತಕವದು? ಧಾಟಿ ಹಳೆಯ ವಾರ್ಧಿಕ ಪದ್ಧತಿ. ಮಹಾತ್ಮಾ ಗಾಂಧೀ ಬೇರೆ ಇಂದಿದ್ದಾರೆ. ಏನು ಹೆಸರು ಈ ಮಹಾಕಾವ್ಯಕ್ಕೆ?" ಎಂದು ಪುಸ್ತಕದ ಕಡೆಗೆ ಕೈಚಾಚಿದೆ.

ಸ್ವ. "ಅಯ್ಯೋ, ಏನಿನೆ ಬಿಡ್ರೀ, ಕಾವ್ಯಾನೂ ಇಲ್ಲ, ಮಣ್ಣೂ ಇಲ್ಲ. ನಾವೇ ಆಗಾಗ ನನಗೇನಾದರೂ ಕಂಡದ್ದನ್ನು ಪದ್ಯ ಕಟ್ಟಿ ಬರೆದಿಟ್ಟಿದ್ದೇನೆ. ಈಗಲ್ಲ ಅನೇಕ ವರ್ಷಗಳ ಹಿಂದೆ ಹೊಡುಗ ವಯಸ್ಸಿನಲ್ಲಿ ಬರೆದದ್ದು."

"ಯಾರಾದರೂ ಪತ್ರಿಕೆಗೆ ಕಳಿಸಿದ್ದೀರಾ?"

ಇಲ್ಲಪ್ಪ. ಬರೆಯುವ ಹೊಚ್ಚ ಹೊಸ್ತು. ತೊರವೆ ರಾಮಾಯಣ, ಜೈಮಿನಿ ಭಾರತ ಓದಿ ಓದಿ, ಏನಾದರೂ ಕಂಡಾಗ ನಾನೂ ಸಣ್ಣ ಸಣ್ಣ ಪದ್ಯ ಬರೆದಿಟ್ಟಿದ್ದೆ. ಈ ಪುಸ್ತಕದಲ್ಲಿ ಹೊತ್ತು ಹೋಗುವುದಕ್ಕೆ ನೋಡುತ್ತಾ ಇದ್ದೇನೆ. ಅಪ್ಪೋ. ಇರ್ಲಿ. ನೀವು ಇಂದ ಕೆಲ್ಸ.'

"ಅದಿರ್ಲಿ, ನೀವೀಗ ಓದಿದ ಪದ್ಯದಲ್ಲಿ ಗಾಂಧೀ ಹೆಸರು ಯಾಕೆ ಬಂತು? ಪದ್ಯವೂ ಕಿವಿಗಿಂಪಾಗಿದೆಯಲ್ಲಾ?"

"ಹೌದಾ—" ಎಂದು ಅವರು ತಮ್ಮ 'ಈಗ್ಗೆ ಸುಮಾರು ಮೂವತ್ತೈದು ವರ್ಷಗಳ ಹಿಂದೆ ನಾನು ಒಬ್ಬ ರಾಯರ ಮನೆಯಲ್ಲಿ ಅಡಿಗೇನೂಡ್ತಾ ಇದ್ದೆ. ಆಗ ನನ್ನ ಹುಡುಗ ನಾನು. ಮದುವೇ ಕೂಡಾ ಆಗಿಲ್ಲ. ಆ ರಾಯರಿಗೆ ಏನೋ ಕಾಯಿಲೆ ಬಂದಾಗ ನಂದೀದುರ್ಗದಲ್ಲಿ ಒಂದು ತಿಂಗಳು ವಾಸ ಮಾಡಬೇಕು ಅಂತ ಡಾಕ್ಟರು ಹೇಳಿದರು. ಅವರು ಅವರ ಹೆಂಡ್ತೀ ಇಬ್ರು ಮಕ್ಕಳು ಮತ್ತು ಅವರ ಅಡಿಗೆಯವನಾಗಿ ನಾನು ಸಹಾ ಹೋಗಿದ್ದೆ. ಅಲ್ಲಿಗೆ ಗಾಂಧಿಯೂ ಬಂದಿದ್ದರು. ಆಗ ಇದೊಂದು ಪದ್ಯಕಟ್ಟಿ ಬರೆದಿಟ್ಟಿದ್ದೆ. ಇದನ್ನೀಗ ಹೋದುವಾಗ ಅದ ನೋಡಿದ್ದೆಲ್ಲ ನೆನಪಾಗ್ತಾ ಇದೆ. ಅಷ್ಟೇ"

"ಅಷ್ಟೇ ಅಂತ ಬಿಟ್ಟುಬಿಡ್ತಿರಲ್ಲ? ಇತ್ತಕೊಡೀ ಆ ಪದ್ಯ—"

ಅವರ ಹಳೆಯ ನೋಟು ಬುಕ್ ಬಿಡಿಸಿ ನೋಡಿದೆ. ಅನೇಕ ಸಣ್ಣ ಸಣ್ಣ ಪಟ್ಟಿದೀ ಪದ್ಯಗಳ ಗುಂಪಿನೊಂದಿಗೆ "ನಂದಿದುರ್ಗದ್ದೂ" ಒಂದು. ದುರ್ಗದೊಳಗಿನ ವರ್ಣನೆ. ಕೊನೆಯ ಪದ್ಯ ಹೀಗೆ ಮುಗಿಯುತ್ತದೆ:

"ಒಂದು ಕಡೆ ವೈಭವವಿರು ನಿಗುರಿಸುವ ಪಾತಾಳಕೊಂದಿಪೋನ್ನತದ ಟಿಪ್ಪುಸಾ ಡ್ರಾಪುಖಂಡೆ ಮತ್ತೊಂದು ಕಡೆ ವನ ಮಧ್ಯೆ ಸರಸು ಮೂಗಡೆ ಕೋಟೆ ದೇವತೆಯ ಶಿಖರದಲ್ಲಿ ನಂದೀಶ್ವರನ ಪುಣ್ಯ ಧಾಮ ಮರದೊಂದು ಕಡೆ ಗಾಂಧೀ ಮಹಾತ್ಮರಿಹ ಪೋಲ್ಕೊಂಡುಭವನ, ಪ್ರತಿಯೊಂದು ಪಥವೂ ಮಹಾತ್ಮರ ಅಡಿಗಳಾಡಿರುವ ಧೂಳಿನಿಂ ಪಾವನಗಾಯ್ತು".

"ಜೆನ್ನಾಗಿದೆಯಲ್ಲಾ! ನೀವು ಇಷ್ಟು ಚೆಂದ ಪದ್ಯ ಬರೆಯುವೀರೀ ಅಂತ ಯಾರಿಗೂ ಗೊತ್ತಿಲ್ಲ. ನೀವು ಅಲ್ಲಿ ಗಾಂಧೀನ ಪ್ರತ್ಯಕ್ಷ ನೋಡಿದ್ದೀರಿ ಅಂತಾಯ್ತು."

"ಆಗಿನ ಕಾಲದಲ್ಲಿ ಗಾಂಧೀನ ಫೋಟೋದೊಂದು ದೊಡ್ಡ ಮಾತೇನಲ್ಲ. ಅವರಿದ್ದಲ್ಲಿಗೆ ಯಾರೂ ಹೋಗಬಹುದಿತ್ತು. ಬೆಳಿಗ್ಗೆಯೂ ಸಂಜೆಯೂ ನಂದೀದುರ್ಗದಲ್ಲಿ ಅವರು ವಾಕಿಂಗ್ ಹೊರಡುತ್ತಾರೆ. ಕಿಟಕೀಯಲ್ಲಿ ನಿಂತರೆ ಕಾಣುತ್ತಿತ್ತು. ಒಮ್ಮೆ ನಮ್ಮ ಮುಗಿಗೇ ಬಂದರೆನ್ನಿ."

"ಯಾಕೆ? ಯಾಕೆ? ಈ ಫಿಮ್ಮ ರಾಯರು ಅವರನ್ನು ಕರೆಸಿದರೆ? ಹಾಗಾದರೆ ಫಿಮ್ಮ ಕೈಯ ಪಾಕವನ್ನೂ ಗಾಂಧೀ ಉಂಡರು, ಹೌದಾ?' ಎಂದ ಕೇಳಿದೆ ಆತ್ಮತೂರದಿಂದ.

'ಛೆಛೆಛೆ! ಗಾಂಧೀ ಹಾಗೆಲ್ಲ ಉಣ್ಣುವವರೂ ತಿನ್ನುವವರೂ ಅಲ್ಲಾಂತ ನಿಮಗೆ ಗೊತ್ತಿಲ್ಲವೆ? ಅವರದು ಪ್ರತಿಯೊಂದರಲ್ಲೂ ವ್ರತ. ವ್ರತಹೀನ. ಆದರೆ ಹೀಗೆ ಧನಕನಕಗಳನ್ನು ತನ್ನಿ, ಕೊಡೀ ಅಂತ ಯಾವಾಗಲೂ ಕೇಳುತ್ತಾ ಇರುತ್ತಾರೆ— ಅದು ಅವರಿಗಲ್ಲ, ಹರಿಜನರ ಶ್ರೇಯಸ್ಸಿಗೆ; ಅದಕ್ಕಾಗಿ ಅವರು ಊರೂರು ತಿರುಗುತ್ತ ಒಮ್ಮೆ ಬಳ್ಳಾರಿಗೆ ಬಂದಿದ್ದರು, ಆಗ ನಾನು ಇನ್ನೂ ಚಿಕ್ಕವನು ಬಳ್ಳಾರಿಯ ಪ್ರಸಾದ ರಾವ್ ಎಂಬವರಲ್ಲಿ ಅಡಿಗೇ ಮಾಡಿಕೊಂಡಿದ್ದೆ. ಗಾಂಧಿಯ ಹೆಸರು ಕೇಳಿದ್ದೇನೇ ಹೊರತು ಕಣ್ಣಾರೆ ನೋಡಿರಲಿಲ್ಲ. ಟೌನ್ ಹಾಲಿನ ವೈದಾನದಲ್ಲಿ ಗಾಂಧಿಯ ಸಭೆ ನಡೆಯತ್ತೆ ಅಂತ ಗೊತ್ತಾಗಿ ಕಣ್ಣಾರೆ ನೋಡಲು ಅಲ್ಲಿಗೆ ಹೋದೆ. ಏನು ಹೇಳಲಿ ಆ ಜನರ ಗುಂಪು. ಮಹಾತ್ಮರ ಹಿಂದೆಮುಂದೆ, ಮೇಲೆಕೆಳಗೆ, ಕಂಪೌಂಡ್ ಗೋಡೆ ಮೇಲೆ, ಮರಗಳ ಕೊಂಬೇ ಮೇಲೆ ಜನರೇ ಜನರು. ಸುತ್ತ ಮುತ್ತಿನ ಹಳ್ಳಿಗಾಡುಗಳಿಂದ ಬಂದ ಜನರು. ಊರೂ ಮಾತ ಡತ್ತಿದ್ದಿಲ್ಲ. ಗಲಾಟೆ ಮಾಡುತ್ತಿದ್ದಿಲ್ಲ. ಎಲ್ಲರಿಗೂ ಅವರ ಮಾತು ಕೇಳಿ ಬೇಳುತ್ತೋ ಎಂಬುದರಲ್ಲೇ ಗಮ. ಮುಂದುದಾಟ ಮುಂದೆ ಹೋಗಲು ನನಗಾಗಲಿಲ್ಲ. ದೂರ ಎತ್ತರವಾದ ಚಪ್ಪರ ಮಂಟಪದಲ್ಲಿ ಗಾಂಧೀಯು ಆಕಾರ ಕಾಣಿಸುತ್ತಿತ್ತು. ಚಿತ್ರದಲ್ಲಿ ನೋಡಿದ ಹಾಗೆಯೇ ಚಟ್ಟಿ ಮುಟ್ಟಿಗೆ ಹಾಕಿ ಕುಳಿತಿದ್ದಾರೆ. ಆಗ ಈಗಿನ ಹಾಗೆ ರಾಷ್ಟ್ರಪತಿ ಶಬ್ದ ಬರುವಂಥಾ ಹತಂತ್ರದ ಬಾಯಿಯಿರಲಿಲ್ಲ. ಗಾಂಧಿ ಎಲ್ಲಿಗೂ ಕೇಳಿಸಲೀ ಅಂತ ಶಕ್ತಿಗೆ ಎತ್ತಿ ಕೂಗಿ ಹೇಳುತ್ತಲೂ ಇರಲಿಲ್ಲ. ಅವರು ಹೇಳಿದ ಒಂದೊಂದೇ ಮಾತನ್ನು ಇನ್ನೊಬ್ಬರು ಕಪ್ಪಡದಲ್ಲಿ ತರ್ಜುಮೆಮಾಡಿ ಹೇಳುತ್ತಾ ಇದ್ದರು, ಅವರದು ಸ್ವಲ್ಪ ದೊಡ್ಡ ಕಂಠ ಅದರೂ ಅಷ್ಟು ದೂರಕ್ಕೆ ಕೇಳಿಸಲಿಲ್ಲ. ಮೂಕು ಕೇಳುವುದಕ್ಕಂತಲೂ ಗಾಂಧಿಯನ್ನು ಚೆನ್ನಾಗಿ ನೋಡಬೇಕಂತಲೇ ಎಲ್ಲರ ಆಸೆನವಗೂ ಆಸ್ಪೇ. ಹಿಂದಿಕ್ಕಿ ಬದಿಗೆ ಹೋಗಿ ಅದಷ್ಟು ಹತ್ತಿರದಲ್ಲಿ ನಿಂತು ನೋಡಿದೆ. ಆ ಮೇಲೆ ಸಭೆಯಿಂದ ಒಬ್ಬೊಬ್ಬರೇ ಎದ್ದು ಬಂದು ಗಾಂಧಿಯ ಮುಂದೆ ನೋಟುಗಳನ್ನಿಟ್ಟು ಹೋಗುವುದಕ್ಕೆ ಶುರುವಾಯಿತು. ಆ ನೋಟುಗಳನ್ನು ಅಲ್ಲಿ ಕುಳಿತಿದ್ದ ಇನ್ನೊಬ್ಬರು ಎಣಿಸಿ ಲೆಕ್ಕ ಬರೆದಿಡುತ್ತಿದ್ದರು. ಆ ಹಣವನ್ನು ಹರಿಜನರ ಕಲ್ಯಾಣಕ್ಕೆ ಉಪಯೋಗಿಸುವುದಕ್ಕಾಗಿ ಗಾಂಧಿಯವರಿಗೆ ಕೊಡುತ್ತಿದ್ದರು. ಆ ಹಣವನ್ನು ಹರಿಜನರ ಕಲ್ಯಾಣಕ್ಕೆ ಉಪಯೋಗಿಸುವುದಕ್ಕಾಗಿ ಗಾಂಧಿಯವರಿಗೆ ಕೊಡುತ್ತಿದ್ದರು. ಆ ಹಣವನ್ನು ಹರಿಜನರ ಕಲ್ಯಾಣಕ್ಕೆ ಉಪಯೋಗಿಸುವುದಕ್ಕಾಗಿ ಗಾಂಧಿಯವರಿಗೆ ಕೊಡುತ್ತಿದ್ದರು.

ಸ್ವಾತಂತ್ರ್ಯದಿವಸದ ಶುಭಾಶಯಗಳು!



ಆಹಾರೋತ್ಪಾದನಾ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕೆ?
ಹಾಗಿದ್ದರೆ

ಕಿರ್ಲೋಸ್ಕರ್ ಪಂಪ್ ಸೆಟ್‌ಗಳನ್ನು ಉಪಯೋಗಿಸಿರಿ.

ಕಿರ್ಲೋಸ್ಕರ ಪಂಪ್ ಸೆಟ್‌ಗಳು ಶ್ರೇಷ್ಠತೆಯಲ್ಲಿ, ದೀರ್ಘ ಬಾಳಿಕೆಯಲ್ಲಿ, ಮಿತ ವ್ಯಯದ ನಿರ್ವಹಣೆಯಲ್ಲಿ ದೇಶದಲ್ಲೆಲ್ಲಾ ಸುಪ್ರಸಿದ್ಧವಾಗಿವೆ.
ಸಣ್ಣ ಹಿಡುವಳಿದಾರರಿಗೆಂತೂ ಅತ್ಯನುಕೂಲವಾಗಿವೆ.

— ವಿತರಣೆಗಾರರು —

ಕರ್ಕೇರಾ ಸನ್ಸ್ & ಕೊ.

ಮೈದಾನ್ ವೆಸ್ಟ್ ರೋಡು, ಮಂಗಳೂರು—1

Phone: 3967

ಶ್ರೀ ಶಿವುಂಜೆ ಪರಾರಿ, ಮುಂಬಯಿ.

ಅಪೂರ್ವ ಸಾಹಸಿಗಳು

ಭಾರತೀಯ ಸ್ವಾತಂತ್ರ್ಯೋದ್ಧಾರದಲ್ಲಿ ಒಬ್ಬೊಬ್ಬರದು ಒಂದೊಂದು ಸಾಹಸ. ಆದರೂ ಅವರೆಲ್ಲರ ಗುರಿಯು ಒಂದೇ. ಬ್ರಿಟಿಷರ ನುಂಗಮುಸ್ಸಿಯಿಂದ ಭಾರತಾಂಬೆಯನ್ನು ಮುಕ್ತಗೊಳಿಸುವುದು. ಆದರವರ ಸಾಹಸವೆಷ್ಟು, ನೀವೇ ಓದಿ ತಿಳಿದುಕೊಳ್ಳಿ.

ಲಿಗ್ಗಾದ ಕಣ್ಣು ಕೋನೆಯೊಂದರಲ್ಲಿ ಆಜಾದ್; ಭಗತ್‌ಸಿಂಗ್, ಸುಖದೇವ, ರಾಜಗುರು, ಬಟುಕೇಶ್ವರ ದತ್ತ, ಶಿವ ಶರ್ಮಾ, ವಿಜಯಕುಮಾರ ಸಿನ್ಹಾ, ಜಯ ದೇವ ಕಪೂರ್, ರಾಂ ಪ್ರಸಾದ್ ವೈಶಂ ವಾಯಣ ಮುಂತಾದ ಭಾರತೀಯ ಸ್ವಾತಂತ್ರ್ಯ ಸಮರದ ಸಶಕ್ತ ಕ್ರಾಂತಿಕಾರಿ ದಳದ ಸಕ್ರಿಯ ಸದಸ್ಯರು ಒಟ್ಟುಗೂಡಿದ್ದರು. ತಮೂಪೆಯಾಗಿ ಮೂಹಾಸಕ್ತಿ ನಡೆಯುತ್ತಿತ್ತು. ಯೂರೆಲ್ಲ ಹೇಗೆ ಬಂಧಿಸಲ್ಪಡಬಹುದು ಮತ್ತು ಬ್ರಿಟಿಷ ಸರಕಾರ ಅವರಿಗೆ ಎಂತೆಂತಹ ತಿಕ್ಷೆಗಳನ್ನು ಕೊಡಬಹುದು ಎಂಬುದು ಅಂದಿನ ವಿನೋದದ ವಿಷಯವಾಗಿತ್ತು.

"ಈ ಮಹ ಶಯರು (ರಾಜಗುರು) ಎಲ್ಲಾದರೂ ಮಲಗಿದ್ದಾಗಲೇ ಬಂಧಿಸಲ್ಪಡ ವರು. ನಾಳಪ್ಪ ಇವರ ಸಹವಾಸ. ಪೂರ್ಣ ಪ್ರಮತ್ತ ನಡೆಯುತ್ತಿದ್ದಂತೆಯೇ ತೂಕಡಿಸುತ್ತಾರೆ. ಮಲಗಿದ್ದಾಗ ಹಿಡಿಯಲ್ಪಟ್ಟರೆ ಇವರು ಕಣ್ಣು ತೆರೆಯುವುದು ಜೈಲಿನಲ್ಲಿಯೇ! ಎಚ್ಚರವಾದ ಬಳಿಕ ಇವರು ಕಾವಲುಗಾರರ ಬಳಿ 'ಏಳಪ್ಪಾ ನಾನೂ ನಿಜವಾಗಿಯೂ ಸೆರೆಹಿಡಿಯಲ್ಪಟ್ಟಿರುವೆನೋ ಅಥವಾ ಇದು ಕನಸೋ? ಎಂದು ಕೇಳಿದರೂ ಕೇಳಬಹುದು" ಎಂದೆಂದು ನಿಟ್ಟುಯಾಗಿ ನಗಾಡಿದೆವು. ಉಳಿದವರೂ ದನಿಗೂಡಿಸಿದರು.

"ಫಟ್ಟಿ ನೋಹನ (ಬಟುಕೇಶ್ವರ ದತ್ತ) ಎಲ್ಲಾದರೂ ಪಾರ್ಕಿನಲ್ಲಿ ಚಂದ್ರನನ್ನು ನೋಡುತ್ತಾ ಕುಳಿತಿದ್ದಾಗ ಹಿಡಿಯಲ್ಪಡಬಹುದು. ಅನಂತರ ಅವನು ಪೋಲೀಸರೊಡನೆ—"ಸೆ'ಹಿಡಿದರೇನಾಯ್ತು?..... ಅಲ್ಲಿ ನೋಡಯ್ಯಾ ಚಂದ್ರ ಎಷ್ಟು ಸುಂದರವಾಗಿದ್ದಾನೆ. ಅಲ್ಲವೆ?' ಎಂದು ಪ್ರಶ್ನಿಸಬಹುದು."

"ಅಚ್ಚು (ವಿಜಯಕುಮಾರ ಸಿನ್ಹಾ) ಸತ್ಯು (ರಣಜೀತ್ (ಭಗತ್‌ಸಿಂಹ) ಬಂಡಿತಾ ಎಲ್ಲಿಹೂದರೂ ನಿನ್ನೇಮೂ ಥಿಯೇಟರಿನಲ್ಲಿ ಸಿಕ್ಕಿ ಬೀಳಬಹುದು. ಕಡೆಯಪ್ಪ ಜೈಲಿಗೆ ಬೇಕಾದರೆ ಹೋಗೋಣ. ಆದರೆ ಪೊದಲು ಇಡೀ ಸಿನೇಮಾ ನೋಡಲು ಬಿಡು, ಎಂದು ಅವರು ಪೋಲೀಸರಿಗೆ ಅಜ್ಞಾಪಿಸಬಹುದು."

ಇನ್ನು ಹಂಡಿತ್ ಜೀಯವರ ವಿಷಯ ಬೇರೇನೇ— "ಎಲ್ಲಿಹೂದರೂ ಖುಂದೇ ಲಂಡದ ಉತ್ಸುಂದ ಪರ್ವತಶಿಖರಲ್ಲಿ ಬೇಟೆಹೂಡುತ್ತಿರುವಾಗ, ಸಂಗಡಿಗ ಸರಕಾರೀ ಗುಪ್ತಚರನ ವಿಶ್ವಾಸಘಾತದಿಂದ ನಾಯುಹೊಂದಿ ಮೂಛೆತರಾದರೇನೇ ಅವರು ಸೆರೆಹಿಡಿಯಲ್ಪಡಬಹುದು. ಆಲ್ಲಿಂದ ಅವರನ್ನು ನೆಟ್ಟಿಗೆ ಸೂಂಯಿಯ ಸರಕಾರೀ ಆಸ್ಪತ್ರೆಗೆ ಕಳುಹಿಸಬಹುದು. ಮೂರ್ಛೆ ತಿಳಿದು ಎದ್ದ ಕೂಡಲೇ ಅವರಿಗೆ ತಾನು ಸೆರೆಯಾಗಿದ್ದೇನೆ ಎಂದು ತಿಳಿಯುವುದು. ಬ್ರಿಟಿಷ್ ಕಾನೂನಿನನ್ವಯ ಏಂಬ್ರ ಗಿರಿಂತೆ ಘಾತಿಯು ಸಜೆ ಇವರಿಗೆ ಆಗುವುದು ಖಂಡಿತ?"

ಸೋಶಿಯಲಿಸ್ಟ್ ರಿಪಬ್ಲಿಕನ್ ದಳದ ಕಮಾಂಡರ್ ಇನ್ ಚೀಫ್ ಚಂದ್ರಶೇಖರ ಆಜಾದರು ಗೆಳೆಯರ ವಿಶ್ವಾಸಕ್ಕೆ ಕಿಚ್ಚನ್ನೆ ನಕ್ಕುಬಿಟ್ಟರು. —"ಅಲ್ಲಾ ಪಂಡಿತ್‌ಜೀ, ಸರಕಾರದವರು ನಿನಗಾಗಿ ಎಡೆ'ಡು ಹಡ್ಡ ತರಬೇಕಾದೀತು. ಒಂದು ನಿಮ್ಮ ಕುತ್ತಿಗೆಗೆ ಇನ್ನೊಂದು ನಿನ್ನ ಕೊಬ್ಬಿಗೆ....." ಎಂದು ನಗತ್ತಾ ಫೆಡಿದ ಭಗತ್‌ಸಿಂಹ.

ಕೂಡಲೇ ಆಜಾದರು ನಗುತ್ತಾ— "ನೋಡಪ್ಪಾ, ಫ್ರಾಶಿಯನ್ನೇರುವ ಹುಚ್ಚು ಫಲಗಿಲ್ಲ. ಹಗ್ಗ ಗಿಗ್ಗ ಎಲ್ಲ ನಿನ್ನ ಕೊರಳಿಗೇ ಇರಲಿ. ಹಾಂ, ಈ "ಬಂತುಲ್ ಬುಖಾರಾ" (ಆಜಾದರು ತಮ್ಮ ಮೌಸರ್ ಪಿಸ್ತೂಲಿಗೆ ಈ ವಿಚಿತ್ರ ನಾಮಕರಣ ಮಾಡಿದ್ದರು.) ಎಂದಿನ ತನಕ ನನ್ನ ಕೈಯಲ್ಲಿದೆಯೋ, ಅಂದಿನ ತನಕ ನನ್ನನ್ನು ಜೀವಂತವಾಗಿ ಹಿಡಿಯಬಲ್ಲ ಎದೆಗಾರಿಕೆ ಹೊರಲ್ಲೂ ಇಲ್ಲ. ಆಜಾದನನ್ನು ಜೀವಂತವಿದ್ದಾಗ ಮುಟ್ಟಬಲ್ಲಷ್ಟು ತಾಯಿ ಎದೆಹಾಲು ಕುಡಿದ ಮಗ ಇನ್ನೂ ಹುಟ್ಟಲ್ಲ. ನೆನಪಿಟ್ಟಿರಿ". ಎಂದರು.

ಅವರ ನುಡಿಗಳು ಅಕ್ಷರಶಃ ಸತ್ಯವಾಗಿತ್ತು. ಅಲಹಾಬಾದಿನ ಆಲ್‌ಫ್ರೆಡ್ ಪಾರ್ಕಿನಲ್ಲಿ ಮೂರು ಆಂಗಿಗಳಲ್ಲಿ ತುಂಬಿಂದ ಪೋಲೀಸರು ಒಬ್ಬ ಆಜಾದನನ್ನು ಸರಕಾರಿ ಬುಲೆಟಿನಿನಲ್ಲಿಂದ ಹೆರಿಯಬೇಕಾಯಿತು. 'ಬಂ ತುಲ್ ಬುಖಾರಾ' ಮೌನವಾದರೂ ಎಷ್ಟೋ ಹೊತ್ತಿನ ತನಕ ಪೋಲೀಸರು ಶವದ ಬಳಿ ಬರಲು ಭೀತರಾಗಿದ್ದರು. ಅದೇ ಸಮಯದಲ್ಲಿ ಭಗತ್‌ಸಿಂಹ ಸೆರೆಮನೆಯಲ್ಲಿ ಫಾಶಿಯ ಉರುಳಿಗಾಗಿ ದಿನಲೆಕ್ಕ ಮಾಡುತ್ತಿದ್ದನು.

(ಶ್ರೀ ಭಗವಾನ್‌ದಾಸ ಮೌಹರರ ನೆನಪುಗಳಿಂದ)

ಅಹೊಲೋ ೧೧

ಮೂನವನು ಮೂಡಲು ಚಂದ್ರನೆಡೆ ದಾಳಿ
ಶಶಿಧರನು "ಕಚ್ಚೆರೆದ" ಓಡಿತದೋ ಗೂಳಿ
ಮುದನ ಜನಕನು ಬಂದು ಬೇಡಿದನು ಗುಟ್ಟು
ಳಲಿ ಮೂನವನೇ ಶ್ರೇಷ್ಠ ಕಾಲವೇ ಕೆಟ್ಟು!

ಸಂತೆಕನ

ಮೂನವನ ಸಾಮಾನಿಕೆ ಗಡಿಯುಂಟೇ ಮಗವೆ
ದೇವರೋಕಳಕೂ ಭೀತಿ ಪಾಪಕೂ ಶಾಸ್ತಾಕೆ
ಕಾರಾಗೃಹದ ಸೇರಿ ತುಂಟತನ ಬಾಕ!
ನೋಡಿದನು ಮುಧುಚಂದಿರನ ನಗ್ನರೂಪ!
—"ದೇವಕೀನಂದನ", ವಿಜಾರ್ಜನ.

FOR

Service, security and durability

INSIST

only on SHAMSON Rolling Shutters & Steel Windows

Manufacturers:-

SHAMSON METAL INDUSTRIES (P) LTD.,

Await our next new production items— SHAMSON Almirahs and Stainless Steel Utensils

Factory:-
"SUVARNAGIRI"
THAVARAGERE,
MANDYA

Regd. Office:-
SANJAYA BUILDING,
R. P. ROAD,
MANDYA

Managing Director: **K. B SHETTY** *B A. LL. B.*

ಶ್ರೀ ಕೆ. ಜಿ. ವಸಂತ ಮಾಧವ, ಎಂ. ಎ.

ಕೆನರಾ ಜಿಲ್ಲೆಯಲ್ಲಿ ಹೈದರಾಲಿ

ಮೈಸೂರಿನ ಇತಿಹಾಸದಲ್ಲಿ ಟಿಪ್ಪು ಸುಲ್ತಾನ ಮತ್ತಾತನ ತಂದೆ ಹೈದರಾಲಿಯರ ಹೆಸರು ಅಜರಾಮರ. ಬ್ರಿಟಿಷರ ಸ್ವಬಲ ವಿರೋಧಿಯೆನಿಸಿದ್ದ ಹೈದರಾಲಿಯು ಮೈಸೂರಿನ ಇತಿಹಾಸವನ್ನೇ ಬದಲಿಸುವಷ್ಟಲ್ಲಿ ಸರ್ವ ಸಮರ್ಥನೆನಿಸಿದ ಕತೆ ವೀರನೊಬ್ಬನ ಸ್ವಯಂ ಕೃಷ್ಟ ವ್ಯಕ್ತಿತ್ವ ನಿರ್ಮಾಣದ ರೋಮಾಂಚಕ ಕತೆಯೂ ಹೌದು.

ಕ್ರಿ. ಶ. ಹದಿನೆಂಟನೇ ಶತಮಾನವು ಭಾರತದ ಇತಿಹಾಸದಲ್ಲಿ ಸಂದಿಗ್ಧ ಕಾಲ. ಈ ಕಾಲದಲ್ಲಿ ಭಾರತದಲ್ಲಿ ಹಲವಾರು ರಾಜ್ಯಗಳು ಉದಯವಾದವು. ಈ ಕಾಲವು ಭಾರತದ ಇತಿಹಾಸದ ಅಸ್ಥೈರ್ಯ ಕಾಲವೆಂದು ಹೇಳಬಹುದು. ಈ ಪರಿಸ್ಥಿತಿಯು ಹಲವಾರು ಸಾಹಸಿ ಸೈನಿಕರಿಗೆ ತಮ್ಮ ಸಾಹಸದಿಂದ ರಾಜ್ಯ ಸ್ಥಾಪಿಸಲು ಅನುಕೂಲವಾಯಿತು. ಆದುದರಿಂದ ಈ ಕಾಲವು ಭಾರತದ ಇತಿಹಾಸದಲ್ಲಿ ಸಾಹಸಿ ಸೈನಿಕರ ಯುಗವೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ಕಾಲದಲ್ಲಿ ಪ್ರಾಮುಖ್ಯತೆಗೆ ಬಂದ ವೀರ ಯೋಧರಾರೆಂದರೆ ಬಂಗಾಳದ ಅಲಿವರ್ದಿಖಾನ್, ದಖ್ಖನಿನ ನೈಜಾಮ, ಪಶ್ಚಿಮ ಭಾರತದ ಮರಾಠಾ ಪೇಷ್ವೆ ಸಿಂಧೆ, ಮತ್ತು ದಕ್ಷಿಣ ಭಾರತದ ಹೈದರಾಲಿ. ಈ ಯೋಧರಲ್ಲಿ ಹೈದರಾಲಿಯೇ ಪ್ರಮುಖನು. ಭಾರತದಿಂದ ಯೂರೋಪಿಯನರನ್ನು ಆದರಲ್ಲೂ ಇಂಗ್ಲಿಷರನ್ನು ಹೊರಹಟ್ಟಬೇಕೆಂದು ಪ್ರಯತ್ನಿಸಿದವರಲ್ಲಿ ಇವನೇ ಪ್ರಮುಖನು. ತಿನ್ನಿಂದೊಳಕೊಂಡ ಸೈನ್ಯವನ್ನು ಕಟ್ಟಿ ಬ್ರಿಟಿಷರ ಸೈನ್ಯವನ್ನು ಹಲವಾರು ಸಲ ಸೋಲಿಸಿದ ಕೀರ್ತಿ ಹೈದರಾಲಿಗೆ ಸಲ್ಲುತ್ತದೆ. ಹೈದರಾಲಿ ಫಹುಣ ರಾಜ ತಂತ್ರಿ ಯಾಗಿದ್ದನು. ಯುದ್ಧದಲ್ಲಿ ಹೆಚ್ಚು ಸಮಯ ಕಳೆದರೂ, ಹೈದರನು ಉತ್ತಮ ರಾಜ್ಯಾಡಳಿತವನ್ನು ಸ್ಥಾಪಿಸಿದ್ದನು.

ಹೈದರನ ಉದಯ

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ದಕ್ಷಿಣಭಾರತದಲ್ಲಿ ಹೊಸ ಶಕ್ತಿಯೊಂದು ಹೈದರನ ನಾಯಕತ್ವದಲ್ಲಿ ಉದಯಿಸುವಾಯಿತು. ಈ ಘಟನೆಯು ಭಾರತದ ಚರಿತ್ರೆಯ ಸೋಲೆ ತುಂಬಾ ಪರಿಣಾಮವನ್ನು ಬೀರಿತು. ಹೈದರನು ತನ್ನ ಸ್ವಪ್ರಯತ್ನದಿಂದಲೇ ಬೆಳಕಿಗೆ ಬಂದನು. ಇವನು ಕೋಲಾರದ ಫೌಜದಾರನಾಗಿದ್ದ ಪತ್ತೆ ಮಹಮ್ಮದನ ಮಗ. ಇವನ ತಂದೆ ಸಾಯುವಾಗ ಬಹಳ ಸಾಲವನ್ನು ಮಾಡಿದ್ದನು. ಬಾಲ್ಯದಲ್ಲಿ ಇವನು ಹಲವಾರು ರೀತಿಯ ಕಸ್ಯಗಳನ್ನು ಅಭ್ಯಸಿಸಿದನಾದರೂ, ಅವುಗಳಲ್ಲಿ ವಿಶೇಷ ಪ್ರಾವೀಣ್ಯತೆಯನ್ನು ಪಡೆಯಲಿಲ್ಲ. ಹದಿನೈದನೆಯ ವಯಸ್ಸಿನಲ್ಲಿ ಹೈದರನು ಸೈನ್ಯಕ್ಕೆ ಸೇರಿದನು. ಆಗ ಅವನಿಗೆ ಯಾವ ಹುದ್ದೆಯೂ ದೊರೆಯಲಿಲ್ಲ. ಆದರೆ ಅವನು ಸೈನ್ಯದಲ್ಲಿ ಸೇರಿದ ಕೆಲವೇ ವರ್ಷಗಳಲ್ಲಿ ಅವನ ಪ್ರತಿಭೆಯು ಬೆಳಕಿಗೆ ಬಂದಿತು. ಅವನ ಸಾಮರ್ಥ್ಯವನ್ನು ಗುರುತಿಸಿದ ಮೈಸೂರಿನ ಸೇನಾಧಿಪತಿಯಾದ ಖಂಡೇರಾಯನು ಅವನಿಗೆ ಸೈನ್ಯದಲ್ಲಿ ಉನ್ನತ ಹುದ್ದೆಯನ್ನು ಕೊಟ್ಟನು. ಅವನ ಸಹಾಯದಿಂದ ಹೈದರನು ಡಿಂಡಿಗಲ್ಲಿನ ಫೌಜದಾರನಾದನು. ಆಗ ಅವನಿಗೆ ಇಪ್ಪತ್ತೈದು ವರ್ಷ ವಯಸ್ಸು. ಅಲ್ಲಿಂದ ಅವನ ಅದೃಷ್ಟವು ಬೆಳಗಲಾರಂಭಿಸಿತು. ಅವನು ಅಲ್ಲಿ ಸೈನ್ಯವನ್ನು ಸಂಘಟಿಸಿ ಅದಕ್ಕೆ ಫ್ರೆಂಚ್ ಮಾದರಿಯ ತರಬೇತಿಯನ್ನು ಕೊಟ್ಟನು. ಅವನ ಸೈನ್ಯವು ಅಲ್ಲಿಂದ ಹೊರಟು ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿಯ ಪಾಳೆಯಗಾರರಿಂದ ಕಪ್ಪ ವಸೂಲಿ ಮಾಡಿತು. ಹೈದರನು ಸೈನ್ಯಕ್ಕೆ ಸೇರಿದ ಕೆಲವೇ ವರ್ಷಗಳಲ್ಲಿ ಅವನು ಸೈನ್ಯದಲ್ಲಿ ಅತ್ಯುನ್ನತ ಸ್ಥಾನಕ್ಕೆ ಏರಿದನು. ಅವನು ಸೈನ್ಯದಲ್ಲಿ ಸೇರಿದ ಹತ್ತು ವರ್ಷಗಳಲ್ಲಿ ಅವನು ಮೈಸೂರಿನ ಸೈನ್ಯಾಧಿಪತಿಯಾಗಿ ಮೆರೆದನು. ಅವನ ಸೈನ್ಯವು ಮೈಸೂರಿನ ಸೈನ್ಯದಲ್ಲಿ ಅತ್ಯಂತ ಪ್ರಬಲವಾಗಿತ್ತು. ಅವನ ಸೈನ್ಯದಲ್ಲಿ ಫ್ರೆಂಚ್ ಮಾದರಿಯ ತರಬೇತಿಯನ್ನು ಪಡೆದ ಸೈನಿಕರಿದ್ದರು. ಅವನ ಸೈನ್ಯದಲ್ಲಿ ಫಿರಂಗಿ ದಳವೂ ಇತ್ತು. ಅವನ ಸೈನ್ಯವು ಅಲ್ಲಿಯ ಪಾಳೆಯಗಾರರಿಂದ ಕಪ್ಪ ವಸೂಲಿ ಮಾಡಿತು. ಅವನ ಸೈನ್ಯವು ಅಲ್ಲಿಯ ಪಾಳೆಯಗಾರರಿಂದ ಕಪ್ಪ ವಸೂಲಿ ಮಾಡಿತು. ಅವನ ಸೈನ್ಯವು ಅಲ್ಲಿಯ ಪಾಳೆಯಗಾರರಿಂದ ಕಪ್ಪ ವಸೂಲಿ ಮಾಡಿತು.

ಬಂದಾಗ ಅವರನ್ನು ಹೈದರಾಲಿಯು ಓಡಿಸಿ, ಮೈಸೂರಿನ ರಾಜಕೀಯದಲ್ಲಿ ಪ್ರಭಲ ಶಕ್ತಿಯೊಂದನ್ನು ಶ್ರೀವೇಣಿ ಹೈದರನು ಮೈಸೂರಿನ ಸೇನಾ ನಾಯಕನಾದನು. ದಳವಾಯಿ ದೇವರಾಯ ಮತ್ತು ನಂಜರಾಜರೊಳಗಾದ್ವಂತಕಾಳಗದಲ್ಲಿ ಹೈದರನು ದಳವಾಯಿ ದೇವರಾಯನ ಪಕ್ಷ ವಹಿಸಿ ನಂಜರಾಜನನ್ನು ರಾಜಕೀಯದಿಂದ ನಿವೃತ್ತಿಹೊಂದುವಂತೆ ಮಾಡಿದನು. ಸೈನಿಕರು ಅತೃಪ್ತಿಯಿಂದ ಅರಮನೆಯ ಮುಂಭಾಗದಲ್ಲಿ ಧರಣಿ ಮುಷ್ಕರವನ್ನು ಮಾಡಿದಾಗ ಹೈದರನು ಅವರ ಮುಷ್ಕರವನ್ನು ಬಗ್ಗುಬಡಿದನು. ಇಂಗ್ಲಿಷ್ ಮತ್ತು ಫ್ರೆಂಚರೊಳಗೆ ನಡೆದ ಕದನದಲ್ಲಿ ಹೈದರನು ಮೈಸೂರಿನ ಅರಸರ ವಿರೋಧವಿದ್ದಾಗಲೂ ಫ್ರೆಂಚರಿಗೆ ಸಹಾಯ ಮಾಡಿ ಮೈಸೂರು ಅರಸರ ಅತೃಪ್ತಿಗೆ ಕಾರಣನಾದನು. ಹೈದರನ ಅಭ್ಯುದಯವು ಮೈಸೂರಿನ ರಾಣಿಗೆ ಭಯವನ್ನುಂಟು ಮಾಡಿತು. ಈ ಸಮಯದಲ್ಲಿ ಖಂಡೇರಾಯನು ದೊರೆಯ ಬೆಂಬಲಿಗನಾಗಿ ನಿಂತನು. ಇಬ್ಬರೂ ಕೂಡಿ ಹೈದರಾಲಿ ಸೈನ್ಯಾಡಗಿಸುವ ಪ್ರಯತ್ನ ಮಾಡಿದರು. ಸ್ವಲ್ಪಕಾಲ ಅವರ ಪ್ರಯತ್ನ ಫಲಿಸಿದರೂ, ಕೊನೆಗೆ ಹೈದರಾಲಿಯು ಖಂಡೇರಾಯನನ್ನು ಸೆರೆಹಿಡಿದು ಕ್ರಿ. ಶ. 1761ರಲ್ಲಿ ತಾನೇ ಮೈಸೂರಿನ ಸರ್ವಾಧಿಕಾರಿಯಾದನು. ಇದರ ನಂತರ ಮೈಸೂರಿನ ರಾಜ್ಯಭಾರವು ಇಮ್ಮಡಿ ಕೃಷ್ಣರಾಜನ ಹೆಸರಿನಲ್ಲೇ ನಡೆಯುತ್ತಿದ್ದರೂ, ಹೈದರನೇ ಮೈಸೂರಿನ ನಿಜವಾದ ಸರ್ವಾಧಿಕಾರಿ ಆಗಿದ್ದನು.

ಬಿದನೂರಿನ ಪತನ:—

ಹೈದರನು ಮಹತ್ವಾಕಾಂಕ್ಷಿಯೇ ಆಗಿದ್ದನು. ತಾನೇ ಸರ್ವಾಧಿಕಾರಿಯಾದೊಡನೆ ತನ್ನ ಸುತ್ತ ಮುತ್ತಲಿರುವ ಚಿಕ್ಕ ಪಾಳೆಗಾರರನ್ನು ಸೋಲಿಸಿ ಮೈಸೂರು ರಾಜ್ಯವನ್ನು ವಿಸ್ತರಿಸಿದನು. ಹೈದರಾಲಿಯ ಉದಯವು ಬಿದನೂರಿನ ಪತನಕ್ಕೆ ಕಾರಣವಾಯಿತು. ಈ ಕಾಲದಲ್ಲಿ ಬಿದನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೆಳದಿ ನಾಯಕರು ದಕ್ಷಿಣಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಹೆಚ್ಚಿನ ಭಾಗ, ಶಿವಮೊಗ್ಗ, ಚಿಕ್ಕಮಂಗಳೂರು ಜಿಲ್ಲೆಯ ಹೆಚ್ಚಿನಭಾಗ, ಧಾರವಾಡ, ಚಿತ್ರದುರ್ಗ ಮತ್ತು ಬಾಳಿಪ ಜಿಲ್ಲೆಯ ಕೆಲವು ಭಾಗಗಳನ್ನು ಆಳಿಕೊಂಡಿದ್ದರು. ಈ ಅರಸರನ್ನು ಕೆನರಾ ಅರಸರು ಎಂಬುದಾಗಿ ಕರೆಯುತ್ತಿದ್ದರೆಂದು ಪರದೇಶಿಯ ಬರಹಗಳು ತಿಳಿಸುತ್ತವೆ. ಈ ಪ್ರದೇಶವು ಸಂಪತ್ತಿನಿಂದ ತುಳುಕಾಡುತ್ತಿತ್ತು. ಇದರ ಸಾಮ್ರಾಜ್ಯದಲ್ಲಿ ಕೆನರಾ ಅತಿವಿಸ್ತಾರವಾದ ಪ್ರದೇಶವಾಗಿತ್ತು. ಕ್ರಿ. ಶ. 1754ರಲ್ಲಿ ಕೆಳದಿ ಇಮ್ಮಡಿ ಬಸವಪ್ಪ ನಾಯಕನು ಫಿಧನಹೊಂದಿದನು. ಅಂತಿಫಿಂದಲೇ ಬಿದನೂರಿನ ಸೈಭವದ ಇಳಿಮುಖವಾಯಿತೆನ್ನಬಹುದು. ಇವಫ ಕಾಲದ ಬಾದ ಚೆನ್ನಬಸವನಾಯ್ಕನು ರಾಜನಾಗಿದ್ದರೂ ಆಡಳಿತವೆಲ್ಲಾ ಇವನ ದತ್ತುತಾಯಿ ವೀರಮ್ಮಾಜಿ ನಡೆಸುತ್ತಿದ್ದಳು. ಅವಳ ಆಡಳಿತ ಕಾಲವೆಲ್ಲಾ ಇವನಿಗೆ ಹಿಡಿಸುತ್ತಿರಲಿಲ್ಲ. ಇದರಿಂದ ತಾಯಿ-ಮಗ ಇವರೊಳಗೆ ಕಲಹ ಉಂಟಾಯಿತು. ದುರ್ಬಲನೂ ವಿಲಾಸಿಯೂ ಆದ ಚೆನ್ನಬಸವ ನಾಯಕನು ಮಾಡಿದನು. ಅವನ ಮರಣಕ್ಕೆ ಅವನ ತಾಯಿಯೇ ಕಾರಣನೆಂದು ಕೆಲವು ಇತಿಹಾಸಕಾರರ ಅಭಿಪ್ರಾಯ. ಇದರಿಂದ ಕೆಳದಿ ಅರಸರು ಪ್ರಬಲಗಳ ಸಹಾನುಭೂತಿಯನ್ನು ಕಳೆದುಕೊಂಡರು. ರಾಣಿ ವೀರಮ್ಮಾಜಿಯು ಮುಮ್ಮಡಿ ಸೋಮಶೇಖರನೆಂಬ ಬಾಲಕನನ್ನು ದತ್ತಕ್ಕೆ ತೆಗೆದುಕೊಂಡು ತಾನೇ ಕೆಳದಿ ರಾಜ್ಯಭಾರ ನಡೆಸಿದಳು. ಆದರೂ ಕೆಳದಿಯ ರಾಜಮನೆತನದಲ್ಲಿ ಆಂತರಿಕಲಹಗಳು ನಿಲ್ಲಲಿಲ್ಲ. ದತ್ತಪುತ್ರ ಸೋಮಶೇಖರನಾಯಕನಿಗೆ ತಾಯಿಯ ಆಡಳಿತ ಜಿಗುಪ್ಸೆಯುಂಟುಮಾಡಿತು. ಒಟ್ಟಿನಲ್ಲಿ ರಾಜ್ಯದಲ್ಲಿ ಅಶಾಂತಿ, ಅಂತಃಕಲಹಗಳುಂಟಾದವು. ಈ ಘಟನೆಯು ಹೈದರಾಲಿಗೆ ಸಾಮ್ರಾಜ್ಯವನ್ನು ವಿಸ್ತರಿಸಲು ಸಹಾಯಕವಾಯಿತು. ಮೊದಲಿನಿಂದಲೇ ಹೈದರಾಲಿಯು ಕೆಳದಿ ಸಾಮ್ರಾಜ್ಯದ ಸಂಪತ್ತನ್ನು ಮತ್ತು ವೈಭವವನ್ನು ಕೇಳಿದ್ದನು. ಆದನ್ನು ವೈಸೂರು ರಾಜ್ಯದಲ್ಲಿ ವಿಲೀನಗೊಳಿಸಬೇಕೆಂಬ ಆಸೆ ಅವನಲ್ಲಿದ್ದಿತು. ಹೈದರಳು ಚಿತ್ರದುರ್ಗದಲ್ಲಿರುವಾಗ ಕೆಳದಿ ರಾಜ್ಯದಲ್ಲಿರುವ ಅಂತಃಕಲಹ ಇವನಿಗೆ ತಿಳಿಯಿತ್ತು. ಆ ಸಮಯದಲ್ಲಿ ವಡೇರೆ ನಾಯಕನನು ಕೆಳದಿ ರಾಜ್ಯದ ಪೇಲಿಪ ದ್ವೇಷ ಸಾಧಿಸಲು ಅಲ್ಲಿನ ಸಿಂಹಾಸನಕ್ಕೆ ಹಕ್ಕುದಾರನಾಗಿದ್ದ ಬಸವ ನಾಯ್ಕನನ್ನು ಹೈದರಾಲಿಗೆ ಪರಿಚಯ ಮಾಡಿಕೊಟ್ಟನು. ಈ ಹಕ್ಕುದಾರನು ಹೈದರಾಲಿಗೆ ಸಹಾಯ ಮಾಡುವೆನೆಂಬ ಭರವಸೆಯನ್ನು ಕೊಟ್ಟನು. ತಡವಾಡದೆ ಹೈದರನು ತನ್ನ ಸೈನ್ಯವನ್ನು ಬಿದನೂರಿನ ಕಡೆಗೆ ರವಾನಿಸಿದನು. ಬಿದನೂರಿಗೆ ಹೋಗುವ ದಾರಿಯಲ್ಲಿ ತೀರ್ಥಹಳ್ಳಿಯಲ್ಲಿರುವ ಪಡಭ್ಯಸ್ಥ ಬಿದನೂರಿನ ಮಂತ್ರಿ ಲಿಂಗಣ್ಣವನ್ನು ಬಿಡುಗಡೆಮಾಡಿ ಅವನಿಂದ ಗುಪ್ತಮಾರ್ಗವನ್ನು ತಿಳಿದುಕೊಂಡು ಬಿದನೂರನ್ನು ಆಕ್ರಮಿಸಿದನು. ಒಬ್ಬ ಇತಿಹಾಸಕಾರನ ಅಭಿಪ್ರಾಯದಂತೆ ರಾಜಿಯು ಧೈರ್ಯಗೆಡದೆ ಹೈದರನ ಸೈನ್ಯವನ್ನು ಎದುರಿಸಿದಳು. ಇದೇ ಸಮಯದಲ್ಲಿ ಅವಳು ಮರಾಠ ಮತ್ತು ಸವಣೂರಿನ ನವಾಬನ ಸೈನಿಕ ಸಹಾಯ ಕೇಳಿದಳು. ಆದರೆ ಇವರ ಸಹಾಯ ಕ್ಲುಪ್ತ ಸಮಯದಲ್ಲಿ ಒದಗಲಿಲ್ಲ. ಆನಂತರ ರಾಣಿಯು ಹೈದರನಿಗೆ ಬಹಳ ದುಡ್ಡು ಕೊಡುವೆನೆಂದು ತಿಳಿಸಿ ಅವನು ತನ್ನ ಸೈನ್ಯವನ್ನು ಹಿಂದೆ ತೆಗೆದುಕೊಂಡು ಹೋಗಬೇಕೆಂದು ಪ್ರಾರ್ಥಿಸಿದಳು. ಆದರೆ ಹೈದರನು ಅವಳ ಕೋರಿಕೆಯನ್ನು ತಿರಸ್ಕರಿಸಿದನು. ಆನಂತರ ಹೈದರಾಲಿಯ ಸೈನ್ಯವನ್ನು ಎದುರಿಸಲು ಕಿಡಾರವಾಡಿದಳು. ಘೋರ ಯುದ್ಧವಾಯಿತು. ಕೊನೆಗೆ ಹೈದರನ ಕೈವೇಲು ಆಗಲು ರಾಣಿ ವೀರಮ್ಮಾಜಿ ಬಿದನೂರನ್ನು ಬಿಟ್ಟು ಬಲ್ಲಾಳ ದುರ್ಗಕ್ಕೆ ಹೋದಳು. ಹೋಗುವ ಪೂರ್ವದಲ್ಲಿ ಅರಮನೆಗೆ ಬೆಂಕಿಯಿಷ್ಟಿಟ್ಟಳು. ಟಿಪ್ಪು ಸುಲ್ತಾನನ ಅಸ್ಥಾನದಲ್ಲಿದ್ದ ಕೆರ್ಮಾಫಿ ಎಂಬ ಇತಿಹಾಸಕಾರನು ರಾಣಿ ವೀರ

(ಇಪ್ಪತ್ತೈದನೇ ಪುಟ ನೋಡಿರಿ)

THE PRESS
for NEAT CLEAR ARTISTIC PRINTING
THE NAVAYUGA PRESS
UDIPI
Printers for—
NAVAYUGA Weekly
SAHITYA MANDARA Monthly
We undertake all kinds of Bookwork
Job work etc.
PROPRIETORS:
NAVAYUGA ENTERPRISE LTD.
Regd. Office: PALUKOTE, UDIPI.

ನಮ್ಮ ರಾಷ್ಟ್ರನಿಷ್ಠೆ ಬೆಳೆಯುತ್ತಿದೆಯೇ?

ಸಿರಾಯುಧರಾಗಿ ವಿದೇಶೀಯರನ್ನು ಓಡಿಸಿ ನಾವು ಸ್ವತಂತ್ರರಾದೆವು, ಸ್ವಾತಂತ್ರ್ಯಾನಂತರ ನಾವೇನು ಮಾಡುತ್ತಿದ್ದೇವೆ? ದೇಶಕಟ್ಟುವಲ್ಲಿ ನಾವು ಬೇಕಾಕಾರರಾಗಿದ್ದೇವೆಯೇ ಹೊರತು, ಕಾರ್ಯಪಟುಗಳಾಗಲಿಲ್ಲ. ಅಂದಿದ್ದ ನಮ್ಮ ರಾಷ್ಟ್ರನಿಷ್ಠೆ ಇಂದಿಲ್ಲಿ ಹೋಯಿತು? ಅದಿಲ್ಲದೆ ನಾವು ಉನ್ನತರಾಗುವುದು ಸಾಧ್ಯವೆ?

ದೇಶದ ಭವಿಷ್ಯತ್ತನ್ನು ನಿರ್ಧರಿಸುವಾಗ ಅಲ್ಲಿಯ ಜನರಲ್ಲಿರುವ ಭಾವನೆ-ಸಾಧನೆಗಳನ್ನು ನೀರೀಕ್ಷಿಸಿ ಅದು ದೇಶಕ್ಕೆ ಅನುಕೂಲವಾಗಿದೆಯೋ ಎಂಬುದನ್ನು ತಿಳಿದು ಕೊಳ್ಳಬೇಕಾಗುತ್ತದೆ. ಜನರ ಕಲ್ಪನೆಯಲ್ಲಿ ರಾಷ್ಟ್ರದ ಪ್ರಜ್ಞೆ ಮೂಡಿ ಬೆಳೆದರೆ ದೇಶ ಶಕ್ತಿಯೆಂದೂ ನಾವು ದೇಶದ ಪ್ರಜೆಗಳೆಂದೂ ತಿಳಿದರೆ ಅಂಥ ದೇಶದ ಭವಿಷ್ಯ ಭದ್ರವಾಗುತ್ತದೆ. ಎಂಥ ಸಂದರ್ಭದಲ್ಲಿಯೂ ಅಲ್ಲಿಯ ಪರಿಸ್ಥಿತಿ ಹದಗೆಡದಂತಾಗುತ್ತದೆ.

ಹಾಗಾಗಿ ಜನರಲ್ಲಿ ರಾಷ್ಟ್ರೀಯ ಭಾವನೆಯ ಜಾಗ್ರತಿ ತೀರ ಅವಶ್ಯ. ದೇಶದ ಬಗ್ಗೆ ಅದರ, ಅಭಿಮಾನ, ಅಪಾರ ಅನುಭವಗಳು ಹೆಚ್ಚಿ "ದೇಶವೇ ನನ್ನ ಮನೆ" ಎಂಬ ಮಾತಿನ ಭಾವ ಎರಕ ಹೊಯ್ದಂತೆ ಇದ್ದರೆ, ದೇಶಕ್ಕಾಗಿ ಸರ್ವಾರ್ಪಣದ 'ಸ್ಥಿತ ಪ್ರಜ್ಞತೆ' ಬೆಳೆದರೆ ಅಂಥ ದೇಶಕ್ಕೆ ಯಾವಾಗಲೂ ಯಾವ ಕೊರತೆಯೂ ಬರಲಾರದು. ಯಾರಿಂದಲೂ ಅಪಾಯ ಸಂಭವಿಸಲಾರದು.

ದೇಶದ ಸಂಪತ್ತಿನಲ್ಲಿ ಈ ವಿಚಾರ ಜಾಸ್ತಿ ದೊಡ್ಡದು. ದೇಶದಲ್ಲಿ ಬೇರೆ ಬೇರೆ ಸಂಪತ್ತುಗಳು ಹೇರಳವಾಗಿದ್ದರೂ ಅಲ್ಲಿಯ ಪ್ರಜೆಗಳಲ್ಲಿ ಇರಬೇಕಾದ ಬೆಳೆಸುಬೇಕಾದ "ದೇಶ ನಮ್ಮದು ದೇಶಕ್ಕಾಗಿ ದುಡಿಯುವದು ನಮ್ಮ ಧರ್ಮ" ಎಂಬ ಭಾವನೆಯೆಂದಿದ್ದರೆ ಉಳಿದ ಸಂಪತ್ತುಗಳಂದ ದೇಶದ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಬಹುದು. ಸಾಧ್ಯವಾಗಲಾರದು. ಈ ಕಾರಣದಿಂದಾಗಿ ದೇಶದ ಬಲ ಸಂವರ್ಧನೆಯಲ್ಲಿ ರಾಷ್ಟ್ರೀಯತೆ ಅತ್ಯಂತ ಮುಖ್ಯವಾಗಿದೆ.

ನಮ್ಮ ಹಿಂದಿನ ಅನೇಕ ಹಿರಿಯರು ದೇಶಕ್ಕಾಗಿ ದುಡಿದಿದ್ದಾರೆ. ಈ ರೀತಿ ದುಡಿಯುವುದರಲ್ಲಿ 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಸ್ವರ್ಗಸುಖಕ್ಕಿಂತಲೂ ಹೆಚ್ಚಿನ ಸೌಖ್ಯವನ್ನು ಕಂಡಿದ್ದಾರೆ. ದೇಶಕ್ಕಾಗಿ ತ್ಯಾಗಮಾಡುವದು ಪರಮ ಪುರುಷಾರ್ಥವೆಂದು ತಿಳಿದಿದ್ದಾರೆ.

ಇಂಥ ಉಜ್ವಲ ರಾಷ್ಟ್ರೀಭಾವನೆಯಿಂದಾಗಿಯೇ ನಾವು ನಮ್ಮ ದೇಶದ ದಾಸ್ಯ ಶೃಂಖಲೆಯನ್ನು ಕಿತ್ತೊಗೆದೆವು. ಪರಕೀಯರ ಆಡಳಿತವನ್ನು ಮಣ್ಣಾಯಗೊಳಿಸಿದೆವು. ಆಗ ಅವರನ್ನು ಎದುರಿಸಲು ನಮ್ಮಲ್ಲಿ ಯಾವ ಶಕ್ತಿಯಿತ್ತು? ಮದ್ದು ಗುಂಡುಗಳೇ ಮುಂತಾದ ಯುದ್ಧೋಪಕರಣಗಳಿಂದ ಸುಸಜ್ಜಿತವಾದ ವಿದೇಶೀಯರನ್ನು ನಾವು ಯಾವ ಬಲದಿಂದ ಎದುರಿಸಿದೆವು? ನಮ್ಮಲ್ಲಿರುವ ರಾಷ್ಟ್ರಾಭಿಮಾನ, ದೇಶಪ್ರೇಮ ಇವುಗಳ ಮುಂದೆ ತಮ್ಮ ಯಾವ ಆಟ ಕೂಟಗಳೂ ನಡೆಯಲಾರವೆಂದು ಹಿಂದಿರುಗಬೇಕಾಯಿತು. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಂಥ ಅನೋಘ ರಾಷ್ಟ್ರೀಯತೆಯು ವಿಕಾಸ ನಮ್ಮಲ್ಲಿ ಆಗಿದ್ದರಿಂದ ಸ್ವಾತಂತ್ರ್ಯ ಪಡೆಯಲು ನಾವು ಇಷ್ಟು ದೀರ್ಘ ಸಮರ್ಥರಾಗುತ್ತಿದ್ದಿಲ್ಲ. ದೇಶಕ್ಕಾಗಿ ದುಡಿಯುವ ಆ ಕೆಚ್ಚು; ಎಂಥ ಕಷ್ಟನಷ್ಟಗಳೇ ಬರಲಿ; ದೇಶ ಪ್ರೇಮದ ಮುಂದೆ ಅವು ಮುಖ್ಯವಲ್ಲ ಎಂಬ ವಿಚಾರದಿಂದ ತ್ಯಾಗ ಸೇವೆ ನಡೆಸಿದ ಆ ಅಸೂರ್ಯ ಸಂದರ್ಭ ನಿಜವಾಗಿಯೂ ರಾಷ್ಟ್ರೀಯ ಸ್ಫೂರ್ತಿಯ ಭವ್ಯ ಪ್ರತೀಕವೆಂದು ಹೇಳಬಹುದಾಗಿದೆ.

ಹೀಗೆ ಮೂಡಿರುವ ಇನ್ನೊಂದು ಪಕ್ಷವೆಂದರೆ ಸ್ವತಂತ್ರ ಪಾರ್ಟಿ. ಭಾರತೀಯ ಜನಸಂಘ, ಸ್ವತಂತ್ರ ಪಾರ್ಟಿ ಮತ್ತು ಭಾರತೀಯ ಕ್ರಾಂತಿದಳಗಳು ಸೇರಿ ಶ್ರೀ ಸಂಜೀವ ರೆಡ್ಡಿಯವರ ಹೆಸರನ್ನು ಸೂಚಿಸಿದೆ ಶ್ರೀ ಸ.ಬ್ಬರಾಯರು, ಒಂದು ಸಲ ಬೆಂಗಳೂರು ಸುಟ್ಟುಕೊಂಡವರು, ಪುನಃ ಇವರ ಕೊಲೆಗೆ ಬೀಳದಿರುವದೇ ಇದಕ್ಕೆ ಕಾರಣವಿದೆ ಶ್ರೀ ಗಿರಿಯವರು ಕಮ್ಯೂನಿಸ್ಟರ ಕೈಯಿಟ್ಟ ಬಿದ್ದಿರುವದರಿಂದ ಅವರಿಗೆ ತಾವು ಮತದಾನ ಮಾಡುವದಿಲ್ಲವೆಂದು ಹೇಳಿರುವ ಭಾರತೀಯ ಜನಸಂಘ ಶ್ರೀ ದೇಶಮುಖರು ಕಾಂಗ್ರೆಸ್ ಯೋಚಿಸಿದೆ ಎನ್ನಿ? ಕೇಂದ್ರ ಮಂತ್ರಿಮಂಡಲದಲ್ಲಿ ಮಂತ್ರಿ ಸ್ಥಾನದಲ್ಲಿದ್ದ ಶ್ರೀ ದೇಶಮುಖರು ಪ್ರತ್ಯೇಕ ಮಹಾರಾಷ್ಟ್ರದ ಸ್ವರ ಕೇಳಿ ಒಂದೊಡನೆ ರಿಸೈನ್ ರಾಜೀನಾಮೆ ಕೊಟ್ಟು ಒಂದವರಿದ್ದಾರೆ. ಇಂತಹ ವ್ಯಕ್ತಿ ರಾಷ್ಟ್ರಾಧ್ಯಕ್ಷರಾದ್ದಲ್ಲಿ ನಾಳೆ ಮಹಾರಾಷ್ಟ್ರ ಕರ್ನಾಟಕಗಳ ಪ್ರಶ್ನೆ ಉದ್ಭವಾಗಿ ರಾಷ್ಟ್ರದಲ್ಲಿ ಯಾದಾಗ ಅವರು ಏನಾದರೂ ಮಾಡಲಿಕ್ಕಿಲ್ಲವೆಂದು ನಿಶ್ಚಿತವಾಗಿ ಹೇಳಲಿಕ್ಕಾಗುವದಿಲ್ಲ. ಕಾರಣವಿಷ್ಟೆ. ಸ್ವತಂತ್ರ ಪಾರ್ಟಿಯು 'ಇಂಡಿಪೆಂಡೆಂಟ್ ಫೇರ್ ಡೀಲಿಂಗ್' ಅವರಿಗೆ ಅತ್ಯಂತ ಮೆಚ್ಚಿನ ವಿಷಯವಿದೆ. ಭಾರತೀಯ ಭಾಷೆಯೇ ಭಾರತದ ಆಡಳಿತ ಭಾಷೆಯಾಗಬೇಕೆನ್ನುವ ಭಾರತೀಯ ಜನತೆ ಫ ಇವರನ್ನು ಆದೆಂತು ಸಹಿಸಿಕೊಳ್ಳಬಲ್ಲದೀ! ಇದಕ್ಕೇನೇ ರಾಜಕೀಯವೆನ್ನುವದು. ಇವನ್ನೆಲ್ಲಾ ದೋಚಿಸಿ ಕೊಂಡೇ ಶ್ರೀ ಸಂಜೀವ ರೆಡ್ಡಿಯವರಿಗೆ ದ್ವಿತೀಯ ಪ್ರಶ ಇಚ್ಛಾಮತಗಳನ್ನು ಹಾಕಲು ಬಾರದೆಂದು ಜನಸಂಘ ಸೂಚಿಸಿರುತ್ತದೆ. ಆದರೆ ಈ ರೀತಿಯು ದ್ವಿಮತ ಪ್ರಕ್ರಿಯೆಯನ್ನು ಒಗ್ಗದ ಕೆಲ ಸದಸ್ಯರು ಆದಾಗಲೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರೆಂದು. ದ್ವಿತೀಯ ಪ್ರಶದ ಬದಲು ಪ್ರಥಮ ಮತಗಳನ್ನೇ ಅವರು ಹಾಕಿದರೂ ಅಶ್ಚರ್ಯವೇನಿಲ್ಲ.

ಭಿನ್ನ ಭಿನ್ನ ಪಕ್ಷಗಳ ಬಣ್ಣ ಈ ರೀತಿ ಬಯಲಾಗಿದೆಯಾದ್ದರಿಂದ ಅವುಗಳ ನಡುವೆ ನಡೆಯುವ ಮೈತ್ರಿಯಾದಿ ವಿಶ್ವಾಸವು ಬಣ್ಣವೂ ಬಯಲಾಗಿರುತ್ತದೆ. ಪಂಜಾಬಿನಲ್ಲಿ ಅಖಾಲಿ—ಜನಸಂಘ ಮಿಶ್ರ ಮಂತ್ರಿಮಂಡಲ ಇದೆ. ಅಲ್ಲಿಗೆ ಭಾಷಾ ಆಡಳಿತವಿರುವುದನ್ನು ಜರಿಯುತ್ತಿರುವ ಜನಸಂಘದವರನ್ನು ಅದೆಂತಾದರೂ ಮೂಡಿನೊಳಗೆ ಹಾಕಿಕೊಳ್ಳಬೇಕೆಂದು ಶ್ರೀ ಗುರ್ನಾಮ ಸಿಂಗರು ಅಲ್ಲಿ ಪ್ರಯತ್ನಿಸುತ್ತಿದ್ದಾರೆ. ಹಾಗಲ್ಲಿ ಅಖಾಲಿ ದಳವು ಶ್ರೀ ಗಿರಿಯವರಿಗೆ ಬೆಂಬಲ ಕೊಡುವುದಾಗಿ ಹೇಳಿರಬಹುದೆ. ಇದೀಗ ಜನಸಂಘವು ಶ್ರೀ ಚಿಂತಾಮಣಿಯವರನ್ನು ಫಿಕ್ಸಿಸಿದೆ. ಇದರಿಂದ ಅಪಕ್ಷಗಳ ನಡುವಣ ಸೈತ್ರಿ ಫಲ ಅವ್ಯಾಂತಗಳಲ್ಲಿ ಕಿಡಿಕಾರಿ ಹಂಚಿ ಕೊಳ್ಳುವದಕ್ಕೇನೇ ಸೀಮಿತವಾಗಿದೆಯೆಂದು ಸ್ಪಷ್ಟವಾಗಿ ತೋರಿದೆ.

ಒರಿಸ್ಸಾದಲ್ಲಿ ಸ್ವತಂತ್ರ ಪಾರ್ಟಿಯು ಇತರ ಪಕ್ಷಗಳ ಸಮಾಪ್ತಿಯಿಂದ ಮಂತ್ರಿ ಮಂಡಲವನ್ನು ನಡೆಸಿಕೊಂಡು ಇರುತ್ತಿದೆ. ಈ ಬೆಳವಣಿಗೆಯು ಅಧಿಕಾರ ಹಂಚಿ ಕೊಳ್ಳುವದಕ್ಕಾಗಿಯೇ ಇವರು ರಾಷ್ಟ್ರಾಧ್ಯಕ್ಷ ಚುನಾವಣೆಯಲ್ಲಿ ಪಕ್ಷಗಳಿಗೂ ಸ್ವತಂತ್ರ.

ತಮಿಳುನಾಡಿನಲ್ಲಿ ದ್ರಾವಿಡ ಮುನ್ನೇಟ್ರ ಕಳ್ಳಗಮಿನ ಅಧಿಕಾರ ನಡೆಯುತ್ತಿದೆಯೊದರೂ ಅದನ್ನ ಗದ್ದುಗೆಗೇರಿಸಿದವರು ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರೆ. ದಿವಂಗತ ತಿರುವಾಡೊ ರೈರವರೂ ಶ್ರೀ ಕರುಣಾ ನಿಧಿಯವರೂ ಮುಖ್ಯಮಂತ್ರಿ ಅಣ್ಣಾದೊರೈಯವರ ಸಂಪುಟದಲ್ಲಿ ಮಂತ್ರಿಗಳಾಗಿ ಅಧಿಕಾರವಹಿಸಿಕೊಂಡಿದ್ದರು. ಅಣ್ಣಾದೊರೈಯವರ ಅಕಾಲ ಮರಣದಿಂದ ಕರುಣಾನಿಧಿಯವರು ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡರು. ಆದರೆ ಅವರಿಗೆ ಬಹುಮತವಿಲ್ಲದಿದ್ದರಿಂದ ಅವರು ಕಾಂಗ್ರೆಸ್ಸಿನ ಬೆಂಬಲವನ್ನು ಕೋರಿದರು. ಕಾಂಗ್ರೆಸ್ಸಿಗರು ಅವರಿಗೆ ಬೆಂಬಲ ಕೊಟ್ಟರು. ಆಗ ಕಾಂಗ್ರೆಸ್ಸಿಗರು ಮಂತ್ರಿಮಂಡಲದಲ್ಲಿ ಸೇರಿಕೊಳ್ಳಲಿಲ್ಲ. ಈಗ ಕಾಂಗ್ರೆಸ್ಸಿಗರು ಬೆಂಬಲ ಕೊಡುವದನ್ನು ನಿಲ್ಲಿಸಿದ್ದರಿಂದ ಕರುಣಾನಿಧಿಯವರು ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟರು. ಆದರೆ ಅವರಿಗೆ ಬಹುಮತವಿರುವದರಿಂದ, ಅವರೇ ಮತ್ತೆ ಮಂತ್ರಿಮಂಡಲವನ್ನು ರಚಿಸಿದರು. ಕಾಂಗ್ರೆಸ್ಸಿಗರು ಮಂತ್ರಿಮಂಡಲದಲ್ಲಿ ಸೇರಿಕೊಳ್ಳಲಿಲ್ಲ. ಈಗ ಕಾಂಗ್ರೆಸ್ಸಿಗರು ಕರುಣಾನಿಧಿಯವರಿಗೆ

ಬೆಳ್ಳುಳ್ಳಿ ಮಹಾತ್ಮೆ

ಬರೆದವರು: ಶ್ರೀ ಎಚ್. ಎಂ. ನಾರಾಯಣ ಭಟ್.

ಬೆಳ್ಳುಳ್ಳಿಯ ಪರಿಚಯವಿಲ್ಲದವರು ವಿರಳ. ಇದರ ವಾಸನೆ ಕೇಳಲಾರದವರೂ ಇಲ್ಲವಿಲ್ಲ. ಅಡುಗೆ ಕೋಣೆಯ ಜಿಪ್ಲಿಯಲ್ಲಿ ಬೆಳ್ಳುಳ್ಳಿ ಹುರಿದರೆ (ಒಗ್ಗರಣೆಗೆ) ಅದರ ವಾಸನೆ ಅಂಗಳದಲ್ಲಿ ಹರಡೀತು. ಬೆಳ್ಳುಳ್ಳಿ ತಿಂದ ಪರ ಶರೀರ ಬೆವರಿದಾಗಲೆಲ್ಲ ಬೆಳ್ಳುಳ್ಳಿ ವಾಸನೆಯ ಪುಣ್ಯ ಪ್ರಸಾದ.

ಕಂದಮೂಲಗಣ್ಣಾಗಲೀ ಗಡ್ಡೆ ಗೆಣಸು ವರ್ಗಕ್ಕೆ ಸೇರಿದ ಯಾವುದೇ ಗಡ್ಡೆಯನ್ನಾದರೂ ಬೇಯಿಸಿ ತಿನ್ನಲು ಕೊಟ್ಟರೆ ಅಜ್ಜಯ್ಯರು ವಿಚಾರಿಸುವುದಿದೆ ಬೆಳ್ಳುಳ್ಳಿಯನ್ನು-ನಾಲ್ಕು ಬೆಳ್ಳುಳ್ಳಿಯ ಸಹಿತ ನೀಡಿದರೆ ಗ್ಯಾಸ್ ಟ್ರಬಲ್ ಇದ್ದ ಅಜ್ಜಯ್ಯ ಏನನ್ನೂ ತಿನ್ನುವರು.

ಊಟದ ನಂತರ ಸ್ವಲ್ಪ ಬೆಳ್ಳುಳ್ಳಿ ತಿಂದರೆ ತನ್ನ ಹೊಟ್ಟೆ "ಪಂಚ್" ಆದ ಟ್ಯೂಬಿನ ಹಾಗೆಂದು ಅವರೇ ವರ್ಣಿಸುತ್ತಿದ್ದರು.

ಸಂಗೀತಗಾರರಿಗೆ ಉತ್ತಮ ಮಟ್ಟದ ಶಾರೀರ (ಕಂಠ) ನೆಲೆನಿಲ್ಲಲು ಬೆಳ್ಳುಳ್ಳಿ ಸೇವನೆ ಸದಾಯಕವಂತೆ.

ಭೂತ-ಪ್ರೇತ-ಪಿಶಾಚಿಗಳ ಹೆದರಿಕೆಯಿದ್ದವರ್ಗ ವೃದ್ಧರು ಮಂಡಿಲ್ಲಿ ಬೆಳ್ಳುಳ್ಳಿಯಿರಿಸಿ ಯಾವ ಸ್ಮಶಾನವಷ್ಟು ಬೇಕಾದರೂ ನಿರ್ಭೀತಿಯಿಂದ ಪ್ರದೇಶಿಸುವ ಧೈರ್ಯಶಾಲಿ. ಪಿಶಾಚಿಗಳ ನಂ. 1ನೇ ಶತ್ರು ಬೆಳ್ಳುಳ್ಳಿಯಂತೆ.

ರೋಮನರಿಗೆ ಬೆಳ್ಳುಳ್ಳಿ ಮಹಾತ್ಮೆಯ ಬಗ್ಗೆ ಕೆಟ್ಟದ್ದನ ವಿಶ್ವಾಸವಿತ್ತು. ಯುದ್ಧರಂಗಕ್ಕೆ ಹೋಗುವ ಯೋಧರು ಬೆಳ್ಳುಳ್ಳಿಯನ್ನೂ ತಂತಮ್ಮ ವಶ ಇರಿಸಿಕೊಳ್ಳುತಿದ್ದುದಾಗಿ ಪ್ರತೀತಿ.

ಬೆಳ್ಳುಳ್ಳಿಯನ್ನು ಸಂಸ್ಕೃತದಲ್ಲಿ ಅರಿಷ್ಟೋಟ ಎನ್ನುವರು. ಇದರ ಉದ್ದೇಶ ಕುರಿತು ಒಂದು ಶ್ಲೋಕ ಸ್ವಾರಸ್ಯವಿದೆ.

ಸರ್ವಪ್ರ ಮಥಿತದ ಬೇಳೆ ದೇವತೆಗಳೊಂದಿಗೆ ಹೇಗೋ ಸೇರಿ ಅಮೃತ ಸೇವಿಸಿದ ರಾಹು ಎಂಬ ರಾಕ್ಷಸನ ಶಿರಸ್ಸನ್ನು ಮಹಾ ವಿಷ್ಣು ಛೇದಿಸಿದಾಗ ಹರಿದ ಅಮೃತಮಯ ರಕ್ತ ಬಿಂದು ಎಂದು ಬೆಳ್ಳುಳ್ಳಿಯನ್ನು ಪೂರ್ವಿಕರು ನಂಬಿದ್ದರು.

ಹೀಗಿದ್ದರೂ ಇಂದು ಈ ಅರುರಬೀಜ ಆಂತಾರಾಷ್ಟ್ರೀಯ ಪ್ರಾಧಾನ್ಯತೆ ಗಳಿಸಿದೆ.

ಮೆಕ್ಸಿಕೋ, ಸ್ಪೆಯಿನ್, ಭಾರತ, ಚೈನಾ, ಅಮೆರಿಕಾ, ಇಟೆರಿ ಮುಂತಾದ ದೇಶಗಳಲ್ಲಿ ಬೆಳ್ಳುಳ್ಳಿಯನ್ನು ಹೆಚ್ಚಾಗಿ ಬೆಳೀಲಾಗುತ್ತಿದೆ.

ಭಾರತದಲ್ಲಿ ಸಾವಿರಾನ್ನವಾಗಿ ವರ್ಷಕ್ಕೆ 25000 ಹೆಕ್ಟರ್ ವಿಸ್ತೀರ್ಣದಲ್ಲಿ ಬೆಳ್ಳುಳ್ಳಿ ಕೃಷಿಗೊಳ್ಳುತ್ತಿದೆ. ವಾರ್ಷಿಕ ಉತ್ಪಾದನೆ ಒಂದು ಲಕ್ಷ ಟನ್ನಿಗೂ ಮಿಕ್ಕಿದೆ. ಉತ್ಪಾದನೆಯಲ್ಲಿ ಹೆಚ್ಚಿನ ಭಾಗವೂ ನಮ್ಮಲ್ಲೇ ಉಪಯೋಗಿಸಲ್ಪಡುತ್ತಿದೆ.

ಮಹಾರಾಷ್ಟ್ರದ ಪೂನಾ, ನಾಸಿಕ, ಮಧ್ಯಪ್ರದೇಶದ ಇಂದೋರ್, ಗ.ಜರಾತಿನ ಜಾಮ್‌ನಗರ, ಮೈಸೂರಿನ ಧಾರವಾಡ, ಉತ್ತರಪ್ರದೇಶದ ಮುಥರೆ ಮುಂತಾದವು ಬೆಳ್ಳುಳ್ಳಿ ಕೃಷಿ ಪ್ರಧಾನವಲಯಗಳು.

ಪ್ರಯೋಜನಗಳು

ಭಕ್ಷಣ ಪದಾರ್ಥಗಳಿಗೆ ರುಚಿ ಶುಚಿ ಸುವಾಸನೆಯನ್ನೂ ಹೆಚ್ಚಿಸಲೂ ಉಪ್ಪಿನ ಕಾಯಿ ತಯಾರಿಕೆಗೂ ಧಾರಣದಲ್ಲಿ ಬೆಳ್ಳುಳ್ಳಿ ಸಾಧಾರಣವಾಗಿ ಉಪಯೋಗಿಸಲ್ಪಡುತ್ತಿದೆ.

ಸ್ವರ ಶುದ್ಧಿಗೂ ಬುದ್ಧಿವರ್ಧನೆಗೂ ಸೌಂದರ್ಯ ಸಂರಕ್ಷಣೆಗೂ ಪೂರ್ವಿಕರು ಬೆಳ್ಳುಳ್ಳಿಯನ್ನು ಉಪಯೋಗಿಸುತ್ತಿದ್ದರೆನ್ನಲಾಗಿದೆ.

ಉತ್ತಮ ಜೀರ್ಣಶಕ್ತಿದಾಯಕವಾತ, ವಾತ ಜ್ವರಗಳಿಗೂ ದಿವ್ಯೌಷಧ.

ಬೆಳ್ಳುಳ್ಳಿಯನ್ನು ಜಜ್ಜಿ ಒಂದು ಬಟ್ಟೆಯಲ್ಲಿ ಕಟ್ಟಿಯಾಕಿ ಕಾಡಿಸಿದ ಹಾಲು ಸೇವನೆ 'ಗ್ಯಾಸ್ ಟ್ರಬಲ್'ಗೆ ಔಷಧ.

ಗಾಯಗಳನ್ನೂ ವ್ರಣಗಳನ್ನೂ ತೊಳೆಯುವ ತಳಿಸಾರಿಗೆ ಬೆಳ್ಳುಳ್ಳಿಯ ವಿಶ್ರಮಾಡುವುದು. ಉತ್ತಮ ಪರಿಣಾಮಕಾರಿ.

ಬೋಧಪ್ಪದವನು ಪಚ್ಚರಿಗೊಳ್ಳುವಂತೆಗಲು ಹುಣಿಗೆ ಬೆಳ್ಳುಳ್ಳಿರಸ ಬಿಂದುಗಳಾಗಿ ಹಾಕುವುದು ಫಲಪ್ರದ.

ನೇವಸ, ಮೈಗ್ರೇನಿಯೂ, ಉದರ ಶೂಲೆ ಇತ್ಯಾದಿಗಳಿಗೆ ಬೆಳ್ಳುಳ್ಳಿ ಔಷಧ.

ಕಿವಿ ಕೇಳದಾಗ ಅಥವಾ ಕಿವಿನೋವಿಗೆ ಬೆಳ್ಳುಳ್ಳಿ ರಸಕ್ಕೆ ಕಾಯಿಸಿದ ಎಳ್ಳೆಣ್ಣೆಯನ್ನು ಕಿವಿಗೆ ಹಾಕುವುದು ಫಲಪ್ರದ.

ಬೆಳ್ಳುಳ್ಳಿ ಹುರಿದ ಎಳ್ಳೆಣ್ಣೆ + ಕಾಸಿದ ಎಣ್ಣೆ ಲೇಪನ ತಲೆ ಕಜ್ಜಿ ಹರ.

ನಿತ್ಯವೂ ಬೆಳ್ಳುಳ್ಳಿ ಸೇವನೆ ಕ್ಷಯ ರೋಗ ಪ್ರತಿಬಂಧಕವೆನ್ನಲಾಗಿದೆ.

ತಿದ್ದುಪಡಿ

ಕಳೆದ ವಾರದ ಸ್ವತಂತ್ರ ವಿಶೇಷಾಂಕದ ಪದನಿವೇದನೇ ಪುಟದಲ್ಲಿ ಪ್ರಕಟವಾದ 'ಎಸ್. ಎಲ್. ಶೇಟ್ ಹಾಯುಮಂಡ್ ಹೌಸ್' ಜಾಹೀರಾತಿನಲ್ಲಿ 14 ct. ಚಿನ್ನಾಭರಣಗಳಿಗೆ ಎಂದು ಕಟ್ಟಾಗಿ ಪ್ರಕಟವಾಗಿದೆ. 14 ct. ನ ಬದಲಿಗೆ 22 ct. ಚಿನ್ನಾಭರಣಗಳಿಗೆ ಎಂದಾಗಬೇಕು. [ಸಂ. ಸ.]

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 47/68.

The P.V. Motor Ltd., Mangalore— } ವಾದಿ

R. ಬಾಬುರಾವ್ ಕೂಡಾ-ಪ್ರತಿವಾದಿರು 1ನೇ ವಾದಿ — ಶಿಕಾಮಣಿ— ಪೆರುವೊಳಿನ ಮಗ, c/o Durga Travels, 5, Silver Jublee Park Road, Bangalore — 2.

ಸದ್ರಿ 1ನೇ ಪ್ರತಿವಾದಿಗೆ ಕೋರ್ಟ್ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಯ ಬಾಬ್ತು MYX 6131 ನೇ ಬಸ್ಸು ಮತ್ತು 1ನೇ ಪ್ರತಿವಾದಿಯ MYD 2432ನೇ ಬಸ್ಸುಗಳು ಸುಳ್ಯ ತಾಲೂಕಿನ ಪೈಚಾರು ಬಳಿ ಡಿಕ್ಕಿ ಹೊಡೆದ ಬಾಬ್ತು ಆ ಬಗ್ಗೆ ವಾದಿಗಾದ ನಷ್ಟ ರೂ. 2600/-ನ್ನು 1ನೇ ಪ್ರತಿವಾದಿಯು ಡ್ರೈವರನಾದ ತಿಮ್ಮಪ್ಪ ಕೂಡಾ ಬರಬೇಕಾಗಿ ತಿಮ್ಮ ಮೇಲೆ ಮೂಡಿದ ಈ ದಾವೆಯನ್ನು ತಿಮ್ಮ ನೋಟೀಸಿನ ಬಗ್ಗೆ ತಾ. 26.9.68 ಕ್ಕೆ ಇಟ್ಟರುತ್ತದೆ. ಸದ್ರಿ ದಿನದ ಈ ಕೋರ್ಟ್ ಮುಂದೆ ಹಾಜರಾಗಿ ಉಡಪಡಿಸಕ್ಕದ್ದು. ತಪ್ಪಿದಲ್ಲಿ ತಿಮ್ಮನ್ನು ಶಿಕ್ಷಾರ್ಹಮಾಡಿ ಮೇಲಿನ ಆಜ್ಞೆಯನ್ನು ಯುಕ್ತಕಂಡಂತೆ ತೀರ್ಮಾನಿಸಲಾದೀತು.

Sd/- M. Sadashiva Rao
Pleader for Plaintiff.

Puttur, 15-8-69.

"ವಿದ್ಯಾರ್ಥಿವೇತನ"

ಕರ್ನಾಟಕ ಪ್ರೀ ಸೈಟ್ ಹೈಸ್ಕೂಲಿನ ಸಂಡಾಲಕರಾದ ಮುಂಡಾಯಿಯ ಬಂಟರ ಯಾನೆ ನಾಡವರ ಸಂಘದವರು ಇದ್ದಿಯ ವಿಶ್ವವಿದ್ಯಾಲಯದಲ್ಲಿಶಲಿಯುವ ಯೂ ಶಲಿಯು ಲಿಟ್ಟಿಸುವ ಸ್ವಜಾತಿಯ ಬಡ ವಿದ್ಯಾರ್ಥಿಗಳಿಗೆ "ವಿದ್ಯಾರ್ಥಿವೇತನ" ರೂಪದಿಂದ ಧನಸಹಾಯ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಆಗೇಸ್ತು 31ರೊಳಗೆ ಮೇಲಿನ ವಿಳಾಸಕ್ಕೆ ಅರ್ಜಿ ಪತ್ರ ಪಡೆಯಲಾಗಿ ಅಪೇಕ್ಷಿಸಲಾಗಿದೆ.

ಸಂತಾಪ ಸೂಚಕ ಸಭೆ

ಶಿವಮೊಗ್ಗ, 16.8.69. ಸ್ಥಳೀಯ ಮಂಡಿಕಲ್ ರಿಪ್ರೇಸೆಂಟೇಟಿವ್ಸ್ ಅಸೋಸಿಯೇಷನ್ ಇದೇ ತಾ. 12 ರಂದು ಡಾ| ವೈ. ಆರ್. ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿದ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ದಿ| ರಾಷ್ಟ್ರಪತಿ ಡಾ| ರುಃಕೇರ್ ಹುಸ್ಸೇನ್, ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ದಿ| ಹೊಂಬೇಗೌಡ ಮತ್ತು ಉಡುಪಿಯ ಎಡ್ವೋಕೇಟ್ ದಿ| ಆರ್ಕೂರು ಲಕ್ಷ್ಮೀನಾರಾಯಣ ರಾವ್ —ಇವರ ನಿಧನದ ಬಗ್ಗೆ ಸಂತಾಪ ವ್ಯಕ್ತಪಡಿಸಿ ಅಗಲಿದ ಆತ್ಮಗಳಿಗೆ ಚಿರಶಾಂತಿಯನ್ನು ಕೋರಲಾಯಿತ್ತಲ್ಲದೆ, ದಿ| ಆರೂರು ಲಕ್ಷ್ಮೀನಾರಾಯಣರಾಯರ ಕುಟುಂಬಕ್ಕೆ ಸಂತಾಪ ಸೂಚಕ ಸಂದೇಶವನ್ನು ಕಳುಹಿಸುವುದಾಗಿ ನಿಶ್ಚಯಿಸಲಾಯ್ತು.

ಬೆಳ್ತಂಗಡಿ ಲೇಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

E. C. 9/1969

ಬಿ. ಕೆ. ಲಕ್ಷ್ಮೀನಾರಾಯಣ ರಾವ್— —ಅರ್ಜಿದಾರ

ಪೊಡಿಯಮ್ಮ ಬಾರ್ತಿ ಸಹಾ— ಯೆದ್ರಿರು ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಬಾವಲಿಬನ ಎಂಬಲ್ಲಿರುವ ಜನಾರ್ದನ ಮನ್ಮಾಡಿ ಬ್ಯಾರಿಗಳ ಹೆಂಡ್ತಿ ಅಜ್ಜಮ್ಮ ಬಾರ್ತಿಯವರಿಗೆ ಕೋರ್ಟ್ ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲ್ಕಂಡ ವ್ಯಕ್ತಿಯರಿಂದ ನಿಮ್ಮ ಹಾಜರಾತಿ ಬಗ್ಗೆ ಮತ್ತು ನಿಮ್ಮ ಪತ್ನಿಯರ ಮತ್ತು ಮಕ್ಕಳು ಮರಿಯಮ್ಮ ಮತ್ತು ಬಿ. ಪಾತುಮರವರ ಗಾರ್ಡಿಯನ್ ನೇಮಕಾತಿ ಬಗ್ಗೆ ತಾರೀಕು 10.9.1969ಕ್ಕೆ ಇಟ್ಟರುತ್ತದೆ. ಸದ್ರಿ ವ್ಯಾಪಿ ದಿನ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ದ್ವಾರಾ ಉಪಸ್ಥಿತರಾಗಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾರ್ಹಮಾಡಿ ಮೇಲಿನ ಆಜ್ಞೆಯನ್ನು ಯುಕ್ತಕಂಡಂತೆ ತೀರ್ಮಾನಿಸಲಾದೀತು.

ಬಿ. ಕೆ. ಸೂರ್ಯನಾರಾಯಣ ರಾವ್
ಅರ್ಜಿದಾರನ ಕಡೆ ಎಡ್ವೋಕೇಟ್

ಬೆಳ್ತಂಗಡಿ, 12.8.69.

ಬೆಳ್ತಂಗಡಿ ಲೇಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ

R. R. C. 255/69.

ಬಿ. ಕೆ. ಲಕ್ಷ್ಮೀನಾರಾಯಣರಾವ್— ಅರ್ಜಿದಾರ

ಪೊಡಿಯಮ್ಮ ಬಾರ್ತಿ ಸಹಾ— ಯೆದ್ರಿರು ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದ ಬಾವಲಿಬನ ಎಂಬಲ್ಲಿರುವ ಜನಾರ್ದನ ಮನ್ಮಾಡಿ ಬ್ಯಾರಿಗಳ ಹೆಂಡ್ತಿ ಅಜ್ಜಮ್ಮ ಬಾರ್ತಿಯವರಿಗೆ ಕೋರ್ಟ್ ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಮೇಲ್ಕಂಡ ವ್ಯಕ್ತಿಯರಿಂದ ನಿಮ್ಮ ಹಾಜರಾತಿ ಬಗ್ಗೆ ಮತ್ತು ನಿಮ್ಮ ಪತ್ನಿಯರ ಮಕ್ಕಳು ಮರಿಯಮ್ಮ ಮತ್ತು ಬಿ. ಪಾತುಮರವರ ಗಾರ್ಡಿಯನ್ ನೇಮಕಾತಿ ಬಗ್ಗೆ ತಾ. 18-8-69ಕ್ಕೆ ಇಟ್ಟರುತ್ತದೆ. ಸದ್ರಿ ವ್ಯಾಪಿ ದಿನ ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ನೀವು ಸ್ವತಹಾ ಯಾ ವಕೀಲರ ದ್ವಾರಾ ಉಪಸ್ಥಿತರಾಗಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾರ್ಹಮಾಡಿ ಮೇಲಿನ ಆಜ್ಞೆಯನ್ನು ಯುಕ್ತಕಂಡಂತೆ ತೀರ್ಮಾನಿಸಲಾದೀತು.

ಬಿ. ಕೆ. ಸೂರ್ಯನಾರಾಯಣ ರಾವ್
ಅರ್ಜಿದಾರನ ಕಡೆ ಎಡ್ವೋಕೇಟ್

ಬೆಳ್ತಂಗಡಿ, 7.8.1969.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

100 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್" ಕ್ಕೆ

ಸಂಪರ್ಕ ಬೆಳೆಸಿರಿ.

ಕೇವಲಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಆತಿ ಲಾಭದಾಯಕವಾದ ನಮ್ಮ ವೈಶಿಷ್ಟ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.

Phone— 5711, 5712, 5713 } 3 Lines.

ಮಿತ ಕುಟುಂಬ ಯೋಜನೆಗೆ

ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚುವಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M. O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಕಾಲುಕೋಟೆ, ಉಡುಪಿ, ದ. ಕ.

ಈಗ ಬಾರಕೂರಲ್ಲಿ ಏನಿದೆ?

(ಎಡದಿಂದ ಮುಂದೆ)

ಕೊರೆಯ ಲ್ಪಟ್ಟ ವಿಗ್ರಹ. ಪ್ರಭಾವಳಿ ವಿರಹಿತವಾದ ಸಂಪೂರ್ಣ ಮೂರ್ತಿ ಇದಾಗಿದೆ (ಉಬ್ಬು ಶಿಲ್ಪದಲ್ಲಿ) ಈ ವಿಗ್ರಹವೂ ಮೂರು ಅಡಿಎತ್ತರವಾಗಿದ್ದು ಸಮಭಂಗಿಯಾಗಿದೆ. ಕಾಲುಗಳ ಎಡಬಲಗಳಲ್ಲಿ ವಜ್ರೇ ಮತ್ತು ಪದ್ಮಾ —ಇವರ ಶಿಲ್ಪ ಕೆತ್ತಲ್ಪಟ್ಟಿದೆ. ಕಿರೀಟಧಾರಿಯೂ ಆದ ಪ್ರಾಚೀನ ಅಲಂಕಾರಗಳನ್ನೊಳಗೊಂಡ ಕಿರೀಟಧಾರಣೆಯೂ ದುಂಡಗಾದ ಮುಖ ಪ್ರಭೆಗಳು ಪುಷ್ಪಿತವಾದ ಪದ್ಮದ ಮೂಲೆ ಮತ್ತು ಸೈಗಳಲ್ಲಿ ಪುಟ್ಟಿದ ಎಡದು ತಾವರೆಗಳನ್ನು ಧರಿಸಿಕೊಂಡ ಈ ಮೂರ್ತಿಯು ಕಲಾವಂತರ ಪರಿಣತಿಯನ್ನು ಸೆಳೆಯುತಿರಲಾರದು. ಪ್ರಾಚೀನತೆಯಿಂದಾಗಿ ಇದು ಪ್ರಾಚನಗಳು ಸವೆಯಲು ಪ್ರಾರಂಭವಾಗಿದೆ. ಕೈಯು ಬೆಳ್ಳಗಳು ಉಗ್ರ, ಉಂಗುರಗಳು ಬಹು ಕೋಮಲವಾಗಿ ಘಡೀಕರಿಸಲ್ಪಟ್ಟಿವೆ. ಈ ಮೂರ್ತಿಯೂ ಸು. ಕ್ರಿ. ಶ. 10ನೇ ಶತಮಾನದ ಪೂರ್ವಭಾಗದ ಶಿಲ್ಪವಿರಬಹುದು. ಇದು ಎಲ್ಲಿಯೋ ಮೂಲಸ್ಥಾನ ಮೂರ್ತಿಯಾಗಿದ್ದು, ಗುಡಿಯು ಬಿದ್ದುಹೋದ ಅನಂತರ ಇಲ್ಲಿ ತಾತ್ಕಲ್ಪಟ್ಟಿದ್ದಿರಬೇಕು.

ಕೋಟೆಕೇರಿ ಬಟ್ಟಿವಿನಾಯಕ

ಒಟ್ಟಿವಿನಾಯಕನೆಂದರೆ ಹೆದ್ದಾರಿಯು ದ್ದಿರುವ ವಿನಾಯಕನೆಂದರ್ಥ. ಈ ಗುಡಿಯು ಜೀರ್ಣೋದ್ಧಾರವಾಗಿದೆ. ಗಣೇಶ ಮೂರ್ತಿಯು 16" ಎತ್ತರದ ಶಿಲಾಮೂರ್ತಿಯಾಗಿದೆ. ದ್ವಿಬಾಹು ಮುರಿಗೆಯಾಕಾರದ ಕೀರೀಟವಿದೆ. ಶಿಲ್ಪದ ಎಲ್ಲಾ ಲಕ್ಷಣಗಳೂ ಸುಮಾರು ಕ್ರಿ. ಶ. 9—10ನೇ ಶತಮಾನಗಳಿಗೆ ಅನ್ವಯಿಸುವಂತಿರಬಹುದು.

ಪಂಚಲಿ ಗೇಶ್ವರ ದೇವಾಲಯದ ನವರಂಗದಲ್ಲಿರಿಸಲ್ಪಟ್ಟ ಮೂರ್ತಿಗಳು

ಒಂದು ಪಾರ್ವತಿಯು ಶ್ರೀ ಗಣೇಶ. ಇದು ಚತುರ್ಭುಜ ವಿಗ್ರಹ. ಆದರೆ ಇತರ ಗಣೇಶ ವಿಗ್ರಹಗಳ ಲಕ್ಷಣಗಳಿಗಿಂತ ವಿಭಿನ್ನವಾಗಿದೆ. ಮೇಲಿನ ಕೈಗಳಲ್ಲಿ ದಂತ ಮತ್ತು ಪಾಶಗಳೂ ಕೆಳಗಿನ ಎರಡೂ ಕೈಗಳಲ್ಲಿ ಮೋದಕವೂ ಧರಿಸಿಕೊಂಡ ಸೊಂಡಿಲು ಎಡಕ್ಕಾಗಿ ಕೆಳಗಿನ ಪಾತ್ರೆ ಇಳಿದು ಎಂಕೈದಲ್ಲಿ ಸ್ವಲ್ಪ ಎಡಕ್ಕಾಕ್ಕೆ ತಿರುಗಿ ರತ್ನಕಲಶವನ್ನು ಧರಿಸಿರುವ ಈ ಬಿಂಬವು ಸಮನೋಹರವಾಗಿದೆ. ಪಾದಪೀಠವೂ ಚೆನ್ನಾಗಿ ತೋರಿಸಲ್ಪಟ್ಟಿದೆ. ಶಂಕುವಾಕಾರದ ಕೀರೀಟ, ಪ್ರಭಾವಳಿ ವಿಶಿಷ್ಟವಾದ ಈ ಬಿಂಬವೂ ಸುಮಾರು ಕ್ರಿ. ಶ. 9—10ನೇ ಶತಕದ್ದೆನ್ನಲು ಅಡ್ಡಿಯಿಲ್ಲ. ಸುಮಾರು 2' ಎತ್ತರದ ವಿಗ್ರಹವಿದು.

ಇನ್ನಿತರ ಎರಡು ವಿಗ್ರಹಗಳು ಉಬ್ಬು ಶಿಲ್ಪಗಳು. ಒಂದು ಜನಾರ್ದನನ, ಇನ್ನೊಂದು ಮಹಿಷಮರ್ದಿನಿಯ ಶಿಲ್ಪಗಳು. ಕಾಲಮಾನದಲ್ಲಿ ಇವೆರಡೂ ಸುಮಾರು ಕ್ರಿ. ಶ. 8ನೇ ಶತಮಾನಕ್ಕೆ ಎಂದರೆ ಪಂಚಲಿಂಗೇಶ್ವರ ದೇವಾಲಯದ ಘರ್ಭಾಲಯಕ್ಕೆ ಅನ್ವಯಿಸಬಹುದು. ಮಹಿಷಮರ್ದಿನಿ ವಿಗ್ರಹವು ಭಿನ್ನವಾಗಿದೆ. ಬಲೇ ಊರ್ಧ್ವ ಕರಿಲಿಂಘಾನಿಂದ ಕೂಡಿದ ದ್ವಿಬಾಹು ಮಹಿಷಮರ್ದಿನಿ ವಿಗ್ರಹವಿದು. ಮಹಿಷನನ್ನು ತ್ರಿಶೂಲದಿಂದ ಶಿರಸ್ಸಿನಲ್ಲಿರಿದ ಪಿಶಾಚಿಯು ಕುರುತೀಲನೆಯಿಂದ ಕೆಳಗೆ ಬರುತ್ತದೆ. ಇವೆಲ್ಲವೂ ಬಾದಾಮಿ ಮತ್ತು ಕಲ್ಯಾಣಿ ಚಾಲುಕ್ಯ ಶಿಲ್ಪಗಳನ್ನು ಪ್ರತಿನಿಧೀಕರಿಸುತ್ತವೆ.

ಮೂಡುಕೇರಿ ಸೋಮನಾಥ ದೇವಾಲಯದ ನವರಂಗದಲ್ಲಿರುವ ಎರಡು ಮೂರ್ತಿಗಳು:—

ಒಂದು ಮೂರ್ತಿಯು ಕರಸ್ವತಿ ಬಿಂಬವಾಗಿದೆ. ಇದು 2½' ಎತ್ತರವಾಗಿದ್ದು ಸುಮಾರು 10-11ನೇ ಶತಕದ ಮೂರ್ತಿಯಾಗಿದೆ. ಭುಜಬಲ ಕವಿಯಾಗಿ ವೀಣಾದ್ರನ ಬಾರಕೂರಿನಲ್ಲಿ ದೊರಕಿದ ಒಂದು ಶಿಲಾಲೇಖದಲ್ಲಿ ಕಂಡುಬರುವ ಶಾರದಾ ಮೂರ್ತಿಯೂ ಇದೇ ಆಗಿರುವುದು. ಇದರ ಶೈಲಿ ಹೊಯ್ಸಳರ ಕಾಲಕ್ಕಿಂತ ಪೂರ್ವದ್ದಾಗಿದೆ ಸರ್ವಾಲಂಕೃತವಾದ ವೀಣೆಯ ಕೈಗಳಲ್ಲಿ ಪಾತ್ರಂಕ ಶ, ಕೆಳಗಿನ ಕೈಗಳಲ್ಲಿ ಜಪಸರ, ಪುಸ್ತಕಗಳನ್ನು ಧರಿಸಿಕೊಂಡಿರುವ ಪ್ರಭಾವಳಿಯಲ್ಲಿ ಹಂಸಾಕಾರದ ತೋರಣವನ್ನೊಳಗೊಂಡ ಗಟ್ಟು ಶಿಲೆಯಿಂದ ಕೊರೆಯಲ್ಪಟ್ಟ ಈ ವಿಗ್ರಹವು ಒಂದು ಅಪೂರ್ವವಾದ ಮೂರ್ತಿ ಎನ್ನಬಹುದು.

ಅಂತೆಯೇ ಶ್ರೀ ಜನಾರ್ದನ ಮೂರ್ತಿ. ಇದು ಎತ್ತರದಲ್ಲಿ 3'. ಪ್ರಭಾವಳಿ ವಿರಹಿತವಾದ ಹೆಯ್ಸಳರ ಪೂರ್ವಕಾಲದ ಲಕ್ಷಣಗಳನ್ನೊಳಗೊಂಡ ಮೂರ್ತಿ ಇದಾಗಿದೆ. ದೀರ್ಘವಾದ ಕಿರೀಟವೂ ವೃಯೋಗದ ರೀತಿಯಲ್ಲಿ ಧರಿಸಿಕೊಂಡ ವಸ್ತ್ರ, ಚಕ್ರಗಳೂ ದೀರ್ಘವಾದ ಉತ್ತರೀಯವೂ ಇರುವ ವಿಗ್ರಹವಿದಾಗಿದೆ. ಗದೆಯು ಘರ್ಭಾಲಯದಲ್ಲಿಲ್ಲ. ಸಾಮಾನ್ಯ ಕಾಲಮಾನದಲ್ಲಿ ಈ ವಿಗ್ರಹಗಳಿಗಿಂತ ಸ್ವಲ್ಪ ಅನಂತರದ್ದಿರಬಹುದಾದ ಪೂರ್ವಕೇರಿಯಲ್ಲೇ ಪ್ರತ್ಯೇಕ ಗುಡಿಯಲ್ಲಿ ಕಂಡುಬರುವ ನಾರಾಯಣೀ ವಿಗ್ರಹವೂ (ವೈಷ್ಣವಗಳಲ್ಲಿ ಚಕ್ರ, ಶಂಖಗಳೂ ಕೆಳಗೈಗಳಲ್ಲಿ ಲಕ್ಷ್ಮಿ ಆಯುಧಗಳೂ ಇರುವ ಪದ್ಮಾಸನಸ್ಥವಾದ ಭಾರವಾದ ಸ್ವನಗಳು ಳ್ಳ ವಿಗ್ರಹವಿದು.) ಇನ್ನೊಂದೆಡೆ ಈಗ ಸಂಪೂರ್ಣವಾಗಿ ಬಿದ್ದುಹೋಗಿರುವ ಗುಡಿಯಲ್ಲಿದ್ದ ಪಾರ್ಶ್ವತವಾಗಿ ಳಿವ್ವಾದ ಪರವಾಸುದೇವ ವಿಗ್ರಹವೂ ಮೋಹಕವಾಗಿದೆ. ಇವು ಸಹ ಕ್ರಿ.ಶ. 11ನೇ ಶತಮಾನಕ್ಕಿಂತ ಹಿಂದಣ ಮೂರ್ತಿಗಳೆಂದು ಅವಮೂಹಿಸಬಹುದು. ಪರವಾಸುದೇವ ವಿಗ್ರಹವು ಲಲಿತಾಸನಭಂಗಿಯಲ್ಲಿದೆ. ಕಂಬಾ ಸಾಲಂಕಾರ ಶಿಲ್ಪವನ್ನೊಳಗೊಂಡಿದೆ.

ಬಾರಕೂರಿನ ಗೋಪಾಲಕೃಷ್ಣ ಮೂರ್ತಿಗಳು

ಮೂಡುಕೇರಿಯಲ್ಲಿರುವ ಗೋಪೀವಾಥನೆ ದು ಶಾಸನಗಳಲ್ಲಿ ಉಲ್ಲೇಖಗೊಂಡ ಕೃಷ್ಣ ವಿಗ್ರಹವು 2½' ಎತ್ತರವಾಗಿದ್ದು ಕಂಬಾ ಲಕಾಯ್ದುಗಿಂದ ಕೂಡಿದೆ. ದ್ವಿಬಾಹು ವೇಣು ಗೋಪಾಲಕೃಷ್ಣನ ಬಿಂಬವಾಗಿದೆ. ಕೋಟೇಕೇರಿಯಲ್ಲಿರುವ ಇನ್ನೊಂದು ಕೃಷ್ಣವಿಗ್ರಹವೂ ವಿಜಯನಗರ ಕಾಲದ ಶ್ರೇಷ್ಠ ಶಿಲ್ಪವನ್ನು ಪ್ರತಿಬಿಂಬಿಸುತ್ತದೆ. ಈ ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪವು ಕೆತ್ತಲ್ಪಟ್ಟಿದೆ.

ಇನ್ನಿತರ ಮೂರ್ತಿಗಳು

ಚಾಳಕೇರಿಯ ಗಣೇಶ ವಿಗ್ರಹವು ಶಿಲ್ಪದ ದೃಷ್ಟಿಯಲ್ಲಿ ಬಾರಕೂರಿನ ಎಲ್ಲಾ ಮೂರ್ತಿಗಳಿಗಿಂತಲೂ ಪ್ರಾಚೀನತೆಯನ್ನು ಪಡೆದು, 15" ಎತ್ತರದ ದ್ವಿಬಾಹು ಮೂರ್ತಿ ಇದಾಗಿದೆ ಶಿರಸ್ಸಿನಲ್ಲಿ ಕೀರೀಟವಿಲ್ಲದ ಈ ಮೂರ್ತಿಯನ್ನು ಕನಿಷ್ಠ ಪಕ್ಷ ಕ್ರಿ. ಶ. 7—8ನೇ ಶತಕಕ್ಕೆ ಅನ್ವಯಿಸಬಹುದು ಇನ್ನು ಸುಮಾರು ಗಣೇಶ ವಿಗ್ರಹಗಳು ಬಾರಕೂರಿನಲ್ಲಿ ಕಂಡುಬರುತ್ತವೆ. ಇವು ವಿಶೇಷ ಸಂಗರ ಕಾಲದ್ದಾಗಿವೆ.

ಸೈಕೇಶ್ವರ ದೇವಾಲಯದಲ್ಲಿ ಫವರಂಗದಲ್ಲಿರುವ ಮಹಿಷಾಸುರ ಮರ್ದಿನಿ ಮೂರ್ತಿಯು ಎಷ್ಟೆಂದರೂ ಹೊಯ್ಸಳರ ಕಾಲಕ್ಕಿಂತ ಈಚಿನದ್ದಲ್ಲ ಅನ್ನಬಹುದು. ಈ ಮೂರ್ತಿಯು ಜೀರ್ಣವಾಗಿದೆ. ಮಹಾಲಕ್ಷ್ಮೀ ದೇಗುಲದಲ್ಲಿರುವ ಮೂರು ಮೂರ್ತಿಗಳು ಪ್ರಾಯಃ ಸಪ್ತ ಮಾತೃಕೆಯಲ್ಲಿ ಬ್ರಾಹ್ಮೀ, ಮಾಹೇಶ್ವರೀ ಮತ್ತು ವೈಷ್ಣವೀ ವಿಗ್ರಹಗಳಿರಬೇಕು. ಇವು ಸುಮಾರು 5' ಎತ್ತರವಿವೆ.

ಕೂಡ್ಲೂರಿನ ಜನಾರ್ದನ

ಬಾರಕೂರಿನಿಂದ ಸುಮಾರು 2 ಮೈಲು ಪೂರ್ವಕ್ಕೆ ಪಿಕ್ಕಾರ್ಡ್‌ಗಳಿಗೆ ಪ್ರಸಿದ್ಧಿ ಪಡೆದ ಶ್ರೀ ಜನಾರ್ದನ ದೇವಾಲಯವಿದೆ. ಇದರ ರಚನೆಯು ವಿಜಯನಗರ ಕಾಲದ್ದಾದರೂ (ಸು. ಕ್ರಿ. ಶ. 14ನೇ ಶತಕ) ಜನಾರ್ದನ ವಿಗ್ರಹವು ಪೂರ್ವದ ಕ್ರಿ. ಶ. 10ನೇ ಶತಮಾನಕ್ಕೆ ಈಚಿನದ್ದೆನ್ನಲಾಗದು ಪ್ರಭಾವಳಿ ವಿರಹಿತವಾದ ಬಹಳ ಒರಟಾದ ಶಿಲ್ಪವನ್ನೊಳಗೊಂಡ ಸು. 2½' ಎತ್ತರದ ಈ ವಿಗ್ರಹವು ಶಿಲ್ಪ ವೈಚಿತ್ರ್ಯವನ್ನೊಳಗೊಂಡಿದೆ. ಇದನ್ನು ಕೇವಲ ಮೂರ್ತಿ ಎನ್ನಲೂ ಸಾಧ್ಯವಿದೆ. ಬಲಕೈಗೈಯಲ್ಲಿ ಹಿಡಿದಿರಿಸಿದ್ದನ್ನಲಾಗಿದೆ.

(ಜ್ಞಾತವ್ಯ ವಿಶೇಷಾಂಶಕ್ಕೆ ಬಂದುದು)

ಉಡುಪಿ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ

R. R. C. No 928/1968.

ಕಾಳಪ್ಪ ಶೆಟ್ಟಿ — ಅರ್ಜಿದಾರ

ಮತ್ತು

ಗಣಪಯ್ಯ ಶೆಟ್ಟಿ ಕೂಡಾ — ಎದ್ರಿನ

ನೋಟೀಸ್

ಉಪ್ತಿ ತಾಲೂಕು ಮೂಡುಬಲ್ಕೆ ಗ್ರಾಮದಲ್ಲಿರುವ ಗಣಪಯ್ಯ ಶೆಟ್ಟಿ ಅಳಿಯ, ಏನೇ ಎದ್ರಿ ಸುಹಾಬಲ ಶೆಟ್ಟಿಗೆ—

ಅರ್ಜಿದಾರನು ನಿಂಮಿಂದ ಕಳೆದ ವಿಸ್ತಾವಸು ಸಂವತ್ಸರಕ್ಕೆ ಬರಬೇಕ್ಕ ಗೇಣಿ ಬಾಕಿ ಬರಮಾಡುವರೆ ಇವರಿದ ಮೇಲಿನ ಅರ್ಜಿಯು ತಾ. 18-11-69ಕ್ಕೆ ಯಿಟ್ಟರುವದ್ರಿಂದ ನಿಂಮ ಅಮಾಪರಜೆ ಯಿದ್ರೆ ಆ ದಿವಸ ಟ್ರಿಬ್ಯೂನಲ್ ಮುಂದೆ ಖುದ್ದಾಗಿ ಯಾ ವಕೀಲ ದ್ವಾರಾ ಹಾಜ್ರಾಗಿ ಜ್ಞಾಪೀಸು ಮಾಡಿಕೊಳ್ಳಕ್ಕೆದ್ದು. ಇಲ್ಲವಾದ್ರೆ ನಿಂಮ ಗೈರಾಜ್ಜಿಯಲ್ಲಿ ವಿಚಾರಣೆಯಾಗಿ ತೀರ್ಪು ಮಾಡಲಾಗುವುದು.

[ಟ್ರಿಬ್ಯೂನಲ್ ಹ್ಯಂ ಶ್ರೀಕಾರ]

J.P.S. KOLKEBAIL, B Sc, B.L.
Advocate for Applicant.

Udipi, 26-7-69.

ಉಡುಪಿ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ

R. R. C. No. 3007/68

ಲಕ್ಷ್ಮಿ ಕಿ. — ಅರ್ಜಿದಾರಳು

ಮತ್ತು

ಹ್ಯೂಬರ್ಟ್ ಎಡ್ವಿನ್ ಪುತ್ರನ್ — ಎದ್ರಿನ

ನೋಟೀಸ್

ಉಪ್ತಿ ತಾಲೂಕು ಉಳಿಯೂರುಗೋಳಿ ಗ್ರಾಮದಲ್ಲಿರುವ ಜೇಮ್ಸ್ ಮೇರಿಯ ನರ ಮಗ ಹ್ಯೂಬರ್ಟ್ ಎಡ್ವಿನ್ ಪುತ್ರನ್‌ರಿಗೆ —

ಅರ್ಜಿದಾರಳು ನಿಂಮಿಂದ ಕಳೆದ ವ್ಯವಸಾಯ ಸಂವತ್ಸರಕ್ಕೆ ಬರಬೇಕ್ಕ ಗೇಣಿ ಬಾಕಿ ಬರಮಾಡುವರೆ ಮಾಡಿದ ಮೇಲಿನ ಅರ್ಜಿಯು ತಾ. 25-11-69ಕ್ಕೆ ಯಿಟ್ಟರುವದ್ರಿಂದ ನಿಮ್ಮ ಅಮಾಪರಜೆಯೆದ್ರೆ ಆ ದಿವಸ ಟ್ರಿಬ್ಯೂನಲ್ ಮುಂದೆ ಖುದ್ದಾಗಿ ಯಾ ವಕೀಲ ದ್ವಾರಾ ಹಾಜ್ರಾಗಿ ಜ್ಞಾಪೀಸು ಮಾಡಿಕೊಳ್ಳಕ್ಕೆದ್ದು. ಇಲ್ಲವಾದ್ರೆ ನಿಮ್ಮ ಗೈರಾಜ್ಜಿಯಲ್ಲಿ ವಿಚಾರಣೆಯಾಗಿ ತೀರ್ಪು ಮಾಡಲಾಗುವುದೆ.

(ಟ್ರಿಬ್ಯೂನಲ್ ಹ್ಯಂ ಶ್ರೀಕಾರ)

J. P. S. Kolkebail, B Sc, B.L.
Advocate for Petitioner

Udipi, 26—7—69.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಶೀಲ ವಿಧದ ತಿಂಡಿತಿನಿಸು
ಪಾಶ್ಚಿಮಾತ್ಯರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

NAVAYUGA 21—8—1969
Registered with the Registrar of News Papers for India under No. R. N. 3516/'57

REGD. No: B. G. 176
LICENCE No. 33
Licensed to Post without Prepayment

ರಕ್ಷಣಾ ಬಲವ ಶಕ್ತಿ ಸಂವರ್ಧನೆ

ದೇಶಕ್ಕೆ ಒದಗುವ ಯಾವುದೇ ಅಪಾಯವನ್ನು ಸಮರ್ಥ ರೀತಿಯಿಂದ ಎದುರಿಸುವ ಸಲುವಾಗಿ ನಮ್ಮ ರಾಷ್ಟ್ರದ ರಕ್ಷಣಾ ಬಲವನ್ನ ಸಜ್ಜುಗೊಳಿಸಲಾಗಿದೆ. ಶಸ್ತ್ರಾಸ್ತ್ರಗಳ ಉತ್ಪಾದನಾ ವಿಭಾಗಗಳು ಅತ್ಯಾಧುನಿಕವಾದ ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ತೊಡಗಿವೆ. ಸಾಂಪ್ರದಾಯಿಕವಾಗಿ ಇಂದಿರುವ ಶಸ್ತ್ರಾಸ್ತ್ರಗಳಲ್ಲಿ ನಾವು ಸ್ವಾವಲಂಬಿಗಳಾಗಿದ್ದೇವೆ. ಅಲ್ಲದೆ ಈ ಶಸ್ತ್ರಾಸ್ತ್ರಗಳನ್ನ ಉತ್ತಮಗೊಳಿಸುವ ಕಾರ್ಯಗಳು ನಿರಂತರ ನಡೆದಿವೆ.

ದೇಶಕ್ಕೆ ಬೇಕಾದ ಸಣ್ಣ ಪ್ರಮಾಣದ ಶಸ್ತ್ರಾಸ್ತ್ರಗಳು, ಮದ್ದು ಗುಂಡುಗಳ ಅವಶ್ಯಕತೆಯನ್ನು ದೇಶದೊಳಗಿನ ತಯಾರಿಕೆಯಿಂದಲೇ ಪೂರೈಸಲಾಗುತ್ತಿದೆ ಹಾಗು ಶಸ್ತ್ರಾಸ್ತ್ರಗಳ ಬದಲಾಗಿ ಹೊಸ ಶಸ್ತ್ರಾಸ್ತ್ರಗಳನ್ನ ಬಳಸುತ್ತಿದ್ದೇವೆ. ಭೂಸೇನೆ, ವಿಮಾನ ಸೇನೆ ಮತ್ತು ನೌಕಾಸೇನೆಗಳಿಗೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ವಿವಿಧ ಉತ್ಪಾದನಾ ಕಾರ್ಖಾನೆಗಳಲ್ಲಿ ವಿಶೇಷ ಪ್ರಯತ್ನ ನಡೆಸಲಾಗಿದೆ. ಭೂಸೇನೆಗಾಗಿ ವಿವಿಧ ರೀತಿಯ ಟ್ಯಾಂಕ್ಸ್, ನೌಕಾಬಲಕ್ಕಾಗಿ ಕಾವಲು ಹಡಗುಗಳ, ಮತ್ತು ವಿಮಾನ ಬಳಕ್ಕಾಗಿ ವಿಮಾನಗಳ ತಯಾರಿಕೆ ಇವು ತತ್ಪ್ರಕಾರ ಕಾರ್ಖಾನೆಗಳನ್ನ ಪ್ರಮುಖವಾದವು

ಟ್ಯಾಂಕ್‌ಗಳ ತಯಾರಿಕೆ

ಮದ್ರಾಸಿನ ಬಳಿ ಇರುವ ಅವಡಿಯ ಭಾರವಾಹನಗಳ ಕಾರ್ಖಾನೆಯಲ್ಲಿ ಟ್ಯಾಂಕ್‌ಗಳನ್ನ ತಯಾರಿಸಲಾಗುತ್ತಿದೆ. ಎಂದೇ ಕಾರ್ಖಾನೆಯಲ್ಲಿ ಇಂಜಿನ್, ಗೇರ್ ಬಾಕ್ಸ್ ಮತ್ತು ಇತರ ಎಲ್ಲಾ ಜೋಡಣೆ ವಸ್ತುಗಳನ್ನು ಸೇರಿಸಿ ಟ್ಯಾಂಕ್‌ಗಳನ್ನು ತಯಾರಿಸುವ ಕಾರ್ಖಾನೆ ಇಷ್ಟೇ ಅಲ್ಲದೆ ಇದು ಇಂದೀ ದೇಶದಲ್ಲಿಯೇ ಟ್ಯಾಂಕ್‌ಗಳ ತಯಾರಿಕೆಯಿಂದ ಗಿ ಈಗಾಗಲೇ ಸುಮಾರು ಒಂಭತ್ತು ಕೋಟಿ ರೂ.ಗಳನ್ನ ವಿನಿಯೋಗಿಸಿದೆ.

ಯುದ್ಧೋಪಕರಣಗಳ ಕಾರ್ಖಾನೆಗಳಲ್ಲಿ 1968ರಲ್ಲಿ ಸುಮಾರು 107 ಕೋಟಿ ರೂ.ಗಳಷ್ಟು ಉತ್ಪಾದನೆ ಕಂಡುಬಂದಿದೆ. 1962 ರಲ್ಲಿ ಇದ್ದ ಉತ್ಪಾದನೆಗಿಂತ 1968ರಲ್ಲಿ ಮೂರರಷ್ಟು ಹೆಚ್ಚಿದ 1962 ರಿಂದೀಚೆಗೆ ಏಳು ಯುದ್ಧೋಪಕರಣ ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. ಜಬಲ್ಪುರಿನಲ್ಲಿರುವ ಕಾಂತ್ರಿಕ ಕಾರ್ಖಾನೆ ಹಾಗೂ ಚಂದಾದಲ್ಲಿರುವ ಫಿಲ್ಲಿಂಗ್ ಕಾರ್ಖಾನೆಗಳು ಈಗಾಗಲೇ ಉತ್ಪಾದನೆಯನ್ನು ಪ್ರಾರಂಭಿಸಿವೆ. ಎರಡು ವರ್ಷಗಳ ಅಂತರ ಈ ಕಾರ್ಖಾನೆಗಳು ಪೂರ್ಣರೂಪದಲ್ಲಿ ಉತ್ಪಾದನೆಯನ್ನು ಆರಂಭಿಸುವ ಮೂ. ರಕ್ಷಣಾ ಪಡೆಗಳಿಗೆ ಬೇಕಾಗುವ ಟ್ರಾಂಗಳು, ಜೀಪ್‌ಗಳನ್ನು ತಯಾರಿಸುವ ಹೊಸ ವಾಹನ ತಯಾರಿಕೆಗು ಕಾರ್ಖಾನೆಯೊಂದು 1971ರ ವೇಳೆಗೆ ತನ್ನ ಉತ್ಪಾದನೆಯನ್ನು ದ್ವಿಗುಣಗೊಳಿಸುವ ದೆಂಬ ನಿರೀಕ್ಷೆ ಇದೆ.

ಈಗಿನ ಹೋರಾಟಗಳಿಗೆ ಅವಶ್ಯಕವಾಗಿರುವ ಯುದ್ಧೋಪಕರಣಗಳನ್ನು ತಯಾರಿಸುವುದು ಅಷ್ಟೊಂದು ಸುಲಭವಾದ ಮಾತಲ್ಲ ಸಿಸ್ಟಂ ಸಂಪರ್ಕ ಸಾಧನಗಳು ಬಹಳವಾಗಿ ಉತ್ಕರ್ಷ ಗೊಂಡಿವೆ. ಜೆಟ್ ವಿಮಾನಗಳ ತಯಾರಿಕೆಯಿಂದಾಗಿ ಸಿಸ್ಟಂ ಇಂಜಿನ್ ವಿಮಾನಗಳ ಬಳಿಗೆ ಕಡಿಮೆ ಯಾಗಿದೆ ಇಂತಹ ವಿಮಾನಗಳ ಕಡೆ ರಕ್ಷಣಾಮಂತ್ರಿ ಶಾಖೆಯವರು ಹೆಚ್ಚಿನ ಗಮನವನ್ನು ಕೊಡಬೇಕಿದ್ದಾರೆ.

ಬಿ. ಇ. ಎಲ್. ಕಾರ್ಖಾನೆ

ರಕ್ಷಣಾ ಮಂತ್ರಿ ಶಾಖೆಯವರು ವಿದ್ಯುಚ್ಛಕ್ತಿ ಉಪಕರಣಗಳ ಕ್ಷೇತ್ರದಲ್ಲಿ ಉಪಕರಣಗಳ ತಯಾರಿಕೆಗಾಗಿ ಬೆಂಗಳೂರಿನಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ ಕಾರ್ಖಾನೆಯನ್ನ ಸ್ಥಾಪಿಸಿದ್ದಾರೆ ಕೋ ಸಂಚಿಯ ವಿದ್ಯುಚ್ಛಕ್ತಿ ಉಪಕರಣಗಳನ್ನು ಇಲ್ಲಿ ತಯಾರಿಸಲಾಗುತ್ತಿದೆ. ರಕ್ಷಣಾ ಬಲದ ಸಂಪರ್ಕಸೇವೆಗಾಗಿ ಅತಿ ಸೂಕ್ಷ್ಮವಾದ ಮತ್ತು ವಿಶೇಷ ರೀತಿಯ ವಿವಿಧ ಆಕಾರಗಳ ಹಾಗೂ ಶಕ್ತಿಯುಳ್ಳ ಟ್ರಾನ್ಸ್-ರಿಸೀವರ್‌ಗಳನ್ನು ತಯಾರಿಸಲಾಗುತ್ತಿದೆ. ರಡಾರ್ ಮತ್ತು ಮೈಕ್ರೋವೇವ್ ಉಪಕರಣಗಳ ಉತ್ಪಾದನೆಗಾಗಿ ಹೊಸ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗಿದೆ.

ಏರೋನಾಟಿಕ್ಸ್ ಕ್ಷೇತ್ರದಲ್ಲಿ ಎಚ್. ಎಫ್—24 ಜೆಟ್ ಫೈಟರ್‌ವಿಂದ ಹಿಡಿದು ವಿಂಗ್ಸ್, ನ್ಯಾಟ್ಸ್, ಪಷ್ಟರ್ ವಿಮಾನಗಳನ್ನು ತಯಾರಿಸಲಾಗುತ್ತಿದೆ. ಬೆಂಗಳೂರಿನ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್‌ನಲ್ಲಿ ಸೂಪರ್‌ಸಾನಿಕ್ ಜೆಟ್ ಫೈಟರ್-24 ಇವುಗಳನ್ನು ಉತ್ಪಾದಿಸಲಾಗುತ್ತಿದೆ. ನಾಸಿಕ್, ಹೈದರಾಬಾದ್ ಮತ್ತು ಕೊರಾಪೇಟೆಗಳಲ್ಲಿ ವಿಂಗ್ ವಿಮಾನಗಳನ್ನು ತಯಾರಿಸುವ ಸಂಸ್ಥೆಗಳಿವೆ.

ಯುದ್ಧ ನೌಕೆಗಳ ನಿರ್ಮಾಣ

ಯುದ್ಧ ನೌಕೆಗಳ ನಿರ್ಮಾಣ ಭಾರತದ ಯುದ್ಧೋಪಕರಣಗಳ ಉತ್ಪಾದನೆಯ ಇನ್ನೊಂದು ಸಾಧನೆ. ದೇಶದಲ್ಲಿ ಮೊತ್ತಮೊದಲಿಗೆ ತಯಾರಿಸಲಾದ ಲಿಯಾಂಡರ್-ಕ್ಲಾಸ್ ಕಾವಲು ಹಡಗನ್ನು ನಜಂಬೈನ ನರ್ಮಿಂಗ್ ಹಡಗು ಕಟ್ಟೆಯಲ್ಲಿರಿಸಲಾಗಿದೆ. ಪ್ರಯೋಗಿಕವಾಗಿ ಈ ಕಾವಲು ಹಡಗನ್ನು ಪರೀಕ್ಷಿಸಿದ ನಂತರ 1971ರಲ್ಲಿ ಇದನ್ನು ನೌಕಾಬಲಕ್ಕೆ ಒಪ್ಪಿಸಲಾಗುವುದು. ಸಬ್‌ಮೆರಿನ್‌ಗಳನ್ನು ನೌಕಸೇನೆಯಲ್ಲಿರುವ ಮಕ್ಕಳು ಹುಡುಗರು ಇವುಗಳನ್ನು ಉತ್ಪಾದನೆಗಿಗೆ ಬರುವ. ಮೊದಲು ಕಾವಲು ಹಡಗಿನ ನಿರ್ಮಾಣದಲ್ಲಿ ಉಪಯೋಗಿಸಿದ ಉಪಕರಣಗಳ ಪೈಕಿ ಸುಮಾರು ನೂರರಲ್ಲಿ 65 ಭಾಗ ಭಾರತದಲ್ಲಿ ತಯಾರಿಸಿದವಾಗಿದೆ. ಎರಡನೇ ಕಾವಲು ಹಡಗಿನ ನಿರ್ಮಾಣದಲ್ಲಿ ಸುಮಾರು 95 ಭಾಗ ದೇಶೀಯ ಉಪಕರಣಗಳನ್ನೇ ಉಪಯೋಗಿಸಲಾಗುವುದು.

ನಾಗರಿಕ ಕೈಗಾರಿಕಾ ಅಭಿವೃದ್ಧಿ ಇಲ್ಲದೆ ರಕ್ಷಣಾ ಬಲದ ಸ್ಥಾಪನೆ ಸಾಧ್ಯವಿಲ್ಲ. ಈಗಾಗಲೇ ಕೈಗೊಂಡಿರುವ ಪ್ರಯತ್ನಗಳ ಮೂಲಕ ನಾಗರಿಕ ಪ್ರಗತಿಯನ್ನು ಸಾಧಿಸಿದ್ದೇವೆ ತಾಂತ್ರಿಕ ವಿಷಯದಲ್ಲಿ ಖಾಸಗೀ ಸಂಸ್ಥೆಗಳು ಸರಕಾರ ಕಾರಕ್ಕೆ ತಮ್ಮ ಸಹಕಾರವನ್ನು ನೀಡಿತ್ತಿವೆ. ಪ್ರಸ್ತುತ ಯುಗದ ಜೋಡಣೆಗಳನ್ನು ಎದುರಿಸಲು ಅಗತ್ಯವಾಗಿ ಬೇಕಿರುವ ಹೊಸ ಮಾರ್ಗ ಶಾಸ್ತ್ರೀಯ, ಶಸ್ತ್ರಾಸ್ತ್ರಗಳನ್ನು ಸದಾ ತಯಾರಿಸಲು ನಾವು ಸಿದ್ಧರಿದ್ದೇವೆ. ಇತ್ತೀಚಿನ ಸಾಧನಗಳಾದ ಟ್ಯಾಂಕ್‌ಗಳು, ಯುದ್ಧ ನೌಕೆಗಳು, ಮತ್ತು ಸೂಪರ್‌ಸಾನಿಕ್ ವಿಮಾನಗಳನ್ನು ತಯಾರಿಕೆಯಲ್ಲಿಯೂ ಸದಾ ನವೀನ ವಿಧಾನಗಳನ್ನ ಅನುಸರಿಸುತ್ತಿದ್ದೇವೆ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯ ಬೇಡದೆ ಇಂಗ್ಲಿಷ್ ಕಲಿಸುವುದಾದ ಅಂಗ್ಲ ಭಾಷಾ ಬೋಧಿನಿ.
ಬೆಲೆ: ರೂ. 2—00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ
ವಿಶಿಷ್ಟ ಪತ್ರ ಸಂಕಲನ. ಬೆಲೆ: ರೂ. 1—50

ಗೀತೆಯ ಕೈಗನ್ನಡಿ ಭಗವದ್ಗೀತೆಯ ಸಮೂಲ ಭಾಷಾಂತರ

ಹೊಸಕೆರೆ ಬಿದಂಬರಯ್ಯನವರ, ಕವಲಿ ಕವ್ವಡದಲ್ಲಿ ಬರೆದ ಗೀತೆಯ ಅನುವಾದ.
400 ಪುಟಗಳ ಸುಂದರ ಕೈಹೊತ್ತಗೆ. ಬೆಲೆ: ರೂ. 1—50

ಮನೆ-ಮದ್ದು Home Remedies

ಡಾ. ವಿ. ಆರ್. ಕೊರಡ್ಕಲ್‌ರು ಬರೆದ ಪ್ರತಿ ಮನೆಯಲ್ಲೂ ಇರಲೇಬೇಕಾದ ಕೈಹೊತ್ತಗೆ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ರೋಗಿಲಿಗಳಿಗೂ ಮನೆಯಲ್ಲಿ ಮದ್ದು ಮಾಡುವ ವಿಧಾನಗಳಿವೆ.
ಅನೇಕ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. 2—00

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

I A. 1 in O. S. 217/67

ರುದ್ರಮ್ಮ ಸೆಟ್ಟಿ —ಅರ್ಜಿದಾರರು.

ಮತ್ತು

1. ಶಂಗನ್ನ ಸೆಟ್ಟಿ ಮೃತರಟ್ಟಿರುವರು.
2. ರುದ್ರಮ್ಮ ಸೆಟ್ಟಿ, 3. ಸಂಜೀವ ಸೆಟ್ಟಿ,
4. ಭವಾನಿ ಸೆಟ್ಟಿ, 5. ಜಲಜಾಕ್ಷಿ ಸೆಟ್ಟಿ.
—ಶಂಗನ್ನ ಸೆಟ್ಟಿರ ಮಕ್ಕಳು. ಉಡುಪಿ ತಾಲೂಕು ಹಾರಾಡಿ ಗ್ರಾಮದಲ್ಲಿ ವಾಸವಾಗಿರುವವರು.

6. ಪ್ರಭಾಕರ ಸೆಟ್ಟಿ. ರುದ್ರಮ್ಮ ಸೆಟ್ಟಿ ಮಗ Associated pulp and Paper Mills Ltd. Barala, Ahmadabad, Gujarat State —ಎದ್ರಿರು.

ಮೇಲಿನ ಎದ್ರಿಯುರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅರ್ಜಿದಾರರು ಸದ್ರಿ ಮೇಲೆ O. S 217/67ರಲ್ಲಿ ಪಡೆದ ಡಿಕ್ರಿಯ ಮೇಲೆ ಪ್ಲೆನರ್ ಡಿಕ್ರಿ ಕೇಳಿ ಇಂಡಿಯ ಮೇಲ್ಕಂಡ ಅರ್ಜಿಯು ತಾ. 8—9—69 ಕ್ಕೆ ಇನುಮುದು ಆದುದರಿಂದ ನೀವು ಮೇಲ್ಕಂಡ ತಾರೀಕಿನಂದು ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ 10 ಗಂಟೆಗೆ ಹಾಜರಾಗದಿದ್ದಲ್ಲಿ ಸದ್ರಿ ನಂಬ್ರವು ಏಕಪಕ್ಷೀಯವಾಗಿ ವಿಚಾರಣೆ ನಡೆಸಲಾಗುವುದು.

(ಕೋರ್ಟ್ ಮುದ್ರೆಯಂ ಪ್ರಕಾರ)
ಪಿ. ಶಿವಾಜಿ ಸೆಟ್ಟಿ.
Advocate for the Petitioner
Udipi 13—8—69

READ & ADVERTISE IN NAVAYUGA WEEKLY

Edited, Printed & Published by K. Raghavendra Rao, at the Navayuga Press, Udipi, S. India.

ನವರಂಗ

28—8—1969

ಸಣ್ಣ ಕತೆ

ಯುದ್ಧ ರಂಗದಿಂದ

ಬರೆದವರು
ಶ್ರೀ ಎಚ್. ಎಂ. ನಾರಾಯಣ ಭಟ್ಟ

ಕೊಳೆತ ವಿಷಾನಿಲ ದುರ್ವಾಸನೆಯೊಂದಿಗೆ ಕಲ್ಲಿದ್ದಲ (ಚೂರು ಕಹಿಕ) ಹೊಗೆಯೂ ಸೇರಿದ್ದ ಮಲಿನ ವಾಯು ತುಂಬಿದ್ದ ವಾತಾವರಣದಲ್ಲಿ "ಬ್ಯೂಂ...." ಎಂದು ನೊಣಗಳ ಝೇಂಕಾರವೂ ಆವೃತವಾಗಿದ್ದ ಪ್ಲೇಟ್‌ಫೋರ್ಮ್. ಉದಿಸಿದ ಸೂರ್ಯನ ಪಹೋಕ್ಷವಾದ ಬೆಳಕಿನಿಂದಾಗಿ ಕೈಬೆಳ್ಳಿ ರಸ್ತೆಯ ಇಷ್ಟಿಕಲ್ಲುಗಳು ಹೊಳೆಯಲಾರಂಭಿಸಿದ್ದವು. ನಿಲ್ದಾಣದಲ್ಲಿದ್ದ ಕಾಂಕ್ರೀಟ್ ಬೆಂಚುಗಳಲ್ಲಿ ನಿದ್ರಿಸುತ್ತಿದ್ದ ಕೆಲವಂದಿ ಇನ್ನೂ ಎದ್ದಿಲ್ಲ. ಆ ವಿಜನ ಸ್ಥಳೀಕದ ಇಕ್ಕೆಡೆಗಳಿಗೂ ಹಾಕಲಾಗಿದ್ದ ರೈಲ್ವೆ ಕಂಬಿಗಳೂ ವಿಷೂವೃತವಾಗಿ ಮಲಿನಿಸಿಕೊಳ್ಳಲೆತ್ನಿಸಿದೆ.

ಬಾಲ ತುಂಡಾಗಿದ್ದ ಒಂದು ದಪ್ಪ ಪ್ಲೇಟ್‌ಫೋರ್ಮಿನಲ್ಲಿ ತಿನಿಸು ಹುಡುಕುತ್ತಿರುವುದನ್ನು ಕಂಡಾಗಿರಲೂ ಬಹುದು- ಪೂರೂವದೆ ಕಾಲಿನ ಪಾಯಿಯೊಂದು ಸ್ವಲ್ಪ ದೂರದಿಂದ ಬರುತ್ತಿದೆ.

ಅಲ್ಲಲ್ಲಾಗಿ ಹಲವೆಡೆಗಳಲ್ಲೂ ಹೊಲಿಗೆ ಬಿಟ್ಟಿದ್ದ ಖಾಕಿ 'ಟ್ರೌಸರ್' ಮತ್ತು ಮಲಿನವಾದ ಬನಿಯನ್ ಹಾಗೂ ಮುಂಡಾಸುಧಾರಿಯೋರ್ವನು ಎಲ್ಲಿಯೋ ಅಡಗಿದ್ದವಕಂತೆ ಪ್ರತ್ಯಕ್ಷನಾದನು- ಬಂದವನೇ ನಿಂತ್ತಿಗೆಯಿಂದ ರೈಲ್ವೆ ಕಂಬಿಗಳಿಗೆ ಕೆಲವೇಟು ಬಾರಿಸಿದನು. ಪೆಟ್ಟಿನ ನೋದಿಗೆ ರಂಬಿ ಅಳುವ ಸದ್ದೂ ಕೇಳಿಸಿತು.

ಮಮ ಮಷ್ಟಕೆದ್ದರೂ ತನ್ನ ಕೂಗಿನ ಧ್ವನಿಯನ್ನು ಮುಂದಾಗಿ ಕಳುಹಿಸಿ ಅದನ್ನು ಅನುಗಮಿಸುತ್ತಾ ಚಳಿಯಿಂದ ಪಡುಗಿ ಕೆಮ್ಮಿ ಕೇಕರಿಸಿ ಬಗ್ಗಳಿ ಬಗ್ಗಿಬಂದಿ ಬರುತ್ತಿದ್ದ. ಉತ್ಸವದ ಮರುದಿನ ಮುಂಜಾನೆ ಜೀವಾಲಯದ ದೀಪಸ್ತಂಭದಲ್ಲಿ ಬೀಳುತ್ತಿರುವ ದೀಪದಂತೆ ಇಂಜಿನಿನ ಹಣೆಯಲ್ಲಿ ಅರಸಿನ ಪಿಕ್ಕ ಹಿಡಿದ ಒಂದು ಜೀವ— ಅಗತ್ಯವಿಲ್ಲದಿದ್ದರೂ ಅದಲೂ ಉರಿಯುತ್ತಿತ್ತು.

ಯಾವುದೋ ಹಿಂದಿನ ಕಾಲದಲ್ಲಿ ಹಸುರು-ಕೆಂಪು ವರ್ಣಗಳಲ್ಲಿದ್ದ ಎಂಡು ಟ್ಟಿಯು ತಂಡುಗಳನ್ನು ಬೇರೆ ಬೇರೆಯಾಗಿ ಲೋಲಂಗಳಿಗೆ ಸುತ್ತಿ ಕಂಕುಳಲ್ಲಿ ಜೋಪಾನವಾಗಿರಿಸಿದ್ದ ಕೆಂಸ. ಮುಂಡಾಸುಧಾರಿ ತನ್ನ ಗುಹೆಯಿಂದ ಹೊರಕ್ಕೆ ಬಂದನು.

ಈರ್ವರು 'ಪೋರ್ಟರ್'ರು ಎಲ್ಲಿಂದಲೋ ಓಡಿಬಂದು ತಲಪಿದರು— "ಅಲಿ ಹಾಳ್‌ಯನ್ನು ಪರೀಕ್ಷಿಸುವ ಕಾಗೆಡಕಂತೆ ಮೂಲಿಯೂ ಬಳುಕೆಯೂ ಅತ್ತಿತ್ತ ಹೋಡದರು. ಅವರ ತೀಕ್ಷ್ಣ ದೃಷ್ಟಿಯಿಂದ ಇದೀ ಪ್ಲೇಟ್‌ಫೋರ್ಮ್ ತಪ್ಪಿಸಿಕೊಳ್ಳುವಂತಿಲ್ಲ.

ಪಾಲ್ಕರು ಗಾಡಿಯಿಂದ ಇಳಿದಿದ್ದರು. ಒಬ್ಬ ಗರ್ಭವಿಜ್ಞಾನ ಉಟ್ಟಿದ್ದ ಬಟ್ಟೆಯಿಂದಲೇ ಹೊದ್ದುಕೊಂಡು ನಪ್ಪತೆಯಿಂಬಲೂ ಪ್ರಾಧಾನ್ಯತೆಯನ್ನು ಚಳಿಗಾಳಿಯ ಬಗ್ಗೆ ನೀಡಿದ ಹಾಗೆ ತೋರಿತು.

ಬೇರೊಬ್ಬನು ಒಂದು ಕೈಚೀಲಧಾರಿಯಾಗಿ ಫಲ್ದಾಣದಿಂದ ಹೊರಕ್ಕೆ ಸಾಗಿದನು.

ಮೂರನೇಯವನು ಪ್ಲೇಟ್‌ಫೋರ್ಮಿನ ಬಡಗು ಬದಿಯಾಗಿ ನೇರ ನಡೆದನು. ಆತನು ಟಿಕೇಟು ಕೊಡಲೂ ಇಲ್ಲ. ಯಾರೂ ಅತನನ್ನು ವಿಚಾರಿಸಿಯೂ ಇರಲಿಲ್ಲ.

ಇನ್ನು ಉಳಿದವನು ಓರ್ವ ಮಧ್ಯ ವಯಸ್ಕ ಅಧಿಕಾರಿ ಪೋಷಾಕುಧಾರಿ. ಕುಡಿವಿನಸೆ. ಅತನ ಕೋಳಿಫಿಂದ ಒಂದು "ಏರ್ ಬೇಗ್" ನೇತಾಡುತ್ತಿದೆ. ಅತನ ಲಗ್ಗೇಜನ್ನು ಪೋರ್ಟರ್‌ರು ಗಾಡಿಯಿಂದ ತೆಗದಿರಿಸಿದ್ದಾರೆ. ಎರಡು ಸ್ಟೀಲ್ ಟ್ರಂಕುಗಳು, ಒಂದು ಹೋಲ್ಡಾಲ್ ಮತ್ತು ಒಂದು ಸೂಟ್ ಕೇಸ್. ವ್ಯಕ್ತಿ ಹಾಯಾಗಿ ಫಿಂತಿದ್ದಾನೆ. ಕೈಗಡಿಯಾರವನ್ನು ನೋಡಿದವನು ಜೇಬುಗಳಿಗೆ ಕೈಯಾಕಿ ಹುಡುಕಿ ಸಿಗರೇಟ್ 'ಪೇಕೇಟ್' ಮತ್ತು 'ಲೈಟರ್' ತೆಗೆದು ಸಿಗರೇಟಿನ ಎರಡೂ ತುದಿಗಳನ್ನು 'ಲೈಟರ್'ನ ಅಗಲವಾದ ಹೊಟ್ಟೆಗೆ ತಟ್ಟಿ ಸಂಪಡಿಸಿಕೊಂಡು ಅದನ್ನು ಮೆಲ್ಲನೆ ತುಟಿಗಳೆಡೆಯಿರಿಸಿ ಬೆಂಕಿ ಹಚ್ಚಿದನು.

ಲಗ್ಗೇಜನ್ನು ಹಂಚಿಕೊಂಡು ತಲೆಯು ಮೇಲಿರಿಸಿದ ಪೋರ್ಟರರು ಹೊರಡಲು ಸಿದ್ಧರಾದರು.

ಗಾಡಿಯಲ್ಲಿ ಮರೆತಿದ್ದ 'ವಾಕಿಂಗ್ ಸ್ಟಿಕ್'ನ್ನು ಯೂರೋ ಸಹ ಯಾತ್ರಿಕರು ಹೊರಗಿದ್ದ ಆಧುನಿಕ ವೇಷಧಾರಿ ಗೋಪಾಲನಿಗೆ ಕೊಟ್ಟರು. ಅದು ಅತನ ಬಲಶಾಲಿತ ಆಧಾರ.

ಗಾಡಿ ವಾಡಿಕೆಯ ಂತೆ ದೀರ್ಘ ಶ್ವಾಸ ವೆಳೆಯುತ್ತಾ ಮುಂದೆ ಸಾಗಿತು.

ಬಸ್ ಫಲ್ದಾಣದಲ್ಲಿ ಗೋಪಾಲಫಿಗೆ ಬೇಕಾದ ಬಸ್ಸಿಲ್ಲ. ಇನ್ನೂ ಎರಡು ತಾಸು ಕಾಯಬೇಕು. ಲಗ್ಗೇಜನ್ನು ಆಲ್ಲಿರಿಸಿದ ಪೋರ್ಟರರು ಮತ್ತೆ ಸಕಾಲದಲ್ಲಿ ಬಂದು ಲಗ್ಗೇಜನ್ನು ಬಸ್ಸಿನಲ್ಲಿರಿಸುವುದಾಗಿ ತಿಳಿಸಿ ನಿರ್ಗಮಿಸಿದರು.

ವಿಶಾಲವಾದ ಬಸ್ ನಿಲ್ದಾಣ. ಪ್ರಯಾಣಿಕರನ್ನೇರಲು ತಂತಮ್ಮ ಬಸ್ಸುಗಳ ಗಾಗಿ ಕಾಯುತ್ತಿದ್ದಾರೆ. ಬೀಡಾ, ಬೀಡಿ, ಸಿಗರೇಟ್, ನೆಲಪಡಲೆ, ಗೇರು ಬೀಜ, ಹುರಗಡಲೆ ಇತ್ಯಾದಿಗಳ ಮಹಿಮೆಯನ್ನು ವರ್ಣಿಸುವ ಬಾಲಕರನೇಕ ಮಂದಿ ವ್ಯಾಪಾರದಲ್ಲೇರ್ಪಟ್ಟಿದ್ದಾರೆ.

ಕಕ್ಕಸ್ಸು, ಡ್ರಾಕ್ಷಿ, ಚಾಕಲೆಟ್ಟು, ಮೂಸಂಬಿಗಳ ವ್ಯಾಪಾರಕಾಲೆಗಳನ್ನೂ ತಂತಮ್ಮ ಚಿಲುಮೆಪೆಟ್ಟಿಗೆಗಳನ್ನು ಪ್ರಾರಂಭಿಸಿದಂತೆ ತೋರಲಿಲ್ಲ.

ಕಾಫಿ, ಚಾ ವ್ಯಾಪಾರ ಭರದಿಂದಲೇ ಸಾಗುತ್ತಿತ್ತು.

ಹಲವು ಊರುಗಳ ಹೆಸರಿತ್ತಿ ಕರೆದು ತಂತಮ್ಮ ಬಸ್ಸುಗಳಿಗೆ ಪ್ರಯಾಣಿಕರನ್ನು ತುಂಬಿಸಿಕೊಳ್ಳಲು ಏಜೆಂಟರುಗಳು ವಿಶೇಷ ಶ್ರದ್ಧೆ ತಂದಿದ್ದರು.

ಗೋಪಾಲನ ಸಿಗರೇಟ್ ವುಗಿದಿದೆ. ಒಂದು ಪೇಕೆಟ್ ಖರೀದಿಸಿದ್ದಾಯ್ತು.

ಊರುಗೋಲಿನ ತುದಿಯ ಸಹಾಯದಿಂದ ರಸ್ತೆಯ ವರ್ಣನೆ ಮೇಲೆ ಏನೆಲ್ಲಾ ಖರೀದು ಶವುಯ ಕಳೆವುದರಲ್ಲಿ ಅತ ಮಗ್ನನಾದ.

ತಡವಾಗಿ ಎದ್ದ ಒಂದು ಕೋಳಿ ಕೂಗುವ ಶಬ್ದ ಸ್ವಲ್ಪ ದೂರದಿಂದ ಕೇಳಿಸಿತು.

ಆಕಾಶವನ್ನೇರುವ ಯತ್ನದಲ್ಲಿದ್ದ ಕೆಲವು ತೆಂಗಿನ ಮರಗಳ ತುದಿಗೆ ಸೂರ್ಯನ ಬಿಸಿಲು ತಗಲುತ್ತಿತ್ತು. ಸೂರ್ಯನು ಎದ್ದು ಏಳುತ್ತಿದ್ದಾನೆ.

ಮುಚ್ಚಲು ಬಾಗಿಲ ಗಳಿಲ್ಲದ, ಸೀಟು ಗಳೆಲ್ಲವೂ ಹರಿದುಹೋಗಿರುವ, ಮೂಡಿಗೂ ಛಾವಣಿಯಿಲ್ಲದ, ರಂಗು ಮಾಸಿದ ಒಂದು ಬಸ್ಸಿನಲ್ಲಿ ಗೋಪಾಲನು ಕುಳಿತ. ಆತನ ಲಗ್ಗೇಜು ಆದಷ್ಟಾರಿಸಲ್ಪಟ್ಟಿತು. ಬಸ್ಸು ಹೊರಡಲು ಇನ್ನೂ ಒಂದು ತಾಸಿದೆ. ಪ್ರಯಾಣಿಕರಾರೂ ಬಂದಂತೆ ತೋರಲಿಲ್ಲ. ಅವರನ್ನು ಬಿಟ್ಟು ಹೋದರೆ ಹೇಗೆ?

ಗೋಪಾಲನ ಹಿಂದಿನ ಸೀಟಿನಲ್ಲಿ ಕುಳಿತಿದ್ದವನು ಹಳೆಯ ಮಿತ್ರ ರಾಘವ.

ರಾಘವನು ಗೋಪಾಲನ ಕುಶಲ ವಾರ್ತೆಗಳನ್ನು ವಿಚಾರಿಸಿದನು.

ತನ್ನ ಬಲಗಾಲು ಯುದ್ಧರಂಗದಲ್ಲಿ ಚೀಫ್‌ಯುರ 'ಶೆಲ್'ದಳಿಂದಾಗಿ ಜಜ್ಜಿ ಜೋದ—ಮತ್ತೆ ಆಪ್ತಶ್ರೆಯಲ್ಲಿ ಅದನ್ನು ಕತ್ತರಿಸಿದ – ಹೇಗಾದರೂ ಜೀವ ಉಳಿದ ವರ್ತಮಾನಗಳನ್ನು ಗೋಪಾಲನು ವಿವರಿಸಲಾರಂಭಿಸಿದನು. ಯುದ್ಧ ರಂಗದ ಭೀಕರ ದೃಶ್ಯಗಳನ್ನೂ ಕೃತ್ಯಗಳನ್ನೂ ಸಹಯಾತ್ರಿಕರೂ ಶ್ರದ್ಧೆಯಿಂದ ಆಲಿಸಿ ಸಹತಾಪ ವ್ಯಕ್ತಪಡಿಸಿದರು.

ವಂದಿನ ಸೀಟಿನಡಿಗೆ ಡೂಡಿ ಇರಿಸಿದ್ದ ತನ್ನ ಬಲಗಾಲು ಕೃತಕನೆಂದೂ ಅದನ್ನು ಪೂನಾದ ಒಂದು ಸಂಸ್ಥೆ ಇರಿಸಿದ್ದಿಂದಾ ಅತ ವಿವರಿಸಿದನು.

ಡ್ರೈವರ್, ಕಂಡಕ್ಟರ್ ಸಿದ್ಧ! ಇಂಜಿನ್ ಮಾತ್ರ ಉದಾಸೀನತೆಯಲ್ಲಿ.

"ಎಲ್ಲರೂ ಇಳಿದು ಒಳ್ಳೆ ಡೂಡೋ ಣ.... ಬೇಗ ಹೋಗಬಹುದು..." — ಕಂಡಕ್ಟರ್ ಫಿರ್ಕಿಸಿದ.

ಗೋಪಾಲ ಹೊರತು ಮಿಕ್ಕ ಪ್ರಯಾಣಿಕರೆಲ್ಲರೂ ಇಳಿದು ಬಸ್ಸನ್ನು ದೂಡಿದರು. ಸಹಕಾರ ಶಕ್ತಿ! "ಎಲ್ಲರೂ ಒಂದು ಕೈ —ಒಂದು ಎಲ್ಲರಿಗೆ!" ಬಸ್ ಚಲನೆ ಗಾರಂಭಿಸಿತು. ಎಲ್ಲರೂ ಹತ್ತಿ ಕುಳಿತರು. ಗೋಪಾಲನ ಸಹಾಯಹಸ್ತ ನೀಡದ ಬಗ್ಗೆ ಕಂಡಕ್ಟರ್ ಸಿಪಾಯಿ ಹೇಳಿದಾಗ ಇತರ ಪ್ರಯಾಣಿಕರು ಆತನ ಅಂಗಹೀನತೆಯನ್ನು ವಿವರಿಸಿದರು.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕೆರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವಿದ್ಯಶಾಲಾ (ಪೇಟೆಂಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳನ್ನು ಕೀಳ್ಪವಾಗಿ,
ನಿವಾರಿಸುತ್ತದೆ.
ತಯಾರಿಕರು:
ಅಮೃತಾಂಜನ ಲಿಮಿಟೆಡ್,
ನುದ್ಯಾಸು-4

ಫೋನ್ : 526

ಸಂಪುಟ ೪೮

ಸಂಚಿಕೆ ೪೯

VOL. 48

No. 49

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೮—೮—೧೯೬೯

1921 ಸ್ಥಾಪನೆ

ಸ್ಥಾಪಕರು:

ದಿ| ಎ. ಬಿ. ಶೆಟ್ಟರು

ಸಂಪಾದಕರು:

ಕೆ. ಹೊನ್ನಯ್ಯ ಶೆಟ್ಟಿ

ಮೂರಾಬಟ್ಟೆ ಕಾಂಗ್ರೆಸ್

ಅನಿರೀಕ್ಷಿತವಾಗಿ ರಾಷ್ಟ್ರಪತಿ ಡಾ| ಜಾಕೀರ್ ಸಾಹೇಬರ ಮರಣದಿಂದ ಮತ್ತೊಂದು ಚಾರಿತ್ರಪತಿ ಅಯ್ಕೆ ನಡೆಯುವುದು ಅನಿವಾರ್ಯವಾಯ್ತು. ಈ ಸಂಬಂಧದಲ್ಲಿ ಕಾಂಗ್ರೆಸ್ಸು ಕೇಂದ್ರದಲ್ಲಿ ಸ್ವಪ್ನ ಮತ್ತು ಸಾಕಷ್ಟು ಬಲವಾಗಿಯೇ ಇರುವುದರಿಂದ ಈ ಪಕ್ಷವು ಬಯಸಿದ ಅಭ್ಯರ್ಥಿ ಗೆಲ್ಲುವುದು ನಿಸ್ಸಂದೇಹವಿತ್ತು. ಆದರೆ, ಪರಿಣಾಮ ಹಾಗಾಗಲಿಲ್ಲ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಾಗಿ ನೋಲಾಖ್ಖಾನ ಕಹಿ ಪ್ರಸಂಗವೊದಗಿತು. ಇದಕ್ಕಿಂತಲೂ ದೇಶದ ಪ್ರಬಲ ಮತ್ತು ಹಳೆಯ ರಾಜ್ಯಕೀಯ ಪಕ್ಷವೊಂದು ಒಡೆದು ಹೋಳಾಗುವಂತಹ ದಾರುಣ ಸನ್ನಿವೇಶವೊದಗಿತು. ಕಾಂಗ್ರೆಸ್ಸು ಒಡೆಯಿತು ಎಂದರೆ, ಕೇಂದ್ರದಲ್ಲೂ ಯಾವುದೇ ಒಂದು ಪಕ್ಷದ ಸರಕಾರ ರಚಿಸುವುದು ಕಷ್ಟಸಾಧ್ಯವಾಗಿತ್ತು. ಹೆಲವು ಪಕ್ಷಗಳ ಕೆಚಡಿ ಸರಕಾರ ಸ್ಥಾಪನೆಯೊದರೂ ಅದರಿಂದ ದೇಶ ಹಿತ ಸಾಧಿಸುವಾಗುವುದು ಸಾಧ್ಯವಿಲ್ಲ. ಸದ್ಯ ಹಲ ಕೆಲವು ರಾಜ್ಯಗಳಲ್ಲಿ ಇಂತಹ ಕೆಚಡಿ ಸರಕಾರಗಳು ಅಧಿಕಾರದಲ್ಲಿವೆಯೆನೆ ೇ ಫಿಜಿಸುವುದರೆ, ಇವುಗಳು ಮಂಟಿಬು ನೇಲಣ ಮರದಂತೆಯೇ ೇ ಕಮ್ಮು ಉಳಿವಿಗಾಗಿಯೇ ಹೆಚ್ಚಿನ ಸಮ ಯ ಶಕ್ತಿ, ಮತ್ತು ಸಂಪತ್ತುಗಳನ್ನು ಮಂಡಿಪಿಡಬೇಕಾಗಿರುವುದರಿಂದ ಜನಹಿತ ಸಾಧನೆಯು ಕನ್ನಡಿಯೊಳಗಿನ ಗಂಟು ಮಾತ್ರ. ದೇಶದಲ್ಲಿ ಈ ಬಗೆಯ ದಾರುಣ ಸನ್ನಿವೇಶವನ್ನು ಉಂಟು ಮಾಡಿದ ಕೀರ್ತಿ ಪ್ರಚಲಿತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರದ್ದು ಎನ್ನದೆ ಗತ್ಯಂತರವಿಲ್ಲ.

ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಲ್ಲಿನ ಭಿನ್ನಮತ ಸಹಜ, ಮತ್ತು ಸ್ವಾಭಾವಿಕವೇ. ಆದರೆ, ಈ ಭಿನ್ನಾಭಿಪ್ರಾಯ ಪಕ್ಷ ಭಂಗಿಸುವುದಕ್ಕೆ ಉತ್ತೇಜನ ನೀಡುವಂತಾದುದು ಕಾಂಗ್ರೆಸ್ಸಿನ ದುರದೃಷ್ಟ; ದೇಶದ ದೌರ್ಭಾಗ್ಯ. ಕಾಂಗ್ರೆಸ್ ಪಕ್ಷದ ಅಧ್ಯಕ್ಷಾಭ್ಯರ್ಥಿಗಳು ಪಕ್ಷೇತರ ಅಭ್ಯರ್ಥಿಗೆ ಪರತನೀಡಬೇಕೆಂದು ಹೇಳಿದರೆ, ಕಾಂಗ್ರೆಸ್ ಸರಕಾರದ ಅಧಿನಾಯಕರು ಆತ್ಮಸಾಕ್ಷಿಪ್ರಕಾರ ಮತ ಚಲಾಯಿಸಿ ಎಂದರು. ಅಂದರೆ, ಶ್ರೀ ನೀಲಂಗೆ ಮತ ಕೊಡಬೇಡಿ, ಶ್ರೀ ಗಿರಿಯವರಿಗೇ ಓಟು ಕೊಡಿ ಎಂಬುದನ್ನು ಪರೋಕ್ಷವಾಗಿ ಹೇಳಿದಂತೆಯೇ. ಈ ಬಗೆ ಹೂಡಿ ಇಬ್ಬಣಗಳಾಗಿಒಡೆದ ಕಾಂಗ್ರೆಸ್ಸು ಇನ್ನು ಮುಂದೆ ಪ್ರತ್ಯಕ್ಷವಾಗಿ ಕಾಣುವ ಪತ್ರಿಗಳಲ್ಲಿ ಒಡೆಯುವುದು ಮಾತ್ರ ಖಾಕಿಯುಳಿದಿದೆ.

ಇದನ್ನು ಬರೆಯುವಷ್ಟು ಹೊತ್ತಿಗಲ್ಲಿ ಕಾಂಗ್ರೆಸ್‌ನ ಎರಡು ಬಣಗಳೆಲ್ಲಿ ಮಲ್ಲಯುದ್ಧದ ಅಬೇಡಕ್ಕೆ ಅಮಂತ್ರಣ ಹೊರಟಿಪೆಯೆನ್ನಬೇಕು. ಪ್ರಧಾನಿಯವರು ತಳೆದ ನಿಲುಮೆಯನ್ನು ಸಮರ್ಥಿಸುವವರು ಒಂದೆಡೆ ಹಂಡಡ ಅವರನ್ನು ಅಭಿನಂದಿಸಿ ಕಾಂಗ್ರೆಸ್ ಅಧ್ಯಕ್ಷಗೆನ್ನ 'ಫೇರಾವ್' ಮಾಡತೊಡಗಿದ್ದಾರೆ. ಪಕ್ಷದ ನಿಲುವನ್ನು ಒಪ್ಪಿದವರು ಪ್ರಧಾನಿಯವರೇ ಇರಲಿ, ಇನ್ಯಾರೇ ಇರಲಿ, ಪಕ್ಷದ ಶಿಕ್ಷಾ ಉಲ್ಲಂಘಿಸಿದವರ ವೇಲೆ ತೀವ್ರ ಕ್ರಮ ಕೈಕೊಳ್ಳಬೇಕೆಂದು. ಕೇಳಿಕೊಂಡಿದ್ದಾರೆ. ಈ ಎರಡು ಬಣಗಳ ಧೋರಣೆ ಸಂಧಾನ ಸಾಧ್ಯತೆಯ ಅಲ್ಪ ಸಂಖ್ಯಾತರ ಗುಂಪೂ ಒಂದಿದೆ. ಆದರೆ, ಇದರ ಸಾಧನೆಯ ಶಕ್ತಿಗಳನ್ನು ಅಳತೆ ಮಾಡಲು ಇನ್ನಷ್ಟು ಕಾಲ ಕಾಯಬೇಕಾಗಿದೆ. ಪಕ್ಷವನ್ನಲ್ಲಿ ಅದರ ನೀತಿಯಲ್ಲಿ ನಿಷ್ಠೆಯಿಲ್ಲದ ಒವರು. ಪಕ್ಷವನ್ನು ಬಿಟ್ಟು ಹೊರಗೆ ಹೋಗಲೆಬೇಡಿ. ಕೇರಳದ ನಂಬೂದಿರಿಪಾದರಂತೆ ಸಂವಿಧಾನವನ್ನು ಮಾರಿಯುವುದಕ್ಕಾಗಿಯೇ ಸಂವಿಧಾನದ ಬಲದಿಂದ ಅಧಿಕಾರಕ್ಕೆಂಟು ಕೊಳ್ಳುವುದು ಪ್ರಜಾಕ್ಷೇಮೆಯೆಳಿಸುವಾಗಿಸಿ. ಕಾಂಗ್ರೆಸ್ ಸರಕಾರದ ಸ್ವಧಾನಿಯೇ ಕಾಂಗ್ರೆಸ್ ಪಕ್ಷೇತರಅಭ್ಯರ್ಥಿಗೆ ಮತ ನೀಡಬೇಕೆಂಬ ಆದೇಶವನ್ನು ಅನಯೇಳವೆ ಗೆಯ್ದು, ಅದರ ವಿರುದ್ಧ ಪ್ರಚಾರವನ್ನು ಪ್ರತ್ಯಕ್ಷ ಮಾಡಿದರೂ ಒಂದೇ, ಪರೋಕ್ಷವಾಗಿ ಮಾಡಿದರೂ ಒಂದೇ.

ಕಾಂಗ್ರೆಸ್ ಪೈಕಿಯವೊಂದು ರಾಷ್ಟ್ರಪತಿ ಸ್ಥಾನಕ್ಕೆ ಆರಿಸಿಬಂದ ಅಭ್ಯರ್ಥಿಯ ಬಗ್ಗೆ ಪ್ರಧಾನಿಯವರಿಗೆ ಒಪ್ಪಿಗೆಯಿಲ್ಲವಾದರೆ, ಪೈಕಿಯವೊಂದನ್ನು ಕಳಿಸಿಬಿಟ್ಟಿದೆ ಚರ್ಚೆಯಿಲ್ಲಬೇಕಿತ್ತು; ಅದರ ಸದಸ್ಯತ್ವನ್ನೆ ಕನ್ನ ಅಭಿವ್ಯಾಯಕ್ಕೆ ಒಪ್ಪಿಕೊಳ್ಳವಂತೆ ಪ್ರಯತ್ನ ಮಾಡಬೇಕಿತ್ತು. ಒಂದು ವೇಳೆ ಅದು ಸಾಧ್ಯವಾಗದೇ ಹೋದರೆ ಅಂದೇ ಬೇರೆ ವಿಧಾನ ಸೂಚಿಸಬಹುದಿತ್ತು. ಆದರೆ, ಆ ನೇಲೆ ಬಹುಮತದ ಫಿರ್ಧಾರವನ್ನು ಶಿಸ್ತಿನ ಸಿಪಾಯಿಯಂತೆ ಒಪ್ಪಿಕೊಳ್ಳಬೇಕಿತ್ತು. ಒಮ್ಮೆ ನಿರ್ಧಾರವಾದ ಬಳಿಕ ಕನ್ನಕ ದುರಿಗೆ ವಾದ ಕಾಲಿಂಬ ಫೀತಿ ತಳೆಯುವುದು ಆವಾಪಕ್ಕಾಗಿ ಅಗಲೀ ಶೋಭನೀಯವಲ್ಲ.

ತಾನು ಕಮ್ಯುನಿಸ್ಟೆಳ್ಳನೆಂದು ಬಾಯಿಬಾಗೂ ಸಾರುತ್ತಿರುವ ಶ್ರೀಮತಿ ಇಂದಿರಾ ಗಾಂಧಿಯವರು ಕಮ್ಯುನಿಸ್ಟರ ಬೆಂಬಲ ಪಡೆದ ಶ್ರೀ ಗಿರಿಯವರ ಪರವಾಗಿ ಪರೋಕ್ಷ ಪ್ರಚಾರ ನಿರ್ವಹಿಸಿದ್ದು ಅಶ್ಚರ್ಯವೇನಿಲ್ಲ. ಪಕ್ಷೇತರರು ಆಡಳಿತೆಯಿರುವ ಪ್ರಜಾಸತ್ತೆಯಲ್ಲಿ ವ್ಯಕ್ತಿನಿಷ್ಠೆಗೆ ಬಲವಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರಂತವರೂ ಕಾಂಗ್ರೆಸ್ ಟಿಕೇಟಿನಿಂದ ಜಿ.ನಾವಣಕ್ಕಿಳಿದ್ದವರ. ಶ್ರೀ ಕೃಷ್ಣಮೆನನ್ನರು ಬೊಂಬಾಯಿಯಲ್ಲಿ ಎರಡುಬಾರಿಯೂ ಕಾಂಗ್ರೆಸ್ ಅಭ್ಯರ್ಥಿಗಳಿಂದ ಪರಾಜಿತರಾದರು. ಇವುಗಳಲ್ಲಿ ಒಂದು ನಿಶ್ಚಿತವಲ್ಲಿ ಈ ಹಿಂದೆ ಇದೇ ಮೆನನ್ನರು ಕಾಂಗ್ರೆಸ್ ಅಭ್ಯರ್ಥಿ ಯೆಂದು ವಿಪುಲ ಬಹುಮತದಿಂದ ಗೆದ್ದಿದ್ದವರು. ಅಂದರೆ, ಜನತೆ ವ್ಯಕ್ತಿನಿಷ್ಠೆಗಿಂತ ಪಕ್ಷನಿಷ್ಠೆಗೆ ಹೆಚ್ಚು ಪರವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಶ್ರೀಮತಿ ಗಾಂಧಿಯವರಂತಹ ಹಿರಿಯ ಮುಖ್ಯಧಿಗಳ ಸಾಲಿನಲ್ಲಿ ಹಿಲ್ಲಬಲ್ಲವರು ಇನ್ನೂ ಅರಿಯದಿದ್ದುದು ಆಶ್ಚರ್ಯ. ಹಸಿದವನು ಯೂವ ಪಾಪವನ್ನೂ ಮಾಡಲು ಹೇಸಲಾರನೆಂಬುದಕ್ಕೆ ಶ್ರೀಮತಿ ಗಾಂಧಿಯವರ ಪಕ್ಷ ಮುರುಕುತನವೂ ಒಂದು ಸಾಕ್ಷಿ.

ಉಭಯ ಬಣಗಳ ಬಿಡಿಕು ಬೆಸೆಯುವ ಪ್ರಯತ್ನವು ಅಲ್ಲಲ್ಲಾಗಿದೆಯೆಂಬುದು ಇತ್ತೀಚಿಗಿನ ವಿದ್ಯಮಾನಗಳಿಂದ ಸ್ಪಷ್ಟವಾಗಿದೆ. ಮುಂದೆಳಿಯುವುದು ಒಂದೋ ಶ್ರೀಮತಿ ಗಾಂಧಿಯವರ ಮನಸ್ಸಾಕ್ಷಿಯಂತೆ ನಡೆಯುವವರ ಕಾಂಗ್ರೆಸ್ಸು ಒಂದು, ಶ್ರೀ ಫಜಲಿಂಗಪ್ಪನವರ ಶಿಕ್ತುಬದ್ಧ ಕಾಂಗ್ರೆಸ್ಸು ಒಂದು ಮತ್ತು ಅಧಿಕಾರಕ್ಕಾಗಿ ಹಂಬಲಿಸುವ ಅಯಾರಾಂ ಗಯಾರಾಂಗಳ ಕಾಂಗ್ರೆಸ್ಸು ಒಂದು— ಹೀಗೆ ಮೂರಾಬಟ್ಟೆ ಕಾಂಗ್ರೆಸ್ಸು ಆಗುವ ಸಂಭವನೇ ಅಧಿಕ. ಈ ರೀತಿ ಎಂಬತ್ತಾಲ್ಕು ವರ್ಷಗಳ ಕಾಲ ಹಲವಾರು ಬಿರುಗಾಳಿಗಳನ್ನು ಸಹಿಸಿ ಫಿಂಕ ಕಾಂಗ್ರೆಸ್ ಪಕ್ಷವನ್ನು ಮುರಾಬಟ್ಟೆ ಮಾಡಿದ ಗೌರವ ರಕ್ಕೆ ಪ್ರಧಾನಿ ಶ್ರೀಮತಿ ಗಾಂಧಿಯವರಿಗೆ ಅವಶ್ಯ ಸೇರಬೇಕು.

ನಿವೇದನೆ

ಈ ಸಂಚಿಕೆಯೊಂದಿಗೆ "ನವಯುಗ"ದ ನಲುವತ್ತೆಂಟನೆಯ ವರ್ಷ ಮುಗಿದುಹೋಗುತ್ತದೆ. ಕನ್ನಡದ ಪತ್ರಿಕಾರಂಗದಲ್ಲಿ ಇಷ್ಟೊಂದು ಕಾಲ ಎಡವಿ ಮುಗ್ಗರಿಸಿದರೂ ಮತ್ತೆ ಎದ್ದು ಮುಂದುವರಿಯುವ ಸಾಹಸವನ್ನು "ನವಯುಗ" ಮಾಡಿದೆ. ಆರಂಭದ ದಿನಗಳು ಪತ್ರಿಕಾ ಪ್ರಪಂಚಕ್ಕೆ ಅನುಕೂಲವಾಗಿರಲಿಲ್ಲ. ಇಂದಿನ ದಿನದಲ್ಲಿ ವಾರ ಪತ್ರಿಕೆಗಳಿಗೆ ಉಚಿತವಾದ ಬೆಂಬಲ ಕೊಡುತ್ತಿಲ್ಲ. ಆಫೀಸಿಗೆ ಬರುವ ಕೆಲವೂ ಜನರಲ್ಲಿ ಪತ್ರಿಕೆಯ ಬೆಲೆಯನ್ನು ಕೇಳಿ ಹೋಗುವವರು ಬಹಳ ಮಂದಿ. ಇಂತಹ ಪರಿಸ್ಥಿತಿಯಲ್ಲಿ ಪತ್ರಿಕೆಗಳು ಬಹಳ ಕಷ್ಟಪಟ್ಟು ಬದುಕಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಕೆಲವು ಪತ್ರಿಕೆಗಳು ಬಹಳ ಹುಲುಸಾಗಿ ಬೆಳೆಯುತ್ತಿವೆ. ಇವುಗಳು ಫಗರ ಅಥವಾ ಪಟ್ಟಣಗಳ ಜನತೆಗೆ ಮಾತ್ರ ಮುಟ್ಟುತ್ತಿರುವುದೆಂದರೆ ತಪ್ಪಲ್ಲ. ಹಳ್ಳಿ-ಹಳ್ಳಿಗಳಿದೂ ಮುಟ್ಟುವ ಸಾಪ್ತಾಹಿಕಗಳು ಇವಕ್ಕೆ ವಿನಾಯಿತಿ ನೆಯನ್ನೂ ಸವಲತ್ತುಗಳನ್ನೂ ಜತೆಯೂಗಿ ಮಾಟ್ಟಿಕೆಯಲ್ಲಿವೆ. ನಮ್ಮ ಜನತಾ ಸರಕಾರಗಳೇ ಈ ಸತ್ಯವನ್ನು ಕಡೆಗಣಿಸಿ ವಾರಪತ್ರಿಕೆಗಳಿಗೆ ಜಾಹಿರಾತು ಫೀಡವನ್ನು ನಿಲ್ಲಿಸಿ ಫೀಡ ಪುಡಾರಿಗಳ "ಅಭ್ಯುದಯ ಪತ್ರಿಕೆ"ಗಳಿಗೆ ಜಾಹಿರಾತು ಫೀಡವನ್ನು ಕೊಡುತ್ತಿರುವುದು ಅಶ್ಚರ್ಯವೇ ಸರಿ. ಇಂತಹ ಪರಿಸ್ಥಿತಿಯಲ್ಲಿ ಜಾಹಿರಾತು ಫೀಡವನ್ನು ನಂಬಿ ಪತ್ರಿಕೆಯನ್ನಷ್ಟೇ ಪ್ರಚಾರ ಮಾಧ್ಯಮವಾಗಿ ಬಳಸಿಕೊಳ್ಳುತ್ತಾರೆ. ಜೀವನವೆಂದರೆ ಇಷ್ಟೇನೆಂದು ಇಂಗ್ಲಿಷ್ ದೈನಿಕದಲ್ಲಿ ಜಾಹಿರಾತು ಫೀಡವರೆ, ಅದು ಹಳ್ಳಿಯ ರಾನೇ ಗೌಡನಿಗೆ ಹೇಗೆ ತಿಳಿಯಬೇಕು. ಪ್ರಗತಿಪಥದಲ್ಲಿ ಮುಂದುವರಿ

(ಅರನೇ ಪುಟ ನೋಡಿ)

ಸುವ್ಯವಸ್ಥಿತ ರೀತಿಯಲ್ಲಿ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

100 ಕಾಪಿಗಳಿಂದ ಹಬ್ಬುವ "ವಿಜಯಾ ಬ್ಯಾಂಕ್"ನ್ನು

ಸಂಪರ್ಕ ಬೆಳೆಸಿರಿ.

ರೇವಜಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಂದಿನ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—೩.

Phons— 5711, 5712, 5713 } 3 Lines.

ಈಗಿನ ವಿದ್ಯಾಪ್ರಪಂಚ

ಬರೆದವರು : ಶ್ರೀ ಎಂ. ರಂಗರಾವ್

ಈಗಿನ ವಿದ್ಯಾಪ್ರಪಂಚದಲ್ಲಿ ಸಾಗುವ ಶಿಕ್ಷಣ ಪದ್ಧತಿ ಹಿಂದಿನದಕ್ಕಿಂತಲೂ ಎಷ್ಟೋ ಪಾಟು ಹೆಚ್ಚಿನ ಪ್ರಕಾಶದಿಂದ ಬೆಳಗುತ್ತಿರುವುದೆಂದು ಧಾರಾಳವಾಗಿ ಹೇಳಬಹುದು. ಹಿಂದಿನವರು ಮುಖ್ಯವಾಗಿ ಒಂದಿಬರಿಹ ವೇದಾಧ್ಯಯನಗಳಲ್ಲೇ ಕೂಡಮಂಡೂಕವಾಗಿದ್ದರು. ಈದ ಹಾಗಲ್ಲ. ಜ್ಞಾನಪ್ರಸಾರದ ಸಾಂಖ್ಯಗಳು ಹೆಚ್ಚಿವೆ. ಜ್ಞಾನಸಿಪಾಸುಗಳೂ ಹೆಚ್ಚಿದ್ದಾರೆ. ಚಂದ್ರಮಂಡಲದ ವರೆಗೆ ಸಾಗುವ ಹೊಸ ಪ್ರಕಾಶವು ನಮ್ಮಂದುವರಿದಿದೆ. ಪ್ರತಿಯೊಂದು ಅಂಗದಲ್ಲಿ ವಿಜ್ಞಾನದೃಷ್ಟಿ ಇರುವುದರಿಂದ ಧಾರಾಳವಾಗಿ ಶುಭಶುಭ್ರವಾದ ಭವಿಷ್ಯತ್ಸನ್ನು ಕುರಿತು ನಿರೀಕ್ಷೆ ಮಾಡಬಹುದು.

ಇವರ ಮಧ್ಯದಲ್ಲಿ ಪ್ರಸ್ತುತ ಏನಾಗಿದೆ ಎಂಬುದನ್ನೂ ಸ್ವಲ್ಪ ನೋಡುವುದಾದರೆ, ಏನಾಗಿದೆ? ವಿದ್ಯಾರ್ಥಿಗಳು ಹೀಗಿದ್ದಾರೆ? ಶಿಕ್ಷಣ ಪದ್ಧತಿ ಹೇಗಿದೆ? ಶಾಲೆ ಕಾಲೇಜು ವಿದ್ಯಾನಿಲಯಗಳಲ್ಲಿ ಹೇಗೆ ಕೆಲಸ ಮಾಡುತ್ತಿವೆ? ಈ ಪ್ರಶ್ನೆಗಳಿಗೆ ನೆರೆಹೊರೆಯವರಿಂದ, ಕವಿಗೆ ಬೀಳುವ ಮಾತುಗಳು ಹೀಗೆ. "ಎಂಥದು ಬಿಡ್ರೀ, ವಿದ್ಯಾರ್ಜನೆಯೂ ಇಲ್ಲ, ವಿದ್ಯಾದಾನವೂ ಇಲ್ಲ. ಶಿಕ್ಷಣವೆಂಬುದೂ ಒಂದು ವ್ಯಾಪಾರ; ಬಿಜಿನೆಸ್— ಎಲ್ಲವೂ ವ್ಯಾಪಾರವ ಟೈಕೈಲೇದು ಬೀದಿಗೊಂದು ಅಂಗಡಿಯ ಹಾಗೆ ಎಲ್ಲಿ ನೋಡಿದರೂ ವಿದ್ಯೆಯನ್ನು ಮಾರುವ ಅಂಗಡಿಗಳೇ. ಗುರುಗಳು ವ್ಯಾಪಾರ ಮಾಡುವ ವರ ಹಾಗೆ. ವಿದ್ಯಾರ್ಥಿಗಳು ಕೊಳ್ಳಲು ಬಂದ ಗಿರಾಕಿಗಳು. ವಿದ್ಯೆಯ ಮರ್ಯಾದೆ ಎಲ್ಲಿದೆ ಈಗ? ವಿದ್ಯಾದಾನ, ಗುರುದಕ್ಷಿಣೆ, ಯಃಧಾಶಕ್ತಿ ಮಂತ್ರಾದ ಮಾತುಗಳು ಹಳೆಯ ಕಥೆಗಳ ಮಾತಾಯಿತು. ಉದ್ಯೋಗಕ್ಕಾಗಿ ಕಲಿಯಬೇಕಾಗಿದೆ. ಅದರಲ್ಲಿ ಪಾಸಾಗದವನಿಗೆ ಅಕ್ಷಹತ್ಯೇ ಗತಿ...."

ಇಂತಹ ಮನೋಭಾವವು ವಿದ್ಯಾರ್ಥಿಗಳಲ್ಲಿಯೂ ಹೆತ್ತವರಲ್ಲಿಯೂ ಬೆಳೆದಿರುವಾಗ ಸ್ವಾವಲಂಬನದ ಧೈರ್ಯ ಯಾವ ನೆಲ್ಲಿಗೆ?

ಕಲಿಯಲಾಗಲಿಲ್ಲವೆ? ಪಾಸಾಗಲಿಲ್ಲವೇ? ಮುಗಿಯಿತು ಅವನ್ಕೈ.ಗೋವಿಂದಾ!

ಇಂಥಾ ಭಯಾಪಿದ್ದವರು ಎಷ್ಟು ಶ್ರದ್ಧೆಯಿಂದ ಕಲಿಯಬೇಕಿತ್ತು? ಅದೂ ಇಲ್ಲ. ಕಲಿಯುವವರಿಗೂ ಇಲ್ಲ, ಕಲಿಸುವವರಿಗೂ ಇಲ್ಲ. ಎಲ್ಲೆಲ್ಲೋ ವಿಷಯ ಕದಲಿಹೋಗುವ ಅವಕಾಶಗಳು. ರಾಜಕೀಯ ಅಂದೋಲನಗಳು, ಆದೇಶಗಳು, ಘೋಷಣೆಗಳ, ಪಕ್ಷ ಬಲವಾಗಿ ಮನಸ್ಸು ಚೆದರಿಸುವಂತಹ ಸಿನಿಮಾಗಳು, ವಾಸಿ ತೀರುವಿದಲ್ಲೆಲ್ಲಾ ಸಿನಿಮಾಗಳು. ಇತ್ತಲಿಕ ಪಾಠ್ಯೇ ಶಿಕ್ಷಣ.

ಪರೀಕ್ಷೆ ಬಂದಾಗಲೇ ಗಾಬರಿ, ಅಡ್ಡದಾರಿ, ನಕಲು, ಪುರೆವೋಸ. ಈ ತೆರುಗಣಿಯ ಶಿಕ್ಷಣ ಕ್ರಮದಲ್ಲಿ ತೆರುಗಿಕೊಂಡಿದೆ ಈಗಿನ ವಿದ್ಯಾಪ್ರಪಂಚವೆಂದರೆ ಅತಿಶಯೋಕ್ತಿಯೆಂದು ತೋರುತ್ತದೆಯೇ?

ಮನುಷ್ಯನಾಗಿ ಹುಟ್ಟಿದವನಿಗೆ ಅವನು ವಿದ್ಯೆ ಕಲಿಯಲಿ ಬಿಡಲಿ, ಸ್ವಾವಲಂಬನೆಯ ಅತ್ಯವಿಶ್ವಾಸವು ಬೆಳೆದುಕೊಂಡು ಬರಲೇಬೇಕು. ಅವನ ಶಿಕ್ಷಣವು ಅದರ ಆಧಾರದ ಮೇಲೆಯೇ ಸಾಗಿಕೊಂಡು ಹೋಗಬೇಕು. ಹಿಂದೆ ಹಾಗಿತ್ತೆಂದು ಅನೇಕ ಉದಾಹರಣೆಗಳಿಂದ ತಿಳಿಯಬಹುದು. ವಿದ್ಯೆಯಲ್ಲಿ ಪೂಜ್ಯಭಾವವೂ ಶಿಕ್ಷಕರಲ್ಲಿ ಗುರುಭಕ್ತಿಯೂ, ಸಮಾಜದಲ್ಲಿ ಅವರಿಗೆ ಗೌರವವೂ, ವಿದ್ಯಾರ್ಥಿಗಳಲ್ಲಿ ಭಕ್ತಿಯೂ ವಿನಯವೂ ಎಲ್ಲಾ ಇದ್ದುವು. "ವಿದ್ಯೆಗೆ ವಿನಯವೇ ಭೂಷಣ" ಎಂಬುದು ಪ್ರಸಿದ್ಧ ವಾಕ್ಯ. ವಿದ್ಯಾದಾನವೆಂದೇ ಹೇಳುತಿದ್ದರು. ಗುರುದಕ್ಷಿಣೆ ಯಃಧಾಶಕ್ತಿ ಕೊಡುಗಿತ್ತು. ಈ ಬಗೆಯ ಗೌರವ ಮರ್ಯಾದೆಯು ತಳೆಹದಿನು ಮೇಲೆಯೇ ಹೆಚ್ಚಿನ ಬದಲಾವಣೆಗಳೂ, ವಿಜ್ಞಾನ ವಿದ್ಯೆಗಳೂ ಬರಲಿದ್ದರೆ ಒಳ್ಳೆಯದಿತ್ತು. ಕಾಲ ಬದಲಾದಂತೆ ವಿದ್ಯೆಗಳಲ್ಲಿ ವಿಶ್ವತವುಬರಬೇಕಿತ್ತೇ ಹೊರತು ಮೂಲ ತಳಪಾಯಗಳನ್ನೇ ಕೆತ್ತಿ ನೆಯುವುದಲ್ಲ ವೆಂದರೆ ವಿಸ್ಮೆಯನ್ನು ಕಲಿಸುವ ವಿಧಾನಗಳೂ ಸಾಲಳ್ಳಗಳೂ ಹೊಸತೇ ಹೊರತು ವಿದ್ಯೆಕಲಿಯುವುದು ಹಳೆಯ ಸಂಪತಿಯೇ. ಕಾಲಕ್ಕೆ ತಕ್ಕ ಹಾಗೆ ಮಾನವರ ದೃಷ್ಟಿ ದೂರವಾಯಿತು. ವಿಜ್ಞಾನವು ಮುಂದುವರಿಯಿತು. ಹೀಗೆ ಮುಂದುವರಿಯುತ್ತಿರುವ ಆಧುನಿಕ ಜಗತ್ತು ಚಲಾವಣೆಗೆ ಬಂದಿದೆ, ಇದೆಲ್ಲ ಸರಿಯೆ.

ಆದರೆ ಮುಖ್ಯವಾಗಿ ಇರಬೇಕಾದ ಸ್ವಾವಲಂಬನೆಯ ಅತ್ಯವಿಶ್ವಾಸವೀಗ ಯಾರಿಗೂ ಇಲ್ಲ.

ವಿದ್ಯೆಯ ರಂಗದೊಳಗೆ ರಾಜಕೀಯ ರಂಗವು ತಲೆಹಾಕಿ ತನ್ನ ಸಂಪೂರ್ಣ ದೇಹವನ್ನೂ ಅದರೊಳಗೆ ತೂರಿಸಿ ನಿರ್ಭೀತಿಯಿಂದ ಆಲೆದಾಡಲು ತೊಡಗಿ ವಿದ್ಯಾರ್ಥಿಗಳ ಗಲಭೆಗಳಿಂದ ರಾಜ್ಯಭಾವವೂ ಪಡಪಡ ನಡುಗುವಂತಾಗಿದೆ. ಶಿಕ್ಷಕರು ತಮ್ಮ ಗುರುತನವನ್ನು ಹೇಳಿ ಹೇಳಿ ಉಳಿಸಿಕೊಳ್ಳಬೇಕಾಗಿದೆ. ವಿದ್ಯಾರ್ಥಿಗಳದೇ ಹೆದರಿಕೆ. ತಪ್ಪಿದರೆ ಗುರುಗಳ ಅಧಿಕಾರಿಗಳು ವಿದ್ಯಾರಂಗದಲ್ಲಿ ಹಣದ ಕೈವಾಡ ತುಂಬ ನಡೆಯಲು ತೊಡಗಿ ಇತರ ವ್ಯಾಪಾರ ವಸ್ತುಗಳಿಗೂ ಅವುಗಳಿಗೂ ವ್ಯತ್ಯಾಸವಿಲ್ಲದೇ ಎನ್ನಿಸುತ್ತದೆ. ಇತರ ವ್ಯಾಪಾರ ವಸ್ತುಗಳಂತೆ ಅವುಗಳಿಗೂ ಪ್ರಚಾರ. ಎಲ್ಲಿ ನೋಡಿದರೂ ಟೀಟೋರಿಯಲ್ಲು ಗಳು.

ಈ ಪ್ರಚಾರಗಳ ಫಲವೇನೆಂದರೆ, ವಿದ್ಯೆಕಲಿತು ಪಾಸಾದರೇನೇ ಬದುಕಲು ಸಾಧ್ಯ. ಇಲ್ಲದಿದ್ದರೆ ಬೇಡಿ ತಿನ್ನಲಿಕ್ಕೂ ಸಾಧ್ಯವಿಲ್ಲ. ಬದುಕು ವ್ಯರ್ಥ, ಸಾವೇ ಗತಿ— ಎಂಬ ದಟ್ಟ ಮನೋಭಾವ ಹರಡಿದೆ. ಆಂತಲೇ ಬಲವಂತದ ಪಾಸುಗಳು, ಹೊಣದ ಬಲದ ಪಾಸುಗಳು. ಅವೆರಡೂ ಸಾಧ್ಯವಿಲ್ಲದ ಬಡಪಾಯಿ ಹೈಲರುಗಳು ಆತ್ಮಹತ್ಯೆ ಮಾಡಿಕೊಳ್ಳುವ ಭಯಂಕರ! ಅಥವಾ ಮನೆದಬ್ಬು ಪತ್ರ ಇಲ್ಲದೆ ಓಡಿಹೋಗ ವುದು.

ಕಲಿಕೆಯು ವಟ್ಟಿಗಳೂ ಅಷ್ಟೇ. ಪುಸ್ತಕಗಳಲ್ಲಿಯೂ ವ್ಯಾಪಾರೀ ದೃಷ್ಟಿ. ಧಾರೀ ಧಾರೀ ಪುಸ್ತಕಗಳ ಹೊರೆ. ಗೈಡುಗಳ ಪ್ರಭೆ. ಇದು ಒಳ್ಳೆಯದು, ಅದು ಒಳ್ಳೆಯದು ; ಅವಕ್ಕಿಂತ ಮತ್ತೊಂದು ಒಳ್ಳೆಯದು— ಎಂಬಂತ ಗೈಡುಗಳು.

ಹಿಂದೆ ಅಚ್ಚಿನ ಯಂತ್ರಗಳು ಕಡಮೆ ಇದ್ದವು. ಪುಸ್ತಕಗಳ ಸ್ವಭಾವವು ಈಗಿನ ಸ್ಥಿರವಲ್ಲ. ಅದಕ್ಕೂ ಹಿಂದಿನ ಕಾಲದಲ್ಲಿ ಅಚ್ಚಿನ ಯಂತ್ರಗಳಿಲ್ಲದಿದ್ದಾಗ. ಪುಸ್ತಕಗಳೆಂದರೆ ಪೂಜ್ಯ ಭಾವವಿತ್ತು. "ಇದನ್ನು ಹೇಳಿದವರಿಗೆ ಕೇಳಿದವರಿಗೆ ಬರೆದವರಿಗೆ ಓದಿದವರಿಗೆ ಇಂತಿಂಥಾ ಪಣ್ಯಗಳ .... ಎಂಬ ಫಲಶ್ರುತಿ ಪ್ರತಿ ಪುಸ್ತಕದಲ್ಲಿಯೂ ಇರುತ್ತಿತ್ತು. ಪುಸ್ತಕವನ್ನು ಕಾಲಿನಿಂದ ಮುಟ್ಟಿದರೆ ಮಹಾ ಪಾಪ. ತಿಳಿಯದೆ ತಾಗಿದರೆ ಕಣ್ಣಿಗೊತ್ತಿಕೊಳ್ಳುವರು.

ಈಗ ಅತಿಯಾಗಿ ಸುಲಭವಾಗಿ ಪುಸ್ತಕಗಳೂ ಅಚ್ಚುಗಳೂ ಒಂದು ಬೆಲೆಯೂ, ಲಾಭಾಲಾಭಗಳ ಪ್ರಭೆಯೂ ಇಂದು ಒಳತ ಗಳೊಂದಿಗೇ ಪೂಜ್ಯ ಭಾವವೂ ಗೌರವವೂ ಹೊರಟುಹೋದವು. ಕಡುಕೂ ತಲೆದೋಂದೆ ಹೊಸ ಪುಸ್ತಕಗಳು ಎಂಟು ದಿಕ್ಕಿನಿಂದಲೂ ಕಸಕ್ಕೆ ಸಮವಾಗಿ ಹೊಗುತ್ತಿವೆ. ಎಷ್ಟರ ಮಟ್ಟಿಗೆ ಹೋಯಿತೆಂದರೆ, ದೇವತೆಗಳ ಚಿತ್ರಪಟಗಳು ಕೆಲೆಂಡರುಗಳಲ್ಲಿ ಬಿದ್ದು, ರಾತಿ ರಾತಿಯೂ ಬೀಡಿಯ ಬದಿಯ ಕೂಳೆ ನೆಲದಲ್ಲಿ ಧೂಳಿನ ಬದಿಯಲ್ಲಿ ಮೂರಾಟವಾಗುವಷ್ಟರ ಮಟ್ಟಿಗೂ.

ಈ ಬಗೆಯ ಪ್ರಭೆಯಿಂದ, ಲಾಭಾಲಾಭಗಳ ಪೈಪೋಟಿಯಿಂದ, ಹೊಣದ ಆಡಚಣೆಯಲ್ಲಿರುವ ಹೆತ್ತವರು ತಮ್ಮ ಮಕ್ಕಳ ಭವಿಷ್ಯವನ್ನು ನೆನೆಯುತ್ತಾ ಹಣ್ಣಾಗಿ ಕೊಳೆಯುತ್ತಿರಬೇಕು. ಊಟವಾಗಲೂ ಹೆದರುತ್ತಾ ಜ್ವರಗಡ್ಡಿ ನಡುಗ್ತಿರಬೇಕು. ಅವನು ಕೇಳಿದ್ದು ಮರು ಮಾತಿಲ್ಲದೆ ಕೊಡಬೇಕು. ಇಲ್ಲದಿದ್ದರೆ ಓಡಿಹೋಗ ತ್ತಾನೇನೋ! ಕಾಲೇಜು ಪ್ರವೇಶದ ಕೂಡಲೇ ಮಗನ ರೀತಿನೀತಿಗಳೇ ಬದಲಾಯುತ್ತವೆ. ತಾನೇ ಒಬ್ಬ ಹೀರೋ ಎಂದವನ ಭಾವನೆ, ಯಾವನೋ ಒಬ್ಬ ಸಿನಿಮಾ ನಾಯಕನೇ ಅವನಿಗೆ ಆದರ್ಶ. ತಲೆ ಡ್ರೆಸ್ಸಿನಿಂದ, ಆದರೆ ಟೈಟ್ಪನಿಂದ ತನ್ನನ್ನಲ್ಲ—ಆತ ಹಿಂಡುವುದು, ಹೆತ್ತವರನ್ನು. ಪಾಪ, ಅವರೇನು ಮಾಡಿಯಾರು? ತಮ್ಮ ಮಗ ಒಳ್ಳೆಯವನೇ. ಅವನ ಸಹಪಾಠಿಗಳಂತೆ ಅವನೂ ಇಲ್ಲವೆಂದರೆ ಉಳಿದವರೆಲ್ಲ ಅವನನ್ನು ಸಾಲಿಟಿಗೆ ತೆಗೆದುಕೊಳ್ಳುತ್ತಿರಲಿಲ್ಲ. ಆದ

In the Court of the Munsiff of Buntwal, S. K.

S. C. No. 31/68

Between:

Subraya Bhat . Plaintiff

and

Appi Hengsu (since dead) and others ... Defendants

NOTICE

D2 Koti Moolya.
D3 Manjanna Moolya
D4 Aithappa Moolya
D5 Subba Moolya
D6 Sanku Moolya
D7 Ponnakku, w/o Mahalinga Moolya

Defendants 2 to 6 are residing at Moolya in Alike village of Buntwal Taluk.

7th defendant is residing at Kandige of Enmakaje village, Post Perla.

Please take notice that the above suit stands posted to 6—9—1969 for your appearance and you are hereby directed to appear before the said court on the said day at 11 A. M. in person or through Advocate, failing which the suit will proceed in your absence

(By order of court)

M. N. Shanker Bhat,
Advocate for plaintiff.

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore — 27.**

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ದರಿಂದ ಇದೊಂದು ಸಾಮೂಹಿಕ ಸಮಸ್ಯೆಯಾಗಿದೆ.

ನಿಜವಾಗಿ ನೋಡಿದರೆ ಮಾನವರೆಲ್ಲರೂ ಒಂದೇ ವಿಧ ಬುದ್ಧಿ ಶಕ್ತಿಯುಳ್ಳವರಲ್ಲ. ಒಬ್ಬೊಬ್ಬರು ಒಂದೊಂದರಲ್ಲಿ ಚುರುಕಾಗಿರುತ್ತಾರೆ. ಆದರೆ ಈ ನಂಬುಗೆ ಈಗ ಸಡಿಲಾಗಿದೆ. ಮೈ ಬಗ್ಗಿಸಿ ಕೆಲಸ ಮಾಡುವ ಹಮ್ಮಸ್ಸು ಈಗ ಯಾರಿಗೂ ಇಲ್ಲ. ಟೈಟು ಶೈಸ್ಸಿನ ಬಿಗಿ ಬೇರೆ. ಅಂಥವರ ಮೈ ಹೇಗೆ ಬಗ್ಗೀತು? ಸ್ವಾವಲಂಬನೆಯ ನಂಬುಗೆ ಹೇಗೆ ಬಲವಾದೀತು? ನಂಬು ಮಗ ಹೇಗಾದರೂ ಇದ ಕಿಮೂಮ ಎಂಬ ನಂಬುಗೆಗೆ ಈಗ ತಾಣ ಕಾಣುವುದಿಲ್ಲ.

ಹೋದಲಿ, ಕಲಿತು ಪಾಸಾದವರಿಗಾದರೂ ನೆಮ್ಮದಿಯುಂಟೆ?— ಪಾಸಾದೆನೆಂಬ ಸ್ಪರ್ಧಿಸಿ ನೆವ್ಯದಿಯು ಹೊರತು? ಆ ಮೇಲೆ ಉದ್ಯೋಗದ ಬೇಟೆ ಎಷ್ಟೇ ಹೆಚ್ಚು ಕಲಿತವರಿಗೂ ಅದೊಂದು ಗಂಡಾಂತರದ ಸಂಧಿ. ಅದಕ್ಕೆ ಎಷ್ಟೆಲ್ಲ ವಕೀಲಿಗಳು! ಲಂಚರುಷುವತ್ತುಗಳ! ಅಲೆದಾಟಗಳು.

ಈ ಬಗೆಯ ಭೀಕರವಹ ಪರಿಸ್ಥಿತಿಯನ್ನು ಹೋಗಲಾಡಿಸಲು ಯಾವ ಪುಣ್ಯಾತ್ಮರು ಹೋಗುವರೋ? ರಾಜಕೀಯ ಧುರೀಣರು ವಿದ್ಯಾರ್ಥಿಗಳ ಗೋಜಿಗೆ ಹೋಗದಂತೆ, ವಿದ್ಯಾರ್ಥಿಗಳು ಅನೇಕ ಕೈಳಗಾಗದಂತೆ, ಶಿಕ್ಷಣಾಲಯಗಳ ಗೌರವ ಉಳಿಯುವಂತೆ ಕಾಲೇಜುಗಳ ಅಕ್ಕಪಕ್ಕಗಳಲ್ಲಿಯೇ ಸಿನಿಮಾ ಮಂದಿರಗಳಿಲ್ಲದಂತೆ ಮಾಡಲು ಈ ಕಾಲದಲ್ಲಿ ಸಾಧ್ಯವಾದೀತೆ? ಎಲ್ಲವೂ ದುಡ್ಡು ಬರುವ ಬಾಬತ್ತುಗಳೇ. ಬೆಟ್ಟರೆ ಸರಕಾರಕ್ಕೆ ನಷ್ಟ. ಈಗ ಸರಕಾರಗಳೂ ಕೂಡಿಕೆ ಜೂಜು ಗಳನ್ನು ತೆರೆಯುವ, ಲಾಟರಿಗಳನ್ನು ನಡೆಯಿಸಿ ಒಟ್ಟಾರೆ ಲಾಭ ದೃಷ್ಟಿಯಿಂದಲೇ ಕೆಲಸ ಮಾಡಲಾರಂಭಿಸಿವೆ. ಸರಕಾರಕ್ಕೂ ಹಣದ ಹಸಿವೆ. ಪ್ರಜೆಗಳಿಗೂ ಅದೇನೇ.

ಬಹುಶಃ ರಾಜಕೀಯದ ಮೂಲದಲ್ಲೇ ಬದಲಾವಣೆ ಆಗಬೇಕಾದೀತು. "ರಾಜಾ ಕಾಲಸ್ಯ ಕಾರಣಂ" ಎನ್ನುತ್ತಾರಲ್ಲವೇ? ನವ್ಯ ಪ್ರಜಾರಾಜ್ಯದ ರಾಜಕೀಯ ಶಾಸನಗಳೆಲ್ಲ ಹೊಸ್ತಾಗಿಯೂ ಸರಿಹೊಸಗಿಯೂ ಇದೆ ಎಂದು ನಂಬುವುದಾದರೆ, ಅದನ್ನು ಅಮಲುಗೊಳಿಸುವ ಅಧಿಕಾರಿಗಳು ಅಶಕ್ತರಾಗಿದ್ದಾರೆಂದು ತಾವೇ ಹೇಳಬೇಕು. ಅದೆಲ್ಲ ಸರಿಹೊಂದಬೇಕಾದರೆ ಇನ್ನಿಷ್ಟು ಕಾಲ ಹೋಗಬೇಕು. ಕೊಡ ತಂಬಬೇಕು. ಆ ವೇಳೆಗೆ ಒಳ್ಳೆಯ ಬದಲಾವಣೆಗೆ ಎಲ್ಲವೂ ತಿರುಗುವುದೆಂದು ನಂಬಿಕೆಯಿಂದ ಧೈರ್ಯವಾಗಿರುವುದೇ ಒಳ್ಳೆದ.

ರಾಷ್ಟ್ರಪತಿ ಶ್ರೀ ವಿ. ವಿ. ಗಿರಿ

ಶ್ರೀ ವರಾಹ ವೆಂಕಟ ಗಿರಿಯವರು ತಾತ್ಕಾಲಿಕ ರಾಷ್ಟ್ರಪತಿಯೆನಿಸಿದ್ದು, ಕೇವಲ ಆಕಸ್ಮಿಕ. ಆದರೆ, ತಾತ್ಕಾಲಿಕ ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿ ರಾಷ್ಟ್ರಪತಿ ಚುನಾವಣೆಯು ಕಣಕ್ಕಿಳಿದದ್ದು ನಿರೀಕ್ಷಿತ ಆಗಿತ್ತು. ಪ್ರಧಾನಿ ಇಂದಿರಾ ಗಾಂಧಿಯವರು ತನ್ನ ಹೃದ್ಗತವನ್ನು ಮರೆಮಾಚಿ ಸಿಂಡಿಕೇಟಿನ ವಿರುದ್ಧ ಶಕ್ತಿಯೊಳಗೊಂದು ಶಕ್ತ ಕಟ್ಟಲು ನಿರ್ಧರಿಸಿ ಕೊನೆಯ ವರೆಗೂ ಅದಕ್ಕೆ ಅಂಟಿ ಕುಳಿತದ್ದು ತೀವ್ರ ಆಸಕ್ತಿಕ; ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ಶ್ರೀ ವೀಲಂ ಸಂಜೀವ ರೆಡ್ಡಿಯವರು ಸೋಲುಣ್ಣಬೇಕಾಗಿ ಬಂದುದು ನಿರೀಕ್ಷಿತ ಆಕಸ್ಮಿಕ. ಶ್ರೀ ಗಿರಿಯವರು ಕಾಂಗ್ರೆಸ್ ಪಕ್ಷದ ಆದೇಶವನ್ನು ವಿರೋಧಿಸಿದವರ ಮತಗಳಿಂದಲೇ ಬಹು ಮತಗಳಿಸುವುದು ಸಾಧ್ಯವಾದುದನ್ನು ಗಮನಿಸಿದರೆ, ವೀಲಂ ಸೋಲಲಿಲ್ಲ, ಇಂದಿರಾ ಗಾಂಧಿಯವರ ಹಿರಿಮೆಯ ಗೆದ್ದಿತೆಂದು ಹೇಳಬೇಕು.

ಗಿರಿಯವರ ಬಾಲ್ಯ ಮತ್ತು ವಿದ್ಯಾಭ್ಯಾಸ

ಗಿರಿಯವರು ಒರಿಸ್ಸಾ ರಾಜ್ಯದ ಬರಹಂಪುರದಲ್ಲಿ ನಮ್ಮ ನಾಲ್ಕನೆಯ ಚುನಾಯಿತ ರಾಷ್ಟ್ರಪತಿ ಶ್ರೀ ಗಿರಿಯವರ ಜನ್ಮ. ಕೋಚಾ ಕಾಲೇಜಿನಲ್ಲಿ ಶಿಕ್ಷಣ. ಬಿ.ಎ.-ಎಲ್-ಲಾ ಪದವೀಧರರಾಗುವ ಹವಣಿಕೆ. ಐರ್ಲೆಂಡಿಗೆ ಪ್ರಯಾಣ. ಅಲ್ಲಿಯೇ ಇವರ ಹೋರಾಟಕ್ಕೆ ಪ್ರಾಂಭ. ಆಯರ್ಲೆಂಡ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರ ಪ್ರವೇಶ, ಪಯಣಾವು, ಬ್ರಿಟನ್ನಿನಿಂದಲೇ ಗಡಿಪಾರು, ಈ ಇಪ್ಪತ್ತೈದರ ಕಿರಿ ಡಿವಿಸಿಯು ತರಣ.

ಗಾಂಧೀಜಿಯವರ ಸತ್ಯಾಗ್ರಹ—ಗಿರಿಯವರ ಸಕ್ರಿಯ ಕಾರ್ಯಕ್ರಮ. ವಂಡೆ, ಕಾರ್ಮಿಕರಕ್ಷಣ ಒಲವು, ಅವರ ಒಳತಿನ ಫಲವು, ಅಖಿಲ ಭಾರತ ಟ್ರೇಡ್ ಯೂನಿಯನ್ ಸ್ಥಾಪನೆ ಯಲ್ಲಿ ಮಹತ್ವದ ಪಾತ್ರ. ಇವರ ಅಧ್ಯಕ್ಷತೆಯ ಗೌರವ. ಅಖಿಲಭಾರತ ರೈಲ್ವೇ ನೌಕರರ ಫೆಡರೇಶನ್‌ಗೆ ನಾಂದಿ. ಇದರ ಅಧ್ಯಕ್ಷತೆ— ಕಾರ್ಯದರ್ಶಿತನ— ಪ್ರತಿಯೊಂದೂ ಏಳೇಳು ವರ್ಷ!

ಅಂತರ್ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ೧೯೩೭ರಲ್ಲಿ ಜಿನೇವಾದಲ್ಲಿ— ಇದರಲ್ಲಿ ಶ್ರೀ ಗಿರಿ 'ಇಂಟರ್'ನ ಪ್ರತಿನಿಧಿ. ೧೯೫೧ರಲ್ಲಿ ಎರಡನೆಯ ಚಿಕ್ಕಗೋಸ್ಕಿ ಲಂಡನ್ನಿನಲ್ಲಿ— ಶ್ರೀ ಗಿರಿ ಇದರಲ್ಲಿ ಕಾರ್ಮಿಕ ಪ್ರತಿನಿಧಿ.

೧೯೩೭ರಲ್ಲಿ ರಾಜ್ಯಗಳಲ್ಲಿ ಜವಹರ್ ಸರಕಾರ ರಚನೆ— ಶ್ರೀ ಗಿರಿ ಮದ್ರಾಸಿನ ಕಾರ್ಮಿಕ ಮಂತ್ರಿಯಾಗಿ ಪ್ರಕಾಶಂ ಮಂತ್ರಿಮಂಡಲದಲ್ಲೂ ಕಾರ್ಮಿಕ ಮಂತ್ರಿ. ೧೯೫೦ರಿಂದ ೫೨ರ ವರೆಗೆ ಶ್ರೀ ಲಂಕೆಯಲ್ಲಿ ಭಾರತದ ಹೈಕಮಿಷನರ್. ೧೯೫೨ರಿಂದ ೫೪ರ ವರೆಗೆ ಕೇಂದ್ರ ಕಾರ್ಮಿಕ ಸಚಿವಸ್ಥ. ಬ್ಯಾಂಕ್ ನೌಕರರ ವೇತನ ಸಂಬಂಧಿ ತೀರ್ಪಿಗೆ ತಿದ್ದುಪಡಿ ಮಾಡುವ ಸರಕಾರದ ಇರಾದೆ —ಶ್ರೀ ಗಿರಿ ಪ್ರತಿರೋಧ— ರಾಜೀನಾಮೆ. ೧೯೫೭ರಿಂದ ೬೦ರ ವರೆಗೆ ಉತ್ತರ ಪ್ರದೇಶದ, ೧೯೬೧ರಿಂದ ೬೫ರ ವರೆಗೆ, ಕೇರಳದ, ೬೫ರಿಂದ ೬೭ರ ವರೆಗೆ ಕರ್ನಾಟಕದ ರಾಜ್ಯಪಾಲ ಗಿರಿ.

೧೯೬೭ರಲ್ಲಿ ಉಪರಾಷ್ಟ್ರಪತಿ. ೧೯೬೯ರ ಮೇ ತಿಂಗಳಲ್ಲಿ ಹಂಗಾಮಿ ರಾಷ್ಟ್ರಪತಿ. ಜುಲೈಯಲ್ಲಿ ರಾಜೀನಾಮೆ— ಒಂದು ತಿಂಗಳ ಬಳಿಕ ರಾಷ್ಟ್ರಪತಿ ಭವನಕ್ಕೆ ಮರುಪ್ರವೇಶ.

ಒಳ್ಳೆ ಗಡಿ ದಾಟಿದ ಶ್ರೀ ಗಿರಿಯವರು ವಯಸ್ಸಿನ ಏರಿಕೆಗೆ ಬೆದರುವುದಿಲ್ಲ. "ಕಾಂಗ್ರೆಸ್ ಪಕ್ಷ ಅಭ್ಯರ್ಥಿ ಆಯ್ಕೆಯಲ್ಲಿ ಅನ್ಯಾಯ ಮಾಡಿದೆ; (ಯಾರಿಗೆ?) ಅದ

ಸಿಂಡಿಕೇಟ್ ಬ್ಯಾಂಕ್

(ಸಂಪೂರ್ಣವಾಗಿ ಭಾರತ ಸರಕಾರದ ಒಡೆತನದಲ್ಲಿನ ಉದ್ಯಮ)

ಸಾಮಾಜಿಕ ಉದ್ದೇಶಗಳ ಸಾಧನೆಗೆ ಮುನ್ನಡೆಯಲು ಪ್ರತಿಜ್ಞೆ ಮಾಡುತ್ತಿದೆ.

ಈ ಅಂಕೆಸಂಖ್ಯೆಗಳೇ ಸಾರುತ್ತವೆ:

- ಸಿಂಡಿಕೇಟ್ ಬ್ಯಾಂಕಿನಲ್ಲಿರುವ 11,80,000ಕ್ಕೂ ಹೆಚ್ಚಿನ ಡಿಪಾಸಿಟ್ ಲೆಕ್ಕಗಳಲ್ಲಿ ಸೇ 90ಕ್ಕೂ ಹೆಚ್ಚು ಲೆಕ್ಕಗಳನ್ನು ರೂ. 1500 ಅಥವಾ ಅದಕ್ಕಿಂತ ಕಮ್ಮಿ ಮೊತ್ತದ ಡಿಪಾಸಿಟ್ ಇರುವ ಸಾಮಾನ್ಯ ಜನರು ಹೊಂದಿದ್ದಾರೆ
- ಸಿಂಡಿಕೇಟ್ ಬ್ಯಾಂಕಿನಲ್ಲಿ ಸಾಲ ಪಡೆದಿರುವ 2,23,264 ಲೆಕ್ಕಗಳಲ್ಲಿ ಸೇ 74ಕ್ಕಿಂತ ಹೆಚ್ಚು ಲೆಕ್ಕಗಳು ರೂ 1,000 ಅಥವಾ ಅದಕ್ಕಿಂತ ಕಡಿಮೆ ಸಾಲ ಪಡೆದಿರುವ ಸಾಮಾನ್ಯ ಜನರವಾಗಿವೆ

ಈ ಅಂಕೆಸಂಖ್ಯೆಗಳು ಪ್ರಾಯಶಃ ಭಾರತದಲ್ಲಿನ ಯಾವುದೇ ಬ್ಯಾಂಕಿನೊಡನೆ ಹೋಲಿಸುವುದಾದರೆ ಅತ್ಯಂತ ಪ್ರಗತಿಪರವಾದವು.

- ನಮ್ಮ 306 ಶಾಖೆಗಳಲ್ಲಿ

	ನಮ್ಮ ಬ್ಯಾಂಕ್	ವಾಣಿಜ್ಯ ಬ್ಯಾಂಕ್
5,000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಸ್ಥಳಗಳು	49	47
5,000ದಿಂದ 10,000ದ ವರೆಗಿನ ಜನಸಂಖ್ಯೆ ಇರುವ ಸ್ಥಳಗಳು	42	29
10,000ದಿಂದ 25,000ದ ವರೆಗಿನ ಜನಸಂಖ್ಯೆ ಇರುವ ಸ್ಥಳಗಳು	60	11
	151	87

(30-6-1969ರಲ್ಲಿದ್ದಂತೆ) ಮುಂಗಡ ನೀಡಿರುವ ಬಾಬುಗಳು	ನ್ಯಾಷನಲ್ ಕ್ರೆಡಿಟ್ ಕ್ಯಾಂಪೈನ್ ಗುರಿಗಳು	1968ರ ಜೂನ್ ಅಂತ್ಯಕ್ಕೆ ಮುಂಗಡ ನೀಡಿರುವ ಬಾಬುಗಳು	ಎಸ್ ಸಿ ಗುರಿಗಳಿಗಿಂತ ಹೆಚ್ಚುವರಿ	1969ಜೂನ್‌ಅಂತ್ಯದಲ್ಲಿದ್ದಂತೆ ಒಟ್ಟು ಮುಂಗಡಗಳು(31-12-69 ಕೋಟಿ ರೂಗಳು) ಒಟ್ಟು ಮೊತ್ತ	ಒಟ್ಟು ಮುಂಗಡಗಳಲ್ಲಿ ಸೇಕಡಾವಾರು ಪ್ರಮಾಣ
1. ವ್ಯವಸಾಯ	2 ಕೋಟಿ ರೂ	7 48 ಕೋಟಿ ರೂ	375%	9 04 ಕೋಟಿ ರೂ. (30,273 ಲೆಕ್ಕಗಳು)	5·0%
2. ಸಣ್ಣ ಪ್ರಮಾಣದ ಕೈಗಾರಿಕೆಗಳು	2 40 ಕೋಟಿ ರೂ	6 27 ಕೋಟಿ ರೂ	261%	13 25 ಕೋಟಿ ರೂಗಳು (1,802 ಲೆಕ್ಕಗಳು)	14·6 %
3. ಟ್ರಾನ್ಸ್‌ಪೋರ್ಟ್-ಟ್ರಕ್ಕುಗಳು, ಟ್ಯಾಕ್ಸಿಗಳು, ರಿಕ್ಷಾಗಳು	—	—	—	2 72 ಕೋಟಿ ರೂಗಳು (1 324 ಲೆಕ್ಕಗಳು)	3 %
4. ಚಿಲ್ಲರೆ ವ್ಯಾಪಾರ	—	—	—	6 11 ಕೋಟಿ ರೂಗಳು (22,822 ಲೆಕ್ಕಗಳು)	6·7 %

ಟಿ. ಎ. ಪೈ,
ಚೇರ್ಮನ್-ಕಸ್ಟೋಡಿಯನ್.

ನ್ನು ಸರಿಪಡಿಸಲು ತಾನು ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸಿದ್ದೇನೆ; ಮನಸ್ಸಾಕ್ಷಿಯಂತೆ ಮತ ನೀಡಿ' ಎಂದು ಚುನಾವಣಾ ಪ್ರಚಾರ ಮಾಡಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿರುವ ಭಾರತದಲ್ಲಿ ಕಾಂಗ್ರೆಸ್ ಪಕ್ಷವನ್ನೊಡೆಯುವಲ್ಲಿ ಇವರ ಪಾತ್ರವೂ ಇದೆಯೆಂದರೆ ತಪ್ಪಲ್ಲ.

ಶ್ರೀ ಗಿರಿ ಗೆದ್ದರು. ಇವರ ಗೆಲುವು ಯಾರ, ಯಾವ ನೀತಿಯ ಗೆಲ್ಲೇ ಇರಲಿ, ಈಗ ಅವರು ಭಾರತದ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿ. ೧೯೭೨ ಸಾರ್ವತ್ರಿಕ ಚುನಾವಣೆಗಳ ಕಾಲದಲ್ಲೂ ಇವರೇ ರಾಷ್ಟ್ರಪತಿ ಪದವಿರುವುದರಿಂದ ರಾಜ್ಯಕೇಯದಲ್ಲಿ ಮಹತ್ವದ ಬದಲಾವಣೆಗಳೂ ಇವರ ಕಾಲದಲ್ಲೇ ಸಾಧ್ಯ.

ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರನ್ನು ಅವರ ವಿಜಯೋತ್ಸಾಹಿ ಅಭಿನಂದಿಸುವುದೂ ಅವರಿಗೆ ಸರ್ವ ವಿಧದ ಸಹಕಾರ ನೀಡುವುದೂ ಪ್ರತಿಷ್ಠಾಗರಿಕರ ಧರ್ಮ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 80/69 in Sc. 12/66.

ಬಿ. ಎಸ್ಸೆಂ. ಮಹಮ್ಮದ್— ಅರ್ಜಿದಾರ

ಸೀತು ಹೆಂಗ್ಸು —ಎದ್ರಿ

ಮೂಡಿಗೆರೆ ತಾಲ್ಲೂ ತಾಲಗೋಡು ಗ್ರಾಮದ ಕ್ಲೋರುವ ಪೋಂಕ್ರಿ ನ್ಯಾಕನ ವಿಧವೆ ಸೀತು ಹೆಂಗ್ಸುವಿಗೆ—

ಪ್ರೊ. ಒರ್ಡರ್ ನೋಟೀಸು

ಮೇಲ್ಕಂಡ ಕೃಷಿಪರಿಹಯಲ್ಲಿ ಸ್ವೀಕಾರ್ತಿಯನ್ನೂ ನಿಮ್ಮ ಹಕ್ಕನ್ನೂ ಏಲಂ ಪಡಿಸುವರೆ ಜಪ್ತಿ ಮಾಡಿದೆ. ಸದ್ರಿ ಜಪ್ತಿಗೆ ಪ್ರಮುಖೇನಾದರೂ ಆಕ್ಷೇಪಣೆ ಇದ್ದಲ್ಲಿ ತಾ. 10-9-69 ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ನಿಮ್ಮಾ ಮಾಡಿ ಅಮಲ್ಜಾರಿಯನ್ನು ಮುಂದು ನಡಸಲಾಗುವುದೆಂದು ತಿಳಿದಿರಲಿ.

N. J. Kadamba
Advocate for Petitioner.

ಬೆಳ್ತಂಗಡಿ, 20.8.69.

ಕುಂದಾಪುರ ಲ್ಯಾಂಡ್ ಟ್ರಬ್ಯೂನಲ್ ಕೋರ್ಟಿನಲ್ಲಿ

R. A 1365/1968. I. A. 1.

ಅರ್ಜಿದಾರ— ವೆಂಕಟ್ರಮಣ ಹೊಬಳಿದಾರ

ಎದ್ರಿ— ರುಕ್ಕು ಕೆಡ್ತಿ, ಪೋತಿ ವಾರೀಸುದಾರರು

1. ನಾಗಯ್ಯ ಶೆಟ್ಟಿ 2. ಶಿವರಾಮ ಶೆಟ್ಟಿ 3. ನರಸಿಂಹ ಶೆಟ್ಟಿ—ಮೃತ ರುಕ್ಕು ಕಡ್ತೀರ ಮಕ್ಕಳು. 4. ಸೀತಾ ಶೆಟ್ಟಿ— ಬಚ್ಚೆ ಕಡ್ತೀರ ಮಗ.

ಕುಂದಾಪುರ ತಾಲ್ಲೂ ಹಡುನರಿ ಗ್ರಾಮದ ಬಬ್ಬಾಡಿ ಹಿಳ್ಳ್ಯ ಪೋಸ್ಟು ಹಡುನರಿ.

ಸದ್ರಿ 100ದ 4ನೇ ವರೀಗಿನ ಎದ್ರೀಗೆ ತಿಳಿಯಪಡ್ಸಿದ್ದು—

ಮೇಲಿನ ಅರ್ಜಿಯ ಎದ್ರಿರು ರುಕ್ಕು ಕೆಡ್ತಿ ಮೃತಪಟ್ಟಿದ್ರಿಂದ ನಮ್ಮನ್ನು ಮೃತರ ವಾರೀಸುದಾರರನ್ನಾಗಿ ಸೇರಿಸಿಕೊಳ್ಳಬೇಕಂತ ಪ್ರಾರ್ಥನೆ ಮಾಡಿದ I. A. 1ನೇ ಅರ್ಜಿ ತಾರೀಕು 20-8-1969ಕ್ಕೆ ಯಿತ್ತಿದೆ. ಆ ಕಾರಣ ನಿಮ್ಮ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

|| ಕೋರ್ಟಿನ ಹುಕ್ಕುಂ ಪ್ರಕಾರ ||

A. Balakrishna Shetty,
Advocate for Petr.

ಸೂಚ್ಯಂಕ: ಕುಂದಾಪುರ
ತಾ. 22-8-69

(ಮೂರನೇ ಪುಟದಿಂದ)

ಯುವ ನಾವು ನಮ್ಮ ಸಾಧನೆಗಳನ್ನು ಜನತೆಗೆ ಮನವರಿಕೆ ಮಾಡಿಕೊಡಬೇಕು; ಅವರ ಸದ್ಭಾವನೆಗಳನ್ನು ಗಳಿಸಬೇಕು. ತನ್ನ ಬಗ್ಗೆಯೂ ಆಡಳಿತೆಗಾರರು ದುಡಿಯುತ್ತಾರೆಂಬ ಭಾವನೆ ಮೂಡುವಂತಾಗಬೇಕು. ಅದಕ್ಕಾಗಿ ಚಿಕ್ಕ ಪತ್ರಿಕೆಗಳು ಬೆಳೆಯಬೇಕು. ಸಹಕಾರವೂ ವಾಣಿಜ್ಯ ಸಂಸ್ಥೆಗಳೂ ತಮ್ಮ ಜಾಹಿರಾತು ನೀತಿಯ ನೀತಿಯನ್ನು ಆ ಮೂಲಾಗ್ರ ಪುನರ್ಪರಿಶೀಲಿಸಬೇಕು. ಒಂದು ಬಾಹು ಬಡುಬಡಕೆಯಿಂದ ಏನೂ ಸಾಧ್ಯವಾಗದು.

"ನವಯುಗ"ವು ತನ್ನ ಧ್ಯೇಯ ಸಾಧನೆಯಲ್ಲಿ ಸಾಕಷ್ಟು ಸಫಲವಾಗಿದೆಯೆಂಬುದಕ್ಕೆ ಅದು ಇಷ್ಟು ವರ್ಷ ಕಾಲ ನಡೆದು ಬಂದಿರುವುದೇ ಸಾಕ್ಷಿ. ಸ್ವಾತಂತ್ರ್ಯಪ್ರಾಪ್ತಿಗೆ ಮೊದಲು ಅದು ವೇ ನಮ್ಮೆಲ್ಲರ ಗುರಿಯಾಗಿತ್ತು; ಅಖಂಡ ಸ್ವಾತಂತ್ರ್ಯ ರಕ್ಷಣೆ, ದೇಶ ಪುನರ್ನಿರ್ಮಾಣ ಮತ್ತು ರಾಷ್ಟ್ರೀಯ ಮನೋಭಾವನೆಯನ್ನು ನಾವು ಮೂಡಲೇಬೇಕಾಗಿದೆ. 'ನವಯುಗ'ವೂ ಜಾಗೃತಿ ಮೂಡಿಸುವಲ್ಲಿ ಹಿಂದೆ ಬಿದ್ದಿಲ್ಲ; ರಾಷ್ಟ್ರೀಯ ಪತ್ರಿಕೆ ಮೂಡಬಯಸುವಾದ ಕರ್ತವ್ಯಗಳನ್ನು ಅದು ಪೂರ್ಣವಾಗಿ ನಿಭಾಯಿಸುತ್ತಿಲ್ಲ ಎಂದು ಹೇಳಲಾಗದು.

ಇದು ಸಾಧ್ಯವಾಗುವುದಕ್ಕೆ ನಮ್ಮ ಚಂದಾದಾರರೆ, ಜಾಹಿರಾತುದಾರರ ಮತ್ತು ಕರ್ನಾಟಕದ ಲೇಖಕ ಬಂಧುಗಳ ತ್ರಿವೇಣಿ ಸಂಗಮವೇ ಸಾಧನವಾಗುತ್ತದೆ. ಇವರೆಲ್ಲರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುವುದು ನಮ್ಮ ಪರಮ ಕರ್ತವ್ಯ. ಇವರೆಲ್ಲರ ಹೆಚ್ಚಿನ ಬೆಂಬಲದಿಂದ "ನವಯುಗ"ವು ಇನ್ನೂ ಮುಂದುವರಿಯಬೇಕು. ಕಲುಷಿತರಾಜಕಾರಣವಲ್ಲಿ ದೇಶ ತಿರುವಾಗ ಅದಕ್ಕೆ ಸರಿದಾರಿಯುರುಸುವಲ್ಲಿ ಸಹಾಯ ನೀಡುವಂತಾಗಬೇಕು. ಜನ ಮನಸ್ಸು ಮಾಡಿದರೆ, ಏನೂ ಸಾಧಿಸಬಹುದು. ನಮ್ಮ ಜನರೂ ಮೊದಲು ಇದಕ್ಕೆಂದು ಮನಸ್ಸು ಮಾಡಬೇಕು.

ಶ್ರೀ ಕೆ. ಕೆ. ಶೆಟ್ಟರ ಪ್ರಪಂಚ ಪರ್ಯಟನ

ಮೈಸೂರಿನ ವಿಧಾನ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದ ಹೋದವರು ಹಲವರು. ಆದರೆ, ಶ್ರೀ ಕೆ. ಕೆ. ಶೆಟ್ಟರಂತೆ ಯಶಗಳಿಸಿದವರು ಇಲ್ಲವೆಂದೇ ಹೇಳಬೇಕು ಶ್ರೀ ಶೆಟ್ಟರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ದುಡಿದವರು; ರಾಷ್ಟ್ರೀಯ ಶಿಕ್ಷಣದ ಗರಡಿಯಲ್ಲಿ ಪಳಗಿದವರು. ಪತ್ರಿಕಾಪ್ರಪಂಚದಲ್ಲಿ ಪತ್ರಿಕಾಧರ್ಮದ ಪಾವಿತ್ರ್ಯವನ್ನು ಎತ್ತಿ ಹಿಡಿದವರು, ನಾಟಕಕಾರರು, ಉತ್ತಮ ಲೇಖಕರು.

ಕಾಂಗ್ರೆಸ್ ಸಂಸ್ಥೆಯ ವಿವಿಧ ಹುದ್ದೆಗಳಲ್ಲಿ ವಿರಾಜಿಸಿದ ಶ್ರೀ ಶೆಟ್ಟರು ಸದ್ಯ ರಾಜ್ಯ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಬಳಸು ಮಾತಿರಯದ ಶ್ರೀಯುತರು ಹೇಳಬೇಕಾಗಿದ್ದನ್ನು ಹೇಳಿಯೆ ಹೇಳುತ್ತಾರೆ; ಮಾಡಬೇಕಾದ್ದನ್ನು ಮಾಡಿಯೇ ತೋರಿಸುತ್ತಾರೆ.

ಶ್ರೀ ಕೆ. ಕೆ. ಶೆಟ್ಟರು ಆಡಳಿತ ವರ್ತುಲದಿಂದ ನವೆಂಬರ್ ೧೦ರ ವರೆಗೆ ವಿದೇಶ ಸಂಚಾರ ಮಾಡಿ ಮರಳಲಿದ್ದಾರೆ. ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಎಸೋಸಿಯೇಶನ್‌ನ ಸಮ್ಮೇಳನವು ಪೋರ್ಟ್ ಆಫ್ ಸ್ಪೈನ್‌ನಲ್ಲಿ ಅಕ್ಟೋಬರ್ ಅರಿಂದ ೧೯ರ ವರೆಗೆ ನಡೆಯಲಿದ್ದು ಶ್ರೀಯುತರು ಇದರಲ್ಲಿ ಭಾಗವಹಿಸುವರು. ಇದರ ಮೊದಲು ಮತ್ತು ಆನಂತರ ಅವರು ರಶ್ಯ, ಯೂರೋಪ್ ದೇಶಗಳು, ಅಮೆರಿಕೆಯ ದೇಶಗಳನ್ನೂ ಪೂರ್ವ ಏಶ್ಯದ ದೇಶಗಳನ್ನೂ ಸಂಚರಿಸುವರು.

ಶ್ರೀ ಶೆಟ್ಟರ ಈ ಪ್ರಪಂಚ ಪರ್ಯಟನೆಯು ಸುಖದಾಯಕವಾಗಲಿ; ಇದರಿಂದ ಜನತೆಗೂ ಬಹುಮುಖ ಪ್ರಯೋಜನ ದೊರೆಯಲಿ.

ಮಣಿಪಾಲದಲ್ಲಿ ಪಿ. ಟಿ. ಐ. ಆಫೀಸು ಎಕೆಡೆಮಿ ರಿಜಿಸ್ಟ್ರಾರ್

ಡಾ॥ ಮೂಧನ ಸೈಗಳಿಂದ ತೆರೆಯಲ್ಪಟ್ಟಿತು

ಸುದ್ದಿ ಸಂಗ್ರಹ ಹಾಗೂ ವಿತರಣೆಯಲ್ಲಿ ನಿಷ್ಪಕ್ಷಪಾತ ಧೋರಣೆಯುಳ್ಳ ಪಿ. ಟಿ. ಐ. ಕಚೇರಿಯನ್ನು ಮಣಿಪಾಲದಲ್ಲಿ ತಾ. 24ರಂದು ತೆರೆದಿರುವುದರಿಂದ ಜಿಲ್ಲೆಯ ಉತ್ತರ ವಿಭಾಗದಲ್ಲಿ ರಚನಾತ್ಮಕ ಚಟುವಟಿಕೆಗಳ ಹೆಚ್ಚಳಕ್ಕೆ ಒಂದು ಅನಕಾಶವಾಯಿತೆಂದು ಹೇಳಿದ ಡಾ॥ ಸೈಗಳು ಮಣಿಪಾಲದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಲು ಎಲ್ಲರಿಗೂ ಅನಕಾಶವಿದೆಯೆಂದರು.

ಸನಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಟಿ. ಎ. ಪೈಗಳು ಮಣಿಪಾಲವು ಗ್ರಾಮಾಂತರ ಪ್ರದೇಶವಾದರೂ ಇಲ್ಲಿ ದೇಶದ ಮುಂದಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸುವ ಮಾರ್ಗ ಯೂವುದೆಂಬ ಅನ್ವೇಷಣೆಯು ಜನಸಾಮಾನ್ಯರ ಸಹಕಾರದಿಂದ ನಡೆಯುತ್ತಿದ್ದು ಅದು ಯಶಸ್ವಿಯಾಗಿದೆ. ಈ ಒಂದು ಕಾರಣದಿಂದ ಗ್ರಾಮಾಂತರ ಪ್ರದೇಶದಲ್ಲಿ ಮೊತ್ತಮೊದಲು ಪಿ. ಟಿ. ಐ. ಆಫೀಸು ತೆರೆಯಲ್ಪಟ್ಟಿದೆ ಎಂದರು.

ಇದರ ಅನುಕೂಲತೆಯನ್ನು ಒದಗಿಸಿಕೊಂಡು ಹುಟ್ಟಲಿರುವ ಯೂನಿ ದೈನಿಕ ವಾರ್ತಾ ಪತ್ರಿಕೆಯನ್ನು ಶ್ರೀ ಪೈಗಳು ಸ್ವಾಗತಿಸುತ್ತಾ ಈ ಪತ್ರಿಕೆಯು ಹೆತ್ತರೊಟ್ಟಿಗೆ ಪನ್ನೊಂದಾಗಿರದೆ, ಶ್ರೇಷ್ಠ ಮಟ್ಟದ ಪತ್ರಿಕೋದ್ಯಮದ ಸಂಕೇತವಾಗಿಲಿ ಎಂದು ಆಶಿಸಿದರು.

ಪಿ. ಟಿ. ಐ. ಆಫೀಸು ಮೆನೇಜರ್ ಶ್ರೀ ಪಿ. ಗೋಪಾಲನ್ ಆತಿಥಿಗಳನ್ನು ಸ್ವಾಗತಿಸಿ ಆನಂತರ ನೂತನ ಶಾಖೆಗೆ ಚಾಲನೆ ನೀಡಿದ್ದರು. ಪಿ. ಟಿ. ಐ. ಕಾರ್ಯಚಾರಣೆಯು ಜಯಯ ಮಾಡಿಕೊಟ್ಟರು.

ಬೆಳ್ತಂಗಡಿ ಲೇಂಡ್ ಟ್ರಿಬ್ಯೂನಲ್ ನಲ್ಲಿ

R. R. C. No. 100/69

ಲೀಲಾವತಿಯಮ್ಮ— ಅರ್ಜಿದಾರಳು

ಮತ್ತು

ಬಾವೆ ಸುಬ್ಬಯ್ಯ ಭಟ್ಟ— ಎದ್ರಿ

ಕಾರ್ಕಳ ತಾಲೂಕು ಮೂಡ ಗ್ರಾಮದ ನಾರಾಯಣ ಭಟ್ಟರ ಮಗ ಬಾವೆ ಸುಬ್ಬಯ್ಯ ಭಟ್ಟರಿಗೆ:

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವೃತಿದಾರಿಕೆಯಲ್ಲಿ ನಿಮ್ಮಿಂದ ಬರಕ್ಕೆ ಗೇಣಿ ಬಾಕಿಗೆ ಅರ್ಜಿದಾರಳು ಮಾಡಿದ ಅರ್ಜಿಯು ತಾರೀಕು 17.9.1969 ಕ್ಕೆ ಇಟ್ಟರುವುದರಿಂದ ನಿಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಖುದ್ದು ಸ್ವತಃ ಅಥವಾ ವಕೀಲರ ಮೂಲಕ ಉದಯಂಕಾಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಸ್ತಾ ಮಾಡಿ ಯುಕ್ತ ಕಂಡಂತೆ ಮೇಲಿನ ಅರ್ಜಿಯನ್ನು ತೀರ್ಮಾನಿಸಲಾಗುವುದು.

[ಟ್ರಬ್ಯೂನಲ್‌ನ ಹುಕುಂ ಪ್ರಕಾರ]

ಬಿ. ರವಿಚಂದ್ರ
ಅರ್ಜಿದಾರಳ ಕಡೆಯಿಂದ ಎಡ್ವೋಕೇಟ್

ಬೆಳ್ತಂಗಡಿ,
19-8-1969.



ಕೇರಳದ ಸರ್ವಜನಪ್ರಿಯ ಹಬ್ಬ

= ಓಣಂ =

ಲೇಖಕರು : ಶ್ರೀ ತಾತಾಪುರಂ ಸುಳುಮಾರನ್—
ಕಲೆ, ಸಾಹಿತ್ಯಗಳಿಗಾಗಿ ವಿಶಾಲವಾದ ಕೇರಳದ 'ಕಲಾರಂಗಂ' ಪತ್ರಿಕೆಯ ಸಂಪಾದಕರು.

ಕೇರಳ ಕೆಲವರಿಗೆ ಸಮಸ್ಯಾತ್ಮಕ ರಾಜ್ಯ. ಇತರರಿಗೆ ಎಂದೂ ಸಂದಿಗ್ಧಕರವಾಗದ ಪ್ರದೇಶ. ಸ್ವಿಟ್ಸರ್ಲೆಂಡಿನಂತೂ ಸಣ್ಣದಾದ, ಪರ್ವತಗಳ ಮತ್ತು ಸಾಗರದ ನಡುವಿನ ಈ ಭೂವಿಸ್ತಾರ ಕಾಲಕಾಲಕ್ಕೂ ಎಲ್ಲರ ಗಮನ ಸೆಳೆದಿದೆ. ಆದರೂ ಈ ಚಿಕ್ಕ ರಾಜ್ಯ ತನ್ನ ಪ್ರಾಚೀನ ನಾಗರೀಕತೆಯ ಪ್ರತೀಕವಾಗಿರುವ ಅಪೂರ್ವ ಕಲಾರೂಪಕ್ಕನ್ನು ಇಂದಿಗೂ ಉಳಿಸಿಕೊಂಡು ಬಂದಿದೆ.

ತೆಂಗಿನ ಸೆರಗನ್ನು ಹೊದ್ದ ಅವರ ತೀರ ಪ್ರದೇಶ ಕೇರಳದ ನೈಸರ್ಗಿಕ ಚೆಲುವಿಗೆ ಅಳವರ್ಣನೀಯ ಭಾವ. ಈ ಸೊಬಗಿನ ನಡುವೆ ನೆಲೆಸಿರುವ ಫಲವಾಸಿಗಳು ಆಚರಿಸುವ ಹಬ್ಬಗಳು ಅನೇಕ. ಇವುಗಳಲ್ಲಿ ಪ್ರಮುಖವಾದುದು ಓಣಂ. ಕಾಲಕ್ರಮೇಣ ಇದು ಸರ್ವಜನಪ್ರಿಯ ಹಬ್ಬವಾಗಿ ವಿಕಸಿತಗೊಂಡಿದೆ. 1961ರಲ್ಲಿ ಕೇರಳದ ಸರ್ಕಾರ ಓಣಂ ಸಮಾರಂಭಗಳಲ್ಲಿ ಭಾಗವಹಿಸುವುದರ ಮೂಲಕ ತನ್ನ ಪ್ರಾಂತಕ್ಕೆ ಪ್ರವಾಸಿಗರನ್ನು ಆಕರ್ಷಿಸುವ ಒಂದು ಯೋಜನೆಯನ್ನೇ ಪ್ರಾರಂಭಿಸಿತು.

ಓಣಂ 'ಚಿಂಗೊಂ' ಮಾಸದಲ್ಲಿ (ಆಗಸ್ಟ್-ಸೆಪ್ಟೆಂಬರ್) ಆಚರಿಸಲ್ಪಡುವ ಹಬ್ಬ. 'ಚಿಂಗೊಂ' ಮಲೆಯಾಳಂ ಪಂಚಾಂಗದ ಪ್ರಥಮ ಮಾಸ. ಈ ವರ್ಷ ಇದು ಆಗಸ್ಟ್ 26ನೇ ದಿನಾಂಕ ಬೀಳುತ್ತದೆ. ಪ್ರಮುಖ ಸುಗ್ಗಿಯ ಕಾಲದಲ್ಲಿ ಬರುವುದರಿಂದ ಇದನ್ನ ಸುಗ್ಗಿಯ ಹಬ್ಬವೆಂತಲೂ ಕರೆಯುತ್ತಾರೆ. ಕೇರಳದಲ್ಲಿ ಇದು ವಸಂತಕಾಲವೂ ಹೌದು. ಓಣಂ ದಿನಗಳಲ್ಲಿ ಮಕ್ಕಳು ಎಲ್ಲೆಡೆಗಳಲ್ಲಿ ಓಡಾಡುತ್ತಾ ತಮಗಿಷ್ಟ ಬಂದ ಪುಷ್ಪಗಳನ್ನು ಸಂಗ್ರಹಿಸಿ ಮನೆಯ ಅಂಗಳವನ್ನು ಸಿಂಗರಿಸುವುದು ಸಾಮಾನ್ಯ ದೃಶ್ಯ. ಈ ಪುಷ್ಪಾಲಂಕಾರ ಸಹ ಕಲಾತ್ಮಕ. ಓಣಂಗೆ ಹತ್ತು ದಿನ ಮೊದಲಿನ "ಅಥಂ"ನಿಂದ ಈ ಪುಷ್ಪ ಸಂಗ್ರಹದ ಪ್ರಾರಂಭ. ಪಾತಾಳದ ದೊರೆ ಮಹಾಬಲಿಯ ಜ್ಞಾಪಕಾರ್ಥ ಆಚರಣೆಯೆಂದು ನಂಬಿರುವ ಈ ಹಬ್ಬದಲ್ಲಿ ಮನೆಯ ಅಂಗಣವನ್ನು ಅತನ ನೆನಪಿನಲ್ಲಿ ಆಲಂಕರಿಸುತ್ತಾರೆ. ಪುರಾಣ ಐತಿಹ್ಯದ ಪ್ರಕಾರ ಈ ನಾಡನ್ನು ಅಸುರ ದೊರೆ ಮಹಾಬಲಿ ವೈಭವಪೂರ್ಣವಾಗಿ ಆಳುತ್ತಿದ್ದನಂತೆ. ಅತನ ರಾಜ್ಯದಲ್ಲಿ ಎಲ್ಲ ಪ್ರಜೆಗಳೂ ಸುಖಿಗಳು. ಅವರಿಂದ ಅತಿಯಾಗಿ ಪ್ರೀತಿಸಲ್ಪಡುತ್ತಿದ್ದ ದಯಾಪರ ದೊರೆ ಅತ.

"ಮಾವೇಲಿ ಆಳುವ ಸಮಯದಿ
ಇದ್ದರು ಎಲ್ಲರೂ ಸಮನಾಗಿ
ದರೋಡೆ ಎಂಬುದು ಕುಳಿವಿಲ್ಲ
ನೋವಿನ ನೊದಲೇ ಕೇಳಿಲ್ಲ"||

ಈ ರೀತಿ ಜಾನಪದ ಗೀತೆ ಹಾಡುತ್ತದೆ. ಈ ಅಸುರ ದೊರೆಯ ಪ್ರೀತಿ ದೇವತೆಗಳಿಗೂ ಅಸೂಯೆ ಉಂಟುಮಾಡಿತು. ಅವರೆಲ್ಲಾ ಮಹಾವಿಷ್ಣುವಿನ ಬಳಿ ದೂರನ್ನೊಯ್ದರು. ಅತ ವಾಮನನಾಗಿ ಮಹಾಬಲಿಯ ಬಳಿಗೆ ಬಂದ. ತಪಕ್ಕೆ ತಪವನ್ನಾಚರಿಸಲು ಮೂರು ಅಡಿ ನೆಲ ಬೇಡಿದ. ಅದರ ದೊರೆ ಸ್ವಲ್ಪವೂ ಹಿಂಜರಿಯಲಿಲ್ಲ. ಆತನ ಇಷ್ಟಾರ್ಥಕ್ಕೆ "ಅಸ್ತು" ಎಂದ. ಫಂತರ ವಾಮನ ತ್ರಿವಿಕ್ರಮನಾಗಿ ವೃದ್ಧಿ ಹೊಂದಿ ಆ ಅಸುರ ರಾಜನ ಇಡೀ ಸಾಮ್ರಾಜ್ಯವನ್ನು ಎರಡೇ ಹೆಜ್ಜೆಗಳಲ್ಲಿ ಆಳೆದು ಮುಗಿಸಿದ. ಮೂರನೆಯ ಹೆಜ್ಜೆಯಿಂದ ಅತನನ್ನೂ ಪಾತಾಳಕ್ಕೆ ತುಳಿದ. ಆ ಸಮಯದಲ್ಲಿ ವಿಷ್ಣು ಮಹಾಬಲಿ ವಿಷಯಕ್ಕೆ ಬೆಳೆಸಿ ತನ್ನ ಪ್ರಜೆಗಳನ್ನು ಸಂದರ್ಶಿಸುವ ಅವಕಾಶ ಬೇಕೆಂದು ವರ ಕೇಳಲಾಗಿ ಆ ವರ ಅನುಗ್ರಹಿಸಲ್ಪಟ್ಟಿತ್ತು. ಚಿಂಗೊಂ ಮಾಸದಲ್ಲಿ ಮಹಾಬಲಿ ತನ್ನ ಪ್ರಜೆಗಳನ್ನು ಸಂದರ್ಶಿಸುವನೆಂದು ಇಂದಿಗೂ ನಂಬಲಾಗಿದೆ. ಈ ದೊರೆಯು ಪುನರಾಗಮನದ ಸಂತೋಷಾರ್ಥವಾಗಿ ಓಣಂ ಆಚರಣೆ ಜಾರಿಯಲ್ಲಿದೆ ಎಂಬ ಪುರಾಣದ ಕತೆ ಹೇಳುತ್ತದೆ.

ಮಹರ್ಷಿ ಪರಶುರಾಮರನ್ನು ಕುರಿತ ಪ್ರಚಲಿತ ಪುರಾಣ ಕತೆಯೊಂದು ಓಣಂ ಹಬ್ಬದ ಬಗ್ಗೆ ಇದೆ. ಅವರು ಕೇರಳವನ್ನು ಸೃಷ್ಟಿಸಿ ಬ್ರಾಹ್ಮಣರಿಗೆ ದಾನವಾಗಿ ಕೊಡುವುದರಿಂದ ಇದನ್ನ ಸುಗ್ಗಿಯ ಹಬ್ಬವೆಂತಲೂ ಕರೆಯಲಾಗುತ್ತಾರೆ. ಕೇರಳದಲ್ಲಿ ಇದು ವಸಂತಕಾಲವೂ ಹೌದು,

NAVAYUGA 28—8—1969
Registered with the Registrar
of News Papers for India
under No. R. N. 3546/'57

REGD: No: B. G: 176
LICENCE No. 33
Licensed to Post without Prepayment

ಸೇನೆಗಳು ಸಾಯುವದಕ್ಕೆ

ಲೇಖಕರು: ಶ್ರೀ ಎಂ. ವಿ. ಶರ್ಮಾ, ಹದ್ದಲಸೆ.

ಜನರಿಂದ ದೇಶ ನಿರ್ಮಾಣವಾಗುತ್ತದೆ; ದೇಶದಿಂದ ಜನರು ನಿರ್ಮಾಣಗೊಳ್ಳುವದಿಲ್ಲ. ಜಗತ್ತು ದೇವರ ನಿರ್ಮಾಣ. ದೇಶವು ಮೂರ್ತ ಮನುಷ್ಯನ ನಿರ್ಮಾಣ. ಮನುಷ್ಯನ ರೀತಿ—ನೀತಿ— ಸಂಸ್ಕೃತಿ—ಸಂಪ್ರದಾಯ—ಧೈರ್ಯ—ಧೀರತೆಯ ಮೇಲೆ ದೇಶವು ರೂಪ ಪಡೆಯುತ್ತದೆ. ಹಾಗೇ ದೇಶವು ಜನರಿಂದ ಪಡೆದ ಗುಣಧರ್ಮವನ್ನು ಜಗತ್ತಿಗೆ ಎತ್ತಿ ಹಿಡಿಯುತ್ತದೆ.

ದೇಶದೊಂದರೆ ಶ್ರದ್ಧೆಯುಳ್ಳ, ಉತ್ಸಾಹವುಳ್ಳ, ನಿಷ್ಠೆಯುಳ್ಳ, ಅಭಿಮಾನವುಳ್ಳ, ಜಾಗ್ರತೆಯುಳ್ಳ, ಪರಿಣತಿಯುಳ್ಳ ಕರ್ತವ್ಯ ಶಕ್ತಿಯುಳ್ಳ ಜನ ಸಮೂಹ. ದೇಶದ ಜಲವು ಸಂಖ್ಯೆಯನ್ನು ಅವಲಂಬಿಸಿಲ್ಲ; ಆ ಮು ಜನದ ಸತ್ವವನ್ನು ಅವಲಂಬಿಸಿದೆ. ಜವರ, ನಿಷ್ಕರ್ಷ, ದರ್ಗುಣ-ದುರ್ಮಾರ್ಗಿಗಳು ಅಪರಿ ದೇಶವೂ ದುರ್ಬಲವಾಗಿ ನಾಶವಾಗುತ್ತದೆ. ನಾವಿರ ಜನ ದುರ್ಬಲರು ಒಬ್ಬ ಕೂರನಿಗೆ ಸಮಾನರಲ್ಲ. ಸತ್ವ ಇಲ್ಲದ ಸಂಖ್ಯೆಯು ಒಂದು ಸೊನ್ನೆ ಇದ್ದಂತೆ, ಸೊನ್ನೆಗಳ ಹಿಂದೆ ಒಂದು ಅಂಕೆ ಇದ್ದರೆ ಸೂತ್ರ ಅದರ ಸೊತ್ತಕ್ಕೆ ಬೆಲೆ ಬರುತ್ತದೆ.

ಸದ್ಯ ನಮ್ಮ ದೇಶದಲ್ಲಿ ಈ ಬಗೆಯ ದುರಂತಗಳಿಗೆ ಸಮೂಹವೊಂದು 'ಸೇನೆಗಳು' ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಿದೆ. ಇದು ಎಷ್ಟರ ಮಟ್ಟಿಗೆ ದೇಶದ ಸಾಮಾಜಿಕ್ಯ ಅಧಿಕಾರ ವ್ಯಾಪೇಕ್ಷಿತ ಹಿತಕ್ಕೆ ಯೋಗ್ಯ ಎಂಬುದನ್ನ ಪ್ರತಿಯೊಬ್ಬ ಹೊಸೆಗಾರ

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ
Ex. C. No. 43/63.
O.S. No 76/67.
ಕೆ. ಶ್ರೀಧರ ರೈ— ಅರ್ಜಿದಾರ
ವಿರುದ್ಧ
ವಿರುದ್ಧ ಕೊಡಾ:— ರೆಸ್ಪಾರಿ.
ತಿನೇ ಯೆದ್ರಿ ಪ.ಗ್ಗಣ್ಣ ಗೌಡ, ಬೊಳಿಯ ಗೌಡರ ಮಗ, ಸಕಿಣಿಯರು ಗ್ರಾಮದ ಪೂಳಿ ತಾರು ಎಂಬವ್ರಿ, ಪುತ್ತೂರು ತಾಲೂಕು.
ತಿನೇ ಯೆದ್ರಿ ಅಮ್ಮಳ್ಳ, ಬೊಳಿಯ ಗೌಡರ ಮಗಳು, ಸಕಿಣಾರು ಗ್ರಾಮದ ಪೂಳಿ ತಾರುಯೆಂಬವ್ರಿ, ಪುತ್ತೂರು ತಾಲೂಕು.
ಇವರಿಗೆ ಕೋರ್ಟಿನ ಹುಕುಂ ಮೇರೆಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—
ಮೇಲಿನ ಅಮಲ್ದಾರಿಯಲ್ಲಿ ನಿಮ್ಮ ಹಕ್ಕಿನ ನಷ್ಟವಾದರು ಗ್ರಾಮದ ಸ್ಥಿರಾಸ್ತಿಯನ್ನು ಯಾವುದಾದರು ಖರೀದಿ ಮಾಡಿರುವ ಕುರಿತು ಯಾವುದಾದರು ಆಕ್ಷೇಪಣೆ ಇದ್ದಲ್ಲಿ ಸದರಿ ಕೋರ್ಟಿನ ನೋಟೀಸಿನ ಬಗ್ಗೆ ತಾರೀಕು 11-9-69ಕ್ಕೆ ಇಟ್ಟುಕೊಳ್ಳತಕ್ಕದ್ದು. ಸದ್ರಿ ದಿವಸ ಈ ಕೋರ್ಟಿಗೆ ಯಾವುದೇ ಹಾಜರಾಗಿ ಉದಾಹರಣೆಗಳಿದ್ದಲ್ಲಿ. ತಪ್ಪಿದಲ್ಲಿ ಯಃಕ್ಷಕಂಡಂತೆ ತೀರ್ಮಾನಿಸಲಾದೀತು.
B. T. RAI
Advocate for Petitioner.
ಪುತ್ತೂರು,
ತಾರೀಕು 18.8.1969

ವ್ಯಕ್ತಿ ಗಂಭೀರವಾಗಿ ಯೋಚಿಸ ಬೇಕಾದ ವಿಚಾರ.

ಮಹಾರಾಷ್ಟ್ರ ರಾಜ್ಯದ ಬಾಳಾಸಾಹೇಬರುವರ ನೇತೃತ್ವದಲ್ಲಿ "ಶಿವಸೇನೆ" ಸ್ಥಾಪಿತಗೊಂಡು ಅದು ಬೇರೆ ಪ್ರಾಂತಗಳ ಜನರ ವಿರುದ್ಧ ಗೂಂಡಾಂತರಕಾರಿಯೆನಿಸಿತು. ಕಳೆದ ಒಂದು ವರ್ಷದಿಂದಲೂ ಕರ್ನಾಟಕದ ಮೇಲೆ ಅನೇಕ ಮಾರ್ಗದಿಂದ ಉಪಟಳವನ್ನು ಆರಂಭಿಸಿ, ಕನ್ನಡಿಗರನ್ನು ಅವಮಾನಗೊಳಿಸುತ್ತಲೇ ಬಂದಿರುತ್ತದೆ. ಇಂಥ ಹೇಯ ವೃತ್ತಿಯು ಮಂತ್ರಿಗಿರಲ್ಲಿ ತಲೆಯೆತ್ತಿ ರಾಷ್ಟ್ರದಲ್ಲಿ ಶಾಂತಿಯನ್ನು ಭೇದಿಸಿ ರಾಷ್ಟ್ರನಾಯಕರನ್ನು ಎಚ್ಚರಗೊಳಿಸಿದೆ.

"ಶಿವಸೇನೆ"ಯು ಚಟುವಟಿಕೆಗಳಲ್ಲಿ ಹತ್ತಿಕ್ಕದೆ ಹೋದರೆ ಹೈದ್ರಾಬಾದಿನ ರಜಾಕರ ಹಾವಳಿಯು ವಿಧ್ವಂಸಕ ಕೃತ್ಯಗಳ ಈ ಸಂಘಟನಾ ಶಕ್ತಿಯಲ್ಲಿ ಕಾಣಿಸಿಕೊಂಡು; ಕೇವಲ ಕರ್ನಾಟಕದಲ್ಲಿಯು ಸ್ವೇ ಅಲ್ಲ ಸಮಗ್ರ ರಾಷ್ಟ್ರದ ಮೂಲೆ ಮೂಲೆಗಳಲ್ಲಿ ಹೇಯ ನೃತ್ಯಗಳು ನಡೆಯಬಲ್ಲವು.

'ಶಿವಸೇನೆ' ಕಟ್ಟಲು ಅನೇಕ ಸಹಾಯ-ಸಹಕಾರ ಮಹಾರಾಷ್ಟ್ರ ನಾಯಕರಿಂದ ಲಭಿಸಿರುವದರಿಂದ, ಅದು ರಾಷ್ಟ್ರೀಯ ವನೋನೃತ್ತಿಯಲ್ಲಿ ಮಂದೋನ್ಮತ್ತವಾಗಿ ಬೆಳೆಯುತ್ತ ಖುದ್ದಿ ಜೀವಿಗಳನ್ನ ಕಂಗೆಡಿಸುತ್ತಲಿದೆ. ಇಂಥ ರಾಷ್ಟ್ರ ಹಾವಳಿಯನ್ನ ಸದೆ ಬಡಿಯಲೇ ಬೇಕು.

ತನ್ನ ದೆಹ್ಮವ ಅಭಿಮಾನ ಮನುಷ್ಯನಲ್ಲಿ ಬಂದರೆ ದೇಶವು ಮೆರಗು ಪಡೆಯುತ್ತದೆ, ಬಲವೆತ್ತಿ ಮೆರೆಯುತ್ತದೆ. ಆದರೆ ಅತಿಶಯೋಕ್ತಿ ಅಭಿಮಾನದಷ್ಟು ಅಪಾಯ ಇನ್ನೊಂದಿಲ್ಲ!

ಈ ಹೊತ್ತು "ಶಿವಸೇನೆ ಯ ವಿರುದ್ಧ ತಮಿಳುನಾಡಿನಲ್ಲಿ "ತಮಿಳ್‌ಸೇನೆ" ಕಟ್ಟಬೇಕಾದೀತೆಂದು ಡಿ. ಎಂ. ಕೆ. ನಾಯಕರಾದ ರಾ...ನ್ಯಾಮಿಯವರು ನುಡಿಯುತ್ತಿರೆ. ನಾಗಪುರದಲ್ಲಿ ಭೀಮಸೇನೆ" ಸ್ಥಾಪಿತಗೊಂಡಿದೆ. ಇನ್ನು ಕರ್ನಾಟಕದಲ್ಲಿ "ಕನ್ನಡಸೇನೆ" ಜನ್ಮ ವಾದ ವಿವಾದದಲ್ಲಿ ಮುಡುಪಿನಲ್ಲೇ ಸಿಕ್ಕಿಕೊಂಡಿತ್ತು. ಆಂಧ್ರ ಪ್ರದೇಶ 'ಆಂಧ್ರಸೇನೆ' ಕಟ್ಟಿಕೊಂಡಿತು. ಅಂತೂ ಎಲ್ಲ ಪ್ರಾಂತದವರು ತಮ್ಮ ತಮ್ಮ ಸೇನೆಗಳನ್ನು ಸಿದ್ಧಗೊಳಿಸಿಕೊಂಡು ಫಿಂತರೆ ದೇಶಕ್ಕೆ ಅದೊಂದು ದೊಡ್ಡ ತಲೆಭಾರವಾಗುವುದಲ್ಲದೆ ಈ ರಾಷ್ಟ್ರಾಂತರಾಳ ಚಟುವಟಿಕೆಯನ್ನು ನಿಯಂತ್ರಿಸುವದು ಅಸಾಧ್ಯವಾದೀತು.

ಈಗಲೇ ಈ ಸೇನೆಗಳ ಹಾವಳಿಯನ್ನು ಬೇರಿಗೇ ಕೈಯಿಕ್ಕಿ ಅಂಗಸಚೇಕು. ಕೊನೆಯಲ್ಲಿ ಗಿಡವಾಗಿ ಬಗ್ಗುಬ್ಬು ಮರವಾಗಿ ಬಗ್ಗಿತೆ.... ಎನ್ನುವಂತಾದೀತು. ಒಂದೊಂದು ರಾಜ್ಯದವರು ಕೇವಲ ತಮ್ಮ ಜನತೆಯ ಹಿತಾಸಕ್ತಿಗಳ ಬಗ್ಗೆ ಈ ರೀತಿ ಸೇನೆಗಳನ್ನು ಕಟ್ಟಿಕೊಂಡು ನಿಲ್ಲುವದು ಎಷ್ಟು ಮಾತ್ರಕ್ಕೂ ಯೋಕ್ಷೇಮವೆಸಿಸಲಾರದು. ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಜಾಸತ್ತಾತ್ಮಕ ಈ ರಾಜ್ಯದಲ್ಲಿ ಅವಿಚ್ಛಿನ್ನ ವೇದಿಕೆಗಳಿವೆ. ಇಂಥಗುಂಡಾಗಿರಿ ಮನೋವೃತ್ತಿಯನ್ನಿಟ್ಟುಕೊಂಡು ಕಲಿಯೆತ್ತ ಸೇನೆಗಳಿಂದ ಸಮಸ್ಯೆಗಳು ಬಗೆಹರಿಯುವ ಬದಲು ಇನ್ನಷ್ಟು ಭೀಕರವಾಗಿ ಜಟಿಲಗೊಳ್ಳುತ್ತದೆ. ದೇಶದ ಐಕ್ಯತೆ ಛಿದ್ರಛಿದ್ರವಾಗಿ ಹೋಗುವುದಲ್ಲದೆ ಭದ್ರತೆ ಕುಸಿದು ಇಪ್ಪತ್ತು ವರ್ಷಗಳ ಹಿಂದೆ ಕಷ್ಟಪಟ್ಟು ಗಳಿಸಿಕೊಂಡಿರುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾದೀತು ಎಚ್ಚರ!

"ಶಿವಸೇನೆ"ಯ ಉದ್ದೇಶವು ತಮ್ಮ ಪ್ರಾಂತದ ಜನರಿಗೇನೇ ಹೆಚ್ಚು ಉದ್ಯೋಗ, ಅವಕಾಶಗಳನ್ನು ದೊರಕಿಸಿ ಕೊಡಬೇಕು ಎಂಬುದೇ ಆಗಿದ್ದರೂ ಅವರು ಅನ ಸಂಕುಚಿತರುವ ನಾರ್ಗ ವಿಧಾನಯಕವೆನಿಸುವದಿಲ್ಲ. ಮುಂಡಾಟಕೆಯು ಪರಮಾವಧಿಯೆ ನಿಸಿ, ಶಿವಸೇನೆಯು ಬಗೆಗೆ ಅಲ್ಲಿ ಯೂರೂ ಯಾವುದೇ ಮಾತನ್ನೆ ಆಡುವಂತಿಲ್ಲ. ಅಪ್ಪಿ ತಪ್ಪಿ ಆಡಿದ್ದಾದರೆ ಮಗುದಿನವೇ ಬೆದರಿಕೆಯ ಬಿಸಿಗುಂಡು ಬೀಳುತ್ತದೆ. ಕನ್ನಡಿಗರಾದರೂ ಅವರನ್ನು ಖಡಿಸಿ ಸೇನೆ ಕಟ್ಟಿ ಅವರಂತೆ ಮಾಡ ವದು ಅರ್ಥವಿಲ್ಲದ್ದು.

ಕೇಂದ್ರ ಸರಕಾರವು ಈಗ ಪಡಿಸುತ್ತಿರುವ ನೀತಿಯನ್ನು ಅವಲಂಬಿಸಿದರೆ "ಶಿವಸೇನೆ" ಈ ದೇಶದಲ್ಲಿ ದೊಡ್ಡ ಶಕ್ತಿಯಾಗಿ ಪರಿಣಮಿಸುವದಲ್ಲದೇ ಅದು ನುಂಗಲಾರದ ತುತ್ತಾಗುವ ಭಿತಿಯೂ ಇದೆ. ಈ ಸೇನೆಯು ಅಥವಾ ಇನ್ನಿತರ ಯಾವುದೇ ಸೇನೆಯು ಹಿಂದೆ ಹೂರೇ ಇರಲಿ, ಯಾವುದೇ ವ್ಯಕ್ತಿಯು ಬೆಂಬಲ ಅಥವಾ ಸಂಘಟನೆ ಇರಲಿ ಅದನ್ನು ಉಗ್ರ ಕ್ರಮಗಳ ಮೂಲಕ ನಿಯಂತ್ರಿಸಬೇಕಲ್ಲದೆ ಅದರ ಚಟುವಟಿಕೆಗಳು ಯಾವುದೇ ರೀತಿಯಿಂದ ನಡೆಯದಂತೆ ಮಾಡಲೇಬೇಕು.

ಜನರು ತಮ್ಮಲ್ಲಿ ಬೆಳೆಸಿಕೊಳ್ಳಬೇಕಾದ ಗುಣಧರ್ಮಗಳೇ ದೇಶದ ಯೋಗ್ಯತೆಯನ್ನು ನಿರ್ಧರಿಸುತ್ತವೆ. ಜನರು ಯಾರನ್ನಾದರೂ ದಂಡಿಸಬೇಕೆಂದು ಆ ಕೆಟ್ಟ ಗುಣಧರ್ಮಗಳನ್ನು ಬೆಳೆಸಿಕೊಳ್ಳುವದೆಷ್ಟು. ಒಳ್ಳೆಯವನಾಗಿ ನಡೆಯುವದರ ಪ್ರತಿಫಲವು ಒಳ್ಳೆಯುತನದಲ್ಲಿಯೇ ಇದೆ.

ಶ್ರೀ ಚನ್ನಾಜಿರಂಥ ಶಾಯಕರು ಇಂಥ ಉಪಟಳ ನಡೆಯುವದಕ್ಕೆ ಅವಕಾಶ ಕೊಡಬಾರದಾಗಿತ್ತು. ಈಗಲಾದರೂ ಕಾಲ ವಿಂಬಿಲ್ಲ. ಶಕ್ತಿ ಕುಗ್ಗಿಲ್ಲ. ಶಿವಸೇನೆಯನ್ನ ಹತ್ತಿಕ್ಕುವ ಮೂಲಕ ದೇಶದ ಬೇರೆ ಬೇರೆ ಭಾಗದಲ್ಲಿ ತಲೆಯೆತ್ತಲಿರುವ ಸೇನೆಗಳ ಹಾವಳಿಯನ್ನು ತಡೆಯುವಂತಾಗುತ್ತದೆ. ಇಷ್ಟಲ್ಲದೆ ಇಂಥ ಜವವರ್ಗ ಹೆಚ್ಚಿಬಾದ ದೇಶದ ಸತ್ವ ಹಾಗೂ ಶಕ್ತಿ ಮಂದಿರ ಬೇಳುತ್ತದೆ. ಆಗ ದೇಶವನ್ನು ಬಗ್ಗುಬಡಿಯುವುದು ಎಲ್ಲ ದುಷ್ಟ ಶಕ್ತಿಗಳಿಂದಲೂ ಸಾಧ್ಯವಾಗುತ್ತದೆ

ದೇಶವು ಸತ್ವವಿಕ್ಷುವಂತೆ ಬೆಳೆಯುವ ಗುಣಧರ್ಮಗಳನ್ನು ಪಡೆದ ಜನರು ಬೆರೆಯಬೇಕು. ಬೆಳೆಯುವ ಭಾವನೆಯಿದ್ದರೆ ತ್ಯಾಗ- ಸೇವಾಭಾವನೆ- ಕಷ್ಟ ಸಹಿಷ್ಣುತೆ ಮುಂತಾದುವುಗಳೆಲ್ಲವೂ ಮನ ಪ್ಪನಲ್ಲಿ ಬರುತ್ತದೆ. ಈ ಗುಣಧರ್ಮಗಳೇ ಮನ ಪ್ಪನನ್ನು ಕಟ್ಟುತ್ತವೆ; ದೇಶವನ್ನು ಕಟ್ಟುತ್ತವೆ.

ಮನುಷ್ಯನ ಪುಟ್ಟ ಹೃದಯದಲ್ಲಿ ದೇವರು ಅಪರಿಮಿತವಾದ ಶಕ್ತಿ ಯನ್ನು ತುಂಬಿ ಕಳಿಸಿದ್ದಾನೆ. ಆ ಶಕ್ತಿಯ ಅರಿವು ಹಾಗೂ ಅನ್ನು ಬೆಳೆಸಿಕೊಳ್ಳುವ ಬದ್ಧಿ ಮನುಷ್ಯನಿಗೆ ಬರಬೇಕು.

ಪುತ್ತೂರು ಲೇಂಡ್ ಟ್ರ್ಯಾಬ್ಯುನಲ್‌ನಲ್ಲಿ
Resumption No. 137/68
T. ಸುಬ್ಬಿಲಮ್ಮ — ಅರ್ಜಿದಾರಳು
ಗೌರಿ ಕೂಡಾ— ಎದ್ರಿರು
ಎದ್ರಿರು—
1. ಕೆಮಲಾ— ಕಾಂತಪ್ಪ ಸಪಲ್ಯರ ಹೆಂಡತಿ, ಬಂಟ್ವಾಳ ತಾಲೂಕು, ಕಾವಳಕಟ್ಟೆ.
2. ಗಣಪತಿ — ಕಟ್ಟಿಂಣ ವೆಂಕ್ಟರರ ಮಗ, Madras Hotel, New Delhi.
ಸದ್ರಿ 1, 2ನೇ ಎದ್ರಿಂಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—
ಅರ್ಜಿದಾರಳ ಹಕ್ಕಿನ, ನಿಮ್ಮ ಸ್ವಾಧೀನ ಕೂಡಾ ಇರುವ ಸ್ಥಿರಾಸ್ತಿಯನ್ನು ಅರ್ಜಿದಾರಳಿಗೆ ಬಿಡಿಸಿ ಕೊಡಿಸಬೇಕೆಂಡ ವಗೈರೆ ಅರ್ಜಿದಾರಳು ಮೂಡಿದ ಅರ್ಜಿಯನ್ನು ತಾರೀಕು 6-9-69ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟುರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಣೆಗಳಿದ್ದಲ್ಲಿ, ತಪ್ಪಿದ್ದಲ್ಲಿ ನಿಮ್ಮನ್ನು ಕಿವ್ಯಾದೂಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.
Sd/ M. Rammohan Rao,
Advocate for Petitioner.
ಪುತ್ತೂರು,
ತಾ. 18.8.69.

ಪುತ್ತೂರು ಲೇಂಡ್ ಟ್ರ್ಯಾಬ್ಯುನಲ್‌ನಲ್ಲಿ
R. P. 241/67.
T. ಸುಬ್ಬಿಲಮ್ಮ— ಅರ್ಜಿದಾರಳು
ಗೌರಿ ಕೂಡಾ — ಎದ್ರಿರು
ಎದ್ರಿರು—
1. ಕೆಮಲಾ — ಕಾಂತಪ್ಪ ಸಪಲ್ಯರ ಹೆಂಡತಿ, ಬಂಟ್ವಾಳ ತಾಲೂಕು ಕಾವಳಕಟ್ಟೆ.
2. ಗಣಪತಿ — ಕಟ್ಟಿಂಣ ವೆಂಕ್ಟರರ ಮಗ, Madras Hotel, New Delhi.
ಸದ್ರಿ 1, 2ನೇ ಎದ್ರಿಂಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—
ತಾ. 31.8.69ಕ್ಕೆ ಮುಂಡಿದ ಕೂಡಾ ಅರ್ಜಿದಾರಳಿಗೆ ಬರಕ್ಕೆ ಗೇಣ ಬಾಕಿಗೆ ಅರ್ಜಿದಾರಳು ಮೂಡಿದ ಮೇಲಿನ ಅರ್ಜಿಯನ್ನು ತಾ. 8-9-69ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟುರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಣೆಗಳಿದ್ದಲ್ಲಿ, ತಪ್ಪಿದ್ದಲ್ಲಿ ನಿಮ್ಮನ್ನು ಕಿವ್ಯಾದೂಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.
Sd/ M. RAMMOHAN RAO
Advocate for Petitioner.
ಪುತ್ತೂರು,
ತಾ. 18-8-69.

Printed, Printed & Published by K. G. Shetty, at the Navayuga Press, Udipi, S. India.

ನವಯುಗ

1)	4-9-1969	8
2)	11-9-1969	8
3)	18-9-1969	8
4)	25-9-1969	12
5)	2-10-1969	8
6)	9-10-1969	8
7)	16-10 1969	8
8)	23-10-1969	8
9)	30-10-1969	8
10)	6-11-1969	28 ಅವಿಭಾಜ್ಯ ಸಂಖ್ಯೆ
11)	13-11-1969	8
12)	20-11-1969	8
13)	27-11-1969	12
14)	4-12-1969	12
15)	11-12-1969	12
16)	18-12-1969	8
17)	25-12-1969	8
18)	1-1-1969	8
19)	8-1-1970	8
20)	22 & 29-1-1970	44 Republic day Issue

232

21)	5 - 2 - 1970	8	
22)	12 - 2 - 1970	8	
23)	19 - 2 - 1970	8	
24)	26 - 2 - 1970	8	
25)	5 - 3 - 1970	10	
26)	12 - 3 - 1970	8	
27)	19 - 3 - 1970	8	
28)	26 - 3 - 1970	10	
29)	2 - 4 - 1970	8	
30)	9 - 4 - 1970	8	
31)	16 - 4 - 1970	8	
32)	23 - 4 - 1970	8	
33)	30 - 4 - 1970	8	
34)	7 - 5 - 1970	8	
35)	14 - 5 - 1970	8	
36)	21 - 5 - 1970	8	
37)	28 - 5 - 1970	8	
38)	4 - 6 - 1970	8	
39)	11 - 6 - 1970	32	ಪುಸ್ತಕಲ ಪಾಠ್ಯ ಪಂಚಾಕ್ಷರಿ
40)	18 - 6 - 1970	12	
		192	

41)	25- 6- 1970	12
42)	2- 7- 1970	12
43)	9- 7- 1970	12
44)	16- 7- 1970	12
45)	23- 7- 1970	12
46)	30- 7- 1970	12
47)	13- 8- 1970	40 కొన్ని తంతులు చదువబడలేదు.
48)	20- 8- 1970	12
49)	27- 8- 1970	12
		136

1) 232
2) 192
3) 136
560

ನವಯುಗ

NAVAYUGA 4—9—1969 ಸಂಪುಟ 49 ಸಂಚಿಕೆ 1

ಅಸಮಾನತೆಯ ನಿರ್ಮೂಲನ

ಹಳೆಯ ಸ್ನೇಹಿತರನ್ನು ಹೊಸ ಮುಖದಿಂದ ನೋಡುತ್ತೇವೆ

ಶ್ರೀ ವಂತಹೆಗರಿ ವೆಂಕಟಗಿರಿಯವರೇ ಗಾರಾಷ್ಟ್ರಪತಿ ಗಿರಿಯವನ್ನು ಎರಿದ ಗಿರಿಯವರು. ಆವರು ತೆರವಾದ ಹುದ್ದೆಗೆ ಸ್ಪರ್ಧಿಸಿದ ಔಚಿತ್ಯ, ಅನಂತರ ದೇಶದಲ್ಲಿ ನಡೆದ ರಾಜ್ಯಕೀಯವೆಲ್ಲವೂ ಪದ್ಯ ಮುಗಿದ ಅಧ್ಯಾಯ. ಗಾದಿಯನ್ನೇರುವ ಸಮಯದಲ್ಲಿ ಆಗಬ್ದುಗೆಯಿಂದ ರಾಷ್ಟ್ರಕ್ಕೆ ಸಂದೇಶದ ಮೂಲಕ್ಕಾಡುವುದು ನಡೆದು ಬಂದ ಪರಂಪರೆ. ಶ್ರೀ ಗಿರಿಯವರೂ ಈ ಪರಂಪರೆಗೆ ಹೊರತಲ್ಲ.

"ಪ.ನ.ಸ್ಯ—ಮನುಷ್ಯರ ನಡುವಣ ತೀವ್ರ ಅಸಮಾನತೆಯನ್ನು ಹೋಗಲಾಡಿಸಬೇಕು; ಇದಕ್ಕಾಗಿ ಶಿಸ್ತಿನಿಂದ ದುಡಿಯಬೇಕು. ಈ ಉದ್ದೇಶ ನಾನು ಮಾಡಿದ್ದಾಗಿದ್ದರೆ, ಪ್ರಜಾಸತ್ತೆ ಯು ಸಿದ್ಧಿಬೀಳುವುದು. ಅದುದರಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಫಿಪ್ಪೆಯಿಂದ ಪರಿಶ್ರಮಿಸಬೇಕು. ದೇಶದ ಐಕ್ಯತೆಗಾಗಿ ಸದಾಕಾಲ ಜಾಗ್ರತರಾಗಿರಬೇಕು.

ಇದು ನಮ್ಮ ಹೊಸ ತಾಗಿ ಚುನಾಯಿತರಾದ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರ ಸಂದೇಶ ಸಾರ. ಪ್ರಜಾಸತ್ತೆಯ ಯಶಸ್ವಿಗಾಗಿ ಐಕ್ಯಭಾವದಿಂದ ದುಡಿದು, ದೇಶದಲ್ಲಿನ ಅಸಮಾನತೆಯ ತಾಂಡವ ನೃತ್ಯವನ್ನು ಕಡಿಮೆ ಮಟ್ಟಬೇಕೆಂಬುದೇ ಈ ಸಾರದ ಸಾರಾಂಶವನ್ನು ಬಹುದೊಡ್ಡ ದೇಶದ ಇಂದಿನ ಸಾರ್ವತ್ರಿಕ ಸಮಸ್ಯೆ-ಪ್ರಶ್ನೆಗಳನ್ನು ಗಮನಿಸಿಯೇ ನೂತನ ರಾಷ್ಟ್ರಪತಿಗಳ ಈ ಉದ್ಗಾರ ಹೊರಟಿದೆಯೆಂದರೆ ಅತಿಶಯೋಕ್ತಿಯಲ್ಲ. ರಾಷ್ಟ್ರಪತಿ ಸ್ಥಾನದಿಂದ ದೇಶಕ್ಕೆ ಸಂದೇಶ ನೀಡುವಾಗ ಈ ಬಗೆಯ ಉನ್ನತ ಚಿಂತನೆ ಸಹಜ ಮತ್ತು ಸ್ವಾಭಾವಿಕ.

ಭಾರತ ಪ್ರಜಾರಾಜ್ಯವಲ್ಲಿ ರಾಜ್ಯಕೀಯ ಪಕ್ಷಗಳ ಒಳಿತು ಕೆಟ್ಟ ಸಾಗಿ ಬೆಳೆದಿರುವಷ್ಟು ಮಹತ್ವವ ಬೆಳೆಯೂ ಬೆಳೆದಿಲ್ಲ. ಮುಂದಿನ ವರ್ಷದಿಂದ ದೇಶ ಆಹಾರ ಧಾನ್ಯಗಳ ನಿರ್ಯಾತ ಮಾಡಲು ಬಿಡಿಲ್ಲವೆಂಬ ಸರಕಾರದ ನಿರ್ಧಾರಕ್ಕೆ ಆ ವಿಷಯದಲ್ಲಿ ನಾವು ಸ್ವಾವಲಂಬಿಯಾಗಿದೆ ವೆಂದು ಅರ್ಥಕಟ್ಟಿಕೊಳ್ಳಬಹುದಾದರೆ, ನಾವು ಯಶಗಳಿಸಿದೆವೆಂದೇ ಹೇಳಬೇಕು. ಆದರೆ, ಫಲಿಗೆ ರಾಜ್ಯಕೀಯ ಪಕ್ಷಗಳ ಸಂಖ್ಯಾಬಲದಲ್ಲಿ ಕೃಷ್ಟಿಯಿ ನ್ನೂ ಆದಂತಿಲ್ಲ. ನ ಯಿ.ಕೊಡೆಗಳಂತೆ ಈ ಪಕ್ಷಗಳ ಸಂಖ್ಯೆ ಇರುಳು ಹಗಲಾದಂತೆ ಏಚ್ಚತ್ತ ಬಂದಿದೆ. ಹಬವಾರು ರಾಜ್ಯಗಳಲ್ಲಿ ಅಧಿಕಾರಾರೂಢ ಸರಕಾರಗಳು ಜನಹಿತ ಕಾರ್ಯಗಳಲ್ಲಿ ಅಸಹಾಯಕವಾಗಿರುವುದಕ್ಕೆ ಇದೇ ಮುಖ್ಯ ಕಾರಣವೆನ್ನಬೇಕು. ಅಧಿಕಾರದಾಹ ನೊದಪೊದಲಿಗೆ ಕಾಂಗ್ರೆಸ್ಸಿನ ಜನ್ಮಸಿದ್ಧ ಹಕ್ಕೆಂದು ದೂರದನಂತೂ ಅಧಿಕಾರ ರಕ್ಷಣೆಗಾಗಿ ಶತ್ರುಪಕ್ಷಗಳನ್ನು ಒಲಿ ಕ್ಕಿಡಿಯೂದರೂ ಕುರ್ಚೀತ್ಯ ಮಾಡುತ್ತಿದೆಯೆಂದವರೂ ಇಂತಹ ಅರೋಪಗಳಿಂದ ಈವ ಮುಕ್ತರಾಗುವಂತಿಲ್ಲ. ತನ್ನನ್ನು ಮೇಲಕ್ಕೆ ತಂದ, ತನ್ನನ್ನು ಉಸ ರಾಷ್ಟ್ರಪತಿ ಸ್ಥಾನಕ್ಕೆ ಆರಿಸಿದ ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿಯನ್ನಷ್ಟೆ ಎಸುರು ವಷ್ಟು ಶ್ರೀ ಗಿರಿಯವರೇ ಮುಂದುವರಿದು ಹೋಗಬಹುದಾಗಿ, ಅವರಿಗೂ ಅಧಿಕಾರದ ರುಚಿಯಿಂದ ದೂರವಾಗುವ ಆಶಯವಿಲ್ಲವೆಂದು ಹೇಳಬಹುದು. 'ನಾನೇ ಕೆ ನಿಷ್ಪಕ್ಷಪಾತಿಗಬೇಕು?' ಎಂಬ ದೊಡ್ಡ ಸವಾಲನ್ನೇ ವಿಂದೂಡಿದ್ದರು ಈ ದೊಡ್ಡ ವ್ಯಕ್ತಿ.

ತನ್ನ ಬಗ್ಗೆ ಕೆಲವರು ತಳೆದಿರುವ ಅಭಿಪ್ರಾಯ ಸುಳ್ಳು; ತನ್ನಲ್ಲಿ ದೇಶದ ಐಕ್ಯತೆಗಾಗಿ, ಪ್ರಜಾಸತ್ತೆಯ ಯಶಸ್ಸಿಗಾಗಿ, ಸಮಾನತೆಗೆ ಹೋರಾಡುವ ಶಕ್ತಿಯಿದೆಯೆಂದು ಶ್ರೀ ಗಿರಿಯವರು ತಿಳಿದುಕೊಂಡಿದ್ದಾರೆ. ತನ್ನ ಶಕ್ತಿಯು ಮೇಲೆ ಪ್ರತಿಯೊಬ್ಬರಿಗೂ ಸಂಪೂರ್ಣ ವಿಶ್ವಾಸವಿದ್ದೇ ಇರುತ್ತದೆ. ಆಧಾವವಿರುವುದೆಂದರೆ, ದಾರ್ಬಲ್ಯಗಳ ಪ್ರಜ್ಞೆ ಮಾತ್ರ. ಶ್ರೀ ಗಿರಿಯವರಲ್ಲಿ ಹೆ.ನ್ಮಸ್ಸು ಇದೆ. ತನ್ನ ಶಕ್ತಿಯು ಮೇಲೆ ಅನಾಧಾರಣ ವಿಶ್ವಾಸವಿಸಿ, ಕಾಂಗ್ರೆಸ್ಸು ವಹಿಸಿದ ಒಂದು ತಪ್ಪನ್ನ ತಿದ್ದುವುದಕ್ಕಾಗಿಯೇ, ಪ್ರಜಾಸತ್ತೆಯ ಉಳಿವಿಗಾಗಿಯೇ ತಾನು ಸ್ಪರ್ಧಿಸಿದ್ದೆಂದು ಡಾ ನಾಡಂಗುರವಾಗಿ ಘೋಷಿಸಿದ್ದಾರೆ.

ಇಂದು ಶ್ರೀ ಗಿರಿಯವರು ದೇಶದ ಸಾಂವಿಧಾನಿಕ ಒರಿಯರು. ವೈಧಾನಿಕ ಮುಖ್ಯಸ್ಥರು. ಅದುದರಿಂದ ಅವರು ಯಾವ ಬೆಂಬಲವನ್ನೇ ಪಡೆದಿರಲಿ, ಅವರು ಎಲ್ಲರವರು. ಹಿಂದೆ ನಡೆದ ದುರಂತವನ್ನ ಮರೆತು, ಮುಂದಿನ ವರ್ಷಂತವನ್ನು ಕಾಣುವುದು ಅಗತ್ಯ. ಶ್ರೀ ಗಿರಿಯವರು ರಾಷ್ಟ್ರಪತಿಪೂಗಿರುವ ಸಮಯದಲ್ಲಿ ತನ್ನ ಸರಕಾರವು ಅಸಮಾನತೆಯನ್ನು ಸಮಾನತೆಯುತ್ತ, ಸಂಕುಚಿತತೆಯನ್ನು ವಿಶಾಲತೆಯುತ್ತ, ಚಂಚಲ ನಿಷ್ಠೆಯನ್ನು ಅಚಲ ನಿಷ್ಠೆಯುತ್ತ ಕೊಂಡೊಯ್ದು, ದೇಶದ ಸರ್ವಾಂಗೀಣ ಉನ್ನತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮಾಡುವರೆಂಬ ಜನತೆ ನಂಬಿಕೆ. ಈ ನಂಬಿಕೆಯನ್ನು ಸತ್ಯವಾಗಿಸುವ ಶಕ್ತಿಯೂ ಕೆಚ್ಚೂ ತನಗಿದೆಯೆಂಬುದನ್ನ ಅವರು ತನ್ನ ಪ್ರಥಮ ಸಂದೇಶದಲ್ಲಿ ಜನತೆಗೆ ವಂದಿಸಿ ಮಾಡಿದ್ದಾರೆ.

ದೇಶದ ಪ್ರಚಲಿತ ಅರ್ಥವ್ಯವಸ್ಥೆಯು ತೀವ್ರ ಅಸ್ವಸ್ಥವಾಗಿದೆ ಇದರ ಪರಿಣಾಮವಾಗಿಯೇ ಮೂರು ಯೋಜನೆಗಳು ಮಟ್ಟಕ್ಕಾಯ ಗೊಂಡ ಮೇಲೂ ಆರ್ಥಿಕ ಅವ್ಯ

(ಎಂಟನೇ ಪುಟ ನೋಡಿರಿ)

ದಿ॥ ಪ್ರಧಾನಿ ಮಂತ್ರಿ ಜವಾಹರಲಾಲ ನೆಹರೂರವರು ಜಪಾನಿಗೆ ಕಾಣಿಕೆಯಾಗಿ ಕೊಟ್ಟ "ಇನಿರಂ" ಆನೆಯು ಹುಲ್ಲನ್ನು ಎಳೆಯುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಉಚ್ಚ ಶಿಕ್ಷಣ

ಲೇಖಕರು :
ಶ್ರೀ ಬಿ. ನರಸಿಂಗರಾವ್, ಕಾಸರಗೋಡು.

ದಿವಂಗತ ವೆಂಕಪ್ಪ ಭಟ್ಟರ ವೈಶಿಷ್ಟ್ಯ ವೆಂದರೆ ನವಮ್ಮೂರಿನಲ್ಲಿ ಕಳೆಯುದು. ಅನಂತನನ್ನು ನಮ್ಮೂರಲ್ಲಿ ಬಲ್ಲವರಿಲ್ಲ; ಭಾರೀ ಆರ್ಭಟ ಶ್ರೀಮಂತರಾಗಿದ್ದರು. ಎಲ್ಲ ಕ್ಕೂ ಮಿಗಿಲಾಗಿ ಅವರ ಏಕೈಕ ಪುತ್ರ ಡಾ। ಕೇಶವ ಭಟ್ಟರು ನಮ್ಮೂರಲ್ಲಿ ಹೆಸರಾಂತ ಡಾಕ್ಟರು. ಕೇಶವ ಭಟ್ಟರು ಕಲಿತದ್ದೇನೋ ಎಲ್.ಎಮ್.ಪಿ. ಆದರೂ "ಅವರ ಕೈಗುಣಾಂದ್ರೆ ಕೈಗುಣ ಕಣ್ರೀ. ಅವರಷ್ಟು ಆಮೃತ ಹಸ್ತ" ಎಂದು ನಮ್ಮೂರ ಜನರಾಡಿಕೊಳ್ಳುತಿದ್ದರು. ನನ್ನ ಅನುಭವ ಕೂಡಾ ಅದೇ ಆಗಿತ್ತು. ಅವರನ್ನು ಸಂದರ್ಶಿಸದ ರೋಗಿಗಳೇ ನಮ್ಮೂರಲ್ಲಿ ಇಲ್ಲವೇನೋ.

ಡಾ॥ ಕೇಶವ ಭಟ್ಟರು ಬಹಳ ಉದಾರಿ. ಸಲ್ಸ ನೋಡುವ ಮೊದಲೇ ಪರ್ಸ್ ನೋಡುವ ಇಂದಿನ ಡಾಕ್ಟರರ ದೂರದೃಷ್ಟಿ ಅವರಿಗಿಲ್ಲ! ಬಡವ—ಶ್ರೀಮಂತ ಎಂಬ ಭೇಧವಿಲ್ಲ. ಬಡವ ನಾಲ್ಕು ಕಾಸು ಕೊಟ್ಟರೂ ಔಷಧ ಕೊಡುವೇ ನೀಡುತ್ತಾರೆ, "ಏನ್ರಿ ಯಾವಾಗ್ಲಾದ್ರೂ ಚುಕ್ತಾ ಮಾಡ್ತಾ?" ಅನ್ನುತ್ತಾ.

ಶ್ರೀಮಂತರಲ್ಲಿ ಹೃದಯವಂತ ಶ್ರೀಮಂತರು ಇರುವವರು ವಿರಳ. ಅವರಲ್ಲಿ ಕೇಶವ ಭಟ್ಟರು ಅಗ್ರಗಣ್ಯರು.

ಕೇಶವ ಭಟ್ಟರ ಮನೆ ನಮ್ಮ ಮನೆಯಿಂದ ಕೂಗಳತೆಯಷ್ಟು ದೂರ. ಕೇಶವ ಭಟ್ಟರದು ಸಂಪ್ರದಾಯವಾದೀ ಹವ್ಯಕರ ವೈಕರಣ. ಅವರ ಮೂರು ಮಕ್ಕಳನ್ನು ಕಿರಿಯವನೇ ಗಂಡು, ಹೆಸರು ಸುಬ್ರಾಯ. ಸುಬ್ರಾಯನೂ ನಾನೂ ಚಿಕ್ಕಂದಿನಲೇ ಗೆಳೆಯರು. ನಾವಿಬ್ಬರೂ ಒಂದಿಗೆ ಶಾಲೆಗೆ ತೆರಳುವುದು. ನಾನೋ ಒಂದು ಹರಕಲು ಚಡ್ಡಿ, ತೇಪೆ ಹಚ್ಚಿದ ಶರ್ಟ್ ಧರಿಸಿದ್ದೆ. ಸುಬ್ರಾಯ ಆಗಲೇ ಲೇಟ್ -ಬೂಟು ಧರಿಸುತಿದ್ದ. ಆದರೂ ಜಂಭದ ಕೋಳಿಯೂಗಿಲ್ಲ. ನಮ್ಮೊಂದಿಗೆ ಸಲೀಸಾಗಿ ಮೈತ್ರಿಯಿಂದ್ದ. ಆಗಾಗ ನಾನು ಕೇಶವ ಭಟ್ಟರಷ್ಟಿಗೆ ತೆರಳುವುದುಂಟು. ಅಪ್ಪ ಅವರು "ನಿನಪ್ಪ, ಹೇಗಿದ್ದಿ? ಏನ್ಮಾಡ್ತಾ ಕ್ಲಾಸಲ್ಲಿ ತಂಟೆ-ತಿಂಟೆ ಮಾಡ್ತಾನಾ?" ಅನ್ನುತಿದ್ದಾರ ನಾನು ನಗುತ್ತಾ, 'ಇಲ್ಲ" ಎಂದಷ್ಟೆ ಅನ್ನುತಿದ್ದೆ.

ಂ ಂ ಂ

ನಾನೂ, ಸುಬ್ಬಣ್ಣನೂ ವಿ ಟ್ರಿಂ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡಿದ್ದೆವು. ಅಂದು ಸುಬ್ಬಣ್ಣನ ಮನೆಯಲ್ಲಿ ನಾನು ಔತಣಕ್ಕೆ ಆಮಂತ್ರಿತನಾಗಿದ್ದೆ. ಜಾತಿಯಲ್ಲಿ ನಾನು ಕೀಳಾದರೂ ಒಂದೇ ಕಡೆ ಕುಳಿತು ಉಂಡೆವು, ಅದು ಸುಬ್ಬಣ್ಣನ ತಾಯಿಗೆ ಹಿಡಿಸಲಿಲ್ಲ ಎನ್ನಿ? ಆದರೆ ಸುಬ್ಬಣ್ಣನಿಗೆ ಹಾಗೆ ಮಾಡದಿದ್ದರೆ ಊಟವೇ ಸೇರುತ್ತಿರಲಿಲ್ಲ.

ನಾನು ನಮ್ಮೂರ ಸರಕಾರೀ ಶಾಲೇ ಜನ್ನು ಸೇರಿದಾಗ ಸುಬ್ಬಣ್ಣ ಭಟ್ಟ ಉಡುಪಿಗೆ ತೆರಳಿದ—ಮೆಡಿಕಲ್ ಕಲಿಯುವ ಉದ್ದೇಶವಿರಿಸಿ. ನನ್ನಪ್ಪ ಬಿಟ್ಟು ತೆರಳಲು ಎಳ್ಳಷ್ಟೂ ಮನಸ್ಸು ಬಾರದೆ ಅಳುಮೋರೆಯಿಂದಲೇ, ನಪ್ಪನ್ನು ಬೀಳ್ಕೊಂಡ; ವಾರಕ್ಕೆರಡು ಪತ್ರಗಳಾದರೂ ಫನಗೆ ಬರೆಯು ವುದಾಗಿ ವಾಗ್ದಾನವಿತ್ತ.

ರಜೆಯಲ್ಲಿ ಸುಬ್ಬಣ್ಣ ಊಗೆ ಬಂದಾಗ ನನ್ನ ಮನೆಗೆ ದಿನವೂ ಬಂದು, ಕಳೆದ ಶಾಲಾದಿನಗಳನ್ನು ಮೆಲುಕು ಹಾಕಿ, ಅದರ ಮೋಜನ್ನು ನವಿಯಲು ಮತ್ತೆ ಹಾತೊರೆಯುತಿದ್ದ. ಆಗ ನನಗೂ ಹೃದಯ ತುಂಬಿಬರುತಿತ್ತು.

ಂ ಂ ಂ ಂ ಂ

ಕಾಲೇಜು ಶಿಕ್ಷಣ ಮುಗಿಸಿ ನಾನತ ಗಣಿತದಲ್ಲಿ ಪದವಿ ಗಿಟ್ಟಿಸಿ ಹೊರಬಿದ್ದಾಗ, ಏನೋ ಪೂರ್ವ ಪುಣ್ಯಾದಿಂದ ಬ್ಯಾಂಕ್ ನೌಕರಿ ಗಿಟ್ಟಿಸಿದೆ. ಇನ್ನೈರವು ವರ್ಷ ಕಳೆದರೆ ಸುಬ್ಬಣ್ಣನ ಹೆಸರಿನ ಮುಂದೆ 'ಡಾ।' ಸೇರಿಸಬೇಕು.

ಸುಬ್ಬಣ್ಣನಿಗೆ ನನ್ನೊಡನಿರುವ ಸ್ನೇಹ ಪೂರ್ವ ಇನ್ನೂ ಗಾಢವಾಗಿ ಬೇರೂ ಬಿಟ್ಟಿತ್ತು. ಅಗಲುವಿಕೆಯಲ್ಲೇ ಸ್ನೇಹದ ಸವಿಯಿದೆ!

ಡಾ। ಕೇಶವ ಭಟ್ಟರು ಈಗ ಐವತ್ತರ ಹರೆಯದಲ್ಲಿದ್ದರು. ಮಡದಿ ಡಾಕ್ಟರ್ ಆಗಿ ಬಂದಾಗ ತಂದೆಯು ಸಂತೋಷವೋ ಹೇಳಲಸಳ. ತನ್ನ ವಂಶದ ಕೀರ್ತಿ ಈಯ್ದುಕೊಳ್ಳುವ ಮಗನನ್ನು ತಾನು ಪಡೆದೆಫಲ್ಲಾ ಎಂಬ ಜೆಮ್ಮೆ ಅವರದಾಗಿತ್ತು. ಅದು ಸ್ವಾಭಾವಿಕವೇ.

ಸುಬ್ಬಣ್ಣನು ಡಾಕ್ಟರ್ ಸುಬ್ರಾಯ ನಾದ ಬಗ್ಗೆ ಅವನ ಮನೆಯಲ್ಲಿ ಭಾರೀ 'ಡಿನ್ನರ್'ವ ಏರ್ಪಾಡಾಗಿತ್ತು. ನನಗಂತೂ ಆಮಂತ್ರಣ, ಶ್ರದ್ಧವಾಗಿ, ಸುಬ್ಬಣ್ಣನೇ ಬಂದು ನೀಡಿದ್ದ. ನಿಶೆಯ ನೀನು, ಹಗಲೆಯ ನಾನು!

ಇತರ ಊರ ಮಹನೀಯರೂ—ಹಳೆಯ ರೋಗಿಗಳು!—ಔತಣ ಕೂಟದಲ್ಲಿ ಏಕಲೆಕ್ಕಿಗಂಡಿದ್ದರು. ಸುಬ್ಬಣ್ಣನ ಬಲ ಬದಿರುಳ್ಳಿ ನಾನು, ಕಳಿತಿದ್ದರೆ, ಎಡಗಡೆ ಕೇಶವ ಭಟ್ಟರು ಆಸೀನರಾಗಿದ್ದರು.

ಊಟದ ನಡವೆ ಕೇಶವ ಭಟ್ಟರು ಹೆಮ್ಮೆಯಿಂದ ನನ್ನೆಡೆನೆಂದರು 'ನೋಡಪ್ಪಾ, ಫವ್ಯಸುಬ್ಬಣ್ಣನಿಗೆ ಇನ್ನು ನನ್ನ ಶಾಪು ಕಾಯಮ್, ಇಲ್ಲೇ ಇನ್ನು ಪ್ರಾಕ್ಟೀಸ್!" ಆಗ ನಾನು 'ಅಪ್ಪನಂತೆ ಮಗನೂ ಕೂಡಾ ಕುಲಕ್ಕೆ ಕೀರ್ತಿ ತರಬೇಕಲ್ಲ ಮತ್ತೆ?" ಅಂದೆ ಧಡಬತ್ತಾ. ಆದರೆ ಆಗ ಸುಬ್ಬಣ್ಣ ಏನಾಶ್ರ ಹೆಲ್ಲು ಕಿರಿದುದೆ, ಗಂಭೀರನಾಗಿ ನುಡಿದ— "ನೋಡಪ್ಪಾ, ನನಗೀಗ ಇಪ್ಪತ್ತೈದರ ಹರೆಯ. ನೀವಂತೂ ಐವತ್ತು ವಿರೂದ್ದೀರಿ, ಅಪ್ಪೆ .ನಾನು ಈ ಚಿಕ್ಕ ವಾಯದಲ್ಲೆ ವಿದ್ಯೆಗೆ ವಿರಾಮ ಹಾಕುವುದು ಸರಿಯೆ? ಬಿದೇಶಕ್ಕೆ ತೆರಳಿ ಎಮ್. ಡಿ. ಪೂರೈಸಬೇಕೆಂದಿದ್ದೇನೆ. ರೋಟರಿ ಸ್ಕಾಲರ್‌ಶಿಪ್ ಸಿಗೋಭ ನ್ಸ್ ಇದೆ ...." ಸುಬ್ಬಣ್ಣ ಖಡಾಖಂಡಿತವಾಗಿ ನುಡಿಯುತ್ತಾ ನನ್ನ ಹಾಗೂ ತನ್ನ ತಂದೆಯ ಮುಖವನ್ನು ನೋಡಿದ. ತಂದೆಯ ಮೊಕನ್ನು ವಿೂರಿದ ಸುಬ್ಬಣ್ಣನ ನಡವಳಿಕೆ ನನಗಂತೆ ಹಿಡಿಯಲಿಲ್ಲ. ಆದರೂ ನಗುತ್ತಾ ನಾನೆಂದೆ—"ಫೋಡು ಸುಬ್ಬಣ್ಣಾ, ವೈನ್ಯಕೀಯವೆಂದರೆ ಕಲಿತಷ್ಟೂ ಇದೆ. ಅನುಭವಕ್ಕಿಂತಲೂ ಮಿಗಿಲೇನು ಎಮ್. ಡಿ. ಊರಲ್ಲಿ ಇದ್ದು ಪ್ರಾಕ್ಟೀಸ್ ಮಾಡಂತೆ.'

ಈಗ ಸುಬ್ಬಣ್ಣ ನನ್ನ ಮೇಲೆ ರೇಗಿದಂತೆ ತೋಚಿತು—ನಾನೂ ತನ್ನ ತಂದೆಯು ಪಕ್ಷ ವಹಿಸುತಿದ್ದೇನಲ್ಲಾ ಎಂದು. ಆಷ್ಟಾನುವಾಗ ಇತರ ಆತಿಥಿಗಳು ಕೇಶವ ಭಟ್ಟರ ಪಕ್ಷ ವಹಿಸಿದಾಗ ಸುಬ್ಬಣ್ಣ ಮೂಕ್ರ ರಕ್ಷಿಸಿಕ್ಕಿಹಾಗೂ ಬಿಟ್ಟ.

ಆಷ್ಟಾಗುತ್ತಲೆ ಔಣವು ಮುಗಿದು ನಾನು ಮನೆಯತ್ತ ತೆರಳಿದೆ. ಸುಬ್ಬಣ್ಣನೂ ನನ್ನನ್ನು ಹಿಂಬ ಲಿಸಿದ. ಆಗ ನಾನು ಸುಬ್ಬಣ್ಣನೊಡನೆ-"ಸುಬ್ಬಣ್ಣಾ, ತಂದೆಯು ಮೊಕನ್ನು ವಿೂರುವುದು ಸರಿಪಲ್ಲ ....ಉಚ್ಚ ಶಿಕ್ಷಣ ಇನ್ನಾವಾಗಾದರೂ ಮಾಡಂತೆ..." ಎಂದುಸುರಿದೆ.

"ಇಷ್ಟಾವಾಗಾದ್ರೂ ಅಂದ್ರೆ? ರೆಕ್ಕೆ ಬಿಸಿ ಇರೋವಾಗ್ಲೆ ಮಹತ್ವಾಕಾಂಕ್ಷೆ ಕಣೋ ಕಬ್ಬಿಣ ತಾದಾಗಲೇ ಹೊಡೀಬೇಕು ಅಂತಾಂಲ್ಲೆ ಇವತ್ತು ಕಲಿಯುದಿದ್ದರಿ ನಾಳೆ ಮತ್ತೆ ಅದೆಲ್ಲಾ ಎಲ್ಲಿ ನೆಂಪ್ಕ?" ಸುಬ್ಬಣ್ಣ ಒಂದೇ ಉಸುರಿಗೆ ನುಡಿದ.

'ಆದೂ ಹೌದು....ನಿನಿಸ್ಟ ಬಂದಂತೆ ಮಾಡು'.

'ತಂದೆಯವರಲ್ಲಿ ನಾಪೊಂದು ವಿಷಯ ಬೇಡುವುದಿಲ್ಲ .. ರೋಟರಿ ಸ್ಕಾಲರ್‌ಶಿಪ್ ನಿನೋದು ಗ್ಯಾರಂಟಿ ...ಗಾಲ್ಡನ್ ಒಪರ್ಚ್ಯುನಿಟಿ....ಕ್ಯಾಲಿಫೋರ್ನಿಯಾದಲ್ಲಿ ಎರಡು ವರ್ಷದ ಕೋರ್ಸ್....ಮತ್ತೆ ಊರಲ್ಲಿ ಪ್ರಾಕ್ಟೀಸ್ ಮಾಡೋಣ."

"ಅದೆಲ್ಲಾ ಸರಿ...ವಿದೇಶ ಪ್ರವಾಸ ಅಂತೀಳಿ ಮತ್ತೆ ಸ್ವದೇಶವನ್ನೆ ಮರೆತೀಯೋ ಅಪ್ಪ, ನಿನ್ನನ್ನೆ ಮರೆತುಬುಟ್ಟೀಯೂ....?"

"ಛೆ ಛೆ..ಇಂಪಾಸಿಬ್ಲ್....ಎಲ್ಲಂತೂ? ನಾವಿಬ್ಬರೂ ದೇಹದೆಡಾದರೂ ಆತ್ಮ ಪೊಂದೆ ತಂತಿರಲ್ಲ, ಹಗೆ..."

"ಅಂದ್ರೆ ನೀನು ಹೋದೋದಂತೂ ಗ್ಯಾರಂಟಿ'

"ಹೌದು! ನಾಳೆಯೇ ವಿಮಾನಲಕ್ಕೆ ಹೋಗ್ತೀನಿ.... ಎರೆಂಜ ಮೆಂಟ್ ಎಲ್ಲಾ ಮಾಡಿದ್ದೀನಿ ... ತಂದೆಯವ್ರನ್ನ ಹೇಗಾದ್ರೂ ಸುಲಾಯಿಸೊ ಹೊಂದೇ ಬ.ತಿ."

'ಹಾಗಾದ್ರೆ ನಾವಿಷ್ಟು ಕಾಣುವುದು?'

"ಎರಡು ವರ್ಷಗಳ ಬಳಿಕ" ಎಂದವನೇ, ಕಣ್ಣೀರಿಳಿಸುತ್ತಾ, ಸುಬ್ಬಣ್ಣ ತೆರಳಿದ.

ಂ ಂ ಂ

ಮರುದಿನ ಸಂಜೆ ಡಾ। ಕೇಶವ ಭಟ್ಟರನ್ನು ಅಕಸ್ಮಾತ್ ರಸ್ತೆಯಲ್ಲಿ ನಾನು ಸಂಧಿಸಿದಾಗ ಪ್ರಶ್ನಿಸಿದೆ — "ಸುಬ್ಬಣ್ಣ ಹೋದನೆ?'

'ಹಾದಾದು ಹೋಗಲಿ ಇವ್ವರ ಕನಸು ಕಲೆಸಿ, ಚಲಿಸಿ, ಇನ್ನು ಅಪ್ಪನ ಋಣ

(ಪನ್ನೊಂದನೇ ಪುಟ ನೋಡಿರಿ)

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526 1921 ಸ್ಥಾಪನೆ

ಸಂಪುಟ ೪೯
ಸಂಚಿಕೆ ೧
VOL. 49
No. 1

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೪—೯—೧೯೬೯

ಸ್ಥಾಪಕರು:
ದಿ| ವಿ. ಬಿ. ಶೆಟ್ಟರು
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಉಪರಾಷ್ಟ್ರಪತಿ

ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಶ್ರೀ ಗೋಪಾಲ ಸ್ವರೂಪ ಪಾಠಕರಿಗೇನೇ ಪ್ರಥಮ ಪ್ರಾಶಸ್ತ್ಯ ಮತ ಕೀಡಬೇಕು, ದ್ವಿತೀಯ ಪ್ರಾಶಸ್ತ್ಯಮತ ಯಾರಿಗೂ ಕೀಡಬಾರದು—ಇದು ಸಂಸತ್ತಿನ ಪಾರ್ಲಿಮೆಂಟರಿ ಕಾಂಗ್ರೆಸ್ ಪಕ್ಷದ ಅಧೀಕ್ಷ. ಇಂಥಹ ಆದೇಶ ರಾಷ್ಟ್ರಪತಿ ಚುನಾವಣೆಗೆ ಪೂರ್ವಭಾವಿಯಾಗಿ ಅಲ್ಲಿಂದ ಹೊರಟಿಲ್ಲ. ಅದು ಆತ್ಮರಕ್ಷಣೆಯ ಚುನಾವಣೆ; ಇದು ಪಕ್ಷೇತರ ಚುನಾವಣೆ. ಸಂಸತ್ತಿನಲ್ಲಿ ಇಂದು ಕಾಂಗ್ರೆಸ್ ಸದಸ್ಯರಿಗಿಂತ ಹೆಚ್ಚು ಸದಸ್ಯರಿದ್ದಾರೆ. ಶ್ರೀ ಪಾಠಕರಿಗೆ ಬಿದ್ದದ್ದು ಬರಿಯ ೯೦೦ ಮತ ಮಾತ್ರ. ಉಳಿದವರಿಗಿಂತ ಅರ್ಧಾಂಶದಷ್ಟು ಮತವನ್ನೇ ಚಲಾಯಿಸಲಿಲ್ಲ; ಉಳಿದವರು ಪ್ರಾಯಃ ಮತ ಸ್ವಾಸ್ಥ್ಯವನ್ನು ಗುಂಪನ್ನು ಸೇರಿರಬೇಕು.

ಶ್ರೀ ಜಿ. ಎಸ್ ಪಾಠಕರು ಪ್ರಚಂಡ ಬಹುಮತದಿಂದ ಭಾರತದ ಉಪರಾಷ್ಟ್ರಪತಿಗಳಾಗಿ ಆಯ್ಕೆಯಾದರು; ಕರ್ನಾಟಕದ ರಾಜ್ಯಪಾಲ ಪದವನ್ನು ತ್ಯಜಿಸಿ ಹೊಸ ಪದವಿಯನ್ನು ಅಲಂಕರಿಸಿದರು. ಇವೀಗ ರಾಷ್ಟ್ರಪತಿಯಾಗಿರುವ ಶ್ರೀ ವಿ. ವಿ. ಗಿರಿಯವರೂ ತಾನು ಉಪರಾಷ್ಟ್ರಪತಿಯಾಗುವುದಕ್ಕೆ ಮೊದಲು ಕರ್ನಾಟಕದ ರಾಜ್ಯಪಾಲರಾಗಿದ್ದರೆಂಬುದನ್ನು ಹೆನೆಯಬಹುದು.

೭೦ ವರ್ಷ ಪ್ರಾಯದ ಶ್ರೀ ಗೋಪಾಲ ಸ್ವರೂಪ ಪಾಠಕರು ಸ್ವಾತಂತ್ರ್ಯಪೂರ್ವ ಕಾಲದಲ್ಲೇ ದೇಶವ್ಯಾಪಿ ಕೀರ್ತಿಗಳಿಸಿದವರು. ಅಲ್ಲಹಾಬಾದಿನ ಉಚ್ಚ ನ್ಯಾಯಾಲಯದ ಪ್ರೌಢ್ಯ ವಕೀಲರೆಂದು ಅವರು ಜನಾಂತರ. ೧೯೫೪ರಲ್ಲಿ ಇವರ ಕಾರ್ಯಶಕ್ತಿ ಪ್ರಜ್ಞೆಯ ಪ್ರಭಾವ ಅಂದಿನ ಪ್ರಧಾನಿ ಶ್ರೀ ನೆಹರುರವರ ಮೇಲೆ ಬಿತ್ತು. ಅನಂತರ ಕಾಶ್ಮೀರದ ಹೊಸಹೊಂದು ಸಮಸ್ಯೆ ಸಮಸ್ಯಾಜಾಲದಲ್ಲಿ ಸೇರಿಹೋಯಿತು. ಈ ಸಮಸ್ಯೆಗೆ ಶ್ರೀ ಪಾಠಕರು ಕಾರ್ಯರೂಪ ಸಲಹೆಗಾರರಾದರು. ವಿಶ್ವಸಂಸ್ಥೆಯಲ್ಲಿ ಭಾರತದ ಪರವಾಗಿ ವಾದ ಮಾಡಿದರು. ಶ್ರೀ ನೆಹರುರೊಂದಿಗೆ ಲ್ಯಾಟಿನ್ ಅಮೆರಿಕದೂ ಇವರು ಹೋಗಿದ್ದರು. ಶ್ರೀ ನೆಹರುರವರ ವಿಶ್ವಾಸ ಇವರಲ್ಲಿ ಬಲವಾಗಿ ಮೂಡಿತ್ತು. ಅಂತಲೇ ೧೯೬೦ರಲ್ಲಿ ರಾಜ್ಯಸಭಾ ಸದಸ್ಯತೆ ಲಭಿಸಿ ಹತ್ತಾರು ಪಾರ್ಲಿಮೆಂಟರಿ ಸಮಿತಿಗಳ ಸದಸ್ಯರಾದರು. ಶ್ರೀಮತಿ ಇಂದಿರಾ ಗಾಂಧಿಯವರು ತನ್ನ ಮೊದಲ ಸಂಪುಟದಲ್ಲಿ ಇವರನ್ನು ಕಾನೂನು ಸಚಿವರಾಗಿ ನೇಮಿಸಿದರು. ಶ್ರೀ ಗಿರಿಯವರು ಉಪರಾಷ್ಟ್ರಪತಿಯಾದ ಬಳಿಕ ಕರ್ನಾಟಕದ ರಾಜ್ಯಪಾಲರಾಗಿ ಶ್ರೀ ಪಾಠಕರ್ ಬಂದರು. ಕನ್ನಡವನ್ನು ಕಲಿತು ಸಾಲ್ಯು ಮುಂದರ ಮೊಹರಿಗಳನ್ನು ಕನ್ನಡದಲ್ಲಿ ಓದುವುದಕ್ಕೂ ತೊಡಗಿದ ಶ್ರೀ ಪಾಠಕರ್ ಕನ್ನಡಿಗರು ಮೆಚ್ಚುಗೆಯನ್ನು ಪಡೆದಿದ್ದಾರೆ.

ಶ್ರೀ ಪಾಠಕರದ್ದು ಉನ್ನತ ಆದರ್ಶ ವ್ಯಕ್ತಿತ್ವ; ಎತ್ತರದ ಚಿಂತನೆ; ದೇಶದ ಐಕ್ಯ, ಸಾಮಾಜಿಕ ನ್ಯಾಯಗಳ ಪ್ರಬಲ ಸಮರ್ಥನೆ. ಕರ್ನಾಟಕದಲ್ಲಿ ಉತ್ತರಪ್ರದೇಶ ಎನ್ನಾಗಿರುವುದು ಸರಿಯಲ್ಲವೆಂದು ಅವರು ಕನ್ನಡಿಗರೇ ಆದರು. ಆದುದರಿಂದ ಅವರ ಬಗ್ಗೆ ಕನ್ನಡಿಗರಿಗೆ ಅಪಾರ ಗೌರವ. ಶ್ರೀ ಜಿ. ಎಸ್. ಪಾಠಕರು ತನಗೆ ಲಭ್ಯವಾದ ಈ ಹೊಸ ಅಧಿಕಾರವನ್ನು ಸಂಪೂರ್ಣ ಸೇವಾ ಭಾವನೆಯಿಂದ ನಿರ್ವಹಿಸಿ ತನಗೂ ದೇಶಕ್ಕೂ ಗೌರವ ತರುವೆಂಬುದು ನಿಸ್ಸಂಶೆಹೆ. ಅವರ ಆಯ್ಕೆಗಾಗಿ ಹೃತ್ಪೂರ್ವಕ ಅಭಿನಂದನೆ; ಪ್ರಾಮಾಣಿಕ ಪ್ರಯತ್ನ ಮಾಡಿದ್ದ ಸಂಯುಕ್ತ ಕಾಂಗ್ರೆಸ್ ಸದಸ್ಯರಿಗೂ ಧನ್ಯವಾದಗಳು.

ಒಳಗಿಂದ ಹೊರಗೆ

ಕಾಂಗ್ರೆಸ್ ಕಾರ್ಯಕಾರಿಣಿಯು ಸಭೆ ಸೇರಿ "ಇಬ್ಬರೂ ಸರಿ— ಇಬ್ಬರೂ ತಪ್ಪು" ಎಂದು ತೀರ್ಮಾನ ಮಾಡಿ ಕಾಂಗ್ರೆಸಿಗರು ಐಕ್ಯಭಾವನೆಯಿಂದ ಮುಂದುವರಿಯಬೇಕು ಎಂದು ಕರೆಕೊಟ್ಟಿತೇನೋ ಸತ್ಯ. ಈ ಕರೆಯು ಕರೆ ಎಲ್ಲ ಕಾಂಗ್ರೆಸಿಗರಿಂದೂ ಪುಟ್ಟುವುದಕ್ಕೆ ಮೊದಲೇ ಕರೆಕರೆ ಮತ್ತೆ ಕಿವಿಬಿರಿ ಬಡಿಯುತೊಡಗಿದೆ. ಶ್ರೀಮತಿ ಗಾಂಧಿರುವರು ತನ್ನ ಸ್ಥಾನ-ಮಾನಗಳನ್ನೇ ಪಣಕ್ಕಿಟ್ಟೆವೆಂದು ದೃಢವಾಗಿ ನಂಬಿ ಪಕ್ಷವನ್ನು ಹುಲ್ಲಿಗಿಂತ ಹೀನವಾಗಿ ಕಾಣಲಿದನ್ನು ಬಿಡಲಿಲ್ಲ. ಪ್ರತಿನಿತ್ಯವೂ ಮಂಜಿನೆಳೆಯೂ ಸಂಜೆಯಾವೂ ಯಾರು ಯಾರ ಬಂಧನ್ನೋ ಬರಮಾಡಿ ಅಲ್ಲಿ 'ಕಲವರು ಕೃತಿಗಾಮಿ—ಪ್ರಗತಿ ವಿರೋಧಿ' ಗಳನ್ನು ತೀರಿಸಿ ತನ್ನ ಬಿಟ್ಟ ಕೆಜ್ಜೆಯನ್ನು ವಿವರಿಸಿ ತಾಲೀ ಬಜಾಯಿಸಿಕೊಳ್ಳುವ ಪರಿಪಾಠವಿಟ್ಟುಕೊಂಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಇಷ್ಟದ ಫೀತಿ-ಭೋರನೆಯನ್ನು ವ್ಯಪಹಾಸಿಳಿಸುವುದು ಪ್ರಧಾನಿಯ ಕರ್ತವ್ಯ. ಭೀಂಜೆಯನ್ನು ಪ್ರಶ್ನಿಸುವ ಅಧಿಕಾರ ಆಗಿಲ್ಲವೆನ್ನುತ್ತಾರೆ. ಇಂದು ಐಕ್ಯ ಸಾಧನೆಯು ಅಗತ್ಯವಾದುದರಿಂದ ಶಿಸ್ತಿನ ಕ್ರಮವನ್ನು ಕೈಬಿಡುವಂತೆ ಕಾರ್ಯಕಾರಿಣಿಯ ನಿರ್ಣಯಿಸಿತೆನ್ನುತ್ತಾರೆ; ಇದನ್ನು ಪಾಳುವನೆಂದು ಒಪ್ಪುವುದಿಲ್ಲ.

ಶ್ರೀಮತಿ ಇಂದಿರಾ ಗಾಂಧಿಯವರಿಗೆ ಮೊರಜಿ ನೇತಾರ ಶ್ರೀ ವಿ.ಕೆ. ಕೃಷ್ಣ ಮೆನನ್ನರ ಸಂಪೂರ್ಣ ಬೆಂಬಲವಿದೆ. ಶ್ರೀ ಫಕ್ರುದ್ದೀನ್‌ರಾಲಿ ಅಹಮ್ಮದರು ಬಾಯಿ ಮುಚ್ಚಿದರೂ ಶ್ರೀ ಜಗಜ್ಜೀವನರಾಮರು ಶ್ರೀ ನಿಜಲಿಂಗಪ್ಪನವರು ಕೃತಿಯನ್ನಿನ್ನೂ ಜಳಪಿಸುತ್ತಿದ್ದಾರೆಂದಿದ್ದಾರೆ. ಪ್ರಧಾನಿ ಗುಂಪು ಶ್ರೀ ಸಂಜೀವ ರೆಡ್ಡಿಯವರೆ ತಲೆಗೆಯುತ್ತು ತನ್ನ ಶಕ್ತಿಯನ್ನೀಗ ಒರೆಗೆ ಸೇರಿಸಿ ಕೊಂಡಿರುವುದು ನಿಜ. ಇನ್ನು ತಮ್ಮ ಮನಸ್ಸಾಕ್ಷಿಗೆ ಆಗತ್ಯವೆನಿಸಿದಾಗ ಮತ್ತೆ ಪಕ್ಷವನ್ನು ಹೊರತೆಗೆಯುವುದೂ ಅಪ್ಪೇ ಸತ್ಯ. ಶ್ರೀಮತಿ ಗಾಂಧಿಯವರು ವೊಜಿ ಕಾಂಗ್ರೆಸಿಗರನ್ನ ಕಾಂಗ್ರೆಸಿಗೆ ಆಹ್ವಾನಿಸಿದ್ದಾರೆ. ಶ್ರೀ ಮೆನನ್ನರೂ ಇದರಿಂದ ಪ್ರಧಾನಿಯಂದರೆ ಲಕ್ಷ್ಯಾರ್ಥವಿಲ್ಲ. ಅವರನ್ನು ಮಂತ್ರಿ ಪದದಿಂದ ಕಾಂಗ್ರೆಸ್ಸು ಕಿತ್ತು ಹಾಕಿತ್ತು, ಪಕ್ಷವನ್ನು ಮೆನನ್ನರೇ ಬಿಟ್ಟದ್ದು. ಶ್ರೀಮತಿ ಗಾಂಧಿಯವರು ರಾಜ್ಯ-ರಾಜ್ಯ ಸಂದರ್ಶನ ಮಾಡಿ ಕಾಂಗ್ರೆಸಿಗರಲ್ಲೂ ಇತರ ಪಕ್ಷಗಳಲ್ಲೂ ತನ್ನ ಸಮರ್ಥಕರನ್ನು ಹೆಚ್ಚಿಸಿಕೊಳ್ಳುವ ಯೋಜನೆ ಹಾಕಿದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸಿಗನೇ ಆಗಿದ್ದ ಕಾಂಗ್ರೆಸಿನ ವಂದ ಫೀತಿಯಿಂದ ಓಡಿದು ದೇರೆ ಪಕ್ಷಗಳನ್ನು ಕಟ್ಟಿಕೊಂಡವರ ಬೆಂಬಲವನ್ನು ಪಡೆದು ಜಂಕೆಯ ವೇಗವನ್ನು ತರುವ ಮರೀಚಿಕೆ ತೋರಿಸಿ ತಪ್ಪ ಬಲ ಸಂವರ್ಧಿಸುವ ಸಂಚು ಆಕೆಯದ್ದು. ಇದನ್ನು ಸಂಪೂರ್ಣ ಅಲ್ಲಗಳೆಯಲಾಗದು. ಆಂದರೆ, ಕಾಂಗ್ರೆಸ್ಸಿನಲ್ಲಿ ಸದ್ಯ ಉಂಟಾದ ಐಕ್ಯ ಮಂತ್ರಿಕ ಭಾರಿ ಬಲಪ್ರದರ್ಶನಕ್ಕೆ ತಯಾರಿ ಕಾಲ ಮಾತ್ರ.

ಸುಂಪ ಗಾರಿಕೆ ಕಾಂಗ್ರೆಸಿಗೆ ಹೊಸತಲ್ಲವಾದರೂ ಪಕ್ಷ ದಿನೇ ದಿನೇ ಪ್ಲೇಗಿನೆಸು ಕ್ತಿರುವುದಕ್ಕೆ ಗುಂಪುಗಾರಿಕೆಯೇ ಪ್ರಬಲ ಕಾರಣ. ಸದ್ಯ ಒಡೆದ ಮಂಡೆಯನ್ನು ಬೆಸೆದುಕೊಂಡಿದ್ದರಿಂದ ಕಾಂಗ್ರೆಸ್ಸು ತನ್ನನ್ನೂ ದೇಶವನ್ನೂ ಅಲ್ಪಕಾಲ ಉಳಿಸಿಕೊಂಡಿತು. ಭಾರಿ ಹೋರಾಟ ನಡೆಯಿತೆಂದರೆ, ಕಾಂಗ್ರೆಸ್ಸೂ ದೇಶವೂ ಹಾಳು.

ಕಸದ ಬುಟ್ಟಿಗೆ

ರಾಜ್ಯ ಸರಕಾರದ ನೌಕರರ ವತ್ತಾಯದಿಂದ ಸರಕಾರ ತಟಕೋಲ್ ಆಯೋಗದ ವನ್ನು ನೇಮಿಸಿತೇ ಹೊರತು ಆದನ್ನು ಸರಕಾರ ತಾನಾಗಿ ನೇಮಿಸಿಲ್ಲ—ಇದು ಕರ್ನಾಟಕದ ಮಂತ್ರಿಶ್ರೇಷ್ಠರ ನಡಿಮಾತ್ತು; ಉದುರಿದ್ದು ವಿಧಾನ ಸಭೆ ಮುಖ್ಯ. ಸಂದರ್ಭ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸುವುದಿಲ್ಲವಾದರೆ ಆದನ್ನು ನೇಮಿಸಿದ್ದೇಕೆಂದು ಸದಸ್ಯರು ಕೆರಳಿ ಕೇಳಿ ಪಾಠ.

ಆಂದರೇನು? ಆಯೋಗ ನೇಮಕ ಮಾಡುವುದಕ್ಕೆ ಮೊದಲೇ ಆದರ ವರದಿಯ ಫ್ಲ ಜ್ಯಾರಿಮಾಡುವುದಿಲ್ಲ ನೆಂಬ ನಿರ್ಧಾರ ಸರಕಾರ ಮಾಡಿದಂತಿದೆ. ನೌಕರರು ಮುಷ್ಕರ— ಸಂಪುಗಳಲ್ಲಿ ತೊಡಗುವಂತೆ ಮೊಣಕೈ ಗಂಟಿಗೆ ಕಾಗಿಸಿದ ಬಿಲ್ಲ ಮಾತ್ರವಿರುತ್ತಿಯೋಗದ ಸಿಫಾರಸ್ಸುಗಳಲ್ಲಿ ಗಣ್ಣು ಹುಟ್ಟುವನ್ನು ಜ್ಯಾರಿ ಮಾಡದೆ ಮುಖ್ಯವಾದುವನ್ನೇ ತಡೆಹಿಡಿದ ಸರಕಾರ ಹೆಚ್ಚಿನ ಸಂಪನ್ಮೂಲವಿಲ್ಲವೆಂದು ಬೊಬ್ಬಿಡುತ್ತಿದೆ. ಈಗಾಗಲೇ ಸೇ. ೪೬ರಷ್ಟು ರಾಜ್ಯ ನೌಕರರ ವೇತನಾದಿಖರ್ಚಿಗೆ ವಿನಿಯೋಗಿಸುತ್ತಿದೆಯೆಂದೂ ಇನ್ನೂ ಹೆಚ್ಚು ನೀಡುವುದು ಅಸಾಧ್ಯವೆಂದೂ ಹಿಂದಿನಿಂದಲೂ ಪಡೆದು ಬಂದ ನೆಲುವು.

ಪ್ರಶ್ನೆ ಮುಂದೆ ದೈತ್ಯರೂಪದಾಳಿ ನಿಂದಾಗ ಅದನ್ನು ಮುಂದೂಡುವ ತಂತ್ರವಾಗಿ ಸಮಿತಿಗಳನ್ನು ನೇಮಿಸುವುದು ಸರಕಾರದ ಕುತಂತ್ರ. ಹಲವು ಲಕ್ಷ ರೂಪಾಯಿಗಳ ವೆಚ್ಚ ಮಾಡಿ ಶ್ರಮ—ಸಂಪತ್ತುಗಳನ್ನು ಸೂರೆಮಾಡಿದ ಆಯೋಗಗಳ ವರದಿಗಳು ಕಸದ ಬುಟ್ಟಿಗಳನ್ನೇ ಸೇರುವುದಾದರೆ, ಶ್ರಮ—ಸಂಪತ್ತುಗಳನ್ನೆಲ್ಲ ಪೋಲು ಮಾಡಿ, ಬಡ ರಾಜ್ಯವನ್ನು ಮತ್ತಷ್ಟು ಬಡತನಕ್ಕೆ ದೂಡುವುದು ನ್ಯಾಯವೇ? ಇದನ್ನು ಪ್ರಜ್ಞಾವಂತ ಶಾಸಕ ಸಂತ್ರಧಾರಿಗಳು ಆಲೋಚಿಸಬೇಕು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ
O. S. 231/1969

ಪಿಯಾದ ದಿ. ಸೋಜ— ವಾದಿ.
ಜಾತಿ ದಿ. ಸೋಜ ಸಹಾ— ಪ್ರತಿವಾದಿರು.

6, ಅಪ್ಪು ಸೋಜ ಗಾಯ, 7 ಅಲ್ಬರ್ಟ್ ದಿ. ಸೋಜ, 8. ಪಾಲಿನ ಸೋಜ ಬಂಧು, 9. ಗ್ರೆಗೊರಿ ಸೋಜ—
ಜಾತಿ ಸೋಜರು ಮತ್ತಳು.

ಕಾರ್ಕಳ ತಾಲ್ಲೂ ಕುಕ್ಕುಂದೂರ ಗ್ರಾಮದ ಕೊಜಕೆ ಎಂಬಲ್ಲಿರುವವರು.

ಸದ್ರಿ 6, 7, 8, 9ನೇ ಪ್ರತಿವಾದಿಂದರಿಗೆ ನಿಮಗೆ ಈ ಮೂಲಕ ತಿಳಿಸುವುದೇನಂದ್ರೆ,

ಫಿರ್ಯಾದಿ ಮೇಲ್ಕೆ ಪ್ರತಿವಾದಿರ ಇಕ್ಕೆಸಕ್ಕಿನ ಜಿಲ್ಲಾಧಿಕಾರಿಯಿಂದ ವಾದಿಗೆ ಬರತಕ್ಕ ಕೈಫೀಯತ್ತಿನಲ್ಲಿ ಕೇಳಿದ ಪ್ರಕಾರದ ರೂ. ೨೦೨.೩೦ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 11—9—1969ಕ್ಕೆ ತನಗೆ ಹಾಜ್ರು ಬಗ್ಗೆ ಇಟ್ಟಿದೆ. ಆ ಕಾರಿತು ನಿಮಗೆ ಅಕ್ಕೀಲ ಇಪ್ಪೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಆ ದಾಹರಣೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Plaintiff
Karkala, 29—8—69.

ಅವರು ಕೈಮಿಲಾಯಿಸಿಕೊಂಡರು

ಆಗಸ್ಟ್ ೧೫ ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾದ ದಿನ. ಇದು ೧೯೪೭ರಿಂದಲೂ ಸ್ವಾತಂತ್ರ್ಯಪ್ರೇಮಿಗಳು ಆಚರಿಸಿಕೊಂಡು ಬಂದ ದಿನ. ಈ ವರ್ಷದ ಆಗಸ್ಟ್ ತಿಂಗಳು ಮತ್ತೂ ಎರಡು ದಿನಗಳನ್ನು ನಮಗೆ ಕಾಣಿಕೆ ನೀಡಿತು. ೧೯೫೭ರಲ್ಲಿ ಭುವನೇಶ್ವರ್ ಜಿಲ್ಲೆಯಲ್ಲಿ ಆರಂಭವಾದದ್ದೂ ಇದೇ ಆಗಸ್ಟ್‌ದಲ್ಲಿ. ೬-೭ ಆಗಸ್ಟ್ ೨೦ರಂದು ಅಧಿಕಾರಾರೂಢ ಕಾಂಗ್ರೆಸ್ಸು ತನ್ನ ಅಧಿಕೃತ ಅಭ್ಯರ್ಥಿಯನ್ನೇ ಸೋಲಿಸಿತು. ಇದಾದ ಮೇಲೂ ತಿಂಗಳಂದು ಕಾಂಗ್ರೆಸ್ಸಿನ ಎರಡು ಅಥವಾ ಮೂರು ಬಣಗಳು ಒಂದಾಗಿ ಮುಂದಿಯುವ ದೀಪ್ತಿ ತೊಟ್ಟವು.

ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಪ್ರಾಬಲ್ಯವನ್ನು ರಾಷ್ಟ್ರಪತಿ ಚುನಾವಣೆಯು ಚತುರಂಗದಲ್ಲಿ ಎಳೆದು ಗೆದ್ದು ಬಿಟ್ಟರು; ಹತ್ತು ಕಡೆಯಿಂದ ಭಳಿರೇ ಕೇಳಿದರು. ಧೈರ್ಯ ನೀತಿಯನ್ನು ಬಲಿಗೊಟ್ಟು ಏನೂ ವಿಶ್ವವೆಂಬ ನಿರ್ಧಾರವನ್ನು ಜಪಿಸುತ್ತ ಬಂದರು. ಕಾಂಗ್ರೆಸ್ ಅಧ್ಯಕ್ಷರು ತಪ್ಪ ವರ್ತನೆಯ ಬಗ್ಗೆ ಹೋಲಾಸ್ ನೋಟೀಸ್ ನೀಡಿದಾಗಲೂ ಅನಂತರವೂ ಅವರದ್ದು ಏರುದನಿಯೇ. ಶ್ರೀ ವಿ. ವಿ. ಗಿರಿಯವರು ದ್ವಿತೀಯ ಗಣನೆಯಲ್ಲಿ ಸುಮಾರು ೧೬ ಸಾವಿರ ಮತ ಅಧಿಕ ಪಡೆದ ಮೇಲೆ ಈ ಧ್ವನಿಯು ದಪ್ಪ ಮತ್ತೂ ಏರಿದ್ದರಲ್ಲಿ ವಿಸ್ಮಯವಿಲ್ಲ.

ಆದರೆ, ಶ್ರೀಮತಿ ಗಾಂಧಿಯವರಿಗೆ ಕಾಂಗ್ರೆಸ್ಸು ಒಡೆಯುವುದು ಬೇಡವಂತೆ. ಪಕ್ಷದ ಫ್ಯೂಡಿ-ಶಿಸ್ತುಗಳನ್ನು ಬಿಟ್ಟುಕೊಟ್ಟು ಏಕ್ಯವೂ ಬೇಡವಂತೆ. ಅವರೆನ್ನುವಂತೆ ಕಾಂಗ್ರೆಸ್ ಹೈಕಮಾಂಡು ಟಿಕೇಟು ಅನುಗ್ರಹ ಮಾಡುವವರ ಕೂಟ ಮಾತ್ರ. ಶಿಸ್ತಿನ ಕ್ರಮ ಕೈಗೊಳ್ಳುವುದಕ್ಕೆ ಅದಕ್ಕೆ ಅಧಿಕಾರವಿಲ್ಲ. ಕಾರ್ಯಕಾರಿ ಸಮಿತಿಯು ಇಪ್ಪತ್ತೊಂದು ಜನರೂ ಸೇರಿದ ಸಭೆಯಲ್ಲಿ ಯಾರು ಯಾರನ್ನೂ ದೂರಲಿಲ್ಲ. ನಮ್ಮ ಕಾಂಗ್ರೆಸ್ಸಿನ ಗೃಹಮಂತ್ರಿ ಚವ್ಹಾಣರು ಗೊತ್ತುವಳಿ ಮಂಡಿಸಿದರು. ಎಡಬಲ ಕಾಂಗ್ರೆಸ್ಸಿಗರು ಶಲೆದೂಗಿದರು. ಅವಿರೋಧವಾಗಿ ಗೊತ್ತುವಳಿ ಪಾಸು ಮಾಡಿದರು. ಒಂದೆರಡು ಹೋಗಲಿದ್ದ ಕೈಕೈಸ್ಸನ್ನೂ ಅವರು ನಿಳಿಸಿದೆಯೆಂದು ಹೇಳಿಕೊಂಡರು.

"ಪಕ್ಷದ ಇಬ್ಬರು ಮುಖ್ಯ ವ್ಯಕ್ತಿಗಳಾದ ಕಾಂಗ್ರೆಸ್ ಅಧ್ಯಕ್ಷರು ಮತ್ತು ಪಾರ್ಲಿಮೆಂಟರಿ ಪಕ್ಷದ ನಾಯಕರು ಪರಸ್ಪರ ತಿಳುವಳಿಕೆ ಮತ್ತು ಸಾಮರಸ್ಯದಿಂದ ಕಾರ್ಯ ನಿರ್ವಹಿಸಬೇಕು. ವಿಶಾಲವ್ಯಾಪ್ತಿಯ ಫೀತಿಗಳನ್ನು ರೂಪಿಸಿ ಅವುಗಳಿಗೆ ಜನದೆಂಬಲವನ್ನು ಪಡೆಯುವುದು ಅಧ್ಯಕ್ಷರು. ಅಂಗೀಕೃತ ನೀತಿಯನ್ನು ಕಾರ್ಯಗೂಡಿಕ್ಕೆ ತರುವುದು ಪ್ರಧಾನಿಯ ಕರ್ತವ್ಯ. ಇವರಿಬ್ಬರೂ ರಾಷ್ಟ್ರದ ಹಿತದೃಷ್ಟಿಯಿಂದ ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕು. ಇವರಿಗೆ ಕಳಂಕ ತರಲು ಪ್ರಯತ್ನಿಸಿದರೆ, ಪಕ್ಷದ ಹಿತಕ್ಕೆ ಧಕ್ಕೆಯೂ ಗುತ್ತದೆ. ಕೆಲವು ವಾರಗಳಿಂದ ಪರಸ್ಪರ ವಿರುದ್ಧ ಅಭಿಪ್ರಾಯ ಮತ್ತು ದೃಷ್ಟಿಕೋಣಗಳಿಂದಾಗಿ ಎಲ್ಲರೂ ತಪ್ಪು ಮಾಡಿದ್ದಾರೆ.... ಆದ್ದರಿಂದ ಒಡಕನ್ನು ಹೆಚ್ಚಿಸುವ ಏನನ್ನೂ ನಾವು ಮಾಡಬಾರದು. ಹೇಳಬಾರದು ಪಕ್ಷವು ಎಂದಿನಂತೆ ಕೆಲಸ ಮಾಡಿಕೊಂಡು ಹೋಗಬೇಕೆಂದು ಕಾರ್ಯಕಾರಿಣಿ ಕರೆ ನೀಡುತ್ತದೆ."

ಇದರಿಂದಾಗಿ ಹಲವರ ಕನಸು ಸದ್ಯಕ್ಕೆ ಕನಸು ಮಾತ್ರವಾಗುತ್ತು. "ಎಲ್ಲರೂ ತಪ್ಪು ಮಾಡಿದ್ದಾರೆ" ಎಂಬ ಒಂದು ಅಂಶವನ್ನು ಳಿದರೆ, ಇಂದಿರಾ ಗಾಂಧಿಯವರ ಪ್ಲೇ ಪೇಲ ಗೈಯಾಯ್ತು. ಇದಕ್ಕಾಗಿ ಅವರು ಅಭಿನಂದನೆಗಳನ್ನೂ ಪಡೆಯುತಿದ್ದಾರೆ. ಶ್ರೀಮತಿ ಗಾಂಧಿಯವರದ್ದು ಸಮಯೋಚಿತ ನಿರ್ಧಾರ. ತನ್ನ ಅಭ್ಯರ್ಥಿ ಶ್ರೀ ವಿ. ವಿ. ಗಿರಿಯವರನ್ನು ಗೆಲ್ಲಿಸುವುದಕ್ಕೆಂದೇ ಅವರು 'ವ ನಸ್ವಾತ್ಮಿಯಂತೆ ಮತಚಲಾವಣ

ಸಾಮಾಜಿಕ ಬದಲಾವಣೆ ಮತ್ತು ಅಹಿಂಸೆ

ಲೇಖಕರು:— ಡಾ। ಆರ್. ಆರ್ ದಿವಾಕರ್.

ವಿದೇಶದಳ್ಳಿ ಗಾಂಧಿ ಜನ್ಮಶತಾಬ್ದಿ ಆಚರಣೆಯನ್ನು ಆಚರಿಸುವ ಜವಾಬ್ದಾರಿಯನ್ನು ಹೊತ್ತಿರುವ ಮುಖ್ಯಸ್ಥರೊಂದಿಗೆ ಮೊತನಾಡಲೂ ಶಾಂತಿ ಮತ್ತು ಅಹಿಂಸೆಯಲ್ಲಿ ನಂಬಿಕೆ ಇಟ್ಟಿರುವ ಜನತೆ ಹಾಗೂ ಸಂಸ್ಥೆಗಳೊಂದಿಗೆ ಸಂಬಂಧ ಬೆಳೆಸಲೂ ನಾನು ಉತ್ಸಾಹ ಗೊಂಡಿದ್ದೆ.

ಯೂರೋಪದಲ್ಲಿ ಲಂಡನ್ ನಗರವು ನನಗೆ ಭೇಟಿಯ ಪ್ರಥಮ ಸ್ಥಳವಾಗಿತ್ತು. ಲಂಡನ್ನಿನಲ್ಲಿ ಡಾ. ಮಾರ್ಟಿನ್ ಲೂಥರ್ ಕಿಂಗ್ ಪ್ರತಿಷ್ಠಾನದವರು ಅಹಿಂಸಾತ್ಮಕ ಜೀವನ ಪದ್ಧತಿಗೆ ಸಂಬಂಧಿಸಿದ ಸಂಸ್ಥೆಯೊಂದು ಕೆಲಸ ಮಾಡುತ್ತಿದೆ. ಈ ಸಂಸ್ಥೆಯ ಆಶ್ರಯದಲ್ಲಿ "ಸಾಮಾಜಿಕ ಬದಲಾವಣೆ ಮತ್ತು ಅಹಿಂಸೆ" ಎಂಬ ವಿಷಯ ಕುರಿತು ಮನೋಜ್ಞ ವಿಚಾರಗೋಷ್ಠಿ ಏರ್ಪಟ್ಟಿತ್ತು.

ಸುಮಾರು ಇಪ್ಪತ್ತೈದು ರಾಷ್ಟ್ರಗಳಿಂದ ಬಂದ ವಿದೇಶಿಗರು ಹೆಚ್ಚಾಗಿ ಇವು ಯೂರೋಪಿಯನ್ ರಾಷ್ಟ್ರಗಳೇ ಆಗಿದ್ದವು— ಈ ವಿಚಾರಗೋಷ್ಠಿಗೆ ಬಂದಿದ್ದರು. ವಾರು ವಿದಗಳಕಾಲ ಈ ವಿಚಾರಗೋಷ್ಠಿ ನಡೆಯಿತು. ಸಾಹಸಾತ್ಮಕ ಬದಲಾವಣೆಗೆ ಇಂಥದೊಂದು ಸಾಧನವನ್ನು ಬಳಸ ಬೇಕೆಂದು ನಿಶ್ಚಯಿಸಿ ಕೊಂಡು ಬಂದವರಲ್ಲಿ ಈ ವಿಚಾರಗೋಷ್ಠಿಯು ಪ್ರತಿನಿಧಿಗಳು. ಆದರೆ ಸಮಾಜದ ಆರ್ಥಿಕ ಶೈಕ್ಷಣಿಕ ಮತ್ತು ರಾಜಕೀಯ ರಂಗಗಳಲ್ಲಿ ನಿಜವಾದ ಬದಲಾವಣೆ ಅವಶ್ಯ ಎಂಬ ಬಗ್ಗೆ ಅವರು ಮನಗಂಡಿದ್ದರು. ಅತ್ಯಂತ ಶ್ರೀಮಂತ ಸಮಾಜ ವರ್ಗದವಳ್ಳಿಯೂ ಶಾಂತಿಯುತ ಸಾಮಾಜಿಕ ಸ್ವರೂಪವು ಪ್ರಗತಿಶೀಲ ಜೀವಿಗಳ ಅಂತರ್ಯ- ಆಕಾಂಕ್ಷೆಗಳನ್ನು ಈಡೇರಿಸಲು ವಿಫಲವಾಗಿದೆ. ಹೆಚ್ಚಾಗಿ ಯುವಕರಲ್ಲಿನ ರಾಜಕೀಯ ಅಶಾಂತಿ ಮತ್ತಿತರ ತೀವ್ರ ಬಗೆಯ ಚಳುವಳಿಗಳು—ಅವು ಅಹಿಂಸೆಯಿಂದ ಕೂಡಿರಲಿ ಅಥವಾ ಕೂಡಿರದೆ ಇರಲಿ—ಹೊಸ ಬದಲಾವಣೆಗಳ ಸೂರ್ಯೋದಯಕ್ಕೆ ಸೂಚನೆಯಾಗಿವೆ.

ಕ್ರೈಸ್ತಿಯನ್ ಕ್ರೈಯೋಳವಿ ತಿಯು ರೆವರೆಂಡ್ ಕ್ಯಾನನ್ ಕಾಲಿನ್ಸ್, ಇಟಲಿಯ ಗಾಂಧಿಯೆಂದೆನಿಸಿದ ಡ್ಯಾನಿಯೆ ಡೊಲ್ಸಿ, ವಾರ್ ರಿಜಿಸ್ಟರ್ಸ್ ಇಂಟರ್‌ನ್ಯಾಶನಲ್‌ನ ದೇವಿ ಪ್ರಸಾ ಪೊದಲಾದ ಪ್ರಮುಖರು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು. ಶ್ರೀ ದೇವೇಂದ್ರ ಕುಮಾರ ಗಂಪ್ತ ಮತ್ತು ನಾನ ಗಾಂಧಿ ವಿಚಾರದೃಷ್ಟಿಯಪ್ಪನ್ನು ನಿವೇದಿಸಿದೆವು. ಇವುಗೆ ಬೇಕಾಗಿರುವ ಹೊಸ ಸಮಾಜದ ಪ್ರಗತಿಶೀಲ ದೃಷ್ಟಿಯನ್ನು ಅಳವಡಿಸುವ ವಿಧಾನದ ಬಗ್ಗೆ ವಿಪುಲ ಚರ್ಚೆಯಾಯಿತು. ಜನಾಂಗ, ಜಾತಿ, ಲಿಂಗಗಳ ಭೇದವಿಲ್ಲದಲೆ ಮನುಷ್ಯನ ಸ್ವಾತಂತ್ರ್ಯ, ಆವನ ಪೊಡ್ಡಸ್ಥಿಕೆ, ಉಳಿದೆಲ್ಲ ಜನರೆಂದಿಗೆ ಸಮಾನತೆ ಮತ್ತು ಸಮಾಜ ಅವಕಾಶ ಇವು ಆಳತೆಗೋಲಾಗಬೇಕೆಂದು ನಾನು ಪ್ರತಿಪಾದಿಸಿದೆ. ಅಥವಾ ಎಲ್ಲ ಬಗೆಯ ಶೋಷಣೆ ನಿಲ್ಲಬೇಕು. ಒತ್ತಾಸೆ ಅಥವಾ ಅನ್ಯಾಯ ಕೊನೆಗಾಣಬೇಕು. ಮೂಲಭೂತ ಹಕ್ಕುಗಳಿಗೆ ಅಡ್ಡಿ ಇರಬೇಕು. ತನಗೆ ಸಂಬಂಧಿಸಿದ ಮತ್ತು ತನ್ನ ಸಮಾಜಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ, ಚರ್ಚೆಗಳಲ್ಲಿ ಪ್ರತಿಯೊಬ್ಬನಿಗೂ ಪಾಲುಗೊಳ್ಳಲು ಅವಕಾಶ ವಿರಬೇಕು. ಎಲ್ಲ ರಾಜಕೀಯ ಮತ್ತು ಇತರ ವಿಷಯುಗಳಲ್ಲಿ ಪ್ರತಿಯೊಬ್ಬನಿಗೂ ಭಾಗವಹಿಸಲು ಸಂದರ್ಭ ಬಿಗದೇಕು.

ಈ ವಿಚಾರವನ್ನು ಎಲ್ಲರೂ ಒಪ್ಪಿದರೆ. ಇಂತಹ ವಿಧಾನವೊಂದು ಇಲ್ಲದ್ದಕ್ಕಾಗಿಯೇ ಎಲ್ಲ ಬಗೆಯ ಅಧ್ಯಾಯಗಳು ನಡೆಯುತ್ತಿವೆ. ಸ್ತ್ರೀ ಮತ್ತು ಪುರುಷ ನಡುವಿನ ಶೋಷಣೆ ಮತ್ತು ಅನ್ಯಾಯದ ಅಶ ಅತ್ಯಧಿಕವಾಗಿದೆ ಎಂದ ಒಬ್ಬ ವಿದೇಶಿ ಪ್ರತಿನಿಧಿ ಹೇಳಿದರು. ನಾನು ಇದಕ್ಕೆ ಕೂಡಲೇ ಒಪ್ಪಿದೆ. ಗಾಂಧೀಜಿಯವರು ಸ್ತ್ರೀ ಪುರುಷರಿಬ್ಬರೂ ಸಮಾನ ಪಾಲುಗಾರರಾಗುವಂತೆ ನೋಡಿಕೊಂಡರು ಎಂದೂ ತಿಳಿಸಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವದಲ್ಲಿ ಸ್ತ್ರೀಯರು ಮಹತ್ವದ ಭಾಗ ವಹಿಸಿದ್ದು ಮತ್ತು ಮುಂದೆ ಸಚಿವ ಸಂಪುಟದಲ್ಲಿ ಸ್ತ್ರೀಯರೂ ಮಹತ್ವದ ಅಧಿಕಾರ ಸ್ಥಾನದಲ್ಲಿ ಇದ್ದದ್ದು—ಗಾಂಧೀಜಿಯವರ ವಿಚಾರದ ಫಲವಾಗಿಯೆ? ಅನುಭವದ್ದಿಂದ ದೇಶಗಳಲ್ಲಿ ಅದರಲ್ಲೂ ಭಾರತದಂತಹ ಗ್ರಾಮಗಳ ದೇಶದಲ್ಲಿ ಅಹಿಂಸೆಯು ಒಳ್ಳೆಯ ಉಪಾಯ ಮಾರ್ಗವಿದ್ದಿರಬಹುದೆಂದು ಯೂರೋಪಿನ ಅನೇಕ ನಿಯೋಗದ ಸದಸ್ಯರು ವಾದಿಸಿದರು. ಗಣಕಶಾಂತ್ರ ಬಳಸುವ ಯೂರೋಪಿನ ಧೀರ ಕೈಗಾರಿಕಾ ದೇಶಗಳಲ್ಲಿ ಭಾರತವು ಬಳಸಿದ ಅಹಿಂಸಾ ಉಪಾಯವು ಉಳಿಯೋಗವಾಗ ವದೆ?

ಎಂತಹ ಬಗೆಯ ಅಹಿಂಸೆಯನ್ನು ಬಳಸ ಬೇಕಾಗುವಶೆಂಬುದನ್ನು ಪರಿಸ್ಥಿತಿ, ಮುಂದಾಳುತನ ಮೊದಲಾದ ಅಂಶಗಳನ್ನು ಆವಲಂಬಿಸಿದೆ ಎಂದು ನಾವು ಹೇಳಿದೆ. ಗಾಂಧೀಜಿಯವರೇ ತಮ್ಮ ವಿಧಾನಗಳಿಗೆ ದೇಶ ದೇಶ ತಿರುವನ್ನು ಕೊಟ್ಟರು. ಆದರೆ ಅವೆಲ್ಲ ಅಹಿಂಸಾತ್ಮಯ ವಾಗಿದ್ದವು. 1940ರಲ್ಲಿ ದ್ವಿತೀಯ ಮಹಾಯುದ್ಧ ನಡೆದಿರುವಾಗ ವೈಯಕ್ತಿಕ ಸತ್ಯಾಗ್ರಹ ಮಾಡಲು ಗಾಂಧೀಜಿ ಕರೆ ಇತ್ತರು. ಆಗ ಸಾವಿರಾರು ಜನರು ಜೈಲಿಗೆ ನಡೆದರು. 1942ರಲ್ಲಿ ಸಮಸ್ತಾಯ ಸತ್ಯಾಗ್ರಹಕ್ಕೆ ಗಾಂಧೀಜಿ ಕರೆ ಇತ್ತರು.

ಆಯೋಗ್ಯ ವಿಧಾನಗಳನ್ನು ಅಪಸರಿಸುವ ಸರಕಾರದ ವಿರುದ್ಧ ಅಸಹಕಾರ ಮಾಡಲೂ, ಕೆಡಕು ಮತ್ತು ಅನ್ಯಾಯದ ವಿರುದ್ಧ ಹೋರಾಡಲೂ ಗಾಂಧೀಜಿ ಪ್ರಬಲವಾಗಿ ಪ್ರತಿಪಾದಿಸಿದರು. ಇದು ಅವರ ಶ್ರೇಷ್ಠ ಕೊಡುಗೆ.

ಕ್ರಾಂತಿಯ ನಂತರ ಬರುವ ಹಿಂಸಾಮಯ ಸರ್ವಾಧಿಕಾರತ್ವಕ್ಕಿಂತ ತಪ್ಪಿಸಬೇಕಾದರೆ, ಅಹಿಂಸಾ ಮಾರ್ಗವೊಂದೇ ಹಾದಿಯೆಂದು ವಿಚಾರಗೋಷ್ಠಿಯಲ್ಲಿ ಒಮ್ಮತದಿಂದ ಒಪ್ಪಲಾಯಿತು.

ಶಿಸ್ತಿಲ್ಲ ಸಿಪಾಯಿ ಇದಕ್ಕಿಂತ ಹೆಚ್ಚು ಮಾಡುವುದು ಸಾಧ್ಯವಿಲ್ಲ. ಪಕ್ಷದ ಅದೇಶವಿಲ್ಲ ವಿರೂದಿಸರ ವೇಲೆ ಶಿಸ್ತು ಕ್ರಮ ಕೈಕೊಳ್ಳುವ ಇಚ್ಛೆ ಇಲ್ಲವೆಂದಾದ ಮೇಲೆ ಶ್ರೀ ನಿಜಲಿಂಗಪ್ಪನವರೇನು? ಅವರ ವೇಲೆ ಹೊರಿಸಲಾದ ಸಮರ್ಥನೀಯ ಆರೋಪದ ಭಾರದಿಂದ ಚುನಾವಣೆ ಗೆದ್ದ ಮೇಲೆ ಪ್ರಧಾನಿ ಕೂಟದವರಿಗೆ ಅಧಿಕಾರ ಉಳಿಸುವುದಕ್ಕಾಗಿಯೇ ಅದನ್ನು ಇಳಿಸ ಬೇಕಾಗಿ ಬಂತು.

ಚುನಾವಣೆಯಲ್ಲಿ ಶ್ರೀ ಫೀಲಂ ಸಂಜೀವ ರೆಡ್ಡಿಯವರು ಸೋತರು, ಆದರೆ ವಿಜಯವಾಗಿ ಸೋಲಲಿಲ್ಲ. ಶ್ರೀ ರೆಡ್ಡಿ ಸ್ವತಂತ್ರವಾಗಿ ನಿಲ್ಲಿಲಿಲ್ಲ; ಶ್ರೀ ನಿಜಲಿಂಗಪ್ಪನವರ ಆಭ್ಯರ್ಥಿರಾಗಿ ಅವರಲ್ಲಿ. ಅವರು ಕಾಂಗ್ರೆಸ್ಸಿನ ಅಭ್ಯರ್ಥಿ. ಆದ್ದರಿಂದ ಚುನಾವಣೆಯಲ್ಲಿ ಅವರು ಸೋತದ್ದಕ್ಕೆ ಕಾಂಗ್ರೆಸ್ ಪಕ್ಷವೇ ಹೊಣೆ. ಈ ಕಾಂಗ್ರೆಸ್ ಪ್ರಧಾನಿಯೆಂದ್ದೂ ಹೌದು, ಅಧ್ಯಕ್ಷರದ್ದೂ ಹೌದು. ತನ್ನತನದ ಮುಂದೆ ಸಕ್ಷತನ್ನು ಸೋಲಿಸಿದ್ದು ತೋರಿಕೆಗೆ ನ್ಯಾಯವೆನಿಸಬಹುದು; ವೈಕಿಕವಾಗಿ ಅನ್ಯಾಯವೇ.

ಕಾಂಗ್ರೆಸ್‌ನ ಎರಡೋ ಮೂರೋ ಬಣಗಳೇಗ ಕೈವಿ.ಲಾಯಿ ನಿಕೊಂಡವು. ಬೇಕಾಗಿಯೋ ಬೇಡವಾಗಿಯೋ ಶಿವಪೂಜೆಗೆ ಹೋಗಿ ಪ್ರಸಾದ ಸ್ವೀಕರಿಸಿದವು. ಶಿವಮಂದಿರದಿಂದ ಹೊರಬಂದ ಮೇಲೆ ತಂತಮ್ಮ ಬಲ ಸಂವರ್ಧನೆಗೆ ತೊಡಗಿದರೂ ತಪ್ಪಲ್ಲ. ಸಮಯಾವಕಾಶ ಶಕುನಿ ಕಪಟ ತೋರಿಸಿದ್ದರಿಂದಲೇ ಪಾಂಡವರು ಸೋತರೆಂದು ಕಾಡುವಾಲಾದರು. ಪ್ರಧಾನಿ ಕೂಟವೂ ಈ ಸಮಯೋಚಿತವಾಗಿ ವರ್ತಿಸುವುದರ ಮೂಲಕ ತಾನೇ ಅಪ್ಪಟ ಕಾಂಗ್ರೆಸ್ಸಿಗರು ಎಂದು ಲೇಬಲ್ ಹಚ್ಚಿಕೊಳ್ಳುವ ಪ್ರಯತ್ನ ನಡೆಸುತ್ತಿದೆ.

ಕುಟುಂಬಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

101 ಶಾಖೆಗಳಿಂದ ಹಬ್ಬರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಕಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.

Phone— 5711, 5712, 5713 } 3 Lines

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337, 2 28887 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಚೆಂದಾದಾರರೆಲ್ಲಿ ವಿನಂತಿ

ಇದೇ ಕಳೆದ ಆಗೋಸ್ಟ್ ತಿಂಗಳಾಂತ್ಯಕ್ಕೆ "ನವಯುಗ"ದ 48ನೇ ಸಂಪುಟವು ಕೊನೆಗೊಂಡ ಶಬ್ದಂಬರ ಅದಿಯಿಂದ 49ನೇ ವರ್ಷಾರಂಭವಾಗಿದೆ. ಈ ಪದ್ಧತಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಬಾಕಿ ಇರುವವರೂ ದಯವಿಟ್ಟು ತಮ್ಮ ಚಂದಾಹಣವನ್ನು ಅದಷ್ಟು ತ್ವರ್ಯ ಕಳುಹಿಸಿಕೊಟ್ಟು ಪ್ರೋತ್ಸಾಹಿಸಲು ಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್, ನವಯುಗ, ಉಡುಪಿ.

READ & ADVERTISE IN
NAVAYUGA WEEKLY

ಸಿಂಡಿಕೇಟ್ ಬ್ಯಾಂಕ್ ಮಣಿಪಾಲ

1968-69ನೆ ಆರ್ಥಿಕ ವರ್ಷದ[30.6.69] ಲೆಕ್ಕ ಆಂಕ್ಷವಾಗುವಾಗ ಸಿಂಡಿಕೇಟ್ ಬ್ಯಾಂಕಿನ 306 ಶಾಖೆಗಳು ರಾಷ್ಟ್ರೀಯ ಸಾಲ ಸಮಿತಿಯು ನಿಗದಿ ಮಾಡಿದ್ದ 2 ಕೋಟಿ ರೂಪ್ಯಾಗಿಗೂ ಮಿಕ್ಕಿ 7.48 ಕೋಟಿ ಹೆಚ್ಚು ರೂಪ್ಯಾಯನ್ನು ಕೃಷಿಗಾಗಿ ಕೊಟ್ಟು ಸಮಿತಿಯು ನಿರ್ಧಯಿಸಿದ ಗುರಿಯನ್ನೂ ಮೀರಿದೆ. ಕೃಷಿಗಾಗಿ ಬೇಂಕ್ ಕೊಟ್ಟ ಮುಂಗಡವು 9.04 ಕೋಟಿಯಾಗಿದ್ದು ಅದು ಒಟ್ಟು ಕೊಟ್ಟ ಸಾಲದ ಪಕ್ಷನೆ ಒಂದಂಶವಾಗುವುದು.

ಈ ಸಾಲದಲ್ಲಿ 96,279 ಲೆಕ್ಕಗಳು ಪಾಯಗೊಂಡಿವೆ. ಅವುಗಳಲ್ಲಿ 36,060 ಲೆಕ್ಕಗಳಿಗೆ ನೇರವಾಗಿ ಒದಗಿಸಿದ ಮೊತ್ತವೂ 4.6 ಕೋಟಿ ಆಗುವುದು. ಕೃಷಿಗಾಗಿ ನೇರವಾಗಿ ಕೊಟ್ಟ ಸಾಲದ ಸಾಲು ಶೇಕಡಾ 49 ಆಗುವುದು. ಇದು ಭಾರತದ ಇತರ ಬೇಂಕುಗಳು ಕೊಟ್ಟ ಸಾಲಕ್ಕಿಂತ ಹೆಚ್ಚು. ಕೃಷಿಕ ವರ್ಗದ ತನ್ನ ಅತೀ ಸಮೀಪದ ಪ್ರತಿಸ್ಪರ್ಧಿ ಬಡಿದ ಸಾಲಕ್ಕಿಂತ ಸಾಲ್ಯ ಕಟ್ಟು ಹೆಚ್ಚಾಗಿರುವುದೆಂದು ಸರಕಾರದಿಂದ ದೊರೆದ ಆಂಕಿ ಅಂಶಗಳಿಂದ ಗೊತ್ತಾಗುವುದು. ಬ್ಯಾಂಕ್ ವಿಭಾಗಗಳು (ವಾಣಿಜ್ಯ) ಕೃಷಿಗಾಗಿ ಇತ್ತ ಸಾಲಗಳ ರೀತಿಗಳಲ್ಲೂ ಸಾಲ್ಯತೆ ಒಂದಂಶವು ಸಿಂಡಿಕೇಟ್ ಬ್ಯಾಂಕಿನವಾಗಿರುವುದೆ. ರಾಷ್ಟ್ರೀಯ ಸಾಲ ಸಮಿತಿಯು ಸಿಂಡಿಕೇಟ್ ಬ್ಯಾಂಕ್ 1968-69ರಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೊಡಬೇಕಾದ ಸಾಲವನ್ನು 2.4 ಕೋಟಿ ರೂಪ್ಯಾಯೆಂದು ನಿಗದಿ ಮಾಡಿತ್ತು. ಈ ಕ್ಷೇತ್ರದಲ್ಲಿ ಸಿಂಡಿಕೇಟ್ ಬೇಂಕ್ 6.27 ಕೋಟಿ ರೂಪ್ಯಾಯ ಸಾಲಾಯವಷ್ಟನ್ನು ಬೇಂಕಿಗೆ ಸಲ್ಲಬೇಕಾದ ಸಾಲದ ಮೊತ್ತವನ್ನು 13.16 ಕೋಟಿ ರೂಪ್ಯಾಗೆ ಏರಿಸಿದೆ. ಇದು ಬೇಂಕ್ ಕೊಟ್ಟ ಜುಮ್ಮಾ ಮುಂಗಡದ ಶೇಕಡಾ 14.6 ಆಗುವುದು.

ಸಾಂಪ್ರದಾಯಿಕವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಎಂಬ ಪದದ ಅರ್ಥವನ್ನು ಸಮಿತಿಯು ಸಾರಿಗೋ ರೈಮಳ್ಳೆ ಅನ್ವಯಿಸಿದೆ. ಈ ದೃಷ್ಟಿಯಿಂದ ನೋಡಿದರೆ ಸಿಂಡಿಕೇಟ್ ಬ್ಯಾಂಕು ಕೈಗಾರಿಕೆಗಳಿಗಾಗಿ ಕೊಡಿದ ಸಾಲದ ಮೊತ್ತವು 15.97 ಕೋಟಿ ಆಗುವುದು. ಇದು ಬ್ಯಾಂಕು ಕೊಡಿದ ಒಟ್ಟು ಸಾಲದ 17.6 ಆಗುವುದು. ಸಣ್ಣ ಕೈಗಾರಿಕೆಗಳ ಸಾಲಗಳ ಒಟ್ಟು ಲೆಕ್ಕವು 8544 ಆಗುವುದು. (7,220 ಸಣ್ಣ ಕೈಗಾರಿಗೆಗಳಿಗೆ, 1324 ಸಾರಿಗೆ ವಿಭಾಗಕ್ಕೆ.)

ಜೂನ್ 30ರಲ್ಲಿ ಸಿಂಡಿಕೇಟ್ ಬ್ಯಾಂಕ್ ನ ಲೆಕ್ಕವು ತೋರಿಸುವಂತೆ ಬಲ್ಲರೆ ವ್ಯಾಪಾರಿಗಳಿಗೆ ಬ್ಯಾಂಕ್ ಕೊಡಿದ ಸಾಲದ ಲೆಕ್ಕವು 22,822 ಆಗಿದ್ದು ಕೊಟ್ಟ ಸಾಲವು 6.11 ಕೋಟಿ ಆಗಿರುವುದು. ಇದು ಬ್ಯಾಂಕು ಕೊಡಿದ ಒಟ್ಟು ಸಾಲದ ಶೇಕಡಾ6.7 ಆಗುವುದು.

ಇಂದಿನ ವರೆಗೆ ವಿದೇಶ ವಿನಿಮಯಕ್ಕಾಗಿ ಸಿಂಡಿಕೇಟ್ ಬ್ಯಾಂಕ್ ಕೊಟ್ಟ ಸಾಲವು 868 ಆಗಿದ್ದು ಅದರ ಒಟ್ಟು ಮೊತ್ತವು 46 ಲಕ್ಷ ರೂಪ್ಯಾ ಆಗುವುದು. ಈ ಸಂಖ್ಯೆ ದಿನೇ ದಿನೇ ವೃದ್ಧಿಯಾಗುತ್ತಿದೆ.

ದೇಶದಲ್ಲಿ ಸದುಪಯೋಗ ಮಾಡದೆ ಉಳಿಸಿಕೊಂಡಿರುವ ಧನವನ್ನು ಸಾಧ್ಯವಾದಷ್ಟು ಬೇಗನೆ ಬರುವಂತೆ ಮಾಡುವುದಕ್ಕಾಗಿ ಸಿಂಡಿಕೇಟ್ ಬ್ಯಾಂಕ್ ಸಪ್ಟಂಬರ್ 1000ದ 7ರ ವರೆಗೆ ದೇಶವಾಪ್ತಂಕ "ಸ್ಪೀ ಉಳಿತಾಯ ಸಪ್ತಾಹವನ್ನು ಆಚರಿಸುವುದು."

ಸ್ವಾತಂತ್ರ್ಯೋತ್ಸವ ದಿನಾಚರಣೆ

ಉಡುಪಿ ತಲಾಪ್ಯಂದಿದೆ ವರೆಯಂದ 28 ನೇ ಸ್ವಾತಂತ್ರ್ಯೋತ್ಸವವು ವ್ಯಂದದ ತಾಯ್ಕಾಲಯದಲ್ಲಿ ಶ್ರೀ ಎಸ್. ವೆಂಕಟರಾಜರ ಅಧ್ಯಕ್ಷತೆಯಲ್ಲಿ ಜರಗಿತು.ಈ ಸಂದರ್ಭದಲ್ಲಿ ಉಡುಪಿ ಹೈಸ್ಕೂಲು ಮಟ್ಟಿದ ಭಾಷಣಸ್ಪರ್ಧೆಯಲ್ಲಿ ಶ್ರೀ ಎ. ರಮೇಶ ಪ್ರಸಾದ್, ಎಸ್. ಎಂ. ಎಸ್. ಪಿ. ಹೈಸ್ಕೂಲು, ಉಡುಪಿ ಮತ್ತು ಶ್ರೀ ಕೆ. ಜಿ. ರಾಘವೇಂದ್ರ ಕಂತ್ರಿ, ಎಸ್. ಎಂ. ಎಸ್. ಪಿ. ಹೈಸ್ಕೂಲು, ಉಡುಪಿ ಕ್ರಮವಾಗಿ ಪ್ರಥಮ, ದ್ವಿತೀಯ ಸ್ಥಾನವನ್ನು ಪಡೆದರು. ಶ್ರೀ ವೆಂಕಟರಾಜರು ತನ್ನ ಅಧ್ಯಕ್ಷತೆ ಭಾಷಣದಲ್ಲಿ ಕಲಾವ್ಯಂದವು ನಡೆಸುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಶಂಸಿಸಿದರು. ಕಲಾವ್ಯಂದದ ಆಧ್ಯಕ್ಷೆ ಶ್ರೀ ಕಾಣಿಯೂರು ಶ್ರೀನಿವಾಸರವರು ಬಹುಮಾನ ವಿತರಣೆ ಮಾಡಿ, ಸುಸ್ವಾಗತ ಭಾಷಣವನ್ನು ಮಾಡಿದರು. ಪ್ರಾರಂಭದಲ್ಲಿ ಶ್ರೀ ಬಡಾವಣೆ ಸರಕಾರಿಯರು ಸ್ವಾಗತಿಸಿದ್ದು ಅಂತ್ಯದಲ್ಲಿ ಕಲಾಕಾರ್ಯದರ್ಶಿ ಶ್ರೀ ಪದ್ಮನಾಭ ಭಟ್ಟರು ವಂದನಾರ್ಪಣೆ ಗೈದರು. ಪ್ರಾರಂಭ ಕಾಲ 6-30ಕ್ಕೆ ಶ್ರೀ ವೆಳೆ ಮಂಡಳಿಯ ಅಜಾಯರ್ಯರು ಧ್ವಜಾರೋಹಣ ಮಾಡಿದ್ದರು.

ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಇದೀಗ ಪ್ರಾರಂಭವಾದ ಕನ್ನಡ ಅಧ್ಯಯನ ಸಂಸ್ಥೆಯು ವಿವಿಧ ಮುಖ ಚಟುವಟಿಕೆಗಳಲ್ಲಿ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ, ಸ್ವಯಂಕಲನ ಕಾರ್ಯವೂ ಒಂದಾಗಿದೆ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕನ್ನಡ ಎಂ.ಎ. ಪರೀಕ್ಷೆಗಾಗಿ ಜನಪದ ಸಾಹಿತ್ಯವನ್ನು ಅಭ್ಯಾಸ ಮಾಡುವ ಸಾಲಿಗಳನ್ನು ಒದಗಿಸಲಾಗಿದೆ. ಜನಪದ ಸಾಹಿತ್ಯ, ಜಾನಪದ ಕಲಾಕಾರಿಗಳು, ಜನಪದದ ಪ್ರಾಚೀನ ಅವಶೇಷಗಳು ಮುಂತಾದವುಗಳನ್ನೆಲ್ಲ ಸಂಗ್ರಹಿಸುವ ಕಾರ್ಯ ಭರದಿಂದ ನಡೆದಿದೆ. ಜಾನಪದ ಸಾಹಿತ್ಯ ವಸ್ತು ಸಂಗ್ರಹಾಲಯವೊಂದನ್ನು ಅಧ್ಯಯನ ಸಂಸ್ಥೆಯಲ್ಲಿ ನಿರ್ಮಿಸಲಾಗಿದೆ. ನಾಡು ನುಡಿಯ ಅಭಿಮಾನಿಗಳು ಈ ಕಾರ್ಯದಲ್ಲಿ ನೆರವಾಗಬೇಕೆಂದು ಸ್ವಾರ್ಥಿಸುತ್ತೇವೆ.

ಡಿ

ಟಿ. ಎಸ್. ಅಬ್ದುಲ್ ರಹಿಮಾನರ ನಿಧನ

ಬೆಂಗ್ರೆಯ ಅಗ್ರಗಣ್ಯ ವ್ಯಕ್ತಿಗಳೂ ಮುಕ್ಕೋದ್ಯಮಿಗಳೂ ಮುಸ್ಲಿಂ ಜಮಾತ್‌ನ ಅಧ್ಯಕ್ಷರೂ ಆಗಿದ್ದ ಟಿ.ಎಸ್. ಅಬ್ದುಲ್ ರಹಿಮಾನರು ತಾ. 20-8-69ರಂದು ತಾವಳಿಕೆಯಲ್ಲಿ ಕಣ್ಣು ಮುಚ್ಚಿ ತೀರ್ಥಯಾತ್ರೆ ಮಾಡಿದರು. ತಮ್ಮ ಅಂತಿಮ ಕ್ರಿಯೆಯು ತೋನ್ಸೆಯಲ್ಲಿ ಮರುದಿನ ಜರಗಿತು. ಇದರಲ್ಲಿ ಅನೇಕ ಹಿತೈಷಿ ಬಂಧುಗಳು ಮುಸ್ಲಿಂ ಹಿಂದುಗಳಿಗೆ ಸೇರಿದ ತುಂಬಾ ಜನರು ಭಾಗವಹಿಸಿ ಅವರ ಅಂತಿಮ ದರ್ಶನ ಪಡೆದರು. ಮೃತರು ಪರೋಪಕಾರಿಗಳೂ ಉದಾರಿಗಳೂ ಆಗಿದ್ದು ಬಡಪ್ಪು ಯರಾಗಿದ್ದರು. ಇವರು ತಮ್ಮ ಹಿಂದೆ ಪತ್ನಿ, 3ಜನ ಗಂಡು ಒರ್ವಳೇ ಮಗಳನ್ನು ಅಗಲಿ ಹೋಗಿದ್ದಾರೆ.

ಅಹಿಂಸೆ ಮತ್ತು ಸಾಹಸ

ಅಹಿಂಸೆಯು ಶೀಘ್ರಶಾಂತಿಕ್ಕೆ ಸಮೂಹ ಪರಿವರ್ತನೆಯು ಶಕ್ತಿಯೂಗಿ ಮುಂದೆ ಬರಲೇಬೇಕು. ಕೇವಲಭಾವವೆಯೂಗಿಇಲ್ಲವೆ ಕೆಲವೊಂದು ನಿಶ್ಚೆಗಳ ಪರಿಮಿತಿಯಲ್ಲಿ ಸೀಮಿತವಾಗಿರುವ ಅಹಿಂಸೆಯು ಈನ್ನ ಸ್ಥಾನದ ಮಟ್ಟಿಗೆ ಒಳ್ಳೆಯುದೇ ಇದ್ದೀತು! ಆಚಿಚ್ಚ ಮಟ್ಟದ್ದೊ ಇದ್ದೀತು. ಆದರೆ ಆಪತ್ತು ವಿಪತ್ತಿಕ್ಕೆ ಅಹಿಂಸೆಯು ವಿರೋಧಕ ಶಕ್ತಿಯೂಗಲಾರದು! ಅಹಿಂಸೆಗೆ ಲೋಕಶಕ್ತಿಯು ರಚನಾತ್ಮಕ ರೂಪ ಕೊಡುವುದೇ ಗ್ರಾನಡಾನಿಧ ಅನಂತರ ಗ್ರಾಮ ಸ್ವರಾಜ್ಯದ ಕೆಲಸವಾಗಿದೆ. ಇದನ್ನು ನಾವು ಮೂಡದೆ ಉಳಿದರೆ ವಿರುದ್ಧ (ಹಿಂಸೆಯ) ಪದ್ಧತಿಯನ್ನು ಅವಲಂಬಿಸುವ ರುತಪ್ಪು ಎಂದು ಹೇಳಲಿಕ್ಕೆ ನವ ಗೆ ಅಧಿಕಾರವೇ ಉಳಿಯದು. ಜಯಪ್ರಕಾಶರು ಹಿಂಸೆಯ ವೈತಿಕ ಟೀಕೆ ಮಾಡುವ ಅಧಿಕಾರವನ್ನು ಪಟ್ಟು, ಅಹಿಂಸೆಯು ಸಂಶೋಧನೆ ಮಾಡುವ ಕರ್ತವ್ಯವನ್ನು ವಹಿಸಿಕೊಂಡಿದ್ದಾರೆ. ಸಮೂಹಪರಿವರ್ತನೆ ಕಾರ್ಯದಲ್ಲಿ ಅಹಿಂಸೆಯನ್ನು ಉಪಯೋಗಿಸುವದು ಅಪರಿಚಿತ ಸಮುದ್ರದಲ್ಲಿ ಹೊಸದಾಗಿ ಪ್ರವಾಸ ಕೈಕೊಳ್ಳುವಂತಿದೆ. ತೆರೆಗಳಲ್ಲಿ ಇಳಿಯುವ ಸಾಹಸ ಮಾಡಬಲ್ಲವರೇ ಆಚೆ ದಂಡೆಗೆ ಮುಟ್ಟಿಗೂರು!

—ಭೂದಾನಯಜ್ಞದಿಂದ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ ದ. ಕ.

O. S. No. 332/1968.

ಜುನಾಂ ಲೋಬೋ — ವಾದಿ

ಮತ್ತು

ಅಂಪ್ರು ಡಿ'ಮೆಲ್ಲೊ [ಮೃತ] ಕೂಡಾ ಪ್ರತಿವಾದಿರು

ಇವರಿಂಳಿಗೆ

ನೋಟೀಸು

ಉಡ್ಪಿ ತಾಲ್ಲ್ಯ ಪಾಂಗಾಳ ಗ್ರಾಮದ ದೊಡ್ಡಲ್ ವಿಲ್ಲಾ — ಪೋಸ್ಟು ಪಂಕೆರಪುರದಲ್ಲಿರುವ ಅಂಪ್ರು ಡಿ'ಮೆಲ್ಲೋರ ವಿಧವೆ ಆಲಿಸ್ ರೊಡ್ರಿಗಸ್, ಸದ್ರಿಯವರ ಮಕ್ಕಳು — ಅಂತೋನಿ ಡಿ'ಮೆಲ್ಲೋ, ಬೆನೆಡಿಕ್ಟ್ ಹಿಲ್ಡಾ ಡಿ'ಮೆಲ್ಲೋ ಮತ್ತು ಏಡ್ ಡಿ'ಮೆಲ್ಲೋ — ಟೀಲಿನ ನ್ಯಾಯ್ಯದ 21ರಂದ 5ನೇ ಪ್ರತಿವಾದಿರಾಗ ತಕ್ಕವರಾದ ಇವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ವಾದಿಯು ಸದ್ರಿಯವರ ವೈಲಿ ಪ್ಲೈಂಟು ನಿಮ್ಮತ್ತಿ ಕೇಳಿ ಕೈಪೇಲು ದಾವಿಲು ಮೂಡಿರುವ ದಾವೆಯು ತಾರೀಕು 19-9-69 ಕ್ಕೆ ಬೆಳಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಕೆಸ್ಸಿಗೆ ಇಡೋಣಾಗಿಯುದ್ದೆ. ನಿಮ್ಮುದೇನಾದ್ರು ಉಣಾಹರಣೆಯಿದ್ದಲ್ಲಿ ಕೋರ್ಟು ಮುಂದೆ ಬೆಳಿಗ್ಗೆ 11.00 ಗಂಟೆಗೆ ಹಾಜ್ರಾಗಿ ಜ್ಞಾಪಿಸಿರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

(By order of the Court)

ಶಿಕಾರಿಪುರ ನಿಲಿಯಂ ಸಿಂಟೊ,

M. A., L. L., B.,

ಎಡ್ವೋಕೇಟ್, ವಾದಿಯ ಪರ ವಕೀಲ.

ಉಡುಪಿ, 1-9-69.

ಸಂಗ್ರಾಹ್ಯ ಪುಸ್ತಕಗಳು

ನಿಮ್ಮಂತರು ಕಾಣಿಲೆಗಳಿಗೆ ಮನೆಯಲ್ಲೆ ಮಾಡಿ ಮಾಡುವ ವಿಧಾನ ವಿವರಿಸುವ

ಮನೆ-ಮದ್ದು

ಗೃಹವೈದ್ಯ — ರೂ. 2 . 00

ಪ್ರತಿಯೋರ್ವನೂ ನಿತ್ಯ ಪರಿಶಿಲಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1 - 50

ಪದ್ಯಪ್ಪಕ್ಕೆ ತಾವೇ ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ.2-00

ಬಿಬ್ಬಾಲಾ ಖರ್ಚು ಸ್ಪೆಶಲ್ ರಿಯಾಯಿತಿ ಇದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

ಕೀರ್ತಿಗೊಬ್ಬ ಮಗ—ಆರತಿಗೊಬ್ಬ ಮಗಳು.
ಮಿತ ಸಂತಾನವೇ ಹಿತಜೀವನದ ಆಧಾರ
ಎರಡು ಅಥವಾ ಮೂರು ಮಕ್ಕಳು ಸಾಕು.
ಪಡೆದರೆ ಮುತ್ತಿನಂಥಾ ಎರಡು
ಅಥವಾ ಮೂರೇ ಮಕ್ಕಳು ಪಡೆಯಬೇಕು.
ಚಿಕ್ಕ ಸಂಸಾರ—ಸುಖ ಸಂಸಾರ,
ಎರಡು ಅಥವಾ ಮೂರು ಮಕ್ಕಳು ಸಾಕು.

ಸಣ್ಣ ಕುಟುಂಬ — ಸುಖದ ಕುಟುಂಬ
ಎರಡು ಅಥವಾ ಮೂರು ಮಕ್ಕಳು ಸಾಕು.

ಮಿತ ಸಂತಾನ—ಸುಖ ಸಂಸಾರ
ಎರಡು ಅಥವಾ ಮೂರು ಮಕ್ಕಳು ಸಾಕು.

ಸುಖ ಸಂಸಾರಕ್ಕೆ — ಮಿತ ಸಂತಾನವೇ ಯೋಗ್ಯ ದಾರಿ
ಡಾಕ್ಟರ ಸಲಹೆ ಪಡೆಯಿರಿ.
ಮಿತ ಸಂಸಾರ ಸುಖ ಸಂತೋಷ
ಎರಡು ಅಥವಾ ಮೂರು ಮಕ್ಕಳು ಸಾಕು.

ಬಾನು ಬೆಳಗಲು ಇಹರು ಸೂರ್ಯಚಂದ್ರ
ಬಾಳು ಬೆಳಗಲು ಸಾಕು ಮಕ್ಕಳೆರಡು.

ಮಿತ ಸಂತಾನವೇ ಸುಖ ಸಂಸಾರಕ್ಕೆ ಯೋಗ್ಯ ದಾರಿ.
ಎರಡು ಅಥವಾ ಮೂರು ಮಕ್ಕಳು ಸಾಕಲ್ಲವೇ?

ಚಿಕ್ಕ ಸಂಸಾರ ಚೊಕ್ಕ ಭಂಗಾರ
ಎರಡು ಅಥವಾ ಮೂರು ಮಕ್ಕಳು ಸಾಕಲ್ಲವೇ?

ಮಿತ ಸಂತಾನವೇ ಸುಖಮಯ ಸಂಸಾರದ ಹೆದ್ದಾರಿ
ಎರಡು ಅಥವಾ ಮೂರು ಮಕ್ಕಳು ಸಾಕಲ್ಲವೇ?

ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ
ಮಿತ ಸಂತಾನ ಬಲ್ಲವನಿಗೆ ಭವಿಷ್ಯದ ಚಿಂತೆಯಿಲ್ಲ.

ಉಚ್ಚ ಶಿಕ್ಷಣ

(ಎರಡನೇ ಪುಟದಿಂದ)

ಮುಗೀತಲ್ಲಾ. ಉಚ್ಚ ಶಿಕ್ಷಣಾಪೋ, ಹುಚ್ಚು ಶಿಕ್ಷಣವೋ? ಈಗೆಂತೂ ಆದೊಂದು ಫೇಶನ್. ವಿದೇಶಕ್ಕೆ ತೆರಳಿ ಅಲ್ಲೆ ಯೂರನ್ನಾದರೂ ಕೂಲಿ ಹಾಕಿ ಸ್ವದೇಶ, ಮನೆ-ಮರ ಮರೆತು ಕೂರೋ ಹುಚ್ಚು. ನೋಡುವಾ ಅವಳ ದಪಾ!' ಎಂದು ನುಡಿದವರೇ ಕೇಶವ ಭಟ್ಟರು ಆರ್ಜಂಟಿನ ಕೆಲಸ ವಿದೆಯೆಂದು ತೆರಳಿದರು.

ಮರುದಿನದ ದೈನಿಕದಲ್ಲಿ ಸುಬ್ಬಣ್ಣನ ಭಾವಚಿತ್ರದೊಂದಿಗೆ "ವಿದೇಶ ಪಯಣ ...ಅನೀರಿಕ್ಷಿತ" ಇತ್ಯಾದಿ ಪ್ರಕಟಗೊಂಡಿತ್ತು.

... ಒಂದು ವಾರದ ಬಳಿಕ ಸುಬ್ಬಣ್ಣನ ಪತ್ರ ಕ್ಯಾಲಿಫೋರ್ನಿಯಾದಿಂದ ಕೈ ಸೇರಿತು. "ಭಾರೀ ಮಜಾ ಇಲ್ಲಿ....ಲೈಫ್ ಅಂತೂ ಇದು....ಎಂಜಿನ್ಯ ಆಂಡ್ ಡೈ.. ನನಗೆ ತುಂಬಾ ಹಿಡಿಸಿತೆ...." ಎಂಬ ಶಬ್ದಗಳೇ ಪತ್ರದ ತುಂಬೆಲ್ಲ. ನಾನು ಉತ್ತರ ಬರೆದೆ—

'ಪ್ರಿಯ ಸುಬ್ಬಣ್ಣ,

ನಿನ್ನ ತಂದೆಯವರ ಮೂತನ್ನು ಮೂರು ತೀನು ಉಚ್ಚ ಶಿಕ್ಷಣಕ್ಕೆ ತೆರಳಿರುವೆ; ಪರವಾಯಿಲ್ಲ. ವಿದೇಶದ ರಂಗು-ರಂಗಿನ ಜೀವನಕ್ಕೆ ಮರುಳಾಗದೇ ಡ ಜೀವನದಲ್ಲಿ ಕೇವಲ ಎಂಜಿನಿಯರ್ ಮಾತ್ರವಿದೆ ಎಂದು ತಪ್ಪು ತಿಳಿಯದಿರು. ಯಾವಕ್ಕಾದರೂ ವಿವೇಕ ಇರಲಿ.

ಕೊನೆಯದಾಗಿ ಒಂದು ಮಾತು- ಹುಟ್ಟಿದ್ದನ್ನು, ಹೆತ್ತವರನ್ನೂ, ಮಣ್ಣಿನ ನನ್ನನ್ನೂ ಮರೆತುಬಿಟ್ಟೀಯೂ! ಜೋಕೆ!

ನಿನ್ನೊಲವಿನ
ವೇಣೆ"

ಕೃತಿಣ ಸುಬ್ಬಣ್ಣನ ಪತ್ರವೆಲ್ಲಾ ಅನೀರೀಕ್ಷಿತ ಆಧುನಿಕತೆ, ಪ್ರಗತಿ, 'ಎಂಜಾ' ಇತ್ಯಾದಿಗಳನ್ನೆ ತುಂಬಿ ಬಡತೆಂಡಿಗಿದಾಗಿ, ನನಗೂ ಒಂದಿಷ್ಟು ವೇಷರವಾಯಿತು. ಒಂದಿನೆಯೇ ಅತ ಸ್ವದೇಶಕ್ಕೆ ಹಿಂದಿರುಗಲಾರ ಎಂಬ ಭಯ, ಸಂಶಯವೂ ಆಯಿತು.

ಅನಂತರ ಉಪದೇಶನನ್ನು ನಾನು ಅತನಿಗೆ ನನ್ನ ಪತ್ರದಲ್ಲಿ ನೀಡುತಿದ್ದೆ.

ಆಗಾಗ ನಾನು ಕೇಶವ ಭಟ್ಟರಲ್ಲಿಗೆ ತೆರಳುವುದಿತ್ತು. "ಏನು ಡಾಕ್ಟ್ರೆ ಸುಬ್ಬಣ್ಣನ ಪತ್ರ-ಗಿತ್ರ ಇದೆಯೂ?" ಎಂದು ಅವರನ್ನು ಕೇಳಿದಾಗ ಅವರು 'ಹೋದ ಶರುವಿಗೆ ಒಂದೆರಡು ಬಂದಿತ್ತು. ಈಗ ಮೂರು ತಿಂಗಳಾಯ್ತು— ಪತ್ರವಿಲ್ಲದೆ' ಎಂದರು ಬೇಸರದಲ್ಲಿ. ನನಗೂ ಸುಬ್ಬಣ್ಣನ ರು ಅಲಕ್ಷ್ಯದ ಕುರಿತು ಬೇಸರವಾದಿಂಬಿಸ್ಸಿ.

ಈಗೀಗ ಸುಬ್ಬಣ್ಣನ ಪತ್ರ ತಿಂಗಳಿಗೊಂದರಂತೆ ಬರುತಿತ್ತು.

೦ ೦ ೦

ಸುಬ್ಬಣ್ಣ ತಾನು ಎಂ.ಎಸ್.ಡಿ. ಪೇಗ್ರಡೆಯಾದ ಸುದ್ದಿ ತಿಳಿಸಿ ಪತ್ರ ಬರೆದಿದ್ದ. ನನಗೆ ಸಂತಸವೂ ಗರ್ವವೂ ಆಯಿತು. ಈ ಸುದ್ದಿಯನ್ನು ಅತನ ತಂದೆಗೆ ತಲಪಿಸಲು ನಾನು ಅವರ ಮನೆಯತ್ತ ತೆರಳಿದೆ. ಆಗ ಕೇಶವ ಭಟ್ಟರು ನುಡಿದರು "ಈಗ ಒಂದು ವರ್ಷದಿಂದ ಸುಬ್ಬಣ್ಣನ ಪತ್ರವೇ ಇಲ್ಲ... ಅಂತ ಎಮ್.ಡಿ. ಆದರೆ ನನಗೇನು ಬಂತು? ನಾಳುಲಿ' ತಂದೆಯನ್ನು ವಾರಿಕ ಮಗ ಮಗನೇ ಅಲ್ಲ!!"

ಸುಬ್ಬಣ್ಣನು ಎಮ್. ಡಿ. ಪಾಸು ಮಾಡಿದ ಬಗ್ಗೆ ಅತನನ್ನು ಅಭಿನಂದಿಸಿ ಬರೆದ ಪತ್ರದಲ್ಲಿ, ಆದಷ್ಟು ಶೀಘ್ರ ಊರಿಗೆ ಹಿಂದಿರುಗಲು ಕೇಳಿಕೊಂಡೆ.

ಆದರೆ... ಪತ್ರಕ್ಕೆ ಬಂದ ಉತ್ತರ ನನ್ನನ್ನು ದಿಗ್ಭ್ರಾಂತನಾಗಿಸಿತ.—

'ಪ್ರಿಯ ವೇಣೆಸ್,

ನಿನ್ನ ಅಭಿನಂದನೆಗಳಿಗೆ ಧನ್ಯವಾದ.... ನಾನು ಊರಿಗೆ ಕತ್ತಾಲಕ್ಕೆ ಬರುವ ವಿಚಾರಕ್ಕೆ ಬಿಟ್ಟದ್ದೇನೆ... ಕ್ಷಮಿಸಬೇಕು. ನನ್ನ ಗರ್ಲ್ ಫ್ರೆಂಡ್ ಡಾ! ಮಿಸ್ ರೆಜಿನಾಳೊಡನೆ ನನ್ನ ರಿಜಿಸ್ಟರ್ಡ್ ವಿವಾಹಕ್ಕೆ ವಿಸಾರ್ಡು ನಡೆದಿದೆ... ದಯವಿಟ್ಟು ಈ ಸಂಗತಿಯನ್ನ ತಂದೆಯವರಿಗೆ ತಲಪಿಸಿ, ಅಶೀರ್ವಾದ ಕೋರಲು ಹೇಳು... ಈ ಒಂದು ಉಪಕಾರವನ್ನು ನೀನು ನನಗಾಗಿ ಅಗತ್ಯ ಮಾಡಬೇಕು...

ಇತಿ
ಸುಬ್ಬಣ್ಣ'

ನನಗೆ ಈ ಪತ್ರವನ್ನೋದಿ ಬಹಳಷ್ಟು ವ್ಯಥೆಯಾಯಿತು. ಏನಿದ್ದರೂ ಸುಬ್ಬಣ್ಣಿ ಹೀಗೇಕೆ ದುಡುಕಿದ? ನನಗೆ ಉತ್ತರ ಹೊಳೆಯುವುದೇ ಇಲ್ಲ. ಅದೂ.... ಉತ್ತರ ಹೊಳೆದರೂ ಇಲ್ಲ. ಆದರೂ... ಅತನ ತಂದೆಗೆ ಈ ವಿಚಾರವನ್ನ ತಿಳಿಸುವುದು ಹೇಗೆ? ಮೊದಲೇ ಬೇಸರದಲ್ಲಿ ಕಂಗೆಟ್ಟ ಜೀವ.

ಆದರೂ.... ಡಾ। ಕೇಶವ ಭಟ್ಟರಲ್ಲಿಗೆ ತೆರಳಿದೆ.

"ಸುಬ್ಬಣ್ಣನ ಪತ್ರ ಇತ್ತೆ ಈವಾಗ?'

'ಪತ್ರವೂ ಇಲ್ಲ; ಸುದ್ದಿಯೂ ಇಲ್ಲ .... ನೀವಾದ್ರೂ ಒತ್ತೆ ಅವನನ್ನು ಊರಿಗೆ ಬಾರಲು ಬರೆಯಬಾರದೆಯೂ? ನಾನು ಬರೆದೆ-ತೆಗ ನಗಣ್ಯ...ಉತ್ತರವು ನೇಟಿಸ್ಟಿ ಕೆಯೂಂದು ಬಂದಿದೆ...ಸುಬ್ಬಣ್ಣ ಬಂದು ಕ್ಷಣವೇ ಮದುವೆ ಮಾಡಿ ನಾನೊಮ್ಮೆ ಈ ಸಂಸಾರ ಬಂಧನದಿಂದ ಬಿಡುಗಡೆ ಪಾಯ್ತೇನೆ... "ಎಂದು ಕೇಶವ ಭಟ್ಟರು ಕಣ್ಣೀರಿಳಿಸಿದಾಗ, ನನ್ನ ಕಣ್ಣಲ್ಲೂ ತೀನು ಜಿನುಗಿತು... ಹೇಳಬೇಕೆಂದ ವಿಷಯವನ್ನ ಹೇಳಲಾರದೆ ಅಲ್ಲಿಂದ ಕಾಲ್ತೆತ್ತೆ.

ಮತ್ತೆನೇ ಸುಬ್ಬಣ್ಣನಿಗೆ ಪತ್ರ ಬರೆದೆ —'ನಿನ್ನ ತಂದೆಯವರನ್ನ ನನ್ನ ಮದುವೆಯ ಪ್ರಸ್ತಾಪವನ್ನೆತ್ತಲು ಅಶಕ್ತನಿದ್ದೇನೆ.... ಕ್ಷಮಿಸು....'

ಪಾರಪ್ಪಾಯ ಕಳೆದ ಗ ಸುಬ್ಬಣ್ಣನ ಉತ್ತರವೂ ಸಿಕ್ಕಿತ .... "ಮದುವೆಯ ವಿಷ ಗೊತ್ತು ಮಾಡಲಾಗಿದೆ.... ಆ ಹೊತ್ತು ತಂದೆಯವರಿಗೊಂದು ಎನರ್ಜಿಸಿಸ್ ಕಾಲ್ ಬುಕ್ ಮಾಡಿದೀನಿ.... ಆಶೀರ್ವಾದ ನೀಡಲು .... ಇದರೊಂದಿಗೆ ಅವರಿಬ್ಬರ ಪತ್ರಿಕೆಯೂ ಇದೆ...'

ನಾನು ಪತ್ರವನ್ನೋದಿ, ಎರಡಂತ್ರಾಣ ದೊಂದಿಗೆ ಹಂದಿ ಬಿಸಾಡಿದೆ.

೦ ೦ ೦

....ಇಂದು ಡಾ। ಸುಬ್ಬಣ್ಣನ ಮದುವೆ ಯಾಗಿದೆಯಂದ್ದು ಆದಣ್ಯ. ಉತ್ತರ ಪ್ರದೇಶವು ಪ್ರಭಾನಿಯ ರಾಜ್ಯ. ಆದರೂ ಅವರಲ್ಲಿ ನೂರಕ್ಕೆ ಏನಕ್ಕೂರಷ್ಟೂ ಬೆಂಬಲ ಪಡೆದಿಲ್ಲವೆಂಬುದನ್ನು ಮರೆಯಲಾಗದು. ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಬಲವೇ ಹೆಚ್ಚಿರುವದರಿಂದ ಸಂಸತ್ತಿನ ಬಲದಿಂದಲೇ ಯೂರಾದರೂ ಲೆಲ್ಲಬೇಕು. ಶ್ರೀಮತಿ ಗಾಂಧಿಯವರು ೧೬೪ ಕಾಂಗ್ರೆಸ್ ಎಂಪಿಗಳ ಬಲಗಳಿಸಿದರು.

ಶ್ರೀ ಗಿರಿಯವರ ವಿಜಯವನ್ನು ಜನತೆ ಭಾರಿ ವಿಜಯವೆಂದು ವರ್ಣಿಸಲಾಯ್ತು ಯಾರು ವಿಜಯಿಗಳಿಸಿದ್ದರೂ ಇದು ಆನತೆಯ ವಿಜಯವೇ; ಶ್ರೀಮತಿ ಗಾಂಧಿಯವರು ಕಾಂಗ್ರೆಸಿಗರನ್ನು ಒಡೆಯುವ ದುಸ್ಸಾಹಸ ಮಾಡದಿರುತಿದ್ದರೆ, ಶ್ರೀ ಗಿರಿಯವರು ಗೆಲ್ಲುತ್ತಿರಲಿಲ್ಲವೆಂಬುದು ಖಂಡಿತ. ಆದ ದುಂದೇ ಇದು ಶ್ರೀಮತಿ ಗಾಂಧಿಯವರ ವೈಯಕ್ತಿಕ ವಿಜಯವೆಂದೂ ತಪ್ಪಲ್ಲ. ಶ್ರೀಮತಿ ಗಾಂಧಿಯವರನ್ನು 'ನನ್ನ ಮೆಚ್ಚಿನ ಮಗಳೇ' ಎಂದು ಶ್ರೀ ಗಿರಿ ದಂಪತಿಗಳು ಕರೆದರೆ ರಾಜ್ಯಕೀಯ ಪ್ರೇಮವೂ ಇದರಲ್ಲಿ ವರ್ತಮಾನಾಗಿದೆ.

ಕ್ಷೀಣ ವಿಜಯದ ನೆಲೆಯಲ್ಲಿ ಸರಕಾರ ನಡೆಸುವ ಪರಿಸ್ಥಿತಿಯಲ್ಲಿ ವೈಯಕ್ತಿಕ ವಿಜಯವೆ ಆಕಂಕ್ಷಿಸುತ್ತಿದಂದ —ಇದರ ಪರಿಣಾಮ ದೇಶದ ವಲೆ ಬೀಳುವುದು ಅನಿವಾರ್ಯ. ಸದ್ಯ ಒನ್ಮೈಗ ರಾಜಿ ಸೂತ್ರದಂತೆ ಕಂಡ ಬಂದರೂ ಹೊತ್ತಿಸಿದ ರಾಜ್ಯ ಸಮಯೂಸಮಯದಲ್ಲಿ ಭಗಿಲ್ಲೆನಿಸಿ ಇಂದಿರಾಗಾಂಧಿಯನ್ನೇ ನುಂಗಿದರೆ ಆಶ್ಚರ್ಯವಿಲ್ಲ.

ಬಳಿರೇ, ಶಹಭಾಸ್

ಶ್ರೀಮತಿ ಇಂದಿರಾ ಗಾಂಧಿಯವರು ಬೆಂಗಳೂರಿಗೆ ಗಾಲಿನ ಮನೆಯ ತಂದು ಹವೆಯನ್ನೂ ಒಳ್ಳೆ ಬೆವರಿದ ವೇಲೆ ಬಳಿಕ ಶಂದರಸ್ವಾಗಿ ಬಿಟ್ಟರು. ದೆಹಲಿಯ ವತ್ತಿರದಿಂದ ಮುರಿಜಿಯನ್ನು ಹೊರದೂಡಿದರೆಂದು, ಬ್ಯಾಂಕುರಾಷ್ಟ್ರೀಕರಣವೆರಡು, ರಾಷ್ಟ್ರಪತಿ ಚುನಾವಣೆಯಲ್ಲಿ "ಪಸಿನ್ಸಾಕ್ಷಿಯಂತೆ ಮತ"ನೆಂಬ ಬೀಜ ಬಿತ್ತಿದ್ದು ನೂರು, ಕಾಂಗ್ರೆಸ್ ವಿಭಜನೆಗೆ ಶ್ರೀ ನಿಜಲಿಂಗೇಶ ಹೊಕಿದ್ದು ಕಾರಣ, ಕಾಂಗ್ರೆಸ್ ಪಧಾನ ಮಂತ್ರಿಯಾಗಿ ಕಾಂಗ್ರೆಸಿಗರಿಂದಲೇ ಕಾಂಗ್ರೆಸ್ ಅಭ್ಯರ್ಥಿ ಶ್ರೀವರಾಹಗಿರಿಯನ್ನು ಪೂಲೆಗೆ ತಳ್ಳಿಯೇ ಬಿಟ್ಟದ್ದು, ಏದು....ಈ ಎಲಾ ಪಾಣ್ಯಕಾರ್ಯಗಳನ್ನೆ ಅವರು ಒಂದೇ ತಿಂಗಳಲ್ಲಿ ಸಾಧಿಸಿ ಬಿಟ್ಟರು. ಜೇಶ ಸೇವೆ, ಬಡಜನರ ಉದ್ಧಾರ ವತ್ತು ಕಾಂಗ್ರೆಸ್‌ನಲುಳಿವಿಗಾಗಿ.

ಶ್ರೀಮತಿ ಗಾಂಧಿಯವರ ಸವ ಸ್ಥಾನೆಗೆ ಅವರ ಸಂಪುಟದ ಇಬ್ಬರು ಹಿರಿಯ ಸಚಿವರೂ ಒದ್ದಕಂಕಣರಾಗಿದ್ದಾರೆ. ತುರಿಜಲ ನಾಸಿಂಹ ಶ್ರೀ ಜಗಜ್ಜೀವನರಾಂ ಮತ್ತು ಮುಸ್ಲಿಂ ನಾಯಕ ಶ್ರೀ ಫಕ್ರುದ್ದೀನ್ ಅಲಿ. ಈ ಅಲ್ಪ ಸಂಖ್ಯಾಕರ ನಾಯಕರನ್ನು ಮಂಡಿಟ್ಟು ಪಕ್ಷ ಪಕ್ಷಪಾತಗಳನೇ ಬೆಂಕಿಯೆಳೆಸುವಲ್ಲಿ ಶ್ರೀಮತಿ ಗಾಂಧಿಯವರು ಯಶಗಳಿಸಿದ್ದಾರೆ. ಇದಕ್ಕಾಗಿ ಈ ಬೆಂಕಿಯನ್ನು ನೋಡಿ ಆನಂದ ಪೈಪ್ರಿಸಬೆವರಿಂದಲೂ ಬೆಂಕಿ ಹಚ್ಚಿದವರಿಂದಲೂ ಭಳಿರೇ ಶಹಭಾಸ್ ಕೇಳುತ್ತಿದ್ದಾರೆ ಅಭಿನಂದನೆಗಳ ಸುರಿಮಳೆಯಿಂದ ಪನೆದು ಹೋಗಿದ್ದಾರೆ; ಹೋಗಿತ್ತಿದ್ದಾರೆ.

ಅತ್ತ ಶ್ರೀವೆತಿ ಗಾಂಧಿ ಮತ್ರವರ ಹಿರಿಯ ಸಚಿವರಬ್ಬರಿಗೆ ಪಕ್ಷದ ಅಧ್ಯಕ್ಷರು ಶೋಕಾಸ್ ನೋಟೀಸ್ ನೀಡಿದರು. ಹಾಗಾಗಿ ಸಂತೃಪ್ತಿಸ್ಥಿ ಅವರಿಗಾದವರು ಗೇಲಿ ಮಾಡಿ ಹಿರಿಯರು. ಈಗ ಯಾ ಪಕ್ಷದ ಸರಕಾರವಿದೆಯೆಂಬುದೇ ಈ ಗೇಲಿಗಾರರಿಗೆ ಗೊತ್ತಿಲ್ಲವಂತೆ!

ಶ್ರೀಮತಿ ಗಾಂಧಿಯವರ 'ಆತ್ಮಸಾಕ್ಷಿಯಂತೆ ಮತ ನೀತಿಗೆ ಜೇಬಲ ನೀಡಿದ ವರಲ್ಲಿ ಉತ್ತರ ಪ್ರದೇಶೀಯರೇ ಹೆಚ್ಚ ಎನ್ನಬೇಕು. ಅಂಧ್ರದಲ್ಲಿ ಅವರ ನೀತಿಗೆ ಬೆಂಬಲ ದೊರೆತಂತೆ ಕಂಡರೂ ಅದು ಸ್ವತ್ಕೇಕ ತೆಲಂಗಾಣ ವಾದಿಗಳಬೆಂಬಲ.

ವೆ. ಡಾರದ ಲಾಕ್ ಏಂಜಲ್ಸ್‌ನಲ್ಲಿ ವಧು ಡಾ| ರಿಜನಾ!

ವಧ್ಯಾಹ್ನ ಎಂಬೂರು ಹನ್ನೆರಡು ಘಂಟೆಸೂಚನವಾಗಿ, ಒಂದೇ ನವಫೆ ಜನರು ಡ | ಕೇಶವ ಭಟ್ಟರ ವನೆಯತ್ತ ಧಾವಿಸುತ್ತಿದ್ದುದು ನೀಡಿ ನಕ್ಷಗೆ ಗಾಬರಿಪೂರಿತು ನಾನೂ ಕೂಹಲ ತಳೆದು ಅತ್ತ ತೆರಳಿದೆ.

ಅದರೆ ಕಮ್ಮು ವಿಷಾದ್ಕ! ಡಾ| ಕೇಶವ ಭಟ್ಟರು ಹೃದಯ ಸ್ತಂಭನಕ್ಕೊಳಗಾಗಿ ಮೃತ್ಯುವಶರಾಗಿದ್ದರು.... ಕೈಯಲ್ಲಿ ರೀವರ್ ಪತ್ರ.

ಸುಬ್ಬಣ್ಣನಿಗೆ ಅಶೀರ್ವಾದಕ್ಕೆ ಸ್ವರ್ಗದಿಂದ!

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಜನನಗಳು ಹೆಚ್ಚುವಂತೆ ಸಾಧಿಸುವ ವಿಚಾರ ಮತ್ತು ಉಪಾಯಗಳನ್ನು ವಿವರಿಸುವ ಕೈಪಿಡಿ

ಬೆಲೆ 0-75 ಪೈಸೆ ಮಾತ್ರ.

0-90ಪೈಸೆ M O. ಮಾಡಿ, ಯಾ ಸ್ಟಾಂಪು ಕಳಿಸಿ ಒಂದು ಪ್ರತಿಯನ್ನು ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ,
ಪಾಲುಕೋಟಿ, ಉಡುಪಿ, ದ. ಕ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ತಮ್ಮು ಮತ್ತು ನೆಗಡಿ
ಇವುಗಳನ್ನು ಶೀಘ್ರವಾಗಿ,
ನಿವಾರಿಸುತ್ತವೆ.

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

NAVAYUGA 4-9-1969
Registered with the Registrar of News Papers for India under No. R. N. 3546/'57

REGD. No: B. G. 176
LICENCE No. 33
Licensed to Post without Prepayment

ಆರಸಿನಲಿಯ ಸೂರ್ಯ ದೇಗುಲ

ಲೇಖಕರು : ಶ್ರೀ ಬಿ. ವಿ. ಎಸ್. ರಾವ್.

ಭಾರತದ ಮೂಲೆ ಮೂಲೆಗಳಲ್ಲೂ ವಿವಿಧ ದೇವತೆಗಳಿಗೆ ಅನೇಕ ದೇವಾಲಯಗಳನ್ನೆತ್ತಿಸಿದವು ಸೂರ್ಯದೇಗುಲ ಬಹು ಅಪರೂಪ. ಆಂಧ್ರದ ಅರಸವಿಲ್ಲಿಯಲ್ಲಿರುವ ಸೂರ್ಯದೇಗುಲ ವಿಶಿಷ್ಟ ವೈಶಿಷ್ಟ್ಯ ಪಡೆದಿದೆ. ಚಾರಿತ್ರಿಕ ಹಾಗೂ ಶಿಲ್ಪ ಕಲಾದೃಷ್ಟಿಯಿಂದ ಅದರ ಪ್ರಾಮುಖ್ಯತೆ ಬಹಳ.

ಶ್ರೀಕಾಕುಳಂ ಜಿಲ್ಲೆಯಲ್ಲಿ ನಾಗಾವಳಿ ಎಂಬ ನದಿ. ಅದರ ದಡದಲ್ಲಿ ಪ್ರವಾಸಿಗರನ್ನು, ಯಾತ್ರಾರ್ಥಿಗಳನ್ನು ಕೈಬೀಸಿ ಕರೆಯುತ್ತಿರುವ ಸ್ಥಾನ "ಅರಸವಿಲ್ಲಿ". ಜಿಲ್ಲಾ ಕೇಂದ್ರವಾದ ಶ್ರೀಕಾಕುಳಂಗೆ ಆದು ಬಹಳ ಸಮೀಪ; ಒಂದೇ ಮೈಲಿ ದೂರ. ಮದ್ರಾಸ್-ಹೌರಾ ರೈಲು ಮಾರ್ಗದಲ್ಲಿ 'ಇಪುದಾಲವಲಸ' ಎಂಬ ರೈಲು ನಿಲ್ದಾಣವೇ ಅರಸವಿಲ್ಲಿಗೆ ಸಮೀಪ ರೈಲುನಿಲ್ದಾಣ. ವಾಲ್ಟೇರಿನಿಂದ ಅದರ ದೂರ ಆರಮೈಲಿ. ಶ್ರೀಕಾಕುಳಂ ಮೂಲಕ ಗ್ರಾಂಡ್ ಟ್ರಂಕ್ ರಸ್ತೆ ಹಾದು ಹೋಗುತ್ತಿರುವುದರಿಂದ ಬಸ್ಸಿನ ಮೂಲಕವೂ ಅರಸನಲ್ಲಿಗೆ ತಲುಪಬಹುದು.

ಐತಿಹಾಸಿಕ ಹಿನ್ನೆಲೆ

ಆಂಧ್ರದ ಅನೇಕ ಶತಮಾನಗಳ ಇತಿಹಾಸದ ಪುಟಗಳನ್ನು ಮಗುಚಿದರೆ 'ಅರಸವಿಲ್ಲಿ' ಕಣ್ಣಿಗೆ ಬಿದ್ದೇ ಬೀಳುತ್ತದೆ. ದೊರೆತಿರುವ ಐತಿಹಾಸಿಕ ದಾಖಲೆಗಳಲ್ಲಿ ಅರಸವಿಲ್ಲಿಯನ್ನು 'ಹರ್ಷವಿಲ್ಲಿ' ಎಂದು ಕರೆಯಲಾಗಿದೆ. ಟಿ. ಗಣಪತಿಯ ಪುತ್ರ ದೇವೇಂದ್ರವರ್ಮ ಕ್ರಿ. ಶ. ೨೪೪ನೆಯ ಶತಮಾನದಲ್ಲಿ ಈ ಅಪೂರ್ವ ದೇವಾಲಯವನ್ನು ಕಟ್ಟಿಸಿದನೆಂತೆ. ದೇಗುಲದ ಒಳಆವರಣದಲ್ಲಿ ಅನೇಕ ಶಿಲಾಶಾಸನಗಳಿವೆ. ಇವುಗಳಲ್ಲಿ ಕಳಿಂಗ ಪಂಕದ ರಾಜರಾದ ಅನಂತದೇವವರ್ಮ ನಿಸ್ಸ ಜೋಡಗಂಡದೇವರೆಂಬವರು ನೇಪಾಳದಲ್ಲಿಗಳಿಗೆ ಆಶ್ರಯದಾತರಾಗಿದ್ದರೆಂದೂ, ದೇಗುಲ ಮತ್ತು ಅವಕ್ಕೆ ಸಂಬಂಧಿಸಿದ ಶಾಲೆಗಳನ್ನು ನಡೆಸಲು ಆವಾರ ಧನವನ್ನು ದತ್ತಿಯಾಗಿ ನೀಡಿದ್ದರೆಂದೂ ದೇಗುಲಗಳಿಂದ.

ಪಶುಪತಿ-ಗಾಣಪತ್ಯಗಳ ಮತ್ತು ಶೈವ ವೈಷ್ಣವ ದೇವರಾಯನ ಕಾಲದ ವರೆಗೂ ಇವು ಅತ್ಯಾಶ್ರಮ ಸ್ಥಿತಿಯಲ್ಲಿದ್ದವೆನ್ನಲು ಈ ಶಾಸನಗಳೇ ಸಾಕ್ಷ್ಯ ನಿಸುರ ಅಧಿಕಾರಿಗಳಿಗೆ. ಅದರೆಲ್ಲ ರಾಜರ ಕಾಲದ ಹಿಂದೂ ಗಳ ಪವಿತ್ರ ಯಾತ್ರಾಸ್ಥಳವಾಗಿ ವಿಜೃಂಭಿಸುತ್ತಿದ್ದ ಈ ದೇಗುಲದ ವೈಭವ ಹೆಚ್ಚಿಸಲು ಹಲವಾರು ಗೃಹಿಣಿಯರು ಕೊಡುಗೆಗಳನ್ನು ನೀಡಿದ್ದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಈ ದೇಗುಲದ ಶಿಲ್ಪ ವೈಭವವನ್ನು ಹೆಚ್ಚು ಶೋಭಾಯಮಾನಗೊಳಿಸಿದೆ. ಅನೇಕ ಪೂರ್ವಾರ್ಥಿಗಳು ಇದೀಗ ಇಲ್ಲಿಗೆ ಬರುತ್ತಾರೆ. ಇಡೀ ಆಂಧ್ರದಲ್ಲೇ ಒಂದೇ ಒಂದಾದ ಈ ಸೂರ್ಯದೇಗುಲ—ಕೋಣಾರ್ಕದ ಜಗತ್ಪ್ರಸಿದ್ಧ ಸೂರ್ಯದೇವಾಲಯವನ್ನು ಬಿಟ್ಟರೆ—ದೇಶದಲ್ಲೆಲ್ಲ ಬಹು ಮಹತ್ವಸ್ಥಾನ ಪಡೆದಿದೆ.

ಸಾಂಸ್ಕೃತಿಕ ಪ್ರಾಮುಖ್ಯತೆ

ಅರಸವಿಲ್ಲಿ ವಿಶ್ವ ಶ್ರೀಕೂರ್ಮಂ ಹದಿನೈದು ವೈಲಿಗಳ ದೂರದೊಳಗಿರುವ ಎರಡು ಪೂರ್ತಾಸ್ಥಾನಗಳು. ಶ್ರೀಕೂರ್ಮಂ ಸಮುದ್ರದ ದಂಡೆಯ ಮೇಲಿನ್ನೆ ಅಲ್ಲಿ ಶ್ರೀವಿಷ್ಣುವಿನ ಕೂರ್ಮಾವತಾರದ ವಿಗ್ರಹ ಪ್ರತಿಷ್ಠೆಯಾಗಿದೆ. ಈ ಎರಡು ಸ್ಥಾನಗಳಿಗೂ ಪರಂಪರಾಗತ ಸಂಬಂಧ ವೇನೂ ಇಲ್ಲದಿದ್ದರೂ ಸಹಸ್ರಾರು ಯಾತ್ರಾರ್ಥಿಗಳು ನಿರಂತರವಾಗಿ ಎರಡು ಸ್ಥಾನಗಳಿಗೂ ಬಂದು ಹೋಗುತ್ತಾರೆ ಇದಕ್ಕೆ ಕಾರಣ ಅವು ಆರೋಗ್ಯಧಾಮಗಳೂ ಆಗಿರುವುದು. ಭಕ್ತಿಯಿಂದ ಶ್ರೀಕೂರ್ಮಂ ಬಳಿ ಸಮುದ್ರ ಸ್ನಾನ ಮಾಡಿ ಭಕ್ತಾದಿಗಳು ಅರಸವಿಲ್ಲಿಗೆ ತೆರಳುತ್ತಾರೆ. ಇಲ್ಲಿ ದೇಗುಲದ ಬಳಿ ಇರುವ ಪುಷ್ಕರಿಣಿಯಲ್ಲಿ ಮತ್ತೊಮ್ಮೆ ಸ್ನಾನ ಮಾಡತ್ತಾರೆ. ಅನಂತರ ಸೂರ್ಯದೇವನ ಪಾವನ ದರ್ಶನ. ಈ ರೀತಿಯಲ್ಲಿ ದರ್ಶನ ಮಾಡುವವರಿಗೆ ಎಲ್ಲ ಪಾಪ ವಿಮೋಚನೆಗಳೂ ಫಲಿತಾಂಶವಾಗುವುದೆಂಬುದು ಒಂದು ನಂಬಿಕೆ. ಪ್ರತಿ ಭಾನು ನೂರೊಂಟು ಪ್ರದಕ್ಷಿಣೆಗಳಂತೆ ನಲವತ್ತು ಭಾನುವಾರದ ದಿನದಲ್ಲಿ ಪ್ರದಕ್ಷಿಣೆ ಮಾಡುವವನು ಕ್ಷಯ, ಕ್ಯಾನ್ಸರ್ ಮತ್ತು ಕುಷ್ಠರೋಗಗಳಂತಹ ಭೀಕರ ವಿಪತ್ತುಗಳಿಂದಲೂ ಪಾರಾಗಬಹುದೆಂದು ಹೇಳುತ್ತಾರೆ.

"ಸೂರ್ಯದೇವ."

ಈ ದೇಗುಲದ ಸೂರ್ಯಮೂರ್ತಿ ಕಪ್ಪೋಲೈಸುವ ದೈವೀಕ ಆಕೃತಿಯನ್ನು ಹೊಂದಿದೆ ಮೂಲವಿಗ್ರಹದ ಉದ್ದ ಸುಮಾರು ಏಳು ಅಡಿಗಳು; ಅಗಲ ಮೂರು ಅಡಿಗಳು. ಒಂದು ಕೈಯಲ್ಲಿ ಪದ್ಮ ಧರಿಸಿರುವ ದೇವರು ಮತ್ತೊಂದರಿಂದ ಭಕ್ತರಿಗೆ ಅಶೀರ್ವಾದವನ್ನು ಮಾಡುತ್ತಿದ್ದಾನೆ. ಉಷೆ ಮತ್ತು ಛಾಯೆಯರ ವಿಗ್ರಹಗಳು ಎಡ-ಬಲದಲ್ಲಿವೆ. ದೈವದ ಆರಾಧನೆ ಹುಟ್ಟಿ ಏಕಾಗ್ರರಾಗಿರುವ ಸನಕ-ಸನಂದನ ಮಹರ್ಷಿಗಳ ವಿಗ್ರಹಗಳೂ ಇವೆ. ಇದರಲ್ಲಿ ಒಂದು ಮಹತ್ತಾದ ಪಾರಮಾರ್ಥಿಕ ಸಂಗತಿಯೂ ಉಂಟು. ಪದ್ಮವು ಜಿಜ್ಞಾಸೆಯ ದ್ಯೋತಕ. ಉಷೆ-ಛಾಯೆಯರು ಅನಾದಿಯಾಗೂ ಅನಂತವಾದ ಕಾಲವನ್ನು ಪ್ರತಿಬಿಂಬಿಸುತ್ತಾರೆ ರಥಾರೂಢನ ಧಾರ್ಮಿಕ ಸಂಗತಿಯೂ ಉಂಟು. ಪದ್ಮವು ಜಿಜ್ಞಾಸೆಯ ದ್ಯೋತಕ. ಉಷೆ-ಛಾಯೆಯರು ಅನಾದಿಯಾಗೂ ಅನಂತವಾದ ಕಾಲವನ್ನು ಪ್ರತಿಬಿಂಬಿಸುತ್ತಾರೆ ರಥಾರೂಢನ ಧಾರ್ಮಿಕ ಸಂಗತಿಯನ್ನು ಎತ್ತಿಹೇಳುತ್ತಿರುವ ಸಪ್ತ ಶ್ವಗಳೂ ಬೆಳಕಿನಲ್ಲಿ ಒಳಹೊಕ್ಕಿರುವ ಸಪ್ತವರ್ಣಗಳನ್ನು ಪ್ರತಿನಿಧಿಸುತ್ತವೆ.

ಇಲ್ಲಿ ನಡೆವ ಉತ್ಸವಗಳು :

ಜ್ಯೇಷ್ಠಶುದ್ಧ ಏಕಾದಶಿಯಂದು ಸಾವಿರ ಕಲ್ಯಾಹೋತ್ಸವ. ಮಾಘಶುದ್ಧ ಸಪ್ತಮಿಯಂದು ಸೂರ್ಯಜಯಂತಿ. ಇನ್ನೆರಡನ್ನು ಬಿಟ್ಟು ರಥೋತ್ಸವ. ನವರಾತ್ರಿ, ಶ್ರೀರಾಮನವಮಿ, ಡೋಲಾ ಮುಂತಾದ ಉತ್ಸವಗಳು ಸಂಭ್ರಮದಿಂದ ನಡೆಯುವುದುಂಟು. ವಸಂತಶುದ್ಧ ಹುಣ್ಣಿಮೆಯ ಡೋಲಾ ಉತ್ಸವತಾಮನ ಹುಣ್ಣಿಮೆ ಎರಡೂ ಒಂದೇ ದಿನ ನಡೆಯುತ್ತವೆ.

ಕೆಲವು ನಿಶ್ಚಿತ ದಿನಗಳಂದು ಸೂರ್ಯರಶ್ಮಿಗಳು ದೇಗುಲವನ್ನು ಭೇದಿಸಿ; ಗರ್ಭಗುಡಿಯನ್ನು ಹೊಕ್ಕು ನೇರವಾಗಿ ಮೂರ್ತಿಯ ಪಾದಗಳನ್ನು ಸ್ಪರ್ಶಿಸುತ್ತವೆ. ಆ ದಿನವನ್ನು ಕಾಣಲು ನಾಡಿನ ಮೂಲೆ ಮೂಲೆಯಿಂದ ಕೋಟ್ಯಂತರ ಸಂಖ್ಯೆಯಲ್ಲಿ ಬರುವ ಭಕ್ತರಿಗೆ ಅದೊಂದು ಅಪೂರ್ವ, ಅದ್ಭುತ, ಅವಿಸ್ಮರಣೀಯ ಕುತೂಹಲಕಾರಿ ದೃಶ್ಯ. (ಲೇಖಕರು)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಕಪ್ರವೀಣರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ಅಸಮಾನತೆಯ ನಿರ್ಮೂಲನ

(ಹಿಂದಿನ ಸಂಚಿಕೆಯಿಂದ)

ಪಸ್ಥೆ ವ್ಯವಸ್ಥಿತವಾಗಿಯೇ ಮುಂದುವರಿದಿದೆ. ದೊಡ್ಡ ಬ್ಯಾಂಕುಗಳ ರಾಷ್ಟ್ರೀಕರಣದಿಂದ ಆರ್ಥವ್ಯವಸ್ಥೆಯಲ್ಲಿ ತುಸು ಪಾದರೂ ಸುಧಾರಣೆಯಾಗಬಹುದೆಂಬ ಊಹೆ ಜನತೆಯದ್ದು. ಆದರೆ, ಸರಕಾರದ ಆಂತರಿಕ ಹೆಚ್ಚಿನ ಉದ್ಯಮಗಳು ತಮ್ಮ ಆಯ—ವ್ಯಯಗಳ ಜಾಯಿಪೊಡಿಸುವುದೇ ದುಸ್ತರವಾಗಿವೆಯೆಂದು ಸರಕಾರದ ಅಂಕೆ—ಸಂಖ್ಯೆಗಳೇ ಸಾರುತ್ತವೆ. ಸರಕಾರ, ಶಾಸಕರು, ಅಧಿಕಾರಿಗಳು, ಕೈಕರರು—ಎಲ್ಲ ವರ್ಗದಲ್ಲೂ ದಿಕ್ಕೆಯ ಅಭಾವ, ಉದಾಸೀನ ಮನೋವೃತ್ತಿ ಬೆಳೆದು ಹೆಮ್ಮಾರವಾಗಿದೆ. ಈ ಹೆಮ್ಮರವನ್ನು ಕಡಿದುರುಳಿಸಿದೆ ಹೋದರೆ, ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾರೆ; ಬಡವರು ಕಡುಬಡವರಾಗುತ್ತಾರೆ. ಶ್ರೀ ನಾರಾಯಣನಲ್ಲಿಗೆ ಪ್ರಜಾಶಕ್ತಿಯ ಮೇಲಿನ ವಿಶ್ವಾಸ ಮಾಯವಾಗುತ್ತದೆ; "ಹಾಯ್ದು ದಕ್ಕಿಸಿಕೊಡದೇನಂ ನಿಂಗಿರಿ ರಾಗಿ ಬೀಸುವುದು ತಪ್ಪಲಿಲ್ಲ" ಎಂಬ ಭಾವನೆಗೆ ಮನೆಮಾಡಿತು.

ಹತಹೃದಯಕೋಟಿ ರುನ್ನು ಮತ್ತೆ ಬದುಕಿಸಬೇಕು; ಶತಮಲವಾದ ಜನಮನವನ್ನು ಮತ್ತೆ ಒಗ್ಗೂಡಿಸಬೇಕು; ನೊಂದ ಮನಸ್ಸಿಗೆ ಅನ್ಯೋನ್ಯತೆಯ ಚಿಲುಮೆಯಾಗಬೇಕು. ಕಾಂಗ್ರೆಸ್ಸು ಬೆಂಗಳೂರು ಅಧಿವೇಶನದಲ್ಲಿ ಸ್ವೀಕರಿಸಿದ ಆರ್ಥನೀತಿ ಕಾರ್ಯಾಚರಣೆಗೆ ಸಂಪೂರ್ಣವಾಗಿ ಬಂದರೆ, ಈ ದಿಸೆಯಲ್ಲಿ ಒಂದು ಹೆಜ್ಜೆಯಾದರೂ ಮುಂದಿಟ್ಟಂತೆ ಆಗಬಹುದು. ನೂತನ ರಾಷ್ಟ್ರಪತಿಗಳು ತನ್ನ ಸರಕಾರವನ್ನು ಚುರುಕಿನಿಂದ ಬಿಗಿಯಾಗಿ ಬಿಗಿಸಿಕೊಂಡು ರಾಜ್ಯಕೀಯವಾಗಿ ದೇಶ ಪ್ರಜ್ಞಾಶೀಲವಾದರೆ, ಇದೆಷ್ಟೊಂದು ಕಷ್ಟ ಸಾಧ್ಯವಲ್ಲ.

Edited, Printed & Published by K. H. Shetty, at the Navayuga Press, Udipi, S. India

ನವಯುಗ

NAVAYUGA 11—9—1969 ಸಂಪುಟ 49 ಸಂಚಿಕೆ 2

ಮರಗಾಲು ನಡಿಗೆ ಬೇಕೆ?

ಒಂದು ಮಠ. ಮಠದಲ್ಲೊಬ್ಬ ಸನ್ಯಾಸಿ. ದಾನಧರ್ಮಗಳಿಗೆ ಹೆಸರಾದ ಮಠ ಸಂಸ್ಥಾನ. ಅಲ್ಲಿಗೆ ಭಿಕ್ಷುಕನೊಬ್ಬ ಆಗ ಮನ. 'ಭವತಿ ಭಿಕ್ಷಾಂ ದೇಹಿ' ಕಟನ. ಭಿಕ್ಷುಕನ ಸ್ಥಿರ ಕಂಠ ಕೇಳಿದ ಸನ್ಯಾಸಿಯು ಹೊರಕ್ಕೆ ಬಂದರು. "ಯಾರು ನೀನು ಏನು ಬೇಕಾಗಿತ್ತು" ತಿಳಿದಿದ್ದರೂ ತಿಳಿದಂತೆ ಪ್ರಶ್ನೆ ಕೇಳಿದರು.

"ನಾನೊಬ್ಬ ಭಿಕ್ಷುಕ. ಭಿಕ್ಷೆಗಾಗಿ ಬಂದಿದ್ದೇನೆ."

ಸನ್ಯಾಸಿಯು ದೃಷ್ಟಿ ಅತನನ್ನು ನಖ ಶಿಖಾಂತ ಮೂರು ಬಾರಿ ನೋಡಿತು. ಅನಂತರ ಕೇಳಿದರು— "ಸದ್ಯ ನಿನ್ನ ಬಳಿ ಯೇನಿದೆ?"

"ನಪ್ಪ ಬಳಿ! ನನ್ನ ಬಳಿಯೇನಾದರೂ ಇರುತ್ತಿದ್ದರೆ ಹೀಗೆ ಬರುತ್ತಿದ್ದೆನೆ!'

"ಅದು ಸರಿ. ಆದರೂ.... ನಿನ್ನ ಬಳಿ ವಿಶೇಷ ಇಲ್ಲವೆ?"

ಮಠಾಧಿಪತಿಯೇ ತನ್ನೊಡನೆ ಮಾತನಾಡುತ್ತಿದ್ದರಿಂದ ತನ್ನ ಭಾಗ್ಯದ ಬಾಗಿಲೇ ತೆರೆಯುವುದೆಂದು ನಂಬಿದ ಅಯುವರ ಭಿಕ್ಷುಕ ಜೀವಿದ—

"ಸ್ವಾಮಿ, ನಿನ್ನ ಮುಂದೆ ಸುಳ್ಳು ಹೇಳಿದಾರೆ. ಮೂರು ಕೂತಾದ ಎಲ್ಲಾ ವಿಶೇಷಣ ಪಾತ್ರೆಗಳು, ಕೆಲವು ಹರಕಲು ಬಟ್ಟೆಗಳಿವೆ."

ಸನ್ಯಾಸಿ ಗಂಭೀರವಾಗಿ ಹೇಳಿದರು; 'ಆ ಪಾತ್ರೆಗಳನ್ನು ಇನಗೆ ಕೊಡು. ಇನಗೆ ಬೇಕೆಂದುವನ್ನು ನಾವೂ ಕೊಡುತ್ತೇನೆ.'

ಭಿಕ್ಷುಕ ಒಮ್ಮೆಗೆ ತಬ್ಬಿಬ್ಬು. ಮರು ಕ್ಷಣ ಪಾತ್ರೆಗಳನ್ನು ಮುಂದಿಟ್ಟ. ಸನ್ಯಾಸಿ ತನ್ನಾಳನ್ನು ಕರೆದು ಏನೋ ಹೇಳಿದರು. ಪಾತ್ರೆಗಳನ್ನೆತ್ತಿ ಅಳು ಹೋದ.

ಅಲ್ಪ ಕಾಲದಲ್ಲೇ ಅಳು ಒಂದಷ್ಟು ಕಾಳು, ಮತ್ತೊಂದು ಕೊಡಲಿಯನ್ನು ತಂದಿಟ್ಟು ಹೋದ. ಭಿಕ್ಷುಕ ಕಣ್ಣಿಗರಳಿಸಿ ನೋಡುತಿದ್ದ. ಎಲ್ಲ ವಿಚಿತ್ರವಾಗಿತ್ತು.

ಸ್ವಾಮಿ ಹೇಳಿದರು: 'ನೋಡಪ್ಪ, ಈ ಧು ಯುವಕನಾಗಿದ್ದೀಯ? ಮೈ ಮುರಿ ದು ದುಡಿಯು ಬೇರು. ಈ ಕಾಳನ್ನು ಬೇ ಯಿಸಿ ತಿನ್ನು. ಕೊಡಲಿಯಿಂದ ಸೌದೆ ಕಡಿದು ಮಳು. ತನ್ನ ಗಳಿಕೆಯ ಅನ್ನ ತಿಯೂಗಿರುತ್ತದೆ. ಮೈಯಲ್ಲಿ ಶಕ್ತಿಯಿರುವಾಗ ಪರರ ಬಾಯ್ದುಂಬುಲ್ಕೆ ಕೈಯೂ ಳುವುದು ಸರಿಯಲ್ಲ."

"ಪರಾವಲಂಬಿಯು ಕನಸಿನಲ್ಲೂ ಸುಖ ಕಾಣನು" ಎಂದು ಶಂಕರು ಸಾರಿದ್ದಾರೆ. ಮಹಾತ್ಮ ಗಾಂಧಿಯವರ ಮೂಲ ಮಂತ್ರಗಳಲ್ಲಿ ಸ್ವಾವಲಂಬನೆಯು ಂದು. ತನ್ನ ಅವಶ್ಯಕತೆಗಳನ್ನು ತಾನೇ ಗಳಿಸಿ ಪೂರೈಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯ. ಇದನ್ನೇ ನಾವು ರಾಷ್ಟ್ರಕ್ಕೂ, ರಾಷ್ಟ್ರಗಳಿಗೂ ಅನ್ವಯಿಸಬಹುದು.

ಆರ್ಥಿಕ ಅಯೋಗವು ತನ್ನ ವರದಿಯ ಲ್ಲಿ ಇದೀಗ ಅರ್ಪಿಸಿದೆ. ಇದರಲ್ಲಿ ತಂತ ಮ್ಮ ರಾಜ್ಯಗಳಿಗೆ ಅನ್ಯಾಯ ಮಾಡಲಾಗಿದೆ ಎಂದು ಸರ್ವೇಸಾಮಾನ್ಯವಾಗಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಯವರೂ ಜೋರತ್ತಾರೆ. ಪೈಸೆ ಭಿಕ್ಷೆ ಪಡೆದ ಭಿಕ್ಷುಕ ಎರಡು ಪೈಸೆ ಬಯಸುವುದು ತಪ್ಪಲ್ಲ. ಕೇಂದ್ರ ಬೊಕ್ಕಸಕ್ಕೆ ಭಾರಿ ಆದಾಯವಾಗಿದೆಯೆಂದು ಮುಖ್ಯಮಂತ್ರಿಯೂ ವಿತ್ತಮಂತ್ರಿಯೂ ಹೇಳಿ ಇದಕ್ಕೆ ಸರಿಪಡಿಸಲು ಶ್ರಮಿಸಲು ಪ್ರಧಾನಿಯನ್ನೂ ಕಂಡರು. ಕೇಂದ್ರ ಸರಕಾರದಿಂದ ಅಧಿಕ ನೆರವನ್ನು ಬಯಸುವುದು ಧ್ಯೇಯವೇ. ಆದರೆ, ಎಲ್ಲರ ಜಯಕೆ ಈದೇಶಲು ಕೇಂದ್ರದೊಡನೆ ಅಲ್ಲಾಟ್ಟಿದ್ದೀಕ್ಷೆ ದೀಪವಿಲ್ಲ.

